ಅಧ್ಯಾತ್ಮಗ್ರಂಥಾವಳಿ

# ಶ್ರೀವಿಷ್ಣುಸಹಸ್ರನಾಮಸ್ತೋತ್ರಮಂಜರಿ

(ಶ್ಲೋಕಗಳ ಅರ್ಥ ಮತ್ತು ವಿವರಣೆ ಸಮೇತ )

**ಬರೆದವರು :**

ಅಧ್ಯಾತ್ಮವಿದ್ಯಾಪ್ರವೀಣ

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

**ಕ್ರಮಾಂಕ : 256**

**ಪ್ರಕಾಶಕರು :**

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

**ಹೊಳೆನರಸೀಪುರ - 573211 ದೂ : 08175 - 273820**

www.adhyatma prakasha.org

e-mail : secretary@adhyatma prakasha.org

**ಬೆಂಗಳೂರು ಶಾಖೆ**

NO. **68, ಎ.ಪಿ.ಕೆ.ರಸ್ತೆ, 2ನೇ ಬ್ಲಾಕ್**

**ತ್ಯಾಗರಾಜನಗರ, ಬೆಂಗಳೂರು -560 028**

**ದೂ : 080 - 26765548**

e-mail : shankarabhaskara@gmail.com

**2014**

**SRI VISHNUSAHASRANAMASTHOTRAMANJARI** – Written by
**H.S. LAKSHMI NARASIMHA MURTHY** ; **Published by :**
ADHYATMA PRAKASHA KARYALAYA,
HOLENARASIPURA – 573 211.
Ph : 08175 – 273820
www.adhyatma prakasha.org
e-mail : secretary@adhyatma prakasha.org

ಮೊದಲ ಮುದ್ರಣ: 2014 - 2000 ಪ್ರತಿಗಳು

ಪುಟಗಳು : 32+210 = 242

ಕಾಗದ - ಆಕಾರ : 80 ಜಿಎಸ್‌ಮ್, ಮ್ಯಾಫ್‌ಲಿಥೊ; 1/8ಡೆಮ್ಮಿ

ಬೆಲೆ : **60 ರೂ/-**

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು**

***All Rights Reserved***

**ಅಕ್ಷರಜೋಡಣೆ :**
ಶ್ರೀಮತಿ ಜ್ಯೋತಿ ಸುನೀಲ್
ಬೆಂಗಳೂರು -78, ದೂ : 9845321029,

**ಮುದ್ರಣ :**
ಶ್ರೀರಾಮ ಪ್ರಿಂಟರ್ಸ್
ನಂ. 25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು - 2
ದೂ : 98453 46197

# ಪ್ರಕಾಶಕರ ಬಿನ್ನಹ

"ಶ್ರೀ ವಿಷ್ಣುಸಹಸ್ರನಾಮಸ್ತೋತ್ರ"ದ ಸ್ತೋತ್ರ ಪಾರಾಯಣವು ನಮ್ಮ ದೇಶದಲ್ಲಿ ಸುಪ್ರಸಿದ್ಧವಾಗಿದೆ. ಈ ಗ್ರಂಥಭಾಗದ ಸ್ತೋತ್ರಾರ್ಥವನ್ನು ತಿಳಿಯಲಿಚ್ಛಿಸುವ ವಿಷ್ಣುಭಕ್ತರಿಗಾಗಿ **ಶ್ರೀಶಂಕರಾಚಾರ್ಯರು ಭಾಷ್ಯವನ್ನು ಬರೆದು ಅನುಗ್ರಹಿಸಿರುತ್ತಾರೆ.** ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಕನ್ನಡ ಜನತೆಯ ಅನುಕೂಲಕ್ಕಾಗಿ ಈ ಸ್ತೋತ್ರಭಾಷ್ಯಕ್ಕೆ ಕನ್ನಡಾನುವಾದ ವನ್ನು ಮೂಲ, ಭಾಷ್ಯವೂ, ಭಾಷ್ಯಾನುವಾದ, ಟಿಪ್ಪಣಿ, ಶ್ಲೋಕ ಮತ್ತು ನಾಮಗಳ ಅಕ್ಷರಾನುಕ್ರಮಣಿಕೆ ಮುಂತಾದ ಸೌಲಭ್ಯ ಸಹಿತವಾಗಿ ಬರೆದು 1974ರಲ್ಲಿ ಗ್ರಂಥವನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಟಿಸಿದ್ದರು. ಈ ಗ್ರಂಥ ಜನಾನುರಾಗಿಯಾಗಿ ಈಗಾಗಲೇ 3 ಬಾರಿ ಪುನರ್ಮುದ್ರಣವನ್ನು ಕಂಡು ಕಾರ್ಯಾಲಯದಲ್ಲಿ ದೊರಕುತ್ತಿದೆ.

ಈ ಸ್ತೋತ್ರಕ್ಕೆ ಕಾರ್ಯಾಲಯದ ಪಂಡಿತರಾಗಿದ್ದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಭಗವತ್ಪಾದರ ಭಾಷ್ಯಾನುಸಾರವಾಗಿ ಪ್ರತಿ ಯೊಂದು ನಾಮಕ್ಕೂ ಕನ್ನಡದಲ್ಲಿ ಅರ್ಥವನ್ನು ಬರೆದು 24 ಕಂತುಗಳಲ್ಲಿ ಕಾರ್ಯಾಲಯದ ಮಾಸಪತ್ರಿಕೆಯಾದ ಅಧ್ಯಾತ್ಮಪ್ರಕಾಶದಲ್ಲಿ (2002ರ ಜನವರಿ ಸಂಚಿಕೆಯಿಂದ 2003 ಡಿಸೆಂಬರ್ ಸಂಚಿಕೆವರೆಗೆ) ಬರೆದು ಪ್ರಕಟಿಸಿದ್ದರು. ಸರಳಾನುವಾದರೂಪದ ಈ ಸ್ತೋತ್ರಾರ್ಥ ಲೇಖನಗಳು ಜನಪ್ರಿಯತೆ ಯನ್ನು ಪಡೆಯಿತು. ಅನೇಕ ಗುರುಭಕ್ತರು ಈ ಲೇಖನಗಳು ಪುಸ್ತಕರೂಪ ದಲ್ಲಿ ಪ್ರಕಟವಾದರೆ ಸ್ತೋತ್ರಪಾರಾಯಣದ ಜೊತೆಗೆ ಅರ್ಥಾನುಸಂಧಾನವನ್ನೂ ಮಾಡಲು ಅನುಕೂಲವಾಗುವದೆಂದೂ ಕನ್ನಡ ಜನತೆಗೆ ಮಹದುಪಕಾರ ವಾಗುವದೆಂದೂ ಅಭಿಪ್ರಾಯಪಟ್ಟುವೂ, ಪುಸ್ತಕ ಪ್ರಕಟಣೆಗೆ ಧನಸಹಾಯ ವನ್ನು ಮಾಡಲೂ ಮುಂದೆ ಬಂದರು. ಭಕ್ತರ ಇಚ್ಛೆಯನ್ನು ಕಾರ್ಯಾಲಯವು

ಮನಗಂಡು, **"ಶ್ರೀವಿಷ್ಣು ಸಹಸ್ರನಾಮಸ್ತೋತ್ರಮಂಜರಿ"** ಎಂಬ ಈ ಪುಸ್ತಕವನ್ನು ಶ್ಲೋಕ, ಅರ್ಥ ಮತ್ತು ವಿವರಣೆ ಸಹಿತ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳ ಸ್ಮರಣಾರ್ಥವಾಗಿ ಮುದ್ರಿಸಿ ಹೊರತರಲಾಗಿದೆ.

ಶ್ರೀಲಕ್ಷ್ಮೀನರಸಿಂಹಮೂರ್ತಿಗಳು ಈ ಹಿಂದೆ 'ಅಧ್ಯಾತ್ಮಪ್ರಕಾಶ' ಪತ್ರಿಕೆಯಲ್ಲಿ ಅನೇಕ ಕಂತುಗಳಲ್ಲಿ ಬರೆದು ಪ್ರಕಟಿಸಿದ್ದ ಬೃಹದಾರಣ್ಯಕ, ಛಾಂದೋಗ್ಯ ಮತ್ತು ಶ್ವೇತಾಶ್ವತರ ಉಪನಿಷತ್ತುಗಳನ್ನು ಕುರಿತ ಲೇಖನ ಗಳು **'ಮಂಜರಿ'**ಗಳೆಂಬ ಪುಸ್ತಕರೂಪವನ್ನೂ ತಾಳಿ, ಪುನರ್ಮುದ್ರಣಗಳ ಸುಯೋಗವನ್ನೂ ಪಡೆದು ವೇದಾಂತಜಿಜ್ಞಾಸುಗಳ ಮಾನ್ಯತೆ ಪಡೆದಿದೆ.

ಪಂಡಿತ ಹೆಚ್. ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರಲ್ಲಿ ವೇದಭ್ಯಾಸವನ್ನು ಕಲಿತು, ವೇದಮಂತ್ರಗಳು, ವ್ಯಾಕರಣ, ಕಾವ್ಯಷಿ, ನಾಟಕಗಳನ್ನು ಕಲಿತ ಸಾಕ್ಷಾತ್ ಶಿಷ್ಯರಾದ ಮಹಾಮಹೋಪಾಧ್ಯಾಯ, ಅಧ್ಯಾತ್ಮ ವಿದ್ಯಾಪ್ರವೀಣ ಇತ್ಯಾದಿ ರೆಂದೇ ಪ್ರಸಿದ್ಧರಾಗಿ, ಪ್ರತಿದಿನವೂ ಅನೇಕ ಕಡೆಗಳಲ್ಲಿ ವೇದಾಂತೋಪನ್ಯಾಸ ಗಳನ್ನು ನಡೆಸಿಕೊಡುತ್ತಿರುವ ವೇ||ಬ್ರ||ಶ್ರೀ ಕೆ.ಎಸ್. ಸುಬ್ರಾಯಶರ್ಮರು ನಮ್ಮ ಬಿನ್ನಹವನ್ನು ಮನ್ನಿಸಿ, ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ 50 ವರ್ಷಗಳ ಸೇವೆ ಸಲ್ಲಿಸಿದ್ದ ಶ್ರೀ ಲ.ನ.ಮೂರ್ತಿಗಳ ಸೇವೆ ಮತ್ತು ಗ್ರಂಥದ ಬಗ್ಗೆ ಅನುಭವಪೂರ್ವಕವಾಗಿ ಬರೆದುಕೊಟ್ಟಿರುವ ಪ್ರಸ್ತಾವನೆಯನ್ನು ಸೇರಿಸಿದೆ. ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು

ಮೈಸೂರಿನಲ್ಲಿ ವಾಸವಾಗಿರುವ ಗುರುಭಕ್ತರಾದ ಶ್ರೀಯುತರಾದ ಕೆ. ಎಸ್. ರಮೇಶ್‌ಬಾಬು ದಂಪತಿಗಳು ತಮ್ಮ ಮಾತಾಪಿತೃಗಳ ಸ್ಮರಣಾರ್ಥ ವಾಗಿ ಈ ಗ್ರಂಥ ಪ್ರಕಟನೆಗೆ ವಿಶೇಷವಾಗಿ ಧನಸಹಾಯ ಮಾಡಿರುವದಲ್ಲದೆ, 300 ಪುಸ್ತಕಗಳನ್ನು ಕೊಂಡು ಭಕ್ತಾದಿಗಳಿಗೆ ಉಚಿತವಾಗಿ ಹಂಚಲಿದ್ದಾರೆ.

ಮುಂದೆ ಸೂಚಿಸಿರುವ ಅನೇಕ ಮಹನೀಯರುಗಳೂ ಸಹ ಉದಾರವಾಗಿ ಸಹಾಯಮಾಡಿರುತ್ತಾರೆ. 1) ಹೆಚ್.ಎನ್. ವಿಶ್ವನಾಥ್, ಬೆಂ. 2) ಜಿ.ಎಸ್. ನಾಗರಾಜ್, ಬೆಂ, 3) ಅಂತರಂಗಭಕ್ತರು ಬೆಂ. 4) ಸಿ.ಆರ್. ಲಲಿತಮ್ಮನವರು, ಬೆಂಗಳೂರು. 5) ಯು.ಹೆಚ್. ಸುಬ್ರಹ್ಮಣ್ಯನವರು, ಬೆಂ 6)ನಂದಕುಮಾರ್, ಹುಬ್ಬಳ್ಳಿ. 7) ಡಾ|| ಆರ್. ನರಸಿಂಗಪ್ಪ , ಬೆಂಗಳೂರು, 8) ಹೆಚ್. ಎನ್. ವೈದ್ಯನಾಥನ್, ಬೆಂ. 9) ಎಮ್. ವಿರೂಪಾಕ್ಷ , ಬೆಂ. 10) ಎಮ್.ಎಸ್.ಗೋಪಾಲ್, ಬೆಂ. 11) ಕೆ.ಸಿ. ಸುಬ್ರಹ್ಮಣ್ಯ, ಬೆಂ. 12) ಜಿ.ಎ.ಸೂರ್ಯನಾರಾಯಣ, ಬೆಂ. 13) ಕೆ.ಎಸ್. ಮಹೇಶ್‌ಬಾಬು, ಬೆಂ. 14) ಕೆ.ಜಿ.ಕೇಶವಮೂರ್ತಿ, ಬೆಂ. 15)ವೇದಮೂರ್ತಿ, ಬೆಂ. 16) ವೆಂಕಟರಾಮಯ್ಯನವರು, ಬೆಂ. 17) ಶಾರದಮ್ಮ , ಬೆಂ. 18) ಒ.ಆರ್. ಲಲಿತಮ್ಮನವರು, ಮದನಪಲ್ಲಿ. 19) ಎ.ಎಸ್. ರೆಡ್ಡಮ್ಮನವರು, ಬೆಂ. 20)ವನಮಾಲಾ ಜೋಷಿ , ಬೆಂ. 21) ಬಿ.ಕೆ.ಶ್ರೀಕಂಠಯ್ಯನವರು, ಬೆಂ. 22) ಎ.ವಿ. ಲಕ್ಷ್ಮೀಪತಿ, ಬೆಂ. 23) ಕೆ.ಟಿ. ಅನಂತಸುಬ್ಬರಾವ್, ಬೆಂ. 24) ಹೆಚ್.ಎಲ್. ಶಂಕರನಾರಾಯಣ ರಾವ್, ಬೆಂ. 25) ಅಂತರಂಗಭಕ್ತರು (ತಂದೆ ಹೆಚ್.ಎನ್.ನಾರಾಯಣರಾಯರ ಸ್ಮರಣಾರ್ಥ) ಬೆಂ. 26) ಸೀತಮ್ಮ ಕೃಷ್ಣಮೂರ್ತಿ ಪಬ್ಲಿಕ್ ಛಾರಿಟಬಲ್‌ಟ್ರಸ್ಟ್ , ಬೆಂ. 27) ಎಲ್. ವಿಜಯರಾಘವ, ಬೆಂ. 28) ಅಂತರಂಗಭಕ್ತರು, ಬೆಂ. 29) ವಿ.ವೆಂಕಟರಾಮನ್, ಮೈಸೂರು. 30) ಶ್ರೀಮತಿ ಸಾವಿತ್ರಿ- ಎಮ್. ಎಲ್. ಕಾಂತರಾಜಶೆಟ್ಟಿ , ಹಾಸನ. 31) ಬಿ.ಆರ್. ಸತ್ಯನಾರಾಯಣ, ಕೋಲಾರ. 32) ರಮೇಶ್‌ಅಯ್ಯರ್ ಬೆಂ. (ದೊರೆಸ್ವಾಮಿಅಯ್ಯರ್ ಸ್ಮರಣಾರ್ಥ) 33) ಡಾ|| ಹೆಚ್.ವಿ. ರಮಾ-ಪ್ರಸಾದ್, ಮೈಸೂರು. 34) ಸತ್ಯಭಾಮಾ - ವೆಂಕಟೇಶ್, ಬೆಂ. 35) ರವಿ, ಬೆಂ. 36) ಎಸ್.ನಾಗರಾಜು, ಬೆಂ. 37) ಎನ್. ವೇಣುಗೋಪಾಲ್, ಬೆಂ. 38) ಲೀಲಾ-ಶಂಕರಾನಂದ, ಬೆಂ. 39) ಶ್ರೀನಿವಾಸಶರ್ಮಾ ಬೆಂ. 40) ಅಂತರಂಗಭಕ್ತರು ಬೆಂ. 41) ಎಸ್.ವಿ.ಸಿ. ಶೇಖರ್, ಬೆಂ. 42) ಕೆ.ಹೆಚ್. ಮಲ್ಲೇಶಪ್ಪ , ಆದೋನಿ. 43) ಪ್ರದೀಪ್‌ಆಚಾರ್ಯ ಮೆಮೋರಿಯಲ್‌ಟ್ರಸ್ಟ್ , ಬೆಂಗಳೂರು.

ಪಾರಾಯಣ ಮಾಡುವವರ ಅನುಕೂಲಕ್ಕಾಗಿ 1)ಶ್ಲೋಕಗಳನ್ನು ಗ್ರಂಥದ ಪ್ರಾರಂಭದಲ್ಲೂ , ಕೊನೆಯಲ್ಲಿ ಶ್ಲೋಕಗಳ ಅಕ್ಷರಾನುಕ್ರಮಣಿಕೆ ಪರಿಶಿಷ್ಟ 1ರಲ್ಲೂ ನಾಮಗಳ ಅಕ್ಷರಾನುಕ್ರಮಣಿಕೆ ಪರಿಶಿಷ್ಟ 2ರಲ್ಲೂ ಸೇರಿಸಿದೆ.

ಈ ಗ್ರಂಥವನ್ನು ಹೊರತರಲು ಧನಸಹಾಯಮಾಡಿದ ಭಕ್ತಾದಿಗಳಿಗೂ, ತಪ್ಪುಗಳಿಲ್ಲದಂತೆ ಅಕ್ಷರಜೋಡಣೆ ಹಾಗೂ ಸುಂದರವಾಗಿ ಮುದ್ರಣ ಮಾಡಿ ಕೊಟ್ಟು ಪುಸ್ತಕ ಬಿಡುಗಡೆಯಾಗಲು ಸಹಕಾರ ನೀಡಿದ ಎಲ್ಲಾ ಭಕ್ತವೃಂದದ ವರಿಗೂ ಕಾರ್ಯಾಲಯವು ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತದೆ.

ಎಂದಿನಂತೆ ಮಹಾಜನರು ಈ ಗ್ರಂಥವನ್ನು ಬರೆಮಾಡಿಕೊಂಡು ಓದಿ ಕೃತಾರ್ಥರಾಗಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇವೆ. ಕಾರ್ಯಾಲಯದ ಅಧ್ಯಾತ್ಮಗ್ರಂಥಗಳು ಸದಾ ಸುಲಭದರದಲ್ಲಿ ದೊರೆಯುವಂತೆ ಗ್ರಂಥ ಪ್ರಕಟನೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ತಾ ॥ 6-4-2014 **ಪ್ರಕಾಶಕರು**

ಜಯ ಸಂವತ್ಸರ ಚೈತ್ರ

ಶುದ್ಧ ಸಪ್ತಮಿ, ಭಾನುವಾರ

# ಪ್ರಸ್ತಾವನೆ

**ನತ್ವಾ ಶ್ರೀಸಚ್ಚಿದಾನಂದಸದ್ಗುರುಂ ಯತಿಪುಂಗವಮ್ ।**
**ಪ್ರಸ್ತಾವನಾಂ ಲಿಖಿಷ್ಯಾಮಿ ವಿಷ್ಣುಭಕ್ತಿಪ್ರವರ್ಧಿನೀಮ್ ॥**

"ಶ್ರೀ ವಿಷ್ಣುಸಹಸ್ರನಾಮಸ್ತೋತ್ರ" ಎಂದ ಕೂಡಲೇ ನಮ್ಮಗಳ ಕಣ್ಣುಗಳ ಮುಂದೆ ನಿಲ್ಲುವವರು ಮೂವರು. ಅವರಾರೆಂದರೆ : ಶ್ರೀಕೃಷ್ಣಭಗವಂತ, ಭಾಗವತೋತ್ತಮರಾದ ಭೀಷ್ಮಪಿತಾಮಹರು ಮತ್ತು ಅನ್ವರ್ಥ ಧರ್ಮಾತ್ಮನಾದ ಧರ್ಮರಾಯ. ಶ್ರೀವಿಷ್ಣುಸಹಸ್ರನಾಮಸ್ತೋತ್ರವನ್ನು ಪ್ರತಿದಿನವೂ ಶ್ರದ್ಧಾಭಕ್ತಿಯಿಂದ ಪಾರಾಯಣಮಾಡುವ ಸಾಧಕರು ಲಕ್ಷಗಟ್ಟಲೆ ಇದ್ದಾರೆ. ಇದರ ಪಾರಾಯಣದಿಂದ ಅವರವರ ಇಷ್ಟಾರ್ಥಗಳು ಸಿದ್ಧಿಸುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲಷಿ. ಇನ್ನು ನಿಷ್ಕಾಮರಾಗಿ ಭಗವದರ್ಪಣಬುದ್ಧಿಯಿಂದ ಇದನ್ನು ಪಾರಾಯಣಮಾಡುವ ಮುಮುಕ್ಷುಗಳಿಗೆ ಚಿತ್ತಶುದ್ಧಿಯು ಉಂಟಾಗಿ ಅನಂತರ ಆತ್ಮಜ್ಞಾನವೇ ಉಂಟಾಗುತ್ತದೆ. ಹೀಗೆ ಶ್ರೀವಿಷ್ಣುಸಹಸ್ರನಾಮಸ್ತೋತ್ರವು ಅಭ್ಯುದಯ ಪ್ರಾಪ್ತಿಗೂ ಮತ್ತು ಮೋಕ್ಷಪ್ರಾಪ್ತಿಗೂ ಸಾಧನವಾಗಿರುತ್ತದೆ.

ಗೋಂದಾವಳಿಯ ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರವರು ಈ ಸ್ತೋತ್ರದ ಪಾರಾಯಣವನ್ನು ಮಾಡುವಂತೆ ಆರ್ತಭಕ್ತರಿಗೆ ಉಪದೇಶಿಸುತ್ತಿದ್ದರಂತೆ. ಮಹಾರಾಜರ ನೇರವಾದ ಶಿಷ್ಯರಾದ ಯಲ್ಲಂಬಳಸೆ ಶ್ರೀ ಸುಬ್ರಾಯಶರ್ಮರೂ ಅನಂತರದ ತುರೀಯಾಶ್ರಮಿಗಳಾದ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರೂ ತಮ್ಮ ಶಿಷ್ಯರಿಗೆ ಪಾರಾಯಣಮಾಡುವಂತೆ ಈ ಸ್ತೋತ್ರವನ್ನು ಉಪದೇಶಿಸುತ್ತಿದ್ದರು. ನನಗೂ ಪೂಜ್ಯರಾದ ಶ್ರೀಶ್ರೀಗಳವರೇ 1961ರಲ್ಲಿ ಶ್ರೀವಿಷ್ಣುಸಹಸ್ರನಾಮಸ್ತೋತ್ರವನ್ನು ಉಪದೇಶಿಸಿರುತ್ತಾರೆ.

ಪಂಚಮವೇದವೆಂದೇ ಪ್ರಸಿದ್ಧವಾದ ಶ್ರೀಮನ್ಮಹಾಭಾರತದಲ್ಲಿ ಪಂಚರತ್ನಗಳಿರುತ್ತವೆ. ಅವುಗಳಲ್ಲಿ ಎರಡನೆಯದೇ ಶ್ರೀವಿಷ್ಣು ಸಹಸ್ರನಾಮ ಸ್ತೋತ್ರವು.

**ಗೀತಾ ಸಹಸ್ರನಾಮೈವ ಸ್ತವರಾಜೋ ಹ್ಯನುಸ್ಮೃತಿಃ ।**
**ಗಜೇಂದ್ರಮೋಕ್ಷಂ ಚೈವ ಪಂಚ ರತ್ನಾನಿ ಭಾರತೇ ॥**

ಸರ್ವಜ್ಞರೂ ಸಕಲಶಾಸ್ತ್ರಜ್ಞರೂ ಮಹಾವಿಷ್ಣುಸ್ವರೂಪರೂ ಆದ ಭಗವಾನ್

ವೇದವ್ಯಾಸರು ತಮ್ಮ ಶ್ರೀಮನ್ಮಹಾಭಾರತದ ಮಧ್ಯೇ ಭೀಷ್ಮಪರ್ವದಲ್ಲಿ ಈ ಸ್ತೋತ್ರರತ್ನವನ್ನು ಹೇಳಿರುವುದು ಇದರ ಮಹತ್ತ್ವವನ್ನು ತಿಳಿಸುತ್ತದೆ. ಈ ಸ್ತೋತ್ರಕ್ಕೆ ಭಗವತ್ಪಾದ ಶ್ರೀಶಂಕರಾಚಾರ್ಯರವರ ಹೆಸರಿನಲ್ಲಿ ಭಾಷ್ಯವೂ ರಚಿತ ವಾಗಿರುವುದು ಈಗಲೂ ಉಪಲಬ್ಧವಾಗಿರುತ್ತದೆ. ಜಾತಿ, ವರ್ಣ, ಕುಲ, ಗೋತ್ರ, ಮತ, ಲಿಂಗ, ಪಂಥಾದಿ ಭೇದವಿಲ್ಲದೆ ಯಾರು ಬೇಕಾದರೂ ಇದನ್ನು ಭಕ್ತಿಯಿಂದ ಪ್ರತಿದಿನವೂ ಪಾರಾಯಣಮಾಡುತ್ತಾ ಸಕಲವಿಧವಾದ ಸಂಪತ್ತು ಗಳನ್ನು ಹೊಂದಬಹುದು. ಧರ್ಮಾರ್ಥಕಾಮ ಮೋಕ್ಷಗಳನ್ನು ಹೊಂದುವುದಕ್ಕೆ ಈ ಸ್ತೋತ್ರವು ಅತ್ಯಂತಸುಲಭವಾದ ಸಾಧನವಾಗಿರುತ್ತದೆ. ಯಾಂತ್ರಿಕವಾಗಿ ಪಾರಾಯಣವನ್ನು ಮಾಡುವುದಕ್ಕಿಂತಲೂ ನಾಮಗಳ ಅರ್ಥವನ್ನು ತಿಳಿದು ಪಾರಾಯಣಮಾಡುವುದರಿಂದ ಮನಸ್ಸಿಗೆ ತೃಪ್ತಿಯೂ ಹೆಚ್ಚಿನ ಆನಂದವೂ ಉಂಟಾಗುತ್ತದೆ.

ಆದ್ದರಿಂದಲೇ **"ಶ್ರೀವಿಷ್ಣು ಸಹಸ್ರನಾಮಸ್ತೋತ್ರ ಮಂಜರಿ"** ಎಂಬ ಈ ಕೃತಿಯಲ್ಲಿ ಒಂದೊಂದು ನಾಮಕ್ಕೂ ವಿಸ್ತಾರವಾದ ಅರ್ಥಗಳನ್ನು ತಿಳಿಸಲಾಗಿದೆ. ಸಹಸ್ರ ನಾಮಗಳ ಪೈಕಿ ಯಾವುದೇ ನಾಮವನ್ನು ಆರಿಸಿಕೊಂಡು ಅದೊಂದನ್ನೇ ಜಪಿಸಬೇಕಾದರೆ, ಪೂಜೆಗೆ ವಿನಿಯೋಗಿಸಬೇಕಾದರೆ ಅದರ ಅರ್ಥವು ನಮಗೆ ತಿಳಿದಾಗ ಅದರಿಂದ ತುಂಬಾ ಪ್ರಯೋಜನವಾಗುತ್ತದೆ. ಹೆಸರಿಗೆ ತಕ್ಕಂತೆ ಇದು ಸ್ತೋತ್ರಮಂಜರಿಯಾಗಿರುತ್ತದೆ. ಲೇಖಕರು ಎಚ್ಚರಿಕೆಯಿಂದ ಒಂದೊಂದು ನಾಮಕ್ಕೂ ಸ್ವಾರಸ್ಯಕರವಾಗಿ ಅರ್ಥವನ್ನು ತಿಳಿಸಿರುತ್ತಾರೆ.

ಈ ಗ್ರಂಥದ ಲೇಖಕರಾದ "ಅಧ್ಯಾತ್ಮವಿದ್ಯಾಪ್ರವೀಣ"ರಾದ ವೇ॥ಬ್ರ॥ಶ್ರೀ ವಿದ್ವಾನ್ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳವರು ಪರಮಪೂಜ್ಯರಾದ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಪ್ರಪ್ರಥಮ ಸಾಕ್ಷಾತ್ ಶಿಷ್ಯರು. ನಾಟಕಾಂತ ಸಾಹಿತ್ಯ ಸಂಸ್ಕೃತ ವಿದ್ಯೆಯಲ್ಲಿ ಉತ್ತೀರ್ಣರಾಗಿದ್ದ ವಿದ್ವಾನ್ ಲ.ನ.ಮೂರ್ತಿಗಳವರು 1947ರಲ್ಲಿಯೇ ಮಹಾಸ್ವಾಮಿಗಳವರ ಸಾನ್ನಿಧ್ಯಕ್ಕೆ ಬಂದು ಸದ್ಗುರು ಸೇವೆಯನ್ನು ಮಾಡುತ್ತಾ ಸದ್ಗುರುಗಳಿಂದಲೇ ವೇದಾಂತ ಭಾಷ್ಯಗಳನ್ನು ಅಧ್ಯಯನ ಮಾಡಿದರು. 1953ರಿಂದಲೇ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಕಾರ್ಯದರ್ಶಿಗಳಾಗಿ, ಶ್ರೀಶ್ರೀಗಳವರ ಮಾರ್ಗದರ್ಶನದಂತೆ ಕಾರ್ಯಾಲಯದ ಹಾಗೂ ಶ್ರೀಶ್ರೀಗಳವರ ಸೇವೆಯನ್ನು ಮಾಡುತ್ತಾ ಏಕನಿಷ್ಠೆಯಿಂದ ಹಾಗೂ ಸದ್ಗುರುನಿಷ್ಠೆಯಿಂದ ತಪಸ್ಸನ್ನಾಚರಿಸಿದ ಮಹಾತ್ಮರು ವೇ॥ಬ್ರ॥ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು. 1953ರಿಂದ 2007ರವರೆಗೂ ಸುಮಾರು ಐವತ್ತು ನಾಲ್ಕು ವರ್ಷ

ಗಳವರೆಗೆ ಕಾರ್ಯಾಲಯದ ಸರ್ವತೋಮುಖ ಅಭಿವೃದ್ಧಿಗಾಗಿ ತಮ್ಮ ತನು ಮನ ಧನಗಳನ್ನು ಸಮರ್ಪಿಸಿ ಸೇವೆಮಾಡಿದ ಧನ್ಯಾತ್ಮರು ಶ್ರೀಲ.ನ.ಮೂರ್ತಿಗಳು.

ಸರಳ ಸಜ್ಜನಿಕೆಯ ಸ್ವಭಾವದ, ಸದಾಚಾರಸಂಪನ್ನರಾದ, ಸದ್ಗುರುನಿಷ್ಠರಾದ ವಿದ್ವಾನ್ ಲ.ನ.ಮೂರ್ತಿಗಳವರು ವೇದಾಧ್ಯಯನಸಂಪನ್ನರೂ ಆಗಿದ್ದು ವೇದಾಂತಪ್ರವಚನಪಟುಗಳೂ ಆಗಿದ್ದರು. ರಾಮಾಯಣ, ಭಾರತ, ಭಾಗವತ ಪುರಾಣಗಳನ್ನು ಕುರಿತು ನಿರರ್ಗಳವಾಗಿ ಹಾಗೂ ಚೇತೋಹಾರಿಯಾಗಿ ಸುಂದರ ವಾಗಿ ಉಪನ್ಯಾಸಗಳನ್ನೂ ಮಾಡುತ್ತಿದ್ದರು. ಅವರ ಮುಖದಲ್ಲಿ ಯಾವಾಗಲೂ ಬ್ರಾಹ್ಮತೇಜಸ್ಸು ಹಾಗೂ ವರ್ಚಸ್ಸುಗಳು ಕಂಗೊಳಿಸುತ್ತಿದ್ದವು.

"ಅಧ್ಯಾತ್ಮ ಪ್ರಕಾಶ" ಮಾಸಪತ್ರಿಕೆಯ ಸಂಪಾದಕರಾಗಿ, ಅನೇಕ ವೇದಾಂತ ಗ್ರಂಥಗಳ ಲೇಖಕರಾಗಿ, ಸಮರ್ಥ ಆಡಳಿತಾಽಕಾರಿಗಳಾಗಿ, ನಿಪುಣಪ್ರವಚನ ಕಾರರಾಗಿ, ಆದರ್ಶಸದ್ಗುರುಗಳಾಗಿ, ಸದ್ಗೃಹಸ್ಥರಾಗಿ, ಸದಾ ಶಾಂತರಾಗಿ ಹಾಗೂ ವೇದಾಂತಚಿಂತನಪರರಾಗಿ ತಮ್ಮ ದೀರ್ಘ ಜೀವನವನ್ನು ಸಾರ್ಥಕವಾಗಿ ನಡೆಸಿದ ಮಹಾತ್ಮರೆಂದರೆ ನನಗೆ ವಿದ್ಯಾಗುರುಗಳಾದ ಪೂಜ್ಯ ಹೆಚ್. ಎಸ್. ಲಕ್ಷ್ಮೀ ನರಸಿಂಹಮೂರ್ತಿಗಳವರು. ನನಗೆ ವೇದಮಂತ್ರಗಳು, ವ್ಯಾಕರಣ, ಕಾವ್ಯ ನಾಟಕಗಳನ್ನೂ ಪ್ರೀತಿಯಿಂದ ಪಾಠಮಾಡಿ ನನ್ನನ್ನು ಧನ್ಯನನ್ನಾಗಿಸಿರುವ ಪೂಜ್ಯ ಗುರುವರ್ಯರ ಪವಿತ್ರಪಾದಾರವಿಂದಗಳಲ್ಲಿ ನನ್ನ ಕೃತಜ್ಞತಾಪೂರ್ವಕ ಪ್ರಣಾಮ ಗಳನ್ನು ಈ ಮೂಲಕ ಸಮರ್ಪಿಸುತ್ತಿದ್ದೇನೆ.

ಇಂಥ ಪಂಡಿತೋತ್ತಮರಿಂದ ರಚಿತವಾಗಿರುವ **"ಶ್ರೀವಿಷ್ಣುಸಹಸ್ರನಾಮ ಸ್ತೋತ್ರ ಮಂಜರಿ"** ಎಂಬ ಈ ಕೃತಿಯು ವಾಚಕರಿಗೆ ನಿಜಕ್ಕೂ ಕಲ್ಪತರುವಾಗಿರುತ್ತದೆ. ಅಧ್ಯಾತ್ಮಜಿಜ್ಞಾಸುಗಳಾದ ಸಾಧಕರುಗಳು ಈ ಗ್ರಂಥವನ್ನು ಅಧ್ಯಯನಮಾಡಿ, ಅರ್ಥವನ್ನು ಅನುಸಂಧಾನಮಾಡುತ್ತಾಫಿ, ನಾಮಗಳನ್ನು ಪಾರಾಯಣ ಮಾಡುತ್ತಾ ಭಗವಂತನ ಹಾಗೂ ಸದ್ಗುರುಗಳ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾಗಲೆಂದು ಮನಸಾರೇ ಆಶಿಸುತ್ತೇನೆ.

**"ನಮೋ ನಮಃ ಸದ್ಗುರು ಪಾದುಕಾಭ್ಯಾಮ್"**

**ಮಂಗಳಂ ಸಚ್ಚಿದಾನಂದಗುರುದೇವಾಯ ಧೀಮತೇ ।**

**ವೇದವೇದಾಂತವೇದಾಂಗಸಾರಜ್ಞಾಯಾಸ್ತು ಮಂಗಳಮ್ ॥**

ಶ್ರೀ"ವಿಜಯ" ಸಂವತ್ಸರದ
ಫಾಲ್ಗುಣ ಶುದ್ಧ ಸಪ್ತಮೀ
ತಾ ॥ 8-3-2014 ಶನಿವಾರ,

ಸದ್ಗುರು ಚರಣಧೂಳಿ:
ಕೆ.ಜಿ. ಸುಬ್ರಾಯ ಶರ್ಮಾ
9886281622

# ವಿಷಯಾನುಕ್ರಮಣಿಕೆ


| | | ಪುಟ ಸಂಖ್ಯೆ |
|---|---|---|
| | ಪ್ರಕಾಶಕರ ಬಿನ್ನಹ | iii - vi |
| | ಪ್ರಸ್ತಾವನೆ | vii - ix |
| | ವಿಷಯಾನುಕ್ರಮಣಿಕೆ | x |
| | ವಿಷ್ಣು ಸಹಸ್ರನಾಮಸ್ತೋತ್ರ | xi - xxxii |
| 1. | ಪ್ರಥಮಶತಕ | 1-29 |
| 2. | ದ್ವಿತೀಯಶತಕ | 30-51 |
| 3. | ತೃತೀಯಶತಕ | 52-74 |
| 4. | ಚತುರ್ಥಶತಕ | 75-94 |
| 5. | ಪಂಚಮಶತಕ | 95-113 |
| 6. | ಷಷ್ಠಶತಕ | 114-128 |
| 7. | ಸಪ್ತಮಶತಕ | 129-144 |
| 8. | ಅಷ್ಟಮಶತಕ | 145-163 |
| 9. | ನವಮಶತಕ | 164-175 |
| 10. | ದಶಮಶತಕ | 176-188 |
| 11. | ಉಪಸಂಹಾರ, ಫಲಶ್ರುತಿ | 189-193 |
| 12. | ಶ್ಲೋಕಗಳ ಅಕ್ಷರಾನುಕ್ರಮಣಿಕೆ (ಪರಿಶಿಷ್ಟ -1) | 194-195 |
| 13. | ನಾಮಗಳ ಅಕ್ಷರಾನುಕ್ರಮಣಿಕೆ (ಪರಿಶಿಷ್ಟ -2) | 196-210 |

# ಶ್ರೀವಿಷ್ಣುಸಹಸ್ರನಾಮಸ್ತೋತ್ರ

## ಪೂರ್ವಪೀಠಿಕಾ

ಓಂ ॥ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಮ್ ।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಮ್ ॥

ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥

ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥

ಯಸ್ಯ ಸ್ಮರಣಮಾತ್ರೇಣ ಜನ್ಮಸಂಸಾರಬಂಧನಾತ್ ।
ವಿಮುಚ್ಯತೇ ನಮಸ್ತಸ್ಮೈ ವಿಷ್ಣವೇ ಪ್ರಭವಿಷ್ಣವೇ ॥

॥ ಓಂ ನಮೋ ವಿಷ್ಣವೇ ಪ್ರಭವಿಷ್ಣವೇ ॥

ಶ್ರೀವೈಶಂಪಾಯನ ಉವಾಚ

ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ ।
ಯುಧಿಷ್ಠಿರಃ ಶಾಂತನವಂ ಪುನರೇವಾಭ್ಯಭಾಷತ ॥

## ಶ್ರೀಯುಧಿಷ್ಠಿರ ಉವಾಚ

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥

ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ॥

## ಶ್ರೀ ಭೀಷ್ಮ ಉವಾಚ

ಜಗತ್ಪ್ರಭುಂ ದೇವದೇವಮನಂತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಸ್ಸತತೋತ್ಥಿತಃ ॥

ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯನ್ ಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ಚ ॥

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥

ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್ ।
ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥

ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥

ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥

**ಯತಸ್ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ ।**
**ಯಸ್ಮಿಂಶ್ಚ ಪ್ರಲಯಂ ಯಾನ್ತಿ ಪುನರೇವ ಯುಗಕ್ಷಯೇ ॥**

**ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।**
**ವಿಷ್ಣೋರ್ನಾಮಸಹಸ್ರಂ ಮೇ ಶ್ರುಣು ಪಾಪಭಯಾಪಹಮ್ ॥**

**ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।**
**ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥**

**ಋಷಿರ್ನಾಮ್ನಾಂ ಸಹಸ್ರಸ್ಯ ವೇದವ್ಯಾಸೋ ಮಹಾಮುನಿಃ ।**
**ಛಂದೋಽನುಷ್ಟುಪ್ ತಥಾ ದೇವೋ ಭಗವಾನ್ ದೇವಕೀಸುತಃ ॥**

**ಅಮೃತಾಂಶೂದ್ಭವೋ ಬೀಜಂ ಶಕ್ತಿರ್ದೇವಕಿನಂದನಃ ।**
**ತ್ರಿಸಾಮಾ ಹೃದಯಂ ತಸ್ಯ ಶಾಂತ್ಯರ್ಥೇ ವಿನಿಯುಜ್ಯತೇ ॥**

**ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭವಿಷ್ಣುಂ ಮಹೇಶ್ವರಮ್ ।**
**ಅನೇಕರೂಪದೈತ್ಯಾನ್ತಂ ನಮಾಮಿ ಪುರುಷೋತ್ತಮಮ್ ॥**

ಅಸ್ಯ ಶ್ರೀವಿಷ್ಣೋರ್ದಿವ್ಯಸಹಸ್ರನಾಮಸ್ತೋತ್ರಮಹಾಮಂತ್ರಸ್ಯ । ಶ್ರೀವೇದ - ವ್ಯಾಸೋಭಗವಾನ್ ಋಷಿಃ । ಅನುಷ್ಟುಪ್ ಛಂದಃ । ಶ್ರೀಮಹಾವಿಷ್ಣುಃ ಪರಮಾತ್ಮಾ ಶ್ರೀಮನ್ನಾರಾಯಣೋ ದೇವತಾ । ಅಮೃತಾಂಶೂದ್ಭವೋ ಭಾನುರಿತಿ ಬೀಜಮ್ । ದೇವಕೀನಂದನಃ ಸ್ರಷ್ಟೇತಿ ಶಕ್ತಿಃ । ಉದ್ಭವಃ, ಕ್ಷೋಭಣೋ ದೇವ ಇತಿ ಪರಮೋ ಮಂತ್ರಃ । ಶಂಖಭೃನ್ನಂದಕೀ ಚಕ್ರೀತಿ ಕೀಲಕಮ್ । ಶಾರ್ಙ್ಗಧನ್ವಾ ಗದಾಧರ ಇತ್ಯಸ್ತ್ರಮ್ । ರಥಾಂಗ - ಪಾಣಿರಕ್ಷೋಭ್ಯ ಇತಿ ನೇತ್ರೇ । ತ್ರಿಸಾಮಾ ಸಾಮಗಃ ಸಾಮೇತಿ ಕವಚಮ್ । ಆನಂದಂ ಪರಬ್ರಹ್ಮೇತಿ ಯೋನಿಃ । ಋತುಸ್ಸುದರ್ಶನಃ ಕಾಲ ಇತಿ ದಿಗ್ಬಂಧಃ । ಶ್ರೀವಿಶ್ವರೂಪ ಇತಿ ಧ್ಯಾನಮ್ । ಶ್ರೀಮಹಾವಿಷ್ಣುಃ ಪ್ರೀತ್ಯರ್ಥೇ ಶ್ರೀಸಹಸ್ರನಾಮಪಾರಾಯಣೇ (ಜಪೇ) ವಿನಿಯೋಗಃ ॥

ವಿಶ್ವಂ ವಿಷ್ಣುರ್ವಷಟ್ಕಾರ ಇತ್ಯಂಗುಷ್ಠಾಭ್ಯಾಂ ನಮಃ ।
ಅಮೃತಾಂಶೂದ್ಭವೋ ಭಾನುರಿತಿ ತರ್ಜನೀಭ್ಯಾಂ ನಮಃ ।
ಬ್ರಹ್ಮಣೋ ಬ್ರಹ್ಮಕೃದ್ಬ್ರಹ್ಮೇತಿ ಮಧ್ಯಮಾಭ್ಯಾಂ ನಮಃ ।
ಸುವರ್ಣಬಿಂದುರಕ್ಷೋಭ್ಯ ಇತ್ಯನಾಮಿಕಾಭ್ಯಾಂ ನಮಃ ।
ನಿಮಿಷೋಽನಿಮಿಷಃ ಸ್ರಗ್ವೀತಿ ಕನಿಷ್ಠಿಕಾಭ್ಯಾಂ ನಮಃ ।
ರಥಾಂಗಪಾಣಿರಕ್ಷೋಭ್ಯ ಇತಿ ಕರತಲಕರಪೃಷ್ಠಾಭ್ಯಾಂ ನಮಃ ।
ಸುವ್ರತಃ ಸುಮುಖಃ ಸೂಕ್ಷ್ಮೇತಿ ಜ್ಞಾನಾಯ ಹೃದಯಾಯ ನಮಃ ।
ಸಹಸ್ರಮೂರ್ಧಾ ವಿಶ್ವಾತ್ಮೇತಿ ಐಶ್ವರ್ಯಾಯ ಶಿರಸೇ ಸ್ವಾಹಾ ।
ಸಹಸ್ರಾರ್ಚಿಃ ಸಪ್ತಜಿಹ್ವೇತಿ ಶಕ್ತ್ಯೈ ಶಿಖಾಯೈ ವಷಟ್ ।
ತ್ರಿಸಾಮಾ ಸಾಮಗಃ ಸಾಮೇತಿ ಬಲಾಯ ಕವಚಾಯ ಹುಂ ।
ರಥಾಂಗಪಾಣಿರಕ್ಷೋಭ್ಯ ಇತಿ ತೇಜಸೇ ನೇತ್ರತ್ರಯಾಯ ವೌಷಟ್ ।
ಶಾರ್ಙ್ಗಧನ್ವಾ ಗದಾಧರ ಇತಿ ವೀರ್ಯಾಯ ಅಸ್ತ್ರಾಯ ಫಟ್ ।
ಋತುಃ ಸುದರ್ಶನಃ ಕಾಲ ಇತಿ ಭೂರ್ಭುವಃಸುವರೋಮಿತಿ ದಿಗ್ಬಂಧಃ ॥

## ಅಥ ಧ್ಯಾನಮ್

ಕ್ಷೀರೋದನ್ವತ್ಪ್ರದೇಶೇ ಶುಚಿಮಣಿವಿಲಸತ್ಸೈಕತೇ ಮೌಕ್ತಿಕಾನಾಂ
ಮಾಲಾಕ್ಲೃಪ್ತಾಸನಸ್ಥಃ ಸ್ಫಟಿಕಮಣಿನಿಭೈರ್ಮೌಕ್ತಿಕೈರ್ಮಂಡಿತಾಂಗಃ ।
ಶುಭ್ರೈರಭ್ರೈರದಭ್ರೈರುಪರಿವಿರಚಿತೈರ್ಮುಕ್ತಪೀಯೂಷವರ್ಷೈಃ ।
ಆನಂದೀ ನಃ ಪುನೀಯಾದರಿನಳಿನಗದಾಶಂಖಪಾಣಿರ್ಮುಕುಂದಃ ॥

ಭೂಃ ಪಾದೌ ಯಸ್ಯ ನಾಭಿರ್ವಿಯದಸುರ-
ನಿಲಶ್ಚಂದ್ರಸೂರ್ಯೌ ಚ ನೇತ್ರೇ

ಕರ್ಣಾವಾಶಾಃ ಶಿರೋ ದ್ಯೌರ್ಮುಖಮಪಿ
ದಹನೋ ಯಸ್ಯ ವಾಸೋಽಯಮಬ್ಧಿಃ ||

ಅಂತಃಸ್ಥಂ ಯಸ್ಯ ವಿಶ್ವಂ ಸುರನರ-
ಖಗಗೋಭೋಗಿಗಂಧರ್ವದೈತ್ಯೈಃ
ಚಿತ್ರಂ ರಂರಮ್ಯತೇ ತಂ ತ್ರಿಭುವನ-
ವಪುಷಂ ವಿಷ್ಣುಮೀಶಂ ನಮಾಮಿ ||

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ |
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ||

ಮೇಘಶ್ಯಾಮಂ ಪೀತಕೌಶೇಯವಾಸಂ
ಶ್ರೀವತ್ಸಾಂಕಂ ಕೌಸ್ತುಭೋದ್ಭಾಸಿತಾಂಗಮ್ |
ಪುಣ್ಯೋಪೇತಂ ಪುಂಡರೀಕಾಯತಾಕ್ಷಂ
ವಿಷ್ಣುಂ ವಂದೇ ಸರ್ವಲೋಕೈಕನಾಥಮ್ ||

ನಮಸ್ಸಮಸ್ತಭೂತಾನಾಮಾದಿಭೂತಾಯ ಭೂಭೃತೇ |
ಅನೇಕರೂಪರೂಪಾಯ ವಿಷ್ಣವೇ ಪ್ರಭವಿಷ್ಣವೇ ||

ಸಶಂಖಚಕ್ರಂ ಸಕಿರೀಟಕುಂಡಲಂ
ಸಪೀತವಸ್ತ್ರಂ ಸರಸೀರುಹೇಕ್ಷಣಮ್ |
ಸಹಾರವಕ್ಷಸ್ಥಲ(ಕೌಸ್ತುಭಶ್ರಿಯಂ)ಶೋಭಿಕೌಸ್ತುಭಂ
ನಮಾಮಿ ವಿಷ್ಣುಂ ಶಿರಸಾ ಚತುರ್ಭುಜಮ್ ||

|| ಇತಿ ಪೂರ್ವಪೀಠಿಕಾ||

ಛಾಯಾಯಾಂ ಪಾರಿಜಾತಸ್ಯ ಹೇಮಸಿಂಹಾಸನೋಪರಿ ।
ಆಸೀನಮಂಬುದಶ್ಯಾಮಮಾಯತಾಕ್ಷಮಲಂಕೃತಮ್ ॥

ಚಂದ್ರಾನನಂ ಚತುರ್ಬಾಹುಂ ಶ್ರೀವತ್ಸಾಂಕಿತವಕ್ಷಸಮ್ ।
ರುಕ್ಮಿಣೀಸತ್ಯಭಾಮಾಭ್ಯಾಂ ಸಹಿತಂ ಕೃಷ್ಣಮಾಶ್ರಯೇ ॥

॥ ಓಂ ವಿಶ್ವಸ್ಮೈನಮಃ ॥

# ಅಥ ಶ್ರೀವಿಷ್ಣುಸಹಸ್ರನಾಮ ಸ್ತೋತ್ರಮ್

ಓಮ್॥ ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ ಪ್ರಭುಃ ।
ಭೂತಕೃದ್ ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ ॥1॥

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।
ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ॥2॥

ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।
ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥3॥

ಸರ್ವಃ ಶರ್ವಃ ಶಿವಃ ಸ್ಥಾಣುಃ ಭೂತಾದಿರ್ನಿಧಿರವ್ಯಯಃ ।
ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥4॥

ಸ್ವಯಂಭೂಃ ಶಂಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।
ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥5॥

ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ ।
ವಿಶ್ವಕರ್ಮಾ ಮನಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥6॥

ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ ।
ಪ್ರಭೂತಸ್ತ್ರಿಕ ಕುಬ್ಧಾಮ ಪವಿತ್ರಂ ಮಂಗಲಂ ಪರಮ್ ॥7॥

ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।
ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥8॥

ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।
ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥9॥

ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।
ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥10॥

ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।
ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥11॥

ವಸುರ್ವಸುಮನಾಃ ಸತ್ಯಃ ಸಮಾತ್ಮಾಸಂಮಿತಃ ಸಮಃ ।
ಅಮೋಘಃ ಪುಂಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ ॥12॥

ರುದ್ರೋ ಬಹುಶಿರಾ ಭ್ರುರ್ವಿಶ್ವಯೋನಿಃ ಶುಚಿಶ್ರವಾಃ ।
ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥13॥

ಸರ್ವಗಃ ಸರ್ವವಿದ್ಭಾನುಃ ವಿಷ್ವಕ್ಸೇನೋ ಜನಾರ್ದನಃ ।
ವೇದೋ ವೇದವಿದವ್ಯಂಗೋ ವೇದಾಂಗೋ ವೇದವಿತ್ ಕವಿಃ ॥14॥

ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।
ಚತುರಾತ್ಮಾ ಚತುರ್ವ್ಯೂಹಃ ಚತುರ್ದಂಷ್ಟ್ರಶ್ಚತುರ್ಭುಜಃ ॥15॥

ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।
ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥16॥

ಉಪೇನ್ದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।
ಅತೀಂದ್ರಃ ಸಂಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ ॥17॥

ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।
ಅತೀಂದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ ॥18॥

ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।
ಅನಿರ್ದೇಶ್ಯವಪುಃ ಶ್ರೀಮಾನ್ ಅಮೇಯಾತ್ಮಾ ಮಹಾದ್ರಿಧೃಕ್ ॥19॥

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।
ಅನಿರುದ್ಧಃ ಸುರಾನಂದೋ ಗೋವಿಂದೋ ಗೋವಿದಾಂ ಪತಿಃ ॥20॥

ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ ।
ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥21॥

ಅಮೃತ್ಯುಃ ಸರ್ವದೃಕ್ಸಿಂಹಃ ಸಂಧಾತಾ ಸಂಧಿಮಾನ್ ಸ್ಥಿರಃ ।
ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥22॥

ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।
ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥23॥

ಅಗ್ರಣೀರ್ಗ್ರಾಮಣೀಃ ಶ್ರೀಮಾನ್ ನ್ಯಾಯೋ ನೇತಾ ಸಮೀರಣಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥24॥

ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ ।
ಅಹಃ ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥25॥

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ ವಿಶ್ವಭುಗ್ ವಿಭುಃ ।
ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ||26||

ಅಸಂಖ್ಯೇಯೋಽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃತ್ ಶುಚಿಃ ।
ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ||27||

ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।
ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ||28||

ಸುಭುಜೋ ದುರ್ಧರೋ ವಾಗ್ಮೀ ಮಹೇಂದ್ರೋ ವಸುದೋ ವಸುಃ ।
ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ||29||

ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।
ಋದ್ಧಃ ಸ್ಪಷ್ಟಾಕ್ಷರೋ ಮಂತ್ರಶ್ಚಂದ್ರಾಂಶುರ್ಭಾಸ್ಕರದ್ಯುತಿಃ ||30||

ಅಮೃತಾಂಶೂದ್ಭವೋ ಭಾನುಃ ಶಶಬಿಂದುಃ ಸುರೇಶ್ವರಃ ।
ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ||31||

ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ ।
ಕಾಮಹಾ ಕಾಮಕೃತ್ ಕಾಂತಃ ಕಾಮಃ ಕಾಮಪ್ರದಃ ಪ್ರಭುಃ ||32||

ಯುಗಾದಿಕೃತ್ ಯುಗಾವರ್ತೋ ನೈಕಮಾಯೋ ಮಹಾಶನಃ ।
ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನಂತಜಿತ್ ||33||

ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಂಡೀ ನಹುಷೋ ವೃಷಃ ।
ಕ್ರೋಧಹಾ ಕ್ರೋಧಕೃತ್ ಕರ್ತಾ ವಿಶ್ವಬಾಹುರ್ಮಹೀಧರಃ ||34||

ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।
ಅಪಾಂ ನಿದಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ||35||

ಸ್ಕಂದಃ ಸ್ಕಂದಧರೋ ಧುರ್ಯೋ ವರದೋ ವಾಯುವಾಹನಃ ।
ವಾಸುದೇವೋ ಬೃಹದ್ಭಾನುರಾದಿದೇವಃ ಪುರಂದರಃ ॥36॥

ಅಶೋಕಸ್ತಾರಣಃ ತಾರಃ ಶೂರಃ ಶೌರಿರ್ಜನೇಶ್ವರಃ ।
ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥37॥

ಪದ್ಮನಾಭೋಽರವಿಂದಾಕ್ಷಃ ಪದ್ಮಗರ್ಭಃ ಶರೀರಭೃತ್ ।
ಮಹರ್ದ್ಧಿರ್‌ಋದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ ॥38॥

ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ ।
ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ ಸಮಿತಿಂಜಯಃ ॥39॥

ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ ।
ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥40॥

ಉದ್ಭವಃ, ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥41॥

ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।
ಪರರ್ಧಿಃ ಪರಮಸ್ಪಷ್ಟಃ ತುಷ್ಟಃ ಪುಷ್ಟಃ ಶುಭೇಕ್ಷಣಃ ॥42॥

ರಾಮೋ ವಿರಾಮೋವಿರತೋಮಾರ್ಗೋ ನೇಯೋ ನಯೋಽನಯಃ ।
ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ॥43॥

ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।
ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥44॥

ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।
ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥45॥

ವಿಸ್ತಾರಃ ಸ್ಥಾವರಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್ ।
ಅರ್ಥೋಽನರ್ಥೋ ಮಹಾಕೋಶೋಮಹಾಭೋಗೋ ಮಹಾಧನಃ
॥46॥

ಅನಿರ್ವಿಣ್ಣಃ ಸ್ಥವಿಷ್ಠೋ ಭೂರ್ಧರ್ಮಯೂಪೋ ಮಹಾಮಖಃ ।
ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ, ಕ್ಷಾಮಃ ಸಮೀಹನಃ ॥47॥

ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂ ಗತಿಃ ।
ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥48॥

ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಹೃದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥49॥

ಸ್ಥಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।
ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥50॥

ಧರ್ಮಗುಬ್ ಧರ್ಮಕೃತ್‌ಧರ್ಮೀ ಸದಸತ್‌ಕ್ಷರಮಕ್ಷರಮ್ ।
ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥51॥

ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ ।
ಆದಿದೇವೋ ಮಹಾದೇವೋ ದೇವೇಶೋ ದೇವಭೃದ್‌ಗುರುಃ ॥52॥

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ಶರೀರಭೂತಭೃದ್‌ಭೋಕ್ತಾ ಕಪೀಂದ್ರೋ ಭೂರಿದಕ್ಷಿಣಃ ॥53॥

ಸೋಮಪೋಽಮೃತಪಃ ಸೋಮಃ ಪುರುಜಿತ್ ಪುರುಸತ್ತಮಃ ।
ವಿನಯೋ ಜಯಃ ಸತ್ಯಸಂಧೋ ದಾಶಾರ್ಹಃ ಸಾತ್ವತಾಂ ಪತಿಃ ॥54॥

ಜೀವೋ ವಿನಯಿತಾ ಸಾಕ್ಷೀ ಮುಕುಂದೋಽಮಿತವಿಕ್ರಮಃ ।
ಅಂಭೋನಿಧಿರನಂತಾತ್ಮಾ ಮಹೋದಧಿಶಯೋಽನ್ತಕಃ ॥55॥

ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।
ಆನಂದೋ ನಂದನೋ ನಂದಃ ಸತ್ಯಧರ್ಮಾ ತ್ರಿವಿಕ್ರಮಃ ॥56॥

ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।
ತ್ರಿಪದಃ ತ್ರಿದಶಾಧ್ಯಕ್ಷಃ ಮಹಾಶೃಂಗಃ ಕೃತಾನ್ತಕೃ ॥57॥

ಮಹಾವರಾಹೋ ಗೋವಿಂದಃ ಸುಷೇಣಃ ಕನಕಾಂಗದೀ ।
ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥58॥

ವೇಧಾಃ ಸ್ವಾಂಗೋಽಜಿತಃ ಕೃಷ್ಣೋ ದೃಢಃ ಸಂಕರ್ಷಣೋಽಚ್ಯುತಃ ।
ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥59॥

ಭಗವಾನ್ ಭಗಹಾಽಽನನ್ದೀ ವನಮಾಲೀ ಹಲಾಯುಧಃ ।
ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥60॥

ಸುಧನ್ವಾ ಖಂಡಪರಶುರ್ದಾರುಣೋ ದ್ರವಿಣಪ್ರದಃ ।
ದಿವಃಸ್ಪೃಕ್ ಸರ್ವದೃಗ್ ವ್ಯಾಸೋ ವಾಚಸ್ಪತಿರಯೋನಿಜಃ ॥61॥

ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ ।
ಸಂನ್ಯಾಸಕೃತ್ ಶರ್ಮಃ ಶಾನ್ತೋ ನಿಷ್ಠಾ ಶಾನ್ತಿಃ ಪರಾಯಣಮ್ ॥62॥

ಶುಭಾಂಗಃ ಶಾನ್ತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।
ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥63॥

ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।
ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂ ವರಃ ॥64॥

ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ ।
ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾನ್ ಲೋಕತ್ರಯಾಶ್ರಯಃ ॥65॥

ಸ್ವಕ್ಷಃ ಸ್ವಂಗಃ ಶತಾನನ್ದೋ ನಂದಿರ್ಜ್ಯೋತಿರ್ಗಣೇಶ್ವರಃ ।
ವಿಜಿತಾತ್ಮಾಽವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥66॥

ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಃ ಸ್ಥಿರಃ ।
ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥67॥

ಅರ್ಚಿಷ್ಮಾನರ್ಚಿತಃ ಕುಂಭೋ ವಿಶುದ್ಧಾತ್ಮಾ ವಿಶೋಧನಃ ।
ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತವಿಕ್ರಮಃ ॥68॥

ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ ।
ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥69॥

ಕಾಮದೇವಃ ಕಾಮಪಾಲಃ ಕಾಮೀ ಕಾಂತಃ ಕೃತಾಗಮಃ ।
ಅನಿರ್ದೇಶ್ಯವಪುರ್ವಿಷ್ಣುರ್ವೀರೋಽನನ್ತೋ ಧನಂಜಯಃ ॥70॥

ಬ್ರಹ್ಮಣ್ಯೋ ಬ್ರಹ್ಮಕೃದ್‌ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।
ಬ್ರಹ್ಮವಿದ್‌ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥71॥

ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ ।
ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ ॥72॥

ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ ।
ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥73॥

ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।
ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ ॥74॥

ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।
ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥75॥

ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ ।
ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ ॥76॥

ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿಮಾನ್ ।
ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥77॥

ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।
ಲೋಕಬಂಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥78॥

ಸುವರ್ಣವರ್ಣೋ ಹೇಮಾಂಗೋ ವರಾಂಗಶ್ಚಂದನಾಂಗದೀ ।
ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ ॥79॥

ಅಮಾನೀ ಮಾನದೋ ಮಾನ್ಯಃ ಲೋಕಸ್ವಾಮೀ ತ್ರಿಲೋಕಧೃಕ್ ।
ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥80॥

ತೇಜೋವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂ ವರಃ ।
ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಂಗೋ ಗದಾಗ್ರಜಃ ॥81॥

ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ ।
ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ॥82॥

ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹಾ
॥83॥

ಶುಭಾಂಗೋ ಲೋಕಸಾರಂಗಃ ಸುತಂತುಸ್ತಂತುವರ್ಧನಃ ।
ಇಂದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥84॥

ಉದ್ಭವಃ ಸುಂದರಃ ಸುಂದೋ ರತ್ನನಾಭಃ ಸುಲೋಚನಃ ।
ಅರ್ಕೋ ವಾಜಸನಃ ಶೃಂಗೀ ಜಯಂತಃ ಸರ್ವವಿಜ್ಜಯೀ ॥85॥

ಸುವರ್ಣಬಿಂದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।
ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥86॥

ಕುಮುದಃ ಕುಂದರಃ ಕುಂದಃ ಪರ್ಜನ್ಯಃ ಪಾವನೋಽನಿಲಃ ।
ಅಮೃತಾಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ ॥87॥

ಸುಲಭಃ ಸುವ್ರತಃ ಸಿದ್ಧಃ ಶತ್ರುಜಿತ್ ಶತ್ರುತಾಪನಃ ।
ನ್ಯಗ್ರೋಧೋದುಂಬರೋಽಶ್ವತ್ಥಃ ಚಾಣೂರಾಂಧ್ರನಿಷೂದನಃ ॥88॥

ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।
ಅಮೂರ್ತಿರನಘೋಽಚಿಂತ್ಯೋ ಭಯಕೃದ್ಭಯನಾಶನಃ ॥89॥

ಅಣುರ್ಬೃಹತ್ಕೃಶಃ ಸ್ಥೂಲೋಃ ಗುಣಭೃನ್ನಿರ್ಗುಣೋ ಮಹಾನ್ ।
ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥90॥

ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।
ಆಶ್ರಮಃ ಶ್ರಮಣಃ, ಕ್ಷಾಮಃ ಸುಪರ್ಣೋ ವಾಯುವಾಹನಃ ॥91॥

ಧನುರ್ಧರೋ ಧನುರ್ವೇದೋ ದಂಡೋ ದಮಯಿತಾ ದಮಃ ।
ಅಪರಾಜಿತಃ ಸರ್ವಸಹೋ ನಿಯಂತಾಽನಿಯಮೋಽಯಮಃ ॥92॥

ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।
ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ ಪ್ರೀತಿವರ್ಧನಃ ॥93॥

ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಕ್ ವಿಭುಃ ।
ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥94॥

ಅನಂತೋ ಹುತಭುಕ್ಭೋಕ್ತಾ ಸುಖದೋ ನೈಕಜೋಽಗ್ರಜಃ ।
ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥95॥

ಸನಾತ್ಸನಾತನತಮಃ ಕಪಿಲಃ ಕಪಿರವ್ಯಯಃ ।
ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥96॥

ಅರೌದ್ರಃ ಕುಂಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।
ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥97॥

ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ ।
ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥98॥

ಉತ್ತರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ ।
ವೀರಹಾ ರಕ್ಷಣಃ ಸನ್ತೋ ಜೀವನಃ ಪರ್ಯವಸ್ಥಿತಃ ॥99॥

ಅನನ್ತರೂಪೋಽನನ್ತಶ್ರೀಃ ಜಿತಮನ್ಯುರ್ಭಯಾಪಹಃ ।
ಚತುರಶ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥100॥

ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಂಗದಃ ।
ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥101॥

ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ ।
ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥102॥

ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ ಪ್ರಾಣಜೀವನಃ ।
ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥103॥

ಭೂರ್ಭುವಃಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ ।
ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ ॥104॥

ಯಜ್ಞಭೃದ್ ಯಜ್ಞಕೃದ್ ಯಜ್ಞೀ ಯಜ್ಞಭುಗ್ ಯಜ್ಞಸಾಧನಃ ।
ಯಜ್ಞಾನ್ತಕೃದ್ ಯಜ್ಞಗುಹ್ಯಂ ಅನ್ನಮನ್ನಾದ ಏವ ಚ ॥105॥

ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ ।
ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥106॥

ಶಂಖಭೃನ್ನಂದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥107॥

॥ ಸರ್ವಪ್ರಹರಣಾಯುಧ ಓಂ ನಮ ಇತಿ ॥

## ಉತ್ತರ ಪೀಠಿಕಾ

ವನಮಾಲೀ ಗದೀ ಶಾರ್ಙ್ಗೀ ಶಂಖೀ ಚಕ್ರೀ ಚ ನಂದಕೀ ।
ಶ್ರೀಮಾನ್ ನಾರಾಯಣೋ ವಿಷ್ಣುರ್ವಾಸುದೇವೋಽಭಿರಕ್ಷತು ॥
ವನಮಾಲೀ.......ವಾಸುದೇವೋಽಭಿರಕ್ಷತು ॥ (ಮೂರು ಸಾರಿ)

॥ ಶ್ರೀವಾಸುದೇವೋಽಭಿರಕ್ಷತು ಓಂ ನಮಃ ಇತಿ ॥

## ಫಲಶ್ರುತಿಃ

ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ದಿವ್ಯಾನಾಮಶೇಷಣ ಪ್ರಕೀರ್ತಿತಮ್ ॥

ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ ಕಿಂಚಿತ್ ಸೋಽಮುತ್ರೇಹ ಚ ಮಾನವಃ ॥

ವೇದಾಂತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ಧನಸಮೃದ್ಧಃ ಸ್ಯಾತ್ಶೂದ್ರಸ್ಸುಖಮವಾಪ್ನುಯಾತ್ ॥

ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಂ
ಅರ್ಥಾರ್ಥೀ ಚಾರ್ಥಮಾಪ್ನುಯಾತ್ ।

ಕಾಮಾನವಾಪ್ನುಯಾತ್ ಕಾಮೀ
ಪ್ರಜಾರ್ಥೀ ಚಾಪ್ನುಯಾತ್ ಪ್ರಜಾಮ್ ॥

ಭಕ್ತಿಮಾನ್ ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।
ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ ಪ್ರಕೀರ್ತಯೇತ್ ॥

ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿ ಪ್ರಾಧಾನ್ಯಮೇವ ಚ ।
ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃ ಪ್ರಾಪ್ನೋತ್ಯನುತ್ತಮಮ್ ॥

ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿಂದತಿ ।
ಭವತ್ಯರೋಗೋ ದ್ಯುತಿಮಾನ್ ಬಲರೂಪಗುಣಾನ್ವಿತಃ ॥

ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ।
ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥

ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥

ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।
ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥

ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥

ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।
ಯುಜ್ಯೇತಾತ್ಮಸುಖಕ್ಷಾಂತಿಶ್ರೀಧೃತಿಸ್ಮೃತಿಕೀರ್ತಿಭಿಃ ॥

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥

ದ್ಯೌಸ್ಸಚಂದ್ರಾರ್ಕನಕ್ಷತ್ರಾ ಖಂ ದಿಶೋ ಭೂರ್ಮಹೋದಧಿಃ ।
ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥

ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ ।
ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥

ಇಂದ್ರಿಯಾಣಿ ಮನೋ ಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।
ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥

ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥

ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ ।
ಜಂಗಮಾಜಂಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥

ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿಕರ್ಮ ಚ ।
ವೇದಾಶ್ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀನ್ಲೋಕಾನ್ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥

ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।
ಪಠೇದ್ಯ ಇಚ್ಛೇತ್ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥

ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।
ಭಜಂತಿ ಯೇ ಪುಷ್ಕರಾಕ್ಷಂ ನ ತೇ ಯಾಂತಿ ಪರಾಭವಮ್ ॥

॥ ನ ತೇ ಯಾಂತಿ ಪರಾಭವಮ್ ಓಂ ನಮಃ ಇತಿ ॥

ಅರ್ಜುನ ಉವಾಚ

ಪದ್ಮಪತ್ರ ವಿಶಾಲಾಕ್ಷ ಪದ್ಮನಾಭ ಸುರೋತ್ತಮ ।
ಭಕ್ತಾನಾಮನುರಕ್ತಾನಾಂ ತ್ರಾತಾ ಭವ ಜನಾರ್ದನ ॥

ಶ್ರೀಭಗವಾನುವಾಚ

ಯೋ ಮಾಂ ನಾಮಸಹಸ್ರೇಣ ಸ್ತೋತುಮಿಚ್ಛತಿ ಪಾಂಡವ ।
ಸೋಽಹಮೇಕೇನ ಶ್ಲೋಕೇನ ಸ್ತುತ ಏವ ನ ಸಂಶಯಃ ॥
॥ ಸ್ತುತ ಏವ ನ ಸಂಶಯ ಓಂ ನಮಃ ಇತಿ ॥

ವ್ಯಾಸ ಉವಾಚ

ವಾಸನಾದ್ವಾಸುದೇವಸ್ಯ ವಾಸಿತಂ ತೇ ಜಗತ್ತ್ರಯಮ್ ।
ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತುತೇ ॥
॥ ಶ್ರೀವಾಸುದೇವ ನಮೋಽಸ್ತುತ ಓಂ ನಮಃ ಇತಿ ॥

ಪಾರ್ವತ್ಯುವಾಚ

ಕೇನೋಪಾಯೇನ ಲಘುನಾ ವಿಷ್ಣೋರ್ನಾಮಸಹಸ್ರಕಮ್ ।
ಪಠ್ಯತೇ ಪಂಡಿತೈರ್ನಿತ್ಯಂ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥

ಈಶ್ವರ ಉವಾಚ

ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ ।
ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ ॥ (ಮೂರುಸಾರಿ)
ಶ್ರೀರಾಮನಾಮ ವರಾನನ ಓಂ ನಮ ಇತಿ ।

ಬ್ರಹ್ಮೋವಾಚ

ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।

सहस्रनाम्ने पुरुषाय शाश्वते
सहस्रकोटियुगधारिणे नमः ॥

॥ सहस्रकोटियुगधारिण ओं नमः इति ॥

ಸಂಜಯ ಉವಾಚ

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

ಶ್ರೀಭಗವಾನುವಾಚ

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಽಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಆರ್ತಾ ವಿಷಣ್ಣಾಃ ಶಿಥಿಲಾಶ್ಚ ಭೀತಾಃ
ಘೋರೇಷು ಚ ವ್ಯಾಧಿಷು ವರ್ತಮಾನಾಃ ।
ಸಂಕೀರ್ತ್ಯ ನಾರಾಯಣಶಬ್ದಮಾತ್ರಂ
ವಿಮುಕ್ತದುಃಖಾಃ ಸುಖಿನೋ ಭವಂತು ॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಓಂ ತತ್ ಸತ್

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರ್ಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಿಕಪರ್ವಣಿ ಶ್ರೀಭೀಷ್ಮಯುಧಿಷ್ಠಿರಸಂವಾದೇ ।
ಶ್ರೀವಿಷ್ಣೋರ್ದಿವ್ಯಸಹಸ್ರನಾಮಸ್ತೋತ್ರ ನಾಮ
ಏಕೋನಪಂಚಾಶದಧಿಕಶತತಮೋಽಧ್ಯಾಯಃ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ಚ ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತುತೇ ॥

ವಿಸರ್ಗಬಿಂದುಮಾತ್ರಾಣಿ ಪದಪಾದಾಕ್ಷರಾಣಿ ಚ ।
ನ್ಯೂನಾನಿ ಚಾತಿರಿಕ್ತಾನಿ ಕ್ಷಮಸ್ವ ಪುರುಷೋತ್ತಮ ॥

ಶ್ರೀವಾಸುದೇವಾರ್ಪಣಮಸ್ತು

॥ಓಂ॥

# ಶ್ರೀವಿಷ್ಣುಸಹಸ್ರನಾಮಸ್ತೋತ್ರಮಂಜರಿ

## ಮಂಗಳಂ

**ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭವಿಷ್ಣುಂ ಮಹೇಶ್ವರಮ್ ।**
**ಅನೇಕರೂಪದೈತ್ಯಾನ್ತಂ ನಮಾಮಿ ಪುರೋತ್ತಮಮ್ ॥**

ಸರ್ವವ್ಯಾಪಕನೂ ಜಯಶೀಲನೂ ಸಮರ್ಥನೂ ಒಡೆಯರಿಗೆಲ್ಲ ಒಡೆಯನೂ ನಾನಾರೂಪಗಳನ್ನು ಧರಿಸುವಂಥ ದುಷ್ಟರಾಕ್ಷಸರಿಗೆಲ್ಲ ಅಂತಕನೂ ಆದ ಪುರುಷೋತ್ತಮ ನೆನಿಸಿರುವ ಆ ಮಹಾವಿಷ್ಣುವನ್ನು ನಮಸ್ಕರಿಸುತ್ತೇನೆ.

## ಪೀಠಿಕೆ

ಅಧ್ಯಾತ್ಮತತ್ತ್ವಜಿಜ್ಞಾಸುಗಳಾದ ವಾಚಕರಿಗೆ ಶುಭಾಶಯಗಳು. "ಅಧ್ಯಾತ್ಮ ಪ್ರಕಾಶ" ಮಾಸಪತ್ರಿಕೆಯ ಸನ್ಮಾನ್ಯವಾಚಕರಾದ ಕೆಲವು ಮಹನೀಯರುಗಳು ವಿಷ್ಣುಸಹಸ್ರನಾಮ ಸ್ತೋತ್ರದಲ್ಲಿನ ಭಗವಂತನ ದಿವ್ಯನಾಮಗಳ ಅರ್ಥವನ್ನು ವಿವರಣರೂಪವಾಗಿ ಬರೆದು ಪ್ರಕಟಿಸಬೇಕೆಂದು ಬಯಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದರಿಂದ ಈ ಗ್ರಂಥರಚನೆಗೆ ಪ್ರಾರಂಭಿಸಲಾಗಿದೆ. ಇದರಲ್ಲಿನ ಗುಣಗಳನ್ನು ಮಾತ್ರ ಸ್ವೀಕರಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಕಲಿಯುಗದ ಮಾನವರಾದ ನಮಗೆ ಭಗವಂತನ ದಶಾವತಾರಗಳಲ್ಲಿ ಕೃಷ್ಣಾವತಾರವು ಹತ್ತಿರವಾದದ್ದಾಗಿದೆ. "ಕೃಷ್ಣಸ್ತು ಭಗವಾನ್ ಸ್ವಯಮ್" ಎಂಬ ಸೂಕ್ತಿ ಯಂತೆ ಈ ಅವತಾರವು ಪೂರ್ಣಾವತಾರವೆನಿಸಿದೆ. "ಭಕ್ತಾನಾಂ ಪಾಪಾನಿ ಕರ್ಷ ಯತಿ ಇತಿ ಕೃಷ್ಣಃ" ಎಂಬ ವಿವರಣೆಯಂತೆ ಕಲಿಯುಗದ ಜನರ ಪಾಪಗಳನ್ನು - ಆತ ನನ್ನು ಭಜಿಸಿದವರಿಗೆ ಕಳೆದು-ಮುಕ್ತಿಯನ್ನು ನೀಡುತ್ತಿರುವ ಭಗವಂತನೇ ಕೃಷ್ಣ ಪರಮಾತ್ಮನೆನಿಸಿರುತ್ತಾನೆ. ಈ ಅವತಾರಕಾಲಕ್ಕೆ ಆ ಪರಮಾತ್ಮನು ಹುಟ್ಟಿದಾಗಿನಿಂದ ತನ್ನ ಅವತಾರಲೀಲೆಗಳು ಪೂರೈಸುವವರೆಗೂ ಒಮ್ಮೆಯೂ ಅತ್ತದ್ದಿಲ್ಲ- ಎಂದರೆ ದುಃಖಸಂಪರ್ಕವೇ ಇಲ್ಲದ ಆನಂದಸ್ವರೂಪನಾಗಿ ವಿಹರಿಸಿದ್ದಾನೆ. ಇಂಥ ಭಗವಂತನ ದಿವ್ಯಮಹಿಮೆಯನ್ನು ಪೂರ್ಣವಾಗಿ ಬಲ್ಲ ಭಕ್ತಾಗ್ರೇಸರರಾದ ಭೀಷ್ಮಾಚಾರ್ಯರು- ತಾವು ಶರಶಯ್ಯೆಯಲ್ಲಿ ಮಲಗಿರುವಾಗಲೇ ಆ ಭಗವಂತನು ಎದುರಿಗೇ ಕುಳಿತಿರು -ವಾಗಲೇ ಈ ದಿವ್ಯಸಹಸ್ರನಾಮಸ್ತೋತ್ರವನ್ನು ಧರ್ಮರಾಜನಿಗೆ ಉಪದೇಶ

ಮಾಡಿರುತ್ತಾರೆ. ಆದ್ದರಿಂದ ಈ ಗ್ರಂಥದಲ್ಲಿ ಆ ಪರಮಪುರುಷನ ದಿವ್ಯವಾದ ಅದ್ಭುತ ಲೀಲೆಗಳನ್ನೂ ಗುಣಕರ್ಮಗಳನ್ನೂ ಕೊಂಡಾಡುವ, ಶ್ರೀಭೀಷ್ಮಾಚಾರ್ಯರು ಧರ್ಮ ರಾಜನಿಗೆ ಉಪದೇಶಿಸಿರುವ-ಸಹಸ್ರನಾಮಗಳ ಭಾವಾರ್ಥವನ್ನು ಯಥಾಮತಿಯಾಗಿ ವಿವರಿಸಲಾಗುವದು.

ಈ ಸ್ತೋತ್ರದಲ್ಲಿ ಶ್ರೀಕೃಷ್ಣನೆಂಬುದು ವಾಸುದೇವಭಗವಂತನನ್ನೇ ತಾತ್ಪರ್ಯ ದಿಂದ ಹೇಳುತ್ತದೆ. ಆದ್ದರಿಂದ ವಿಷ್ಣು - ಎಂಬುದು ತ್ರಿಮೂರ್ತಿಗಳಲ್ಲಿ ಒಬ್ಬನಾದವನ ಹೆಸರಲ್ಲ. "**ವಿಶ್ವಂ ವಿಷ್ಣುಃ**" ಎಂದೇ ನಾಮಾವಳಿಯು ಪ್ರಾರಂಭವಾಗಿರುವುದರಿಂದ ಅಧ್ಯಾತ್ಮದೃಷ್ಟಿಯಿಂದ ಎಲ್ಲಾ ನಾಮಗಳ ಅರ್ಥವನ್ನೂ ಭಗವಂತನಲ್ಲಿಯೇ ಸಮನ್ವಯ ಗೊಳಿಸಬಹುದಾಗಿದೆ. ಆಗ "**ವಿಷ್ಣು**" ಎಂದರೆ ಸರ್ವಗತನಾದ ಪರಮಾತ್ಮನು ಎಂದರ್ಥ. ಈ ಅಭಿಪ್ರಾಯವನ್ನೇ ಸಮರ್ಥಿಸುವ ಶ್ಲೋಕಗಳು ಸಹಸ್ರನಾಮದ ಪೀಠಿಕೆಯ ಆರಂಭ ದಲ್ಲಿಯೇ ಇವೆ. ಇವುಗಳಲ್ಲಿ ಕೆಲವನ್ನು ವಿಚಾರಮಾಡೋಣ.

(1) **ಜಗತ್ಪ್ರಭು, ದೇವ-ದೇವ, ಅನಂತ, ಪುರುಷೋತ್ತಮ** - ಈ ನಾಮ ಗಳು ಯಾವ ದೇವತೆಯ ಹೆಸರನ್ನೂ ಸೂಚಿಸುವುದಿಲ್ಲ. ಬ್ರಹ್ಮಾಂಡಕ್ಕೆಲ್ಲ ಒಡೆಯನಾದ ದೇವನು ಒಬ್ಬನೇ ಆಗಿದ್ದಾನೆ. "ಒಬ್ಬನಲ್ಲದೆ ಜಗಕೆ ಇಬ್ಬರುಂಟೆ" ಎಂದು ಸರ್ವಜ್ಞನೂ ಹೇಳಿದ್ದಾನೆ. ಹೀಗೆಯೇ ಉಳಿದ ನಾಮಗಳೂ ಯಾವ ಗೊತ್ತಾದ ನಾಮರೂಪಗಳುಳ್ಳ ದೇವರನ್ನೂ ಪ್ರತಿನಿಧಿಸುವುದಿಲ್ಲ. ಆದರೆ ವ್ಯವಹಾರದೃಷ್ಟಿಯಿಂದ ಭಗವಂತನು ನಾನಾರೂಪದಿಂದ ತೋರಿಕೊಂಡಿರಬಹುದು. ಉದಾಹರಣೆಗೆ : ಒಂದು ಕುಟುಂಬದ ಯಜಮಾನನನ್ನು ನೋಡೋಣ. ಅವನು ತನ್ನ ತಂದೆಯ ದೃಷ್ಟಿಯಿಂದ ಮಗನು. ತನ್ನ ಮಗನ ದೃಷ್ಟಿಯಿಂದ ತಂದೆಯು ಮಾವನ ದೃಷ್ಟಿಯಿಂದ ಅಳಿಯನು. ಹಾಗೆಯೇ ಅಳಿಯನ ದೃಷ್ಟಿಯಿಂದ ಮಾವನು. ಮೊಮ್ಮಗನ ದೃಷ್ಟಿಯಿಂದ ತಾತನು. ಹೀಗೆ ಸಾಪೇಕ್ಷವಾಗಿ ಭಗವಂತನು ತನ್ನ ಗುಣ-ಕರ್ಮ-ಲೀಲೆಗಳಿಂದ ನಾನಾರೂಪಗಳಿಂದಲೂ ನಾನಾ ನಾಮಗಳಿಂದಲೂ ವ್ಯವಹರಿಸಲ್ಪಡುವನು. ಇನ್ನೂ ಆಳವಾಗಿ ವಿಚಾರ ಮಾಡಿದರೆ ಅವನು ಸ್ತ್ರೀಯೂ ಹೌದು; ಪುರುಷನೂ ಹೌದು. ಆದರೂ ಅದೇನೂ ಅವನ ನಿಜಸ್ವರೂಪವಲ್ಲ. ಇನ್ನು ಆ ಭಗವಂತನನ್ನು ಇಂಥವನೇ ಎಂದು ಗುರುತಿಸಲಾದೀತೆ? ಆದ್ದರಿಂದ ಜಗತ್ತಿನ ಎಲ್ಲಾ ನಾಮರೂಪಗಳೂ ಆತನದೇ ಆಗಿದ್ದರೂ ಅವನನ್ನು ಕಡೆಗೆ ಶ್ರುತಿಗಳಲ್ಲಿ "ನೇತಿ-ನೇತಿ" ಎಂದೇ ತಿಳಿಸಲಾಗಿದೆ. ಹೀಗಿದ್ದರೂ ಭಕ್ತರಕೋರಿಕೆಯಂತೆ ಆಯಾ ರೂಪಗಳನ್ನು ಸ್ವೀಕರಿಸುತ್ತಾನೆ. ಶ್ರೀಶಂಕರಾ -ಚಾರ್ಯರು ತಮ್ಮ ಭಾಷ್ಯಗ್ರಂಥಗಳಲ್ಲಿ ಒಂದು ಕಡೆ ಹೀಗೆಂದಿದ್ದಾರೆ: "ಸ್ಯಾತ್ ಪರಮೇಶ್ವರ ಸ್ಯಾಪಿ ಇಚ್ಛಾ ವಶಾತ್ ಮಾಯಾಮಯಂ ರೂಪಂ ಸಾಧಕಾನು

-ಗ್ರಹಾರ್ಥಮ್''(ಭಗವಂತನಿಗೆ ಅವನ ಇಚ್ಛೆಯಂತೆ ಯಾವ ರೂಪವನ್ನಾದರೂ ಧರಿಸಲು ಸ್ವಾತಂತ್ರ್ಯವಿದೆ. ಆದರೆ ಆ ರೂಪಗಳಾವುವೂ ಸತ್ಯವಲ್ಲ. ಅವು ಆತನ ಮಹಿಮೆಯಾಗಿರುತ್ತವೆ.) ಈ ಅಭಿಪ್ರಾಯದಂತೆ ಭಗವಂತನ ನಾಮ - ರೂಪಗಳನ್ನೆಲ್ಲ ಅವನ ಮಹಿಮೆ - ಎಂದು ತಿಳಿಯಬೇಕು.

(2) ಈಗ ಭೀಷ್ಮಾಚಾರ್ಯರು ಮುಂದುವರೆದು ಧರ್ಮರಾಜನಿಗೆ ಹೇಳುವ ದೇನೆಂದರೆ : ''ಎಲೈ ಧರ್ಮರಾಜನೆ, ಆ ಭಗವಂತನನ್ನೇ ಉದ್ದೇಶಿಸಿ ಯಾವನು ಪೂಜೆ, ಧ್ಯಾನ, ನಮಸ್ಕಾರ, ಯಜ್ಞಾದಿಗಳನ್ನು ಮಾಡುವದು, ಹಾಗೂ ಸ್ತೋತ್ರ ಮಾಡುವದು - ಇವುಗಳನ್ನು ಆಚರಿಸುವನೋ ಆ ಸಾಧಕನು ಎಲ್ಲಾ ದುಃಖಗಳನ್ನೂ ದಾಟಿದವನಾಗುತ್ತಾನೆ. ಧರ್ಮಗಳಲ್ಲೆಲ್ಲ ಇದು ಪರಮಧರ್ಮವೆಂದು ನನ್ನ ಅಭಿಪ್ರಾಯವಾಗಿದೆ. ಇನ್ನು ಆ ಭಗವಂತನ ಮಹಿಮೆಯನ್ನು ಕೇಳುವವನಾಗು. ಆತನು ತೇಜಸ್ಸುಗಳಲ್ಲೆಲ್ಲ ಪರಮನು, ಮಿಗಿಲಾದವನು, ತಪಸ್ಸುಗಳಲ್ಲೆಲ್ಲ ಹೆಚ್ಚಿನವನು. ಹಾಗೆಯೇ ದೊಡ್ಡದರಲ್ಲೆಲ್ಲ ದೊಡ್ಡವನೂ ಅತ್ಯಂತ ಹೆಚ್ಚಿನ ಶಾಶ್ವತವಾದ ಸ್ಥಾನನೂ ಆಗಿರುವನು. ಇನ್ನೂ ಆತನು ಪವಿತ್ರವಾದವುಗಳಲ್ಲಿ ಪರಮಪವಿತ್ರನೂ ಮಂಗಳ(ವಸ್ತು)ಗಳಲ್ಲೆಲ್ಲ ಪರಮಮಂಗಳನೂ ದೇವತೆಗಳಿಗೆಲ್ಲ ಹೆಚ್ಚಿನ ದೇವನೂ ಸೃಷ್ಟಿಯಲ್ಲಿರುವ ಸ್ಥಾವರಜಂಗಮವಸ್ತುಗಳಿಗೆಲ್ಲ ಅವ್ಯಯನಾದ ತಂದೆ (ಸೃಷ್ಟಿಕರ್ತ) ಯೂ ಆಗಿರುವನು. ಯಾವ ಆ ಮಹಾವಿಷ್ಣುವಿನಿಂದ ಸೃಷ್ಟಿಯ ಆರಂಭದಲ್ಲಿ ಎಲ್ಲಾ ಚೇತನಾಚೇತನವಸ್ತುಗಳೂ ಜೀವರುಗಳೂ ಹೊರಬಂದಿದ್ದು ಲಯಕಾಲಕ್ಕೆ ಆತನಲ್ಲಿ ಯೇ ಒಂದಾಗಿಬಿಡುವರೋ ಅಂಥ ಜಗನ್ನಾಯಕನಾದ ಲೋಕಮುಖ್ಯನಾದ ಭಗವಂತನಾದ ಶ್ರೀವಿಷ್ಣುವಿನ ದಿವ್ಯಸಹಸ್ರನಾಮಗಳನ್ನು ಹೇಳುವೆನು, ಆಲೈಸಿ ಕೇಳುವವನಾಗು. ಇದು ಪಾಪ-ಭಯಗಳನ್ನು ನಾಶಗೊಳಿಸುವದು. ಎಲೈ ಧರ್ಮರಾಯನೆ, ಈಗ ನಾನು ಹೇಳಲಿರುವ ಭಗವಂತನ ನಾಮಗಳೆಲ್ಲವೂ ಆ ಮಹಾತ್ಮನ ಗುಣಸಂಬಂಧವಾದವುಗಳು; ಎಂದರೆ - ಆ ಭಗವಂತನ ಕಲ್ಯಾಣಗುಣ ಗಳೆಂದು ಋಷಿಗಳು ಗಾನ ಮಾಡಿರುವಂಥವು. ಮತ್ತು ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿದ್ದು ಭಕ್ತರುಗಳು, ಸಾಧಕರು, ಮಹಾತ್ಮರುಗಳು ಹಾಡಿಹೊಗಳಿರುವಂಥವುಗಳು. ಇವುಗಳನ್ನು ಭಗವಾನ್ ವೇದವ್ಯಾಸರು ಪ್ರಕಟಗೊಳಿಸಿರುತ್ತಾರೆ. ಇಂಥ ದಿವ್ಯಸಹಸ್ರನಾಮಗಳನ್ನು ಹೇಳುವೆನು'' ಎಂದು ಶರಪಂಜರದ ಮೇಲೆ ಯುದ್ಧಭೂಮಿಯಲ್ಲಿಯೇ ಮಲಗಿದ್ದ ಶ್ರೀಭೀಷ್ಮಾಚಾರ್ಯರು ಶ್ರೀಕೃಷ್ಣಭಗವಂತನ ಸಮ್ಮುಖದಲ್ಲಿಯೇ ಧರ್ಮರಾಜನಿಗೆ ಹೇಳಲು ಆರಂಭಿಸಿದರು.

Z Z Z

# ಪ್ರಥಮಶತಕ

# ಶ್ರೀವಿಷ್ಣುಸಹಸ್ರನಾಮಸ್ತೋತ್ರ

**ಓಮ್॥ ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್‌ಪ್ರಭುಃ ।**
**ಭೂತಕೃದ್ ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ ॥1॥**

ಈಗ ಭಗವಂತನ ಸಹಸ್ರನಾಮಗಳ ಅರ್ಥವನ್ನು ಅನುಸಂಧಾನಮಾಡೋಣ. ಈ ಶ್ಲೋಕದಲ್ಲಿ ಒಂಭತ್ತು ನಾಮಗಳಿವೆ. (1) ಮೊದಲನೆಯದು "ವಿಶ್ವಮ್" ಎಂಬುದಾಗಿದೆ. ವಿಶ್ವ ಎಂದರೆ ಇಡಿಯಜಗತ್ತು-ಎಂದರ್ಥ. ಭಗವಂತನನ್ನು ಗುರುತಿಸ ಬೇಕಾದರೆ ಅವನ ಸೃಷ್ಟಿಯುನ್ನು ಅನುಸಂಧಾನಮಾಡಬೇಕು. ಆಗ ಅವನ ಮಹಿಮೆ ಯು ಅರಿವಾಗುತ್ತದೆ. ಸೃಷ್ಟಿಗೆ ಒಳಪಟ್ಟಿರುವ ಹದಿನಾಲ್ಕು ಲೋಕಗಳೂ ಅವು ಗಳಲ್ಲಿರುವ ನರ-ಪಕ್ಷಿ-ಗೋವು ಮುಂತಾದ ನಾಲ್ಕುಕಾಲಿನ ಪ್ರಾಣಿಗಳು- ಸರ್ಪಗಳು - ಇವುಗಳೂ, ಇನ್ನು ಮನುಷ್ಯನ ವ್ಯವಹಾರಕ್ಕೆ ಎಟುಕದಿರುವ ಗಂಧರ್ವರು, ದೈತ್ಯರು-ದೇವತೆಗಳು ಮುಂತಾಗಿರುವ ಸಮಸ್ತಜೀವರುಗಳೂ ಆ ಭಗವಂತನಲ್ಲಿಯೇ ಅಡಕವಾಗಿದ್ದು ಅವನಲ್ಲಿಯೇ ಹುಟ್ಟಿ ಬೆಳೆದು ಕಡೆಗೆ ಅವನಲ್ಲಿಯೇ ಸೇರಿ ಹೋಗುವರು. ಆದ್ದರಿಂದ ಅವನು 'ವಿಶ್ವಮ್' (ಎಲ್ಲವೂ) ಎನಿಸಿರುತ್ತಾನೆ. ಭಾವುಕರು ಈ ಅನುಸಂಧಾನದಿಂದ ಭಗವಂತನ ವಿರಾಟ್‌ರೂಪವನ್ನೇ ತಮ್ಮೊಳಗೇ ಕಂಡು ಕೃತಾರ್ಥ ರಾಗಬಹುದಾಗಿದೆ. (2) ಎರಡನೆಯ ನಾಮವು 'ವಿಷ್ಣುಃ' ಎಂದಿರುತ್ತದೆ. ಇದು ಭಗವಂತನ ಸರ್ವವ್ಯಾಪಕತ್ವವನ್ನು ತಿಳಿಸುತ್ತದೆ. ಹೇಗೆ ಆಕಾಶವು ಎಲ್ಲಾ ಪ್ರಪಂಚ ವನ್ನೂ ವ್ಯಾಪಿಸಿದೆಯೋ ಹಾಗೆ ಭಗವಂತನೂ ತನ್ನ ಜ್ಞಾನ-ಶಕ್ತಿ-ಬಲ-ವೀರ್ಯ-ತೇಜಸ್ಸುಗಳಿಂದ ಎಲ್ಲಾ ನಾಮರೂಪಗಳನ್ನೂ ವ್ಯಾಪಿಸಿ ವಿಷ್ಣುವೆನಿಸಿರುತ್ತಾನೆ. ನಾವು ವಾಸಿಸುವ ಸ್ಥಳವೆಲ್ಲವೂ ಭೂಮಿಯಿಂದ ವ್ಯಾಪಿಸಲ್ಪಟ್ಟಂತೆ, ಹಾಗೂ ದೇಶ, ರಾಷ್ಟ್ರ-ಎಂಬೀ ರೀತಿಯಿಂದ ವ್ಯವಹರಿಸುವದೆಲ್ಲವೂ ಭೂಮಿಯೇ ಆಗಿರುವಂತೆ- ವಿಷ್ಣುವೇ ಸಮಸ್ತಬ್ರಹ್ಮಾಂಡವೂ ಆಗಿರುತ್ತಾನೆ. ಇನ್ನೂ ಒಳಹೊಕ್ಕು ನೋಡಿದರೆ ನಮ್ಮೊಳಗಿನ ಹೃದಯ, ಇಂದ್ರಿಯಗಳು, ಮನೋಬುದ್ಧಿಗಳು - ಎಲ್ಲವನ್ನೂ ಆ ವಿಷ್ಣುವೇ ವ್ಯಾಪಿಸಿ ಕೊಂಡಿರುತ್ತಾನೆ. ಅವನನ್ನು ಬಿಟ್ಟು ಎರಡನೆಯದೆಂಬುದೇ ಇರುವದಿಲ್ಲ. ಈ ವ್ಯಾಪ್ತಿ ಯು ಬಹಿರಂಗವಾಗಿಯೂ ಸಿದ್ಧವಾಗಿದೆ. ಹೇಗೆಂದರೆ ಚೇತನಾಚೇತನಪ್ರಪಂಚವೆಲ್ಲವೂ ಆ ಮಹಾತ್ಮನಿಂದಲೇ ತುಂಬಿಹೋಗಿದೆ. ಪಂಚಮಹಾಭೂತಗಳಲ್ಲಿ ಒಂದಾದ ಆಕಾಶದಲ್ಲಿ ಎಲ್ಲಾ ಸ್ಥಾವರಜಂಗಮಗಳೂ ಇರುವಂತೆ ಅಂಥ ಆಕಾಶಕ್ಕೂ ಆಸರೆಯಾಗಿ ಆ ವಿಷ್ಣುವಿರುತ್ತಾನೆ. ಆದ್ದರಿಂದ ಸರ್ವವ್ಯಾಪಕನೆಂಬರ್ಥದಲ್ಲಿ ಆ ಭಗವಂತನನ್ನು ವಿಷ್ಣು ಎಂದು ಹೆಸರಿಸಲಾಗಿದೆ.

(3) ಈಗ **ವಷಟ್‌ಕಾರಃ**- ಎಂಬ ನಾಮವನ್ನು ವಿಚಾರಮಾಡೋಣ. ಯಾವ ವಷಟ್‌ಕಾರಾದಿಮಂತ್ರದಿಂದ ದೇವತೆಗಳನ್ನು ತೃಪ್ತಿಗೊಳಿಸಲಾಗುವದೋ ಆ ಮಂತ್ರ ರೂಪನಾಗಿರುವವನು ವಿಷ್ಣುವೇ - ಎಂದಭಿಪ್ರಾಯ. ಯಜ್ಞಾದಿಕರ್ಮಗಳಲ್ಲಿ ವಿಷ್ಣುವೇ ಪ್ರಧಾನದೇವತೆಯು. ಉಳಿದವರು ವಿಷ್ಣುವಿನ ಅಂಶರಾಗಿರುತ್ತಾರೆ. ಆದ್ದರಿಂದ ವಿಷ್ಣುವನ್ನು ತೃಪ್ತಿಗೊಳಿಸಿದರೆ ಎಲ್ಲಾ ದೇವತೆಗಳನ್ನೂ ತೃಪ್ತಿಗೊಳಿಸಿದಂತೆ - ಎಂದು ತಿಳಿಯಬೇಕು. ಪ್ರಕೃತ ಯಜ್ಞರೂಪನಾದ ವಿಷ್ಣುವು ಹದಿನೇಳು ಅಕ್ಷರಗಳ ಮಂತ್ರ ರೂಪನಾಗಿರುತ್ತಾನೆ. ಆ ಮಂತ್ರವು ಹೀಗಿದೆ : "ಆಶ್ರಾವಯ - ಅಸ್ತು ಶ್ರೌಷಟ್ -ಯಜ - ಯೇ ಯಜಾಮಹೇ - ವೌಷಟ್"[1] (4+4+2+5+2=17) ಈ ಮಂತ್ರೋಚ್ಚಾರಣೆಯಿಂದ ಶ್ರೀಮಹಾವಿಷ್ಣುವು ತೃಪ್ತನಾಗಿ ಪ್ರಸನ್ನನಾಗುತ್ತಾನೆ - ಎಂದು ಪುರಾಣ ವಚನವಿದೆ. ಇನ್ನು ಮಹಾವಿಷ್ಣುವು ತೃಪ್ತನಾದರೆ ಉಳಿದ ದೇವತೆಗಳೆಲ್ಲ ತೃಪ್ತ ರಾದಂತೆಯೇ-ಎಂದು ತಿಳಿಯಬೇಕು. ಹೇಗೆ ಮರದ ಬುಡದ ಬೇರಿಗೆ ನೀರು ಹಾಕಿದರೆ ಕೊಂಬೆರೆಂಬೆಗಳಿಗೆಲ್ಲ ವ್ಯಾಪಿಸಿ ಅವು ಚಿಗುರಿ ಹೂ-ಹಣ್ಣುಗಳನ್ನು ಕೊಡು ವವೋ ಹಾಗೆ ಶ್ರೀಮಹಾವಿಷ್ಣುವು ಸಂತುಷ್ಟನಾದರೆ ದೇವತೆಗಳೆಲ್ಲರೂ ತೃಪ್ತರಾಗಿ ಸಾಧಕನಿಗೆ ಇಷ್ಟಾರ್ಥಗಳನ್ನು ಕೊಡುವರು- ಎಂದಭಿಪ್ರಾಯ.

(4) ಈಗ **ಭೂತಭವ್ಯಭವತ್‌ಪ್ರಭುಃ** - ಎಂಬ ನಾಮವನ್ನು ನೋಡೋಣ. ಕಾಲವು ಜಗತ್ತನ್ನೆಲ್ಲ ವ್ಯಾಪಿಸಿದೆ. ಅದನ್ನು ಮೂರು ಭಾಗವಾಗಿ ವಿಂಗಡಿಸಿದ್ದಾರೆ. ಹಿಂದೆ ಕಳೆದುಹೋದದ್ದು-ಈಗ ನಡೆಯುತ್ತಿರುವದು-ಮುಂದೆ ಬರಬಹುದಾದದ್ದು-ಹೀಗೆ ಕಾಲವನ್ನು ಗಣನೆಮಾಡಲಾಗುತ್ತದೆ. ಸೃಷ್ಟಿಯಲ್ಲಿರುವ ದೇವತೆಗಳಿಂದ ಆರಂಭಿಸಿ ಮನುಷ್ಯರೇ ಮುಂತಾಗಿ ಎಲ್ಲಾ ಜೀವರೂ ಕಾಲಕ್ಕೆ ಅಧೀನರೇ ಆಗಿದ್ದಾರೆ. ಆದರೆ ಶ್ರೀಮಹಾವಿಷ್ಣುವು ಕಾಲನಿಗೂ ಕಾಲನಾಗಿರುತ್ತಾನೆ. ಅಥವಾ ಕಾಲಾತೀತನಾಗಿ ಅದಕ್ಕೆ ಪ್ರಭುವಾಗಿದ್ದಾನೆ. ಆ ಮಹಾಮಹಿಮನು ಹಿಂದೆಯೂ ಇದ್ದನು. ಈಗಲೂ ಇದ್ದಾನೆ. ಮುಂದೆಯೂ ಇರುತ್ತಾನೆ. ಆದ್ದರಿಂದ ಅವನು ನಿತ್ಯವರ್ತಮಾನಸ್ವರೂಪನು. ಆದ್ದರಿಂದಲೇ ಕಾಲಕ್ಕೂ ಪ್ರಭುವೆನಿಸಿರುತ್ತಾನೆ. ಯಾವ ಕಾಲದಲ್ಲಿಯೂ ಯಾವನೊಬ್ಬನೂ ದೇವರಿಲ್ಲ- ಎಂದು ಹೇಳಲು ಬರುವದಿಲ್ಲ. ಏಕೆಂದರೆ ಹಾಗೆಂದು ಹೇಳುವವನ ಆತ್ಮನೇ ಅವನಾಗಿದ್ದಾನೆ. ಈ ರೀತಿಯಾಗಿ ಆ ಭಗವಂತನು ಕಾಲಕ್ಕೂ ಪ್ರಭುವಾಗಿ ಕಾಲದ ಚೌಕಟ್ಟನ್ನು ಮೀರಿದ್ದಾನೆ. ವೇದ-ಉಪನಿಷತ್ತುಗಳಲ್ಲಿ ಆ ಭಗವಂತನನ್ನು ಪ್ರಸ್ತಾಪಮಾಡುವಾಗ ವರ್ತಮಾನಕಾಲಕ್ರಿಯಾಪದವನ್ನೇ ಬಳಸಲಾಗಿದೆ. "ತಮೇವಂ ವಿದ್ವಾನಮೃತ ಇಹ ಭವತಿ", "ಬ್ರಹ್ಮವಿದಾಪ್ನೋತಿ ಪರಮ್" ಮುಂತಾದ ಕಡೆಗಳಲ್ಲಿ ಭವತಿ, ಆಪ್ನೋತಿ - ಎಂಬಿವುಗಳನ್ನು ನೋಡಿರಿ.

---

1. ಅರ್ಧಾಕ್ಷರಗಳನ್ನು ಎಣಿಕೆಗೆ ತೆಗೆದುಕೊಂಡಿರುವುದಿಲ್ಲ.

ಈಗ **(5)ಭೂತಕೃತ್ (6)ಭೂತಭೃತ್ (7)ಭಾವಃ (8)ಭೂತಾತ್ಮಾ (9) ಭೂತಭಾವನಃ** - ಎಂಬ ನಾಮಗಳನ್ನು ವಿಚಾರಮಾಡೋಣ. ಜಗತ್ತಿನಲ್ಲಿರುವ ಚೇತನಾಚೇತನಗಳನ್ನೆಲ್ಲ ಭೂತ - ಎಂಬ ಶಬ್ದದಿಂದ ಗ್ರಹಿಸಬೇಕು. ಆಗ ಅವುಗಳನ್ನೆಲ್ಲ ಸೃಷ್ಟಿಮಾಡುವವನು **ಭೂತಕೃತ್** ಎನಿಸುವನು. ಸೃಷ್ಟಿವೈಚಿತ್ರ್ಯವು ಎಂಥವರನ್ನೂ ಬೆರಗುಗೊಳಿಸುತ್ತದೆ. ಉದಾಹರಣೆಗೆ ಗಿಡವು ಹಸುರಾಗಿರುತ್ತದೆ. ಹೂವು ಬಿಳುಪಾಗಿರುತ್ತದೆ. ಹಾಗೆಯೇ ಹಸು ಕಪ್ಪಗಿರುತ್ತದೆ, ಹಾಲು ಬೆಳ್ಳಗಿರುತ್ತದೆ. ಹೀಗೆ ಸೃಷ್ಟಿವೈಚಿತ್ರ್ಯವನ್ನೆಲ್ಲ ನೋಡಿದಾಗ ಸೃಷ್ಟಿಕರ್ತನು ಎಂಥ ಸಮರ್ಥನಿರಬಹುದು? ಎನಿಸುತ್ತದೆ. ಹಾಗೂ ಎಂಥ ಜಾಣನೂ ಆಗಿರಬಹುದು - ಎಂದೂ ಆಲೋಚಿಸುವಂತಾಗುವದು. ಉದಾಹರಣೆಗೆ ದಾಳಿಂಬೆಹಣ್ಣಿನಲ್ಲಿ ಬೀಜಗಳನ್ನು ಎಂಥ ಜಾಣತನದಿಂದ ಜೋಡಿಸಿದ್ದಾನೆ- ಎಂಬುದನ್ನು ಗಮನಿಸಿರಿ. ನಮಗೆ ಕಾಳು ಬಿಡಿಸಲು ಬರಬಹುದು. ಆದರೆ ಮತ್ತೆ ಜೋಡಿಸುವದು ಆಗಲಾರದು. ಇಂಥ ಸೃಷ್ಟಿವೈಚಿತ್ರ್ಯವನ್ನು ಹರಡಿರುವ ಭಗವಂತನು ಒಬ್ಬನೇ **ಭೂತಕೃತ್** ಎನಿಸುವನು. ಹಾಗೆಯೇ ಆ ಮಹಾತ್ಮನು **ಭೂತಭೃತ್** ಸಹ ಆಗಿದ್ದಾನೆ. ಭೃತ್ - ಎಂದರೆ ಧರಿಸುವವನು ಎಂದರ್ಥ. ಸೃಷ್ಟಿಯಲ್ಲಿರುವ ಪರ್ವತಗಳು, ನದಿಗಳು, ಪ್ರಾಣಿಗಳು, ಮಾನವರು, ನೀರಿನಲ್ಲೇ ಇರುವ ಜೀವಿಗಳು - ಇತ್ಯಾದಿ ಸರ್ವವನ್ನೂ ಧರಿಸಿರುವ ಆ ಭಗವಂತನು 'ಭೂತಭೃತ್' ಆಗಿದ್ದಾನಲ್ಲವೆ? ಹಾಗೆಯೇ ಭಾವಃ ಎಂದರೆ ಇರುವಿಕೆ ಎಂದರ್ಥ. ದೇವರು ಇದ್ದಾನೆ-ಎಂಬುದು ಕೇವಲ ನಂಬಿಕೆಯಲ್ಲ. ಅವನು ಇರುವದರಿಂದಲೇ ನಾವು ಇದ್ದೇವೆ. ಇದೇ '**ಭಾವ**' (ಇರುವಿಕೆ)ವು. ಇನ್ನು ಭೂತಾತ್ಮನೆಂದರೆ ಅಂತರ್ಯಾಮಿ - ಎಂದರ್ಥ. ಸರ್ವಪ್ರಾಣಿಗಳ ಹೃದಯದಲ್ಲಿಯೂ ಇದ್ದುಕೊಂಡು ತಾನು ಕೇವಲ ಸಾಕ್ಷಿಮಾತ್ರನಾಗಿ ಜಗದ್‌ವ್ಯಾಪಾರವನ್ನೆಲ್ಲ ನಿರ್ವಹಿಸುವ ಆ ದೇವನು **ಭೂತಾತ್ಮ** ನೇ ಸರಿ. ಹಾಗೆಯೇ ಭೂತಭಾವನನೂ ಆಗಿದ್ದಾನೆ. ಭಾವನನೆಂದರೆ ವರ್ಧಿಸುವವನು-ಬೆಳೆಸುವವನು - ಎಂದೂ ಅರ್ಥಮಾಡಬಹುದು. ಇದು ಭಗವಂತನ ಶಕ್ತಿಯಾಗಿರುತ್ತದೆ. ಉದಾಹರಣೆಗೆ ಒಂದು ತೆಂಗಿನಕಾಯಿಯನ್ನು ನೆಟ್ಟರೆ ಅದು ತೆಂಗಿನಮರವಾಗಿ ಬೆಳೆದು ಸಾವಿರಾರು ಕಾಯಿಗಳನ್ನು ಕೊಡುತ್ತದೆ. ಹಾಗೆಯೇ ಒಂದು ಭತ್ತದ ಕಾಳು ನೂರಾಗಿ ಬೆಳೆಯುತ್ತದೆ. ಹೀಗೆ ವೃದ್ಧಿಯಾಗುವ ಕಾರ್ಯವು ಆ ಭಗವಂತನ ಕೃತಿಯೇ ಅಲ್ಲವೇ? ಎಲ್ಲಾ ಗಿಡಮರಗಳೂ ಕೊಡುವ ಪೈರುಗಳೂ ವೃದ್ಧಿಹೊಂದಿ ಫಲಿಸಬೇಕಾದರೆ ಅವು ಭಗವಂತನ ಶಕ್ತಿ-ಕೃಪೆಗಳಿಂದಲೇ ಅಲ್ಲವೆ? ಆದ್ದರಿಂದ ನಾವು **ಭೂತಭಾವನ**ನಾದ ಪರಮಾತ್ಮನನ್ನು ಎಲ್ಲಾ ಸೃಷ್ಟಿಕರ್ಮದಿಂದಲೂ ಗುರುತಿಸಿ ಕೃತಾರ್ಥರಾಗಬಹುದಾಗಿದೆ.

**ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।**
**ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ॥2॥**

**(10) ಪೂತಾತ್ಮಾ** - ಪೂತಾತ್ಮನೆಂದರೆ ಪವಿತ್ರವಾದ ಸ್ವರೂಪನು ಎಂದರ್ಥ. ಆ ಭಗವಂತನನ್ನು ನೆನೆದರೆ ಅಪವಿತ್ರನೂ ಪವಿತ್ರನಾಗುವನು. ಸಂಧ್ಯಾವಂದನೆಯ ಆರಂಭದಲ್ಲಿ ಹೇಳುವ 'ಅಪವಿತ್ರಃ ಪವಿತ್ರೋ ವಾ' ಎಂಬ ಶ್ಲೋಕವನ್ನು ನೀವು ಕೇಳಿರಬಹುದು. ಮಾನವನು ಸ್ನಾನಮಾಡದೆ ಅಪವಿತ್ರನಾಗಿರಲಿ, ಅಥವಾ ಸ್ನಾನಮಾಡಿ ಪವಿತ್ರನೇ ಆಗಿರಲಿ - ಅದು ಪೂರ್ಣಪವಿತ್ರತೆಯಲ್ಲ. ಏಕೆಂದರೆ ಈ ಪವಿತ್ರತೆಯು ದೇಹಕ್ಕೆ ಮಾತ್ರ ಅನ್ವಯಿಸುತ್ತದೆ. ಆದರೆ ಒಳಗಿನ ಆತ್ಮ(ಇಂದ್ರಿಯ-ಮನಆದಿಗಳೂ) ಪವಿತ್ರವಾಗಬೇಕಾದರೆ ಆ ನಿತ್ಯಶುದ್ಧ-ಭಗವಂತನ ಸ್ಮರಣೆಯೇ ಬೇಕು. ಆಗಲೇ ನಿಜವಾದ ಪಾವಿತ್ರ್ಯವು ದೊರಕುವದು. ಇದು ಕೂಡ ಭಗವಂತನ ದಿವ್ಯನಾಮಗಳಲ್ಲಿ ಒಂದಾಗಿದ್ದು ಈ ಗುಣಸಂಬಂಧದಿಂದ ಅವನು ಪೂತಾತ್ಮನೆನಿಸುತ್ತಾನೆ. **(11)** ಈಗ **ಪರಮಾತ್ಮನೆಂಬ** ನಾಮವನ್ನು ವಿಚಾರಮಾಡೋಣ. ಮಾನವನ ನಿಜಸ್ವರೂಪವೇ ಪರಮಾತ್ಮನು. ಆ ಪರಮಾತ್ಮನೇ ಜೀವರುಗಳ ಆತ್ಮನು. ಆದರೆ ವ್ಯವಹಾರಕಾಲಕ್ಕೆ ನಾವು ದೇಹೇಂದ್ರಿಯಾದ್ಯುಪಾಧಿಗಳನ್ನೆಲ್ಲ ಬಳಸುತ್ತಾ ಅವುಗಳನ್ನೇ ತಾನು (ಆತ್ಮ) ಎಂದುಕೊಂಡಿದ್ದೇವೆ. ಆದರೆ ಇವು ಯಾವವೂ ನಾವಲ್ಲ. ಆದ್ದರಿಂದ ನಮ್ಮೊಳಗೇ ಯಾವಾಗಲೂ ಇದ್ದುಕೊಂಡು ನಮ್ಮ ಶರೀರೇಂದ್ರಿಯ ಮನೋಬುದ್ಧಿಗಳನ್ನು ಪ್ರೇರಿಸುತ್ತಾ ನಮ್ಮ ಎಚ್ಚರ-ಕನಸು-ತನಿನಿದ್ರೆಗಳಿಗೂ ಸಾಕ್ಷಿಯಾಗಿದ್ದುಕೊಂಡು ದೇಹಾದಿಗಳ ಧರ್ಮವನ್ನೂ ಮೀರಿ ಇರುವ ಆತ್ಮನೇ ಪರಮಾತ್ಮನು. ಇವನಿಗಿಂತ ಮಿಗಿಲಾದ ಆತ್ಮರು ಬೇರೆ ಯಾರೂ ಇರುವದಿಲ್ಲ. ಆದ್ದರಿಂದ ಇವನು ಪರಮಾತ್ಮನೆನಿಸಿರುತ್ತಾನೆ.

**(12)** ಈಗ **ಮುಕ್ತಾನಾಂ ಪರಮಾ ಗತಿಃ** - ಎಂಬ ನಾಮವನ್ನು ವಿಚಾರ ಮಾಡೋಣ. ಮುಕ್ತಿ - ಎಂದರೆ ಅಜ್ಞಾನದಿಂದ ಬಿಡುಗಡೆ - ಎಂದರ್ಥ. ಆದರೆ ಶರೀರದಿಂದ ಬಿಡುಗಡೆಯಾಗುವದು ಮುಕ್ತಿಯಲ್ಲ. ಏಕೆಂದರೆ ಶರೀರವು ನಾಶವಾದರೂ ಅಜ್ಞಾನವು ನಾಶವಾಗಿರುವದಿಲ್ಲ. ಅದು ಮತ್ತೆ ಜನ್ಮವನ್ನುಂಟುಮಾಡುತ್ತದೆ. ಆದ್ದರಿಂದ ಶರೀರಧಾರಣೆಗೆ ಮೂಲವಾದ ಅವಿದ್ಯೆಯು ನಾಶವಾದಾಗಲೇ ಮುಕ್ತಿಯಾಗುವದು. ಇದು ಬದುಕಿರುವಾಗಲೇ ಆಗಲೂಬಹುದು. ಆಗ ಅಂಥವರನ್ನು ಜೀವನ್ಮುಕ್ತರೆಂದು ಕರೆಯುವೆವು. ಇಂಥವರಿಗೆ ಯಾವ ಸಂಸಾರಬಂಧವೂ ಇರುವದಿಲ್ಲ. ಈ ಮುಕ್ತಿಯು ಆಗಂತುಕವಲ್ಲ. ಸಹಜಸ್ವರೂಪವೇ ಎಂದು ವೇದಾಂತಗಳು ತಿಳಿಸುವವು. ಹೀಗೆ ಬದುಕಿರುವಾಗಲೇ ತಮ್ಮ ಆತ್ಮನೇ ಆದ ಭಗವಂತನನ್ನು ಪಡೆದವರು ಮತ್ತೆ ಜನ್ಮವನ್ನು ತಾಳುವದಿಲ್ಲ. ಅವರು ಬ್ರಹ್ಮವೇ ಆಗಿ ಸ್ವರೂಪದಲ್ಲಿ

ನೆಲೆನಿಲ್ಲುವರು. ಇಂಥ ಸ್ಥಿತಿಯನ್ನು ಪರಮಗತಿ - ಎನ್ನುವರು. ಇದು ಆ ಭಗವಂತನಿಗಿಂತ ಅನನ್ಯವಾಗಿರುವದು. ಈ ಅಭಿಪ್ರಾಯದಂತೆ ಆ ಭಗವಂತನನ್ನು 'ಮುಕ್ತಾನಾಂ ಪರಮಾ ಗತಿಃ' ಎಂದು ಸ್ತುತಿಸಲಾಗಿದೆ. ಈ ಸ್ಥಿತಿಯಲ್ಲಿ ಮುಕ್ತರು-ಭಗವಂತ-ಎಂಬ ದ್ವೈತವಿಲ್ಲ. ಏಕೆಂದರೆ ಅದ್ವೈತವೇ ಎಲ್ಲರ ನಿಜಸ್ವಭಾವವಾಗಿದೆ. ಅದೇ ಮಹಾವಿಷ್ಣು ಎಂದು ಸ್ತುತಿಸಲ್ಪಟ್ಟಿರುತ್ತದೆ.

ಈಗ (13) **ಅವ್ಯಯಃ** - ವೆಂಬ ನಾಮವನ್ನು ವಿಚಾರಮಾಡೋಣ. ವ್ಯಯ ಎಂದರೆ ಕ್ಷಯ, ನಾಶ, ಸವೆಯುವಿಕೆ- ಎಂಬರ್ಥಗಳಿವೆ. ಪ್ರಪಂಚದಲ್ಲಿರುವ ವಸ್ತು (ಭಾವ)ಗಳೆಲ್ಲವೂ ವ್ಯಯವಾಗತಕ್ಕವುಗಳೇ ಆಗಿವೆ. ಆದರೆ ಭಗವಂತನು ಅವ್ಯಯನು. ಅವನಿಗೆ ಎಂದಿಗೂ ನಾಶವಿಲ್ಲ. ಅವನು ಆಕಾಶದಂತೆ ಅವ್ಯಯನೂ ಸರ್ವಗತನೂ ನಿತ್ಯನೂ ಆಗಿರುವನು. ಹೇಗೆ ನಾವು ಒಂದು ಮನೆಯನ್ನು ಕಟ್ಟಿದಾಗ ಅದು ಆಕಾಶ (ಅವಕಾಶ-ಸೈಟು)ದಲ್ಲಿ ಕಾಣಿಸಿಕೊಂಡಿದ್ದು ಕೆಲವು ವರ್ಷಗಳ ಅನಂತರ ವ್ಯಯ (ನಾಶ)ವಾಗಿ ಹೋಗುವದೋ-ಆದರೆ ಅಲ್ಲಿದ್ದ ಆಕಾಶವು ಮಾತ್ರ ನಾಶವಾಗದೆ ಹಾಗೆಯೇ ಇರುವದೋ ಅದರಂತೆ ಸರ್ವಗತನೂ ನಿತ್ಯನೂ ಭಾವವಿಕಾರರಹಿತನೂ ಆದ ಪರಮಾತ್ಮನು ಎಂದೆಂದಿಗೂ ವ್ಯಯವಾಗದೆ ಇದ್ದೇ ಇರುತ್ತಾನೆ. ಆದ್ದರಿಂದ ಈ ಭಗವಂತನಿಗೆ ಅವ್ಯಯನೆಂಬ ಹೆಸರು ಅನ್ವರ್ಥವಾಗಿದೆ.

ಈಗ (14) **ಪುರುಷಃ** - ಎಂಬ ನಾಮದ ಅಭಿಪ್ರಾಯವನ್ನು ನೋಡೋಣ. ರೂಢ್ಯರ್ಥದಲ್ಲಿ ಗಂಡಸು - ಎಂದು ಪ್ರಸಿದ್ಧವು. ಆದರೆ ಇದರ ವ್ಯಾಪಕವಾದ ಅರ್ಥವು ಹೀಗಿದೆ : ಪುರಿ - ಶೇತೇ ಇತಿ ಪುರುಷಃ ಎಂದು ವಿವರಿಸಿದಾಗ ಪುರ ಎಂದರೇ ಶರೀರ - ಎಂದರ್ಥವಾಗುತ್ತದೆ. ಅದರಂತೆ ಸೃಷ್ಟಿಯಲ್ಲಿರುವ ಸ್ಥಾವರ ಜಂಗಮಗಳೆಲ್ಲವೂ ಪುರಗಳೇ ಆಗಿವೆ. ಇನ್ನೂ ನಮಗೆ ಎಟುಕದೆ ಇರುವ ಸ್ವರ್ಗ - ಪಾತಾಳದಿಲೋಕಗಳಲ್ಲಿರುವ ಎಲ್ಲಾ ಪ್ರಾಣಿಶರೀರಗಳೂ ಪುರಗಳೇ ಆಗಿದ್ದು ಅವೆಲ್ಲವನ್ನೂ ಈ ಪುರುಷನೇ ವ್ಯಾಪಿಸಿಕೊಂಡಿರುತ್ತಾನೆ. ಹೀಗೆ ಸೃಷ್ಟಿಯಲ್ಲಿರುವ ಬ್ರಹ್ಮಾದಿಸ್ತಂಬಪರ್ಯಂತವಾದ ಎಲ್ಲಾ ಶರೀರಗಳಲ್ಲಿಯೂ ವ್ಯಾಪಿಸಿರುವ ಪುರುಷನೆಂದರೆ ಭಗವಂತನೇ ಸರಿ. ಆಗ ವಿಷ್ಣು-ಎಂಬ ಹೆಸರೂ ಅನ್ವರ್ಥವಾಗುವದು. ಇಂಥವನನ್ನು ತಿಳಿಯಲು ಸಾಧ್ಯವಾದೀತೆ? ಎನಿಸಿದರೂ ಅದು ಸಾಧ್ಯವಾಗಬಲ್ಲದು. ಹೇಗೆ ಒಂದು ದೊಡ್ಡ ತಪ್ಪಲೆಯಲ್ಲಿ ಅನ್ನವನ್ನು ಬೇಯಿಸಿದಾಗ ಅದರಲ್ಲಿನ ಒಂದು ಅಗುಳನ್ನು ಹಿಸುಕಿನೋಡಿದರೂ ಇಡಿಯ ತಪ್ಪಲೆಯ ಅನ್ನವೆಲ್ಲವೂ ಬೆಂದಿರುವದು ತಿಳಿಯುವಂತೆ ಭಗವಂತನನ್ನು ಇಡಿಯ ಬ್ರಹ್ಮಾಂಡದಲ್ಲೆಲ್ಲ ಕಂಡುಕೊಳ್ಳಬಹುದಾಗಿದೆ. ಹೀಗೆ ಪುರುಷನೆಂಬುದು ಸರ್ವವೂ ಆಗಿರುವ ಬ್ರಹ್ಮವೇ ಎಂದು ತಿಳಿಸುವದು ಈ ನಾಮದ ವೈಶಿಷ್ಟ್ಯವಾಗಿದೆ.

ಈಗ (15) **ಸಾಕ್ಷೀ** - ಎಂಬ ನಾಮವನ್ನು ವಿಚಾರಮಾಡೋಣ. ಉಪನಿಷತ್ತುಗಳಲ್ಲಿ ಪರಬ್ರಹ್ಮವನ್ನು ಸಾಕ್ಷೀ - ಎಂದು ಕರೆದಿದೆ. ವ್ಯಾಕರಣಶಾಸ್ತ್ರದಂತೆ ಸಾಕ್ಷೀ ಎಂದರೆ ನೇರಾಗಿ ನೋಡುವವನು - ಎಂದರ್ಥ. ಆಗ ಈ ಹೆಸರು ಪರಮಾತ್ಮನಿಗೆ ಮಾತ್ರವೇ ಅನ್ವಯಿಸುತ್ತದೆ. ಸಾಕ್ಷಾದ್ ದ್ರಷ್ಟಾ - ಎಂಬುದರ ವಿವರವು ಹೀಗೆ. ನಾವು ಏನನ್ನಾದರೂ ನೋಡಬೇಕಾದರೆ ಕಣ್ಣಿನಿಂದ ಎಚ್ಚರದಲ್ಲಿ ನೋಡುತ್ತೇವೆ. ಆದರೆ ನಾವು ಒಳಗೆ ನೋಡಬೇಕೆಂದು ಮನಸ್ಸುಮಾಡದೆ ಇದ್ದರೆ ನೋಡಲಾಗುವದಿಲ್ಲ. ಇನ್ನು ಕನಸಿನಲ್ಲಿ ನೋಡುವಾಗ ಎಚ್ಚರದ ಕಣ್ಣುಗಳು ಮುಚ್ಚಿಯೇ ಇರುವವು. ಆದ್ದರಿಂದ ಸಾಕ್ಷಿ ಎಂದರೆ ಎಲ್ಲಾ ಅವಸ್ಥೆಗಳನ್ನೂ ಎಲ್ಲಾ ಇಂದ್ರಿಯಗಳನ್ನೂ ಬೆಳಗುತ್ತಾ ತಾನು ಯಾವದಕ್ಕೂ ಅಂಟದೆ ಇರುವ ಶುದ್ಧಚೈತನ್ಯವೇ ಸಾಕ್ಷಿ - ಎಂಬ ಈ ಹೆಸರಿಗೆ ತಕ್ಕದ್ದಾಗಿರುತ್ತದೆ. ಅದು ಬೆಳಗದೆ ಇದ್ದರೆ ಯಾವ ಇಂದ್ರಿಯವೂ ಏನನ್ನೂ ಅರಿಯಲಾರದು. ಇಂಥ ನಿತ್ಯಚೈತನ್ಯಸ್ವರೂಪನೂ ಸ್ವತಂತ್ರನೂ ಸ್ವಯಂಜ್ಯೋತಿಯೂ ಆದ ಪರಮಾತ್ಮನನ್ನು ಸಾಕ್ಷಿ ಎಂದು ಹೆಸರಿಸಿ ಸ್ತುತಿಸಲಾಗಿದೆ.

ಹೀಗೆಯೇ (16) **ಕ್ಷೇತ್ರಜ್ಞಃ** - ಎಂಬ ನಾಮವನ್ನೂ ವಿಚಾರಿಸೋಣ. ಗೀತೆಯಲ್ಲಿ ಕ್ಷೇತ್ರಜ್ಞ- ಎಂದರೆ ದೇಹಾಭಿಮಾನಿಯಾದ ಜೀವನು - ಎಂದರ್ಥವಿದೆ. ಆದರೆ ಮುಂದುವರೆದು ಆ ಜೀವನನ್ನೂ 'ನಾನು' ಎಂದರೆ ಅಸಂಸಾರಿಯಾದ ನಾರಾಯಣನೆಂದೇ ತಿಳಿ - ಎಂದೂ ವಿವರಣೆಯಿದೆ. ಆದ್ದರಿಂದ ಈ ನಾಮವು ಭಗವಂತನಿಗೇ ಸಲ್ಲುತ್ತದೆ. ಕ್ಷೇತ್ರ - ಎಂಬ ಶಬ್ದಕ್ಕೆ ಇಡಿಯ ಜಗತ್ತನ್ನೇ ಅರ್ಥವಾಗಿ ಗ್ರಹಿಸಿದಾಗ ಕ್ಷೇತ್ರಜ್ಞನೆಂದರೆ ಪರಮಾತ್ಮನೆಂಬ ಅರ್ಥವೂ ಹೊಂದುತ್ತದೆ. ಮತ್ತು ವೇದಾಂತಶಾಸ್ತ್ರದಲ್ಲಿ ಆತ್ಮ-ಬ್ರಹ್ಮ ಎರಡೂ ಒಂದೇ ತತ್ತ್ವವೆಂದು ನಿರ್ಣಯಿಸಿರುವದರಿಂದ ಇದೇ ಅರ್ಥವನ್ನೇ ಭೀಷ್ಮಾಚಾರ್ಯರು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಭಗವಂತನು ಎದುರಿಗೇ ಕುಳಿತು ಕೇಳುತ್ತಿರುವಾಗ 'ಕ್ಷೇತ್ರಜ್ಞ' ನೆಂದು ಸ್ತುತಿ ಮಾಡಿರುವದರಿಂದ ಇಲ್ಲಿ ಕ್ಷೇತ್ರಜ್ಞನೆಂದರೆ - ಹಿಂದಿನ ನಾಮವಾದ ಸಾಕ್ಷೀ ಎಂಬುದು, ಮುಂದಿನ ನಾಮವಾದ ಅಕ್ಷರ - ಎಂಬುದು - ಇವೆರಡೂ ಪರಬ್ರಹ್ಮಕ್ಕೇ ಹೊಂದುವ ನಾಮಗಳಾಗಿದ್ದು ನಡುವಿನ ನಾಮವಾದ ಕ್ಷೇತ್ರಜ್ಞ- ಎಂಬುದು ಪರಮಾತ್ಮನನ್ನೇ ಹೇಳುತ್ತದೆ - ಎಂದು ನಿರ್ಧರಿಸಬಹುದಾಗಿದೆ.

ಈಗ (17) **ಅಕ್ಷರಃ** - ಎಂಬ ನಾಮವನ್ನು ನೋಡೋಣ. ಜಗದ್ಬೀಜವಾದ ಅವ್ಯಾಕೃತವನ್ನೂ ಅಧ್ಯಾತ್ಮಶಾಸ್ತ್ರದಲ್ಲಿ ಅಕ್ಷರವೆಂದು ಕರೆದಿದೆಯಾದರೂ ಇಲ್ಲಿ ಈ ಶಬ್ದವೂ ಸಾಹಚರ್ಯದಿಂದ ಪರಮಾತ್ಮನನ್ನೇ ಹೇಳುತ್ತದೆ ಎಂದೇ ತಿಳಿಯಬೇಕು. 'ಏತಸ್ಯ ವಾ ಅಕ್ಷರಸ್ಯ' (ಬೃ.3-8-9) ಎಂಬ ಬೃಹದಾರಣ್ಯಕೋಪನಿಷತ್ತಿನ ವಾಕ್ಯವೂ ಇದಕ್ಕೆ ಉಪೋದ್ಬಲಕವಾಗಿದೆ.

**ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।**
**ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥3॥**

**(18)** ಈಗ **ಯೋಗಃ** - ಎಂಬ ನಾಮವನ್ನು ವಿಚಾರಮಾಡೋಣ. ಜೀವಾತ್ಮನೂ ಪರಮಾತ್ಮನೂ ಒಬ್ಬನೇ - ಎಂಬ ಸಿದ್ಧಾಂತದಂತೆ - ಅವಿದ್ಯೆಯಿಂದ ತಾನು ಜೀವನೆಂದೂ ಸಂಸಾರಿಯೆಂದೂ ಭ್ರಾಂತನಾಗಿರುವ ಸಾಧಕನಿಗೆ ಶಾಸ್ತ್ರಾಚಾರ್ಯರುಗಳ ಉಪದೇಶದಿಂದ ಭ್ರಾಂತಿಯೂ ತೊಲಗಲಾಗಿ - ನದಿಯ ನೀರು ಸಮುದ್ರವನ್ನು ಸೇರಿದಾಗ ತನ್ನ ನಾಮರೂಪಗಳನ್ನು ಕಳೆದುಕೊಂಡು ಸಮುದ್ರವೇ ಆಗುವಂತೆ ಪರಮಾತ್ಮ-ಜೀವಾತ್ಮರುಗಳ ಐಕ್ಯವು ಜ್ಞಾನದಿಂದ ಸಿದ್ಧವಾಗಲಾಗಿ ಆ ಸ್ಥಿತಿಯನ್ನು ಯೋಗವೆಂದೂ ಮೋಕ್ಷವೆಂದೂ ಬಲ್ಲವರು ಹೇಳುತ್ತಾರೆ. ಆಗ ಜೀವಭಾವವು ಇಲ್ಲವಾಗಿ ಬಿಡುವದು. ಇದನ್ನೇ ಬ್ರಹ್ಮಭಾವವೆನ್ನುವರು. ಈ ಸ್ಥಿತಿಯು ಪರಮಾತ್ಮನೇ ಆಗಿದ್ದು ಅವನನ್ನೇ ಇಲ್ಲಿ ಯೋಗನೆಂದು ಸ್ತುತಿಸಲಾಗಿದೆ.

**(19)** ಈಗ **ಯೋಗವಿದಾಂ ನೇತಾ** - ಎಂಬ ನಾಮವನ್ನು ವಿಚಾರಿಸೋಣ. ಯೋಗವನ್ನು ಬಲ್ಲವರು ಯೋಗವಿದರೆನಿಸುತ್ತಾರೆ. ಆದರೆ ಇಂಥವರು ಸ್ವತಃ ಯೋಗ ಸಾಧನೆಯನ್ನು ಮಾಡಿದವರಾಗಿರಬೇಕು. ಕೇವಲ ಪುಸ್ತಕಜ್ಞಾನಿಗಳಾದರೆ ಸಾಲದು. ಆದರೆ ಇಲ್ಲಿ ಯೋಗವೆಂದರೆ ಕ್ಷೇತ್ರಜ್ಞ - ಪರಮಾತ್ಮರ ಯೋಗವನ್ನು ಸ್ವೀಕರಿಸಬೇಕು. ಇದು ಅದ್ವೈತದಲ್ಲಿ ಕೊನೆಗಾಣುತ್ತದೆ. ಏಕೆಂದರೆ ಶುದ್ಧವಾದ ನೀರಿಗೆ ಶುದ್ಧವಾದ ನೀರನ್ನೇ ಬೆರೆಸಿದರೆ ಹೇಗೆ ಒಂದಾಗಿಬಿಡುವದೋ ಮತ್ತೆ ಅದನ್ನು ವಿಂಗಡಿಸಲಾಗುವದಿಲ್ಲವೋ ಹಾಗೇ ಜೀವಾತ್ಮನು ಈ ಯೋಗದಿಂದ ತನ್ನ ಪರಿಚ್ಛಿನ್ನಭಾವವನ್ನು ಕಳೆದಕೊಂಡುಬಿಡುತ್ತಾನೆ. ಇನ್ನು ಜೀವಭಾವವೇ ಇಲ್ಲವಾಗಿ ಬಿಡುತ್ತದೆ. ಇಂಥ ಬ್ರಹ್ಮವಿದರೇ ಯೋಗವಿದರು. ಇಂಥವರನ್ನು ಸಾಧನಸ್ಥಿತಿಯಲ್ಲಿ ಕರೆದೊಯ್ದು ತನ್ನ ಸ್ವಸ್ವರೂಪದಲ್ಲಿ ನೆಲೆಗೊಳಿಸುವವನಾದ್ದರಿಂದ ಭಗವಂತನನ್ನು ಯೋಗವಿದಾಂ ನೇತಾ ಎಂದು ಸ್ತುತಿಸಲಾಗಿದೆ.

**(20)** ಈಗ **ಪ್ರಧಾನಪುರುಷೇಶ್ವರಃ** - ಎಂಬ ನಾಮವನ್ನು ನೋಡೋಣ. ಪ್ರಧಾನವೆಂದರೆ ಪ್ರಕೃತಿಯು; ಇದು ಸತ್ತ್ವ - ರಜಸ್ಸು - ತಮಸ್ಸು ಎಂಬ ಗುಣತ್ರಯಗಳಿಂದ ಕೂಡಿದೆ. ಸಾಂಖ್ಯಶಾಸ್ತ್ರದಂತೆ ಇದು ಸ್ವತಂತ್ರತತ್ತ್ವವು. ಆದರೆ ವೇದಾಂತಶಾಸ್ತ್ರದಂತೆ ಭಗವಂತನೊಬ್ಬನೇ ಸ್ವತಂತ್ರಪರಮಾರ್ಥತತ್ತ್ವವು. ಆದ್ದರಿಂದ ವ್ಯಾವಹಾರಿಕವಾಗಿ ಭಗವಂತನನ್ನು ಸೃಷ್ಟಿಕರ್ತನೆಂದು ಭಾವಿಸಿದಾಗ ಅವನು ಪ್ರಕೃತಿ-ಪುರುಷರೆಂಬ ಉಪಾಧಿಗಳ ದೃಷ್ಟಿಯಿಂದ ಈಶ್ವರನೆನಿಸಿರುತ್ತಾನೆ. ಇನ್ನು ಈಶ್ವರನೆಂದರೆ ಎಲ್ಲವನ್ನೂ

ಆಳುವವನೆಂದೂ ಸ್ವತಂತ್ರನೆಂದೂ ಷಡ್ಗುಣ್ಯೈಶ್ವರ್ಯ ಸಂಪನ್ನನೆಂದೂ ಸರ್ವಜ್ಞ - ಸರ್ವಶಕ್ತನೆಂದೂ ಶಾಸ್ತ್ರಗಳು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ಸ್ಥಿತಿಕರ್ತನೆನಿಸಿರುವ ಶ್ರೀಮಹಾವಿಷ್ಣುವು ಪ್ರಧಾನಪುರುಷೇಶ್ವರನಾಗಿದ್ದಾನೆ. ಗೀತೆಯಲ್ಲಿ ಹೇಳಿರುವಂತೆ ಈತನಿಗೆ ಸರಿಸಮಾನರಾದವರೇ ಬೇರೊಬ್ಬರು ಯಾರೂ ಇಲ್ಲ. ಇನ್ನು ಇವನನ್ನು ಮೀರಿಸಿದವನು ಎಲ್ಲಿದ್ದಾನು? ಆದ್ದರಿಂದ ಈ ಭಗವಂತನು ಪ್ರಧಾನಪುರುಷೇಶ್ವರನೆಂಬ ಅನ್ವರ್ಥ ನಾಮವನ್ನೇ ಹೊಂದಿರುತ್ತಾನೆ - ಎಂದು ಶಾಸ್ತ್ರಗಳು ತಿಳಿಸುತ್ತವೆ.

**(21)** ಈಗ **ನಾರಸಿಂಹವಪುಃ** - ಎಂಬ ನಾಮವನ್ನು ವಿಚಾರಮಾಡೋಣ. ಹಿಂದೆ ಹಿರಣ್ಯಕಶಿಪುವೆಂಬ ಅಸುರನು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ತನಗೆ ಯಾವ ಪ್ರಾಣಿ-ಮನುಷ್ಯ-ದೇವತಾದಿಗಳಿಂದಲೂ ಮರಣವು ಬರಬಾರದೆಂದು ವರವನ್ನು ಪಡೆದಿದ್ದನು. ಅವನ ಮಗನಾದ ಪ್ರಹ್ಲಾದನು ವಿಷ್ಣುಭಕ್ತನಾಗಿದ್ದನು. ಇದು ಅವನ ತಂದೆಗೆ ಸಹಿಸಲಾಗಲಿಲ್ಲ. ಆಗ ಆ ಅಸುರನು "ವಿಷ್ಣುವು ಯಾರು? ಅವನು ಈ ಕಂಬದಲ್ಲಿದ್ದಾನೆಯೆ?" ಎಂದು ಘರ್ಜಿಸುತ್ತಾ ಕಂಬವನ್ನು ಗುದ್ದಿದಾಗ ಭಗವಂತನು ಅರ್ಧಮೃಗ, ಅರ್ಧಮನುಷ್ಯರೂಪದಿಂದ (ನರಸಿಂಹ) ಅವತರಿಸಿ ಹಿರಣ್ಯಕಶಿಪುವನ್ನು ಸಂಹಾರಮಾಡಿದನು. ಈ ಘೋರರೂಪವೇ 'ನರಸಿಂಹವಪು' ಎಂದು ಪ್ರಸಿದ್ಧವಾಯಿತು. ಈ ನಾಮವನ್ನೇ ಶ್ರೀಭೀಷ್ಮಾಚಾರ್ಯರು ಧರ್ಮರಾಜನಿಗೆ ಬೋಧಿಸಿದ್ದಾರೆ

**(22)** ಈಗ **ಶ್ರೀಮಾನ್** - ಎಂಬ ನಾಮವನ್ನು ವಿಚಾರಮಾಡೋಣ. ಶ್ರೀ ಎಂದರೆ ಮಹಾಲಕ್ಷ್ಮಿಯು. ಧನ, ಧಾನ್ಯ, ಸುವರ್ಣ, ರಜತಾದಿಗಳನ್ನು ರತ್ನಮಾಣಿಕ್ಯಗಳು, ಭೂಮಿ ಇತ್ಯಾದಿ ಆಚೇತನಪದಾರ್ಥಗಳು ಮತ್ತು ಪತ್ನಿ, ಪುತ್ರ-ಪುತ್ರಿಯರು, ಬಂಧುಗಳು-ಮಿತ್ರರು ಮುಂತಾಗಿ ಎಲ್ಲವೂ ಶ್ರೀಃ ಎನಿಸುತ್ತದೆ. ಜೊತೆಗೆ ಲೌಕಿಕ-ವೈದಿಕವಿದ್ಯೆಗಳು, ಸದಾಚಾರಗಳು ಸಹ ಶ್ರೀಶಬ್ದದಲ್ಲಿ ಅಡಕವಾಗಿವೆ. ಇಂಥ ಪರಿಪೂರ್ಣ ಸಂಪತ್ತುಗಳೆಲ್ಲವೂ ಯಾವನಲ್ಲಿ ನಿತ್ಯವಾಗಿದ್ದುಕೊಂಡಿವೆಯೋ ಅವನು ಶ್ರೀಮಾನ್ - ಎನಿಸುತ್ತಾನೆ. ಶ್ರೀವಿಷ್ಣುವಿನ ವೃಕ್ಷಸ್ಥಲದಲ್ಲಿ ಎಂದೆಂದೂ ಸ್ಥಿರವಾಗಿ ನೆಲೆಸಿರುವ ಶ್ರೀಮಹಾಲಕ್ಷ್ಮಿಯ ಸಾನ್ನಿಧ್ಯದಿಂದ ಶ್ರೀಮನ್ನಾರಾಯಣನು ಪರಿಪೂರ್ಣಶ್ರೀಮಂತನೇ ಆಗಿದ್ದಾನೆ. ಆದ್ದರಿಂದ ಶ್ರೀಮಾನ್ ಎಂಬ ನಾಮವು ಶ್ರೀಮಹಾವಿಷ್ಣುವಿಗೆ ಅನ್ವರ್ಥ (ಅತ್ಯಂತ ಯೋಗ್ಯ)ವಾಗಿದೆ.

**(23)** ಈಗ **ಕೇಶವಃ** - ಎಂಬ ನಾಮವನ್ನು ವಿಚಾರಮಾಡೋಣ. ಕೇಶ ಎಂದರೆ ಕೂದಲು. ಸುಂದರವಾದ ಕೇಶಗಳುಳ್ಳವನು ಎಂದರ್ಥ. ಅಥವಾ ಕ = ಬ್ರಹ್ಮ, ಅ = ವಿಷ್ಣು, ಈಶ = ಶಿವ - ಈ ವಿಭೂತಿಗಳೇ ಕೇಶಗಳು. ಇವು ಯಾವನ

ಆಶ್ರಯದಲ್ಲಿರುವವ್ರೋ ಅವನೇ ಕೇಶವನು. ಹಾಗೆಯೇ ಕೇಶಿ - ಎಂಬ ಅಸುರನನ್ನು ಸಂಹಾರಮಾಡಿದ್ದರಿಂದ ಕೇಶವನೆಂಬ ಹೆಸರು ಬಂದಿದೆ - ಎಂದು ವಿಷ್ಣುಪುರಾಣದಲ್ಲಿದೆ. ಈ ರೀತಿಯಾಗಿ ಶ್ರೀಮಹಾವಿಷ್ಣುವನ್ನು ಕೇಶವನೆಂದು ಋಷಿಗಳು ಕರೆದಿದ್ದಾರೆ. ಇನ್ನು ಬ್ರಾಹ್ಮಣರು ಆಚಮನಕಾಲಕ್ಕೆ ಕೇಶವಾದಿ 24 ನಾಮಗಳನ್ನು ಬಳಸುತ್ತಾರೆ. ಅವುಗಳಲ್ಲಿ ಕೇಶವನೆಂಬುದೇ ಪ್ರಥಮನಾಮವು. ಹೀಗೆ ಶ್ರೀಮಹಾವಿಷ್ಣುವು ಕೇಶವನೆಂದು ಸ್ತುತಿಸಲ್ಪಟ್ಟಿರುತ್ತಾನೆ.

**(24)** ಈಗ **ಪುರುಷೋತ್ತಮ**-ನೆಂಬ ನಾಮವನ್ನು ನೋಡೋಣ. ಪುರುಷರೊಳಗೆ ಉತ್ತಮನು- ಎಂದು ಅರ್ಥ. ಇಲ್ಲಿ ಪುರುಷಶಬ್ದವನ್ನು ಜೀವರುಗಳು ಎಂಬರ್ಥದಲ್ಲಿ ಗ್ರಹಿಸಬೇಕು. ಸೃಷ್ಟಿಯಲ್ಲಿರುವ ಚರಾಚರಾತ್ಮಕ ಜೀವರುಗಳಲ್ಲೆಲ್ಲ ಮೀರಿದವನಾಗಿದ್ದಾನೆ. ಮತ್ತು ಅಲ್ಪಪ್ರಜ್ಞರಾದ ಜೀವರುಗಳಿಗೆ ಹೋಲಿಸಿದರೆ ಈ ಮಹಾವಿಷ್ಣುವು ಪೂರ್ಣಪ್ರಜ್ಞನಾಗಿದ್ದಾನೆ. ಸಕಲವೇದಶಾಸ್ತ್ರಗಳೂ ಲೌಕಿಕವಿದ್ಯೆಗಳೂ ಈತನಿಂದಲೇ ಹೊರಬಂದಿವೆಯೆಂದು ಶ್ರೀಬಾದರಾಯಣರು 'ಶಾಸ್ತ್ರಯೋನಿತ್ವಾತ್' ಎಂಬ ಸೂತ್ರದಲ್ಲಿ ತಿಳಿಸಿದ್ದಾರೆ. ಇನ್ನು ಜಗತ್ತಿನಲ್ಲಿ ಹುಟ್ಟಿರುವ ಎಲ್ಲಾ ಜೀವಿಗಳನ್ನೂ ಕ್ಷರ- ಎಂದು ಶಾಸ್ತ್ರದಲ್ಲಿ ಕರೆಯಲಾಗಿದೆ. ಈ ಪ್ರಪಂಚದ ಮೂಲಕಾರಣವಾದ ವಸ್ತುವನ್ನು ಅಕ್ಷರ (ಅವ್ಯಕ್ತ) ಎಂದು ಕರೆದಿದೆ. ಈ ಕ್ಷರಾಕ್ಷರಗಳನ್ನು 'ಪುರುಷ' ರೆಂದು ಗೀತೆಯಲ್ಲಿ ಹೆಸರಿಸಲಾಗಿದೆ. ಇಂಥ ಕ್ಷರಾಕ್ಷರಪುರುಷರುಗಳಿಗಿಂತ ಅತ್ಯಂತ ವಿಲಕ್ಷಣನೂ ಮಿಗಿಲಾದವನೂ ಆದ ಪುರುಷನೇ ಪುರುಷೋತ್ತಮನು. ಆದ್ದರಿಂದ ಈ ಪುರುಷೋತ್ತಮನಾದ ಮಹಾವಿಷ್ಣುವಿಗಿಂತ ಮಿಗಿಲಾದವರಿಲ್ಲ - ಎಂದಭಿಪ್ರಾಯ. ಆದ್ದರಿಂದ ಶ್ರೀಮಹಾವಿಷ್ಣುವನ್ನು ಪುರುಷೋತ್ತಮನೆಂದು ಸ್ತುತಿಸಿರುವದು ಸರ್ವಥಾ ಯೋಗ್ಯವಾಗಿದೆ.

**ಸರ್ವಃ ಶರ್ವಃ ಶಿವಃ ಸ್ಥಾಣುಃ ಭೂತಾದಿರ್ನಿಧಿರವ್ಯಯಃ ।**
**ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥4॥**

ಈ ಶ್ಲೋಕದಲ್ಲಿ 'ಅವ್ಯಯನಿಧಿಃ' ಎಂದು ಒಂದೇ ನಾಮವಾಗಿ ಪರಿಗಣಿಸಿದಾಗ ಒಟ್ಟು 12 ನಾಮಗಳಾಗುವವು. ಇವುಗಳ ಅರ್ಥವನ್ನು ವಿಚಾರಮಾಡೋಣ. **(25) ಸರ್ವಃ** - ಎಂಬ ನಾಮವು ಜಗತ್ತಿನಲ್ಲಿರುವ ಎಲ್ಲಾ ಚೇತನಾಚೇತನವಸ್ತುಗಳೂ ಶ್ರೀಮಹಾವಿಷ್ಣುವೇ ಎಂಬರ್ಥವುಳ್ಳದ್ದಾಗಿದೆ. ಮತ್ತು ಸರ್ವವನ್ನೂ ಬಲ್ಲವನು (ಸರ್ವಜ್ಞ) ಎಲ್ಲಕ್ಕೂ ಒಡೆಯನು (ಸರ್ವೇಶ್ವರ) ಎಲ್ಲಾ ವಿಧವಾದ ಶಕ್ತಿಗಳುಳ್ಳವನು (ಸರ್ವಶಕ್ತ) ಎಲ್ಲದರ ಆತ್ಮನು (ಸರ್ವಾತ್ಮ) ಹೀಗೆ ಇಡಿಯ ಜಗತ್ತನ್ನೇ ಆ ಭಗವಂತನಲ್ಲಿ ಅಡಕ

ಮಾಡಬಹುದಾಗಿದೆ. ಆದ್ದರಿಂದಭಗವಂತನೊಬ್ಬನೇ ಸರ್ವನು-ಎಂದು ತಿಳಿಯಬೇಕು. **(26) ಶರ್ವಃ** - ಶರ್ವವೆಂದರೆ ಪ್ರಲಯಕಾಲದಲ್ಲಿ ಎಲ್ಲವನ್ನೂ ನಾಶಮಾಡುವವನು - ಎಂದರೆ ನಾಮರೂಪಾತ್ಮಕ ಜಗತ್ತನ್ನೆಲ್ಲ ತನ್ನಲ್ಲಿಯೇ ಅಡಗಿಸಿಟ್ಟುಕೊಳ್ಳುವವನು ಎಂದಭಿಪ್ರಾಯ. **(27) ಶಿವಃ** - ಶಿವನೆಂದರೆ ಮಂಗಳಸ್ವರೂಪನು. ವೇದದಲ್ಲಿ ನಾರಾಯಣ ಸೂಕ್ತದಲ್ಲಿ 'ಸ ಬ್ರಹ್ಮ ಶಿವಃ' ಇತ್ಯಾದಿ ಮಂತ್ರದಿಂದ ಶ್ರೀಹರಿಯನ್ನೇ ಸ್ತುತಿಸಿರುತ್ತದೆ. ಭದ್ರ - ಶಿವ - ಕಲ್ಯಾಣ-ಮಂಗಳ- ಈ ಎಲ್ಲಾ ಶಬ್ದಗಳಿಗೂ ಒಂದೇ ಅರ್ಥ, ಭಗವಂತನೊಬ್ಬನೇ ನಿತ್ಯಮಂಗಳಸ್ವರೂಪನಾಗಿದ್ದು ಶಿವನೆನಿಸಿದ್ದಾನೆ.

**(28)**ಈಗ **ಸ್ಥಾಣುಃ** -ವೆಂಬ ನಾಮವನ್ನು ವಿಚಾರಮಾಡೋಣ. ಸ್ಥಿರ (ನಿಲುಗಡೆ) ವಾದ ಸ್ವಭಾವದವನಾದ್ದರಿಂದ ಸ್ಥಾಣುವೆನಿಸಿದ್ದಾನೆ. ಉದಾಹರಣೆಗೆ ಗಿಡಮರಗಳು ಇದ್ದಲ್ಲಿಯೇ ಇರುವವು. ಅವುಗಳಿಗೆ ಸ್ವತಃ ಚಲನವಿಲ್ಲ. ಅದರಂತೆ ಭಗವಂತನಿಗೂ ಚಲನೆಯಿಲ್ಲ. ಏಕೆಂದರೆ ಅವನು ಸರ್ವಗತನೇ ಆಗಿದ್ದು ಜಗತ್ತನ್ನೆಲ್ಲ ವ್ಯಾಪಿಸಿರುತ್ತಾನೆ. ಹೀಗೆ ಶ್ರೀಮಹಾವಿಷ್ಣುವು ಸ್ಥಾಣುವೆನಿಸಿರುತ್ತಾನೆ. **(29)** ಈಗ **'ಭೂತಾದಿಃ'** - ಎಂಬ ನಾಮವನ್ನು ನೋಡೋಣ. ಭವನ್ತಿ-ಉಂಟಾಗುತ್ತವೆಯಾದ್ದರಿಂದಲೂ 'ಇವೆ' ಎನಿಸಿ ಕೊಳ್ಳುವದರಿಂದಲೂ ಪ್ರಪಂಚದಲ್ಲಿರುವ ಚೇತನಾಚೇತನವಸ್ತುಗಳನ್ನು 'ಭೂತ' ಎನ್ನುತ್ತಾರೆ. ಇಂಥ ಭೂತ(ವಸ್ತು)ಗಳಿಗೆಲ್ಲ ಆದಿಕಾರಣನಾಗಿರುವದರಿಂದ ಭಗವಂತ ನನ್ನು ಭೂತಾದಿಃ - ಎಂದು ಸ್ತುತಿಸಿದೆ. **(30)** ಈಗ **ನಿಧಿರವ್ಯಯಃ** - ಎಂಬ ನಾಮವನ್ನು ನೋಡೋಣ. ಇದಕ್ಕೆ ವಿಶೇಷಣವಾಗಿ 'ಅವ್ಯಯ' ಎಂಬ ಶಬ್ದವೂ ಇದೆ. ಆದ್ದರಿಂದ ಅವ್ಯಯವಾದ ನಿಧಿ - ಎಂದಾಗುತ್ತದೆ. ಭಗವಂತನೊಬ್ಬನೇ ಇಂಥ ಅವ್ಯಯನಿಧಿಯಾಗಿದ್ದಾನೆ. ಹೇಗೆಂದರೆ : ಲೋಕದಲ್ಲಿ ವಿದ್ಯೆ, ಧನ ಎಂಬ ಎರಡು ನಿಧಿಗಳಿವೆ. ಇವುಗಳಲ್ಲಿ ವ್ಯಯವಾಗುವ ನಿಧಿಯು ಧನವು. ಈ ಧನವು ಖರ್ಚಾ ದಂತೆಲ್ಲ ಮತ್ತೆಮತ್ತೆ ಸಂಗ್ರಹಿಸಬೇಕಾಗುತ್ತದೆ. ಆದರೆ ವಿದ್ಯೆಯು ಬೇರೊಬ್ಬರಿಗೆ ದಾನಮಾಡಿದಷ್ಟು ವೃದ್ಧಿಯಾಗುತ್ತದೆ. ಈ ಅರ್ಥದಲ್ಲಿ ವಿದ್ಯೆಗಿಂತಲೂ ಅವ್ಯಯವಾದ ನಿಧಿಯು ಭಗವಂತನೇ ಆಗಿದ್ದಾನೆ. ಹೇಗೆಂದರೆ ವಿದ್ವಾಂಸನಿಗೆ ವಯೋಧರ್ಮದಿಂದ ಒಂದು ವೇಳೆ ವಿದ್ಯೆಯು ಮರೆತುಹೋಗಿ ಮಸುಕಾಗಲೂಬಹುದು. ಭಗವಂತ ನಾದರೊ, ಎಂದೆಂದೂ ಕ್ಷೀಣವಾಗದ ಹಾಗೂ ಸವೆಯುವ ವಸ್ತುವಾಗಿದ್ದಾನೆ. ಆದ್ದರಿಂದ ಅವನನ್ನು **'ಅವ್ಯಯನಿಧಿ'** ಎಂದು ಸ್ತುತಿಸಲಾಗಿದೆ.

**(31)** ಈಗ **ಸಂಭವಃ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಗೀತೆಯಲ್ಲಿ 'ಸಂಭವಾಮಿ ಯುಗೇ ಯುಗೇ' ಎಂದು ಭಗವಂತನೇ ಹೇಳಿರುವಂತೆ ಧರ್ಮಸಂಸ್ಥಾಪಕನಾಗಿ ಆ ಪ್ರಭುವು ಬೇರೆಬೇರೆಯ ನಾಮರೂಪಗಳಿಂದ ಹೊರ

ತೋರಿಕೊಳ್ಳುತ್ತಾನೆ. ಇದನ್ನು 'ಅವತಾರ' (ಇಳಿದುಬರುವಿಕೆ) ಎಂದೂ ಕರೆಯುತ್ತಾರೆ. ಇದೊಂದು ಭಗವಂತನ ಲೀಲೆಯಾಗಿದೆ. ಹೀಗೆ ಹೊರತೋರಿಕೊಳ್ಳುವಿಕೆಯು ಆ ಭಗವಂತನ ನಾಮವಾಗಿಯೇ ಇಲ್ಲಿ ಸ್ತುತಿಸಲ್ಪಟ್ಟು "ಸಂಭವಾಯ ನಮಃ" ಎಂದು ಪ್ರಯುಕ್ತವಾಗಿದೆ. ಅನಂತರ **(32) ಭಾವನಃ** - ಎಂಬ ನಾಮವನ್ನು ನೋಡೋಣ. ಜೀವರುಗಳು ಮಾಡಿದ ಕರ್ಮಗಳಿಗೆ ಫಲವನ್ನು ಉಂಟುಮಾಡುವವನಾದ್ದರಿಂದ (ಫಲ) ಭಾವನನೆಂದು ಸ್ತುತಿಸಲಾಗಿದೆ. ಬಾದರಾಯಣರು ತಮ್ಮ ವೇದಾಂತಸೂತ್ರ ದಲ್ಲಿ "**ಫಲಮತ ಉಪಪತ್ತೇಃ**" ಎಂದು ಕರ್ಮಕ್ಕೆ ತಕ್ಕ ಫಲವು ಆ ಭಗವಂತನ ಕಡೆಯಿಂದ ಉಂಟಾಗುವದೆಂದು ತಿಳಿಸಿರುತ್ತಾರೆ. ಆದ್ದರಿಂದ ನಾವು ಮಾಡಿದ ಕರ್ಮಗಳು ಆಯಾ ಕಾಲಕ್ಕೇ ಪೂರೈಸಿ ಕಣ್ಮರೆಯಾದರೂ ಅದರ ಫಲವು ಮಾತ್ರ ಭಗವಂತನ ಕಡೆಯಿಂದ ಕರ್ತೃವಿಗೆ ಉಂಟಾಗಿಯೇ ತೀರುತ್ತದೆ. ಹೀಗೆ ಎಲ್ಲಾ ಕರ್ತೃ ಗಳಿಗೂ ಫಲವನ್ನು ಕೊಡುವವನಾದ್ದರಿಂದ (ಫಲ) 'ಭಾವನ' - ಎಂದರೆ ಫಲವನ್ನು ಕೊಡುವವನು- ಎಂಬರ್ಥದಲ್ಲಿ ಭಾವನನೆಂದು ಸ್ತುತಿಮಾಡಿದೆ.

ಈಗ **(33) ಭರ್ತಾ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಈ ನಾಮವು ಯಜುರ್ವೇದದ ಆರಣ್ಯಕಮಂತ್ರಭಾಗದಲ್ಲಿಯೂ "ಭರ್ತಾ ಸನ್ ಭ್ರಿಯ ಮಾಣೋ ಬಿಭರ್ತಿ" ಎಂದು ಪಠಿತವಾಗಿದೆ. ವ್ಯವಹಾರದಲ್ಲಿ 'ಭರ್ತಾ- ಭಾರ್ಯಾ' ಎಂದು ಗಂಡಹೆಂಡಿರನ್ನು ಸಂಸ್ಕೃತಭಾಷೆಯಲ್ಲಿ ಕರೆಯುತ್ತಾರೆ. ಆದರೆ ಇಲ್ಲಿ ಭರ್ತಾ ಎಂಬುದಕ್ಕೆ ಬಹಳ ವಿಶಾಲವಾದ ಅರ್ಥವಿದೆ. ಇಡಿಯ ಜಗತ್ತಿನ ಆಗುಹೋಗು ಗಳನ್ನೆಲ್ಲ ಕೇವಲ ಲೀಲಾಮಾತ್ರದಿಂದ ನಿರ್ವಹಿಸುವವನೂ ತನ್ನದೇ ಆದ ಶಕ್ತಿ(ಪ್ರಕೃತಿ) ಯನ್ನು ಸಂಪೂರ್ಣವಾಗಿ ಸ್ವಾಧೀನದಲ್ಲಿಟ್ಟುಕೊಂಡು ಜಗದ್ ವ್ಯಾಪಾರವನ್ನು ಮಾಡುವ ಜಾಣ್ಮೆಯುಳ್ಳವನೂ ಆದ ಭಗವಂತನು 'ಸಂಭರ್ತಾ' ಎನಿಸಿರುವನು. ಈ ನಾಮವನ್ನು ವಿಷ್ಣುಪುರಾಣದಲ್ಲಿ ಉಲ್ಲೇಖಿಸಿದೆ. ಹೀಗೆ ಜಗತ್ತಿಗೆ ಆಧಾರನಾಗಿದ್ದು ಜಗತ್ತನ್ನು ಆಳುತ್ತಾ ಸರ್ವರೀತಿಯಿಂದಲೂ ಸ್ವತಂತ್ರನಾಗಿರುವ ಭಗವಂತನನ್ನು 'ಭರ್ತಾ' ಎಂದು ಸ್ತುತಿಸಲಾಗಿದೆ.

ಈಗ **(34) ಪ್ರಭವಃ (35) ಪ್ರಭುಃ (36) ಈಶ್ವರಃ** - ಎಂಬ ನಾಮಗಳನ್ನು ವಿಚಾರಮಾಡೋಣ. ಭವ - ಎಂದರೆ ಹುಟ್ಟು. ಆದರೆ ಭಗವಂತನು ತನ್ನ ಅಂಶದಿಂದ ಹುಟ್ಟಿದಾಗ 'ಅವತಾರ' ವೆನ್ನುತ್ತಾರೆ. ಇದು ನಟನು ವೇಷಹಾಕಿದಂತೆಯೇ ಹೊರತು ಕರ್ಮಬಂಧದಿಂದ ಉಂಟಾದದ್ದು ಅಲ್ಲ. ಆದ್ದರಿಂದಲೇ ಪ್ರಭು - ಯಜಮಾನ - ಎಂದರೆ ಸ್ವತಂತ್ರನು - ಎಂದರ್ಥ. 'ಸ್ವತಂತ್ರೋಭಗವಾನ್ ವಿಷ್ಣುಃ' ಎಂದು ಶ್ರೀ ಮಧ್ವಾಚಾರ್ಯರು ಘೋಷಿಸಿದ್ದಾರೆ. ಈಶ್ವರನೆಂದರೆ ಈಶನ = ಆಳುವಿಕೆಯನ್ನು

ಪೂರ್ಣವಾಗಿ ಉಳ್ಳವನು. ಹಾಗೂ ಅದಕ್ಕೆ ತಕ್ಕ ಜ್ಞಾನ-ಶಕ್ತಿ-ಬಲ-ವೀರ್ಯ-ತೇಜಸ್ಸೇ ಮುಂತಾದ ಗುಣಸಮೂಹಗಳುಳ್ಳವನು ಎಂದರ್ಥ. ಹೀಗೆ ಭಗವಂತನು ಪ್ರಭುವೂ ಈಶ್ವರನೂ ಆಗಿದ್ದಾನೆ.

**ಸ್ವಯಂಭೂಃ ಶಂಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।**
**ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥5॥**

ಈ ಶ್ಲೋಕದಲ್ಲಿ ಒಟ್ಟು ಒಂಭತ್ತು ನಾಮುಗಳಿವೆ. (37) **ಸ್ವಯಂಭೂಃ** - ಎಂಬ ನಾಮವು ಭಗವಂತನು ತಾನೇ ತನ್ನನ್ನು ಉಂಟುಮಾಡಿಕೊಳ್ಳುತ್ತಾನೆ - ಎಂಬರ್ಥದಲ್ಲಿ ಬಂದಿದೆ. ಹೇಗೆ ಬೀಜವು ತಾನೇ ಕಾಯಿಯಾಗಿ ಮಾರ್ಪಡುವದೋ ಹಾಗೆ ಭಗವಂತನು ಯಾವ ಉಪಾಧಿಸಂಪರ್ಕವಾಗಲಿ ಪರಿಣಾಮವಾಗಲಿ ಇಲ್ಲದಂತೆ ತಾನೇ ಜಗತ್ತಿನ ರೂಪವಾಗಿ ಕಾಣಿಸಿಕೊಳ್ಳುತ್ತಾನೆ. ಅವನೇ ತಂದೆ, ತಾಯಿ, ಬಂಧು, ಸ್ನೇಹಿತ, ವಿದ್ಯೆ, ಧನ - ಇತ್ಯಾದಿ ಎಲ್ಲಾ ನಾಮರೂಪಗಳಿಂದ ಹೊರತೋರಿಕೊಳ್ಳುತ್ತಾನೆ - ಎಂದಭಿಪ್ರಾಯ. ಮತ್ತು ಆ ಭಗವಂತನು ತಾನೇ ತಾನಾಗಿ ರೂಪಾಂತರ ಹೊಂದುವದರಿಂದ ಸ್ವತಂತ್ರನಾಗಿದ್ದು ಸ್ವಯಂಭು- ಎನಿಸಿಕೊಂಡಿದ್ದಾನೆ. (38) **ಶಂಭುಃ** - ಎಂದರೆ ಶಂ = ಸುಖವನ್ನು ಭಾವಯತಿ - (ಭಕ್ತರಿಗೆ) ಉಂಟುಮಾಡುತ್ತಾನೆ - ಎಂಬರ್ಥದಲ್ಲಿ ಶಂಭುವೆನಿಸಿದ್ದಾನೆ. ರೂಢಿಯಲ್ಲಿ ಶಂಭು - ಎಂದರೆ ಈಶ್ವರ, ಶಿವ- ಎಂಬರ್ಥವಿದೆ. ಆದರೆ ಈ ಶಬ್ದದ ವ್ಯುತ್ಪತ್ತಿಯಂತೆ ಸುಖರೂಪನು ಎಂದೂ ಅರ್ಥಮಾಡಬಹುದು. (39) **ಆದಿತ್ಯಃ** - ಆದಿತ್ಯನೆಂದರೆ ಸುಪ್ರಸಿದ್ಧನಾದ ಸೂರ್ಯನೆಂಬ ಪ್ರತ್ಯಕ್ಷದೇವತೆ-ಎಂದರ್ಥ. ಹನ್ನೆರಡು ಜನ ಆದಿತ್ಯರಲ್ಲಿ 'ವಿಷ್ಣು' ಎಂಬುವನು ನಾನು-ಎಂದು ಗೀತೆಯು ವಿಭೂತ್ಯಧ್ಯಾಯದಲ್ಲಿದೆ. ಇನ್ನು ಅದಿತಿ- ಎಂದರೆ ಅಖಂಡವಾದ ಭೂಮಿಗೆಲ್ಲ ಇವನೇ ಒಡೆಯನು- ಎಂಬರ್ಥದಲ್ಲಿಯೂ ಆದಿತ್ಯನೆನಿಸಿರುತ್ತಾನೆ. ಇನ್ನು ಸೂರ್ಯನು ಜಗತ್ತಿಗೆಲ್ಲ ಒಬ್ಬನೇ ಆಗಿದ್ದು ಬೇರೆಬೇರೆ ಪಾತ್ರೆಗಳ ನೀರಿನಲ್ಲಿ ಪ್ರತಿಬಿಂಬಿತನಾದಾಗ ನೂರಾರು ಸೂರ್ಯರಂತೆ ಕಾಣುವನೋ ಹಾಗೆ ಎಲ್ಲಾ ಶರೀರಗಳಲ್ಲಿಯೂ ತನ್ನ ಚೈತನ್ಯಶಕ್ತಿಯಿಂದ ಬೆಳಗುತ್ತಿರುವನಾದ್ದರಿಂದಲೂ ಆದಿತ್ಯನೆನಿಸಿರುತ್ತಾನೆ. (40) **ಪುಷ್ಕರಾಕ್ಷಃ** - ನೆಂದರೆ ಕಮಲಕ್ಕೆ ಸಮಾನವಾಗಿರುವ ಎರಡು ಕಣ್ಣುಗಳುಳ್ಳವನು - ಎಂದರ್ಥ. ಛಾಂದೋಗ್ಯೋಪನಿಷತ್ತಿನಲ್ಲಿ ಹಿರಣ್ಮಯ ಪುರುಷನೆಂದು ಭಗವಂತನನ್ನು ಉಪಾಸನೆಮಾಡುವಾಗ ನಸುಗೆಂಪಿನ ಕಮಲದ ಹೂವಿನಂತೆ ಆ ಪರಮಪುರುಷನ ಕಣ್ಣುಗಳು ಇವೆಯೆಂದು ವರ್ಣಿಸಲಾಗಿದೆ. ಹೀಗೆ ಭಗವಂತನು ಪುಷ್ಕರಾಕ್ಷನೆನಿಸಿರುತ್ತಾನೆ. (41) **ಮಹಾಸ್ವನಃ** - ನೆಂದರೆ ಹೆಚ್ಚಾದ ಧ್ವನಿಯುಳ್ಳವನು - ಎಂದು ಅರ್ಥ. ವೇದಾಧ್ಯಯನವನ್ನು ಮಾಡಬೇಕಾದರೆ

ಸ್ಫುಟವಾದ ಇಂಪಾದ ಧ್ವನಿಯಿರಬೇಕು. ಆದರೆ ಭಗವಂತನು ನಾವು ಉಸಿರಾಡುವಷ್ಟು ಸುಲಭವಾಗಿ ವೇದಗಳನ್ನೆಲ್ಲ ಉಚ್ಚರಿಸಿದ್ದಾನೆ. ಮತ್ತು ಅಲೌಕಿಕವಾದ ವೇದಸಾಹಿತ್ಯದಲ್ಲಿ ಸ್ವರಸಂಯೋಜನೆಯೂ ಅದಕ್ಕೆ ಅನುಗುಣವಾದ ಅರ್ಥವೂ ಅಡಕವಾಗಿರುತ್ತವೆ. ಉದಾಹರಣೆಗೆ "ಶ್ರಿಯಾ ಮಾ ಪರಿಪಾತಯ" ಎಂಬಲ್ಲಿ ಮಾ ಎಂಬುದನ್ನು ಅನುದಾತ್ತಸ್ವರದಲ್ಲಿ ಪಠಿಸಬೇಕು. ಆಗ 'ಸಂಪತ್ತಿನಿಂದ ನನ್ನನ್ನು ಕಾಪಾಡು' ಎಂದು ಅರ್ಥವಾಗುತ್ತದೆ. ಹಾಗಲ್ಲದೆ ಉದಾತ್ತಸ್ವರದಿಂದ ಮಾ - ಎಂಬ ಅಕ್ಷರವನ್ನು ಉಚ್ಚರಿಸಿದರೆ 'ಕಾಪಾಡಬೇಡ' ಎಂದಾಗಿಬಿಡುವದು. ಆದ್ದರಿಂದ ಭಗವಂತನೇ ವೇದರೂಪದಿಂದಲೂ ಅವತರಿಸಿರುವದರಿಂದ ಅಂಥ ವೇದವು ಯಾವ ಪುಷ್ಕರಾಕ್ಷನಿಂದ ಹೊರಬಂದಿತೋ ಆ ಮಹಾಮನು ಇಲ್ಲಿ ಸ್ತುತಿಸಲ್ಪಟ್ಟಿದ್ದಾನೆ- ಎಂದಭಿಪ್ರಾಯ.

**(42)** ಈಗ **ಅನಾದಿನಿಧನಃ** - ಎಂಬ ನಾಮವನ್ನು ವಿಚಾರಮಾಡೋಣ. ಆದಿ ಎಂದರೆ ಹುಟ್ಟುವಿಕೆ. ನಿಧನವೆಂದರೆ ನಾಶವಾಗುವಿಕೆ. ಈ ಎರಡೂ ಯಾವನಿಗೆ ಇಲ್ಲವೋ ಅವನು ಅನಾದಿನಿಧನನು. ಭಗವಂತನಾದ ವಿಷ್ಣುವಿಗೆ ಹುಟ್ಟುಸಾವುಗಳು ಇರುವದಿಲ್ಲ. ಇವನೇ ಎಲ್ಲರ ಆತ್ಮನೂ ಆಗಿರುವನು. ಆದ್ದರಿಂದ ಯಾವನು ತನ್ನ ಆತ್ಮನು ಪರಮಾತ್ಮನೇ ಎಂದರಿತುಕೊಳ್ಳುವನೋ ಅಂಥವನಿಗೆ ಜನನಮರಣಗಳಿರುವದಿಲ್ಲ. ಇಂಥ ತಿಳಿವಳಿಕೆಯುಳ್ಳವನೇ ಜ್ಞಾನಿಯು. ಅನಂತರ **(43) ಧಾತಾ (44) ವಿಧಾತಾ** - ಎಂಬ ನಾಮಗಳು. ಜಗತ್ತನ್ನು ಆದಿಶೇಷರೂಪದಿಂದ ಭಗವಂತನು ಧರಿಸಿದ್ದಾನೆ; ಹಾಗೂ ಆ ಆದಿಶೇಷನನ್ನೂ ಆ ಭಗವಂತನೇ ವಿಧಾತನಾಗಿ-ಎಂದರೆ ವಿಶೇಷರೂಪನಾಗಿ ಧರಿಸಿದ್ದಾನೆ- ಎಂದರ್ಥ. ಇಡಿಯ ಬ್ರಹ್ಮಾಂಡವನ್ನೆಲ್ಲ ತನ್ನ ಬಲಶಕ್ತಿ ವೀರ್ಯಾದಿಗಳಿಂದ ಲೀಲಾಮಾತ್ರದಿಂದ ಧರಿಸಿರುವ ಆ ಭಗವಂತನು ಎಲ್ಲಕ್ಕಿಂತಲೂ ಮಿಗಿಲಾಗಿದ್ದು ಹದಿನಾಲ್ಕು ಲೋಕಗಳನ್ನೂ ಧರಿಸಿರುವವನು- ಎಂದಭಿಪ್ರಾಯ. ಈ ಪರಮಾತ್ಮನೇ ಮತ್ತೆ **(45) ಧಾತುರುತ್ತಮಃ** - ನೆನಿಸಿರುತ್ತಾನೆ. ಚಿದ್ರೂಪನಾಗಿ ಎಲ್ಲಾ ಶರೀರೋಪಾಧಿಗಳನ್ನೂ ವ್ಯಾಪಿಸಿಕೊಂಡು ಭೂಮಿಯೇ ಮುಂತಾಗಿ ಧಾತುಗಳಿಗಿಂತ ಉತ್ತಮಧಾತು (ಜಗತ್ತನ್ನೆಲ್ಲ ವ್ಯಾಪಿಸಿ ತನ್ನಲ್ಲಿಯೇ ಅಡಕಮಾಡಿಕೊಂಡಿರುವವನಾಗಿ) ವೆನಿಸಿರುತ್ತಾನೆ-ಎಂದಭಿಪ್ರಾಯ.

**ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ ।**
**ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥6॥**

ಈ ಶ್ಲೋಕದಲ್ಲಿ ಒಟ್ಟು ಒಂಭತ್ತು ನಾಮಗಳಿವೆ. ಸ್ಥವಿರೋ ಧ್ರುವಃ - ಎಂಬಿದು ಒಂದೇ ನಾಮವು. **(46)** ಈಗ **ಅಪ್ರಮೇಯಃ** - ನೆಂಬ ನಾಮವನ್ನು ವಿಚಾರ

ಮಾಡೋಣ. ಭಗವಂತನು ಪ್ರತ್ಯಕ್ಷಾದಿಪ್ರಮಾಣಗಳಿಗೆ ಗೋಚರನಲ್ಲದ್ದರಿಂದ ಅಪ್ರಮೇಯ (ಪ್ರಮೇಯನಲ್ಲದವನು) ನೆನಿಸಿರುತ್ತಾನೆ. ಆದರೆ ಪ್ರಮಾಣಗಳೇ ಅವನಲ್ಲಿ ಇಲ್ಲವಾದರೆ ಶೂನ್ಯನೆಂದಾಗುವದಿಲ್ಲವೆ? ಎಂದರೆ ಹಾಗಲ್ಲ. ಪ್ರಮಾಣಗಳನ್ನು ಬಳಸಿಯೇ ಪ್ರಮೇಯಗಳನ್ನು ನಾವು ಅರಿಯುವೆವು - ಎಂಬುದು ಸರಿ. ಆದರೆ ಪ್ರಮಾತೃವನ್ನು ತಿಳಿಯಲು ಪ್ರಮಾಣವು ಬೇಕಿಲ್ಲ. ಏಕೆಂದರೆ ಪ್ರಮಾತೃವು ಸ್ವತಃ ಸಿದ್ಧನು. ಅವನಿರುವದರಿಂದಲೇ ಪ್ರಮೇಯಗಳನ್ನು ಪ್ರಮಾಣಗಳಿಂದ ತಿಳಿಯುವದು ಸಾಧ್ಯವಾಗುತ್ತಿದೆ. ದೀಪದ ಬೆಳಕಿನಿಂದ ವಸ್ತುಗಳನ್ನು ನೋಡುವದು ಸರಿ. ಆದರೆ ದೀಪವನ್ನು ನೋಡಲು ಮತ್ತೊಂದು ದೀಪವು ಬೇಕೇನು? ಹಾಗೆಯೇ ಇಲ್ಲಿಯೂ ತಿಳಿಯಬೇಕು. ದೀಪವು ತನ್ನನ್ನೂ ಬೆಳಗಿಸಿಕೊಂಡು ಇತರ ವಸ್ತುಗಳನ್ನೂ ಬೆಳಗುತ್ತದೆ. ಅದನ್ನು ಬೆಳಗಲು ಮತ್ತೊಂದು ದೀಪವು ಬೇಡ. ಹಾಗೆಯೇ ಭಗವಂತನನ್ನು ತಿಳಿಯಲು ಮತ್ತೊಬ್ಬ ಪ್ರಮಾತೃವು ಬೇಕಿರುವದಿಲ್ಲ. ಅವನು ನಮ್ಮ ಆತ್ಮನೇ ಆಗಿದ್ದು ಅನಾತ್ಮಗಳನ್ನೆಲ್ಲ ಬೆಳಗುತ್ತಾನೆ. ಹೀಗೆ ನಮ್ಮ ಆತ್ಮನೇ ಆಗಿರುವ ಭಗವಂತನು ಪ್ರಮೇಯನಲ್ಲ. ಅದನ್ನವಲಂಬಿಸಿಯೇ ಇಲ್ಲಿ ಅಪ್ರಮೇಯನೆಂದು ಸ್ತುತಿಸಲಾಗಿದೆ. **(47) ಈಗ ಹೃಷೀಕೇಶಃ** -ನೆಂಬ ನಾಮವನ್ನು ವಿಚಾರಮಾಡೋಣ. ಹೃಷೀಕಗಳೆಂದರೆ ಇಂದ್ರಿಯಗಳು. ಅವುಗಳಿಗೆ ಒಡೆಯನು-ಎಂಬರ್ಥದಲ್ಲಿ ಈ ನಾಮವು ಬಂದಿದೆ. ಜೀವರುಗಳಾದ ನಮಗೆ ಮನಸ್ಸು ವ್ಯವಹಾರಕ್ಕೆ ಆಧಾರವಾಗಿದೆ. ಆದರೆ ಅದು ನಮ್ಮ ಅಧೀನದಲ್ಲಿಲ್ಲ. ನಾವೇ ಅದಕ್ಕೆ ವಶರಾಗಿದ್ದೇವೆ. ಹೀಗಾಗಿ ನಾವು ಮನಸ್ಸಿನ ಮೂಲಕ ಹೃಷೀಕಗಳ ಅಡಿಯಾಳಾಗಿರುವೆವು. ಭಗವಂತನಾದರೊ ಇವುಗಳಿಗೆ ಪ್ರೇರಕನಾಗಿದ್ದು ಚೈತನ್ಯವನ್ನೂ ನೀಡಿರುತ್ತಾನೆ. ಅವನ ಪ್ರೇರಣೆಯಿಂದಲೇ ಇಡಿಯ ಕಾರ್ಯಕರಣಸಂಘಾತವೆಲ್ಲ ವ್ಯಾಪಾರಮಾಡುತ್ತದೆ. ಈ ವಿಷಯಕ್ಕೆ 'ಕೇನೇಷಿತಂ ಪತತಿ ಪ್ರೇಷಿತಂ ಮನಃ' ಎಂಬ ಕೇನೋಪನಿಷತ್ತಿನ ವಾಕ್ಯವು ಆಧಾರವಾಗಿದೆ. ಹೀಗೆ ಇಂದ್ರಿಯಗಳಿಗೆ ಶಕ್ತಿಯನ್ನು ನೀಡಿ ಅವುಗಳನ್ನು ಪ್ರೇರಿಸುವ ಭಗವಂತನು ಅನ್ವರ್ಥವಾಗಿ 'ಹೃಷೀಕೇಶ' ನೆನಿಸಿರುತ್ತಾನೆ. **(48) ಈಗ ಪದ್ಮನಾಭಃ** - ನೆಂಬ ನಾಮವನ್ನು ವಿಚಾರಮಾಡೋಣ. ನಾಭಿ - ಎಂದರೆ ಹೊಕ್ಕಳು ಎಂದರ್ಥ. ಎಲ್ಲಾ ಜಗತ್ತಿನ ಸೃಷ್ಟಿಗೂ ಆಧಾರವಾದ ವಸ್ತುವನ್ನು ಪದ್ಮ-ಎನ್ನುವರು. ಇಂಥ ನಾಭಿಕಮಲವು ಭಗವಂತನಲ್ಲಿ ನೆಲೆಸಿದ್ದು ಸೃಷ್ಟಿಕಾಲದಲ್ಲಿ ಇಡಿಯ ಜಗತ್ತೆಲ್ಲವೂ ಆ ದೇವನ ನಾಭಿಯಿಂದಲೆ ಹೊರಬರುವದು. ಆದ್ದರಿಂದ ಭಗವಂತನು ಪದ್ಮನಾಭನೆನಿಸಿರುತ್ತಾನೆ. ಸನಾತನಧರ್ಮಾನುಯಾಯಿಗಳಲ್ಲಿ ಕೆಲವರು ಪ್ರತಿವರ್ಷವೂ ಭಾದ್ರಪದ ಶುಕ್ಲ ಚತುರ್ದಶಿಯ ದಿನ ಅನಂತಪದ್ಮನಾಭವ್ರತವನ್ನು ಅನುಷ್ಠಿಸುತ್ತಾರೆ. ಹೀಗೆಯೇ ದಕ್ಷಿಣದೇಶದ ಕೆಲವು ಕ್ಷೇತ್ರಗಳಲ್ಲಿ ಅನಂತಪದ್ಮನಾಭಸ್ವಾಮಿಯ ದೇವಾಲಯಗಳೂ ಇವೆ. ಈ ಎಲ್ಲಾ ಸಂದರ್ಭಗಳಿಂದ ಪದ್ಮನಾಭ-ಎಂಬ ಹೆಸರು ಸುಪ್ರಸಿದ್ಧವಾಗಿದೆ.

(49)ಈಗ **ಅಮರಪ್ರಭುಃ** - ಎಂಬ ನಾಮವನ್ನು ವಿಚಾರ ಮಾಡೋಣ. ಅಮರರೆಂದರೆ ದೇವತೆಗಳು. ಇಂದ್ರನೇ ಮೊದಲಾದ ಎಲ್ಲಾ ದೇವತೆಗಳಿಗೂ ಈ ಭಗವಂತನೇ ಒಡೆಯನು. ದೇವಲೋಕದ ಒಡೆಯನು ಇಂದ್ರನೆಂಬುದು ಸರಿ. ಆದರೆ ಭಗವಂತನ ಸೃಷ್ಟಿಯಲ್ಲಿ ಹದಿನಾಲ್ಕು ಲೋಕಗಳಿದ್ದು ಅವುಗಳಿಗೆ ಪ್ರತ್ಯೇಕವಾಗಿ ಒಡೆಯರಿದ್ದಾರೆ. ಅವರಲ್ಲಿ ಇಂದ್ರನು ಹಿರಿಯನು. ಇಂಥ ದೇವೇಂದ್ರನೂ ಭಗವಂತನಿಗೆ ಅಧೀನನಾಗಿರುತ್ತಾನೆ. ಆದ್ದರಿಂದ ಅಮರಪ್ರಭು- ಎನಿಸಿರುತ್ತಾನೆ. ಇನ್ನು (50) **ವಿಶ್ವಕರ್ಮಾ** -ಎಂಬ ನಾಮವನ್ನು ವಿಚಾರಮಾಡೋಣ. ವಿಶ್ವ ಎಂದರೆ ಜಗತ್ತು. ಇದರಲ್ಲಿರುವ ಎಲ್ಲಾ ಚೇತನಾಚೇತನಪದಾರ್ಥಗಳೂ ಗ್ರಹ-ನಕ್ಷತ್ರ ಮಂಡಲಗಳೂ ನಮ್ಮೊಳಗೇ ಇರುವ ಇಂದ್ರಿಯ ಮನೋಬುದ್ಧಿಗಳೂ- ಇತ್ಯಾದಿರೂಪವಾದ ಇಡಿಯ ಜಗತ್ತೆಲ್ಲ ಸೃಷ್ಟಿಮಾಡಿರುವ ಅದ್ಭುತಶಕ್ತಿಯುಳ್ಳ ಭಗವಂತನು ವಿಶ್ವಕರ್ಮನೇ ಆಗಿದ್ದಾನೆ. ಶ್ರೀಶಂಕರಭಗವತ್ಪಾದರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಹೀಗೆಂದಿರುತ್ತಾರೆ : - ''ನಾಮರೂಪಗಳಿಂದ ಬಿಡಿಬಿಡಿಯಾಗಿ ಪ್ರತಿಯೊಂದೂ ಬೇರೆಬೇರೆಯಾಗಿದ್ದು, ಅನೇಕ ಕರ್ತೃಭೋಕ್ತೃಗಳಿಂದ ಕೂಡಿರುವ, ಹಾಗೂ ಇಂಥ ದೇಶದಲ್ಲಿ ಇಂಥ ಕಾಲದಲ್ಲಿ ಇಂಥ ನಿಮಿತ್ತದಿಂದ ಮಾಡಿದ ಕರ್ಮಕ್ಕೆ ಇಂಥ ಫಲವೆಂಬ ಕಠಿನನಿಯಮವುಳ್ಳದ್ದಾಗಿ, ಎಂಥ ಜಾಣನೂ ಊಹೆಮಾಡಲು ಅಸಾಧ್ಯವಾದ ಈ ಜಗತ್ತನ್ನು ಉಂಟುಮಾಡಿರುವ ಸರ್ವಜ್ಞನೂ ಸರ್ವಶಕ್ತನೂ ಆದ ಭಗವಂತ ನೊಬ್ಬನೇ ವಿಶ್ವಕರ್ಮನು'' ಎಂದು ಭಗವಂತನನ್ನು ಕೊಂಡಾಡಿರುತ್ತಾರೆ. ಅನಂತರ (51) **ಮನುಃ** - ಎಂಬ ನಾಮವನ್ನು ನೋಡೋಣ. ಮನು- ಎಂಬ ಹೆಸರಿನ ಪ್ರಜಾಪತಿಯಾಗಿರುವವನು. ಸೃಷ್ಟಿಕರ್ತನಾದ ಬ್ರಹ್ಮನನ್ನೂ ಮನು - ಎಂದು ಕರೆಯುತ್ತಾರೆ. ಮತ್ತು ಮನುಷ್ಯಕುಲದ ಮೂಲಪುರುಷನೂ ''ಮನು''ವೆನಿಸುತ್ತಾನೆ. ಹೀಗೆ ಭಗವಂತನು ನಾನಾ ರೂಪಗಳಿಂದ ಜಗತ್ತಿನ ಸ್ಥಿತಿಕಾಲದಲ್ಲಿ ತೋರಿಕೊಳ್ಳುತ್ತಾನೆ- ಎಂದಭಿಪ್ರಾಯ. (52) ಈಗ **ತ್ವಷ್ಟಾ** - ಎಂಬ ನಾಮವನ್ನು ಅನುಸಂಧಾನ ಮಾಡೋಣ. ಪ್ರಲಯಕಾಲದಲ್ಲಿ ಸರ್ವಭೂತಗಳನ್ನೂ ಕ್ಷಯಗೊಳಿಸುವನಾದ್ದರಿಂದ (ತನೂಕರಣ-ಕ್ಷಯಗೊಳಿಸುವದು) ತ್ವಷ್ಟಾ ಎನಿಸಿರುತ್ತಾನೆ. ಜಗದ್‌ವ್ಯಾಪಾರದಲ್ಲಿ ಸೃಷ್ಟಿಯಂತೆಯೇ ಲಯವೂ ಅಗತ್ಯವಾದುದು. ಏಕೆಂದರೆ ಹುಟ್ಟಿರುವದೆಲ್ಲ ಹಾಗೆಯೇ ಉಳಿದಿದ್ದರೆ ಹೊಸದಾಗಿ ಹುಟ್ಟುವವುಗಳಿಗೆ ಜಾಗವೇ ಉಳಿಯುತ್ತಿರಲಿಲ್ಲ. ಆದ್ದರಿಂದ ಜಗದ್ ವ್ಯಾಪಾರದಲ್ಲಿ ಸೃಷ್ಟಿಯಂತೆ ಲಯವೂ ಅವಶ್ಯವಾದದ್ದು. ನಾವು ಊಟ ಮಾಡಿದ ಆಹಾರವು ಸಂಜೆಯ ವೇಳೆಗೆ ಪಚನ(ಕ್ಷಯ)ವಾಗಲೇಬೇಕಲ್ಲವೆ? ಹಾಗೆ ಯೇ ಜಗದ್‌ವ್ಯಾಪಾರಕ್ಕೂ ಕ್ಷಯವು ಅಗತ್ಯವಾಗಿದೆ. ಈ ಸ್ವಾತಂತ್ರ್ಯವೂ ಭಗವಂತನ ಅಧೀನದಲ್ಲಿಯೇ ಇದ್ದು ಅವನು ತ್ವಷ್ಟ- ಎನಿಸಿದ್ದಾನೆ. (53)ಈಗ **ಸ್ಥವಿಷ್ಠಃ** - ಎಂಬ ನಾಮವನ್ನು ವಿಚಾರಮಾಡೋಣ. ಎಲ್ಲಕ್ಕಿಂತಲೂ ಹೆಚ್ಚುಸ್ಥೂಲ(ದಪ್ಪ)ವಾಗಿರುವವನು

- ಎಂದರೆ ಮಹತ್ತಿಗಿಂತಲೂ ಮಹತ್ತಾದವನು - ಎಂದರ್ಥ. "ಮಹತೋ ಮಹೀಯಾನ್ " ಎಂದು ಶ್ರುತಿಯೂ ಹೇಳುತ್ತಿದೆ. ಈ ಮಹತ್ತ್ವವು ಎಲ್ಲಾ ಗುಣ - ನಾಮ-ರೂಪಗಳಿಂದಲೂ ಕೂಡಿದ್ದಾಗಿದೆ. ಇನ್ನು ಹಿರಿಯನು - ವೃದ್ಧನು - ಎಂಬರ್ಥದಲ್ಲಿಯೂ ಈ ನಾಮವು ಪ್ರಯುಕ್ತವಾಗಿರುತ್ತದೆ. **(54) ಸ್ಥವಿರಃ** - ಎಂಬ ನಾಮದೊಡನೆ **ಧ್ರುವಃ** ಎಂಬುದೂ ಸೇರಿದ್ದು ಒಂದೇ ನಾಮವಾಗಿದೆ. ಸ್ಥಿರವಾಗಿರುವವನು - ಹಾಗೂ ಶಾಶ್ವತನು ಎಂದಭಿಪ್ರಾಯವಾಗುತ್ತದೆ. ಆದರೆ ವ್ಯವಹಾರದಲ್ಲಿ ಸ್ಥವಿರ - ಮುದುಕನು ಎಂಬ ಅರ್ಥವಿದೆ. ಇಲ್ಲಿ ಸ್ಥಿರವಾಗಿರುವವನು ಎಂದರ್ಥ. ಭಗವಂತನಿಗೆ ಕಾಲದೇಶಗಳ ಚೌಕಟ್ಟು ಇರುವದಿಲ್ಲ. ಅವುಗಳನ್ನು ಮೀರಿದವನಾಗಿರುತ್ತಾನೆ. ಆಗ ಧ್ರುವ-ಎಂಬ ನಾಮವೂ ಸೇರಿ ಈ ಅರ್ಥವನ್ನು ದೃಢಗೊಳಿಸುತ್ತದೆ.

**ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ ।**
**ಪ್ರಭೂತಸ್ತ್ರಿಕಕುಬ್ಧಾಮ ಪವಿತ್ರಂ ಮಂಗಲಂ ಪರಮ್ ॥7॥**

(55) ಈಗ **ಅಗ್ರಾಹ್ಯಃ** - ಕರ್ಮೇಂದ್ರಿಯಗಳಿಂದ ಗ್ರಹಿಸಲು ಬಾರದವನು-ಎಂಬರ್ಥದಲ್ಲಿ ಅಗ್ರಾಹ್ಯನೆಂದಿದೆ. ಉಪನಿಷತ್ತಿನಲ್ಲಿ ಹೀಗಿದೆ : "ಮಾತು-ಮನಸ್ಸುಗಳು ಆ ಆತ್ಮನನ್ನು ಮುಟ್ಟಲಾರದೆ ಹಿಂದಿರುಗುತ್ತವೆ". ಇದರ ಅಭಿಪ್ರಾಯವೇನೆಂದರೆ : ಆ ಆತ್ಮಶಕ್ತಿಯ ಬಲದಿಂದಲೇ ಅದರ ಹಿನ್ನೆಲೆಯಲ್ಲಿಯೇ ಮಾತು - ಕೈ ಕಾಲುಗಳು ಮುಂತಾದವು ಕೆಲಸಮಾಡುತ್ತವೆ. ಆದ್ದರಿಂದ ಅವು ಆತ್ಮನನ್ನು ಮುಟ್ಟಲಾರವು. "ನನ್ನ ತಾತನ ಮದುವೆಯಲ್ಲಿ ನಾನೇ ತುಪ್ಪವನ್ನು ಬಡಿಸಿದೆನು" ಎಂದು ಮೊಮ್ಮಗನು ಹೇಳಿದರೆ ಅದು ಹೇಗೆ ಅಸಂಭವವೋ ಹಾಗೇ ಪರಮಾತ್ಮನನ್ನು ಕರ್ಮೇಂದ್ರಿಯಗಳು ಮುಟ್ಟುವದೂ ಅಸಂಭವವೇ ಆಗಿದೆ. ಹೀಗೆ ಭಗವಂತನು ಅಗ್ರಾಹ್ಯನೆನಿಸಿರುತ್ತಾನೆ. **(56)** ಈಗ **ಶಾಶ್ವತಃ** - ನೆಂಬ ನಾಮವನ್ನು ವಿಚಾರಮಾಡೋಣ. ಗೀತೆಯಲ್ಲಿ ಆತ್ಮನನ್ನು ವರ್ಣಿಸುವಾಗ "ಅಜೋ ನಿತ್ಯಃ ಶಾಶ್ವತಃ" ಎಂದಿದೆ. ಇಲ್ಲಿ "ಶಶ್ವದ್ ಭವಃ ಶಾಶ್ವತಃ" ಎಂದು ಶಂಕರಭಾಷ್ಯದಲ್ಲಿ ವಿವರಣೆಯಿದೆ. ಎಂದೆಂದಿಗೂ ಎಲ್ಲಾ ಕಾಲಕ್ಕೂ ಇದ್ದಂತೆಯೇ ಇರುವವನು; ಯಾವ ಮಾರ್ಪಾಡೂ ಇಲ್ಲದವನು - ಎಂದಭಿಪ್ರಾಯ. ಮಹಾನಾರಾಯಣೋಪನಿಷತ್ತಿನ "ಶಾಶ್ವತಂ ಶಿವಮುಚ್ಯುತಮ್" ಎಂಬ ವಾಕ್ಯವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು. ಇನ್ನು **(57)ಕೃಷ್ಣಃ** - ಎಂಬ ನಾಮವನ್ನು ವಿಚಾರಮಾಡೋಣ. ಕೃಷ್-ಎಂಬುದು ಭೂವಾಚಕವೆಂದೂ ಣ ಎಂಬುದು ನಿರ್ವೃತಿ (ಆನಂದ)ವಾಚಕವೆಂದೂ ವ್ಯಾಸರ ವಚನವಿದೆ. ಭೂ - ಸತ್ತಾಯಾಮ್ ಎಂಬ ವ್ಯಾಕರಣ ವಿವರದಂತೆ ಯಾವಾಗಲೂ ಇದ್ದುಕೊಂಡಿರುವ ಸದ್ರೂಪವಾದ ವಸ್ತು - ಎಂದರ್ಥ.

ಇನ್ನು "ಣ" ಎಂದರೆ ನಿರ್ವೃತಿ - ಆನಂದರೂಪವಾದದ್ದು - ಎಂದಾಗುತ್ತದೆ. ಹೀಗೆ ಯಾವಾಗಲೂ ಇದ್ದುಕೊಂಡು ಆನಂದರೂಪವಾಗಿರುವ ವಸ್ತುವೆಂದರೆ ಸದಾನಂದ ಸ್ವರೂಪವಾದ ಪರಬ್ರಹ್ಮವು ಎಂದು ಸಿದ್ಧವಾಗುತ್ತದೆ. ಕೃಷ್ಣಾವತಾರದಲ್ಲಿ ಈ ಸದಾನಂದ ತತ್ತ್ವವು ಸ್ಫುಟವಾಗಿ ಗೊತ್ತಾಗುತ್ತದೆ. ಹೇಗೆಂದರೆ ಕೃಷ್ಣನ ಚರಿತ್ರೆಯಲ್ಲಿ ಅಳುವದೆಂಬ ಸನ್ನಿವೇಶವೇ ಇಲ್ಲ. ಮಗುವಾದಾಗಲೂ ಕೃಷ್ಣನು ಅಳಲಿಲ್ಲ. ಹೀಗೆ ಸದಾನಂದಸ್ವರೂಪವಾದ ಬ್ರಹ್ಮವು ಕೃಷ್ಣನಾಗಿ ಪ್ರಕಟವಾಗಿದ್ದು ಭಗವಂತನ ದಿವ್ಯನಾಮಗಳಲ್ಲಿ ಒಂದಾಗಿರುವದು. **(58)** ಈಗ **ಲೋಹಿತಾಕ್ಷಃ** -ನೆಂಬ ನಾಮವನ್ನು ನೋಡೋಣ. ಲೋಹಿತ -ಎಂದರೆ ಕೆಂಪು ಎಂದರ್ಥ. ಇಂಥ ಕೆಂಪಾದ ಕಣ್ಣುಳ್ಳವನೆಂದರೆ ಸೂರ್ಯನು-ಎಂದು ತಿಳಿಯಬೇಕು. ಉದಯಾಸ್ತಮಕಾಲಗಳಲ್ಲಿ ಸೂರ್ಯನು ನಸುಗೆಂಪು ಬಣ್ಣವುಳ್ಳವನಾಗಿರುತ್ತಾನೆ. ಆ ಸೂರ್ಯಾಂತರ್ಗತನಾದ ಪರಬ್ರಹ್ಮನನ್ನು ಇಲ್ಲಿ ಲೋಹಿತಾಕ್ಷನೆಂದು ಸ್ತುತಿಸಿದೆ. **(59)**ಈಗ **ಪ್ರತರ್ದನಃ** - ಎಂಬ ನಾಮವನ್ನು ನೋಡೋಣ. ಪ್ರಲಯಕಾಲದಲ್ಲಿ ಎಲ್ಲಾ ಜೀವರುಗಳನ್ನೂ ಹಿಂಸಿಸಿ ನಾಶಗೊಳಿಸುತ್ತಾನೆ-ಎಂಬರ್ಥದಲ್ಲಿ ಈ ನಾಮವು ಬಂದಿದೆ. ಜಗದ್ವ್ಯಾಪಾರಗಳಲ್ಲಿ ಸೃಷ್ಟಿ-ಸ್ಥಿತಿ-ಲಯ-ಈ ಮೂರೂ ಅಡಕವಾಗಿವೆ. ಇವುಗಳು ಸಂಪೂರ್ಣವಾಗಿ ಆ ಪರಮಾತ್ಮನ ಸ್ವಾಧೀನದಲ್ಲಿವೆ. ಆದ್ದರಿಂದ ಪ್ರಲಯಕಾಲದ ಭಗವಂತನ ಕಾರ್ಯವನ್ನು ಉದ್ದೇಶಿಸಿ ಪ್ರತರ್ದನ-ಎಂದು ಸ್ತುತಿಸಿದೆ. **(60)** ಈಗ **ಪ್ರಭೂತಃ** - ಎಂಬ ನಾಮವನ್ನು ವಿಚಾರ ಮಾಡೋಣ. ಜ್ಞಾನ-ಶಕ್ತಿ-ವೀರ್ಯ-ತೇಜಸ್ಸೇ ಮುಂತಾದ ಗುಣಗಳು ಸಮೃದ್ಧಿಯಾಗಿ ಉಳ್ಳವನು ಎಂದರ್ಥ. ಆದ್ದರಿಂದಲೇ ಭಕ್ತರು ತಮ್ಮ ಬಯಕೆಗಳನ್ನು ಭಗವಂತನಲ್ಲಿ ಕೇಳಿಕೊಳ್ಳುತ್ತಾರೆ. ದೇವರು ಕೊಡುವಷ್ಟನ್ನು ಬೇರೆಯಾರೂ ಕೊಡಲಾರರು. ಮತ್ತು ಭಕ್ತನು ಕೇಳಿದ್ದನ್ನೆಲ್ಲ ಕೊಡುವ ಶಕ್ತಿಸಾಮರ್ಥ್ಯ ಔದಾರ್ಯಗಳು ಭಗವಂತನಲ್ಲಲ್ಲದೆ ಬೇರೆ ಯಾರಲ್ಲಿಯೂ ಇರುವದಿಲ್ಲ. ಆದ್ದರಿಂದ ಅವನಿಗೆ "ಪ್ರಭೂತ" ನೆಂಬ ನಾಮವು ಅನ್ವರ್ಥವಾಗಿದೆ. **(61)**ಈಗ **ತ್ರಿಕಕುಬ್‌ಧಾಮ** - ಎಂಬ ನಾಮವನ್ನು ನೋಡೋಣ. ಕಕುಬ್ ಎಂದರೆ ದಿಕ್ಕುಗಳು. ಹಾಗೂ ಮೇಲೆ, ಮಧ್ಯ, ಕೆಳಗೆ-ಎಂಬ ಮೂರು ಆಕಾಶಗಳನ್ನೂ ತ್ರಿಕಕುಬ್ ಎಂದು ಕರೆದಿದೆ. ಭಗವಂತನು ಈ ಎಲ್ಲಾ ಸ್ಥಳಗಳನ್ನೂ ಆಕ್ರಮಿಸಿಕೊಂಡಿರುವನಲ್ಲದೆ ಇವುಗಳನ್ನೂ ಮೀರಿ ಮೇಲಿರುತ್ತಾನೆ. ಇದನ್ನು ಪುರುಷಸೂಕ್ತದಲ್ಲಿ "ಅತ್ಯತಿಷ್ಠತ್ ದಶಾಂಗುಲಮ್" ಎಂದು ವರ್ಣಿಸಲಾಗಿದೆ. ಇಂಥ ಮಹಾಮಹಿಮನು ನಾರಾಯಣನು - ಎಂದಭಿಪ್ರಾಯ. **(62)** ಈಗ **ಪವಿತ್ರಮ್** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ನೆನೆದರೆ ಸಾಕು; ಮಾನವನು ಒಳಗೂ ಹೊರಗೂ ಶುದ್ಧನಾಗುತ್ತಾನೆ-ಎಂದು ಸ್ಮೃತಿಯಿದೆ. ಇನ್ನು

ಪಾಪ, ವಿಘ್ನ - ಮುಂತಾದ ದೋಷಗಳಿಂದ ಬಿಡಿಸಿ ಭಕ್ತರನ್ನು ಕಾಪಾಡುತ್ತಾನೆ-ಎಂಬರ್ಥದಲ್ಲಿಯೂ ಭಗವಂತನು ಪವಿತ್ರನು. **(63)ಈಗ ಮಂಗಲಮ್ ಪರಮ್** - ಎನ್ನುವ ನಾಮವನ್ನು ವಿಚಾರಮಾಡೋಣ. ಅಶುಭಗಳನ್ನು ಕಳೆದುಶುಭಸಂತತಿಯನ್ನು ಉಂಟುಮಾಡುವ ಹಾಗೂ ಮಿಗಿಲಿಲ್ಲದ ಕಲ್ಯಾಣಸ್ವರೂಪನೂ ಸ್ಮರಿಸಿದವರಿಗೆ ಬ್ರಹ್ಮವಿದ್ಯೆಯನ್ನು ಅನುಗ್ರಹಿಸುವವನೂ ಆದ ಭಗವಂತನು ಪರಮಮಂಗಳ ಸ್ವರೂಪನಾಗಿದ್ದಾನೆ -ಎಂದು ಸ್ತುತಿಸಿದೆ.

**ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।**
**ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥8॥**

**(64)ಈಶಾನಃ** - ನೆಂದರೆ ಎಲ್ಲಾ ಜಗತ್ತಿನ ಸ್ಥಾವರಜಂಗಮಪ್ರಾಣಿಗಳನ್ನೂ ತನ್ನ ವಶದಲ್ಲಿಟ್ಟುಕೊಂಡು ಕಟ್ಟುಮಾಡುವವನು - ಎಂದರ್ಥ. ಆ ಭಗವಂತನು ಎಲ್ಲಾ ಜೀವರುಗಳನ್ನೂ ಎಂದರೆ ದೇವತೆಗಳು, ಗ್ರಹಮಂಡಲಗಳು, ಚರಾಚರಪ್ರಾಣಿಗಳು, ಪೃಥಿವಿ, ಜಲ, ತೇಜಸ್ಸು, ವಾಯು, ಆಕಾಶವೇ ಮೊದಲಾದಭೂತಗಳು - ಎಲ್ಲವನ್ನೂ ಆಳುತ್ತಿರುವವನು ಎಂದರ್ಥ. ಭೂತಭವಿಷ್ಯದ್‌ವರ್ತಮಾನಕಾಲಗಳಲ್ಲಿರುವ ಎಲ್ಲಾ ಜೀವರುಗಳೂ ಅವನ ಆಳ್ವಿಕೆಗೆ ಒಳಪಟ್ಟಿರುವರು - ಎಂದಭಿಪ್ರಾಯ. ಹೀಗೆ ಆ ಭಗವಂತನು ಈಶಾನನೆನಿಸಿರುತ್ತಾನೆ. **(65) ಪ್ರಾಣದಃ** -ಎಂದರೆ ಎಲ್ಲಾ ಪ್ರಾಣಿಗಳಿಗೂ ಪ್ರಾಣನಶಕ್ತಿಯನ್ನು ದಯಪಾಲಿಸುವವನು. ಆ ಭಗವಂತನು ಸರ್ವವ್ಯಾಪಕನು. ''ಅವನು ಇಲ್ಲದಿದ್ದರೆ ಯಾವನು ತಾನೆ ಉಸಿರಾಡಿಯಾನು?'' ಎಂದು ಶ್ರುತಿಯಲ್ಲಿದೆ. ಇನ್ನು ಕಾಲರೂಪದಿಂದ ಇದ್ದುಕೊಂಡು ಆಯಾ ಪ್ರಾಣಿಗಳ ಜೀವನವನ್ನು ಅವರವರ ಕರ್ಮಾನುಗುಣವಾಗಿ 'ದ್ಯತಿ'-ಎಂದರೆ ಖಂಡಿಸುತ್ತಾನೆ (ಮುಗಿಸುತ್ತಾನೆ) ಎಂಬರ್ಥದಲ್ಲಿಯೂ 'ಪ್ರಾಣದ'ನೆನಿಸಿರುತ್ತಾನೆ. ಸೃಷ್ಟಿಯಂತೆಯೇ ಪ್ರಲಯವೂ ಆ ಭಗವಂತನ ಅಧೀನದಲ್ಲಿಯೇ ಇರುತ್ತದೆ. ಈ ಅರ್ಥದಂತೆಯೂ 'ಪ್ರಾಣದ' ನೆನಿಸಿರುತ್ತಾನೆ. **(66)ಈಗ ಪ್ರಾಣಃ** -ನೆಂಬ ನಾಮವನ್ನು ವಿಚಾರಮಾಡೋಣ. ಪ್ರ-ಅನ - ಎಂದು ವಿಭಾಗಮಾಡಿದರೆ 'ಅನ-ಚೇಷ್ಟಾಯಾಮ್'-ಎಂಬ ಧಾತ್ವರ್ಥದಂತೆ ಉಸಿರಾಡುವಕ್ರಿಯೆ ಎಂದರ್ಥ. ಭಗವಂತನು ಜೀವರುಗಳಲ್ಲಿ ವ್ಯಾಪಾರಮಾಡುತ್ತಿರುವ ಪ್ರಾಣನಿಗೂ ಪ್ರಾಣನಾಗಿದ್ದಾನೆ. ಆದ್ದರಿಂದ ಅವನನ್ನು ಮುಖ್ಯಪ್ರಾಣನೆನ್ನುವರು. ಅವನು ಚೇತನಾ ಚೇತನ - ಸ್ಥಾವರಜಂಗಮಪ್ರಾಣಿಗಳಲ್ಲೆಲ್ಲ ಅಂತರ್ಯಾಮಿಯಾಗಿದ್ದು ಅನ್ನಮಯಾತ್ಮನಿಗಿಂತ ವ್ಯಾಪಕನಾಗಿದ್ದಾನೆ. ಆದ್ದರಿಂದ ಆ ಭಗವಂತನನ್ನು (ಮುಖ್ಯ) ಪ್ರಾಣನೆಂದು ಇಲ್ಲಿ ಸ್ತುತಿಸಿದೆ. ಅನ್ನಮಯನಿಗಿಂತ ಈ ಪ್ರಾಣಮಯನು ವ್ಯಾಪಕನಾಗಿದ್ದು ಜೀವರುಗಳ ಜೀವನಾಗಿದ್ದಾನೆ.

**(67)** ಈಗ **ಜ್ಯೇಷ್ಠಃ** - ನೆಂಬ ನಾಮವನ್ನು ನೋಡೋಣ. ಜ್ಯೇಷ್ಠನೆಂದರೆ ಹಿರಿಯನು - ಎಂದರ್ಥ. ರುದ್ರಾಧ್ಯಾಯದಲ್ಲಿ "ನಮೋ ಜ್ಯೇಷ್ಠಾಯ ಚ ಕನಿಷ್ಠಾಯ ಚ" ಎಂಬ ಸ್ತುತಿಯಿದೆ. ಭಗವಂತನು ಹಿರಿಯನೂ ಕಿರಿಯನೂ ಎರಡೂ ಆಗಿರುತ್ತಾನೆ - ಎಂದರೆ ಹಿರಿಯರಲ್ಲಿಯೂ ಕಿರಿಯರಲ್ಲಿಯೂ ಆತ್ಮಸ್ವರೂಪ ದಿಂದಿರುತ್ತಾನೆ -ಎಂದರ್ಥ. ಸರ್ವವ್ಯಾಪಕನಾದ್ದರಿಂದ ಅವನು ಎಲ್ಲವೂ ಆಗಿರುವದು ಅತಿಶಯವೇನೂ ಅಲ್ಲ. ಹಾಗೆಯೇ **(68)** **ಶ್ರೇಷ್ಠಃ** - ನೂ ಆಗಿದ್ದಾನೆ. ಶ್ರೇಷ್ಠನೆಂದರೆ ಅತ್ಯಂತ ಉತ್ತಮನು ಎಂದರ್ಥ. ದುರ್ಯೋಧನನು ಕೌರವರಲ್ಲಿ ಜ್ಯೇಷ್ಠನಾಗಿದ್ದರೂ ಶ್ರೇಷ್ಠನಾಗಿರಲಿಲ್ಲ. ಆದರೆ ಭಗವಂತನು ಜ್ಯೇಷ್ಠನೂ ಶ್ರೇಷ್ಠನೂ ಆಗಿರುತ್ತಾನೆ. ಸರ್ವಕ್ಕೂ ಕಾರಣನಾದ್ದರಿಂದ ಜ್ಯೇಷ್ಠ (ಹಿರಿಯ)ನೂ ಶ್ರೇಷ್ಠ(ಉತ್ತಮ)ನೂ ಆಗಿರುವ ಭಗವಂತನು ಇಲ್ಲಿ ಸ್ತುತ್ಯನಾಗಿದ್ದಾನೆ. **(69)** ಈಗ **ಪ್ರಜಾಪತಿಃ** - ಎಂಬ ನಾಮವನ್ನು ವಿಚಾರಮಾಡೋಣ. ಪ್ರಜೆಗಳಿಗೆಲ್ಲ ಒಡೆಯನು ಎಂದರ್ಥ. ದೇವತೆಗಳ ಗುಂಪಿಗೆಲ್ಲ ಪ್ರಜಾಪತಿ(ಬ್ರಹ್ಮ)ಯೇ ಯಜಮಾನನು ಅವನೇ ಯಜ್ಞಾದಿಕರ್ಮಗಳಲ್ಲಿ ಮುಖ್ಯನು. ಅವನನ್ನು ಬಿಟ್ಟು ಬೇರೆ ಯಾವ ದೇವತೆಗಳೂ ಮಿಗಿಲಾದವರಿಲ್ಲ. ಮನುಷ್ಯರ ಬಯಕೆಗಳನ್ನೆಲ್ಲ ನೆರವೇರಿಸುವವನು ಪ್ರಜಾಪತಿಯು-ಎಂದು ವೇದದಲ್ಲಿ ಸ್ತುತಿಸಿದೆ. ಆ ಹೆಸರಿನಿಂದಲೂ ಶ್ರೀಮಹಾವಿಷ್ಣುವೇ ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. **(70)** ಈಗ **ಹಿರಣ್ಯಗರ್ಭಃ** - ನೆಂಬ ನಾಮವನ್ನು ನೋಡೋಣ. ಇದು ಬ್ರಹ್ಮನಿಗೆ ಅನ್ವಯಿಸುವ ನಾಮವಾದರೂ ಜಗತ್ತೆಲ್ಲವೂ ಅಂಡ(ಮೊಟ್ಟೆ)ವಾಗಿದ್ದು, ಹಾಗೂ ಚಿನ್ನದಿಂದಾಗಿದ್ದು - ಈ ಮೊಟ್ಟೆಯು ಯಾವನ ಹೊಟ್ಟೆಯಲ್ಲಿ ಅಡಕವಾಗಿರುವದೋ ಅವನೇ ಹಿರಣ್ಯ ಗರ್ಭನು-ಎಂಬರ್ಥದಲ್ಲಿ ಸ್ತುತಿಸಲಾಗಿದೆ. ಬ್ರಹ್ಮನನ್ನು ಹಿರಣ್ಯಗರ್ಭನೆಂದು ಕರೆದ ಮೇಲೂ ತೃಪ್ತಿಯಾಗದೆ ಶಾಸ್ತ್ರವು ಆ ಬ್ರಹ್ಮನು ಕೂಡ ಯಾವ ಬ್ರಹ್ಮಾಂಡದಲ್ಲಿ ಅಡಕವಾಗಿದ್ದು, ಅನಂತರ ಅಂಡವು ಅವ್ಯಕ್ತ(ಅವ್ಯಾಕೃತ)ದಲ್ಲಿಯೂ ಅದು ನಾರಾಯಣನಲ್ಲಿಯೂ ಅಡಕವಾಗಿರುವದಾಗಿ ಸಮನ್ವಯಮಾಡಿರುವದು ಒಂದು ಪೌರಾಣಿಕಶ್ಲೋಕದಲ್ಲಿದೆ. ಆದ್ದರಿಂದ ಮುಖ್ಯಾರ್ಥದಲ್ಲಿ ಶ್ರೀಮಹಾವಿಷ್ಣುವೇ ಹಿರಣ್ಯ ಗರ್ಭನೆನಿಸುತ್ತಾನೆ. ಅವನನ್ನೇ ನಾರಾಯಣನೆಂದೂ ಹೆಸರಿಸಲಾಗಿದೆ. **(71)** ಈಗ **ಭೂಗರ್ಭಃ** - ಎಂಬ ನಾಮವನ್ನು ನೋಡೋಣ. ಭೂಮಿಯು ಯಾವನ ಗರ್ಭ(ಹೊಟ್ಟೆ)ದಲ್ಲಿದೆಯೋ ಅವನು ಭೂಗರ್ಭನು. ಪಂಚಮಹಾಭೂತಗಳೆಲ್ಲವೂ ಆ ಪರಮಾತ್ಮನಲ್ಲಿಯೇ ಇದ್ದುಕೊಂಡಿವೆ. ಆದರೂ ನಮಗೆ ಭೂಮಿಯೇ ಹೆಚ್ಚು ಆಶ್ರಯ ವಾಗಿರುವದರಿಂದ ಅದನ್ನೇ ನಿರ್ದೇಶಿಸಿ ಆ ಭೂಮಿಯು ಯಾವನಿಂದ ವ್ಯಾಪ್ತ ವಾಗಿದೆಯೋ ಯಾವನಿಗೆ ಭೂಮಿಯು ಪತ್ನಿಯೆನಿಸಿರುವಳೋ ಅವನು ಭೂ ಗರ್ಭನು-ಎಂದು ಸ್ತುತಿಸಲಾಗಿದೆ. **(72)** ಈಗ **ಮಾಧವಃ** - ನೆಂಬ ನಾಮವನ್ನು

ನೋಡೋಣ. ಮಾ ಎಂದರೆ ಲಕ್ಷ್ಮಿ ಎಂದರ್ಥ. ಆಕೆಯ 'ಧವ' ಎಂದರೆ ಪತಿ, ಯಜಮಾನನು ಮಾಧವನು. ಹೀಗೆ ಆ ಭಗವಂತನು ಲಕ್ಷ್ಮೀಪತಿಯೆನಿಸಿರುತ್ತಾನೆ. ಮಾನವರಲ್ಲಿಯೂ ಐಶ್ವರ್ಯಸಂಪನ್ನರಿದ್ದಾರೆ. ಆದರೆ ಅವರುಗಳು ಲಕ್ಷ್ಮೀಪುತ್ರರೇ ಹೊರತು ಪತಿಗಳಲ್ಲ. ಭಗವಂತನಾದರೊ ಲಕ್ಷ್ಮೀಪತಿಯು. ಇನ್ನು ಉಪನಿಷತ್ತಿನಲ್ಲಿ ಬ್ರಹ್ಮವಿದ್ಯೆಯನ್ನು 'ಮಧುವಿದ್ಯೆ' ಎಂದು ಕರೆಯಲಾಗಿದೆ. ಆ ಮಧು(ಬ್ರಹ್ಮ) ವಿದ್ಯೆಯನ್ನು ಜಗತ್ತಿಗೆ ಬೋಧಿಸಿದವನಾದ್ದರಿಂದ ಭಗವಂತನು ಮಾಧವನೆನಿಸಿರುತ್ತಾನೆ-ಎಂದೂ ನಾಮನಿರ್ವಚನವನ್ನು ಮಾಡಬಹುದಾಗಿದೆ. (73) ಈಗ **ಮಧುಸೂದನ** -ನೆಂಬ ನಾಮವನ್ನು ವಿಚಾರಮಾಡೋಣ. ಮಧುವೆಂಬ ಹೆಸರಿನ ರಾಕ್ಷಸನನ್ನು ಸಂಹರಿಸಿದವನಾದ್ದರಿಂದ ಮಧುಸೂದನನೆಸಿರುತ್ತಾನೆ. ಈ ರಾಕ್ಷಸನು ವಿಷ್ಣುವಿನ ಕಿವಿಯಿಂದ ಹುಟ್ಟಿದವನಾಗಿದ್ದನು. ಹಾಗೂ ದೇವತೆಗಳ ವೈರಿಯಾಗಿದ್ದನು. ಇಂಥ ಅಸುರನನ್ನು ಭಗವಂತನು ಲೋಕಕಲ್ಯಾಣದೃಷ್ಟಿಯಿಂದ ಸಂಹಾರಮಾಡಿದನು. ಆದ್ದರಿಂದ 'ಮಧುಸೂದನ'ನೆಂದು ವಿಷ್ಣುವಿಗೆ ಹೆಸರಾಯಿತು. ಭಗವಂತನ ಕೇಶವಾದಿ ಇಪ್ಪತ್ತುನಾಲ್ಕು ದಿವ್ಯನಾಮಗಳಲ್ಲಿ ಮಧುಸೂದನನೆಂಬುದೂ ಒಂದಾಗಿದೆ. ವೈದಿಕರು ಆಚಮನವನ್ನು ಮಾಡುವಾಗ ಈ ನಾಮಗಳನ್ನು ಬಳಸುತ್ತಾರೆ. ಹೀಗೆ ಮಧುಸೂದನನೆಂಬ ನಾಮವು ಭಗವಂತನಿಗೆ ಬಂದಿತು.

**ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।**
**ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥9॥**

**(74) ಈಶ್ವರಃ** - ಎಂಬ ನಾಮವು ಶ್ರೀ ಮಹಾವಿಷ್ಣುವಿಗೂ ಹೊಂದುತ್ತದೆ. ಜಗತ್ತನ್ನೆಲ್ಲ ಈಶನ = ಆಳುವಿಕೆಯಿಂದ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವವನಾದ್ದರಿಂದ ಶ್ರೀಮಹಾವಿಷ್ಣುವು ಈಶ್ವರನೆನಿಸಿರುತ್ತಾನೆ. ವೇದಾಂತಸಿದ್ಧಾಂತದ ಪ್ರಕಾರ ದೇವರು ಒಬ್ಬನೇ ಆಗಿದ್ದು ಎಲ್ಲಾ ನಾಮಗಳೂ ಅವನಿಗೇ ಅನ್ವಯಿಸುತ್ತವೆ. ಪೀಠಿಕೆಯಲ್ಲಿಯೇ ಶ್ರೀಭೀಷ್ಮಾಚಾರ್ಯರು 'ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ' ಎಂದಿರುತ್ತಾರೆ. ಇದರ ಅಭಿಪ್ರಾಯವೇನೆಂದರೆ : ಭಗವಂತನಿಗೆ ಬಳಸಿರುವ ನಾಮ (ಹೆಸರು)ಗಳೆಲ್ಲವೂ 'ಗೌಣನಾಮ'ಗಳು - ಎಂದರೆ ಗುಣಗಳ ಸಂಬಂಧದಿಂದ ಬಂದವುಗಳು-ಎಂದು ಸೂಚಿಸಿರುತ್ತಾರೆ. ಆದ್ದರಿಂದ ಇಲ್ಲಿ ಈಶ್ವರನೆಂದರೆ ಜಗತ್ತನ್ನೆಲ್ಲ ಆಳುವವನು ಎಂದರ್ಥ, ರೂಢನಾಮವಲ್ಲ. **(75) ವಿಕ್ರಮೀ** - ಎಂದರೆ ಪರಾಕ್ರಮವುಳ್ಳವನು ; ಯಾವ ಶತ್ರುವನ್ನಾದರೂ ಜಯಿಸಬಲ್ಲವನು. ಅದರಲ್ಲಿಯೂ ಆಯಾ ಸಂದರ್ಭಕ್ಕೆ ತಕ್ಕಂಥ ನಾಮರೂಪಗಳನ್ನು ಬಳಸಿ ಅಸುರರನ್ನು ಸಂಹರಿಸುವವನು -ಎಂದರ್ಥ. ಉದಾಹರಣೆಗೆ ಹಿರಣ್ಯಕಶಿಪು ಎಂಬ ರಾಕ್ಷಸನು ತನಗೆ ಮನುಷ್ಯರಿಂದಾಗಲಿ

ಪ್ರಾಣಿಗಳಿಂದಾಗಲಿ ಮರಣವು ಬರಬಾರದೆಂಬ ವರವನ್ನು ಬ್ರಹ್ಮನಿಂದ ಪಡೆದಿದ್ದನು. ಆದರೆ ಭಗವಂತನು ಅದಕ್ಕೆ ತಕ್ಕಂತೆ ಅರ್ಧಮನುಷ್ಯ ಅರ್ಧಮೃಗ ರೂಪದಿಂದ 'ನರ-ಸಿಂಹ'ನಾಗಿ ಅವತಾರಮಾಡಿ ಆ ಅಸುರನನ್ನು ಸಂಹರಿಸಿದನು. (76) **ಧನ್ವೀ** - ಎಂದರೆ ಧನಸ್ಸು(ಬಿಲ್ಲು)-ಎಂಬ ಆಯುಧವನ್ನು ಧರಿಸಿರುವನು. ಶ್ರೀಮಹಾವಿಷ್ಣುವು ಧರಿಸಿರುವ ಧನುಸ್ಸಿಗೆ 'ಶಾರ್ಙ್ಗ' ಎಂದು ಹೆಸರು. ಶ್ರೀಮಹಾ ವಿಷ್ಣುವು ರಾಮಾವತಾರವನ್ನು ಮಾಡಿದ್ದಾಗ ಧನುರ್ಧಾರಿಗಳಲ್ಲಿ ಅಗ್ರಗಣ್ಯನಾಗಿದ್ದನು. 'ಶಸ್ತ್ರಧಾರಿಗಳಲ್ಲಿ ರಾಮನು ನಾನು' ಎಂದು ಭಗವದ್ಗೀತೆಯಲ್ಲಿದೆ. ಹೀಗೆ ಧನ್ವೀ ಎಂಬ ನಾಮವು ಭಗವಂತನಿಗೆ ಅನ್ವರ್ಥವಾಗಿದೆ. (77) ಈಗ **ಮೇಧಾವೀ** - ಎಂಬ ಭಗವನ್ನಾಮವನ್ನು ವಿಚಾರಮಾಡೋಣ. ಮೇಧಾ ಎಂದರೆ ಧಾರಣಾಶಕ್ತಿ - ಎಂದರ್ಥ. ವಿದ್ಯೆಯನ್ನು ಗ್ರಹಣಮಾಡಿದರೆ ಸಾಲದು. ಅದನ್ನು ಮರೆಯದಂತೆ ಯಾವಾಗಲೂ ಕಾಪಾಡಿಕೊಂಡಿರಬೇಕು. ಭಗವಂತನು ಸಕಲವಿದ್ಯಾಸಂಪನ್ನನು, ಸರ್ವಜ್ಞನು. ಸೃಷ್ಟಿಯ ಆದಿಯಲ್ಲಿ ಹುಟ್ಟಿದ ಚತುರ್ಮುಖಬ್ರಹ್ಮನಿಗೆ ವೇದಗಳನ್ನೆಲ್ಲ ಅನುಗ್ರಹಿಸಿದನು. ಹೀಗೆ ಆ ಭಗವಂತನು ಪರಿಪೂರ್ಣಮೇಧಾವಿಯೆನಿಸಿರುತ್ತಾನೆ. (78) ಈಗ **ವಿಕ್ರಮಃ** -ನೆಂಬ ನಾಮವನ್ನು ವಿಚಾರಮಾಡೋಣ. ವಾಮನಾವತಾರ ಕಾಲಕ್ಕೆ ಬಲಿರಾಜನಿಂದ ದಾನವಾಗಿ ಪಡೆದ ಮೂರುಹೆಜ್ಜೆಗಳ ಭೂಮಿಯನ್ನು ತನ್ನ ತ್ರಿವಿಕ್ರಮಾವತಾರದಿಂದ ಅಳೆಯುವಾಗ ಭೂಮಿ-ಅಂತರಿಕ್ಷಗಳನ್ನು ಅಳೆದ ಮೇಲೆ ಮೂರನೆಯ ಹೆಜ್ಜೆಗೆ ಸ್ಥಳವಿಲ್ಲವಾಯಿತು. ಇದೇ ವಿಕ್ರಮನೆಂಬ ನಾಮದ ಮಹಿಮೆಯು. (79) ಈಗ **ಕ್ರಮಃ** - ಎಂಬ ನಾಮವನ್ನು ನೋಡೋಣ. ಪಾದ(ಕಾಲು)ವನ್ನು ಊರುವಿಕೆಯು ಕ್ರಮ-ಕ್ರಮಣ ಎನಿಸುತ್ತದೆ. ಗುರುಹಿರಿಯರು ಗೃಹಸ್ಥರ ಮನೆಗೆ ಬಂದಾಗ ಅವರ ಪಾದಧೂಳಿಯು ಗೃಹದಲ್ಲಿ ಬಿದ್ದರೆ ಹಿರಿಯರು ಅದನ್ನು ಪವಿತ್ರವೆಂದೂ ಶ್ರೇಯಸ್ಕರವೆಂದೂ ಭಾವಿಸುತ್ತಾರೆ. ಭಗವಂತನೇ ಆ ರೂಪದಲ್ಲಿ ಬಂದಿದ್ದಾನೆಂಬುದು ಭಕ್ತನ ಭಾವನೆ ಇರುತ್ತದೆ. ಆದ್ದರಿಂದ ಭಗವಂತನ ದಿವ್ಯನಾಮಗಳಲ್ಲಿ 'ಕ್ರಮ' ಎಂಬುದೂ ಮನನೀಯವಾಗಿದೆ.

(80) ಈಗ **ಅನುತ್ತಮಃ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಶ್ರೀವಿಷ್ಣುಭಗವಂತನಿಗಿಂತ ಉತ್ತಮನಾದವನು ಬೇರಾರೂ ಇರುವದಿಲ್ಲ. ಆ ಭಗವಂತನು ಸತ್ತ್ವಗುಣಪರಿಪೂರ್ಣನು. ಭಕ್ತಪರಾಧೀನನು. ಒಮ್ಮೆ ಭೃಗುಮಹರ್ಷಿಯು ವೈಕುಂಠಕ್ಕೆ ಬಂದಾಗ ಭಗವಂತನು ಶೇಷಶಾಯಿಯಾಗಿ ಮಲಗಿದ್ದನು. ಇದನ್ನು ನೋಡಿ ಕೋಪಗೊಂಡ ಆ ಋಷಿಯು ಭಗವಂತನ ಎದೆಗೆ ಕಾಲಿನಿಂದ ಒದ್ದನು. ಆಗ ವಿಷ್ಣುವು ಸಮಾಧಾನದಿಂದಲೇ 'ಓಹೋ ಮಹರ್ಷಿಗಳೆ, ತಮ್ಮ ಪಾದಕ್ಕೆ ಎಷ್ಟು

ನೋವಾಯಿತೋ ! ಕ್ಷಮಿಸಬೇಕು' ಎಂದನು. ಹೀಗೆ ಶ್ರೀ ಮಹಾವಿಷ್ಣುವು ಅತ್ಯಂತ ಸತ್ತ್ವಗುಣಸಂಪನ್ನನಾಗಿದ್ದು ಉತ್ತಮೋತ್ತಮನೆನಿಸಿ 'ಅನುತ್ತಮ'ನೆಂದೇ ಸ್ತುತಿಸಲ್ಪಟ್ಟಿರುತ್ತಾನೆ. ಶ್ರುತಿಯಲ್ಲಿಯೂ 'ಯಸ್ಮಾತ್ ಪರಂ......' (ತೈ.ನಾ) ಎಂಬ ಮಂತ್ರದಲ್ಲಿ ಈ ಭಗವಂತನಿಗಿಂತ ಹೆಚ್ಚಿನವನು ಅಥವಾ ಸೂಕ್ಷ್ಮನು ಯಾವನೂ ಇಲ್ಲವೋ ಎಂದು ಸ್ತುತಿಸಲಾಗಿದೆ. ಭಗವದ್ಗೀತೆಯಲ್ಲಿಯೂ "ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ" (ನಿನಗೆ ಸಮಾನನೇ ಮತ್ತೊಬ್ಬನಿಲ್ಲ ಇನ್ನು ಹೆಚ್ಚಿನವನು ಎಲ್ಲಿದ್ದಾನು?) ಎಂದು ಅರ್ಜುನನು ಸ್ತೋತ್ರಮಾಡಿರುತ್ತಾನೆ. **(81)** ಈಗ **ದುರಾಧರ್ಷಃ** - ಎಂಬ ನಾಮವನ್ನು ನೋಡೋಣ. ರಾಕ್ಷಸರೇ ಮೊದಲಾದ ಯಾವ ಬಲಿಷ್ಠರಿಂದಲೂ ಎದುರಿಸಲು ಅಸಾಧ್ಯನಾದವನು ಎಂದರ್ಥ. ಭಗವಂತನ ಬಲ ಪರಾಕ್ರಮಾದಿಗಳಿಗೆ ಸರಿಸಾಟಿಯು ಯಾವದೂ ಇಲ್ಲ - ಎಂದು ಈ ನಾಮವು ತಿಳಿಸುತ್ತದೆ. ಹೀಗೆ ಶ್ರೀಮಹಾವಿಷ್ಣುವು ವೀರ್ಯಶೌರ್ಯಾದಿಗಳಲ್ಲಿ ಅಪ್ರತಿಮನಾಗಿದ್ದಾನೆ. ಈ ಭಗವಂತನ ವೀರ್ಯವನ್ನು ಅಳೆಯಲು ಸಾಧ್ಯವಿಲ್ಲ. ಒಂದು ವೇಳೆ ಯಾವನಾದರೊಬ್ಬನು ಈ ಭೂಮಿಯನ್ನೇ ಕುಟ್ಟಿ ಪುಡಿಮಾಡಿ ಅದರ ಕಣಗಳನ್ನು ಎಣಿಸುವವನಾದಲ್ಲಿ ಸಾಧ್ಯವಾದೀತು ಎಂದು ವಿಷ್ಣುಸೂಕ್ತದಲ್ಲಿ ಕೊಂಡಾಡಿರುತ್ತದೆ. **(82)** ಈಗ **ಕೃತಜ್ಞಃ** - -ನೆಂಬ ನಾಮವನ್ನು ನೋಡೋಣ. ಕೃತ ಎಂದರೆ ಜೀವರುಗಳು ಮಾಡಿರುವ ಪಾಪ-ಪುಣ್ಯಗಳನ್ನು ಪರಿಪೂರ್ಣವಾಗಿ ಸರಿಯಾಗಿ ಜ್ಞ-ಎಂದರೆ ಬಲ್ಲವನು ಎಂದರ್ಥ. ಇದು ಬಹುಕಷ್ಟಸಾಧ್ಯವು. ಅಥವಾ ಅಸಾಧ್ಯವೆಂದರೂ ಆಗಬಹುದು. ಆದರೆ ಭಗವಂತನಿಗೆ ಈ ಎಲ್ಲಾ ಸಮಸ್ತಜೀವರುಗಳ ಪಾಪಪುಣ್ಯಗಳ ಅರಿವೂ ಪೂರ್ಣವಾಗಿರುತ್ತದೆ. ಅದರಂತೆಯೇ ಪಕ್ಷಪಾತವಿಲ್ಲದೆ ಫಲಗಳನ್ನು ಕೊಡುತ್ತಾನೆ. ಆದ್ದರಿಂದ ಕೃತ-ಎಂದರೆ ಮಾಡಿರುವ ಕರ್ಮಗಳನ್ನು ಜ್ಞ-ಎಂದರೆ ಬಲ್ಲವನಾದ್ದರಿಂದ ಕೃತಜ್ಞನೆನಿಸಿರುತ್ತಾನೆ. ಇನ್ನು ಭಕ್ತರುಗಳು ಭಗವಂತನಿಗೆ ಭಕ್ತಿಯಿಂದ ಮಾಡುವ ಸೇವೆಯನ್ನು ಸ್ವೀಕರಿಸಿ ಅದನ್ನು ಮರೆಯದೆ ಸಕಾಲದಲ್ಲಿ ಫಲವನ್ನು ಕೊಡುತ್ತಾನಾಗಿ ಕೃತಜ್ಞನೆನಿಸಿರುತ್ತಾನೆ. **(83)** ಈಗ **ಕೃತಿಃ** - ಎಂಬ ನಾಮವನ್ನು ನೋಡೋಣ. ಕೃತಿ ಎಂದರೆ ಕ್ರಿಯೆ ಎಂದರ್ಥ. ಪ್ರಯತ್ನವೆಂದೂ ಅರ್ಥ ಮಾಡಬಹುದು. ಭಗವಂತನ ಸಂಕಲ್ಪಕ್ಕೆ ಬಾರದ ಯಾವ ಕೆಲಸವೂ ಫಲದಾಯಕವಾಗುವದಿಲ್ಲ. ಹಾಗೂ ಯಾವ ಪ್ರಯತ್ನವನ್ನು ಮಾಡುವಾಗಲೂ ಆ ಭಗವಂತನ ಸಂಕಲ್ಪವಿಲ್ಲದೆ ನಡೆಯುವದೇ ಇಲ್ಲ. ಈ ಅರ್ಥದಂತೆ ಕೃತಿ - ಎಂದರೆ ಭಗವಂತನೇ ಆಗಿರುತ್ತಾನೆ. ಅವನು ಸರ್ವಾಧಾರನು ಹಾಗೂ ಸರ್ವಾತ್ಮಕನು. ಆದ್ದರಿಂದ ಕೃತಿ ಎನಿಸಿರುತ್ತಾನೆ. ವೈಖಾನಸಾಗಮದಲ್ಲಿರುವ ಈ ಪ್ರಾರ್ಥನೆಯನ್ನು ಕೇಳಿರಿ. ಅದು ಹೀಗಿದೆ : "ಓಂ ಭಗವತೋ ಬಲೇನ, ಭಗವತೋ ವೀರ್ಯೇಣ, ಭಗವತಸ್ತೇಜಸಾ, ಭಗವತ್ಕರ್ಮ ಕರೋಮಿ । ತದ್

ಭಗವಾನನುಮನ್ಯತಾಮ್'' ಇದರ ಅರ್ಥವು ಸರಳವಾಗಿದೆ. ಹೀಗೆ ಈ ಭಗವಂತನ ಕೃತಿಯೇ ಇಲ್ಲಿ ಅವನ ನಾಮಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದೆ. ಇಂಥ ದಿವ್ಯ ನಾಮವನ್ನಾದರೂ ನಾವು ಅನುಸಂಧಾನಮಾಡಿ ಕೃತಾರ್ಥರಾಗೋಣ. **(84)** ಈಗ **ಆತ್ಮವಾನ್** - ಎಂಬ ನಾಮವನ್ನು ಪರಿಚಯ ಮಾಡಿಕೊಳ್ಳೋಣ. ಆ ಭಗವಂತನೇ ಎಲ್ಲರ ಆತ್ಮನೂ ಆಗಿರುತ್ತಾನೆ. ಎಲ್ಲಾ ನಾಮ ರೂಪಗಳನ್ನೂ ಹಾಸುಹೊಕ್ಕಾಗಿ ಹೆಣೆದುಕೊಂಡಿರುತ್ತಾನೆ. ಹಾಗಾದರೆ ಅವನು ಏನನ್ನು ಆಶ್ರಯಿಸಿರುತ್ತಾನೆ? ಎಂಬ ಪ್ರಶ್ನೆಗೆ ಉತ್ತರವಾಗಿ ಉಪನಿಷತ್ತಿನಲ್ಲಿ ''ಸ್ವೇ ಮಹಿಮ್ನಿ'' ಎಂದು ತಿಳಿಸಲಾಗಿದೆ. ಸೂರ್ಯನು ಎಲ್ಲವನ್ನೂ ಬೆಳಗುತ್ತಾನಾದರೂ ಅವನಿಗೆ ಬೆಳಕು ಯಾವದು? ಎಂದು ಕೇಳಿದರೆ ವ್ಯವಹಾರದಲ್ಲಿನ ಉತ್ತರವು ಹೀಗಿದೆ. ಏನೆಂದರೆ ಅವನು ಸ್ವಯಂ ಪ್ರಕಾಶನು. ಹೇಗೆ ದೀಪವು ತಾನೂ ಬೆಳಗುತ್ತಾ ಬೇರೊಂದನ್ನೂ ಬೆಳಗಬಲ್ಲದೋ ಹಾಗೆಯೇ ಸೂರ್ಯನೂ ಸ್ವಯಂಪ್ರಕಾಶನೇ ಆಗಿದ್ದಾನೆ. ಅವನಿಗೂ ಮಿಗಿಲಾದ ಪರಮಾತ್ಮನು ಎಲ್ಲರಿಗೂ ಆತ್ಮ(ಸ್ವರೂಪ)ನಾಗಿದ್ದು ತಾನೂ ಇದ್ದುಕೊಂಡು 'ಆತ್ಮವಾನ್' ಎನಿಸಿರುತ್ತಾನೆ. ಹಿಂದೆ ನಾರದನು ಸನತ್ಕುಮಾರರೆಂಬ ಗುರುಗಳನ್ನು ಬಳಿಸಾರಿ 'ಪೂಜ್ಯರೆ, ಆ ಭಗವಂತನು ಎಲ್ಲಿರುತ್ತಾನೆ? ಯಾವ ಆಧಾರದಲ್ಲಿದ್ದಾನೆ? ಎಂದು ಕೇಳಿದನು. ಆಗ ಅವರು ''ಸರಿ; ಆ ಭಗವಂತನಿಗೆ ಬೇರೆ ಆಧಾರವಿಲ್ಲ. ತನ್ನ ಮಹಿಮೆ ಯಲ್ಲಿಯೇ ತಾನಿರುತ್ತಾನೆ. ಆ ತಾನು- ಎಂಬುದೇ ಆತ್ಮನು'' ಎಂದು ಉತ್ತರಿಸಿದ್ದಾರೆ. ಹೀಗೆ ಭಗವಂತನು ಆತ್ಮವಾನ್ ಎನಿಸಿರುತ್ತಾನೆ.

**ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।**
**ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥10॥**

**(85)** ಈಗ **ಸುರೇಶಃ** - ನೆಂಬ ನಾಮವನ್ನು ವಿಚಾರಮಾಡೋಣ. ಸುರರು ಎಂದರೆ ದೇವತೆಗಳು. ಇವರು ಮೂವತ್ತುಮೂರು ಕೋಟಿ ಸಂಖ್ಯೆಯುಳ್ಳವರೆಂದು ಪುರಾಣಗಳು ತಿಳಿಸುತ್ತವೆ. ಇವರುಗಳು ಸಿದ್ಧಪುರುಷರು. ನಿಗ್ರಹಾನುಗ್ರಹಸಮರ್ಥರು. ಅಮರರು ಎಂದರೆ ಮರಣವಿಲ್ಲದವರು. ಹೇಗೆಂದರೆ ಅಮೃತಪಾನವನ್ನು ಮಾಡಿ ಅಮರರೆನಿಸಿರುತ್ತಾರೆ. ಇಂಥವರಿಗೆ ಈಶ-ಎಂದರೆ ಒಡೆಯನು. ಶ್ರೀಮಹಾ ವಿಷ್ಣುವು. ಆದ್ದರಿಂದ ಸುರೇಶನೆನಿಸಿರುತ್ತಾನೆ. **(86)** **ಶರಣಮ್** - ಎಂಬುದು ಭಗವಂತನ ಇನ್ನೊಂದು ನಾಮವಾಗಿದೆ. ಸಂಕಟದಲ್ಲಿರುವವರು ಶ್ರೀಮಹಾವಿಷ್ಣುವನ್ನು ಸ್ಮರಿಸಿದರೆ, ಮತ್ತು ಆಶ್ರಯಿಸಿದರೆ ಅಂಥವರನ್ನು ಕಾಪಾಡುತ್ತಾನಾದ್ದರಿಂದ ಶರಣಮ್ ಎಂದು ಸ್ತುತಿಸಲಾಗಿದೆ. ಸುಪ್ರಸಿದ್ಧವಾದ ಈ ಶ್ಲೋಕವನ್ನು ನೋಡಿರಿ.

*ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ।*
*ತಸ್ಮಾತ್ ಕಾರುಣ್ಯ ಭಾವೇನ ರಕ್ಷ ರಕ್ಷ ಜನಾರ್ದನ॥*

ಭಾವಾರ್ಥ : "ಹೇ ಜನಾರ್ದನ, ನನಗೆ ಬೇರೆ ಯಾರೂ ದಿಕ್ಕಿಲ್ಲ. ನೀನೊಬ್ಬನೇ ಗತಿ. ಆದ್ದರಿಂದ ಕರುಣೆಯಿಟ್ಟು ನನ್ನನ್ನು ಕಾಪಾಡು, ಕಾಪಾಡು"- ಎಂದರ್ಥ. ಹೀಗೆ ಭಗವಂತನು ಶರಣಾಗತರಕ್ಷಕನೆನಿಸಿದ್ದು 'ಶರಣಮ್' ಎಂಬ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(87)** ಈಗ **ಶರ್ಮ** - ಎಂಬ ನಾಮವನ್ನು ವಿಚಾರಮಾಡೋಣ. ಶರ್ಮವೆಂದರೆ ಸುಖ ಎಂದರ್ಥ. ಹಾಗೂ ಸತ್ತ್ವಗುಣಕ್ಕೂ ಈ ಶಬ್ದವು ಹೊಂದುತ್ತದೆ. ಪುರಾಣದಲ್ಲಿರುವ ಕಥೆಯು ಹೀಗಿದೆ : ಒಮ್ಮೆ ತ್ರಿಮೂರ್ತಿಗಳಲ್ಲಿ ಶ್ರೇಷ್ಠರು ಯಾರು? ಎಂಬ ಜಿಜ್ಞಾಸೆ ಬಂದಾಗ ಈ ಸಮಸ್ಯೆಯನ್ನು ಬಿಡಿಸಲು ಭೃಗುಮುನಿಗಳನ್ನು ಕಳುಹಿಸಲಾಯಿತು. ಆಗ ವೈಕುಂಠಕ್ಕೆ ಬಂದು ಆ ಋಷಿಯು ವಿಷ್ಣುವನ್ನು ಭೇಟಿ ಮಾಡಿದನು. ಆದರೆ ವಿಷ್ಣುವು ಶೇಷಶಾಯಿಯಾಗಿ ಮಲಗಿದ್ದು ಶ್ರೀಲಕ್ಷ್ಮಿಯು ಪಾದಸೇವೆಯನ್ನು ಮಾಡುತ್ತಿದ್ದಳು. ಹೀಗಾಗಿ ವಿಷ್ಣುವು ಏಳಲಿಲ್ಲ. ಭೃಗುವಿಗೆ ಕೋಪ ಬಂದು ತನ್ನ ಕಾಲಿನಿಂದ ಭಗವಂತನನ್ನು ಒದ್ದನು. ಕೂಡಲೆ ವಿಷ್ಣುವು ಎದ್ದುಬಂದು 'ಪೂಜ್ಯರೆ ಕ್ಷಮಿಸಬೇಕು. ತಮ್ಮ ಕಾಲಿಗೆ ಎಷ್ಟು ನೋವಾಯಿತೊ' ಎಂದನು. ಈ ಸಂದರ್ಭದಲ್ಲಿ ಬೇರೆಯುವರಾಗಿದ್ದರೆ ಕಥೆ ಏನಾಗುತ್ತಿತ್ತೋ ತಿಳಿಯದು. ಆದರೆ ಶ್ರೀವಿಷ್ಣುಭಗವಂತನ ಸಾತ್ತ್ವಿಕತೆ, ಋಷಿಮುನಿಗಳಲ್ಲಿ ಗೌರವ, ಮನಸ್ಸಮಾಧಾನ- ಇತ್ಯಾದಿಗಳು ಆ ಮಹಾಮಹಿಮನ ನಡೆವಳಿಕೆಯಿಂದ ಪ್ರಕಟವಾಯಿತು. ಇಂಥ ಶರಣ್ಯನಾದ ಭಗವಂತನ ದಿವ್ಯನಾಮವೇ ಶರ್ಮ ಎಂಬುದಾಗಿದೆ. **(88)** ಈಗ **ವಿಶ್ವರೇತಾಃ** - ಎಂಬ ನಾಮವನ್ನು ನೋಡೋಣ. ರೇತಸ್ಸೆಂಬುದು ಪುರುಷನ ರಸವು. ಪ್ರಜೋತ್ಪತ್ತಿಗೆ ಅದು ಕಾರಣವಾಗಿದೆ. ಆದರೆ ಇಡಿಯ ಜಗತ್ತಿನ ಚರಾಚರಪ್ರಾಣಿಗಳ ಸೃಷ್ಟಿಗೆ ಬೇಕಾದ ವೀರ್ಯವು ಭಗವಂತನಲ್ಲಿ ಮಾತ್ರವೇ ಇದೆ. ಅವನ ಇಚ್ಛಾನುಸಾರ ಪ್ರಕೃತಿಯಲ್ಲಿ ಅದು ಬೆರೆತಾಗ ಜೀವರುಗಳು ಹುಟ್ಟುತ್ತಾರೆ. ಹೀಗೆ ಸ್ಥಾವರಜಂಗಮರೂಪವಾದ ವಿಶ್ವ(ಜಗತ್ತು)ವನ್ನೇ ಸೃಷ್ಟಿಮಾಡುವ ಸಾಮರ್ಥ್ಯವುಳ್ಳ ಆ ಮಹಾವಿಷ್ಣುವು ವಿಶ್ವರೇತನೆಂದು ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. **(89)** ಹಾಗೆಯೇ **ಪ್ರಜಾಭವಃ** - ನೆಂಬ ನಾಮವೂ ಸೃಷ್ಟಿಯಲ್ಲಿನ ಎಲ್ಲಾ ಪ್ರಜೆ(ಜೀವರು)ಗಳನ್ನೂ ಸೃಷ್ಟಿಮಾಡುತ್ತಾನಾದ್ದರಿಂದ ಆ ಭಗವಂತನಿಗೆ ಅನ್ವರ್ಥವಾಗಿ ಹೊಂದುತ್ತದೆ. **(90)** ಈಗ **ಅಹಃ** - ಎಂಬ ನಾಮವನ್ನು ನೋಡೋಣ. ಈ ನಾಮಕ್ಕೆ ಹಗಲು-ಎಂದರ್ಥ. ಭಗವಂತನು ಹಗಲು-ರಾತ್ರಿಗಳ ರೂಪದಲ್ಲಿ ಕಾಲನಾಗಿದ್ದುಕೊಂಡಿದ್ದಾನೆ. ಆದರೆ ಪ್ರಕಾಶರೂಪನಾಗಿರುವದರಿಂದ ಅಹಃ-ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(91)** **ಸಂವತ್ಸರಃ** - ಅಹೋರಾತ್ರಿಗಳ

ರೂಪದ ಕಾಲಗಣನೆಯಿಂದ ವ್ಯವಹರಿಸಲ್ಪಡುವ ಸಂವತ್ಸರನೂ ಆಗಿದ್ದಾನೆ. ಸಂವತ್ಸರವೆಂದರೆ 365 ದಿನಗಳ ಕಾಲದ ಒಂದು ಅವಧಿಯು. ಇಂಥ ಅರವತ್ತು ಸಂವತ್ಸರಗಳು ಕಾಲಗಣನೆಯಲ್ಲಿ ಪ್ರಸಿದ್ಧವಾಗಿವೆ. ಹೀಗೆ ಭಗವಂತನು ಕಾಲಾತ್ಮಕನಾಗಿ ಸಂವತ್ಸರನೆನಿಸಿ ಪ್ರಜಾಪತಿ - ಎಂದು ಉಪನಿಷತ್ತಿನಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. **(92)** ಈಗ **ವ್ಯಾಲಃ** - ನೆಂಬ ನಾಮವನ್ನು ನೋಡೋಣ. ವ್ಯವಹಾರದಲ್ಲಿ ವ್ಯಾಲನೆಂದರೆ ಸರ್ಪ (ಹಾವು) ಎಂದರ್ಥ. ಅದನ್ನು ಕೈಯಲ್ಲಿ ಹಿಡಿಯುವದು ಕಷ್ಟ. ಏಕೆಂದರೆ ನುಣುಚಿಕೊಂಡುಬಿಡುತ್ತದೆ. ಅದರಂತೆ ಭಗವಂತನನ್ನೂ ಮನ- ಇಂದ್ರಿಯಾದಿಗಳಿಂದ ಹಿಡಿಯುವದು ಕಠಿನವೇ ಸರಿ. ಹೀಗೆ ಆ ಪ್ರಭುವು ವ್ಯಾಲದಂತೆ ಅಗ್ರಾಹ್ಯನು - ಎಂದಭಿಪ್ರಾಯ. **(93) ಪ್ರತ್ಯಯಃ**- ಎಂಬುದೂ ಭಗವಂತನ ನಾಮವೇ ಆಗಿದೆ. ಯಾವುದೇ ವಸ್ತುವನ್ನು ವ್ಯವಹಾರದಲ್ಲಿ ಬಳಸುವಾಗ ಅದರ ವಿಷಯುವಾದ ಅರಿವು ಮನಸ್ಸಿನಲ್ಲಿ ಎದ್ದುಕೊಳ್ಳಬೇಕಾಗುತ್ತದೆ. ಇದು ಸರಿ. ಆದರೆ ಆ ಪ್ರತ್ಯಯವನ್ನು ಬೆಳಗುವ ಚೇತನವೇ ಆತ್ಮನು. ಅವನ ಹಿನ್ನೆಲೆಯಿಲ್ಲದೆ ಯಾವ ಅರಿವೂ ಕೆಲಸ ಮಾಡುವದಿಲ್ಲ. ಅವನು ಚೇತನಕ್ಕೂ ಚೇತನನೆಂದೇ ಶ್ರುತಿಯು ತಿಳಿಸುತ್ತದೆ. ಹೀಗೆ ಆಯಾ ವಸ್ತು ವಿಷಯಕವಾದ ಪ್ರತ್ಯಯರೂಪವಾಗಿಯೂ ಭಗವಂತನೇ ತೋರಿಕೊಳ್ಳುತ್ತಾನಾದ್ದರಿಂದ ಪ್ರತ್ಯಯನೆಂದು ಸ್ತುತಿಸಲಾಗಿದೆ. ಪ್ರಜ್ಞಾನವೆಂದರೂ ಈ ಭಗವಂತನೇ, "ಪ್ರಜ್ಞಾನಂ ಬ್ರಹ್ಮ" ಎಂಬ ಶ್ರುತಿಯೂ ಇದೆ. **(94)** ಈಗ **ಸರ್ವ ದರ್ಶನಃ** - ನೆಂಬ ನಾಮವನ್ನು ನೋಡೋಣ. ಭಗವಂತನು ಎಲ್ಲೆಲ್ಲಿಯೂ ಇದ್ದು ಎಲ್ಲಾ ಕಾಲದಲ್ಲಿಯೂ ಎಲ್ಲವನ್ನೂ ನೋಡುತ್ತಲೇ ಇರುವದರಿಂದ ಸರ್ವದರ್ಶನನೆನಿಸಿರುತ್ತಾನೆ. 'ನ ಹಿ ದ್ರಷ್ಟುಃ ದೃಷ್ಟೇರ್ವಿಪರಿಲೋಪೋ ವಿದ್ಯತೇ' ಆ ಭಗವಂತನ ದೃಷ್ಟಿಗೆ ಲೋಪವೇ ಇರುವದಿಲ್ಲ -ಎಂದಭಿಪ್ರಾಯ. ಒಮ್ಮೆ ಒಬ್ಬ ಮಹಾತ್ಮರು ತಮ್ಮ ನಾಲ್ಕಾರು ಶಿಷ್ಯರಿಗೆ ಒಂದೊಂದು ಬಾಳೆಹಣ್ಣುಕೊಟ್ಟು "ಯಾರೂ ಇಲ್ಲದ ಜಾಗದಲ್ಲಿ ಈ ಹಣ್ಣನ್ನು ತಿಂದು ಬನ್ನಿರಿ" ಎಂದರಂತೆ. ಆ ಶಿಷ್ಯರಲ್ಲಿ ಕನಕ-ನೆಂಬ ಶಿಷ್ಯನೂ ಇದ್ದನು. ಎಲ್ಲಾ ಶಿಷ್ಯರೂ ಅಲ್ಲಲ್ಲೇ ಮರೆಯಲ್ಲಿಯೇ ಹಣ್ಣನ್ನು ತಿಂದು ಬಂದು ಗುರುಗಳಿಗೆ ವರದಿಯನ್ನು ಒಪ್ಪಿಸಿದರು. ಆದರೆ ಕನಕನು ಮಾತ್ರ ಹಣ್ಣನ್ನು ಹಾಗೆಯೇ ವಾಪಸ್ಸುತಂದು "ಗುರುಗಳೇ, ಯಾರೂ ಇಲ್ಲದ ಜಾಗವೇ ನನಗೆ ಸಿಗಲಿಲ್ಲ. ಏಕೆಂದರೆ ಭಗವಂತನು ಎಲ್ಲೆಲ್ಲಿಯೂ ಇದ್ದಾನೆ. ಆದ್ದರಿಂದ ಹಣ್ಣನ್ನು ತಿನ್ನಲಾಗಲಿಲ್ಲ." ಎಂದನು. ಗುರುಗಳು 'ಎಲೆ ಶಿಷ್ಯರಿರ, ತಿಳಿಯಿತೆ !' ಕನಕನು ಕುರುಬನೊ, ನೀವು ಕುರುಬರೊ ಎಂದರಂತೆ. ಮುಂದುವರೆದು 'ಭಗವಂತನು ಯಾವಾಗಲೂ ಎಲ್ಲವನ್ನೂ ನೋಡುತ್ತಾನಲ್ಲವೆ? ಅವನು ಸರ್ವದರ್ಶನನಲ್ಲವೆ?' ಎಂದು ತಿಳಿಸಿದರಂತೆ. ಹೀಗೆ ಭಗವಂತನ ಈ ದಿವ್ಯನಾಮವು ಅರ್ಥಪೂರ್ಣವೂ ಪೂಜ್ಯವೂ ಆಗಿದೆ. 'ವಿಶ್ವಾಕ್ಷ' 'ವಿಶ್ವಚಕ್ಷು' ಎಂದು ವೇದವು ಭಗವಂತನನ್ನು ಸ್ತುತಿಸಿಯೂ ಇದೆ.

**ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।**
**ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥11॥**

**(95)** ಈಗ **ಅಜಃ** - ನೆಂಬ ನಾಮವನ್ನು ನೋಡೋಣ. ಜ -ಎಂದರೆ ಹುಟ್ಟಿ ವಂಥ ವಸ್ತುವು - ಎಂದರ್ಥ. ಸೃಷ್ಟಿಯಲ್ಲಿರುವ ವಸ್ತುಗಳೆಲ್ಲವೂ ಹುಟ್ಟಿರುವವುಗಳೇ ಆಗಿವೆ. ಇವು ತಾವು ಹುಟ್ಟುವ ಮುಂಚೆ ಇರಲಿಲ್ಲ. ಹಾಗೆಯೇನಾಶವಾದ ಮೇಲೂ ಇರುವದಿಲ್ಲ. ಆದರೆ ಭಗವಂತನು ಎಂದೆಂದೂ ಇದ್ದುಕೊಂಡೇ ಇರುವನಾದ್ದರಿಂದ ಹುಟ್ಟಿದವನಲ್ಲ. ಆದ್ದರಿಂದ 'ಅಜ' ನೆನಿಸಿರುತ್ತಾನೆ. **(96)** ಮತ್ತು **ಸರ್ವೇಶ್ವರಃ** - ನೆನಿಸಿ ರುತ್ತಾನೆ. ಸರ್ವ ಎಂದರೆ ಎಲ್ಲವೂ - ಎಂದರ್ಥ. ಜಗತ್ತಿನಲ್ಲಿರುವ ವಸ್ತುಗಳೆಲ್ಲವೂ ಯಾವಾಗಲೂ ಒಬ್ಬನೇ ವ್ಯಕ್ತಿಗೆ ಸೇರಿರುವದಿಲ್ಲ. ಭಗವಂತನಾದರೂ ಎಲ್ಲವನ್ನೂ ತಾನೇ ಸೃಷ್ಟಿಮಾಡಿ ಅವುಗಳಲ್ಲೆಲ್ಲ ಒಳಹೊಕ್ಕಿರುತ್ತಾನೆ. ಹೀಗೆಂದು ಶ್ರುತಿಯೂ ಸಾರುತ್ತಿದೆ. ಆದ್ದರಿಂದ ಎಲ್ಲಕ್ಕೂ ಅವನೇ ಒಡೆಯನಾಗಿರುತ್ತಾನೆ. ಇದೇ ಕಾರಣದಿಂದ ಸರ್ವೇಶ್ವರ ನೆನಿಸಿರುತ್ತಾನೆ. **(97)** ಈಗ **ಸಿದ್ಧಃ** - ಎಂಬ ನಾಮವನ್ನು ನೋಡೋಣ. ಸಿದ್ಧ- ಎಂದರೆ ಎಂದೆಂದಿಗೂ ಇದ್ದುಕೊಂಡು ಭೂತಭವಿಷ್ಯತ್‌ಕಾಲಗಳಲ್ಲಿಯೂ ಕಡಿವಡೆ ಯದೆ ಇರತಕ್ಕದ್ದು - ಎಂದರ್ಥ. ಇಂಥ ಪದಾರ್ಥವನ್ನು "ನಿತ್ಯವರ್ತಮಾನವಸ್ತು" ಎನ್ನುವರು. ಈ ಸ್ವಭಾವದ ವಸ್ತುವು ಭಗವಂತನೊಬ್ಬನೇ ಸರಿ. ಆದ್ದರಿಂದ ಸಿದ್ಧನೆಂದು ಸ್ತುತಿಸಲಾಗಿದೆ. **(98) ಸಿದ್ಧಿಃ** - ಎಂಬುದು ಇನ್ನೊಂದು ನಾಮವು. ಇದು ಸ್ತ್ರೀಲಿಂಗ ಶಬ್ದವು. ಸಂಸ್ಕೃತಭಾಷೆಯಲ್ಲಿ ಲಿಂಗಗಳು ಶಬ್ದಗಳಿಗೇ ಮೀಸಲಾಗಿದೆ. ಆದ್ದರಿಂದ ಯಾವ ಲಿಂಗದ ಶಬ್ದಗಳಿಂದಲಾದರೂ ಭಗವಂತನನ್ನು ಸ್ತುತಿಸಬಹುದಾಗಿದೆ. ಹೀಗೆ ಸ್ತುತಿಸಿದಾಗ ಸಿದ್ಧಿ-ಎಂಬುದು ಭಗವಂತನ ಸರ್ವಜ್ಞತ್ವ - ಸರ್ವಶಕ್ತಿತ್ವಾದಿಗಳು ತ್ರಿಕಾಲ ದಲ್ಲಿಯೂ ಇದ್ದುಕೊಂಡಿದ್ದು ನಿತ್ಯವಾಗಿವೆ - ಎಂದು ಸ್ತುತಿಸುವ ನಾಮವಾಗಿದೆ. **(99) ಸರ್ವಾದಿಃ**-ಎಂಬುದು ಮತ್ತೊಂದು ನಾಮವು. ಆದಿ - ಎಂದರೆ ಮೂಲ ಎಂದರ್ಥ. ಭಗವಂತನು ಸೃಷ್ಟಿಯಲ್ಲಿರುವ ಸಮಸ್ತವಸ್ತುಗಳಿಗೂ ಕಾರಣನಾಗಿದ್ದು ಸರ್ವಾದಿಃ ಎಂದು ಸ್ತುತಿಸಲ್ಪಟ್ಟಿದ್ದಾನೆ. **(100)** ಈಗ **ಅಚ್ಯುತಃ** - ಎಂಬ ನಾಮವನ್ನು ವಿಚಾರ ಮಾಡೋಣ. ಕೇಶವಾದಿ 24 ನಾಮಗಳಲ್ಲಿ ಈ ನಾಮವೂ ಒಂದಾಗಿದೆ. ಭಗವಂತನು ತನ್ನ ಸ್ವರೂಪ - ಸಾಮರ್ಥ್ಯಗಳಿಂದ ಎಂದೆಂದಿಗೂ ಜಾರುವವನಲ್ಲ, ಅಥವಾ ಹಿಮ್ಮೆಟ್ಟುವವನಲ್ಲ. ಅವನ ಬಲ - ಪರಾಕ್ರಮ - ಜ್ಞಾನ - ಐಶ್ವರ್ಯ -ಶಕ್ತ್ಯಾದಿಗಳನ್ನು ಅಳತೆಮಾಡುವದೂ ಸಾಧ್ಯವೇ ಇಲ್ಲ. ಹೀಗೆ ತನ್ನ ಸ್ವರೂಪ - ಸ್ಥಾನ - ಬಲ- ವೀರ್ಯಾದಿಗಳಿಂದ ಎಂದೆಂದೂ ಹಿಮ್ಮೆಟ್ಟದೆ - ಚ್ಯುತನಾಗದೆ ಇರುವದರಿಂದಲೇ "ಅಚ್ಯುತ" ನೆನಿಸಿರುತ್ತಾನೆ.

**ಇಲ್ಲಿಗೆ ಒಂದು ನೂರು ನಾಮಗಳ ವಿವರಣೆಯು ಪೂರೈಸಿದೆ.**

# ದ್ವಿತೀಯಶತಕ

ಈಗ ಎರಡನೆಯ ಶತಕದ ನಾಮಗಳನ್ನು ಅನುಸಂಧಾನಮಾಡೋಣ. **(101) ವೃಷಾಕಪಿಃ** - ಎಂಬುದು ಒಂದು ಭಗವಂತನ ನಾಮವು. ವೃಷ ಎಂದರೆ ವರ್ಷಣ- ಮಳೆಗರೆಯುವದು- ಎಂದರ್ಥ. ಕಪಿ- ಎಂದರೆ ಕ=ನೀರಿನಿಂದ ಪಿ=ಪಾಯಾತ್, ಕಾಪಾಡಿದನು-ಎಂಬರ್ಥದಲ್ಲಿ ಭಗವಂತನು ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು -ವರಾಹರೂಪವನ್ನು ಧರಿಸಿ ಮೇಲೆತ್ತಿ ಕಾಪಾಡಿದನು. ಆದ್ದರಿಂದ ಈ ನಾಮವು ಪ್ರಸಿದ್ಧವಾಯಿತು. ಇನ್ನೊಂದು ಅರ್ಥದಂತೆ ವೃಷ-ಎಂದರೆ ಧರ್ಮ-ಎಂದರ್ಥ. ಕಪಿ ಎಂದರೆ ಶ್ರೇಷ್ಠನು-ಎಂದರ್ಥ. ಭಗವಂತನು ಶ್ರೇಷ್ಠನೂ ಧರ್ಮಸ್ವರೂಪನೂ ಆಗಿರುವದರಿಂದ 'ವೃಷಾಕಪಿ' ಎಂದು ಸ್ತುತಿಸಲ್ಪಟ್ಟಿದ್ದಾನೆ. **(102) ಅಮೇಯಾತ್ಮಾ** - ಎಂಬುದು ಇನ್ನೊಂದು ನಾಮವು. ಅಮೇಯ - ಎಂದರೆ ಅಳತೆಮಾಡಲಾಗದ್ದು- ಎಂದರ್ಥ. ಭಗವಂತನು ಸರ್ವವ್ಯಾಪಕನಾಗಿದ್ದು ಎಲ್ಲೆಲ್ಲಿಯೂ ತುಂಬಿರುವದರಿಂದ ಇಂತಿಷ್ಟು ಪರಿಮಾಣನು-ಎಂದು ಅಳತೆಮಾಡಲಾಗುವದಿಲ್ಲ. ವಾಮನನಾಗಿದ್ದವನು ತ್ರಿವಿಕ್ರಮನಾದುದು ಪುರಾಣಪ್ರಸಿದ್ಧವಾಗಿದೆ. ಆದ್ದರಿಂದ ಅಮೇಯಾತ್ಮನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(103) ಸರ್ವಯೋಗವಿನಿಸ್ಸೃತಃ** - ಯೋಗವೆಂದರೆ ಸಂಬಂಧ- ಎಂದರ್ಥ. ಭಗವಂತನು ನಿರಂಜನನು-ಎಂದರೆ ಯಾವದರ ಅಂಟೂ ಇಲ್ಲದವನು. ಹೀಗೆ ದ್ವೈತಸಂಪರ್ಕವೇ ಇಲ್ಲದವನಾಗಿ ಅಸಂಗನೆನಿಸಿರುತ್ತಾನೆ. ಆದ್ದರಿಂದಲೇ ಎಲ್ಲಾ ಸಂಬಂಧಗಳಿಂದಲೂ ಮುಕ್ತನಾಗಿರುತ್ತಾನೆ. ಯಾವ ಮಾತು- ಮನಸ್ಸುಗಳೂ ಭಗವಂತ ನನ್ನು ಮುಟ್ಟಲಾರವು-ಎಂದು ಶ್ರುತಿಯೂ ಸಾರುತ್ತಿದೆ. ಹೀಗಿದ್ದರೂ ಶ್ರುತಿಸ್ಮೃತಿಪುರಾಣ ಗಳನ್ನು ನೆಪಮಾಡಿಕೊಂಡು ಆ ಭಗವಂತನನ್ನು ತಾನೇ ತನ್ನಲ್ಲಿಯೇ ಕಂಡುಕೊಳ್ಳ ಬೇಕು. ಇದೇನೂ ಅಸಂಭವವಲ್ಲ. ಏಕೆಂದರೆ ಆ ಭಗವಂತನು ನಮ್ಮ ಆತ್ಮನೇ ಆಗಿದ್ದಾನೆ - ಎಂದು ಅಭಿಪ್ರಾಯ.

**ವಸುರ್ವಸುಮನಾಃ ಸತ್ಯಃ ಸಮಾತ್ಮಾಸಂಮಿತಃ ಸಮಃ ।**
**ಅಮೋಘಃ ಪುಂಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ ॥12॥**

**(104)** ಈಗ **ವಸುಃ** - ಎಲ್ಲಾ ಪ್ರಾಣಿಗಳೂ ಆಕಾಶಾದಿ ಪಂಚಮಹಾಭೂತಗಳೂ ಈ ಪರಮಾತ್ಮನಲ್ಲಿಯೇ ಅಡಕವಾಗಿದ್ದು ವಾಸಿಸುತ್ತಿರುವದರಿಂದ ವಸು- ಎನಿಸಿರುತ್ತಾನೆ. ಹಾಗೂ ದೇವತೆಗಳ ಗುಂಪಿನಲ್ಲಿರುವ ಅಷ್ಟವಸುಗಳಲ್ಲಿ ಪಾವಕನೆಂಬ ಗಣ್ಯವಸುವಾಗಿರುತ್ತಾನೆ-ಎಂದರ್ಥ. **(105) ವಸುಮನಾಃ** - ಎಂದರೆ ಪ್ರಶಸ್ತವಾದ

ಮನಸ್ಸುಳ್ಳವನು- ಎಂದರೆ ರಾಗದ್ವೇಷಾದಿದೋಷಗಳಿಲ್ಲದ ಶುದ್ಧಾಂತಃಕರಣವುಳ್ಳವನು- ಎಂದೂ ಅರ್ಥಮಾಡಬಹುದು. **(106) ಸತ್ಯಃ** - ಸುಳ್ಳಾಗದ ಎಂದರೆ ನಿಜವಾದ ಸ್ವರೂಪವುಳ್ಳವನು-ಎಂಬರ್ಥದಲ್ಲಿ ಸತ್ಯನೆನಿಸಿರುತ್ತಾನೆ. ಅಥವಾ ಸತ್-ಎಂದರೆ ಪ್ರಾಣಗಳು, ತಿ - ಎಂದರೆ ಅನ್ನವು, ಯ - ಎಂದರೆ ಸೂರ್ಯನು. ಹೀಗೆ ಭಗವಂತನು ಪ್ರಾಣ, ಅನ್ನ, ಆದಿತ್ಯರುಗಳ ರೂಪದಿಂದಿದ್ದು ಜಗತ್ತನ್ನು ಆಳುವದರಿಂದ ಸತ್ಯನೆನಿಸಿರುತ್ತಾನೆ. ಇನ್ನು ಸತ್ಪುರುಷರ ವಿಷಯದಲ್ಲಿ ಸಾಧುವಾಗಿದ್ದು ಅವರ ಆತ್ಮನೇ ಆದ್ದರಿಂದ ಸತ್ಯನು- ಎಂದೂ ಹೇಳಬಹುದಾಗಿದೆ. **(107)** ಈಗ **ಸಮಾತ್ಮಾ** - ಎಂಬ ನಾಮವನ್ನು ವಿಚಾರಮಾಡೋಣ. ಎಲ್ಲಾ ಜೀವರುಗಳಲ್ಲಿಯೂ ಸಮನಾಗಿ ಸಾಕ್ಷಿಯಾಗಿ ಇದ್ದುಕೊಂಡಿರುವವನಾದ್ದರಿಂದ ಭಗವಂತನು ಸಮಾತ್ಮನೆನಿಸಿರುತ್ತಾನೆ. ಭಗವದ್ಗೀತೆಯಲ್ಲಿ "ಸಮಂ ಸರ್ವೇಷು ಭೂತೇಷು' ಎಂದು ಸ್ತುತಿಸಲಾಗಿದೆ. ಭಗವಂತನು ರಾಗದ್ವೇಷಾದಿ ತಾರತಮ್ಯವುಳ್ಳವನಲ್ಲ. ಆದರೆ ಸೃಷ್ಟಿಯಲ್ಲಿ ಜೀವರುಗಳಲ್ಲಿ ಕಂಡುಬರುವ ತಾರತಮ್ಯಗಳ ಅವರವರ ಕರ್ಮವೈಚಿತ್ರ್ಯಗಳಿಂದ ಆಗಿರುತ್ತವೆ. ಭಗವಂತನು ಎಲ್ಲಾ ಜೀವರುಗಳಲ್ಲಿಯೂ ಸಮನಾಗಿಯೇ ಇರುತ್ತಾನೆ ಜ್ಞಾನಿಗಳು ಈ ಸಮಬುದ್ಧಿಯನ್ನು ಹೊಂದಿರುತ್ತಾರೆ. ಹೀಗೆಂದು ಭಗವಂತನನ್ನು ಇಲ್ಲಿ ಸ್ತುತಿಸಲಾಗಿದೆ. **(108)** ಈಗ **ಅಸಮ್ಮಿತಃ** - ಎಂಬ ನಾಮವನ್ನು ನೋಡೋಣ. ಇದರ ಅರ್ಥವೇನೆಂದರೆ- ಎಲ್ಲಾ ವಸ್ತುಗಳಲ್ಲಿಯೂ ಇದ್ದುಕೊಂಡಿದ್ದರೂ ನಾಮರೂಪಗಳಿಂದ ಬಿಡಿಬಿಡಿಯಾಗಿ ಕಂಡರೂ ಪರಿಚ್ಛಿನ್ನನಾಗದೆ ಭಗವಂತನು ಪರಿಪೂರ್ಣನೇ ಆಗಿರುತ್ತಾನೆ. ಹೇಗೆ ಆಕಾಶವು ಗಡಿಗೆ, ಕೊಠಡಿ, ಗ್ರಾಮ, ವನ ಇತ್ಯಾದಿ ವ್ಯವಹಾರಗಳಿಂದ ಪರಿಚ್ಛಿನ್ನವಾದಂತೆ ಕಂಡರೂ ಸ್ವರೂಪದಿಂದ ಅಪರಿಚ್ಛಿನ್ನವೇ ಆಗಿರುವದೋ ಹಾಗೆಯೇ ಸರ್ವವ್ಯಾಪಕನಾದ ಶ್ರೀಮಹಾವಿಷ್ಣುವು ಅಸಂಮಿತನಾಗಿರುತ್ತಾನೆ. **(109) ಸಮಃ** - ನೆಂದರೆ ಎಲ್ಲಾ ಕಾಲದ ದೇಶಗಳಲ್ಲಿಯೂ ಯಾವ ವಿಕಾರವೂ ಇಲ್ಲದೆ ಯಾವ ಉಪಾಧಿಯ ಸಂಬಂಧದಿಂದಲೂ ಬದಲಾಗದೆ ಇದ್ದಂತೆ ಇರುವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. ಇನ್ನೊಂದು ಮಾ- ಎಂದರೆ ಲಕ್ಷ್ಮಿಯೊಡನೆ ಯಾವಾಗಲೂ ಜೊತೆಯಲ್ಲಿರುತ್ತಾನಾದ್ದರಿಂದ "ಸಮ"ನೆನಿಸಿರುತ್ತಾನೆ. **(110) ಅಮೋಘಃ** - ನೆಂದರೆ ಸತ್ಯಸಂಕಲ್ಪನು-ಎಂದರ್ಥ. ಏಕೆಂದರೆ ಭಗವಂತನು ಯಾವ ಸಂಕಲ್ಪವನ್ನು ಮಾಡಿದರೂ ಅದು ನೆರವೇರಿಯೇ ತೀರುತ್ತದೆ. ಇನ್ನು ಆ ಭಗವಂತನನ್ನು ನೆನೆದರೆ ಭಕ್ತರಿಗೆ ಎಲ್ಲಾ ರೀತಿಯ ಫಲಗಳನ್ನೂ ಅನುಗ್ರಹಿಸುವನು. ಅವನು ಎಂದಿಗೂ ಭಕ್ತರ ಅಶೋತ್ತರಗಳನ್ನು ವ್ಯರ್ಥಮಾಡುವದಿಲ್ಲ. ನೆರವೇರಿಸುತ್ತಾನೆ. ಕೆಲವು ವೇಳೆ ಭಕ್ತರ ಕರ್ಮಲೇಶಗಳಿಂದ ವಿಳಂಬವಾಗಬಹುದು. ಆದರೆ ಆ ಭಗವಂತನಲ್ಲಿ ಅರ್ಪಣೆಮಾಡಿದ ಕರ್ಮಗಳ ಫಲವು ಮಾತ್ರ ಎಂದಿಗೂ ಹುಸಿಯಾಗುವದೇ ಇಲ್ಲ - ಎಂದಭಿಪ್ರಾಯ.

ಈಗ **(111) ಪುಂಡರೀಕಾಕ್ಷಃ** - ನೆಂಬ ನಾಮವನ್ನು ನೋಡೋಣ. ಹೃದಯ ಕಮಲದಲ್ಲಿದ್ದುಕೊಂಡು ಇಡಿಯ ದೇಹವನ್ನೆಲ್ಲ ತನ್ನ ಚೈತನ್ಯದಿಂದ ವ್ಯಾಪಿಸಿರುವನಾದ್ದರಿಂದ ಅವನನ್ನು ಯೋಗಿಗಳು ಹೃದಯದಲ್ಲಿಯೇ ಕಂಡುಕೊಳ್ಳುತ್ತಾರಾದ್ದರಿಂದ ಈ ನಾಮವು ಭಗವಂತನಿಗೆ ಒಪ್ಪಾಗಿದೆ. ವ್ಯವಹಾರದಲ್ಲಿಯೂ ಜನರು ಯಾವನನ್ನಾದರೂ 'ನಿಜವನ್ನು ಹೇಳು' ಎನ್ನುವಾಗ 'ಎದೆ ಮುಟ್ಟಿಕೊಂಡು ಹೇಳು' ಎನ್ನುತ್ತಾರೆ. ಇದರ ಗೂಢಾರ್ಥವೇನೆಂದರೆ, ''ಹೃದಯದಲ್ಲಿರುವ ಆತ್ಮನ ಸಾಕ್ಷಿಯಾಗಿ ಹೇಳು'' ಎಂದಾಗಿ ಇರುತ್ತದೆ. ಹೀಗೆ ಭಗವಂತನು ಹೃದಯಪುಂಡರೀಕದಲ್ಲಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. ಇನ್ನು ಕಮಲದಂತೆ ಸುಂದರವಾದ ನಸುಗೆಂಪುಬಣ್ಣವುಳ್ಳ ಕಣ್ಣುಗಳುಳ್ಳವನು - ಎಂದೂ ಅರ್ಥಮಾಡಲೂಬಹುದು. **(112)** ಈಗ **ವೃಷಕರ್ಮಾ**- ಎಂಬ ನಾಮವನ್ನು ನೋಡೋಣ. ವೃಷ ಎಂದರೆ ಧರ್ಮ- ಎಂದರ್ಥ. ಭಗವಂತನು ಧರ್ಮವನ್ನು ಉದ್ಧಾರಮಾಡುವದಕ್ಕಾಗಿಯೇ ಆಗಾಗ್ಗೆ ಅವತಾರಮಾಡುತ್ತಾನೆ. ಅಥವಾ ಧರ್ಮನಿಷ್ಠರಾದ ಪುಣ್ಯಪುರುಷರನ್ನಾದರೂ ಕಳುಹಿಸುತ್ತಾನೆ. ಇದು ನಮ್ಮ ಭರತಖಂಡದ ವೈಶಿಷ್ಟ್ಯವಾಗಿದೆ. ಮತ್ಸ್ಯಾದಿ ದಶಾವತಾರಗಳೆಲ್ಲವೂ ಭಾರತಭೂಮಿಯಲ್ಲಿಯೇ ಆಗಿರುತ್ತವೆ. ಯುಗಯುಗಗಳಲ್ಲಿಯೂ ಧರ್ಮೋದ್ಧಾರಕ್ಕಾಗಿ ತಾನು ಅವತರಿಸುವದಾಗಿ ಗೀತೆಯಲ್ಲಿ ಭಗವಂತನೇ ಉಲ್ಲೇಖಿಸಿರುತ್ತಾನೆ. ಆದ್ದರಿಂದ ಈ ನಾಮವು ಭಗವಂತನಿಗೆ ಪೂರ್ಣವಾಗಿ ಸಲ್ಲತಕ್ಕದ್ದಾಗಿದೆ. **(113) ವೃಷಾಕೃತಿಃ** - ಎಂಬ ನಾಮವೂ ಭಗವಂತನಿಗೇ ಸಲ್ಲತಕ್ಕದ್ದಾಗಿದೆ. ಹೇಗೆಂದರೆ ಧರ್ಮೋದ್ಧಾರಕ್ಕಾಗಿ ಪರಮಾತ್ಮನು ಸನ್ನಿವೇಶಕ್ಕೆ ತಕ್ಕಂತೆ ನಾಮರೂಪಾಕಾರಗಳನ್ನು ಧರಿಸುತ್ತಾನೆ. ಹೇಗೆಂದರೆ ಹಿರಣ್ಯಕಶಿಪುವು ತನಗೆ ಪ್ರಾಣಿಗಳಿಂದಾಗಲಿ, ಮನುಷ್ಯರಿಂದಾಗಲಿ ಮರಣವು ಬರಬಾರದೆಂತ- ಸಾವು ಬರಬಾರದೆಂತ ಬ್ರಹ್ಮನಿಂದ ವರವನ್ನು ಪಡೆದುಕೊಂಡಿದ್ದನು. ಭಗವಂತನಾದರೊ, ಅದಕ್ಕೆ ತಕ್ಕಂತೆ ಅರ್ಧಮೃಗ, ಅರ್ಧಮನುಷ್ಯ-ಹಾಗೂ ಸಂಧ್ಯಾಕಾಲ(ಅರ್ಧಹಗಲು, ಅರ್ಧಸಂಜೆ) ಹೀಗೆ ವರಕ್ಕೆ ತಕ್ಕಂತೆ-ಮತ್ತು ಯಾವ ಆಯುಧದಿಂದಲೂ ಮರಣಬರಬಾರದು - ಎಂಬುದಕ್ಕೆ ತಕ್ಕಂತೆ ಉಗುರಿನಿಂದಲೇ ಆ ರಾಕ್ಷಸನನ್ನು ಸಂಹಾರಮಾಡಿದನು. ಆದ್ದರಿಂದ ವೃಷಾಕೃತಿಯೆನಿಸಿರುತ್ತಾನೆ.

**ರುದ್ರೋ ಬಹುಶಿರಾ ಬಭ್ರುಃ ವಿಶ್ವಯೋನಿಃ ಶುಚಿಶ್ರವಾಃ ।**
**ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥13॥**

**(114) ರುದ್ರಃ** - ಎಂಬ ಹೆಸರು ಶಿವನ ನಾಮವಾಗಿ ಪ್ರಸಿದ್ಧವಾಗಿದೆ. ವೇದಾಂತದ ದೃಷ್ಟಿಯಿಂದ ಇದು ವಿಷ್ಣುವಿಗೂ ಹೊಂದುತ್ತದೆ. ಹೇಗೆಂದರೆ ದೇವರು ಒಬ್ಬನೇ. ಅವನೇ ಎಲ್ಲರ ಆತ್ಮನು-ಎಂಬುದು ವೇದಾಂತದ ತೀರ್ಮಾನವಾಗಿದೆ. ಈ

ಹಿನ್ನೆಲೆಯುಲ್ಲಿರು - ಎಂದರೆ ದುಃಖವು ಅಥವಾ ದುಃಖಕ್ಕೆ ಕಾರಣವಾದದ್ದು ; ಇದನ್ನು ದ್ರಾವಯತಿ - **ಹೋಗಲಾಡಿಸುತ್ತಾನೆ**-ಎಂಬರ್ಥದಲ್ಲಿ ಶ್ರೀಮಹಾವಿಷ್ಣುವೂ ರುದ್ರ ನೆನಿಸಿರುತ್ತಾನೆ - ಎಂದು ಸಮನ್ವಯಮಾಡಿಕೊಳ್ಳಬೇಕು. **(115)**ಈಗ **ಬಹುಶಿರಾಃ** - ಎಂಬ ನಾಮವನ್ನು ನೋಡೋಣ. ಬಹಳವಾದ ತಲೆಗಳುಳ್ಳವನು-ಎಂದು ಅರ್ಥ. ಶ್ರೀಮಹಾವಿಷ್ಣುವು ಸರ್ವವ್ಯಾಪಕನಾಗಿದ್ದು ಎಲ್ಲಾ ಜೀವರುಗಳನ್ನೂ ಒಳಹೊಕ್ಕು ಅಂತರ್ಯಾಮಿಯಾಗಿರುವದರಿಂದ ಆಯಾ ಜೀವರುಗಳ ಶಿರಸ್ಸುಗಳೆಲ್ಲವೂ ವಿಷ್ಣು ವಿನದೇ ಆಗಿರುತ್ತದೆ. ಇದನ್ನೇ ಪುರುಷಸೂಕ್ತದಲ್ಲಿ ಸಹಸ್ರಶೀರ್ಷಾ ಪುರುಷಃ ಎಂದು ವರ್ಣಿಸಲಾಗಿದೆ. **(116)** ಈಗ **ಬಭ್ರುಃ** - ಎಂಬ ನಾಮವನ್ನು ನೋಡೋಣ. ಹದಿನಾಲ್ಕು ಲೋಕಗಳನ್ನೂ ತನ್ನ ವಿರಾಟ್ ಶರೀರದಲ್ಲಿಯೇ ಧರಿಸಿರುವನಾದ್ದರಿಂದ ''ಬಿಭರ್ತಿ ಇತಿ ಬಭ್ರುಃ'' ಎಂಬ ವ್ಯುತ್ಪತ್ತಿಯಂತೆ. ಈ ನಾಮದಿಂದ ಭಗವಂತನನ್ನು ಸ್ತುತಿಸಲಾಗಿದೆ. **(117)** ಈಗ **ವಿಶ್ವಯೋನಿಃ** - ಎಂಬ ನಾಮವನ್ನು ನೋಡೋಣ. ಶ್ರುತಿಯಲ್ಲಿ ಭಗವಂತನನ್ನು ''ಭೂತಯೋನಿ'' ಎಂದು ಕರೆಯಲಾಗಿದೆ. ''ಭವನ್ತಿ ಇತಿ ಭೂತಾನಿ '' ಎಂಬ ವಿವರಣೆಯಂತೆ ಹುಟ್ಟುವ ವಸ್ತುಗಳೆಲ್ಲವೂ ಭೂತ- ಎನಿಸುವವು. ಇವುಗಳಿಗೆ ಮೂಲಕಾರಣವಾದ ಬ್ರಹ್ಮವನ್ನು ಭೂತಯೋನಿ - ಎಂದು ಉಪನಿಷತ್ತಿನಲ್ಲಿ ಕರೆಯಲಾಗಿದೆ. ಈ ಭೂತಗಳ ವಿಸ್ತಾರವನ್ನೇ ವಿಶ್ವ-ಎನ್ನುವರು. ಹೀಗೆ ವಿಶ್ವಕ್ಕೆಲ್ಲ ಮೂಲಕಾರಣನಾದ ಭಗವಂತನನ್ನು ಇಲ್ಲಿ ವಿಶ್ವಯೋನಿ ಎಂದು ಸ್ತುತಿಸಿದೆ. **(118) ಶುಚಿಶ್ರವಾಃ** -ಎಂಬುದು ಮತ್ತೊಂದು ನಾಮವು. ಶ್ರವ - ಎಂದರೆ ಕೇಳಲು ಇಂಪಾದದ್ದು - ಎಂದರ್ಥ. ಭಗವಂತನ ದಿವ್ಯನಾಮಗಳು ಅಂಥವುಗಳಾಗಿವೆ. ''ತಸ್ಯ ನಾಮ ಮಹದ್ಯಶಃ'' ಎಂದು ಶ್ರುತಿಯು ಸಾರುತ್ತಿದೆ. ಭಗವಂತನನ್ನು ಕುರಿತ ದಿವ್ಯನಾಮಗಳೆಲ್ಲವೂ ಬಹಳ ಮಹಿಮಾನ್ವಿತವಾಗಿದ್ದು ಕೇಳಿದವರನ್ನು ಪಾವನ ಗೊಳಿಸುತ್ತವೆ. ಗೀತೆಯಲ್ಲಿ ಅರ್ಜುನನು ಸ್ತುತಿಸಿರುವ ಈ ಮಾತನ್ನು ಕೇಳಿರಿ ''ಎಲೈ ಹೃಷಿಕೇಶನೆ, ನಿನ್ನ ನಾಮ ಕೀರ್ತನೆಯಿಂದ ಜಗತ್ತೆಲ್ಲವೂ ಸಂತೋಷಗೊಳ್ಳುತ್ತದೆ. ಮತ್ತು ಅನುರಾಗವುಳ್ಳದ್ದಾಗುತ್ತದೆ.'' ಹೀಗೆ ಭಗವಂತನ ದಿವ್ಯನಾಮಗಳು ಜಗತ್ತಿಗೆಲ್ಲ ಆನಂದವನ್ನುಂಟುಮಾಡುವದರಿಂದ ಅವುಗಳನ್ನು ಆಲೈಸಿ ಕೇಳುವದರಿಂದ ಜನರು ಆನಂದವನ್ನು ಪಡೆಯುವದರಿಂದ ಶುಚಿ-ಶ್ರವನೆಂದು ಇಲ್ಲಿ ಸ್ತುತಿಸಿದೆ. **(119,120)** ಈಗ **ಅಮೃತ : -ಶಾಶ್ವತಸ್ಥಾಣುಃ** -ಎಂಬ ನಾಮಗಳನ್ನು ಅನುಸಂಧಾನಮಾಡೋಣ. ದೇಹದಿಂದ ಆತ್ಮನು ಬಿಡುಗಡೆಯಾದಾಗ 'ಮರಣ'ವೆನ್ನುವರು - ಎಂದರೆ ದೇಹವು ಆತ್ಮನ ಸಾನ್ನಿಧ್ಯವನ್ನು ಕಳೆದುಕೊಳ್ಳುವಿಕೆ-ಎಂದರ್ಥ. ಭಗವಂತನು ದೇಹವ್ಯತಿರಿಕ್ತ ನಾಗಿದ್ದು ಗಾಳಿಯು ಜಗತ್ತನ್ನೆಲ್ಲ ವ್ಯಾಪಿಸಿರುವಂತೆ ಎಲ್ಲೆಲ್ಲಿಯೂ ತುಂಬಿರುತ್ತಾನೆ. ಆದ್ದರಿಂದ ಅವನು ಅಮೃತನು - ಎಂದರ್ಥ. **ಶಾಶ್ವತಸ್ಥಾಣುಃ** - ಎಂದರೆ

ಎಂದೆಂದಿಗೂ ನಾಶವಾಗದೆ ಕೂಟಸ್ಥನಿತ್ಯಸ್ವರೂಪನಾಗಿದ್ದುಕೊಂಡಿರುವವನು ಎಂದರ್ಥ. ಚಿನ್ನದಿಂದ ಯಾವ ಒಡವೆಗಳನ್ನು ಸಿದ್ಧಮಾಡಿದರೂ ಚಿನ್ನವು ಎಂದೆಂದೂ ಚಿನ್ನವಾಗಿಯೇ ಉಳಿದಿರುವಂತೆ ಭಗವಂತನು ಶಾಶ್ವತನೂ ಸ್ಥಾಣು(ವಿಕಾರರಹಿತ)ವೂ ಆಗಿರುತ್ತಾನೆ. **(121, 122)** ಈಗ **ವರಾರೋಹಃ, ಮಹಾತಪಃ** - ಎಂಬ ನಾಮಗಳನ್ನು ನೋಡೋಣ. ವರ ಎಂದರೆ ಶ್ರೇಷ್ಠವಾದ, ಆರೋಹನು - ಎಂದರೆ ಮೇಲಕ್ಕೆ ಏರಿರುವವನು - ಎಂದರ್ಥ. ಭಗವಂತನ ದಿವ್ಯಪದವಿ(ಸ್ಥಾನ)ಯನ್ನು ಏರಿದವನು ಮತ್ತೆ ಹಿಂದಿರುಗುವದಿಲ್ಲ. ಗೀತೆಯಲ್ಲಿ 'ಯದ್ಗತ್ವಾ ನ ನಿವರ್ತನ್ತೇ' ಎಂದು ಆ ಪರಮಪದವನ್ನು ಸ್ತುತಿಸಲಾಗಿದೆ. ಹೀಗೆ ಆ ಭಗವಂತನು ಎಲ್ಲಕ್ಕಿಂತ ಮೇಲೇರಿದವನಾಗಿ ಅಲ್ಲಿಯೇ ನೆಲೆನಿಂತಿರುವವನು ಎಂದರ್ಥ. ಇನ್ನು **ಮಹಾತಪಾಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ತಪಃ ಎಂಬ ಶಬ್ದಕ್ಕೆ ಜ್ಞಾನ-ಎಂದರ್ಥ. ಶ್ರುತಿಯಲ್ಲಿಯೂ ಭಗವಂತನ ಪರಿಪೂರ್ಣನಿತ್ಯಜ್ಞಾನವನ್ನೇ ತಪಸ್ಸು (ಯಸ್ಯ ಜ್ಞಾನಮಯಂತಪಃ) ಎಂದು ಸ್ತುತಿಸಲಾಗಿದೆ. ಆದ್ದರಿಂದ 'ಮಹಾತಪಾಃ' ಎಂದು ಸ್ತುತಿಸಲ್ಪಟ್ಟಿರುತ್ತಾನೆ.

**ಸರ್ವಗಃ ಸರ್ವವಿದ್ಭಾನುರ್ವಿಷ್ವಕ್ಸೇನೋ ಜನಾರ್ದನಃ ।**
**ವೇದೋ ವೇದವಿದವ್ಯಂಗೋ ವೇದಾಂಗೋ ವೇದವಿತ್ ಕವಿಃ ॥14॥**

**(123)** ಈಗ **ಸರ್ವಗಃ** - ಎಂಬ ನಾಮವನ್ನು ವಿಚಾರಿಸೋಣ. ಸರ್ವತ್ರ ಗಚ್ಛತಿ ಇತಿ ಸರ್ವಗಃ - ಎಂಬ ವಿವರಣೆಯಂತೆ ಭಗವಂತನು ಎಲ್ಲಾ ಸೃಷ್ಟಿವೈಚಿತ್ರ್ಯದ ವಸ್ತುಗಳಿಗೂ ಮೂಲಕಾರಣನಾಗಿರುವದರಿಂದ 'ಸರ್ವಗ' ನೆನಿಸಿರುತ್ತಾನೆ. ಕುಂಬಾರನ ಮನೆಯಲ್ಲಿರುವ ಮಡಕೆ, ಕುಡಿಕೆ, ಗುಡಾಣ, ಶ್ರಾವೆ- ಮುಂತಾದವುಗಳನ್ನೆಲ್ಲ ಮಣ್ಣು ವ್ಯಾಪಿಸಿರುವಂತೆ ಶ್ರೀಮಹಾವಿಷ್ಣುವು ಹದಿನಾಲ್ಕು ಲೋಕಗಳನ್ನೂ ವ್ಯಾಪಿಸಿದವನಾಗಿದ್ದು, 'ಸರ್ವಗ' ನೆನಿಸಿರುತ್ತಾನೆ. ಆ ಭಗವಂತನನ್ನು ಕೈ ಬಿಟ್ಟರೆ ಯಾವ ವಸ್ತುವೂ 'ಇದೆ' ಎನಿಸುವದಿಲ್ಲ. ಆದ್ದರಿಂದ ಶ್ರೀವಿಷ್ಣುವು ಸರ್ವಗನೆನಿಸಿರುತ್ತಾನೆ. **(124) ಸರ್ವವಿದ್ಭಾನುಃ**- ಎಂದರೆ ಎಲ್ಲವನ್ನೂ ಕಾರಣರೂಪದಿಂದ (ವಿನ್ದತೇ) ವ್ಯಾಪಿಸಿಕೊಂಡಿರುವದರಿಂದ ಈ ನಾಮವು ಬಂದಿರುತ್ತದೆ. ಭಗವಂತನ ಚೈತನ್ಯದ ಹಿನ್ನೆಲೆಯಿಂದಲೇ ಜಗತ್ತೆಲ್ಲವೂ ಇದೆ - ಎನಿಸಿರುವದರಿಂದ ಆ ಎಲ್ಲಾ ನಾಮರೂಪಾತ್ಮಕವಸ್ತುಗಳೂ ಭಗವಂತನ ಜ್ಞಾನಕ್ಕೆ ಒಳಪಟ್ಟಿರುತ್ತವೆ. ಆದ್ದರಿಂದ ಸರ್ವವಿತ್ ಎಂದು ಸ್ತುತಿಸಲಾಗಿದೆ. ಮತ್ತು 'ಭಾನುಃ' ಎಂಬ ನಾಮವನ್ನೂ ಕೂಡಿಸಿ ಅರ್ಥ ಮಾಡಿದಾಗ ಎಲ್ಲವನ್ನೂ ತನ್ನ ತೇಜಸ್ಸಿನಿಂದ ಬೆಳಗುತ್ತಾ ಸರ್ವವ್ಯಾಪಿಯಾಗಿದ್ದಾನೆ- ಎಂದಭಿಪ್ರಾಯ. **(125)** ಈಗ **ವಿಷ್ವಕ್‌ಸೇನಃ** - ಎಂಬ ನಾಮವನ್ನು ವಿಚಾರ

ಮಾಡೋಣ. ದೇವಾಸುರರ ಯುದ್ಧಕಾಲಕ್ಕೆ ಭಗವಂತನು ಎಲ್ಲೆಲ್ಲಿಯೂ ಸಂಚರಿಸುತ್ತಾ ಯುದ್ಧದಲ್ಲಿ ತೊಡಗಿರುತ್ತಾ ಆಗ ದೈತ್ಯಸೈನ್ಯವನ್ನು ದಿಕ್ಕಾಪಾಲಾಗಿ ಓಡಿಸುತ್ತಾನಾದ್ದರಿಂದ ವಿಷ್ವಕ್ಸೇನನೆನಿಸಿರುತ್ತಾನೆ. **(126)** ಈಗ **ಜನಾರ್ದನಃ** - ಎಂಬ ನಾಮವನ್ನು ವಿಚಾರ ಮಾಡೋಣ. ದುರ್ಜನರನ್ನು ಶಿಕ್ಷಿಸಿ ನರಕಾದಿಲೋಕಗಳಿಗೆ ತಳ್ಳುತ್ತಾನಾದ್ದರಿಂದ ಅಥವಾ ಸಜ್ಜನರನ್ನು ಭಕ್ತರನ್ನಾಗಿ ಸ್ವೀಕರಿಸಿ ಅವರುಗಳಿಗೆ ಸ್ವರ್ಗಪ್ರಾಪ್ತಿಯನ್ನಾಗಲಿ ಅಥವಾ ವಿರಕ್ತರಿಗೆ ಮೋಕ್ಷವನ್ನಾಗಲಿ ದಯಪಾಲಿಸುತ್ತಾನಾದ್ದರಿಂದ ಜನಾರ್ದನ ನೆನಿಸಿರುತ್ತಾನೆ. **(127)** ಈಗ **ವೇದಃ** - ಎಂಬುದನ್ನು ವಿಚಾರ ಮಾಡೋಣ. ಭಗವಂತನು ವೇದಸಾಹಿತ್ಯಸ್ವರೂಪನಾಗಿರುವದರಿಂದ ಈ ಹೆಸರು ಬಂದಿರುತ್ತದೆ. ಅಥವಾ 'ವೇದಯತಿ ಇತಿ ವೇದಃ' ಎಂದು ಅರ್ಥಮಾಡಿದರೆ ಭಗವಂತನು ತನ್ನ ಭಕ್ತರಿಗೆ ಅನುಗ್ರಹಮಾಡುವವನಾಗಿ ವೇದ(ಜ್ಞಾನ)ವನ್ನು ತಿಳಿಯಿಸಿಕೊಡುತ್ತಾನೆ. ಗೀತೆ ಯಲ್ಲಿ ಭಗವಂತನೇ ಹೀಗೆ ಹೇಳಿರುತ್ತಾನೆ. ಇದರ ವಿವರ : "ತೇಷಾಮೇವಾನು ಕಂಪಾರ್ಥಮ್" ಎಂಬ ಶ್ಲೋಕದಲ್ಲಿ "ಹೇ ಅರ್ಜುನ, ಯಾವಾಗಲೂ ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ನನ್ನನ್ನೇ ಚಿಂತಿಸುತ್ತಾ ಹಾಗೂ ಅನ್ಯೋನ್ಯವಾಗಿ ಬೋಧಿಸುತ್ತಾ ಸಂತೋಷಗೊಂಡವರಾಗಿ ಜೀವನವನ್ನು ನಡೆಯಿಸುವ ಭಕ್ತರ ಮೇಲಿನ ಅನುರಾಗ ದಿಂದ ನಾನು ಅವರುಗಳ ಆತ್ಮ(ಮನಸ್ಸು)ದಲ್ಲಿ ನೆಲೆಸಿ ತತ್ತ್ವೋಪದೇಶವನ್ನು ಮಾಡಿ ಜ್ಞಾನದೀಪವನ್ನು ಬೆಳಗಿ ಅಜ್ಞಾನವನ್ನು ನಾಶಗೊಳಿಸುತ್ತೇನೆ". ಹೀಗೆ ಭಗವಂತನು ವೇದ ಎಂಬ ನಾಮದಿಂದ ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. **(128)** ಈಗ **ವೇದವಿತ್** - ಎಂಬ ನಾಮವನ್ನು ವಿಚಾರ ಮಾಡೋಣ. ಭಗವದ್ಗೀತೆಯಲ್ಲಿ ಭಗವಂತನು ತನ್ನನ್ನು 'ವೇದವಿತ್' ಎಂದು ಕರೆದುಕೊಂಡಿರುತ್ತಾನೆ. ಇದು ಅನ್ವರ್ಥವಾಗಿದೆ. ಏಕೆಂದರೆ ಎಲ್ಲಾ ವೇದಗಳೂ ಭಗವಂತನ ಮುಖದಿಂದಲೇ ಹೊರಬಂದಿರುತ್ತವೆ. ಋಗ್ವೇದಾದಿ ಸಕಲವೇದವಿದ್ಯೆಗಳಿಗೂ ಭಗವಂತನೇ ಮೂಲವು. ಆದ್ದರಿಂದ ಬಾದರಾಯಣರು ಅವನನ್ನು 'ಶಾಸ್ತ್ರಯೋನಿ' ಎಂದು ಕರೆದಿರುತ್ತಾರೆ. ಹೀಗೆ ಭಗವಂತನು ವೇದವೀತ್ ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(129)** ಈಗ **ಅವ್ಯಂಗಃ** - ಎಂಬ ನಾಮವನ್ನು ನೋಡೋಣ. ವ್ಯಂಗ ಎಂದರೆ ಕೊರತೆ- ಎಂದರ್ಥ. ಆದರೆ ಭಗವಂತನು ಯಾವ ಕೊರತೆಗಳೂ ಇಲ್ಲದವನು. ಪರಿಪೂರ್ಣನು- ಎಂದರ್ಥ. ಇನ್ನು ವ್ಯಂಗ-ಎಂದರೆ ವ್ಯಜ್ಯತೇ=ಅಭಿವ್ಯಕ್ತಿ ಎಂದರ್ಥ. ಆದರೆ ಭಗವಂತನು ನಾನಾ ನಾಮರೂಪಗಳಿಂದ ನಾಟಕದ ನಟನಂತೆ ತೋರಿಕೊಂಡರೂ ಅದು ಅವನ ಸ್ವರೂಪವಲ್ಲ; ಆದ್ದರಿಂದ ಅವನು ಸ್ವರೂಪದಿಂದ ಅವ್ಯಂಗನು- ಎಂದರ್ಥ. **(130)** ಈಗ **ವೇದಾಂಗಃ** - ಎಂಬ ನಾಮವನ್ನು ಪರಿಶೀಲಿಸೋಣ. ವೇದಗಳೇ ಯಾವನಿಗೆ ಶರೀರದ ಅಂಗಗಳಾಗಿ ವೆಯೋ ಅವನು ವೇದಾಂಗನು. ಭಗವಂತನ ವಿರಾಟ್‌ಸ್ವರೂಪದಲ್ಲಿ ವೇದಗಳೆಲ್ಲವೂ

ಅವನ ಅವಯುವಗಳಾಗಿ ತೋರಿಕೊಂಡಿವೆ. ಅಥವಾ ಯಾವನಿಗೆ ವೇದಗಳೆಲ್ಲವೂ ಪೂರ್ಣವಾಗಿ ಅಧೀನದಲ್ಲಿರುವವೋ ಅವನು ವೇದಾಂಗನು - ಎಂದೂ ಅರ್ಥ ಮಾಡಬಹುದು. ಆಗ ಭಗವಂತನು ಇಡಿಯ ವೇದಸಾಹಿತ್ಯದ ಕರ್ತೃವು, ಒಡೆಯನು -ಎಂದರ್ಥ. (131) ಈಗ **ವೇದವಿತ್** - ಎಂಬ ನಾಮವನ್ನು ನೋಡೋಣ. ವೇದಗಳನ್ನೆಲ್ಲ ಕುರಿತು ವಿಚಾರಮಾಡುವವನು-ಹಾಗೂ ವೇದಗಳಲ್ಲಿ ಅಡಗಿರುವ ಗೂಢಾರ್ಥಗಳನ್ನೆಲ್ಲ ಬಲ್ಲವನು-ಸರ್ವಜ್ಞನು-ಎಂದರ್ಥ. (132) ಈಗ **ಕವಿಃ** - ಎಂಬ ನಾಮವನ್ನು ನೋಡೋಣ. ಕವಿ- ಎಂದರೆ ಕ್ರಾನ್ತದರ್ಶಿ ಎಂದರೆ ಭೂತಭವಿಷ್ಯತ್ತು ಗಳನ್ನೆಲ್ಲ ಬಲ್ಲವನು-ಎಂದರ್ಥ. ವರ್ತಮಾನಕಾಲದ ಒಡೆಯನೂ ಅವನೇ - ಆಗಿರುತ್ತಾನೆ. ಆದರೆ ಕಾಲತ್ರಯವೂ ಭಗವಂತನಲ್ಲಿಯೇ ಇವೆಯೇ ಹೊರತು ಕಾಲ ದಲ್ಲಿ ಭಗವಂತನಿಲ್ಲ- ಎಂದರೆ ಅವನು ಕಾಲಧೀನನಲ್ಲ. ಆದರೆ ಕಾಲಕ್ಕೆ ಒಡೆಯನೂ ಕಾಲವೇ ಆ ಭಗವಂತನೂ ಆಗಿದ್ದಾನೆ- ಎಂದರ್ಥ. ಗೀತೆಯಲ್ಲಿ ಭಗವಂತನು ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿದ ಮೇಲೆ 'ಕಾಲೋಽಸ್ಮಿ ಲೋಕಕ್ಷಯಕೃತ್' ಎಂದು ತನ್ನ ತತ್ತ್ವವನ್ನು ತಿಳಿಸಿರುತ್ತಾನೆ. ಹೀಗೆ ಕ್ರಾನ್ತದರ್ಶಿಯಾದವನು ಭಗವಂತನು -ಎಂದಭಿಪ್ರಾಯ.

**ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।**
**ಚತುರಾತ್ಮಾ ಚತುರ್ವ್ಯೂಹಃ ಚತುರ್ದಂಷ್ಟ್ರಶ್ಚತುರ್ಭುಜಃ ॥15॥**

(133)ಈಗ **ಲೋಕಾಧ್ಯಕ್ಷಃ** -ಎಂಬ ನಾಮವನ್ನು ನೋಡೋಣ. ಭೂಲೋಕವೂ ಸೇರಿದಂತೆ ಸೃಷ್ಟಿಯಲ್ಲಿರುವ ಹದಿನಾಲ್ಕು ಲೋಕಗಳಲ್ಲಿ ನಾವು ಭೂಲೋಕವನ್ನು ಮಾತ್ರ ಬಲ್ಲವರಾಗಿದ್ದೇವೆ. ಅದು ಕೂಡ ಸ್ವಲ್ಪವೇ ನಮಗೆ ಪರಿಚಿತವಾಗಿದೆ. ಆದರೆ ಭಗವಂತನ ಮಹಿಮೆಯು ಎಂಥದ್ದೆಂದರೆ ಇಡಿಯ 14 ಲೋಕಗಳನ್ನೂ ವ್ಯಾಪಿಸಿದ್ದು ಅಲ್ಲಿಯ ಜೀವರುಗಳೆಲ್ಲರ ಅಂತರ್ಯಾಮಿಯಾಗಿದ್ದು ತನ್ನ ಜ್ಞಾನ-ಶಕ್ತಿ-ಬಲ-ಐಶ್ವರ್ಯ-ವೀರ್ಯ-ತೇಜಸ್ಸುಗಳಿಂದ ಸಂಪನ್ನನಾಗಿ ಕಾಲತ್ರಯಗಳಲ್ಲಿಯೂ ಪಾಲನೆ ಮಾಡುತ್ತಿದ್ದಾನೆ. ಶ್ರೀಪುರಂದರದಾಸರು ತಮ್ಮ ಪದಗಳಲ್ಲಿ 'ಈ ಪರಿಯ ಸೊಬಗಾವ ದೇವರೊಳು ಕಾಣೆ' ಎಂದು ಕೊಂಡಾಡಿರುತ್ತಾರೆ. ಇಂಥ ಮಹಾಮಹಿಮನು ಲೋಕಾಧ್ಯಕ್ಷನು - ಎಂದು ಭೀಷ್ಮಾಚಾರ್ಯರು ಇಲ್ಲಿ ಸ್ತುತಿಸಿರುತ್ತಾರೆ. (134) ಈಗ **ಸುರಾಧ್ಯಕ್ಷಃ** - ಎಂಬ ನಾಮವನ್ನು ನೋಡೋಣ. ಸುರರು- ಎಂದರೆ ದೇವತೆಗಳು. ಮೂವತ್ತುಮೂರು ಕೋಟಿ ದೇವತೆಗಳಿದ್ದಾರೆಂದು ಪುರಾಣಗಳು ತಿಳಿಸುತ್ತವೆ. ನಿಗ್ರಹಾನುಗ್ರಹಶಕ್ತಿಯುಳ್ಳ ದೇವೇಂದ್ರನೇ ಮುಂತಾದ ಇಂಥ ದೇವತೆಗಳೆಲ್ಲರಿಗೂ ಒಡೆಯನಾದ ಭಗವಂತನು ಸುರಾಧ್ಯಕ್ಷನೆನಿಸಿದ್ದಾನೆ. ಹಾಗೆಯೇ (135)

**ಧರ್ಮಾಧ್ಯಕ್ಷಃ**ನೂ ಆಗಿರುತ್ತಾನೆ. ಹೇಗೆಂದರೆ : ಜೀವರುಗಳೆಲ್ಲರ ಧರ್ಮಾಧರ್ಮ ಗಳನ್ನು ಅರಿತವನಾಗಿ ಅವರವರ ಕರ್ಮಗಳಿಗೆ ತಕ್ಕಂತೆ ಸ್ವರ್ಗಾದಿ ಸ್ಥಾನಗಳನ್ನು ದಯಪಾಲಿಸಿ ಜಗತ್ತಿನ ಆಡಳಿತವನ್ನು ನಡೆಯಿಸುತ್ತಾನೆ. ಶ್ರೀಪುರಂದರದಾಸರು ಹಾಡಿರುವ 'ಈ ಪರಿಯ ಸೊಬಗಾವ ದೇವರೊಳು ಕಾಣೆ' ಎಂಬ ಗೀತೆಯಲ್ಲಿ ಭಗವಂತನ ಸಿರಿಯನ್ನು ಕೊಂಡಾಡಿರುವುದನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳ ಬೇಕು. **(136)** ಈಗ **ಕೃತಾಕೃತಃ** - ಎಂಬ ನಾಮವನ್ನು ವಿಚಾರ ಮಾಡೋಣ. ಕೃತ-ಎಂದರೆ ಕಾರ್ಯವೆಂದೂ ಅಕೃತ-ಎಂದರೆ ಕೃತವಲ್ಲದ್ದು- ಕಾರಣವೆಂದೂ ಭಾಷ್ಯಕಾರರು ವಿವರಿಸಿರುತ್ತಾರೆ. ಕಾರ್ಯಕಾರಣರೂಪವಾಗಿ ಹರಡಿರುವ ಜಗತ್ತಿನಲ್ಲಿ ಭಗವಂತನು ಕಾರಣನೊ, ಕಾರ್ಯವೊ-ಎಂದು ಸಂಶಯಪಡಬಾರದು. ಎರಡೂ ಅವನೇ ಆಗಿರುತ್ತಾನೆ. ಕನಸಿನಲ್ಲಿ ನಾವು ಸ್ನೇಹಿತನನ್ನು ಭೇಟಿಮಾಡಿದರೆ ಅವನೂ ನಾವೂ - ಇಬ್ಬರೂ ಒಂದೇ ಆಗಿರುವಂತೆ ಭಗವಂತನು ಕೃತಾಕೃತನೆನಿಸಿರುತ್ತಾನೆ. **(137)** ಈಗ **ಚತುರಾತ್ಮಾ** - ಎಂಬ ನಾಮವನ್ನು ವಿಚಾರಮಾಡೋಣ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯ-ಗಳೆಂಬ ಕಾರ್ಯಗಳು ಸಂಪೂರ್ಣವಾಗಿ ಭಗವಂತನ ಅಧೀನ ದಲ್ಲಿರುತ್ತವೆ. ಇವುಗಳಲ್ಲಿ ಸೃಷ್ಟಿಗೆ ಕಾರಣವಾಗಿರುವ ವಿಭೂತಿಗಳು (1) ಬ್ರಹ್ಮ (2) ದಕ್ಷನೇ ಮೊದಲಾದ ಪ್ರಜಾಪತಿಗಳು (3) ಕಾಲ (4) ಎಲ್ಲಾ ಪ್ರಾಣಿಗಳು; ಸ್ಥಿತಿಗೆ ಕಾರಣವಾಗಿರುವ (1) ವಿಷ್ಣು (2) ಮನ್ವಾದಿಗಳು (3) ಕಾಲ (4) ಎಲ್ಲಾ ಭೂತ(ಪ್ರಾಣಿ)ಗಳು; ಮತ್ತು ಲಯಕ್ಕೆ ಕಾರಣವಾಗಿರುವ (1) ರುದ್ರ (2) ಕಾಲ (3) ಯಮ (4) ಎಲ್ಲಾ ಪ್ರಾಣಿಗಳು. ಹೀಗೆ ನಾಲ್ಕು ನಾಲ್ಕು ರೂಪಗಳಿಂದ ಜಗದ್ ವ್ಯಾಪಾರಕ್ಕೆ ಆಧಾರವಾಗಿರುವ ಭಗವಂತನ ವಿಭೂತಿಗಳನ್ನು ಗುರುತಿಸಿ 'ಚತುರಾತ್ಮಾ' ಎಂದು ಭಗವಂತನನ್ನು ಸ್ತುತಿಸಲಾಗಿದೆ. **(138)** ಈಗ **ಚತುರ್ವ್ಯೂಹಃ** - ಎಂಬ ನಾಮವನ್ನು ನೋಡೋಣ : ಭಗವಂತನು (1) ವಾಸುದೇವ (2) ಸಂಕರ್ಷಣ (3) ಪ್ರದ್ಯುಮ್ನ (4) ಅನಿರುದ್ಧ ಎಂಬ ನಾಲ್ಕು ವಿಧವಾದ ಹೆಸರುಗಳಿಂದ ಸೃಷ್ಟಿಯೇ ಮುಂತಾದ ಜಗದ್ವ್ಯಾಪಾರಗಳನ್ನು ನಿರ್ವಹಿಸುತ್ತಾನೆ. ಇವುಗಳನ್ನು ವ್ಯೂಹ-ಗಳೆಂದು ಕರೆಯುತ್ತಾರೆ. ಇವುಗಳಲ್ಲಿ ವಾಸುದೇವನು ಸ್ವತಂತ್ರನು ಹಾಗೂ ಸರ್ವಶಕ್ತನು. ಉಳಿದವರು ಅವನ ಅಂಶಭೂತರು. ಹೀಗೆ ಭಗವಂತನು ತನ್ನನೇ ನಾಲ್ಕು ವ್ಯೂಹ ಗಳಾಗಿ ಮಾಡಿಕೊಂಡು ಜಗದ್ವ್ಯಾಪಾರವನ್ನು ನಿರ್ವಹಿಸುತ್ತಾನೆ. ಆದ್ದರಿಂದ ಚತುರ್ವ್ಯೂಹನೆಂಬ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(139)** ಈಗ **ಚತುರ್ದಂಷ್ಟ್ರಃ** - ಎಂಬ ನಾಮವನ್ನು ವಿಚಾರಮಾಡೋಣ. ಕೋರೆದಾಡೆಗಳು ನಾಲ್ಕು ಇರುವವ ನಾದ್ದರಿಂದ ಚತುರ್ದಂಷ್ಟ್ರನೆನಿಸಿರುತ್ತಾನೆ. ನರಸಿಂಹಾವತಾರ ಕಾಲಕ್ಕೆ ಎರಡು ಕೋಡು ಗಳು ಇದ್ದವು. ಆದ್ದರಿಂದ ಅವುಗಳನ್ನೂ ಒಳಗೊಂಡು ನಾಲ್ಕು ದಂಷ್ಟ್ರಗಳೆಂದು ಭಾವಿಸಿ

ಸ್ತುತಿಸಿದೆ. ಶ್ರುತಿಯಲ್ಲಿಯೂ 'ಚತ್ವಾರಿ ಶೃಂಗಾಃ' ಎಂದು ಭಗವಂತನನ್ನು ಸ್ತೋತ್ರಮಾಡಲಾಗಿದೆ. **(140)** ಈಗ **ಚತುರ್ಭುಜಃ** ಎಂಬ ನಾಮವನ್ನು ಅನುಸಂಧಾನಮಾಡೋಣ. ಮಾನವನಿಗೆ ಎರಡು ಕೈಗಳು ಮಾತ್ರ ಇವೆ. ಆದರೆ ಭಗವಂತನಿಗೆ ನಾಲ್ಕು ಕೈಗಳಿವೆ. ಶಂಖ, ಚಕ್ರ, ಗದೆ, ಪದ್ಮ- ಈ ನಾಲ್ಕನ್ನು ಆ ಕೈಗಳಲ್ಲಿ ಧರಿಸಿರುತ್ತಾನೆ. ಇಂಥ ಮಹಾಮಹಿಮನನ್ನು ಆರಾಧಿಸುವ ಭಕ್ತರಿಗೆ ಈ ಚತುರ್ಭುಜನು ಧರ್ಮ, ಅರ್ಥ, ಕಾಮ, ಮೋಕ್ಷ-ಗಳೆಂಬ ಚತುರ್ವಿಧ ಪುರುಷಾರ್ಥಗಳನ್ನೂ ಈ ವಿಷ್ಣುಭಗವಂತನೊಬ್ಬನೇ ನೀಡುತ್ತಾನೆ. ಬೇರೆ ದೇವತೆಗಳನ್ನು ಆಶ್ರಯಿಸಬೇಕಾಗಿಲ್ಲ -ಎಂದು ಬಲ್ಲವರು ಹೇಳುತ್ತಾರೆ. ಹೀಗೆ ಭಗವಂತನು ಚತುರ್ಭುಜನೆಂದು ಸ್ತುತಿಸಲ್ಪಡುತ್ತಾನೆ.

**ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।**
**ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥16॥**

**(141) ಭ್ರಾಜಿಷ್ಣುಃ** - ಎಂದರೆ ಮಿಗಿಲಾದ ಪ್ರಕಾಶಸ್ವರೂಪನು-ಎಂದರ್ಥ. ಶ್ರುತಿಯಲ್ಲಿ 'ತಸ್ಯ ಭಾಸಾ ಸರ್ವಮಿದಂ ವಿಭಾತಿ'- ಆ ಭಗವಂತನ ಪ್ರಕಾಶದಿಂದಲೇ ಈ ಸೂರ್ಯಚಂದ್ರಾದಿಗಳೂ ಬೆಳಗುತ್ತಾರೆ- ಎಂದು ವರ್ಣಿಸಲಾಗಿದೆ. ಆದ್ದರಿಂದ ಭಗವಂತನ ಬೆಳಕಿನ ಮುಂದೆ ಬೇರೆ ಯಾವದೂ ಬೆಳಗಲಾರದು. ಆದರೆ ಎಲ್ಲಾ ಬೆಳಕುಗಳೂ ಭಗವಂತನ ಬೆಳಕಿನಿಂದಲೇ ಬೆಳಗುವವಾದ್ದರಿಂದ ಭ್ರಾಜಿಷ್ಣುಃ ಎಂದು ಸ್ತುತಿಸಲ್ಪಟ್ಟಿದ್ದಾನೆ. **(142)**ಈಗ **ಭೋಜನಮ್** - ಎಂಬ ನಾಮವನ್ನು ವಿಚಾರ ಮಾಡೋಣ. ಇದು ಪ್ರಕೃತಿಯನ್ನು ಸೂಚಿಸುತ್ತದೆ. ಆಗ ಭಗವಂತನು ಭೋಕ್ತೃವೆನಿಸುವನು. ಉಪನಿಷತ್ತಿನಲ್ಲಿ ಹೀಗಿದೆ : ಯಾವ ಪರಮಾತ್ಮನಿಗೆ ಜಗತ್ತೆಲ್ಲವೂ ಭೋಜ್ಯವಾಗಿಯೂ ಮೃತ್ಯುವು ಕೂಡ ಉಪ್ಪಿನಕಾಯಿಯಂತೆ ಉಪಭೋಜ್ಯನೋ ಆ ಬ್ರಹ್ಮವು ಭೋಕ್ತೃ, ಭೋಜನ, ಭೋಜ್ಯ - ಎಲ್ಲಾ ರೂಪದಿಂದಲೂ ಇದ್ದುಕೊಂಡಿರುತ್ತದೆ - ಎಂದು ವರ್ಣಿಸಿರುತ್ತದೆ. ಆದ್ದರಿಂದ ಈ ನಾಮವು ಭಗವಂತನಿಗೆ ಅನ್ವಯಿಸುತ್ತದೆ. **(143)** ಅನಂತರ **ಭೋಕ್ತಾ** - ಎಂದು ಭಗವಂತನನ್ನು ಸ್ತುತಿಸಿದೆ ಮನುಷ್ಯರೂಪದಿಂದ ಹಾಗೂ ಪ್ರಾಣಿ-ಪಕ್ಷಿಗಳ ರೂಪದಿಂದ ಆಹಾರವನ್ನು ಸ್ವೀಕರಿಸುತ್ತಿರುವ ಭಗವಂತನು ಭೋಕ್ತೃವೆನಿಸಿರುವನು. **(144)** ಈಗ **ಸಹಿಷ್ಣುಃ** - ಎಂಬ ನಾಮವನ್ನು ನೋಡೋಣ. ಸಹಿಷ್ಣು ಎಂದರೆ ಸಹನೆ(ತಡೆದುಕೊಳ್ಳುವ ಶಕ್ತಿ)ಯುಳ್ಳವನು- ಎಂದರ್ಥ. ಹೇಗೆ ತಾಯಿಯು ಮಗುವಿನ ಚೇಷ್ಟೆಗಳನ್ನೆಲ್ಲ ಸಹಿಸಿಕೊಳ್ಳುತ್ತಾಳೋ ಹಾಗೆ ಭಗವಂತನೂ ತನ್ನ ಮಕ್ಕಳಾದ ಪ್ರಜೆಗಳ ಅಪರಾಧಗಳನ್ನೆಲ್ಲ ಸಹಿಸುತ್ತಾನೆ. ಒಮ್ಮೆ ಭೃಗುಮಹರ್ಷಿಯು ವೈಕುಂಠಕ್ಕೆ ಹೋಗಿ ವಿಷ್ಣುವಿನ ಸಹನೆಯನ್ನು ಪರೀಕ್ಷಿಸಲು

ಅವನ ಎದೆಗೆ ಕಾಲಿನಿಂದ ಒದ್ದನಂತೆ. ಆಗ ವಿಷ್ಣುವು 'ಮಹರ್ಷಿಗಳೇ ತಮ್ಮ ಪಾದಕ್ಕೆ ಎಷ್ಟು ನೋವಾಯಿತೊ'ಎಂದನಂತೆ. ಇಂಥ ಸಹನ ಗುಣಸಂಪನ್ನನು ಶ್ರೀಮಹಾವಿಷ್ಣುವು. ಆದ್ದರಿಂದ ಈ ನಾಮವು ಅನ್ವರ್ಥವಾಗಿದೆ. **(145)** ಈಗ **ಜಗದಾದಿಜಃ** - ಎಂಬ ನಾಮವನ್ನು ವಿಚಾರಮಾಡೋಣ. ಈ ಜಗತ್ತು ಹುಟ್ಟುವ ಸಮಯದಲ್ಲಿ ಮೊದಲು ಹುಟ್ಟಿದವನು ಹಿರಣ್ಯಗರ್ಭನು - ಎಂದರೆ ಚತುರ್ಮುಖಬ್ರಹ್ಮನು. ಅನಂತರ ಅವನು ಉಳಿದ ಸೃಷ್ಟಿಯನ್ನು ಮಾಡಿದನು. ಆದರೆ ಬ್ರಹ್ಮನಿಗೆ ತಂದೆಯಾದ ವಿಷ್ಣುವಿಗೆ ಉತ್ಪತ್ತ್ಯಾದಿಗಳಿಲ್ಲ. ಹೀಗಿದ್ದರೂ ಮೊಟ್ಟಮೊದಲು ಜನಿಸಿದ ಹಿರಣ್ಯಗರ್ಭನು 'ಆತ್ಮಾ ವೈಪುತ್ರ ನಾಮಾಸಿ' ಎಂಬ ಶ್ರುತಿಯಂತೆ ಭಗವಂತನೇ ಹಿರಣ್ಯಗರ್ಭನಾಗಿ ಅವತಾರ ಮಾಡಿರುತ್ತಾನೆ. ಆದ್ದರಿಂದ ಜಗದಾದಿಜನೆಂದು ಸ್ತುತಿಸಿದೆ. **(146)** ಈಗ **ಅನಘಃ** - ಎಂಬ ನಾಮವನ್ನು ನೋಡೋಣ. ಇದೇ ನಾಮವು 831ನೆಯದೂ ಆಗಿದೆ. ಅಘ- ಎಂದರೆ ಪಾಪವು. ಇದು ಸಂಪೂರ್ಣವಾಗಿ ಯಾವನಲ್ಲಿಲ್ಲವೋ ಅವನು ಅನಘನು. ಶ್ರುತಿಯಲ್ಲಿ ಆತ್ಮನನ್ನು 'ಅಪಹತ ಪಾಪ್ಮಾ' ಎಂದೇ ಹೊಗಳಿರುತ್ತದೆ. ಆದ್ದರಿಂದ ಭಗವಂತನು ಹೀಗೆ ಸ್ತುತಿಸಲ್ಪಟ್ಟಿರುತ್ತಾನೆ. **(147)** ಈಗ **ವಿಜಯಃ** - ಎಂಬ ನಾಮವನ್ನು ನೋಡೋಣ. ಭಗವಂತನು ಜ್ಞಾನ-ವೈರಾಗ್ಯ-ಐಶ್ವರ್ಯಾದಿಗುಣಗಳಿಂದ ಜಗತ್ತಿನಲ್ಲಿರುವ ದೇವಾದಿ ಎಲ್ಲಾ ಜೀವರುಗಳನ್ನೂ ವಿಜಯನೆನಿಸಿರುತ್ತಾನೆ. ಆದ್ದರಿಂದ ಈ ನಾಮವು ಅನ್ವರ್ಥವಾಗಿದೆ. **(148)** ಈಗ **ಜೇತಾ** - ಎಂಬ ನಾಮವನ್ನು ನೋಡೋಣ. ಭಗವಂತನು ಎಲ್ಲಾ ಜೀವರುಗಳ ಬಲ-ಪರಾಕ್ರಮ, ಶಕ್ತಿ, ಉತ್ಸಾಹಾದಿ ಗುಣಗಳನ್ನೆಲ್ಲ ಗೆದ್ದವನಾಗಿರುತ್ತಾನೆ. ಮತ್ತು ಅವನಿಗೆ ಸಮಾನರಾದವರೇ ಯಾರೂ ಇರುವದಿಲ್ಲ. ಇನ್ನು ಅವನಿಗಿಂತ ಮಿಗಿಲಾದವರು ಎಲ್ಲಿದ್ದಾರು? ಮತ್ತು ಅವನು ಸ್ವಭಾವದಿಂದಲೇ ಎಲ್ಲಕ್ಕೂ ಮೀರಿದ ಬಲವೀರ್ಯಗಳುಳ್ಳವನಾಗಿದ್ದು ಎಲ್ಲವನ್ನೂ ಜಯಿಸಿದ್ದಾನೆ. ಹೀಗೆ ಜೇತಾ - ಎಂಮ ಹೆಸರು ಅವನಿಗೆ ತಕ್ಕದ್ದಾಗಿದೆ. **(149)** ಈಗ **ವಿಶ್ವಯೋನಿಃ** - ಎಂಬ ನಾಮವನ್ನು ನೋಡೋಣ. ಜಗತ್ತಿಗೆಲ್ಲ ಕಾರಣನಾಗಿರುವದಿಂದ ಈ ಹೆಸರು ಬಂದಿದೆ. ಉಪನಿಷತ್ತಿನಲ್ಲಿ ಭೂತಯೋನಿ- ಎಂದೂ ಭಗವಂತನನ್ನು ವರ್ಣಿಸಿದೆ. ನಾಮರೂಪಗಳಿಂದ ಕೂಡಿ ವಿಚಿತ್ರವಾಗಿರುವ ಈ ಜಗತ್ತನ್ನು ನೋಡಿದರೆ ಬಹಳ ಆಶ್ಚರ್ಯವೇ ಆಗುತ್ತದೆ. ಹೂವಿನಗಿಡ ಹಸುರಾಗಿದ್ದು ಹೂವು ಮಾತ್ರ ಬಿಳುಪಾಗಿಯೊ, ಕೆಂಪಾಗಿಯೊ- ಇರುತ್ತದೆ. ಆದರೆ ಈ ವೈಚಿತ್ರ್ಯಕ್ಕೆ ಕಾರಣನು ಭಗವಂತನೇ ಆಗಿದ್ದು ಬ್ರಹ್ಮಾಂಡದಲ್ಲಿರುವ ಎಲ್ಲಾ ವಸ್ತುಗಳಿಗೂ ಕಾರಣನಾಗಿದ್ದು ವಿಶ್ವಯೋನಿಯೆನಿಸಿರುತ್ತಾನೆ. **(150)** ಈಗ **ಪುನರ್ವಸುಃ** - ಎಂಬ ನಾಮವನ್ನು ನೋಡೋಣ. ಮತ್ತೆ ಮತ್ತೆ ಶರೀರಗಳಲ್ಲಿ ವಾಸಮಾಡಿಕೊಂಡಿರುತ್ತಾನಾಗಿ ಆತ್ಮನು ಪುನರ್ವಸುವೆನಿಸಿದ್ದಾನೆ. ಸೃಷ್ಟಿಯಲ್ಲಿ ಎಣಿಸಲಾಗಲಾರದಷ್ಟು ಶರೀರಗಳಿವೆ. ಎಷ್ಟೋ

ಶರೀರಗಳು ಇನ್ನೂ ಮನುಷ್ಯನ ತಿಳಿವಳಿಕೆಗೆ ಎಟುಕಿರುವದಿಲ್ಲ. ಆದರೆ ಭಗವಂತನ ಸೃಷ್ಟಿಯುಲ್ಲಿರುವ ಸಮಸ್ತಶರೀರಗಳೂ ಮತ್ತೆಮತ್ತೆ ಹುಟ್ಟಿ ಕೆಲವು ಕಾಲ ಬಾಳಿ ನಾಶವಾಗುತ್ತವೆ. ಆದರೆ ಶರೀರಿಯಾದ ಆತ್ಮನಿಗೆ ನಾಶವಿಲ್ಲ. ಈ ಆತ್ಮನೇ ಬ್ರಹ್ಮವು. ಈ ರೀತಿ ಭಗವಂತನು ಪುನರ್ವಸು ಎನಿಸಿದ್ದಾನೆ.

**ಉಪೇನ್ದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।**
**ಅತೀಂದ್ರಃ ಸಂಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ ॥17॥**

**(151)** ಈಗ **ಉಪೇಂದ್ರಃ** - ಎಂಬ ನಾಮವನ್ನು ವಿಚಾರಮಾಡೋಣ. ಭಗವಂತನು ಇಂದ್ರನ ತಮ್ಮನಾಗಿ ಅವನನ್ನು ಸಮೀಪಿಸಿದ್ದರಿಂದ ಉಪೇಂದ್ರನೆನಿಸಿರುತ್ತಾನೆ. ಅಥವಾ ಉಪ- ಎಂದರೆ ಉಪರಿ- (ಮೇಲೆ) ಎಂದರ್ಥಮಾಡಿದರೆ ದೇವೇಂದ್ರನಿಗಿಂತ ಮಿಗಿಲಾದವನು- ಎಂದೂ ಅರ್ಥಮಾಡಬಹುದು. ಆಗ ವಿಷ್ಣುವು ಇಂದ್ರನಿಗಿಂತ ಮೇಲಿನವನಾಗಿ, ಉಪೇಂದ್ರನೆನಿಸುತ್ತಾನೆ. ಹೀಗೆ ಶ್ರೀಮಹಾವಿಷ್ಣುವು ಸಮಸ್ತ ದೇವತೆ ಗಳಿಗೂ ಮಿಗಿಲಾದವನು. ದೇವದೇವೋತ್ತಮನು-ಎಂದು ಅರ್ಥ. **(152)** ಈಗ **ವಾಮನಃ** - ನೆಂಬ ನಾಮವನ್ನು ವಿಚಾರಮಾಡೋಣ. ವಾಮಾನಿ ನಯತೀತಿ ವಾಮನಃ - ಎಂಬರ್ಥದಲ್ಲಿ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನಾದ್ದರಿಂದ ವಾಮನನೆನಿಸಿರುತ್ತಾನೆ. ಪುರಾಣದ ಕಥೆಯಂತೆ ಬಲಿಚಕ್ರವರ್ತಿಯನ್ನು ತನ್ನ ವಾಮನ (ಕುಳ್ಳಾದ) ರೂಪದಿಂದ ಪಾತಾಳಕ್ಕೆ ಕಳುಹಿಸಿ ತಾನು ತ್ರಿವಿಕ್ರಮವಾಗಿ ದೇವತೆಗಳನ್ನು ಉದ್ಧಾರಮಾಡಿದನು. ಆದ್ದರಿಂದ ವಾಮನನೆನಿಸಿದನು - ಎಂದೂ ಹೇಳಬಹುದು. ವಿಷ್ಣುವಿನ ದಶಾವತಾರಗಳಲ್ಲಿ ವಾಮನಾವತಾರವೂ ಒಂದಾಗಿರುತ್ತದೆ. ಇನ್ನು ಭಕ್ತರ ಬಯಕೆಗಳನ್ನೆಲ್ಲ ಪೂರ್ಣಗೊಳಿಸುತ್ತಾನಾದ್ದರಿಂದಲೂ (ವಾಮಾನಿ ನಯತೀತಿ ವಾಮನಃ) ಈ ನಾಮವು ಭಗವಂತನಿಗೆ ಸಲ್ಲುತ್ತದೆ - ಎನ್ನಬಹುದು. ಇನ್ನು **(153)** **ಪ್ರಾಂಶುಃ** - ಎಂಬ ನಾಮವನ್ನು ಅನುಸಂಧಾನ ಮಾಡೋಣ. ಪ್ರಾಂಶು ಎಂದರೆ ಎತ್ತರವಾಗಿರುವವನು - ಎಂದರ್ಥ. ಭಗವಂತನು ಬಲಿರಾಜನಿಗೆ ತ್ರಿವಿಕ್ರಮನೆನಿಸಿ ಮೂರು ಲೋಕಗಳನ್ನೂ ವ್ಯಾಪಿಸಿಕೊಂಡಾಗ ಎಲ್ಲರಿಗಿಂತಲೂ ಎತ್ತರದವನಾಗಿದ್ದು 'ಮಹತೋ ಮಹೀಯಾನ್' ಎನಿಸಿಕೊಂಡನು. ಆದ್ದರಿಂದ 'ಪ್ರಾಂಶು' ಎಂಬ ನಾಮವು ಭಗವಂತನಿಗೆ ಅನ್ವರ್ಥವಾಗಿ ಹೊಂದುತ್ತದೆ. **(154)** ಈಗ **ಅಮೋಘಃ** - ನೆಂಬ ನಾಮವನ್ನು ನೋಡೋಣ. ಮೋಘ - ಎಂದರೆ ವ್ಯರ್ಥವೆಂದಭಿಪ್ರಾಯ. ಆದರೆ ಭಗವಂತನು ಯಾವಾಗಲೂ ಅಮೋಘನು - ಎಂದರೆ ಅತ್ಯುಪಯುಕ್ತನು - ಎಂದು ಭಾವ. ಹೇಗೆ ನಮ್ಮ ದೇಹದಲ್ಲಿ ಇಂದ್ರಿಯಗಳು, ಕರಣಗಳು ಇವುಗಳಿಗಿಂತ ಪ್ರಾಣನು ಮುಖ್ಯನೋ, ಅವನಿಲ್ಲವಾದರೆ ಉಳಿದವುಗಳೆಲ್ಲ

ವ್ಯರ್ಥವೋ ಹಾಗೆ ಜಗತ್ತಿಗೆ ಭಗವಂತನೇ ತಿರುಳಾಗಿದ್ದು ಮುಖ್ಯನಾಗಿದ್ದಾನೆ. ಅವನ ಸಂಕಲ್ಪಗಳು, ಕ್ರಿಯೆಗಳು, ಆದೇಶಗಳು- ಇವು ಯಾವವೂ ವ್ಯರ್ಥವಲ್ಲ. ಎಲ್ಲವೂ ಸಾರ್ಥಕವೇ ಸರಿ. ಆದರೆ ಅವನ ಬೆಂಬಲವಿಲ್ಲವಾದರೆ ನಾವು ಮಾಡಿದ್ದೆಲ್ಲ ವ್ಯರ್ಥವೇ ಆಗುವದು. ಆದ್ದರಿಂದ 'ಅಮೋಘ'ನೆಂದು ಸ್ತುತಿಸಲ್ಪಟ್ಟ ಭಗವಂತನನ್ನು ಶರಣಾಗೋಣ. **(155)** ಈಗ **ಶುಚಿಃ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಭಗವಂತನನ್ನು ನೆನೆದರೆ ಮಾನವನು ಶುಚಿಯಾಗುವನೆಂದು ಸ್ಮೃತಿವಾಕ್ಯವಿದೆ. ಸಂಧ್ಯಾವಂದನೆಯ ಆರಂಭದಲ್ಲಿ ಕೆಲವು ಸಂಪ್ರದಾಯದವರು ಹೇಳುವ ಈ ಶ್ಲೋಕವನ್ನು ನೋಡಿರಿ :

*ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।*
*ಯಃ ಸ್ಮರೇತ್ ಪುಂಡರೀಕಾಕ್ಷಂ ಸಬಾಹ್ಯಾಭ್ಯಂತರಃ ಶುಚಿಃ ॥*

"ಯಾವನು ಕಮಲನೇತ್ರನಾದ ಭಗವಂತನನ್ನು ಮನಸ್ಸಿನಲ್ಲಿ ನೆನೆಯುವನೋ ಅವನು ಕೂಡಲೇ ಒಳಗೂ ಹೊರಗೂ ಶುಚಿಯಾಗುವನು' ಎಂದು ಅಭಿಪ್ರಾಯ. ಆದರೆ ಎಲ್ಲರಿಗೂ ತಾನಾಗಿಯೇ ಭಗವಂತನ ನೆನಪು ಬರಲಾರದು. ಅದಕ್ಕಾಗಿ ಭಗವಂತನ ನಾಮಜಪ, ಸತ್ಸಂಗ, ಸದ್ಗ್ರಂಥಗಳ ಪಾರಾಯಣಾದಿಗಳನ್ನುಮಾಡಿ ಮನಸ್ಸನ್ನು ಶುಚಿಗೊಳಿಸಬೇಕಾಗುವದು. ಅನಂತರ ಸಾದಕನು ಶುಚಿ - ಎಂಬ ನಾಮದಿಂದಲೇ ಸ್ತುತಿಸಲ್ಪಡುತ್ತಿರುವ ಭಗವಂತನನ್ನು ಸಮೀಪಿಸಬಹುದಾಗುತ್ತದೆ. ಇದಕ್ಕೆ ಮಾನಸಿಕವಾದ ಶುದ್ಧಿಯೂ ಬೇಕಾಗುತ್ತದೆ. ಹೀಗೆ ಯಾವ ಉಪಾಧಿಗಳ ಸಂಪರ್ಕವೂ ಇಲ್ಲದವನಾದ ನಿತ್ಯಶುಚಿಯಾದ ಶ್ರೀಮಹಾವಿಷ್ಣುವನ್ನು ಶುಚಿಃ - ಎಂಬ ನಾಮದಿಂದ ಸ್ತುತಿಸಲಾಗಿದೆ. **(156)** ಈಗ **ಊರ್ಜಿತಃ** - ಎಂಬ ನಾಮವನ್ನು ವಿಚಾರಮಾಡೋಣ. ವ್ಯವಹಾರದಲ್ಲಿಯೂ ಏನಾದರೊಂದು ಪುಣ್ಯಕೆಲಸವನ್ನು ಮಾಡಿದರೆ 'ಊರ್ಜಿತವಾಯಿತು' ಎನ್ನುವರು. ಆದ್ದರಿಂದ ಸಾಧಕನು ತನ್ನ ಬಲ, ಶಕ್ತಿ, ತಿಳಿವಳಿಕೆ, ಧನಸಂಗ್ರಹಾದಿಸೌಕರ್ಯಗಳಿಗೆ ಅನುಗುಣವಾಗಿ ಯಾವದಾದರೊಂದು ಪುಣ್ಯಕೆಲಸವನ್ನು ಮಾಡಿದಾಗ ಜನರು ಊರ್ಜಿತವಾಯಿತೆನ್ನುವರು. ಇದು ಭಗವಂತನ ಪ್ರೇರಣೆ ಇಲ್ಲದೆ ಆಗುವದಿಲ್ಲ. ಆದ್ದರಿಂದ ವೇದವ್ಯಾಸರು ಇಂಥ ಕಾರ್ಯಗಳನ್ನೇ ನೆಪಮಾಡಿಕೊಂಡು- ಇವು ಭಗವಂತನ ಪ್ರೇರಣೆಯಿಂದ ನಡೆಯುವವಾದ್ದರಿಂದ ಅವನನ್ನೇ 'ಊರ್ಜಿತ'ನೆಂದು ಸ್ತುತಿಸಿರುತ್ತಾರೆ. **(157)** ಈಗ **ಅತೀನ್ದ್ರಃ** - ನೆಂಬ ನಾಮವನ್ನು ವಿಚಾರಮಾಡೋಣ. ಇಂದ್ರನೆಂದರೆ ದೇವರಾಜನು. ಅವನ ಸಂಪತ್ತು ಅಪಾರವಾದುದು. ಇಂದ್ರಶಬ್ದವೇ 'ಇದಿ ಪರಮೈಶ್ವರ್ಯೇ' ಎಂಬ ಧಾತುವಿನಿಂದ ಹುಟ್ಟಿರುತ್ತದೆ. 'ಇಂದ್ರಭೋಗ' ವೆಂಬ ಶಬ್ದವು ಜನರ ರೂಢಿಯಲ್ಲಿದೆ.

ಇಂಥ ದೇವೇಂದ್ರನನ್ನೂ ಮೀರಿದ ಅಪಾರವಾದ ಐಶ್ವರ್ಯವುಳ್ಳ ಭಗವಂತನು ಅತೀಂದ್ರನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(158)** ಈಗ **ಸಂಗ್ರಹಃ** - ನೆಂಬ ನಾಮವನ್ನು ಪರಿಶೀಲಿಸೋಣ. ಭಾಷ್ಯಕಾರರು 'ಪ್ರತಿಸಂಹಾರಾತ್ ಸಂಗ್ರಹಃ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಎಲ್ಲವನ್ನೂ ತನ್ನೊಳಗೆ ಅಡಕಮಾಡಿಕೊಳ್ಳುವದರಿಂದ ಈ ನಾಮವು ಭಗವಂತನಿಗೆ ಒಪ್ಪಾಗಿದೆ. 'ಅಂತಸ್ಥಂ ಯಸ್ಯ ವಿಶ್ವಮ್' ಎಂದು ವಿಷ್ಣುಭಗವಂತನನ್ನು ಕುರಿತ ಧ್ಯಾನಶ್ಲೋಕದಲ್ಲಿ ಇಡಿಯ ಬ್ರಹ್ಮಾಂಡವೇ ಅವನ ಹೊಟ್ಟೆಯಲ್ಲಿ ಅಡಕವಾಗಿದೆ - ಎಂದು ಸ್ತುತಿಸಿರುವದರಿಂದ ನಾಮರೂಪಾತ್ಮಕಜಗತ್ತನ್ನೆಲ್ಲ ತನ್ನೊಳಗೇ ಸಂಗ್ರಹಿಸಿ ಅಡಕಮಾಡಿಕೊಂಡಿರುವ ಭಗವಂತನು ಸಂಗ್ರಹನೆಂದು ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. **(159)** ಈಗ **ಸರ್ಗಃ** -ಎಂಬ ನಾಮವನ್ನು ನೋಡೋಣ. ಸರ್ಗ ಎಂದರೆ ಸೃಷ್ಟಿ-ಎಂದರ್ಥ. ಇಡಿಯ ಬ್ರಹ್ಮಾಂಡಸೃಷ್ಟಿಯೆಲ್ಲವೂ ಆತ್ಮನೇ ಆದ್ದರಿಂದ "ತದಾತ್ಮಾನಂ ಸ್ವಯಮಕುರುತ" ಎಂಬ ವಾಕ್ಯದಂತೆ ಭಗವಂತನು ಸೃಷ್ಟಿಯು ಎಲ್ಲಾ ನಾಮರೂಪ ಗಳಿಂದಲೂ ಕಾಣಿಸಿಕೊಳ್ಳುತ್ತಾ ಸರ್ಗನೆನಿಸಿರುತ್ತಾನೆ. **(160)** ಈಗ **ಧೃತಾತ್ಮಾ** - ಎಂಬ ನಾಮವನ್ನು ನೋಡೋಣ. ಆತ್ಮ ಎಂದರೆ ಸ್ವರೂಪವು ಭಗವಂತನ ಸ್ವರೂಪವು ಯಾವಾಗಲೂ ಒಂದೇ ರೀತಿಯಲ್ಲಿರುತ್ತದೆ. ಅದರಲ್ಲಿ ವಿಕಾರಗಳಿರುವದಿಲ್ಲ. ಉಪಾಧಿ ಗಳ ಸಂಬಂಧವೂ ಇರುವದಿಲ್ಲ. ಆದ್ದರಿಂದ ಆ ಭಗವಂತನು ನಿತ್ಯವರ್ತಮಾನ ಸ್ವರೂಪನು. ಆದ್ದರಿಂದಲೇ ಒಂದೇ ರೀತಿಯಿಂದ ಇರುವ, ಜನ್ಮಾದಿಷಡ್ಭಾವವಿಕಾರ ಗಳಿಲ್ಲದ ಭಗವಂತನು ಧೃತಾತ್ಮನು. **(161)** ಈಗ **ನಿಯಮಃ** - ಎಂಬ ನಾಮವನ್ನು ನೋಡೋಣ. ಅವರವರ ಸ್ಥಾನಗಳಲ್ಲಿ ಪ್ರಜೆಗಳನ್ನೂ ದೇವತೆಗಳನ್ನೂ ಗೊತ್ತುಮಾಡಿ ನೇಮಿಸಿರುತ್ತಾನಾದ್ದರಿಂದ ನಿಯಮನೆನಿಸಿರುತ್ತಾನೆ. ಉದಾಹರಣೆಗೆ ಸೂರ್ಯಚಂದ್ರರು ಇವರು ಆಯಾ ಕಾಲಕ್ಕೆ ಉದಯಿಸಿ ಸಂಚರಿಸುತ್ತಾ ಕಾಲಗಣನೆಗೆ ಸಾಕ್ಷಿಯಾಗಿದ್ದಾರೆ. ಈ ರೀತಿಯಾಗಿ ದೇವತೆಗಳಿಂದಾರಂಭಿಸಿ ಎಲ್ಲಾ ಜೀವರುಗಳನ್ನೂ ಪ್ರಶಾಸನಮಾಡುತ್ತಾ ಜಗಚ್ಚಕ್ರವನ್ನು ನಡೆಯಿಸುತ್ತಾನೆ. ಹೀಗೆ 'ನಿಯಮ' ನೆನಿಸಿದ್ದಾನೆ. **(162)**ಈಗ **ಯಮಃ** -ಎಂಬ ನಾಮವನ್ನು ನೋಡೋಣ. ಎಲ್ಲಾ ಜೀವರುಗಳನ್ನೂ ಒಳಹೊಕ್ಕು ಪ್ರೇರಿಸುತ್ತಾ ಕಟ್ಟುಪಾಡಿನಲ್ಲಿಟ್ಟಿರುತ್ತಾನಾದ್ದರಿಂದ ಯಮನೆನಿಸಿರುತ್ತಾನೆ. 'ಯಮಃ ಸಂಯಮತಾ ಮಹಮ್'ಎಂದು ಗೀತೆಯಲ್ಲಿ ಭಗವಂತನು ತನ್ನ ವಿಭೂತಿಗಳಲ್ಲಿ ಒಂದಾದ ಯಮ ನೆಂಬ ಸ್ವರೂಪವನ್ನು ತಿಳಿಸಿದ್ದಾನೆ. ಆದ್ದರಿಂದ ಯಮನೆಂದು ಸ್ತುತಿಸಲಾಗಿದೆ.

**ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।**
**ಅತೀಂದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ**

**॥18॥**

**(163) ವೇದ್ಯಃ** - ಮೋಕ್ಷವನ್ನು ಬಯಸುವ ಮುಮುಕ್ಷುಗಳಿಗೆ ತಿಳಿಯಲು ಯೋಗ್ಯನಾಗಿರುವದರಿಂದ ವೇದ್ಯನೆನಿಸಿದ್ದಾನೆ. ಭಗವಂತನನ್ನು ತನ್ನ ಆತ್ಮನೆಂದು ಅರಿತುಕೊಳ್ಳದೆ ಯಾವನೂ ಮುಕ್ತನಾಗಲಾರನು. 'ಎಲ್ಲಾ ವೇದಗಳಿಂದಲೂ ತಿಳಿಯ ಬರುವವನು ನಾನೇ' - ಎಂದು ಗೀತೆಯಲ್ಲಿ ಭಗವಂತನೇ ಹೇಳಿದ್ದಾನೆ. ಪುರುಷ ಸೂಕ್ತದಲ್ಲಿಯೂ ಆ ಭಗವಂತನನ್ನು ಅರಿತವನೇ ಇಲ್ಲಿಯೇ ಅಮೃತನಾಗುತ್ತಾನೆ- ಎಂದು ವರ್ಣಿಸಲಾಗಿದೆ. ಹೀಗೆ ಭಗವಂತನು ವೇದ್ಯನೆನಿಸಿರುತ್ತಾನೆ. **(164)ವೈದ್ಯಃ** - ಇನ್ನು ಎಲ್ಲಾ ವಿದ್ಯೆಗಳನ್ನೂ ಸಂಪೂರ್ಣವಾಗಿ ಬಲ್ಲವನಾದ್ದರಿಂದ ವೈದ್ಯನೆನಿಸಿದ್ದಾನೆ. ವೈದ್ಯನೆಂದರೆ ವ್ಯವಹಾರದಲ್ಲಿ ಖಾಯಿಲೆಗೆ ಚಿಕಿತ್ಸೆಮಾಡುವ ಡಾಕ್ಟರು- ಎಂದರ್ಥವಿದೆ. ಅದರಂತೆಯೇ ಭಗವಂತನೂ "ಭವರೋಗ"ವೆಂಬ ಖಾಯಿಲೆಗೆ ವೈದ್ಯನೇ ಆಗಿರುತ್ತಾನೆ. ಭಗವಂತನ ಸ್ವರೂಪವನ್ನರಿತು ಭಕ್ತನಾದವನಿಗೆ ಅವನು ಭವರೋಗವನ್ನು ಪರಿಹಾರ ಮಾಡುತ್ತಾನೆ. ಇನ್ನು ಭಗವಂತನನ್ನೇ ಪೂರ್ಣವಾಗಿ ಶರಣುಹೊಕ್ಕವರನ್ನು ಪಾಪ ಗಳೆಂಬ ರೋಗಗಳಿಂದ ಬಿಡುಗಡೆಮಾಡಿ ಉದ್ಧಾರಮಾಡುತ್ತಾನೆ - ಹೀಗೆ ಭಗವಂತ ನನ್ನು ವೈದ್ಯನೆಂದು ಸ್ತುತಿಸಲಾಗಿದೆ. **(165)** ಈಗ **ಸದಾಯೋಗೀ** - ಎಂಬ ನಾಮ ವನ್ನು ವಿಚಾರಮಾಡೋಣ. ಯೋಗೀ ಎಂದರೆ ಯಾವಾಗಲೂ ಹೊರತೋರಿಕೊಂಡಿ ರುವ ಸ್ವರೂಪದವನು ಎಂದರ್ಥ. ಭಗವಂತನು ಎಲ್ಲಾ ಜೀವರುಗಳನ್ನೂ ಒಳಹೊಕ್ಕು ಆಯಾ ನಾಮರೂಪಗಳಿಂದ ದೇವತೆ, ಮನುಷ್ಯ, ಪ್ರಾಣಿಗಳು, ಸ್ಥಾವರಗಳು - ಮುಂತಾದ ರೂಪಗಳಿಂದ ತೋರಿಕೊಂಡೇ ಇರುತ್ತಾನೆ. ಹೀಗೆ ಎಲ್ಲೆಲ್ಲಿಯೂ ಎಲ್ಲಾ ಕಾಲಕ್ಕೂ ಎಲ್ಲಾ ರೂಪಗಳಿಂದಲೂ ತೋರಿಕೊಂಡಿರುವ ಭಗವಂತನು ಸದಾ ಯೋಗಿಯೆನಿಸಿರುತ್ತಾನೆ. **(166)** ಈಗ **ವೀರಹಾ** -ಎಂಬ ನಾಮವನ್ನು ನೋಡೋಣ. ಇಲ್ಲಿ ಭಾಷ್ಯಕಾರರು ವೀರ - ಎಂಬ ಶಬ್ದಕ್ಕೆ ಅಸುರರು - ಎಂದರ್ಥಮಾಡಿದ್ದಾರೆ. ಆಗ ಇಂಥ ಅಸುರರನ್ನು ಯುದ್ಧದಲ್ಲಿ ಕೊಲ್ಲುವವನು - ಎಂಬರ್ಥದಲ್ಲಿ 'ವೀರಹಾ' ಎಂಬುದು ಭಗವಂತನಿಗೆ ಒಪ್ಪುವ ಹೆಸರಾಗಿದೆ. ಇದೇ ನಾಮವು ಮುಂದೆ 741, 927ನೆಯವುಗಳಾಗಿ ಮತ್ತೆರಡು ಬಾರಿ ಬಂದಿವೆ. ಅವುಗಳ ಅರ್ಥವನ್ನು ಅಲ್ಲಲ್ಲಿಯೇ ವಿಚಾರಮಾಡೋಣ. **(167)** ಈಗ **ಮಾಧವಃ** - ಎಂಬ ನಾಮವನ್ನು ಅನುಸಂಧಾನ ಮಾಡೋಣ. ಮಾ - ಎಂದರೆ ಹರಿವಂಶ ಪುರಾಣದಲ್ಲಿರುವ ಶ್ಲೋಕದಂತೆ (3-88-49) ವಿದ್ಯೆ ಎಂದೂ ಧವ - ಎಂದರೆ ಅದರ ಒಡೆಯನೆಂದೂ ಭಾಷ್ಯಕಾರರು ವ್ಯಾಖ್ಯಾನ ಮಾಡಿದ್ದಾರೆ. ಭಗವಂತನು ಎಲ್ಲಾ ವಿದ್ಯೆಗಳಿಗೂ ಅಧಿಪತಿ - ಎಂಬುದು ಸೂಕ್ತವೇ ಆಗಿದೆ. ಹೀಗೆ ಸಕಲ ವಿದ್ಯಾಧಿಪತಿಯಾದ ಶ್ರೀವಿಷ್ಣುವು ಮಾಧವನೆಂದು ಸ್ತುತಿಸಲ್ಪಟ್ಟಿರು ತ್ತಾನೆ. **(168)** ಈಗ **ಮಧುಃ** - ಎಂಬ ನಾಮವನ್ನು ನೋಡೋಣ. ಸಾಮಾನ್ಯಾರ್ಥ ದಲ್ಲಿ ಮಧು - ಎಂದರೆ ಜೇನುತುಪ್ಪವು. ಇದು ನಾಲಗೆಗೆ ಹೇಗೆ ಸಂತೋಷವನ್ನುಂಟು

ಮಾಡುವದೋ, ಹಾಗೆ ಭಗವಂತನೂ ತನ್ನ ಭಕ್ತರಿಗೆ ಸಂತೋಷವನ್ನು ನೀಡುವನು. ಆದ್ದರಿಂದ ಮಧುವೆನಿಸಿದನು. ಇನ್ನು ಭಗವಂತನನ್ನು ತಿಳಿಸಿಕೊಡುವ ಬ್ರಹ್ಮವಿದ್ಯೆನ್ನೂ ಉಪನಿಷತ್ತಿನಲ್ಲಿ 'ಮಧು' ಎಂದೇ ಕರೆದಿದೆ. ಈ ವಿದ್ಯೆಯನ್ನು ಅಶ್ವಿನೀದೇವತೆಗಳಿಗೆ ದಧ್ಯಜ್ ಅಥರ್ವಣನೆಂಬ ಋಷಿಯು ಉಪದೇಶ ಮಾಡಿದ್ದಾನೆ. ಪರಮಾತ್ಮನ ನಿಜತತ್ತ್ವವನ್ನು ತಿಳಿಸಿಕೊಡುವ ಈ ಮಧುವಿದ್ಯೆಯು ವೇದಾಂತಗಳಲ್ಲಿ ವಿವರಿಸಲ್ಪಟ್ಟಿದ್ದು ಮುಮುಕ್ಷುಗಳಿಗೆ ಮುಕ್ತಿಸಾಧನವಾಗಿದೆ. **(169)** ಈಗ **ಅತೀಂದ್ರಿಯಃ** - ಎಂಬ ನಾಮವನ್ನು ವಿಚಾರಮಾಡೋಣ. ಕರ್ಮೇಂದ್ರಿಯ ಗಳಿಗಾಗಲಿ, ಜ್ಞಾನೇಂದ್ರಿಯಗಳಿಗಾಗಲಿ ನಿಲುಕದವನು ಅತೀಂದ್ರಿಯನೆನಿಸುತ್ತಾನೆ. ಇಂದ್ರಿಯಗಳಿಗೆ ಗ್ರಾಹ್ಯವಾದ ಶಬ್ದಾದಿಗಳು ಭಗವಂತನಲ್ಲಿಲ್ಲ. ಆದ್ದರಿಂದ ಅವನು ಅವಿಷಯನು. ಶ್ರುತಿಯಲ್ಲಿಯೂ "ಅಶಬ್ದಮಸ್ಪರ್ಶಮರೂಪಮ್.." ಎಂದು ಬ್ರಹ್ಮ ವನ್ನು ವರ್ಣಿಸಿರುತ್ತದೆ. ಆದ್ದರಿಂದ ಇಂದ್ರಿಯಗಳಿಗೆ ಆತ್ಮನು ಗೋಚರನಲ್ಲ. ಹಾಗಾದರೆ ಆತ್ಮನನ್ನು ಅರಿಯುವದಾದರೂ ಹೇಗೆ? ಎಂಬ ಪ್ರಶ್ನೆಗೆ ಉಪನಿಷತ್ತು ಹೀಗೆ ತಿಳಿಸುತ್ತದೆ. "ನಿಜ, ಆತ್ಮನು ಇಂದ್ರಿಯಗೋಚರನಲ್ಲದಿದ್ದರೂ ಇಂದ್ರಿಯ ಗಳೆಲ್ಲವೂ ಅವನ ಚೈತನ್ಯಶಕ್ತಿಯಿಂದಲೇ ವ್ಯಾಪಾರಮಾಡುವದರಿಂದ ಅವನು ಇದ್ದಾ ನೆಂದು ತಿಳಿಯಬೇಕು". ಹೇಗೆ ಒಂದು ಕಾರ್ಯಾಗಾರದಲ್ಲಿ ಚಲಿಸುತ್ತಿರುವ ಯಂತ್ರ ಗಳಿಗೆ ವಿದ್ಯುಚ್ಛಕ್ತಿಯೇ ಮೂಲವೋ, ಅದು ಕಾಣದಿದ್ದರೂ ಅದಿಲ್ಲದೆ ಯಾವ ಯಂತ್ರಗಳೂ ನಡೆಯಲಾರವೋ ಹಾಗೆ ಭಗವಂತನ ಸಾನ್ನಿಧ್ಯವಿಲ್ಲದೆ ಯಾವ ಜಗದ್ ವ್ಯಾಪಾರವೂ ನಡೆಯಲಾರವು. ಆದ್ದರಿಂದ ಭಗವಂತನು ಅತೀಂದ್ರಿಯನಾದರೂ ಸತ್ ಸ್ವರೂಪನೇ ಆಗಿರುತ್ತಾನೆ. ಅವನ ಅಸ್ತಿತ್ವಕ್ಕೆ ನಾಶವೇ ಇಲ್ಲ. ಹೀಗೆ ಆ ಭಗವಂತನು ಅತೀಂದ್ರಿಯನೆನಿಸಿದ್ದಾನೆ. **(170)** ಈಗ **ಮಹಾಮಾಯಃ** - ನೆಂಬ ನಾಮವನ್ನು ವಿಚಾರ ಮಾಡೋಣ. ಮಾಯೆಗೆ ಇರುವಿಕೆ ಇಲ್ಲ; ತೋರಿಕೆ ಮಾತ್ರವೇ ಇರುತ್ತದೆ. ಉದಾಹರಣೆಗೆ ನೆರಳಿದ್ದಂತೆ. ಆ ನೆರಳು ಮನುಷ್ಯನ ಜೊತೆಗೆ ಎರಡನೆಯ ದಾಗುವದೇ ಇಲ್ಲ. ಹಾಗೆಯೇ ಭಗವಂತನನೊಬ್ಬನೇ ನಿಜವಾಗಿ ಇರುವವನು. ಪ್ರಪಂಚವು ಅವನಿಗೆ ಎರಡನೆಯದಲ್ಲ. ಅದು ಭಗವಂತನ ಮಾಯೆ. ಯಾ = ಯಾವದು, ಮಾ = ನಿಜವಾಗಿಲ್ಲವೋ ಅದೇ ಮಾಯೆಯು. ಇದನ್ನು ಸ್ವಾಧೀನ ದಲ್ಲಿಟ್ಟುಕೊಂಡು ಭಗವಂತನು ಜಗದ್‌ವ್ಯಾಪಾರವನ್ನು ನಡೆಯಿಸುತ್ತಿರುವನು. ಆದರೆ ಈ ಮಾಯೆಯು ಆ ಭಗವಂತನಿಗೆ ಏನೂ ಮಾಡಲಾರದು. ಅವನ ಆಶ್ರಯದಲ್ಲಿ ಇದು ತೋರುತ್ತದೆ. ಈ ಮಾಯೆಯನ್ನು ಸ್ವಾಧೀನಪಡಿಸಿಕೊಂಡು ಭಗವಂತನು ತನ್ನ ಲೀಲೆಯನ್ನು ಪ್ರಕಟಪಡಿಸುವನಾದ್ದರಿಂದ ಮಹಾಮಾಯನೆನಿಸಿರುತ್ತಾನೆ. **(171)** ಈಗ **ಮಹೋತ್ಸಾಹಃ** - ನೆಂಬ ನಾಮವನ್ನು ಅನುಸಂಧಾನಮಾಡೋಣ. ಜಗತ್ತಿನ

ಉತ್ಪತ್ತಿ, ಸ್ಥಿತಿ, ಲಯ - ಈ ವ್ಯಾಪಾರಗಳಲ್ಲಿ ಸದಾ ನಿರತನಾಗಿದ್ದು ಕಾಲಕಾಲಕ್ಕೆ ನಿರ್ವಹಿಸುವ ದರಿಂದ ಹಾಗೂ ಬೇಸರವೇ ಇಲ್ಲದೆ ಕಾರ್ಯಪ್ರವೃತ್ತನಾಗಿರುವದರಿಂದ ಮಹೋತ್ಸಾಹನೆನಿಸಿದ್ದಾನೆ. ಹಾಗೆಯೇ **(172)**ಈಗ **ಮಹಾಬಲಃ** -ಎಂಬ ನಾಮವನ್ನು ವಿಚಾರಮಾಡೋಣ. ಬಲಿಷ್ಠರಲ್ಲೆಲ್ಲ ಹೆಚ್ಚಿನ ಬಲಶಾಲಿಯಾಗಿರುವದರಿಂದ ಮಹಾಬಲನೆನಿಸಿರುತ್ತಾನೆ.

**ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।**
**ಅನಿರ್ದೇಶ್ಯವಪುಃ ಶ್ರೀಮಾನ್ ಅಮೇಯಾತ್ಮಾ ಮಹಾದ್ರಿಧೃಕ್ ॥19॥**

**(173) ಮಹಾಬುದ್ಧಿಃ** - ಎಂಬ ನಾಮವನ್ನು ವಿಚಾರಮಾಡೋಣ. ಬುದ್ಧಿವಂತರಲ್ಲೆಲ್ಲ ಹೆಚ್ಚಿನ ಬುದ್ಧಿವಂತನಾದ್ದರಿಂದ ಮಹಾಬುದ್ಧಿಯೆನಿಸಿದ್ದಾನೆ. ಹಿರಣ್ಯಕಶಿಪುವು ತನಗೆ ದೇವ-ಮಾನವ-ಪಶು-ಸ್ಥಾವರಾದಿ-ಯಾವದರಿಂದಲೂ ಮರಣವುಂಟಾಗಬಾರದೆಂಬ ವರವನ್ನು ಬ್ರಹ್ಮನಿಂದ ಪಡೆದಿದ್ದನಾದ್ದರಿಂದ ಅದಕ್ಕೆ ತಕ್ಕಂತೆ ಅರ್ಧಮನುಷ್ಯ - ಅರ್ಧಮೃಗನಾಗಿ ಅವತರಿಸಿ ಯಾವ ಆಯುಧವನ್ನೂ ಬಳಸದೆ ಪ್ರಾತಃಕಾಲಾದಿ ಯಾವ ಕಾಲಾವಿಭಾಗಕ್ಕೂ ಒಳಪಡದ ಸಂಧ್ಯಾಕಾಲದಲ್ಲಿ ಒಳಗು-ಹೊರಗುಗಳಿಲ್ಲದ ಹೊಸಿಲು ಮೇಲೆ ಕುಳಿತು ಕೇವಲ ಉಗುರುಗಳಿಂದ ಆ ದೈತ್ಯನನ್ನು ಸೀಳಿದ ಭಗವಂತನನ್ನು 'ಮಹಾಬುದ್ಧಿ'ಯೆಂದು ಸ್ತುತಿಸಿರುವದು ಅತ್ಯಂತ ಸೂಕ್ತವೇ ಆಗಿದೆ. **(174)** ಹಾಗೆಯೇ **ಮಹಾವೀರ್ಯಃ** - ನೆನಿಸಿರುತ್ತಾನೆ. ಭಗವಂತನ ಬಲವೀರ್ಯಪರಾಕ್ರಮಗಳು ನಿರತಿಶಯವಾದವು. ರಾಮಾವತಾರದಲ್ಲಿ ಕೇವಲ ಮನುಷ್ಯನಾಗಿಯೇ ದಶಕಂಠರಾವಣನನ್ನು ಅವನ ಸೇನಾಪರಿವಾರಗಳ ಸಮೇತವಾಗಿ ಸೋಲಿಸಿದ್ದು, ವರಹಾವತಾರದಲ್ಲಿ ಭೂಮಿಯನ್ನೇ ಮೇಲಕ್ಕೆ ಎತ್ತಿ ತಂದದ್ದು, ಕೃಷ್ಣಾವತಾರ ಕಾಲಕ್ಕೆ ಗೋವರ್ಧನಪರ್ವತವನ್ನೇ ಮೇಲಕ್ಕೆ ಎತ್ತಿ ಹಿಡಿದದ್ದು, ಇತ್ಯಾದಿ ಲೀಲೆಗಳೆಲ್ಲವೂ ಭಗವಂತನ ಮಹಾವೀರ್ಯವನ್ನು ಸ್ಫುಟಗೊಳಿಸುತ್ತವೆ. **(175)** ಈಗ **ಮಹಾಶಕ್ತಿಃ** - ಎಂಬ ನಾಮದ ಅಭಿಪ್ರಾಯವನ್ನು ಚಿಂತಿಸೋಣ. ಪರಮಾತ್ಮನ ಶಕ್ತಿಯು ಅಪರಿಮಿತವಾದದ್ದು. ವಿಷ್ಣುಸೂಕ್ತದಲ್ಲಿ ಹೀಗೆಂದಿದೆ : ''ಆ ವಿಷ್ಣುವಿನ ಶಕ್ತಿ - ವೀರ್ಯಗಳನ್ನು ಅಳೆಯುವವರು ಯಾರಿದ್ದಾರು? ಒಂದು ವೇಳೆ ಯಾವನಾದರೂ ಈ ಭೂಮಿಯನ್ನೆಲ್ಲ ಪುಡಿಮಾಡಿ ಅದರಲ್ಲಿರುವ 'ಕಣ'(ಧೂಳಿನ ಅಣು)ಗಳನ್ನು ಎಣಿಸಿ ತಿಳಿಸಬಲ್ಲವನಾದರೆ ಅಂಥವನೇನಾದರೂ ವಿಷ್ಣುವಿನ ವೀರ್ಯವನ್ನು ಅಳೆದಾನು'' - ಹೀಗೆ ತಿಳಿಸುತ್ತಾ ಆ ಭಗವಂತನ ಅಪರಿಮಿತವಾದ ವೀರ್ಯಕ್ಕೆ ಅಳತೆಯಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಆ ಭಗವಂತನ ಶಕ್ತಿಯು ಎಂದೆಂದಿಗೂ ಮಹಾಶಕ್ತಿಯೇ ಆಗಿದ್ದು ಅದೇ ಹೆಸರಿನಿಂದ ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. **(176)** ಈಗ **ಮಹಾದ್ಯುತಿಃ**

- ಎಂಬ ನಾಮವನ್ನು ನೋಡೋಣ. ದ್ಯುತಿ ಎಂದರೆ ತೇಜಸ್ಸು, ಪ್ರತಿಭೆ - ಎಂದರ್ಥ. ಇದು ದೇಹ ಹಾಗೂ ಇಂದ್ರಿಯಮನಆದಿಗಳಿಗೂ ಅನ್ವಯಿಸುತ್ತದೆ. ಭಗವಂತನ ಶರೀರಕಾಂತಿಯೂ ಅಪರಿಮಿತವಾದದ್ದು; ಹಾಗೂ ಅತ್ಯಂತ ಸುಂದರ ವಾದದ್ದು ಇನ್ನು ಸೂರ್ಯ-ಚಂದ್ರ-ನಕ್ಷತ್ರಾದಿಗಳ ರೂಪದಿಂದಲೂ ಹೊಳೆಯುತ್ತಿರುವ ಆ ತೇಜಸ್ಸನ್ನು ಏತರಿಂದಲೂ ಅಳೆಯಲಾಗುವದಿಲ್ಲ. ಉಪನಿಷತ್ತಿನಲ್ಲಿ ಭಗವಂತನನ್ನು 'ಜ್ಯೋತಿಷಾಂ ಜ್ಯೋತಿಃ' ಎಂದು ವರ್ಣಿಸಿದೆ. ಹಾಗೂ ಸೂರ್ಯಚಂದ್ರಾದಿಗಳ ಬೆಳಕೂ ಭಗವಂತನ ಬೆಳಕಿನ ಪ್ರತಿಬಿಂಬಗಳೇ ಆಗಿವೆ - ಎಂದು ವಿವರಿಸಿದೆ. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಕನಸಿನಲ್ಲಿ ಕಾಣುವ ಪ್ರಪಂಚವೆಲ್ಲವೂ ಆ ಭಗವಂತನ ಅಸ್ತಿತ್ವದ ಬೆಳಕೇ ಆಗಿದೆ. ಆದ್ದರಿಂದ ಸ್ವಯಂ ಜ್ಯೋತಿಯಾದ ಭಗವಂತನನ್ನು 'ಮಹಾದ್ಯುತಿ' ಎಂದು ಬಣ್ಣಿಸಿರುವದು ಸೂಕ್ತವೇ ಆಗಿದೆ. **(177)** ಈಗ **ಅನಿರ್ದೇಶ್ಯವಪುಃ** - ಎಂಬ ನಾಮವನ್ನು ನೋಡೋಣ. ಭಗವಂತನ ಶರೀರವನ್ನು ಇಂಥದ್ದು - ಎಂದೇ ಗುರುತಿಸಿ ತಿಳಿಸಲಾಗುವದಿಲ್ಲ. ಉದಾಹರಣೆಗೆ ಅವನನ್ನು ಹಸು - ಎಂದು ತಿಳಿಸಿದರೆ ಹುಲಿಯಲ್ಲ - ಎಂದಾಗುತ್ತದೆ. ಆದ್ದರಿಂದ ಯಾವ ಶರೀರದ - ಹೆಸರಿನಿಂದಲೂ ಅವನನ್ನು ನಿರ್ದೇಶಮಾಡಲಾಗುವದಿಲ್ಲ. ಹಾಗೆಯೇ ಇಂಥ ಶರೀರವುಳ್ಳವನು - ಎಂದೂ ಹೇಳಲಾಗುವದಿಲ್ಲ. ಹೀಗಿರುವದರಿಂದ ಅನಿರ್ದೇಶ್ಯವಪುವೆನಿಸಿದ್ದಾನೆ. ಆದರೆ ಆತ್ಮಸ್ವರೂಪದಿಂದ ಎಲ್ಲಾ ಶರೀರಗಳನ್ನೂ ವ್ಯಾಪಿಸಿರುತ್ತಾನಾದ್ದರಿಂದ ಎಲ್ಲಾ ಹೆಸರುಗಳೂ ನಾಮರೂಪಗಳೂ ಅವನೇ ಆಗಿದ್ದು ಕಡೆಗೆ ನಾಮರೂಪಗಳ ಚೌಕಟ್ಟನ್ನುದುಡಿದವನಾಗಿದ್ದು ಅನಿರ್ದೇಶ್ಯವಪುವೆನಿಸಿರುತ್ತಾನೆ - ಎಂದಭಿಪ್ರಾಯ. **(178)** ಈಗ **ಶ್ರೀಮಾನ್** - ಎಂಬ ನಾಮವನ್ನು ನೋಡೋಣ. ಶ್ರೀ ಎಂದರೆ ಸಂಪತ್ತು. ಇದು ವಿದ್ಯೆ, ಧನ, ಗುಣ, ರೂಪ, ವಿನಯ - ಇತ್ಯಾದಿ ಎಲ್ಲಾ ಗುಣಗಳನ್ನೂ ಒಳಗೊಂಡಿರುತ್ತದೆ. ಇವೆಲ್ಲವೂ ಅಪರಿಮಿತವಾಗಿ, ಅತ್ಯಂತ ಮಿಗಿಲಾಗಿ, ನಿತ್ಯವಾಗಿ, ಶಾಶ್ವತವಾಗಿ ಯಾವನಲ್ಲಿರುವವೋ ಅವನು ಶ್ರೀಮಾನ್ - ಎನಿಸುವನು. ಹೀಗೆ ಭಗವಂತನು ಷಡ್ಗುಣೈಶ್ವರ್ಯಸಂಪನ್ನನಾಗಿ ನಿತ್ಯಶ್ರೀಮಂತನಾಗಿರುವನು - ಎಂದು ಸ್ತುತಿಸಿದೆ. **(179)** ಈಗ **ಅಮೇಯಾತ್ಮಾ** - ಎಂಬ ನಾಮವನ್ನು ನೋಡೋಣ. ಇದು 102ನೆಯ ನಾಮವಾಗಿಯೂ ಪಠಿತವಾಗಿದೆ. ಅಳೆಯಲು ಅಸಾಧ್ಯವಾದ - ಎಂದರೆ ಯಾವ ಜೀವರಿಂದಲೂ ಗೊತ್ತುಪಡಿಸಲಾಗದಂಥ ಬುದ್ಧಿ ವಿಶೇಷವು ಯಾವಾತನಿಗೆ ಇದೆಯೋ ಅವನು ಈ ಅಮೇಯಾತ್ಮನು. ಭಗವಂತನ ಸದ್ಬುದ್ಧಿಯು ಯಾರಿಗೂ ಅಳೆಯಲು ಅಸಾಧ್ಯವಾದುದು, ಹಾಗೂ ಆಯಾ ಕಾಲಕ್ಕೆ ತಕ್ಕಂತೆ ಆಲೋಚಿಸಿ ಕಾರ್ಯಸಾಧನೆಮಾಡುವ ಬುದ್ಧಿಯು ಬೇರಾರಿಗೂ ಇರಲಾರದು. ಹೀಗೆ ಜಗತ್ತಿನ ಆಡಳಿತವನ್ನೆಲ್ಲ ನಿರ್ವಹಿಸುವ ಭಗವಂತನ ಬುದ್ಧಿಸಾಮರ್ಥ್ಯವು

ಯಾವ ಊಹೆಗೂ ಎಟುಕಲಾರದ ಮಟ್ಟದಲ್ಲಿದೆ. ಆದ್ದರಿಂದ ಅಮೇಯಾತ್ಮನೆನಿಸಿರುತ್ತಾನೆ. **(180)** ಈಗ **ಮಹಾದ್ರಿಧೃಕ್** - ಎಂಬ ನಾಮವನ್ನು ನೋಡೋಣ. ಅದ್ರಿ - ಎಂದರೆ ಪರ್ವತವು. ದೇವತೆಗಳು ಅಮೃತವನ್ನು ಪಡೆಯುವದಕ್ಕಾಗಿ ಮಂದರ ಪರ್ವತವನ್ನು ಕಡಗೋಲಾಗಿ ಮಾಡಿಕೊಂಡು ಕ್ಷೀರಸಮುದ್ರವನ್ನು ಕಡೆಯುತ್ತಿರುವಾಗ - ಹಾಗೂ ಗೋಪರುಗಳು ಗೋವರ್ಧನಪರ್ವತದ ಬುಡದಲ್ಲಿ ವಾಸಮಾಡುತ್ತಿದ್ದಾಗ ದೇವೇಂದ್ರನು ಮಳೆಗರೆದು ಗೋವುಗಳನ್ನೂ ಗೋಪರುಗಳನ್ನೂ ನೀರಿನಲ್ಲಿ ತೇಲುವಂತೆ ಮಾಡುತ್ತಿರುವಾಗ ಭಗವಂತನು ಆ ಪರ್ವತವನ್ನೇ ಮೇಲಕ್ಕೆತ್ತಿ ಛತ್ರಿಯಂತೆ ಹಿಡಿದು ಗೋವುಗಳನ್ನೂ ಗೋಪರನ್ನೂ ಸಂರಕ್ಷಿಸಿದನು. ಹೀಗೆ ಎರಡು ಸಂದರ್ಭದಲ್ಲಿಯೂ ಮಂದರ ಹಾಗೂ ಗೋವರ್ಧನ ಪರ್ವತಗಳನ್ನು ಎತ್ತಿಹಿಡಿದದ್ದರಿಂದ ಮಹಾದ್ರಿಧೃಕ್ -ಎಂದು ಸ್ತುತಿಸಲ್ಪಟ್ಟಿರುತ್ತಾನೆ.

**ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।**
**ಅನಿರುದ್ಧಃ ಸುರಾನಂದೋ ಗೋವಿಂದೋ ಗೋವಿದಾಂ ಪತಿಃ ॥20॥**

**(181) ಮಹೇಷ್ವಾಸಃ** - ಮಹತ್ತಾದ ಎಂದರೆ ವ್ಯರ್ಥವಲ್ಲದ ಬಿಲ್ಲನ್ನು ಹಿಡಿದು ಬಾಣ ಪ್ರಯೋಗಮಾಡಿ ರಾಮಾವತಾರಕಾಲಕ್ಕೆ ಭಗವಂತನು ರಾವಣಾದಿರಾಕ್ಷಸರನ್ನೆಲ್ಲ ಸಂಹರಿಸಿದನು. ರಾಮನು ಪ್ರಯೋಗಿಸಿದ ಯಾವ ಬಾಣವೂ ವ್ಯರ್ಥವಾಗಲಿಲ್ಲ. ಹೀಗೆ ಅತ್ಯಂತ ಮಹತ್ತರವಾದ ಬಿಲ್ಲು-ಬಾಣಗಳುಳ್ಳವನಾಗಿ ಭಗವಂತನು ರಾಮಾವತಾರಕಾಲಕ್ಕೆ ರಾಕ್ಷಸರನ್ನೆಲ್ಲ ಸಂಹರಿಸಿದನಾದ್ದರಿಂದ ಮಹೇಷ್ವಾಸ - ಎಂದರೆ ಮಹತ್ತಾದ ಬಿಲ್ಲುಬಾಣಗಳುಳ್ಳವನೆಂದು ಭಗವಂತನನ್ನು ಸ್ತುತಿಸಲಾಗಿದೆ. **(182)** ಈಗ **ಮಹೀಭರ್ತಾ** - ಎಂಬ ನಾಮವನ್ನು ನೋಡೋಣ. ಅವಾಂತರಪ್ರಲಯಕಾಲಕ್ಕೆ ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ವರಾಹರೂಪದಿಂದ ಮೇಲೆತ್ತಿ ಉದ್ಧಾರ ಮಾಡಿದನು. ಆದ್ದರಿಂದ ಭೂಮಿಗೆ ಒಡೆಯನೆನಿಸಿ ಮಹೀಭರ್ತನೆನಿಸಿರುತ್ತಾನೆ. **(183)** ಈಗ **ಶ್ರೀನಿವಾಸಃ** - ನೆಂಬ ನಾಮವನ್ನು ನೋಡೋಣ. ಶ್ರೀ-ಎಂದರೆ ಲಕ್ಷ್ಮಿಯು. ಈಕೆಯು ನಾರಾಯಣನನ್ನು ಯಾವಾಗಲೂ ಅಗಲದೆ ಅವನ ವಕ್ಷಸ್ಥಲದಲ್ಲಿಯೇ ವಾಸಮಾಡಿಕೊಂಡಿರುವಳು. ಆದ್ದರಿಂದ 'ಅನಪಾಯಿನಿ' ಎನಿಸಿರುವಳು. ಹೀಗೆ ನಿತ್ಯಶ್ರೀಪತಿಯಾದ ಭಗವಂತನು ಶ್ರೀನಿವಾಸನೆನಿಸಿರುವನು. **(184)** ಈಗ **ಸತಾಂ ಗತಿಃ** - ಎಂಬ ನಾಮವನ್ನು ನೋಡೋಣ. ಸತ್ಪುರುಷರಿಗೆ ಯಾವಾಗಲೂ ಪರಮಾಶ್ರಯವಾಗಿದ್ದು ಅವರನ್ನು ಪರಮಪುರುಷಾರ್ಥಕ್ಕೆ ಒಯ್ಯುವವನಾದ್ದರಿಂದ ಸತಾಂ ಗತಿಃ ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(185)** ಈಗ **ಅನಿರುದ್ಧಃ**- ನೆಂಬ ನಾಮವನ್ನು ನೋಡೋಣ. ಭಗವಂತನು ತನ್ನ ದಶಾವತಾರಗಳಲ್ಲಿ ಸ್ವತಂತ್ರನಾಗಿದ್ದು

ಯಾರಿಂದಲೂ ಅಡ್ಡಿಪಡಿಸಲಿಲ್ಲವಾದ್ದರಿಂದ ಅನಿರುದ್ಧನೆನಿಸಿರುತ್ತಾನೆ. ಇನ್ನು ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ - ಎಂಬ ವ್ಯೂಹದಲ್ಲಿ ಅನಿರುದ್ಧನೂ ಒಬ್ಬ ನಾಗಿದ್ದು, ವ್ಯೂಹಮೂರ್ತಿಯಾಗಿದ್ದಾನೆ. ವ್ಯೂಹವೆಂದರೆ ಗುಂಪು. ಭಗವಂತನ ಅವತಾರಗಳಲ್ಲಿ ಅವನಿಗೆ ಸಹಾಯಕವಾಗಿ ಅವನ ಅಂಶದಿಂದಲೇ ಅವತರಿಸಿದವರನ್ನು ವ್ಯೂಹಮೂರ್ತಿಗಳೆಂದು ಪರಿಗಣಿಸುವರು. ಹೀಗೆ ಅನಿರುದ್ಧನು ಭಗವದಂಶನೇ ಆಗಿದ್ದಾನೆ. **(186)** ಈಗ **ಸುರಾನಂದಃ** - ಎಂಬ ನಾಮವನ್ನು ವಿಚಾರಮಾಡೋಣ. ಸುರರು ಎಂದರೆ ದೇವತೆಗಳು. ಶ್ರೀವಿಷ್ಣುವು ದೇವಾಸುರರ ಯುದ್ಧಕಾಲಕ್ಕೆ ಅಸುರ ರನ್ನು ಜಯಿಸಿ ದೇವತೆಗಳಿಗೆ ವಿಜಯವನ್ನು ಗಳಿಸಿಕೊಟ್ಟು ಆನಂದವನ್ನುಂಟು ಮಾಡಿದ್ದರಿಂದ ಈ ನಾಮವು ಬಂದಿದೆ. **(187)** ಈಗ **ಗೋವಿಂದಃ** - ನೆಂಬ ನಾಮವನ್ನು ನೋಡೋಣ. ಗೌಃ ಎಂದರೆ ಭೂಮಿ - ಎಂದೂ ಅರ್ಥವಿದೆ. ಹಿಂದೆ ಈ ಭೂಮಿಯು ಗುಹೆ(ಪಾತಾಳ)ಯನ್ನು ಸೇರಿ ಕಾಣದಾಗಿದ್ದಾಗ ಭಗವಂತನು ಅದನ್ನು ಮತ್ತೆ ಪಡೆದುತಂದನು. ಹೀಗೆ ಗಾಂ - ಎಂದರೆ ಭೂಮಿಯನ್ನು ಉದ್ಧರಿಸಿದ ಭಗವಂತನನ್ನು ದೇವತೆಗಳು ಗೋವಿಂದನೆಂದು ಸ್ತುತಿಮಾಡಿದರು. ಆಗ ಇಂದ್ರನು "ಭಗವಂತನೆ, ನಾನು ದೇವತೆಗಳಿಗೆ ಇಂದ್ರ(ಒಡೆಯ)ನಾಗಿರುವೆನು. ನೀನಾದರೊ, ಗೋವುಗಳಿಗೆ ಒಡೆಯನಾಗಿ ಇಂದ್ರನೆನಿಸಿದ್ದೀಯೆ. ಹೀಗೆ ನೀನು 'ಗೋವಿಂದ' ನೆಂದು ಪ್ರಸಿದ್ಧಿಯನ್ನು ಪಡೆಯುವೆ' ಎಂದು ಪ್ರಶಂಸೆಮಾಡಿದನು. ಇನ್ನೊಂದು ರೀತಿಯಲ್ಲಿ "ವಾಕ್ಕು(ಮಾತು)ಸಹ ಗೌಃ- ಎನಿಸುತ್ತದೆ. ಅದನ್ನು ನೀನು ಪಡೆದಿರುವೆ, ಹಾಗೂ ತಿಳಿದಿರುವೆ. ಆದ್ದರಿಂದ 'ಗೋವಿಂದ' ನೆನಿಸಿರುವೆ'. - ಎಂದೂ ವ್ಯಾಖ್ಯಾನ ಮಾಡಬಹುದಾಗಿದೆ. ಹೀಗೆ ಭಗವಂತನು ಗೋವಿಂದನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(188)** ಈಗ **ಗೋವಿಂದಾಂ ಪತಿಃ** - ಎಂಬ ನಾಮವನ್ನು ವಿಚಾರಮಾಡೋಣ. ಗೌಃ ಎಂಬ ಶಬ್ದಕ್ಕೆ ಮಾತು ಎಂಬ ಅರ್ಥವೂ ಇದೆ. ಈ ವಾಕ್ - ಎಂಬುದು ಭಗವಂತನ ವಿಭೂತಿಯಾಗಿದೆ. ಹಾಗೂ ಇದಕ್ಕೆ ಭಗವಂತನೇ ಆಶ್ರಯನಾಗಿರುತ್ತಾನೆ. ಆದ್ದರಿಂದ "ಗೋವಿಂದಾಂ ಪತಿಃ" ಎಂದು ಸ್ತುತಿಸಲಾಗಿದೆ.

**ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ ।**
**ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥21॥**

**(189)** ಈಗ **ಮರೀಚಿಃ** - ಎಂಬ ನಾಮವನ್ನು ವಿಚಾರಮಾಡೋಣ. ಮರೀಚಿ ಎಂದರೆ ಕಿರಣ - ಎಂದರ್ಥ. ನಮಗೆ ಪರಿಚಿತವಾಗಿರುವ ಬೆಳಕುಗಳಲ್ಲಿ ಸೂರ್ಯನ ಬೆಳಕೇ ಅತ್ಯಂತ ಮಿಗಿಲಾದುದು. ಈ ಬೆಳಕನ್ನು ತೇಜಸ್ಸು ಎಂದೂ ಕರೆಯುತ್ತಾರೆ. ಭಗವಂತನು ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿದಾಗ ಅವನ ಬೆಳಕು ಸಾವಿರ

ಸೂರ್ಯರ ಬೆಳಕಿಗಿಂತ ಮಿಗಿಲಾಗಿತ್ತು - ಎಂದು ಗೀತೆಯಲ್ಲಿ ಹೊಗಳಿದೆ. ಹೀಗೆ ಶ್ರೀಮಹಾವಿಷ್ಣುವು ಪರಮತೇಜಸ್ವಿಯೆನಿಸಿದ್ದಾನೆ. ಮಹಾಭಾರತಾಂತರ್ಗತವಾದ ಈ ಶ್ರೀವಿಷ್ಣುಸಹಸ್ರನಾಮಸ್ತೋತ್ರದ ಆರಂಭದಲ್ಲಿಯೇ ಭಾಗವತ್ತೋತ್ತಮರಾದ ಶ್ರೀಭೀಷ್ಮಾಚಾರ್ಯರು 'ಪರಮಂ ಯೋ ಮಹತ್ತೇಜಃ' ಎಂದು ಭಗವಂತನನ್ನು ಸ್ತುತಿಸಿರುತ್ತಾರೆ. ಇನ್ನು ಗೀತೆಯ ಏಳನೆಯ ಅಧ್ಯಾಯದಲ್ಲಿ ಭಗವಂತನೇ ತನ್ನ ವಿಭೂತಿಗಳಲ್ಲಿ ಅರ್ಜುನನಿಗೆ ತಿಳಿಸುವಾಗ "ತೇಜಸ್ತೇಜಸ್ವಿನಾಮಹಮ್"(ತೇಜಸ್ವಿಗಳಲ್ಲಿ ಮಿಗಿಲಾದ ತೇಜಸ್ವಿಯು ನಾನು)ಎಂದು ಹೇಳಿರುತ್ತಾನೆ. ಆದ್ದರಿಂದ ಮರೀಚಿಃ- ಎಂಬ ನಾಮವು ಪರಮತೇಜಸ್ವಿ- ಎಂಬರ್ಥದಲ್ಲಿ ಇಲ್ಲಿ ಸ್ತುತಿರೂಪವಾಗಿ ಪಠಿಸಲ್ಪಟ್ಟಿದೆ. **(190)** ಈಗ **ದಮನಃ** - ಎಂಬ ನಾಮವನ್ನು ನೋಡೋಣ. ತಮ್ಮ ಅಧಿಕಾರದ ಕರ್ತವ್ಯವನ್ನು ಬಿಟ್ಟು(ಎಚ್ಚರಿಕೆಯಿಲ್ಲದೆ)ನಡೆಯುವ ಪ್ರಜೆಗಳನ್ನು ಯಮಧರ್ಮರಾಯನೇ ಮುಂತಾದವರ ರೂಪದಿಂದ ದಮನ(ಶಿಕ್ಷೆ)ಮಾಡುವದರಿಂದ ದಮನನೆನಿಸಿರುತ್ತಾನೆ. **(191)** ಈಗ **ಹಂಸಃ** - ಎಂಬ ನಾಮವನ್ನು ನೋಡೋಣ. ಇದು ಅಹಂ+ಸಃ ಎಂಬ ಶಬ್ದಗಳಿಂದ ಸಿದ್ಧವಾದ ನಾಮವು. ಅಹಂ - ಎಂದರೆ ನಾನು - ಎಂದರ್ಥ. ಸಃ- ಎಂದರೆ ಅವನು(ಪರಮಾತ್ಮನು) ಎಂದರ್ಥ. ಆದರೆ ಇಲ್ಲಿ ಅಹಂ ಎಂಬುದರ ಅಕಾರವು ಲೋಪವಾಗಿದೆ. ಹೀಗೆ ಹಂಸವೆಂಬ ನಾಮವು ಸಿದ್ಧವಾದಾಗ 'ನಾನು ಅವನು' ಎಂದರೆ ಪರಮಾತ್ಮನು ಎಂದು ಅರ್ಥವಾಗುತ್ತದೆ. ಇದು ಜೀವಬ್ರಹ್ಮರ ಐಕ್ಯವನ್ನು ತಿಳಿಸುತ್ತದೆ. ಈ ನಾಮದ ಅಕ್ಷರಗಳನ್ನು ವ್ಯತ್ಯಯ (ಹಿಂದುಮುಂದು) ಮಾಡಿದರೆ 'ಸೋಽಹಂ' ಎಂದಾಗುತ್ತದೆ. ಆಗ ಅವನೇ ನಾನು - ಎಂದರೆ ಈ ಜಗತ್ತಿನ ಉತ್ಪತ್ತಿ , ಸ್ಥಿತಿ, ಲಯ - ಗಳೆಂಬ ವ್ಯಾಪಾರಗಳೆಲ್ಲವೂ ಆ ಪರಮಾತ್ಮನ ವಶದಲ್ಲಿಯೇ ಇದ್ದು ಸ್ಥಿತಿಕಾಲದಲ್ಲಿ 'ನಾನು' ಎನಿಸುವ ಜೀವಾತ್ಮನು ಸಃ = ಎಂದರೆ ಅವನೇ ಆಗಿದ್ದಾನೆ - ಎಂಬ ಅರ್ಥವು ಬರುತ್ತದೆ. ಹೀಗೆ ಜೀವಬ್ರಹ್ಮರ ಐಕ್ಯವನ್ನು ತಿಳಿಸುವ ಈ ರಹಸ್ಯನಾಮವು ವೇದಾಂತಗಳ ತಿರುಳಾಗಿದೆ. ಭಗವಂತನನ್ನು ಬಿಟ್ಟು ಉಳಿದ ನಾಮರೂಪಗಳೆಲ್ಲವೂ ಕಲ್ಪಿತವೇ ಆಗಿದ್ದು ಜ್ಞಾನನಿಷ್ಠೆಯನ್ನು ಸಂಪಾದಿಸಿಕೊಂಡಾಗ ಅವು ಭಗವಂತನಲ್ಲೇ ಲಯವಾಗಿ ಅಹಂ - ಎಂಬುದು ಬಾಧಿತವಾಗಿ ಸಃ = ಎಂಬುದು ಉಳಿದು ಅದ್ವಿತೀಯ ಪರಬ್ರಹ್ಮವು ಪರಮಸಿದ್ಧಾಂತವಾಗಿ ನೆಲೆಗೊಳ್ಳುವದು. ಇದೇ ಹಂಸಶಬ್ದದ ಪರಮತಾತ್ಪರ್ಯವು. **(192)** ಈಗ **ಸುಪರ್ಣಃ** - ಎಂಬ ನಾಮವನ್ನು ನೋಡೋಣ. ಇದು ಭಗವಂತನ ಹೆಸರೇ ಆಗಿದೆ. ಋಗ್ವೇದದಲ್ಲಿ "ಸುಪರ್ಣಂ ವಿಪ್ರಾಃ ಕವಯೋ ವದನ್ತ್ಯೇಕಂ ಸನ್ತಂ ಬಹುಧಾ ಕಲ್ಪಯನ್ತಿ" ಎಂದು ಒಂದು ವಾಕ್ಯವಿದೆ. ಜ್ಞಾನಿಗಳ ದೃಷ್ಟಿಯಿಂದ ಒಬ್ಬನೇ ಆಗಿದ್ದುಕೊಂಡಿರುವ ಈ ಆತ್ಮನನ್ನು ಅಜ್ಞಾನಿಗಳು ನಾನಾ ರೀತಿಯಿಂದ ಕಲ್ಪಿಸಿರುತ್ತಾರೆ - ಎಂಬ ಈ ವಿವರಣೆಯು

'ಸುಪರ್ಣ'ನು ಭಗವಂತನೇ ಆಗಿದ್ದಾನೆ. ಇವನನ್ನೇ ನಾನಾ ರೀತಿಯಾಗಿ ಅಜ್ಞರು ಕಲ್ಪಿಸಿ (ವ್ಯವಹಾರ ಮಾಡುತ್ತಾರೆ)'ಎಂಬ ಅಭಿಪ್ರಾಯವನ್ನು ತಿಳಿಸುತ್ತದೆ. ಆದ್ದರಿಂದ ಈ ನಾಮವು ಭಗವಂತನ ಸ್ತುತಿಯೇ ಆಗಿದೆ. **(193)** ಈಗ **ಭುಜಗೋತ್ತಮಃ** - ಎಂಬ ನಾಮವನ್ನು ವಿಚಾರಮಾಡೋಣ. ಭುಜಗಳಿಂದ ಹರಿದಾಡುವ ಹಾವುಗಳನ್ನು ಭುಜಗ - ಎನ್ನುತ್ತಾರೆ. ಹಾವುಗಳಿಗೆ ಉಳಿದ ಪ್ರಾಣಿಗಳಂತೆ ಓಡಾಡಲು ಕಾಲುಗಳು ಇರುವುದಿಲ್ಲ. ಸೃಷ್ಟಿಯಲ್ಲಿ ಶೇಷ, ಅನಂತ, ವಾಸುಕಿ, ತಕ್ಷಕ- ಮುಂತಾದ ಪಾತಾಳ ಲೋಕ ನಿವಾಸಿಗಳಾದ ಸರ್ಪಗಳಿವೆ. ಇವುಗಳಲ್ಲಿ ಶೇಷನನ್ನು ಆದಿಶೇಷನೆಂದು ಗೌರವಿಸಿ ಕರೆಯುತ್ತಾರೆ. ಭಗವಂತನ ವಿಭೂತಿಗಳಲ್ಲಿ ಒಂದಾಗಿದೆ. ಗೀತೆಯಲ್ಲಿ 'ಅನಂತಶ್ಚಾಸ್ಮಿ ನಾಗಾನಾಮ್' ಎಂದು ವಿಭೂತ್ಯಧ್ಯಾಯದಲ್ಲಿ ಸ್ತುತಿಸಿದೆ. ಆದ್ದರಿಂದ ಈ ಅನಂತ (ಶೇಷ)ನು ಭಗವಂತನಿಗೆ ಹಾಸಿಗೆಯಾಗಿದ್ದಾನೆ. ಹೀಗೆ ಭಗವಂತನು ಭುಜಗರೂಪದಲ್ಲಿಯೂ ಇದ್ದುಕೊಂಡು ಭುಜಗೋತ್ತಮನೆನಿಸಿರುತ್ತಾನೆ. **(194)** ಈಗ **ಹಿರಣ್ಯ ನಾಭಃ** -ನೆಂಬ ನಾಮವನ್ನು ನೋಡೋಣ. ಪದ್ಮನಾಭ (48)ನೆಂದು ಈಗಾಗಲೇ ಭಗವಂತನನ್ನು ಸ್ತುತಿಮಾಡಿದ್ದಾಗಿದೆ. ಇಲ್ಲಿ ಹಿರಣ್ಯ ಎಂದರೆ ಚಿನ್ನದಂತೆ ಉತ್ತಮವಾದ ನಾಭಿ( ಹೊಕ್ಕಳು)ಉಳ್ಳವನು - ಎಂದರ್ಥ. ಭಗವಂತನ ಈ ನಾಭಿಯು ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನ ಜನ್ಮಸ್ಥಾನವಾಗಿದೆ. ಬ್ರಹ್ಮಾಂಡವನ್ನೆಲ್ಲ ಸೃಷ್ಟಿಸುವ ಬ್ರಹ್ಮನು ಈ ಭಗವಂತನ ನಾಭಿಯಿಂದ ಹುಟ್ಟಿಬಂದಿರುತ್ತಾನೆ - ಎಂದರೆ ಈ ಹಿರಣ್ಯನಾಭನ ಬಲವೀರ್ಯಗಳು ಎಂಥದ್ದಿರಬಹುದು? ಇನ್ನು ಲೋಕಹಿತಕ್ಕೆ ಕಾರಣವಾಗಿರುವ ಹಾಗೂ ಮನೋಹರವಾಗಿರುವ ಈ ನಾಭಿಯನ್ನು ಹೊಂದಿರುವ ಭಗವಂತನು ಎಂಥ ಮಹಾಮಹಿಮನಿರಬೇಕು? ಎಂದು ಈ ನಾಮದಿಂದ ಸ್ತುತಿಸಲಾಗಿದೆ. **(195)** ಈಗ **ಸುತಪಾಃ** - ಎಂಬ ನಾಮವನ್ನು ನೋಡೋಣ. ಹಿಂದೆ ಬದರಿಕಾ ಶ್ರಮದಲ್ಲಿ ನರ ನಾರಾಯಣ ರೂಪದಿಂದ ಕುಳಿತು ಉತ್ತಮವಾದ ತಪಸ್ಸನ್ನುಮಾಡಿರುತ್ತಾನಾಗಿ ಭಗವಂತನನ್ನು ಸುತಪಾಃ ಎಂದು ಸ್ತುತಿಸಲಾಗಿದೆ. ಗೀತೆಯಲ್ಲಿ ''ಯದ್ಯದಾಚರತಿ ಶ್ರೇಷ್ಠಃ'' ಎಂಬಲ್ಲಿ ಶ್ರೇಷ್ಠನಾದವನು ಯಾವಯಾವ ತಪಸ್ಸು - ವ್ರತ, ನಿಯಮಾದಿಗಳನ್ನು ಆಚರಿಸುತ್ತಾನೋ ಅದನ್ನು ನೋಡಿಕೊಂಡು ಉಳಿದ ಜನರೂ ಅವುಗಳನ್ನು ಅನುಕರಿಸುತ್ತಾರೆ - ಎಂದು ಹೇಳಿದೆ. ಅದರಂತೆ ಲೋಕ ಕಲ್ಯಾಣಕ್ಕಾಗಿ ಭಗವಂತನು ತಪಸ್ಸುಮಾಡಿದ್ದರಿಂದ 'ಸುತಪಾಃ' ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(196)** ಈಗ **ಪದ್ಮನಾಭಃ** - ಎಂಬ ನಾಮವನ್ನು ವಿಚಾರ ಮಾಡೋಣ. ಕಮಲದಂತೆ ದುಂಡನೆಯ ಆಕಾರದ ಹೊಕ್ಕಳು( ನಾಭಿ)ಳ್ಳವನು; ಅಥವಾ ಹೃದಯವೆಂಬ ಪದ್ಮದ ನಾಭಿಯಲ್ಲಿ ಎಂದರೆ ಮಧ್ಯದಲ್ಲಿ ಬೆಳಗುತ್ತಿರುವದ ರಿಂದ ಪದ್ಮನಾಭನೆನಿಸಿರುತ್ತಾನೆ. ಭಗವಂತನನ್ನು ಧ್ಯಾನ ಮಾಡುವವರು ಹೃದಯ

(ಎದೆ)ಭಾಗದಲ್ಲಿ ನಡುವೆ ತೇಜೋರೂಪವಾದ ಬೆಳಕನ್ನು ಧ್ಯಾನಿಸುತ್ತಾ ಅದರ ಮೇಲ್ಭಾಗ ಶಿಖೆಯ ನಡುವೆ ಇರುವ ಭಗವಂತನನ್ನು ಧ್ಯಾನಿಸಬೇಕು - ಎಂದು ವೇದದಲ್ಲಿ ನಾರಾಯಣಸೂಕ್ತದಲ್ಲಿ ವರ್ಣಿಸಿದೆ. ಹೀಗೆ ನಾಭಿಪದ್ಮದಲ್ಲಿ ವಿರಾಜಿಸುತ್ತಿರುವ ತೇಜೋರೂಪನಾದ ನಾರಾಯಣನೇ ಪದ್ಮನಾಭನು - ಎಂದು ಅಭಿಪ್ರಾಯ. **(197)** ಈಗ **ಪ್ರಜಾಪತಿಃ** - ಎಂಬ ನಾಮವನ್ನು ನೋಡೋಣ. ಪ್ರಜೆಗಳು ಎಂದರೆ ಎಲ್ಲಾ ಜೀವರುಗಳು - ಎಂದರ್ಥ. ಬ್ರಹ್ಮನಿಂದ ಸ್ತಂಬ(ಸಣ್ಣ ಹುಳು)ವಿನವರೆಗಿನ ಸಮಸ್ತ ಜೀವರುಗಳಿಗೂ ಅಂತರಾತ್ಮನಾಗಿದ್ದು ಎಲ್ಲವನ್ನೂ ನಿಯಮನ ಮಾಡುವವನಾಗಿರುವದರಿಂದ ಪ್ರಜಾಪತಿಯೆನಿಸಿರುತ್ತಾನೆ.

**ಅಮೃತ್ಯುಃ ಸರ್ವದೃಕ್ ಸಿಂಹಃ ಸಂಧಾತಾ ಸಂಧಿಮಾನ್ ಸ್ಥಿರಃ ।**
**ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥22॥**

**(198) ಅಮೃತ್ಯುಃ** - ಮೃತ್ಯು ಎಂದರೆ ಸಾವು - ಎಂದರ್ಥ. ಭಗವಂತನಿಗೆ ಸಾವು ಎಂಬುದಿಲ್ಲ. ಏಕೆಂದರೆ ಸಾವಿಗೂ ಸಾಕ್ಷಿಯಾಗಿದ್ದಾನೆ. ಹೇಗೆ ದೇವರಿಲ್ಲ- ಎಂದು ವಾದಮಾಡುವವನು ತನ್ನಲ್ಲಿಯೇ ಹೃದಯದಲ್ಲಿ ದೇವರನ್ನು ಉಳಿಸಿಕೊಂಡು ಸಾಕ್ಷಿಯಾಗಿರುವನೋ ಹಾಗೆ ಭಗವಂತನು ಮೃತ್ಯುವಿನಲ್ಲಿಯೂ ಇದ್ದುಕೊಂಡೇ ಇರುವವನಾಗಿ ಮೃತ್ಯುರಹಿತನಾಗಿದ್ದಾನೆ. ಆದ್ದರಿಂದಲೇ ಅಮೃತ್ಯುವೆಂದು ಇಲ್ಲಿ ಸ್ತುತಿಸಲಾಗಿದೆ. **(199)** ಈಗ **ಸರ್ವದೃಕ್** - ಎಂಬ ನಾಮವನ್ನು ನೋಡೋಣ. ಎಲ್ಲಾ ಪ್ರಾಣಿಗಳ ಕರ್ಮಗಳನ್ನೂ ಹಾಗೂ ಕರ್ಮಗಳನ್ನು ಮಾಡದೆ ಇರುವದನ್ನೂ ತನ್ನ ಸ್ವರೂಪಜ್ಞಾನದಿಂದ ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲದಲ್ಲಿಯೂ ನೋಡುತ್ತಾನಾದ್ದರಿಂದ ಸರ್ವದೃಕ್ ಎನಿಸಿರುತ್ತಾನೆ. ಹಾಗೆಯೇ ಕೇವಲ ಎಚ್ಚರದವಸ್ಥೆಯಲ್ಲಿ ಮಾತ್ರವಲ್ಲದೆ ಕನಸು - ತನಿನಿದ್ರಾವಸ್ಥೆಗಳಲ್ಲಿಯೂ ಸಾಕ್ಷಿಯಾಗಿದ್ದುಕೊಂಡು ತನ್ನ ಸ್ವಯಂ ಪ್ರಕಾಶಚೈತನ್ಯದಿಂದ ಸದಾ ಬೆಳಗುತ್ತಾನಾದ್ದರಿಂದ ಸರ್ವದೃಗ್- ಎನಿಸಿರುತ್ತಾನೆ. ಕಾಲ ದೇಶಗಳ ಹಾಗೂ ಜನನಮರಣಾದಿಗಳ ಸಂಪರ್ಕವಿಲ್ಲದೆ ದ್ವೈತಪ್ರಪಂಚವನ್ನೆಲ್ಲ ಮೀರಿದವನಾಗಿ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನೆಲ್ಲ ಸಾಕ್ಷಿಯಾಗಿ ನೋಡುವ ಸ್ವಭಾವನಾದ ಈ ಭಗವಂತನು ಮುಖ್ಯಾರ್ಥದಲ್ಲಿಯೇ ಸರ್ವದೃಕ್- ಎನಿಸಿರುತ್ತಾನೆ. **(200)** ಈಗ **ಸಿಂಹಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯಲ್ಲಿರುವ ಸ್ಥಾವರಜಂಗಮ ಪ್ರಾಣಿಗಳನ್ನೆಲ್ಲ ಪ್ರಲಯಕಾಲಕ್ಕೆ ಹಿಂಸೆ ಮಾಡಿ ಸಂಹರಿಸುತ್ತಾನಾದ್ದರಿಂದ ಸಿಂಹನೆನಿಸಿದ್ದಾನೆ. ಹಿಂಸೆ ಎಂಬ ಶಬ್ದದಲ್ಲಿರುವ ಅಕ್ಷರಗಳ ಬದಲಾವಣೆಯಿಂದ ಸಿಂಹ - ಎಂಬ ಶಬ್ದವು ಬಂದಿದೆ.

**ಇಲ್ಲಿಗೆ ಎರಡು ನೂರು ನಾಮಗಳ ವಿವರಣೆಯು ಪೂರೈಸಿದೆ.**

# ತೃತೀಯಶತಕ

**(201)** ಈಗ **ಸಂಧಾತಾ** - ಎಂಬ ನಾಮವನ್ನು ನೋಡೋಣ. ಕರ್ಮಫಲಗಳೊಡನೆ ಕರ್ತೃವನ್ನು ಕೂಡಿಸುವವನಾದ್ದರಿಂದ ಸಂಧಾತನೆನಿಸಿದ್ದಾನೆ. ಮನುಷ್ಯನು ಮಾಡುವ ಎಲ್ಲಾ ಶುಭ-ಅಶುಭಕರ್ಮಗಳಿಗೂ ಫಲವು ಆಗಿಯೇ ತೀರುತ್ತದೆ. ಫಲವನ್ನು ಕರ್ತೃವು ಅನುಭವಿಸದೆ ಯಾವ ಕರ್ಮವೂ ಕ್ಷಯವಾಗುವದೇ ಇಲ್ಲ. ಆದ್ದರಿಂದ ಹೀಗೆ ಕರ್ಮಕ್ಕೂ ಫಲಕ್ಕೂ ಒಂದುಗೂಡಿಸುವವನು ಭಗವಂತನೇ ಆಗಿದ್ದಾನೆ. ಹೀಗೆ ಸಂಧಾತಾ - ಎಂಬ ನಾಮವು ಭಗವಂತನಿಗೆ ಬಂದಿರುತ್ತದೆ. **(202)** ಈಗ **ಸಂಧಿಮಾನ್** - ಎಂಬ ನಾಮವನ್ನು ವಿಚಾರಿಸೋಣ. ಯಾವದೇ ಕರ್ಮವನ್ನು ಮಾಡಿದರೂ ಕರ್ತೃವು ಅದರ ಫಲವನ್ನು ಅನುಭವಿಸಲೇಬೇಕು. ಆದರೆ ಇಂಥವನು ಮಾಡಿದ ಇಂಥ ಕರ್ಮಕ್ಕೆ ಇಂಥ ಕಾಲದಲ್ಲಿ ಇಂಥ ಫಲ - ಎಂದು ಕರ್ತೃವಿಗೂ ಕರ್ಮಫಲಕ್ಕೂ ಕಾಲಕ್ಕೂ ಸಂಯೋಜನೆಮಾಡುವವನು ಭಗವಂತನೇ ಆಗಿದ್ದಾನೆ. ಅವನಿಗಿಂತ ಸರ್ವಜ್ಞರಾಗಲಿ ಸರ್ವಶಕ್ತರಾಗಲಿ ಯಾರೂ ಇರುವದಿಲ್ಲ. ಆದ್ದರಿಂದ ಜೀವರುಗಳ ಕರ್ಮಗಳಿಗೆ ಆಯಾ ಕಾಲಕ್ಕೆ ತಕ್ಕ ಫಲಗಳನ್ನು ಸಂಘಟಿಸುತ್ತಾನೆಂಬ ಅರ್ಥದಲ್ಲಿ ಸಂಧಿಮಾನ್ ಎಂಬ ನಾಮವು ಬಂದಿರುತ್ತದೆ. **(203)**ಈಗ **ಸ್ಥಿರಃ** - ಎಂಬ ನಾಮವನ್ನು ನೋಡೋಣ. ಸ್ಥಿರ - ಎಂದರೆ ಯಾವಾಗಲೂ ಚಲನೆಯಿಲ್ಲದೆ ಇರುವವನು - ಎಂದರ್ಥ. ಭಗವಂತನು ಆಕಾಶದಂತೆ ಸರ್ವವ್ಯಾಪಕನಾದ್ದರಿಂದ ಅವನಿಲ್ಲದ ಸ್ಥಳವೇ ಇಲ್ಲವಾಗಿದ್ದು ಚಲನೆಗೆ ಅವಕಾಶವೇ ಇರುವದಿಲ್ಲ. ಇನ್ನು ಚಲಿಸಬೇಕಾದರೆ ಅವನು ಪರಿಚ್ಛಿನ್ನನಾಗಬೇಕು. ಅದು ಭಗವಂತನಿಗೆ ಹೊಂದುವದಿಲ್ಲ. ಆದ್ದರಿಂದ ಸ್ಥಿರ - ಎಂಬ ನಾಮವೂ ಗೌಣಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ವಿಷ್ಣುಸಹಸ್ರನಾಮದ ಪ್ರಾರಂಭದಲ್ಲಿಯೇ ಶ್ರೀಭೀಷ್ಮಾಚಾರ್ಯರು 'ಯಾನಿ ನಾಮಾನಿ ಗೌಣಾನಿ' ಎಂದು ಸ್ಪಷ್ಟಪಡಿಸಿದ್ದಾರೆ. ಹೀಗೆ ಭಗವಂತನ ನಾಮಗಳೆಲ್ಲವೂ ಗೌಣ - ಎಂದರೆ ಗುಣಗಳ ಸಂಬಂಧದಿಂದ ಪ್ರಯುಕ್ತವಾಗಿರುವವುಗಳಾಗಿವೆ. **(204)**ಈಗ **ಅಜಃ** -ಎಂಬ ನಾಮವನ್ನು ನೋಡೋಣ. ಭಗವಂತನು ಜನ್ಮ(ಹುಟ್ಟು)ವಿಲ್ಲದವನು. ಏಕೆಂದರೆ ಅವನು ನಿತ್ಯನು. ಆದರೆ ಕೆಲವು ಅವತಾರಗಳಲ್ಲಿ ಭಗವಂತನು ಹುಟ್ಟುವದು ಕಂಡುಬಂದಿದೆಯಲ್ಲವೆ? ಎಂದರೆ ನಿಜ. ಆದರೆ ಅದನ್ನು ಮಾಯಾಜನ್ಮವೆಂದು ಕರೆಯಲಾಗಿದೆ. ಶ್ರೀಶಂಕರಭಗವತ್ಪಾದರು ತಮ್ಮ ಗೀತಾಭಾಷ್ಯದಲ್ಲಿ ದೇಹವಾನಿವಜಾತ ಇವ - ಎಂದೇ ಉಲ್ಲೇಖಿಸಿದ್ದಾರೆ. ಹುಟ್ಟಿದಂತೆ - ದೇಹವುಳ್ಳವನಂತೆ - ಎಂಬುದು ಇದರ ಅರ್ಥ. ಆದ್ದರಿಂದ ಪರಮಾರ್ಥದೃಷ್ಟಿಯಲ್ಲಿ ಭಗವಂತನು ಅಜನೆನಿಸಿರುತ್ತಾನೆ. **(205)** ಈಗ **ದುರ್ಮರ್ಷಣಃ** - ಎಂಬ ನಾಮವನ್ನು ನೋಡೋಣ. ಮರ್ಷಣ

ಎಂದರೆ ಸಹಿಸಲು ಅಥವಾ ತಡೆದುಕೊಳ್ಳಲು ಶಕ್ಯನು - ಎಂದರ್ಥ. ದೇವಾಸುರರ ಯುದ್ಧಕಾಲಕ್ಕೆ ಅಸುರರ ಪರಾಕ್ರಮವನ್ನು ತಡೆಗಟ್ಟಿ ದೇವತೆಗಳಿಗೆ ಗೆಲವುಂಟಾಗುವಂತೆ ಮಾಡಿದವನು - ಎಂದರ್ಥ. ಆದರೆ ದೇವತೆಗಳ ಕಡೆಗೆ ಇದ್ದ ಶ್ರೀಮಹಾವಿಷ್ಣುವಿನ ಪರಾಕ್ರಮವು ಎಂಥದ್ದೆಂದರೆ ಯಾವ ರಾಕ್ಷಸನೂ ಹಾಗೂ ಎಲ್ಲಾ ರಾಕ್ಷಸರ ಸಮೂಹ ವೂ ಈ ಭಗವಂತನನ್ನು ಹಿಮ್ಮೆಟ್ಟಿಸಲಾಗಲಿಲ್ಲ. ಹೀಗೆ ಆ ಭಗವಂತನ ವೀರ್ಯ ಪರಾಕ್ರಮಗಳು ಅಪರಿಮಿತವಾದವುಗಳು. ವಿಷ್ಣುಸೂಕ್ತದಲ್ಲಿ ಹೀಗೆಂದಿದೆ : ''ಶ್ರೀವಿಷ್ಣು ವಿನ ಪರಾಕ್ರಮವೀರ್ಯಗಳು ಇಂತಿಷ್ಟು - ಎಂದು ಯಾವನು ತಾನೆ ಹೇಳಿ ಯಾನು? ಒಂದು ವೇಳೆ ಹೇಳುವವನಿದ್ದರೆ ಅವನು ಈ ಭೂಮಿಯನ್ನೆಲ್ಲ ಕುಟ್ಟಿ ಪುಡಿಮಾಡಿ ಇದರಲ್ಲಿ ಇಂತಿಷ್ಟು ಧೂಳಿನ ಕಣಗಳಿವೆ - ಎಂದು ಎಣಿಸಿ ಹೇಳುವ ವನಾದರೆ ಅವನು ಮಾತ್ರ ಹೇಳಿಯಾನು''- ಎಂದು ಸ್ತುತಿಸಲಾಗಿದೆ. ಆದ್ದರಿಂದು ದುರ್ಮರ್ಷಣನೆಂದು ಸ್ತುತಿಸಲಾಗಿದೆ. **(206)** ಈಗ **ಶಾಸ್ತಾ** - ಎಂಬ ನಾಮವನ್ನು ನೋಡೋಣ. ಜಗತ್ತನ್ನೆಲ್ಲ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಆಳುವವನು - ಎಂದು ಈ ನಾಮದ ಅರ್ಥ. ಇದಕ್ಕಾಗಿ ಭಗವಂತನು ಶ್ರುತಿ-ಸ್ಮೃತಿಗಳ ರೂಪವಾದ ಶಾಸನ ಗಳನ್ನು ಮಾಡಿರುತ್ತಾನೆ. ಇವುಗಳು ಭಗವಂತನ ಅಜ್ಞಾರೂಪವಾಗಿವೆ. ಇವುಗಳನ್ನು ಮೀರಿ ನಡೆಯುವವರನ್ನು ಭಗವಂತನು ಶಿಕ್ಷಿಸುತ್ತಾನೆ. ಆದ್ದರಿಂದ ಭಗವದಾಜ್ಞಾ ರೂಪವಾದ ಶಾಸ್ತ್ರಗಳನ್ನು ಯಾರೊಬ್ಬರೂ ಮೀರಿಹೋಗಬಾರದು. ಗೀತೆಯಲ್ಲಿ- ಅರ್ಜುನನಿಗೆ ಭಗವಂತನು ಉಪದೇಶಮಾಡುವಾಗ ಹೀಗೆಂದಿರುತ್ತಾನೆ. ''ಅಯ್ಯ, ಅರ್ಜುನ, ಮಾಡಬೇಕಾದದ್ದು, ಮಾಡಬಾರದ್ದು- ಯಾವವು? ಎಂಬ ವಿಚಾರದಲ್ಲಿ ನಾನು ನಿರ್ಮಿಸಿರುವ ಶಾಸ್ತ್ರವೇ (ವೇದ-ಸ್ಮೃತಿ-ಪುರಾಣ-ಧರ್ಮಶಾಸ್ತ್ರಾದಿಗಳೇ) ಪ್ರಮಾಣವು. ಯಾವನೊಬ್ಬನೂ ಯಾವ ಕಾರಣದಿಂದಲೂ ಅವುಗಳನ್ನು ಮೀರಬಾರದು.'' ಎಂದು ಹೇಳಿರುತ್ತಾನೆ. ಆದ್ದರಿಂದ ಈ ನಾಮವು ಅನ್ವರ್ಥವಾಗಿದೆ. **(207)** ಈಗ **ವಿಶ್ರುತಾತ್ಮಾ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಶ್ರುತ ಎಂದರೆ ಪ್ರಸಿದ್ಧನಾದವನು - ಎಂದರ್ಥ. ಭಗವಂತನು ವಿಶೇಷವಾಗಿ ಪ್ರಸಿದ್ಧನು - ಎಂದರೆ ಸುಪ್ರಸಿದ್ಧನು - ಎಂದರ್ಥ. ಭಗವಂತನು ಸತ್ಯ - ಜ್ಞಾನ - ಆನಂದ - ಮುಂತಾದ ಅಸಾಧಾರಣಗುಣಗಳುಳ್ಳವನಾಗಿದ್ದು - ವೇದ - ವೇದಾಂತವೇದ್ಯನೂ ಪುರಾಣ ಪುರುಷೋತ್ತಮನೂ ಆಗಿರುತ್ತಾನೆ. ಇನ್ನೂ ವಿಚಾರಮಾಡಿದರೆ ಎಲ್ಲಾ ಜೀವರುಗಳ ಆತ್ಮನೂ(ಸ್ವರೂಪವೂ)ಆಗಿದ್ದಾನೆ. ಹೇಗೆ ಲೋಕದಲ್ಲಿ ಸೂರ್ಯನು ಎಲ್ಲರಿಗೂ ಪ್ರಸಿದ್ಧನೋ ಹಾಗೆ ಭಗವಂತನು ಜೀವಕೋಟಿಗೆಲ್ಲ ಪ್ರಸಿದ್ಧನೇ ಆಗಿದ್ದಾನೆ. ಅವನ ವಿಭೂತಿಗಳೇ ಆದ ದೇವತೆಗಳು, ಋಷಿಗಳು, ಮಹಾತ್ಮರು, ಪತಿವ್ರತೆಯರಾದ ಸ್ತ್ರೀಯರು, ಸಾದುಸಜ್ಜನರು - ಎಲ್ಲರ ಆತ್ಮನೂ ಆ ಭಗವಂತನೇ ಆಗಿರುತ್ತಾನೆ. ಹೀಗೆ

ಭಗವಂತನು ವಿಶ್ರುತಾತ್ಮನೆನಿಸಿರುತ್ತಾನೆ. **(208)** ಈಗ **ಸುರಾರಿಹಾ** - ಎಂಬ ನಾಮವನ್ನು ನೋಡೋಣ. ಸುರರು ಎಂದರೆ ದೇವತೆಗಳು - ಅವರಿಗೆ ಅರಿ - ಎಂದರೆ ಶತ್ರುಗಳು ರಾಕ್ಷಸರು ಇಂಥ ರಾಕ್ಷಸರನ್ನು ಸಂಹಾರಮಾಡಿ ಲೋಕಕಲ್ಯಾಣವನ್ನುಂಟು ಮಾಡುವವನಾದ್ದರಿಂದ ಭಗವಂತನು ಸುರಾರಿಹ -ನೆನಿಸಿರುತ್ತಾನೆ.

**ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।**
**ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥23॥**

**(209)** ಈಗ **ಗುರುಃ** - ಎಂಬ ನಾಮವನ್ನು ವಿಚಾರಮಾಡೋಣ. 'ತತ್ತ್ವಂ ಗೃಣಾತಿ ಇತಿ ಗುರುಃ' ಎಂಬ ವಾಕ್ಯದಂತೆ ಬ್ರಹ್ಮತತ್ತ್ವವನ್ನು ಶಿಷ್ಯನಿಗೆ ತಿಳಿಸಿಕೊಡುವ ಆಚಾರ್ಯನನ್ನು ಗುರು -ಎಂದು ಅಧ್ಯಾತ್ಮಶಾಸ್ತ್ರದಲ್ಲಿ ಹೇಳಿರುತ್ತದೆ. ಬ್ರಹ್ಮವನ್ನು ಅರಿಯಲು ಗುರುವಿನ ಬಳಿಗೇ ಹೋಗಿ ಆತನ ಸೇವೆಯನ್ನು ಮಾಡಿ ತತ್ತ್ವವನ್ನು ತಿಳಿಯಬೇಕೆಂದು ಉಪನಿಷತ್ತಿನಲ್ಲಿ ಹೇಳಿದೆ. ಆದ್ದರಿಂದ ಸರ್ವರಿಗೂ ಗುರುವಾಗಿರುವ ಭಗವಂತನನ್ನು ಜಗದ್ಗುರುವೆಂದು ಶಾಸ್ತ್ರದಲ್ಲಿ ಕರೆದಿದೆ. ಗು - ಎಂದರೆ ಶಿಷ್ಯನ ಅಂತಃಕರಣದಲ್ಲಿರುವ ಅಂಧಕಾರ(ಕತ್ತಲೆ-ಅಜ್ಞಾನ)ವನ್ನು ರು - ಎಂದರೆ ನಾಶ ಮಾಡುವವನು ಗುರು - ಎಂದು ಬಲ್ಲವರು ವಿವರಿಸುತ್ತಾರೆ. ಎಂಥ ವಿದ್ಯಾವಂತನೇ ಆದರೂ ಬ್ರಹ್ಮವಿದ್ಯೆಯನ್ನು ಮಾತ್ರ ಯಾವನೂ ಸ್ವತಂತ್ರವಾಗಿ ಅಭ್ಯಾಸಮಾಡಬಾರದು; ಅದನ್ನು ಗುರುಮುಖದಿಂದಲೇ ತಿಳಿಯಬೇಕು - ಎಂದು ಶ್ರೀಶಂಕರಚಾರ್ಯರು ತಮ್ಮ ಭಾಷ್ಯಗ್ರಂಥದಲ್ಲಿ ಉಲ್ಲೇಖಿಸಿರುತ್ತಾರೆ. ಹೀಗೆ ಗುರುವಿನ ಸ್ಥಾನವು ಪ್ರತಿಯೊಬ್ಬ ಮಾನವನ ಜೀವನದಲ್ಲಿಯೂ ಪ್ರಪ್ರಥಮವಾಗಿರುತ್ತದೆ. ಇಂಥ ಜಗದ್ಗುರುವೆಂದರೆ ಭಗವಂತನೇ ಆಗಿದ್ದಾನೆ. ಆದ್ದರಿಂದ ಗುರು - ಎಂಬ ನಾಮದಿಂದ ಇಲ್ಲಿ ಶ್ರೀಮಹಾ ವಿಷ್ಣುವನ್ನು ಸ್ತುತಿಸಲಾಗಿದೆ. **(210)**ಈಗ **ಗುರುತಮಃ**- ಎಂಬ ನಾಮವನ್ನು ವಿಚಾರ ಮಾಡೋಣ. ಗುರುಗಳ ಗುಂಪಿನಲ್ಲೆಲ್ಲ ಅತ್ಯಂತ ಶ್ರೇಷ್ಠತಮನನ್ನು ಗುರುತಮ-ನೆನ್ನುತ್ತಾರೆ. ಹಾಗೂ ಜಗತ್ತಿಗೇ ಆದಿಗುರುವಾದವನನ್ನೂ ಗುರುತಮನೆನ್ನುತ್ತಾರೆ. ಈ ಅರ್ಥದಂತೆ ಭಗವಂತನೊಬ್ಬನೇ ಈ ನಾಮಧೇಯಕ್ಕೆ ಅರ್ಹನಾದವನು. ಗೀತೆಯಲ್ಲಿ ಇರುವಂತೆ- ಅರ್ಜುನನು ಭಗವಂತನ ವಿಶ್ವರೂಪವನ್ನು ನೋಡಿ ಸ್ತೋತ್ರಮಾಡುವಾಗ 'ಗುರುರ್ಗರೀಯಾನ್' ಎಂದು ಪ್ರಶಂಸೆಮಾಡಿದ್ದಾನೆ. ಇಡಿಯಾ ಬ್ರಹ್ಮಾಂಡಕ್ಕೆ ಪರಮಾತ್ಮನು ಗುರುವಾಗಿರುತ್ತಾನೆ. ಸೃಷ್ಟಿಯ ಆರಂಭದಲ್ಲಿ ಭಗವಂತನು ಮೊದಲು ಚತುರ್ಮುಖಬ್ರಹ್ಮನನ್ನು ಸೃಷ್ಟಿಮಾಡಿ ಅವನಿಗೆ ವೇದಗಳನ್ನೆಲ್ಲ ಅನುಗ್ರಹಿಸಿದನು-ಎಂದು ಶ್ವೇತಾಶ್ವತರೋಪನಿಷತ್ತಿನಲ್ಲಿದೆ. ಆದ್ದರಿಂದ ಎಲ್ಲಾ ರೀತಿಯಿಂದಲೂ ಆದಿಗುರುವಾದ ಭಗವಂತನು ಗುರುತಮನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(211)** ಈಗ

**ಧಾಮ** - ಎಂಬ ನಾಮವನ್ನು ನೋಡೋಣ. ಧಾಮವೆಂದರೆ ಸ್ಥಾನ-ಎಂಬರ್ಥವಿದೆ. ಭಗವಂತನು ಚತುರ್ದಶಲೋಕಗಳಿಗೂ ಅಲ್ಲಿರುವ ಸಮಸ್ತಜೀವರುಗಳಿಗೂ ಆಶ್ರಯನಾಗಿರುವದರಿಂದ ಧಾಮ(ಆಶ್ರಮ-ವಸತಿ)ನೆನಿಸಿರುತ್ತಾನೆ. 'ಅಂತಸ್ಥಂ ಯಸ್ಯ ವಿಶ್ವಮ್" ಎಂಬ ಸ್ತುತಿವಾಕ್ಯದಂತೆ ಇಡಿಯ ಬ್ರಹ್ಮಾಂಡಕ್ಕೇ ಭಗವಂತನು ಆಧಾರನಾಗಿರುತ್ತಾನೆ. ಆದ್ದರಿಂದ 'ಧಾಮ'ನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(212)** ಈಗ **ಸತ್ಯಃ** - ನೆಂಬ ನಾಮವನ್ನು ನೋಡೋಣ. ಭಗವಂತನಿಗೆ ಮಾತ್ರವೇ ಸಲ್ಲತಕ್ಕ ಈ ನಾಮವು ಬಹಳ ಬೆಲೆಯುಳ್ಳದ್ದಾಗಿದೆ. ಉಪನಿಷತ್ತಿನಲ್ಲಿ ಬ್ರಹ್ಮದ ಲಕ್ಷಣವನ್ನು ಹೇಳುವಾಗ "ಸತ್ಯಂ ಜ್ಞಾನಮ್ ಅನನ್ತಂ ಬ್ರಹ್ಮ" ಎಂಬ ವಾಕ್ಯದಲ್ಲಿರುವ ಸತ್ಯಶಬ್ದಕ್ಕೆ ಶ್ರೀಶಂಕರ ಭಗವತ್ಪಾದರು ಹೀಗೆ ವಿವರಣೆಯನ್ನು ನೀಡಿರುತ್ತಾರೆ. "ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ನ ವ್ಯಭಿಚರತಿ ತತ್ ಸತ್ಯಮ್" (ಯಾವದೊಂದು ಪದಾರ್ಥವನ್ನು ಸರಿಯಾಗಿ ನೋಡಿ ಅದು ಇಂಥದ್ದು ಎಂದು ನಿಶ್ಚಯಮಾಡಿದ ಅನಂತರ ಅದು ಆ ನಿಶ್ಚಿತಸ್ವರೂಪವನ್ನು ಬಿಟ್ಟು ಅಗಲುವುದಿಲ್ಲವೋ ಅದನ್ನು ಸತ್ಯವೆನ್ನುವರು). ಈ ಲಕ್ಷಣಕ್ಕೆ ತಕ್ಕಂತೆ ಇರುವ ವಸ್ತುವೇ ಸತ್ಯವು. ಉದಾಹರಣೆಗೆ ಚಿನ್ನದಿಂದ ಮಾಡಿದ ಉಂಗುರವನ್ನು ನೋಡಿ ಇದು ಚಿನ್ನದ್ದು ಎಂದು ನಿಶ್ಚಯಿಸಿದ ಮೇಲೆ ಮತ್ತೆ ಅದನ್ನು ಬೆಂಡೋಲೆಯಾಗಿಯೋ, ಮೂಗುಬೊಟ್ಟಾಗಿಯೋ, ಪರಿವರ್ತಿಸಿದರೂ ಅದು ಚಿನ್ನವೇ ಆಗಿರುತ್ತದೆಯಲ್ಲವೆ? ಹೀಗೆಯೇ ಭಗವಂತನು ಜಗದ್ರೂಪವಾಗಿ ತೋರಿಕೊಂಡಾಗಲೂ ಅದರ ಅಂತರ್ಯಾಮಿಯಾಗಿ ತನ್ನ ಸ್ವರೂಪದಿಂದಲೇ ಇರುತ್ತಾನೆ. ನಾಮರೂಪಗಳು ಬದಲಾಗಬಹುದಾದರೂ ವಸ್ತುವು ಇದ್ದಂತೆಯೇ ಇದ್ದಾಗ ಸತ್ಯವೆನಿಸುತ್ತದೆ. ಆದ್ದರಿಂದ ಸತ್ಯನೆಂದು ಭಗವಂತನನ್ನು ಸ್ತುತಿಸಿದೆ. **(213)** ಈಗ **ಸತ್ಯಪರಾಕ್ರಮಃ** - ಎಂಬ ನಾಮವನ್ನು ವಿಚಾರಮಾಡೋಣ. ಶ್ರೀಮದ್ಭಾಗವತದಲ್ಲಿರುವ ಈ ಶ್ಲೋಕವನ್ನು ನೋಡಿರಿ.

*ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।*
*ಸತ್ಯಸ್ಯ ಸತ್ಯಂ ಋತಸತ್ಯನೇತ್ರಂ ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥*

ಭಗವಂತನಿಗೂ ಸತ್ಯಕ್ಕೂ ಯಾವಾಗಲೂ ಅಭೇದವೇ ಇರುತ್ತದೆ. ಆದ್ದರಿಂದ ಅವನ ನಾಮರೂಪಗಳು, ಅವತಾರಗಳು, ಅದ್ಭುತಕಾರ್ಯಗಳು, ಸಂಕಲ್ಪಗಳು, ಪ್ರತಿಜ್ಞೆಗಳು, ಅನುಗ್ರಹಗಳು - ಎಲ್ಲವೂ ಎಂದೆಂದಿಗೂ ಸತ್ಯ(ನಿಜ)ವೇ ಆಗಿರುತ್ತವೆ. ಕಾಲ - ದೇಶಗಳೂ ಈ ಸತ್ಯಭಗವಂತನಲ್ಲೇ ಅಡಕವಾಗಿದ್ದು ಯಾವ ವಿಶೇಷಗಳನ್ನೂ ಬೆರೆಸದೆ ಭಗವಂತನನ್ನು ನಿರ್ದೇಶಮಾಡುವದಾದರೆ ಸತ್ಯ ಎಂದಿಷ್ಟೇ ಹೇಳಬೇಕಾಗುವದು. ಆದ್ದರಿಂದ ಇದು ಭಗವಂತನ ಅನ್ವರ್ಥನಾಮವಾಗಿದೆ. ಇನ್ನು ಸತ್ಯವ್ರತನೆಂದರೆ

ಯಾವಾಗಲೂ ಎಂದೆಂದಿಗೂ ಸತ್ಯವನ್ನೇ ನುಡಿಯುತ್ತಾ ಸತ್ಯದ ತಳಹದಿಯಲ್ಲಿಯೇ ತನ್ನ ಬಲವೀರ್ಯಪರಾಕ್ರಮಗಳನ್ನು ಪ್ರಕಟಿಸುವನಾದ್ದರಿಂದ ಸತ್ಯಪರಾಕ್ರಮನೆನಿಸಿದ್ದಾನೆ. **(214)** ಈಗ **ನಿಮಿಷಃ** -ಎಂಬ ನಾಮವನ್ನು ನೋಡೋಣ. ರೆಪ್ಪೆಗಳನ್ನು ಮುಚ್ಚುವದು ಬಿಡುವದನ್ನು ನಿಮಿಷ(ನಿಮೇಷ) ಎಂದು ಕರೆಯುತ್ತಾರೆ. ಭಗವಂತನಿಗೆ ನಿದ್ರೆ - ಎಚ್ಚರಗಳಿಲ್ಲ. ಆದ್ದರಿಂದ ಸರ್ವದೃಕ್ ಎಂದು ವೇದಾಂತಗಳಲ್ಲಿ ಭಗವಂತನನ್ನು ಕರೆದಿದೆ. ಆದರೆ ಸೃಷ್ಟಿಯಲ್ಲಿರುವ ಜೀವರುಗಳಿಗೆಲ್ಲ ಈ ನಿಮೇಷ ವ್ಯಾಪಾರವುಂಟು. ಭಗವಂತನಾದರೊ, ಎಲ್ಲಾ ಜೀವರುಗಳಲ್ಲಿಯೂ ಪ್ರವೇಶಮಾಡಿ ಆಯಾ ಜೀವರುಗಳ ಆತ್ಮನೆನಿಸಿರುತ್ತಾನೆ. ಈ ದೃಷ್ಟಿಯಲ್ಲಿ ನಿಮಿಷನು (ರೆಪ್ಪೆಗಳನ್ನು ಆಲುಗಾಡಿಸುವವನು) ಎಂದು ಸ್ತುತಿಸಲಾಗಿದೆ. **(215)** ಈಗ **ಅನಿಮಿಷಃ** - ಎಂಬ ನಾಮವನ್ನು ನೋಡೋಣ. ಭಗವಂತನು ಯಾವ ಜೀವಾತ್ಮನ ಉಪಾಧಿಗಳೂ ಇಲ್ಲದೆ ತಾನೇತಾನಾಗಿ ಇರುವ ಸ್ಥಿತಿಯಲ್ಲಿ ಅನಿಮಿಷನೆನಿಸಿದ್ದಾನೆ - ಎಂದರೆ ರೆಪ್ಪೆಹೊಡೆಯುವ ವ್ಯಾಪಾರದಿಂದ ಮುಕ್ತನಾಗಿರುತ್ತಾನೆ. ಆದ್ದರಿಂದ ಅನಿಮಿಷನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(216)** ಈಗ **ಸ್ರಗ್ವೀ** - ಎಂಬ ನಾಮವನ್ನು ನೋಡೋಣ. ಸ್ರಕ್-ಎಂದರೆ ಮಾಲೆ(ಸರ)ಎಂದರ್ಥ. ಭಗವಂತನು ಸೃಷ್ಟಿಕರ್ತನಾದಾಗ ಅವ್ಯಕ್ತದಿಂದಾರಂಭಿಸಿ ಪಂಚತನ್ಮಾತ್ರೆಗಳನ್ನು ಸೃಷ್ಟಿ ಮಾಡಿ ಅವುಗಳಿಂದ ಪಂಚಭೂತಗಳನ್ನೂ ಉಂಟುಮಾಡಿದ್ದಾನೆ. ಈ ಸಂದರ್ಭಕ್ಕೆ ತಕ್ಕಂತೆ ಆ ತನ್ಮಾತ್ರೆಗಳನ್ನೇ ಭೂಷಣ(ಒಡವೆ)ವಾಗಿ ಪರಿವರ್ತಿಸಿ 'ವೈಜಯಂತೀ' ಎಂಬ ಮಾಲೆಯನ್ನು ಸಿದ್ಧಗೊಳಿಸಿಕೊಂಡು ತಾನೇ ಧರಿಸಿರುತ್ತಾನೆ. ಹೀಗೆ ಮಾಲೆ(ಸ್ರಕ್)ಯನ್ನು ಧರಿಸಿರುವದರಿಂದ 'ಸ್ರಗ್ವೀ' ಎಂದು ಸ್ತುತಿಸಲಾಗಿದೆ. **(217)** ಈಗ **ವಾಚಸ್ಪತಿರುಧರಾಧಿಃ** - ಎಂಬ ನಾಮವನ್ನು ನೋಡೋಣ. ವಾಕ್ -ಎಂದರೆ ಇಲ್ಲಿ ವಿದ್ಯೆ - ಎಂದರ್ಥ. ಸಮಸ್ತ ವೈದಿಕ - ಲೌಕಿಕ ವಿದ್ಯೆಗಳನ್ನೂ ಪರಿಪೂರ್ಣವಾಗಿ ಬಲ್ಲವನಾಗಿದ್ದು ಅವುಗಳ ಒಡೆಯನಾದ್ದರಿಂದ ವಾಚಸ್ಪತಿಯೆನಿಸಿದ್ದಾನೆ. 'ಸರ್ವೇವೇದಾ ಯತ್ಪದಮಾ - ಮನನ್ತಿ' ಎಂಬ ಉಪನಿಷದ್ವಾಕ್ಯದಂತೆ ಸಮಸ್ತ ವಿದ್ಯೆಗಳೂ ಭಗವಂತನಲ್ಲಿಯೇ ಅಡಕವಾಗಿದ್ದು ಅವುಗಳಿಗೆಲ್ಲ ಆಧಾರನಾಗಿರುವದರಿಂದ ಸರ್ವಜ್ಞನಾದ ಆ ಭಗವಂತನನ್ನು ಇಲ್ಲಿ ವಾಚಸ್ಪತಿಯೆಂದು ಸ್ತುತಿಸಿದೆ. ಇದು ಪ್ರತ್ಯೇಕನಾಮವಲ್ಲ. ಈಗ ಉದಾರ ಧೀಃ- ಎಂಬ ವಿಶೇಷಣವನ್ನೂ ವಿಚಾರಮಾಡೋಣ. ಉದಾರ- ಎಂದರೆ ಎಲ್ಲಾ ವಿಷಯಗಳನ್ನೂ ಬಲ್ಲವನು - ಎಂದರ್ಥ. ಭಗವಂತನು ಸರ್ವಜ್ಞನೇ ಆಗಿದ್ದು ಎಲ್ಲಾ ಜಗತ್ ಕರ್ಮವನ್ನೂ ಬಲ್ಲವನಾದ್ದರಿಂದ ಅಂಥ ವಿಶಾಲಪ್ರಜ್ಞೆಯುಳ್ಳವನಾಗಿದ್ದಾನೆ. ಆದ್ದರಿಂದ ಉದಾರಧೀಯಾದ ವಾಚಸ್ಪತಿಯು -ಎಂದು ಭಗವಂತನನ್ನು ಸ್ತೋತ್ರಮಾಡಲಾಗಿದೆ.

**ಅಗ್ರಣೀರ್ಗ್ರಾಮಣೀಃ ಶ್ರೀಮಾನ್ ನ್ಯಾಯೋ ನೇತಾ ಸಮೀರಣಃ ।**
**ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥24॥**

**(218) ಅಗ್ರಣೀಃ** - ಎಂಬ ನಾಮವನ್ನು ನೋಡೋಣ. ಅಗ್ರೇ ನಯತಿ ಇತಿ ಅಗ್ರಣೀಃ - ಎಂಬ ವಿವರಣೆಯಂತೆ ಮುಮುಕ್ಷುಗಳಾದ ಸಾಧಕರನ್ನು ಉತ್ತಮವಾದ ಪರಮಪದಕ್ಕೆ ಕರೆದೊಯ್ಯುತ್ತಾನೆ. ಆದ್ದರಿಂದ ಅಗ್ರಣೀಃ ಎನಿಸಿರುತ್ತಾನೆ. ಮುಕ್ತಿಯನ್ನು ಕೊಡುತ್ತಾನೆ - ಎಂದಭಿಪ್ರಾಯ. 'ಮೋಕ್ಷಮಿಚ್ಛೇತ್ ಜನಾರ್ದನಾತ್' ಎಂಬ ನುಡಿಯಂತೆ ಮುಕ್ತಿಯನ್ನು ನೀಡುವವನು ಶ್ರೀಮಹಾವಿಷ್ಣುವೇ ಆಗಿರುತ್ತಾನೆ. ಔರ್ಧ್ವದೇಹಿಕಕರ್ಮಗಳನ್ನು ಮಾಡುವಾಗಲೂ ನಡುನಡುವೆ ನಾರಾಯಣ-ಎಂದು ಉಚ್ಚರಿಸುವದು ರೂಢಿಯಲ್ಲಿದೆ. ಮೃತನಾದವನಿಗೆ ಮುಕ್ತಿಪದವಿಯ ದೊರೆಯಲಿ -ಎಂಬುದೇ ಇದರ ಉದ್ದೇಶವಾಗಿರುತ್ತದೆ. **(219) ಈಗ ಗ್ರಾಮಣೀಃ** - ಎಂಬ ನಾಮವನ್ನು ನೋಡೋಣ. ಭೂತಗ್ರಾಮವನ್ನು - ಎಂದರೆ ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳನ್ನೂ ಅವರವರ ಕರ್ಮಫಲಗಳಿಗೆ ಅನುಗುಣವಾಗಿ ಆಯಾ ಲೋಕಗಳಿಗೆ ನಯತಿ (ಒಯ್ದು ಮುಟ್ಟಿಸುತ್ತಾನೆ) ಎಂಬರ್ಥದಲ್ಲಿ ಗ್ರಾಮಣಿಯೆನಿಸಿರುತ್ತಾನೆ. **(220) ಈಗ ಶ್ರೀಮಾನ್** - ಎಂಬ ನಾಮವನ್ನು ನೋಡೋಣ. ಇದು ಹಿಂದೆ 22, 178ನೆಯ ನಾಮಗಳಾಗಿಯೂ ಬಂದಿದೆ. ಇಲ್ಲಿ ಭಾಷ್ಯಕಾರರು ಶ್ರೀಃ- ಎಂದರೆ ಕಾಂತಿ - ಎಂದು ಅರ್ಥಮಾಡಿದ್ದಾರೆ. ಸರ್ವಾತಿಶಯವಾದ ಕಾಂತಿಯುಳ್ಳವನು- ಎಂದರ್ಥ. ದಿವ್ಯವಾದ ತೇಜಸ್ಸುಳ್ಳವನೆಂದು ಅಭಿಪ್ರಾಯ. ಸೂರ್ಯನ ಬೆಳಕಿನ ಮುಂದೆ ಬೇರೆ ಯಾವ ಬೆಳಕೂ ಹೊಳೆಯುವದಿಲ್ಲವಷ್ಟೆ! ಅದರಂತೆ ಭಗವಂತನ ಕಾಂತಿ (ತೇಜಸ್ಸು) ಎಲ್ಲಕ್ಕಿಂತಲೂ ಮಿಗಿಲಾದುದು - ಎಂದರ್ಥ. ಹೀಗೆ ಶ್ರೀಮಾನ್ ಎನಿಸಿರುತ್ತಾನೆ. **(221) ಈಗ ನ್ಯಾಯಃ** - ಎಂಬ ನಾಮವನ್ನು ನೋಡೋಣ. ತರ್ಕವನ್ನು ನ್ಯಾಯವೆಂದೂ ಕರೆಯುತ್ತಾರೆ. ಇದು ಪ್ರಮಾಣವನ್ನು ಸಮರ್ಥಿಸುತ್ತದೆ. ಹಾಗೂ ವಸ್ತುವನ್ನು ಬೇರೊಂದು ವಸ್ತುವಿನಿಂದ ಬೇರ್ಪಡಿಸಿ ತಿಳಿಸುತ್ತದೆ. ಆದರೆ ಅನುಭವದ ತಳಹದಿಯಿಂದ ಬಳಸುವ ತರ್ಕವು ಮಾತ್ರ ವೇದಾಂತಶಾಸ್ತ್ರದಲ್ಲಿ ಸ್ವೀಕೃತವಾಗಿದೆ. ಇದನ್ನು ಶ್ರುತ್ಯನುಗೃಹೀತತರ್ಕವೆಂದು ಕರೆಯಲಾಗಿದೆ. ಇದನ್ನೇ ಭಗವಂತನ ಒಂದು ನಾಮವನ್ನಾಗಿ ಇಲ್ಲಿ ಸ್ತುತಿಸಿದೆ. ಹೀಗೆ ಭಗವಂತನು ನ್ಯಾಯಃ ಎಂಬ ನಾಮದಿಂದ ಸ್ತೋತ್ರ ಮಾಡಲ್ಪಟ್ಟಿರುತ್ತಾನೆ. **(222) ಈಗ ನೇತಾ** - ಎಂಬ ನಾಮವನ್ನು ನೋಡೋಣ. ಜಗತ್ತಿನ ಆಗುಹೋಗುಗಳನ್ನೆಲ್ಲ ನಿರ್ವಹಿಸುವವನು - ಎಂದು ಈ ನಾಮದ ಅರ್ಥ. ಇದೇನೂ ಸುಲಭವಾದದ್ದಲ್ಲ. ಆದರೆ ಸರ್ವಜ್ಞನೂ ಸರ್ವಶಕ್ತನೂ ಆದ ಭಗವಂತನಿಗೆ ಇದೊಂದು ಕ್ರೀಡೆಯಂತೆ ಇರುತ್ತದೆ. ಅವನು ಸಂಕಲ್ಪಮಾತ್ರದಿಂದಲೇ ಎಲ್ಲವನ್ನೂ

ನಡೆಯಿಸಬಲ್ಲವನಾಗಿದ್ದಾನೆ. ಅವನಿಗೆ ವೈಷಮ್ಯನೈರ್ಘೃಣ್ಯಗಳೇನೂ ಇಲ್ಲ. ಆದರೆ ಪ್ರಾಣಿಗಳ ಕರ್ಮಕ್ಕೆ ಅನುಗುಣವಾಗಿ ಫಲವನ್ನು ಕೊಡುವವನಾಗಿದ್ದು ಎಲ್ಲಕ್ಕೂ ಸಾಕ್ಷಿಯಾಗಿರುತ್ತಾನೆ. ಹೀಗೆ ನೇತಾ - ಎನಿಸಿರುತ್ತಾನೆ. **(223)** ಈಗ **ಸಮೀರಣಃ** -ಎಂಬ ನಾಮವನ್ನು ನೋಡೋಣ. ಸಮೀರ-ಎಂದರೆ ಗಾಳಿ-ಎಂದರ್ಥ. ಇದೇ ಪ್ರಾಣಿಗಳ ಜೀವನಾಧಾರವಾಗಿದೆ. ಈ ವಾಯುವು ಭಗವಂತನ ವಿಭೂತಿಯೇ ಆಗಿದ್ದಾನೆ. ಹೀಗೆ ವಾಯುರೂಪದಿಂದ ಸಕಲಜೀವಾತ್ಮರ ತಿರುಳಾಗಿದ್ದು ಎಲ್ಲಾ ಜೀವರುಗಳನ್ನೂ ಕ್ರಿಯೆಯಲ್ಲಿ ತೊಡಗಿಸುತ್ತಾನೆ. ಆದ್ದರಿಂದ ಈ ನಾಮದಿಂದ ಭಗವಂತನು ಸ್ತುತಿಸಲ್ಪಟ್ಟಿ-ರುತ್ತಾನೆ. **(224)** ಈಗ **ಸಹಸ್ರಮೂರ್ಧಾ** - ಎಂಬ ನಾಮವನ್ನು ನೋಡೋಣ. ಸಾವಿರಾರು ತಲೆಗಳುಳ್ಳವನು - ಎಂದು ಇದರ ಅರ್ಥ. **(225) ವಿಶ್ವಾತ್ಮಾ** - ಎಂದರೆ ಜಗತ್ತಿಗೆಲ್ಲ ಆತ್ಮನು ಎಂದರೆ ಪ್ರಪಂಚವನ್ನೆಲ್ಲ ತನ್ನ ಮಹಿಮೆಯಿಂದ ವ್ಯಾಪಿಸಿಕೊಂಡಿರುತ್ತಾನೆ. ಹಾಗೆಯೇ **(226) ಸಹಸ್ರಾಕ್ಷಃ** - ಎಂದರೆ ಸಾವಿರಾರು ಕಣ್ಣುಗಳುಳ್ಳವನು; **(227) ಸಹಸ್ರಪಾತ್** - ಎಂದರೆ ಸಾವಿರಾರು ಕಾಲುಗಳುಳ್ಳವನು - ಎಂದು ಅರ್ಥ. ಭಗವಂತನ ವಿಶ್ವರೂಪವನ್ನು ಗೀತೆಯಲ್ಲಿ ವರ್ಣಿಸಿರುವಂತೆ ಮನನ ಮಾಡಿದಾಗ ಈ ನಾಮಗಳ ಅರ್ಥವೆಲ್ಲವೂ ಮನದಟ್ಟಾಗುವದು. ಪುರುಷಸೂಕ್ತದಲ್ಲಿಯೂ ಇದೇ ವರ್ಣನೆಯಿದೆ. ಜಗತ್ತಿನಲ್ಲಿರುವ ಎಲ್ಲಾ ಸ್ಥಾವರಜಂಗಮ ಪ್ರಾಣಿಗಳಲ್ಲಿಯೂ ಭಗವಂತನು ಹಾಸುಹೊಕ್ಕಾಗಿ ವ್ಯಾಪಿಸಿಕೊಂಡಿದ್ದು ತನ್ನ ಮಹಿಮೆಯನ್ನು ಪ್ರಕಟ ಮಾಡಿರುತ್ತಾನೆ. ಇನ್ನು ಈ ನಾಮರೂಪಗಳನ್ನು ಮೀರಿಯೂ ಮೇಲಿರುತ್ತಾನೆ - ಎಂದರೆ ನಾಮರೂಪಗಳ ಹಂಗಿಲ್ಲದೆ ನಿತ್ಯಶುದ್ಧಬುದ್ಧಮುಕ್ತ ಸ್ವರೂಪನಾಗಿದ್ದಾನೆ - ಎಂದು ವೇದಾಂತಗಳು ಸಾರಿರುತ್ತವೆ. ಇದೇ ಆ ಭಗವಂತನ ಮಹಿಮೆಯು.

**ಆವರ್ತನೋಽನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ ।**
**ಅಹಃ ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥25॥**

**(228)**ಈಗ **ಆವರ್ತನಃ** - ಎಂಬ ನಾಮವನ್ನು ನೋಡೋಣ. ಈ ಸಂಸಾರವೆಂಬ ಚಕ್ರವನ್ನು ಯಾವಾಗಲೂ ತಿರುಗಿಸುತ್ತಾ ಜೀವರುಗಳ ಕರ್ಮಾನುಸಾರವಾಗಿ ಜನ್ಮಗಳನ್ನು ಉಂಟುಮಾಡುವವನಾದ್ದರಿಂದ ಈ ನಾಮವು ಬಂದಿದೆ. ಇದೇನೂ ಸುಲಭವಲ್ಲ. ಜೀವರುಗಳ ಪಾಪಪುಣ್ಯಗಳಿಗೆ ತಕ್ಕಂತೆ ಜನ್ಮಗಳನ್ನು ನೀಡಿ ಅಂಥ ಕೋಟಿಕೋಟಿ ಜೀವರುಗಳನ್ನೆಲ್ಲ ಒಳಹೊಕ್ಕು ತಾನು ಮಾತ್ರ ಕರ್ಮಫಲಗಳ ಸಂಪರ್ಕವಿಲ್ಲದವನಾಗಿ ಸಂಸಾರಚಕ್ರವನ್ನು ಕ್ಷಣಮಾತ್ರವೂ ನಿಲ್ಲಿಸದೆ ಚಲಿಸುವಂತೆ ಮಾಡಿರುವ ಭಗವಂತನೊಬ್ಬನೇ ಈ ನಾಮಕ್ಕೆ ಅರ್ಹನಾಗಿರುತ್ತಾನೆ. **(229)** ಈಗ **ನಿವೃತ್ತಾತ್ಮಾ** - ಎಂಬ ನಾಮವನ್ನು ವಿಚಾರಮಾಡೋಣ. ಸಂಸಾರಬಂಧದಿಂದ ಪೂರ್ಣವಾಗಿ

ಬಿಡುಗಡೆ ಹೊಂದಿದವನಾಗಿ ಭಗವಂತನು ಹಸಿವು-ಬಾಯಾರಿಕೆ, ಮುಪ್ಪು, ಸಾವು , ಶೋಕ, ಮೋಹ - ಎಂಬ ಆರು ದೋಷಗಳಿಂದ ನಿರ್ಮುಕ್ತನಾಗಿರುವದರಿಂದ ನಿವೃತ್ತಾತ್ಮನೆನಿಸಿರುತ್ತಾನೆ. **(230)** ಈಗ **ಸಂವೃತಃ** - ಎಂಬ ನಾಮವನ್ನು ವಿಚಾರ ಮಾಡೋಣ. ಭಗವಂತನು ಅಜ್ಞಾನಿಗಳು ದೃಷ್ಟಿಯಿಂದ ಅವಿದ್ಯೆಯೆಂಬ ಮುಸುಕಿನಿಂದ ಮುಚ್ಚಲ್ಪಟ್ಟಿದ್ದಾನೆ ಎಂದು ವೇದಾಂತಗಳಲ್ಲಿ ಪ್ರಸ್ತಾಪಿಸಿರುತ್ತದೆ. ಆದರೆ ಇದು ಕೂಡ ಅಜ್ಞಾನದಿಂದ ಹೇಳಿದ್ದಾಗಿದೆ. ಹೇಗೆಂದರೆ : ಭೂಮಿಯ ಮೇಲಿರುವ ಜನರಿಗೆ ಮಳೆಗಾಲದಲ್ಲಿ ಮೋಡಗಳು ಸೂರ್ಯನಿಗೂ ಜನರಿಗೂ ನಡುವೆ ಅಡ್ಡಬರುವದರಿಂದ ಸೂರ್ಯನನ್ನು ಮೋಡಗಳು ಮುಚ್ಚಿವೆ ಎಂದು ವ್ಯವಹರಿಸುತ್ತಾರೆ. ನಿಜವೇನೆಂದರೆ ಬಹುದೂರದಲ್ಲಿರುವ ಸೂರ್ಯನನ್ನು ಯಾವ ಮೋಡಗಳೂ ಮುಟ್ಟಲಾರವು. ಹಾಗೆಯೇ ಅಜ್ಞಾನದಿಂದ ಅರಿಯಲಾಗದೆ ಇರುವ ಆತ್ಮನನ್ನು ಪ್ರಾಕೃತರು ಸಂವೃತಾತ್ಮನೆನ್ನುತ್ತಾರೆ. ಇದು ಕೂಡ ಭಗವಂತನ ನಾಮವೆನಿಸಿರುವದು ಆ ಭಗವಂತನ ಮಹಿಮೆಯನ್ನೇ ತಿಳಿಸುತ್ತದೆ. **(231)** ಈಗ **ಸಂಪ್ರಮರ್ದನಃ** - ಎಂಬ ನಾಮವನ್ನು ನೋಡೋಣ. ಮರ್ದನ ಎಂದರೆ ತುಳಿದು ನಾಶಮಾಡುವದು ಎಂದರ್ಥ. ಸಮ್ಯಕ್ ಎಂದರೆ ಚೆನ್ನಾಗಿ - ಎಂದಭಿಪ್ರಾಯ. ಭಗವಂತನು ಸೃಷ್ಟಿಯಲ್ಲಿರುವ ದುಷ್ಟಜೀವಿಗಳನ್ನು ರುದ್ರ, ಕಾಲ - ಮುಂತಾದ ರೂಪಗಳಿಂದ ನಾಶಮಾಡುತ್ತಾನೆ. ಜಗತ್ತಿನಲ್ಲಿ ಸೃಷ್ಟಿಯು ಹೇಗೆ ಅವಶ್ಯಕವೋ ಹಾಗೆಯೇ ಪ್ರಲಯವೂ ಆವಶ್ಯಕವೇ ಆಗಿದೆ. ನಾವು ಊಟಮಾಡಿ ಹಸಿವು ಕಳೆದುಕೊಳ್ಳುವದು ಅಗತ್ಯವಾಗಿರುವಂತೆಯೇ ಆಹಾರವು ಜೀರ್ಣವಾಗಿ ಹಸಿವಾಗುವದೂ ಆರೋಗ್ಯಕ್ಕೆ ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಜಗತ್ತಿನ ಭಾರ ಹರಣಕ್ಕಾಗಿ ಕಾಲಕಾಲಕ್ಕೆ ಭಗವಂತನು ಅವತಾರಮಾಡಿ ದುಷ್ಟರನ್ನು ಸಂಹರಿಸುತ್ತಾನೆ. ಹೀಗೆ ಸಂಪ್ರಮರ್ದನನೆಂಬ ಹೆಸರು ಸಹ ಸ್ತುತಿಯೇ ಆಗಿರುತ್ತದೆ. **(232)** ಈಗ **ಅಹಃ ಸಂವರ್ತಕ** -ನೆಂಬ ನಾಮವನ್ನು ನೋಡೋಣ. ಅಹಃ- ಎಂದರೆ ಹಗಲು ಎಂದರ್ಥ. ಹಗಲನ್ನು ಉಂಟುಮಾಡಿ ಚೆನ್ನಾಗಿ ನಡೆಯಿಸುತ್ತಾ ಪಾಲಿಸುತ್ತಾನೆ - ಎಂಬ ಅರ್ಥದಲ್ಲಿ ಈ ನಾಮವು ಬಂದಿದೆ. ರಾತ್ರಿಯು ಕತ್ತಲಿನಲ್ಲಿ ಏನೂ ಕೆಲಸ ಮಾಡಲಾಗುವದಿಲ್ಲ. ಆದರೆ ಹಗಲು ಪ್ರಾರಂಭವಾದೊಡನೆ ಹಕ್ಕಿಪಕ್ಷಿಗಳಿಂದಾರಂಭಿಸಿ ಎಲ್ಲಾ ಜೀವರುಗಳೂ ಚಟುವಟಿಕೆಯಿಂದ ಕೂಡಿ ತಮ್ಮತಮ್ಮ ಕೆಲಸಗಳಲ್ಲಿ ಪ್ರವರ್ತಿಸುವದರಿಂದ ಈ ನಾವು ಬಂದಿರುತ್ತದೆ. **(233)** ಈಗ **ವಹ್ನಿಃ** - ಎಂಬ ನಾಮವನ್ನು ವಿಚಾರಮಾಡೋಣ. ವಹತಿ ಇತಿ ವಹ್ನಿಃ - ಎಂಬ ವಿವರದಂತೆ ದೇವತೆಗಳಿಗಾಗಿ ಸಮರ್ಪಿಸಿದ ಹವಿಸ್ಸನ್ನು ಅಥವಾ ಆಹುತಿಯನ್ನು ಆಯಾ ದೇವತೆಗಳಿಗೆ ಒಯ್ದು ತಲುಪಿಸುತ್ತಾನಾದ್ದರಿಂದ ಈ ಹೆಸರು ಬಂದಿದೆ. ಅಗ್ನಿಯನ್ನು ವೇದದಲ್ಲಿ 'ಹವ್ಯವಾಹನ'ನೆಂದೇ ಹೆಸರಿಸಿದೆ. ಹೀಗೆ ಅಗ್ನಿರೂಪದಿಂದಿರುವ ಭಗವಂತನನ್ನು ವಹ್ನಿ

ಎಂದು ಸ್ತುತಿಸಿದೆ. **(234)** ಈಗ **ಅನಿಲಃ** - ಎಂಬ ನಾಮವನ್ನು ವಿಚಾರಮಾಡೋಣ. ಅನಿಲ-ಎಂಬ ನಾಮದಲ್ಲಿಯು -ಎಂಬ ಅಕ್ಷರವನ್ನು ಕೊನೆಗೆ ಸೇರಿಸಿದರೆ 'ಅನಿಲಯ' ಎಂದಾಗುವದು. ಆಗ ಭಗವಂತನಿಗೆ ಗೊತ್ತಾದ ನಿವಾಸಸ್ಥಾನವಿಲ್ಲವಾದ್ದರಿಂದ ಅನಿಲ ಯನು ಎಂಬ ನಾಮವು ಹೊಂದುತ್ತದೆ. ಶ್ರುತಿಯಲ್ಲಿಯೂ ಬ್ರಹ್ಮವನ್ನು ತಿಳಿಸುವಾಗ 'ಅನಿರುಕ್ತೇಽನಿಲಯನೇ' ಎಂದೇ ವರ್ಣಿಸಿರುತ್ತದೆ; ಇನ್ನು ಅನಿಲ ಎಂದೇ ನಾಮವನ್ನು ವ್ಯಾಖ್ಯಾನಮಾಡುವದಾದರೆ ಅನನಾದ್ ಅನಿಲಃ ಎಂಬ ವಿವರದಂತೆ ಯಾವಾಗಲೂ ಕ್ರಿಯಾರೂಪದಿಂದಿರುವ ವಾಯುವನ್ನು ಅನಿಲವೆಂದು ತಿಳಿಯಬೇಕು. ಈ ವಾಯು ವಿಗೂ ಪ್ರೇರಕನು ಭಗವಂತನೇ ಎಂಬುದನ್ನು 'ಭೀಷಾಸ್ಮಾದ್ ವಾತಃ ಪವತೇ' ಎಂಬ ಉಪನಿಷದ್ ವಾಕ್ಯದಿಂದ ವಿವರಿಸಬಹುದಾಗಿದೆ. **(235)** ಈಗ **ಧರಣೀ ಧರಃ** -ಎಂಬ ನಾಮವನ್ನು ನೋಡೋಣ. ವರಾಹರೂಪದಿಂದಭೂಮಿಯನ್ನು ರಸಾ ತಲದಿಂದ ಮೇಲೆತ್ತಿ ಉದ್ಧಾರಮಾಡಿದ್ದರಿಂದ ಭಗವಂತನನ್ನು ಭೂಮಿಯನ್ನು ಹೊತ್ತು ನಿಲ್ಲಿಸಿದ್ದಾನೆಂಬ ಕಾರಣದಿಂದಲೂ ಈ ನಾಮವನ್ನು ವಿವರಿಸಬಹುದಾಗಿದೆ.

**ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ ವಿಶ್ವಭುಗ್ ವಿಭುಃ ।**
**ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ॥26॥**

**(236)** ಈಗ **ಸುಪ್ರಸಾದಃ** - ಎಂಬ ನಾಮವನ್ನು ನೋಡೋಣ. ಪ್ರಸಾದ ಎಂದರೆ ಮನಸ್ಸಿನ ಪ್ರಸನ್ನತೆ-ತಿಳಿನೀರಿನಂತೆ- ಕಶ್ಮಲರಹಿತವಾಗಿರುವದು. ಭಗವಂತನು ತನ್ನ ಅವತಾರಲೀಳೆಗಳಲ್ಲಿ ಪಕ್ಷಪಾತ, ಶತ್ರುಮಿತ್ರ - ಭಾವಗಳನ್ನು ಪ್ರಕಟಗೊಳಿಸಿದ್ದರೂ ಅವೆಲ್ಲವೂ ತೋರಿಕೆಮಾತ್ರವೇ ಆಗಿರುತ್ತದೆ. ಮಗುವಿನ ಮೇಲೆ ತಾಯಿ ಸಿಟ್ಟು ಮಾಡಿದರೂ ಅದು ನಿಜವಾದ ಸಿಟ್ಟಲ್ಲ. ಹಾಗೆಯೇ ಭಗವಂತನೂ ತನ್ನ ಅವತಾರ ಲೀಲೆಗಳಲ್ಲಿ ಶತ್ರುತ್ವ-ಕೋಪ-ಪಕ್ಷಪಾತಾದಿಗಳನ್ನು ಪ್ರಕಟಿಸಿದ್ದರೂ ಅದು ಕೇವಲ ಲೀಲೆಯೇ ಹೊರತು ಪರಮಾರ್ಥವಲ್ಲ. ಇನ್ನು ಅಪಕಾರಮಾಡಿದವರ ಮೇಲೂ ಭಗವಂತನು ಉಪಕಾರವನ್ನೇ ಮಾಡಿರುತ್ತಾನೆ. ಶಿಶುಪಾಲನು ಭಗವಂತನಿಗೆ ಅಪಕಾರ ಮಾಡಿದ್ದರೂ ಅವನಿಗೆ ಮುಕ್ತಿಯನ್ನೇ ಕರುಣಿಸಿರುತ್ತಾನೆ. ಹೀಗೆ ಭಗವಂತನಿಗೆ ಸುಪ್ರಸಾದನೆಂಬ ಹೆಸರು ಹೊಂದುತ್ತದೆ. **(237)** ಈಗ **ಪ್ರಸನ್ನಾತ್ಮಾ** - ಎಂಬ ನಾಮ ವನ್ನು ನೋಡೋಣ. ಭಗವಂತನು ಚಿತ್ತವು ನಿತ್ಯಶುದ್ಧವಾದುದು. ಅದು ಯಾವಾಗಲೂ ತಿಳಿಯಾಗಿರುತ್ತದೆ. ಆದ್ದರಿಂದ ಕಾರುಣಿಕನಾಗಿರುತ್ತಾನೆ. ಇನ್ನು ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುವನಾದ್ದರಿಂದ ಅವನ ಅಂತಃಕರಣವು ತಿಳಿಯಾಗಿರು ತ್ತದೆ. ಇದನ್ನು ಪ್ರಸನ್ನತೆಯೆನ್ನುತ್ತಾರೆ. ಹೀಗೆ ಪ್ರಸನ್ನಾತ್ಮನೆನಿಸಿದ್ದಾನೆ. **(238)** ಈಗ **ವಿಶ್ವಧೃಕ್** - ಎಂಬ ನಾಮವನ್ನು ನೋಡೋಣ. ಜಗತ್ತೆಲ್ಲವನ್ನೂ ಧಾರಣೆಮಾಡಿರು

ವದರಿಂದ ಹಾಗೂ ಅದನ್ನು ಧರಿಸಿದವನಾಗಿ ಕಾಪಾಡುವವನಾದ್ದರಿಂದ ವಿಶ್ವದೃಕ್- ಎನಿಸಿರುತ್ತಾನೆ. ಹಾಗೆಯೇ **(239) ವಿಶ್ವಭುಗ್** - ಎಂದರೆ ಬ್ರಹ್ಮಾಂಡವನ್ನೆಲ್ಲ ಬೇರೆ ಬೇರೆ ಜೀವರುಗಳ ರೂಪದಿಂದ ಅನುಭವಿಸುವನಾದ್ದರಿಂದ ವಿಶ್ವಭುಕ್ ಎನಿಸಿರುತ್ತಾನೆ. ಇನ್ನು **(240) ವಿಭುಃ** - ಎಂಬ ನಾಮವನ್ನು ನೋಡೋಣ. ಇದು ಸರ್ವವ್ಯಾಪಕ ನೆಂಬುದನ್ನು ತಿಳಿಸುತ್ತದೆ. ನಾರಾಯಣಸೂಕ್ತದಲ್ಲಿ ಈ ಜಗತ್ತು ಏನೇನು ನಾಮ ರೂಪಗಳಿಂದ ಕಂಡುಬರುತ್ತಿದೆಯೋ ಹಾಗೂ ಮಾನವನ ಬುದ್ಧಿಗೂ ಮೀರಿದ್ದಾಗಿಯೂ ಇದೆಯೆಂದು ಕೇಳಬರುತ್ತಿದೆಯೋ - ಈ ಎಲ್ಲವನ್ನೂ ತನ್ನ ಮಹಿಮೆಯಿಂದ ವ್ಯಾಪಿಸಿ ಕೊಂಡಿರುವನಾದ್ದರಿಂದ ವಿಭು - ಎನಿಸಿರುತ್ತಾನೆ. **(241) ಈಗ ಸತ್ಕರ್ತಾ** - ಎಂಬ ನಾಮವನ್ನು ನೋಡೋಣ. ಸತ್ಕಾರ - ಎಂದರೆ ಪೂಜಿಸುವದು, ಗೌರವಿಸುವದು- ಎಂದರ್ಥ. ಭಗವಂತನಿಗೆ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರೇ ದೇವರು.''ಬ್ರಾಹ್ಮಣೋ ಮಮ ದೇವತಾ'' ಎಂದು ಒಂದು ಕಡೆ ಭಗವಂತನೇ ಹೇಳಿರುತ್ತಾನೆ. ಆದ್ದರಿಂದ ತನ್ನ ಅವತಾರಲೀಲೆಗಳಲ್ಲಿ ಆತನು ಋಷಿಗಳನ್ನು ಜ್ಞಾನಿಗಳನ್ನು ಗೌರವಿಸುತ್ತಾನಾದ್ದರಿಂದ ಸತ್ಕರ್ತಾ - ಎನಿಸಿರುತ್ತಾನೆ. **(242) ಈಗ ಸತ್ಕೃತಃ**- ಎಂಬ ನಾಮವನ್ನು ನೋಡೋಣ. ಯಾರನ್ನು ಭಗವಂತನು ಪೂಜಿಸಿರುತ್ತಾನೋ ಆ ಮಹಾತ್ಮರು ತಾವೂ ಆ ಭಗವಂತ ನನ್ನೇ ಪೂಜಿಸಿ ಗೌರವಿಸುತ್ತಾರೆ. ಹೀಗೆ ಭಗವಂತನು ಭಗವದ್ಭಕ್ತರೂ ಪರಸ್ಪರ ಪೂಜ್ಯ ರಾಗಿರುತ್ತಾರೆ. ಕೆಲವು ವೇಳೆ ಭಗವಂತನೇ ಭಕ್ತರ ಅಧೀನನೂ ಆಗಿರುವದುಂಟು. ಆ ಭಕ್ತರಾದರೋ ಯಾವಾಗಲೂ ಭಗವಂತನ ಸತ್ಕಾರ, ಪೂಜಾದಿಗಳಲ್ಲಿಯೇ ನಿರತ ರಾಗಿರುತ್ತಾರೆ. ಹೀಗೆ ಸತ್ಕೃತನೆನಿಸಿರುತ್ತಾನೆ. **(243) ಈಗ ಸಾಧುಃ** - ಎಂಬ ನಾಮ ವನ್ನು ನೋಡೋಣ. 'ಸಾಧ್ನೋತಿ ಪರಾರ್ಥಾನ್ ಇತಿ ಸಾಧುಃ' ಎಂಬ ವಿವರಣೆಯಂತೆ ಭಗವದ್ಭಕ್ತರಾದ ಸಾಧುಗಳು ಯಾವಾಗಲೂ ಪರೋಪಕಾರನಿರತರಾಗಿರುತ್ತಾರೆ. ಅವರಿಗೂ ಭಗವಂತನಿಗೂ ಅಭೇದವೇ ಇರುತ್ತದೆ. ಭಗವಂತನು ಹೀಗೆ ಸಾಧುಗಳ ರೂಪದಿಂದ ಲೋಕಕಲ್ಯಾಣವನ್ನು ಸಾಧಿಸುತ್ತಾನಾದ್ದರಿಂದ ಇಲ್ಲಿ ಅವನನ್ನು ಸಾಧು- ಎಂಬ ನಾಮದಿಂದಲೇ ಸ್ತುತಿಸಲಾಗಿದೆ. **(244) ಈಗ ಜಹ್ನುಃ** - ಎಂಬ ಇವನ ನಾಮವನ್ನು ನೋಡೋಣ. ಸಂಹಾರಕಾಲದಲ್ಲಿ ಜನರನ್ನು ನಾಶಗೊಳಿಸುತ್ತಾನೆ. ಹಾಗೂ ಭಕ್ತರನ್ನು ಪರಮಪದವಿಗೆ ಒಯ್ಯುತ್ತಾನೆ. ಹೀಗೆ ಜಹ್ನುವೆನಿಸಿರುತ್ತಾನೆ. **(245)** ಅನಂತರ **ನಾರಾಯಣಃ** - ಎಂಬ ನಾಮವನ್ನು ವಿಚಾರಮಾಡೋಣ. ಈ ನಾಮವು ವಿಶೇಷವಾದ ಅರ್ಥಗಳುಳ್ಳದ್ದಾಗಿದೆ. ನೀರನ್ನು ನಾರಾಃ ಎಂದು ಕರೆದಿದೆ. ಪ್ರಾಣಿ ಗಳೆಲ್ಲವೂ ಮನುಷ್ಯರೂ ಜಲರೂಪದಲ್ಲಿರುವ ರೇತಸ್ಸಿನಿಂದಲೇ ಜನ್ಮವನ್ನು ಪಡೆಯುತ್ತಾರೆ. ಈ ರೇತೋರೂಪವಾದ ಜಲಕ್ಕೆ ಅಯನ - ಎಂದರೆ ಆಧಾರವಾಗಿರುವದರಿಂದ ಭಗವಂತನನ್ನು ನಾರಾಯಣನೆಂದು ಕರೆದಿದ್ದಾರೆ. ಇನ್ನು ಇಡಿಯ ಜಗತ್ತಿಗೇ ಆಯನ

- ಆಧಾರನಾಗಿರುವದರಿಂದಲೂ ನಾರಾಯಣನೆನಿಸಿರುತ್ತಾನೆ. ಶ್ರುತಿಯಲ್ಲಿ ಹೀಗಿದೆ : "ಏನೇನು ರೂಪದಿಂದ ಪ್ರಪಂಚವು ಕಂಡು ಬರುತ್ತದೆಯೋ ಹಾಗೂ ಕೇಳಿಬರುತ್ತದೆಯೋ ಆ ಜಗತ್ತಿನ ಒಳಗೂ ಹೊರಗೂ ವ್ಯಾಪಿಸಿಕೊಂಡಿರುವ ತತ್ತ್ವವೇ ನಾರಾಯಣನು" ಆದ್ದರಿಂದಲೂ ನಾರಾಯಣನೆಸಿರುತ್ತಾನೆ. ಇನ್ನು ನರ - ಎಂದರೆ ನಯತಿ (ಮೋಕ್ಷಕ್ಕೆ ಒಯ್ಯುತ್ತಾನೆ)ಎಂಬರ್ಥದಲ್ಲಿ ಪ್ರಯೋಗವಿದೆ. ಆ ಮುಕ್ತಿಪದವಿಗೂ ಆಶ್ರಯ (ಆಧಾರ)ನಾಗಿರುವದರಿಂದ ನಾರಾಯಣ - ಎಂದು ಕರೆದಿದೆ. ನರಸಿಂಹಪುರಾಣ ದಲ್ಲಿ ವೇದವ್ಯಾಸರು ಹೀಗೆಂದಿರುತ್ತಾರೆ :

*ನಾರಾಯಣಾಯ ನಮ ಇತ್ಯಯಮೇವ ಸತ್ಯಃ ।*
*ಸಂಸಾರಘೋರವಿಷಸಂಹರಣಾಯ ಮಂತ್ರಃ ।*
*ಶೃಣ್ವನ್ತುಭವ್ಯಮತಯೋ ಯತಯೋಽಸ್ತರಾಗಾಃ ।*
*ಉಚ್ಚೈಸ್ತರಾಮುಪದಿಶಾಮ್ಯಹಮೂರ್ಧ್ವಬಾಹುಃ ॥*

"ನಾರಾಯಣನಿಗೆ ನಮಸ್ಕಾರ" ಎಂಬ ಮಾತು ನಿತ್ಯಸತ್ಯವು. ಇದು ಸಂಸಾರ ವೆಂಬ ಭಯಂಕರವಾದ ವಿಷ(ಯ)ವನ್ನು ನಾಶಗೊಳಿಸಲು ಸಮರ್ಥವಾಗಿದೆ. ರಾಗ ದ್ವೇಷಗಳನ್ನು ತ್ಯಜಿಸಿರುವ ಹಾಗೂ ಸಮ್ಯಗ್ಬುದ್ಧಿನಿಷ್ಠರಾದ ಪೂಜ್ಯಭಾವನೆಗಳುಳ್ಳ ಯತಿಗಳು - ಎಂದರೆ ಮುಕ್ತಿಗಾಗಿ ಪ್ರಯತ್ನಮಾಡುತ್ತಿರುವ ಸಾಧಕರು - ಕೇಳಿರಿ : ನಾನು ಎರಡು ಕೈಗಳನ್ನೂ ಮೇಲೆತ್ತಿ ಗಟ್ಟಿಯಾಗಿ ಹೀಗೆ ಹೇಳುತ್ತಿರುವೆನು" ಹೀಗೆ ನಾರಾಯಣ ಎಂಬ ದಿವ್ಯನಾಮವು ಸಾಧಕನಿಗೆ ಮುಕ್ತಿಮಾರ್ಗವಾಗಿದೆ. **(246)** ಈಗ **ನರಃ** - ಎಂಬ ನಾಮವನ್ನು ನೋಡೋಣ. ಸಾಮಾನ್ಯಾರ್ಥದಲ್ಲಿ ಮನುಷ್ಯನೆಂದು ಇದರ ಅರ್ಥ. ಆದರೆ ಇಲ್ಲಿ ಇದು ಭಗವಂತನ ನಾಮವಾಗಿ ಬಳಸಲ್ಪಟ್ಟಿರುವದರಿಂದ ಭಗವಂತನ ಅಂಶವುಳ್ಳ ಅರ್ಜುನನೆಂಬ ಅರ್ಥವನ್ನು ಸ್ವೀಕರಿಸಬಹುದು. ಕೃಷ್ಣಾರ್ಜುನ ರಿಬ್ಬರೂ ಭಗವಂತನ ಅವತಾರಗಳೆಂದೇ ಬಲ್ಲವರು ಹೇಳುತ್ತಾರೆ. ಆದ್ದರಿಂದ ಈ ನಾಮವೂ ಭಗವಂತನಿಗೇ ಸಲ್ಲುತ್ತದೆ.

**ಅಸಂಖ್ಯೇಯೋಽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃತ್ ಶುಚಿಃ ।**
**ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥27॥**

**(247)** ಈಗ **ಅಸಂಖ್ಯೇಯಃ** - ಎಂಬ ನಾಮವನ್ನು ವಿಚಾರಮಾಡೋಣ. ಸಂಖ್ಯೆ ಎಂದರೆ ಎಣಿಸಲು ಬರುವಂಥದ್ದು, ವಸ್ತುಗಳನ್ನು ಆಯಾ ನಾಮರೂಪ ಭೇದಗಳಿಂದ ಎಣಿಸಲು ಸಾಧ್ಯವಿದೆ. ಆದರೆ ಭಗವಂತನನ್ನು ಒಂದು-ಎಂದು ಕೂಡ

ಎಣಿಸಲಾಗುವದಿಲ್ಲ. ಏಕೆಂದರೆ ಅವನನ್ನು ಬಿಟ್ಟು ಎರಡನೆಯದೆಂಬ ವಸ್ತುವೇ ಇಲ್ಲ. ಆದ್ದರಿಂದ ಶ್ರುತಿಯು 'ಏಕಮೇವ ಅದ್ವಿತೀಯಮ್'ಎಂದು ಪರಮಾತ್ಮನನ್ನು ತಿಳಿಸುತ್ತಿದೆ. ಒಬ್ಬ ತಂದೆಗೆ ಒಬ್ಬನೇ ಮಗನಿದ್ದನು. ಯಾರೋ ಅಪರಿಚಿತರು 'ನಿಮ್ಮ ಹಿರಿಯ ಮಗ ಯಾರು?' ಎಂದು ಕೇಳಿದರು. 'ಇವನೇ'-ಎಂದು ಮಗುನನ್ನು ತೋರಿಸಿದರು. ಮತ್ತೆ ಅವರದು 'ನಿಮ್ಮ ಕಿರಿಯ ಮಗ ಯಾರು?' ಎಂದರು. ಆಗಲೂ ತಂದೆಯು ಇವನೇ ಎಂದು ತಿಳಿಸಿದರು. ಹೀಗೆ ಒಬ್ಬನೇ ಮಗನಿದ್ದಾಗ ಹಿರಿಯಕಿರಿಯ ಭೇದ ವ್ಯವಹಾರವು ಹೇಗೆ ಇರುವದಿಲ್ಲವೋ ಹಾಗೆಯೇ ಭಗವಂತ ನೊಬ್ಬನೇ ಇರುವಲ್ಲಿ ಸಂಖ್ಯೆಯ ವ್ಯವಹಾರವಿರುವದಿಲ್ಲವಾಗಿ ಅಸಂಖ್ಯೆಯನೆಂಬ ನಾಮವು ಒಪ್ಪಾಗಿರುತ್ತದೆ. **(248)** ಈಗ **ಅಪ್ರೇಮೇಯಾತ್ಮಾ** - ಎಂಬ ನಾಮವನ್ನು ನೋಡೋಣ. ಪ್ರಮಾಣಗಳಿಂದ ಅಳೆಯಲು ಸಾಧ್ಯವಾದ ವಸ್ತುವನ್ನು ಪ್ರಮೇಯ ವೆನ್ನುವರು. ಭಗವಂತನಾದರೂ, ಪ್ರತ್ಯಕ್ಷಾದಿ ಯಾವ ಪ್ರಮಾಣಗಳಿಗೂ ನಿಲುಕುವ ವನಲ್ಲ. ಮಾತಿಗಾಗಲಿ ಮನಸ್ಸಿಗಾಗಲಿ ಎಟುಕುವವನಲ್ಲ ಏಕೆಂದರೆ 'ಮಾತು' ಮನಸ್ಸುಗಳು ಅವನಿಂದ ಹಿಂದಿರುಗುತ್ತವೆ - ಎಂದರೆ ಅವು ಭಗವಂತನನ್ನು ಮುಟ್ಟ ಲಾರವು. ಹಾಗಾದರೆ ಶ್ರುತಿವಾಕ್ಯಗಳು ಭಗವಂತನನ್ನು ತಿಳಿಸುವದಾದರೂ ಹೇಗೆ? ಎಂದರೆ ಮಾತು - ಮನಸ್ಸುಗಳಿಗೆ ಅವನು ಗೋಚರನಲ್ಲ? ಎಂದೇ ತಿಳಿಸುವವು. ಹೀಗೆ ಪ್ರಮೇಯನಲ್ಲದ ಭಗವಂತನನ್ನು ಅಪ್ರಮೇಯಾತ್ಮನೆಂದೇ ಸ್ತುತಿಸಲಾಗಿದೆ. **(249)** ಈಗ **ವಿಶಿಷ್ಟಃ** - ಎಂಬ ನಾಮವನ್ನು ನೋಡೋಣ. ಎಲ್ಲವನ್ನೂ ಮೀರಿದವನು - ಎಂಬರ್ಥದಲ್ಲಿ ಈ ಹೆಸರು ಬಂದಿದೆ. ಯಾವ ಪದಾರ್ಥವು ತಾನೊಂದೇ ಆಗಿದ್ದು ಉಳಿದವುಗಳಿಗಿಂತ ಮಿಗಿಲಾಗಿರುವದೋ ಅದು ವಿಶಿಷ್ಟವು ಉದಾಹರಣೆಗೆ ಸೂರ್ಯ ನನ್ನು ತೆಗೆದುಕೊಳ್ಳೋಣ. ಅವನ ಸನ್ನಿಧಿಯಲ್ಲಿ ಉಳಿದ ಬೆಳಕುಗಳಾವುವೂ ಬೆಳಗಲಾರವು ಹಾಗೂ ಅವನನ್ನು ಮೀರಿಸಲಾರವು. ಹಾಗೆಯೇ ಭಗವಂತನು ವಿಶಿಷ್ಟ ನೆನಿಸಿದ್ದಾನೆ. ಭಗವದ್ಗೀತೆಯಲ್ಲಿರುವಂತೆ - ಅರ್ಜುನನಿಗೆ ಭಗವಂತನು ವಿಶ್ವರೂಪ ವನ್ನು ತೋರಿಸಿದಾಗ ಅವನ ಪ್ರಭೆಯು ಸಾವಿರ ಸೂರ್ಯರಿಗೆ ಸಮಾನವಾಗಿತ್ತು - ಎಂದು ವರ್ಣಿಸಿದೆ. ಆದ್ದರಿಂದ ಎದುರಿಗೇ ಇದ್ದ ಭಗವಂತನನ್ನು ಅರ್ಜುನನು ನೋಡಲಾರದೆ ಹೋದನು. ಕಡೆಗೆ ಭಗವಂತನೇ ದಿವ್ಯಚಕ್ಷುಸ್ಸನ್ನು ಕೊಟ್ಟನು. ಇದ ರಂತೆಯೇ ಎಲ್ಲಾ ರೀತಿಯಿಂದಲೂ ಭಗವಂತನು ವಿಶಿಷ್ಟ ಅಸಾಧಾರಣನಾಗಿರುತ್ತಾನೆ. **(250)** ಈಗ **ಶಿಷ್ಟಕೃತ್** - ಎಂಬ ನಾಮವನ್ನು ನೋಡೋಣ. ಶಿಷ್ಟ ಎಂದರೆ ಶಾಸನ (ನಿಯಮ)ಗಳನ್ನು ಮಾಡುತ್ತಾನೆ - ಎಂಬರ್ಥದಲ್ಲಿ ಈ ನಾಮವು ಬಂದಿದೆ. ಅಥವಾ ಶಿಷ್ಟರನ್ನು ಎಂದರೆ ಧರ್ಮಿಷ್ಠರು, ದಾನಿಗಳು, ಸಂಪ್ರದಾಯಸ್ಥರೇ ಮುಂತಾದವರನ್ನು ಕಾಪಾಡುತ್ತಾನೆ - ಎಂಬರ್ಥದಲ್ಲಿಯೂ ಈ ನಾಮವನ್ನು ವಿವರಿಸಬಹುದಾಗಿದೆ.

**(251)** ಈಗ **ಶುಚಿಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಪ್ರಕೃತಿಯ ಸಂಬಂಧವಿಲ್ಲದ್ದರಿಂದ ಶುಚಿಯೆನಿಸಿದ್ದಾನೆ. ಹೇಗೆಂದರೆ ತ್ರಿಗುಣಾತ್ಮಕ ಪ್ರಕೃತಿಯು ಯಾವಾಗಲೂ ಅಶುಚಿಯೇ ಆಗಿರುವದು. ಆದ್ದರಿಂದ ಅದರಿಂದುಂಟಾದ ಜಗತ್ತು ಮುಖ್ಯಾರ್ಥದಲ್ಲಿ ಶುಚಿಯಲ್ಲ. ಇನ್ನು ಭಗವಂತನು ನಿರ್ಗುಣನಾದ್ದರಿಂದ ಅವನಿಗೆ ಯಾವ ಸತ್ತ್ವಾದಿಗುಣಗಳ ಅಂಟೂ ಇರುವದಿಲ್ಲ. ಹೇಗೆ ಆಕಾಶಕ್ಕೆ ಯಾವ ಅಂಟೂ ಇರಲಾರದೋ ಹಾಗೆ ಭಗವಂತನಿಗೂ ಏನೊಂದೂ ಗುಣದೋಷಗಳ ಅಂಟು ಇರಲಾರದು. ಆದ್ದರಿಂದ ನಿತ್ಯಶುಚಿಯಾಗಿದ್ದಾನೆ. ಸಂಧ್ಯಾವಂದನೆಯ ಆರಂಭದಲ್ಲಿ ಕೆಲವರು ಹೇಳುವ ಈ ಶ್ಲೋಕವನ್ನು ನೋಡಿರಿ.

*ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।*
*ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥*

"ಯಾವನೇ ಆಗಲಿ, ಶುದ್ಧನೋ ಅಶುದ್ಧನೋ, ಆಗಿದ್ದರೂ ಹಾಗೆಯೇ (ರೋಗಾದಿ) ಸ್ಥಿತಿಯಲ್ಲಿರುವವನಾಗಲಿ, ಪುಂಡರೀಕಾಕ್ಷನಾದ ಭಗವಂತನನ್ನು ಮನಸ್ಸಿನಲ್ಲಿ ನೆನೆದದ್ದೇ ಆದರೆ ಅಂಥವನು ಒಳಗೂ ಹೊರಗೂ ಪರಿಶುದ್ಧನಾಗುವನು"- ಎಂದು ಸ್ಮೃತಿವಾಕ್ಯವು ಸಾರುತ್ತಿದೆ. ಹೀಗೆ ಭಗವಂತನ ಸ್ಮರಣೆಯೇ ನಮ್ಮನ್ನು ಶುದ್ಧಿಗೊಳಿಸುವದಾದರೆ ಭಗವಂತನು ಎಂಥ ನಿತ್ಯಶುದ್ಧನಿರಬೇಕು - ಎಂಬಿದು ಶುಚಿಃ ಎಂಬ ದಿವ್ಯನಾಮದಲ್ಲಿ ಸೂಚಿತವಾಗಿದೆ. **(252)** ಈಗ ಸಿದ್ಧಾರ್ಥಃ -ಎನ್ನುವ ನಾಮವನ್ನು ನೋಡೋಣ. ಅರ್ಥ-ಎಂದರೆ ಪ್ರಯೋಜನವು. ಭಗವಂತನಿಗೆ ಸಿದ್ಧವಾಗದ ಪ್ರಯೋಜನಗಳೇ ಇಲ್ಲ. ಅವನ ಎಲ್ಲಾ ಬಯಕೆಗಳೂ ಪರಿಪೂರ್ಣವಾಗಿವೆ. ಆದ್ದರಿಂದಲೇ 'ಆಪ್ತಕಾಮ' ನೆಂದು ಶ್ರುತಿಯಲ್ಲಿ ತಿಳಿಸಿರುತ್ತದೆ. ಈ ಅರ್ಥದಲ್ಲಿ ಈ ನಾಮವು ಬಂದಿದೆ. **(253)** ಈಗ **'ಸಿದ್ಧಸಂಕಲ್ಪಃ'** - ಎಂಬ ನಾಮವನ್ನು ವಿಚಾರಮಾಡೋಣ. ಸಂಕಲ್ಪವೆಂದರೆ ಮನಸ್ಸಿನಲ್ಲಿರುವ ಬಯಕೆಗಳು. ಮನುಷ್ಯನಿಗೆ ಮನಸ್ಸಿನಲ್ಲಿ ಎಷ್ಟೋ ಬಯಕೆಗಳಿರುತ್ತವೆ. ಅವುಗಳಲ್ಲಿ ಎಲ್ಲಿಯೋ ಕೆಲವು ಮಾತ್ರ ನೆರವೇರುತ್ತವೆ. ಆದರೆ ಭಗವಂತನ ಬಯಕೆಗಳು ಎಂದಿಗೂ ಹುಸಿಯಾಗುವದೇ ಇಲ್ಲ. ಆದ್ದರಿಂದ ಅವನನ್ನು ಸತ್ಯ ಸಂಕಲ್ಪನೆಂದೇ ಕರೆಯುತ್ತಾರೆ. ಇನ್ನು ಮನುಷ್ಯನ ಬಯಕೆಗಳೂ ನೆರವೇರಿದವು - ಎಂದರೆ ಅವು ಕೂಡ ಭಗವಂತನ ಕೃಪೆಯಿಂದಲೇ ಆಗಿರುತ್ತವೆ. ಆದ್ದರಿಂದಲೇ ದಾಸರು ಹಾಡಿರುವ ಪದದಲ್ಲಿ 'ಹರಿಚಿತ್ತ ಸತ್ಯ' ಎಂಬ ವಚನವು ಬಂದಿರುತ್ತದೆ. ಹೀಗೆ ಸಿದ್ಧ ಸಂಕಲ್ಪನೆಂಬ ನಾಮವು ಭಗವಂತನಲ್ಲಿ ಅನ್ವರ್ಥವಾಗಿದೆ. **(254)** ಈಗ **ಸಿದ್ಧಿದಃ (255) ಸಿದ್ಧಿಸಾಧನಃ** - ಎಂಬ ನಾಮಗಳನ್ನು ನೋಡೋಣ. ಸಿದ್ಧಿ - ಎಂದರೆ ಕರ್ಮ ಫಲವು. ಅದನ್ನು ಭಕ್ತರಿಗೆ ಅವರವರ ಕರ್ಮಗಳಿಗೆ ಅನುಗುಣವಾಗಿ ದಯಪಾಲಿಸುತ್ತಾನೆ ಆದ್ದರಿಂದ

'ಸಿದ್ಧಿದ' ನೆನಿಸಿದ್ದಾನೆ. ಹಾಗೆಯೇ ಕ್ರಿಯಾಸಿದ್ಧಿಯನ್ನು ಸಾಧಿಸುವವನಾದ್ದರಿಂದ - ಎಂದರೆ ಭಗವಂತನು ಸಂಕಲ್ಪಿಸಿ ಮಾಡಿದ ಯಾವ ಕ್ರಿಯೆಯೂ ನಿಷ್ಫಲವಾಗದೆ ಸಿದ್ಧಿಯನ್ನೇ ಕೊಡುವದರಿಂದ ಈ ನಾಮದಿಂದ ಭಗವಂತನನ್ನು ಸ್ತುತಿಸಲಾಗಿದೆ.

**ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।**
**ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥28॥**

**(256)** ಈಗ **ವೃಷಾಹೀ** - ಎಂಬ ನಾಮವನ್ನು ನೋಡೋಣ. ವೃಷ ಎಂದರೆ ಧರ್ಮ, ಪುಣ್ಯ- ಎಂಬರ್ಥಗಳಿವೆ. ಅವುಗಳು ಅಹಃ - ಎಂದರೆ ಹಗಲಿನಂತೆ ಪ್ರಕಾಶಮಾನವಾದವುಗಳು. ಭಗವಂತನು ಹಾಗೆ ತೇಜೋಮಯನಾಗಿದ್ದಾನೆ. ಅಥವಾ 'ವೃಷಾಹ' ವೆಂಬ ಹೆಸರಿನ ಹನ್ನೆರಡುದಿನಗಳ ಕಾಲ ಅನುಷ್ಠಾನಮಾಡುವ ಯಜ್ಞವೊಂದಿದೆ. ಆ ಯಜ್ಞವು ಶ್ರೀಮಹಾವಿಷ್ಣುವಿನ ಸ್ವರೂಪವಾಗಿದೆ. ಆದ್ದರಿಂದ ಭಗವಂತನನ್ನು ವೃಷಾಹಿ ಎಂದು ಸ್ತುತಿಸಲಾಗಿದೆ. **(257)** ಈಗ **ವೃಷಭಃ** ಎಂಬ ನಾಮವನ್ನು ನೋಡೋಣ. ಭಕ್ತರ ಬಯಕೆಗಳನ್ನು ನೆರವೇರಿಸಿ ಮಳೆಗರೆಯುತ್ತಾನಾದ್ದರಿಂದ ವೃಷಭನೆನಿಸಿರುತ್ತಾನೆ. **(258) ವಿಷ್ಣುಃ** - ಎಂದರೆ ಸರ್ವವ್ಯಾಪಕನು- ಎಂದರ್ಥ. ಭಗವಂತನು ಸರ್ವವ್ಯಾಪಿಯಾಗಿದ್ದು ಎಲ್ಲಾ ನಾಮರೂಪಗಳನ್ನೂ ಹೊಕ್ಕಿರುತ್ತಾನೆ. ಆದ್ದರಿಂದ ವಿಷ್ಣುವೆನಿಸಿರುತ್ತಾನೆ. **(259)** ಇನ್ನು **ವೃಷಪರ್ವಾ** - ಎಂದರೆ : ಪರಂಧಾಮವೆನಿಸಿರುವ ಮೋಕ್ಷವೆಂಬ ಪದವಿಯನ್ನು ಏರುವದಕ್ಕೆ ವೃಷ - ಎಂಬ ಧರ್ಮದ ಮೆಟ್ಟಿಲುಗಳು ಸಹಕಾರಿಗಳಾಗಿವೆ. ಇವುಗಳನ್ನು ಕ್ರಮವಾಗಿ ಶ್ರವಣ - ಮನನ - ನಿದಿಧ್ಯಾಸನಗಳೆಂದು ಬಲ್ಲವರು ಕರೆಯುತ್ತಾರೆ. ಹೀಗೆ ಭಗವಂತನು ಮೋಕ್ಷಸಾಧನಗಳಾದ ಮೆಟ್ಟಿಲುಗಳಾಗಿಯೂ ಇರುತ್ತಾನಾಗಿ ವೃಷಪರ್ವನೆಂದು ಸ್ತುತಿಸಲಾಗಿದೆ. **(260)** ಈಗ **ವೃಷೋದರಃ** - ನೆಂಬ ನಾಮವನ್ನು ವಿಚಾರಮಾಡೋಣ. ಸೃಷ್ಟಿಯಲ್ಲಿರುವ ಸ್ಥಾವರಜಂಗಮಾದಿ ಪ್ರಜೆ( ದೇವರು)ಗಳನ್ನೆಲ್ಲ ಮಳೆಗರೆಯುವಂಥ ಬ್ರಹ್ಮಾಂಡವೆಂಬ ಉದರವು( ಹೊಟ್ಟೆಯು) ಇವನದೇ ಆದ್ದರಿಂದ ವೃಷೋದರನೆನಿಸಿರುತ್ತಾನೆ. ಜೀವರು ಗಳೆಲ್ಲ ಪರಮಾತ್ಮನ ಸಂತಾನವೇ - ಎಂದಭಿಪ್ರಾಯ. **(261, 262)** ಈಗ **ವರ್ಧನಃ- ವರ್ಧಮಾನಃ** - ಎಂಬ ನಾಮಗಳನ್ನು ವಿಚಾರಿಸೋಣ. ವೃದ್ಧಿಗೊಳಿಸುವದರಿಂದ ವರ್ಧನನು. ಒಂದು ಬತ್ತದ ಕಾಳು ತೆನೆಯಾಗಿ ಬೆಳೆದಾಗ ನೂರುಕಾಳು -ಗಳಷ್ಟಾಗುವದು. ಈ ವೃದ್ಧಿಯು ಭಗವಂತನ ಕೊಡುಗೆಯೇ ಆಗಿದ್ದು ಅವನ ಸ್ವರೂಪವೇ - ಎಂದು ತಿಳಿಯಬೇಕಾಗಿದೆ. ಹೀಗೆ ವೃದ್ಧಿಯಾಗುವದರಿಂದ ವರ್ಧನನೆಂದು ವರ್ಣಿಸಿದೆ. ಈ ವೃದ್ಧಿಯು ನಿರಂತರವಾಗಿ ಬೆಳೆಯುತ್ತಲೇ ಇರುವದರಿಂದ ವರ್ಧಮಾನನೆನಿಸಿರುತ್ತಾರೆ. ಉದಾಹರಣೆಗೆ ಒಂದು ತೆಂಗಿನಕಾಯಿಯು ಮರವಾಗಿ

ಬೆಳೆದಾಗ ಸಾವಿರಾರು ತೆಂಗಿನ ಕಾಯಿಗಳು ಆ ಮರವು ಜೀವಿಸಿರುವವರೆಗೂ ವೃದ್ಧಿಯಾಗುತ್ತಲೇ ಇರುವವು. ಹಾಗೆಯೇ ಪ್ರಪಂಚವೆಲ್ಲವೂ ನಾಮರೂಪಗಳ ಕ್ರಮದಿಂದ ಬೆಳೆದು ವೃದ್ಧಿಯುನ್ನು ಹೊಂದಿವೆ. ಇದೆಲ್ಲವೂ ಭಗವಂತನ ಮಹಿಮೆಯೇ ಆಗಿದ್ದು ಆತನು ವರ್ಧಮಾನನೆಂದೂ ಸ್ತುತಿಸಲ್ಪಟ್ಟಿರುತ್ತಾನೆ. **(263)ವಿವಿಕ್ತಃ** - ಹೀಗೆ ವೃದ್ಧಿಯಾಗುತ್ತಿದ್ದರೂ ಬಿಡಿಬಿಡಿಯಾಗಿಯೇ ತೋರಿಕೊಂಡವನಾಗಿ ವಿವಿಕ್ತನೆನಿಸಿರುತ್ತಾನೆ. **(264)** ಈಗ **ಶ್ರುತಿಸಾಗರಃ** - ನೆಂಬ ನಾಮವನ್ನು ವಿಚಾರಮಾಡೋಣ. ಶ್ರುತಿಗಳು- ಎಂದರೆ ವೇದಗಳು. ವೇದಗಳನ್ನು ನಾವು ತಿಳಿದರುವಂತೆ ನಾಲ್ಕು - ಎಂದು ಹೇಳಬಹುದು. ಆದರೆ ಅವುಗಳ ಪರಿಮಾಣವನ್ನು ಅಳೆಯಲಾಗುವುದಿಲ್ಲ. ಯಜುರ್ವೇದದ ತೈತ್ತಿರೀಯ ಬ್ರಾಹ್ಮಣದಲ್ಲಿರುವ ಒಂದು ಕಥೆ ಹೀಗಿದೆ : ಭರದ್ವಾಜನೆಂಬ ಋಷಿಯೊಬ್ಬನು ವೇದಗಳನ್ನೆಲ್ಲ ಪೂರ್ಣವಾಗಿ ಅಧ್ಯಯನ ಮಾಡಲು ಹೊರಟನು ವೃದ್ಧಾಪ್ಯವು ಬಂದರೂ ವೇದಾಭ್ಯಾಸವು ಮುಗಿಯಲಿಲ್ಲ. ಆಗ ಇಂದ್ರನು ಪ್ರಸನ್ನನಾಗಿ 'ಅಯ್ಯ, ನಿನಗೆ ನೂರು ವರ್ಷಗಳ ಹೆಚ್ಚಿನ ಆಯುಷ್ಯವನ್ನು ಕೊಡುವೆನು. ಆಗ ಏನನ್ನು ಕಲಿಯುವೆ?' ಎನ್ನಲು ಅವನು 'ದೇವೇಂದ್ರ ನಾನು ಆ ಅಧಿಕವಾದ ಆಯುಷ್ಯವನ್ನೆಲ್ಲ ಬ್ರಹ್ಮಚರ್ಯದಲ್ಲಿಯೇ ವಿನಿಯೋಗಿಸಿ ವೇದಗಳನ್ನೇ ಅಧ್ಯಯನಮಾಡಿ ಪೂರೈಸುತ್ತೇನೆ.' ಎಂದನು. ಹೀಗೆಯೇ ನಾಲ್ಕು ನೂರು ವರ್ಷಗಳಷ್ಟು ದೀರ್ಘಾಯುಷ್ಯವನ್ನು ಮತ್ತೆಮತ್ತೆ ಇಂದ್ರನಿಂದ ಪಡೆದು ಅಧ್ಯಯನಮಾಡಿದರೂ ಅವು ಪೂರ್ಣವಾಗಲಿಲ್ಲ. ಆಗ ಇಂದ್ರನು ಪ್ರತ್ಯಕ್ಷನಾಗಿ ಹೀಗೆಂದನು : ''ಎಲೈ ಋಷಿವರ್ಯನೆ, ನಿನ್ನ ಎದುರಿಗೆ ಇರುವ ಈ ನಾಲ್ಕು ಬೆಟ್ಟಗಳನ್ನು ನೋಡು'' ಎಂದು ಹೇಳಿ ಒಂದೊಂದು ಬೆಟ್ಟದಿಂದ ಒಂದೊಂದು ಮುಷ್ಟಿಯಷ್ಟು ಭಾಗವನ್ನು ತೆಗೆದು ಭರದ್ವಾಜನ ಮಡಿಲೊಳಕ್ಕೆ ಹಾಕಿ ಹೀಗೆಂದನು : ''ಅಯ್ಯ, ಋಷಿಯೆ, ಈವರೆಗೆ ನೀನು ಅಧ್ಯಯನಮಾಡಿರುವ ವೇದಗಳು ಇಷ್ಟು ಮಾತ್ರವೇ; ಇನ್ನುಳಿದಿರುವದೆಲ್ಲ ಅಧ್ಯಯನಮಾಡತಕ್ಕದ್ದಿದೆ'' ಎಂದು ಹೇಳಿದನು. ಆಗ ಭರದ್ವಾಜನಿಗೆ ವೇದಗಳ ಅನಂತತ್ವವು ತಿಳಿಯಿತು. ಹೀಗೆ ವೇದಗಳ ಸ್ವರೂಪವಿರುವದರಿಂದ ಯಾರೊಬ್ಬರೂ ವೇದಗಳನ್ನು ಪೂರ್ಣವಾಗಿ ಅಧ್ಯಯನಮಾಡಲಾರರು -ಎಂಬುದು ಈ ಕಥೆಯು ಅಭಿಪ್ರಾಯವಾಗಿದೆ. ಇದರಂತೆ ಶ್ರುತಿಗಳು ಸಾಗರದಷ್ಟು ವಿಸ್ತಾರವಾಗಿದ್ದು ಆ ಭಗವಂತನಲ್ಲಿಯೇ ಅಡಕವಾಗಿವೆ. ಆದ್ದರಿಂದ 'ಶ್ರುತಿಸಾಗರ'ನೆಂದು ಅವನನ್ನು ಸ್ತುತಿಸಲಾಗಿದೆ.

**ಸುಭುಜೋ ದುರ್ಧರೋ ವಾಗ್ಮೀ ಮಹೇಂದ್ರೋ ವಸುದೋ ವಸುಃ ।**
**ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ॥29॥**

**(265) ಸುಭುಜಃ** -ನೆಂದರೆ ಮಂಗಳಕರವಾದ ಭುಜಗಳುಳ್ಳವನು - ಎಂದರ್ಥ.

ಶ್ರೀಮನ್ನಾರಾಯಣನಿಗೆ ನಾಲ್ಕು ಭುಜಗಳಿವೆ. ಆದ್ದರಿಂದ ಚತುರ್ಭುಜನೆನಿಸಿದ್ದಾನೆ. ಮಾನವನ ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ - ಎಂಬುದಾಗಿ ನಾಲ್ಕು- ಎಂದು ಶಾಸ್ತ್ರಗಳಲ್ಲಿ ಗೊತ್ತುಪಡಿಸಲಾಗಿದೆ. ಈ ನಾಲ್ಕನ್ನೂ ಮಾನವನು ಬಯಸುತ್ತಾನೆ. ಇವೆಲ್ಲವನ್ನೂ ಕೊಡುವ ಭಗವಂತನು ನಾಲ್ಕು ಭುಜಗಳು ಹಾಗೂ ಕೈಗಳನ್ನು ಉಳ್ಳವನಾಗಿದ್ದಾನೆ. ಆದ್ದರಿಂದ ಚತುರ್ಭುಜನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(266)** ಈಗ **ದುರ್ಧರಃ**- ಎಂಬ ನಾಮವನ್ನು ನೋಡೋಣ. ಬೇರೊಬ್ಬರು ಧರಿಸಲು ಅಸಾಧ್ಯವಾದ ವಸ್ತುವನ್ನು ಭಗವಂತನು ತನ್ನ ಮಹಿಮೆಯಿಂದ ಧರಿಸಿರುತ್ತಾನೆ. ಉದಾಹರಣೆಗೆ ನೀರಿನಲ್ಲಿ ಮುಳುಗಿಹೋಗುತ್ತಿದ್ದ ಭೂಮಿಯನ್ನು ಭಗವಂತನು ತನ್ನ ವರಾಹರೂಪದಿಂದ ಮೇಲೆತ್ತಿ ನೆಲೆಗೊಳಿಸಿರುತ್ತಾನೆ. ಹಾಗೆಯೇ ಕೃಷ್ಣಾವತಾರ ಕಾಲಕ್ಕೆ ಗೋವರ್ಧನಗಿರಿಯನ್ನು ಎತ್ತಿಹಿಡಿದು ಗೋಪಾಲಕರನ್ನು ಕಾಪಾಡಿರುತ್ತಾನೆ. ಮತ್ತು ಮಂದರಪರ್ವತವನ್ನು ಕೂರ್ಮರೂಪದಿಂದ ಎತ್ತಿಹಿಡಿದು ಅಮೃತಮಂಥನಕ್ಕೆ ಕಾರಣ ನಾಗಿದ್ದಾನೆ. ಹೀಗೆ ತನ್ನ ಬಲವೀರ್ಯಾದಿಗಳಿಂದ ದುರ್ಧರನೆನಿಸಿದ್ದಾನೆ ಮತ್ತು ಸಾಧಕರು ಧ್ಯಾನಮಾಡುವಾಗ ಮನಸ್ಸಿನ ಚಾಂಚಲ್ಯದಿಂದ ಜಾರಿ ತಮ್ಮ ಇಷ್ಟಸಿದ್ಧಿ ಯನ್ನು ಪಡೆಯಲಾಗದೆ ಇರುತ್ತಾರೆ. ಇಂಥವರ ದೃಷ್ಟಿಯಿಂದ ದುರ್ಧರ ಮನಸ್ಸಿನಲ್ಲಿ ನೆಲೆಗೊಳಿಸಲು ಅಸಾಧ್ಯವಾಗಿಯೂ ಇದ್ದು; ದುರ್ಧರ ನಾಮನೆನಿಸಿರುತ್ತಾನೆ. **(267)** ಈಗ **ವಾಗ್ಮೀ** - ಎಂಬ ನಾಮವನ್ನು ನೋಡೋಣ. ಇದು ಬ್ರಹ್ಮ (ವೇದಗಳು) ರೂಪವಾದ ವಾಕ್ಕುಗಳನ್ನು ಜಗತ್ತಿಗೆ ದಯಪಾಲಿಸಿದವನು- ಎಂಬರ್ಥವುಳ್ಳದ್ದಾಗಿದೆ. ಸೃಷ್ಟಿಯ ಆದಿಯಲ್ಲಿ ವೇದಶಾಸ್ತ್ರಾದಿ ಸಮಸ್ತ ವಾಕ್ಕುಗಳೂ ಭಗವಂತನ ಮುಖಾರ ವಿಂದದಿಂದಲೇ ಹೊರಬಂದಿರುತ್ತವೆ - ಎಂದು ಋಷಿಗಳು ತಿಳಿಸುತ್ತಾರೆ. ಆದ್ದರಿಂದ ವಾಗ್ಮೀ ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(268) ಮಹೇಂದ್ರಃ** - ಎಂಬ ನಾಮವನ್ನು ನೋಡೋಣ. ಇಂದ್ರ ಎಂದರೆ ಪರಮೈಶ್ವರ್ಯಸಂಪನ್ನನು - ಎಂದರ್ಥ. (1) ಜ್ಞಾನ (2) ಶಕ್ತಿ (3) ಬಲ (4) ಐಶ್ವರ್ಯ (ಸ್ವಾತಂತ್ರ್ಯ)(5) ವೀರ್ಯ (6) ತೇಜಸ್ಸು - ಈ ಆರು ಗುಣಗಳನ್ನು ಪರಿಪೂರ್ಣವಾಗಿ ಉಳ್ಳವನು ಇಂದ್ರನೆನಿಸಿರುತ್ತಾನೆ. ಭಗವಂತನಾದರೊ, ಇಂಥ ಇಂದ್ರರುಗಳಿಗೂ, ಇಂದ್ರನಾಗಿರುತ್ತಾನಾಗಿ ಮಹೇಂದ್ರ ನೆಂದು ಸ್ತುತಿಸಲ್ಪಟ್ಟಿದ್ದಾನೆ. **(269)** ಈಗ **ವಸುದಃ** - ಎಂಬ ನಾಮವನ್ನು ವಿಚಾರ ಮಾಡೋಣ. ವಸು - ಎಂದರೆ ಧನ ಎಂದರ್ಥ. ಭೂಮಿ, ಮನೆ, ಹಣ, ಸುವರ್ಣ ರಜತಾದಿಗಳು, ವಿದ್ಯೆ, ಸದಾಚಾರ, ಔದಾರ್ಯ, ಕುಟುಂಬಸೌಖ್ಯ, ಸಂತಾನಪರಂಪರೆ, ಸಮಾಜದಲ್ಲಿ ಗಣ್ಯತೆ - ಇತ್ಯಾದಿಗಳೆಲ್ಲವೂ 'ವಸು' ಎಂಬ ಶಬ್ದದಲ್ಲಿ ಅಡಕವಾಗಿವೆ. ಭಗವಂತನಲ್ಲಿ ಮಾತ್ರವೇ ಇವೆಲ್ಲವೂ ಪರಿಪೂರ್ಣವಾಗಿರುತ್ತವೆ. ಇವುಗಳನ್ನೆಲ್ಲ ಭಕ್ತರಿಗೆ ಕೊಡುತ್ತಾನೆ. ಆದ್ದರಿಂದ ವಸುದ- ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(270)** ಈಗ **ವಸುಃ**

- ಎಂಬ ನಾಮವನ್ನು ನೋಡೋಣ. ಹಿಂದಿನ ನಾಮದಲ್ಲಿ ತಿಳಿಸಿರುವಂತೆ 'ವಸು' ಎಂದರೆ ಸುಖಸಂಪತ್ತುಗಳು ಏನೇನಿವೆಯೋ ಅವೆಲ್ಲವೂ ಭಗವಂತನೇ ಆಗಿರುತ್ತವೆ - ಎಂದರೆ ಅವನ ವಿಭೂತಿಗಳೇ-ಎಂದು ಹೇಳಬಹುದು. ಆದ್ದರಿಂದ ಅವುಗಳು ಭಗವಂತನೇ - ಎಂದು ಸ್ತುತಿಸುವದಕ್ಕಾಗಿ 'ವಸುಃ' ಎಂದು ಸ್ತೋತ್ರಮಾಡಲಾಗಿದೆ. ಇನ್ನು ಆ ಭಗವಂತನು ತನ್ನನಿಜಸ್ವರೂಪವನ್ನು ಮಾಯೆಯಿಂದ ಮುಚ್ಚಿಕೊಂಡಿರುತ್ತಾನಾದ್ದರಿಂದಲೂ ವಸುವೆನಿಸಿರುತ್ತಾನೆ - ಎಂದೂ ವಿವರಿಸಬಹುದಾಗಿದೆ. ಮತ್ತು ಆಕಾಶದಲ್ಲಿ ಮಾತ್ರವೇ ವಾಸಮಾಡುತ್ತಾ ವಾಯುರೂಪದಿಂದ ವ್ಯಾಪಿಸಿರುತ್ತಾನಾಗಿ ವಸು - ಎಂದೂ ಅರ್ಥಮಾಡಬಹುದಾಗಿದೆ. 'ವಸುರನ್ತರಿಕ್ಷಸತ್' (ಅಂತರಿಕ್ಷದಲ್ಲಿರುವ ವಸು) ಎಂದು ಶ್ರುತಿವಾಕ್ಯವಿದೆ. **(271)** ಈಗ **ನೈಕರೂಪಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಗೊತ್ತಾದ ಒಂದೇ ರೂಪವಿಲ್ಲವಾದ್ದರಿಂದ ನೈಕರೂಪನೆನಿಸಿರುತ್ತಾನೆ. ವಿಷ್ಣುಪುರಾಣದಲ್ಲಿರುವಂತೆ 'ಜ್ಯೋತೀಂಷಿ ವಿಷ್ಣುಃ' (ವಿ.ಪು. 2-12 -38) ನಕ್ಷತ್ರಗಳು, ಹದಿನಾಲ್ಕು ಲೋಕಗಳು ವನ(ಕಾಡು)ಗಳು, ಬೆಟ್ಟಗಳು, ನದಿಗಳು, ಸಮುದ್ರಗಳು - ಇತ್ಯಾದಿಗಳಲ್ಲದೆ ಲೋಕದಲ್ಲಿ ಜನರು 'ಇದೆ' - ಎನ್ನುವದೆಲ್ಲವೂ 'ಇಲ್ಲ' ಎನ್ನುವದೆಲ್ಲವೂ ವಿಷ್ಣುವೇ- ಎಂದು ಪರಾಶರರು ಮೈತ್ರೇಯನಿಗೆ ಉಪದೇಶ ಮಾಡಿರುತ್ತಾರೆ. ಹೀಗೆ ನಾಮರೂಪಗಳೆಲ್ಲವೂ ವಿಷ್ಣುವೇ - ಎಂದು ಸ್ತುತಿಸಿರುವದರಿಂದ ನೈಕರೂಪನೆಂದು ಕರೆಯಲಾಗಿದೆ. **(272)** ಈಗ **ಬೃಹದ್ರೂಪಃ** - ನೆಂಬ ನಾಮವನ್ನು ನೋಡೋಣ. ಬೃಹತ್ ಎಂದರೆ ದೊಡ್ಡದು ಎಂದರ್ಥ. ಭೂಮಿಯ ಮೇಲೆ ಪರ್ವತಗಳು, ಶಿಖರಗಳು, ನದಿಗಳು, ದೊಡ್ಡದಾದ ವೃಕ್ಷಗಳು - ಎಲ್ಲವೂ ಇವೆ. ಇವುಗಳಿಗಿಂತ ಮಿಗಿಲಾಗಿ ಭಗವಂತನು ತನ್ನ ವರಾಹರೂಪದಿಂದ ಭೂಮಿಯನ್ನೇ ರಸಾತಲಲೋಕದಿಂದ ಮೇಲೆತ್ತಿ ತಂದಿರುತ್ತಾನೆ. ಆದ್ದರಿಂದ ಬೃಹದ್‌ರೂಪನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(273)** ಈಗ **ಶಿಪಿವಿಷ್ಟಃ** - ಎಂಬ ನಾಮವನ್ನು ವಿಚಾರ ಮಾಡೋಣ. ಶಿಪಿ ಎಂದರೆ ಗೋವು, ಆಡು - ಮುಂತಾದ ಪಶುಗಳು - ಎಂದರ್ಥ. ಯಜ್ಞ - ಎಂದರೆ ವಿಷ್ಣುವು. ಪಶುಗಳೇ ಶಿಪಿಗಳು. ಹೀಗೆ ಯಜ್ಞವು ಪಶುಗಳೊಳಗೆ ಇದ್ದುಕೊಂಡಿವೆ - ಎಂದು ವೇದದಲ್ಲಿದೆ. ಆದ್ದರಿಂದ ಯಜ್ಞದಲ್ಲಿ ದೇವತೆಗಳಿಗೆ ಸಮರ್ಪಿಸುವ ಪಶುಗಳು ಸದ್ಗತಿಯನ್ನು ಪಡೆಯುವವು. ಇಂಥ ಯಜ್ಞಗಳ ರೂಪದಲ್ಲಿ ಭಗವಂತನು ಸನ್ನಿಹಿತನಾಗಿರುತ್ತಾನೆ. ಆದ್ದರಿಂದ ಶಿಪಿವಿಷ್ಟನೆಂಬ ನಾಮದಿಂದ ಸ್ತುತಿಸಲಾಗಿದೆ. ಅಥವಾ ಶೈತ್ಯ (ತಂಪು) ಇರುವದರಿಂದ ನೀರನ್ನು 'ಶಿ' ಸೂರ್ಯನ ರಶ್ಮಿಗಳು 'ಶಿಪಿ'ಗಳು - ಎನಿಸುತ್ತದೆ. ಈ ರಶ್ಮಿಗಳನ್ನು ಒಳಹೊಕ್ಕಿರುವವನಾದ್ದರಿಂದ ಭಗವಂತನನ್ನು 'ಶಿಪಿವಿಷ್ಟ'ನೆಂದು ಸ್ತುತಿಸಿದೆ- ಎಂದೂ ವಿವರಿಸಬಹುದಾಗಿದೆ. **(274)** ಈಗ **ಪ್ರಕಾಶನಃ** - ಎಂಬ ನಾಮವನ್ನು ನೋಡೋಣ. ಭಗವಂತನು ಬೆಳಕುಗಳಿಗೆಲ್ಲ

ಬೆಳಕಾಗಿರುತ್ತಾನೆ. ಅವನನ್ನು 'ಸ್ವಯಂಜ್ಯೋತಿ'ಯೆಂದು ಉಪನಿಷತ್ತುಗಳಲ್ಲಿ ವರ್ಣಿಸಿದೆ. ಸೂರ್ಯ, ಚಂದ್ರ, ಅಗ್ನಿ-ಗಳು ಜ್ಯೋತಿಗಳೆನಿಸುತ್ತವೆ. ಅನಂತರ ಇವು ಮೂರೂ ಇಲ್ಲವಾದಾಗ ಕತ್ತಲಿನಲ್ಲಿ ವಾಕ್ಕು (ಮಾತು) ಜ್ಯೋತಿಯೆನಿಸುತ್ತದೆ. ಅದೂ ಇಲ್ಲವಾದ ಕನಸಿನಲ್ಲಿ ಆತ್ಮನೇ ಜ್ಯೋತಿಯಾಗಿರುತ್ತಾನೆ. ಆದ್ದರಿಂದ ಅವನಿಗೆ ''ಸ್ವಯಂ ಜ್ಯೋತಿ'' ಎಂದು ಹೆಸರು. ಹೀಗೆ ಜಗತ್ತನ್ನೆಲ್ಲ ವ್ಯಾಪಿಸಿ ಬೆಳಗುತ್ತಿರುವ ಆತ್ಮನನ್ನು ಅಥವಾ ಪರಬ್ರಹ್ಮವನ್ನು 'ಪ್ರಕಾಶನ'ನೆಂದು ಸ್ತುತಿಸಿದೆ.

**ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।**
**ಋದ್ಧಃ ಸ್ಪಷ್ಟಾಕ್ಷರೋ ಮಂತ್ರಶ್ಚಂದ್ರಾಂಶುರ್ಭಾಸ್ಕರದ್ಯುತಿಃ ॥30॥**

**(275) ಓಜಸ್ತೇಜೋದ್ಯುತಿಧರಃ** - ಎಂಬ ನಾಮವನ್ನು ವಿಚಾರಮಾಡೋಣ. ಓಜಸ್ಸು ಎಂದರೆ ಪ್ರಾಣಶಕ್ತಿ. ತೇಜಸ್ಸು- ಎಂದರೆ ಶೌರ್ಯಾದಿಗಳು. ದ್ಯುತಿ - ಎಂದರೆ ಬೆಳಗುವಿಕೆ. ಇವೆಲ್ಲವನ್ನೂ ಧರಿಸಿರುವವನು ಭಗವಂತನು - ಎಂದರ್ಥ. ಪರಮಾತ್ಮನಲ್ಲಿರುವ ಈ ಗುಣಗಳು ಅಪರಿಮಿತವಾದವುಗಳು. ಇವುಗಳನ್ನು ಭಗವಂತನು ಪ್ರಕಟಿಸಿದಾಗ ನಾವು ನಮ್ಮ ಕಣ್ಣುಗಳಿಂದ ನೋಡಲಾರೆವು. ಕತ್ತಲೆಯಲ್ಲಿ ಹೇಗೆ ನಮಗೆ ಕಾಣಲಾಗುವದಿಲ್ಲವೋ ಹಾಗೆಯೇ ಬೆಳಕು ಅತಿಯಾದರೂ ನಮಗೆ ಕಾಣಲಾಗುವದಿಲ್ಲ. ಉದಾಹರಣೆಗೆ ಬರಿಗಣ್ಣಿನಿಂದ ನಾವು ಸೂರ್ಯನನ್ನು ನೋಡಲು ಹೋದರೆ ನಮಗೆ ಕಣ್ಣುಕತ್ತಲಾಗುವದು. ಆದ್ದರಿಂದ ಭಗವಂತನನ್ನು ನೋಡಲು ದಿವ್ಯಚಕ್ಷುವೇ ಬೇಕು. ಹೀಗೆ ಆ ಪರಮಾತ್ಮನ ಬೆಳಕು ಅಪೂರ್ವವಾಗಿರುವದರಿಂದ ಅವನಲ್ಲಿ ಅಡಕವಾಗಿರುವ ತೇಜಸ್ಸನ್ನು ಉದ್ದೇಶಿಸಿ ''ಓಜಸ್ತೇಜೋದ್ಯುತಿಧರಃ'' ಎಂಬ ನಾಮದಿಂದ ಸ್ತುತಿಸಲಾಗಿದೆ. **(276)** ಈಗ **ಪ್ರಕಾಶಾತ್ಮಾ** - ಎಂಬ ನಾಮವನ್ನು ನೋಡೋಣ. ಭಗವಂತನು ನಾಮರೂಪಗಳನ್ನು ಭಕ್ತರುಗಳ ಅನುಗ್ರಹಕ್ಕಾಗಿ ಆಗಾಗ್ಗೆ ಧರಿಸುತ್ತಾನೆ. ಆದರೆ ತಾನು ಯಾವ ರೂಪಗಳೂ ಇಲ್ಲದವನಾದರೂ ಸಮಯಾನುಸಾರ ಬೇಕಾದ ರೂಪಗಳನ್ನು ಧರಿಸುತ್ತಾನೆ. ಆ ಕಾಲದಲ್ಲಿ ತನ್ನ ಅಪಾರವಾದ ಹಾಗೂ ಅಪ್ರಾಕೃತವಾದ ದಿವ್ಯತೇಜಸ್ಸಿನಿಂದ ಹೊಳೆಯುತ್ತಿರುತ್ತಾನೆ. ಹೀಗೆ ಪ್ರಕಾಶವುಳ್ಳವನಾಗಿದ್ದು ತೋರಿಕೊಳ್ಳುವದರಿಂದ ಪ್ರಕಾಶಾತ್ಮಾ - ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(277)** ಈಗ **ಪ್ರತಾಪನಃ** - ಎಂಬ ನಾಮವನ್ನು ನೋಡೋಣ. ಭಗವಂತನ ಅಂಶ (ವಿಭೂತಿ) ರೂಪನೇ ಸೂರ್ಯನು. ಹಾಗೆಯೇ ಅಗ್ನಿ, ವಾಯು, ಭೂಮಿ- ಮುಂತಾದ ರೂಪಗಳಿಂದಲೂ ತೋರಿಕೊಂಡಿರುತ್ತಾನೆ. ಇನ್ನು ಮಾನವರ ಹೊಟ್ಟೆಯಲ್ಲಿ ಜಠರಾಗ್ನಿ ರೂಪದಿಂದಿದ್ದು ತಿಂದ ಆಹಾರವನ್ನು ಪಚನಗೊಳಿಸುತ್ತಾನೆ. ಹೀಗೆ ಪ್ರತಾಪನಶಕ್ತಿಯಿಂದ ಜೀವರುಗಳನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಪ್ರತಾಪನನೆಂದು ಸ್ತುತಿಸಲಾಗಿದೆ.

**(278)**ಈಗ **ಋದ್ಧಃ** - ಎಂಬ ನಾಮವನ್ನು ನೋಡೋಣ. ಧರ್ಮ, ಜ್ಞಾನ, ವೈರಾಗ್ಯ, ಸ್ವಾತಂತ್ರ್ಯ- ಇತ್ಯಾದಿ ಗುಣಗಳಿಂದ ಪರಿಪೂರ್ಣನಾಗಿರುವದರಿಂದ ಋದ್ಧನೆಂದು ಸ್ತುತಿಸಲ್ಪಟ್ಟಿದ್ದಾನೆ. **(279)** ಈಗ **ಸ್ಪಷ್ಟಾಕ್ಷರಃ** - ನೆಂಬ ನಾಮವನ್ನು ವಿಚಾರಿಸೋಣ. 'ಓಂ' ಎಂಬ ಅಕ್ಷರವು ಭಗವಂತನನ್ನು ಚೆನ್ನಾಗಿ ತಿಳಿಸುವ ಅಕ್ಷರವಾಗಿದೆ. ಇದರಲ್ಲಿ ಎಲ್ಲಾ ಮಂತ್ರಗಳೂ ಅಡಕವಾಗಿವೆ. ಯತಿಗಳೆಲ್ಲರೂ ಈ ಅಕ್ಷರವೊಂದನ್ನೇ ಜಪಿಸುತ್ತಾರೆ. ಹೀಗೆ ಕೇವಲ ಅಕ್ಷರಮಾತ್ರದಿಂದ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿರುವ ಭಗವಂತನು ಸ್ಪಷ್ಟಾಕ್ಷರನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(280)** ಈಗ **ಮಂತ್ರಃ** - ಎಂಬ ನಾಮವನ್ನು ವಿಚಾರಿಸೋಣ. **(281)** ಈಗ **ಚಂದ್ರಾಂಶುಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯಲ್ಲಿ ಬೆಳಕನ್ನು ನೀಡುವವರು ಸೂರ್ಯ- ಚಂದ್ರರು. ಆದರೆ ಚಂದ್ರನು ಶೀತಾಂಶುವೆನಿಸಿದ್ದು ತಂಪನ್ನು ನೀಡುತ್ತಾನೆ. ಸಂಸಾರ ತಾಪವೆಂಬ ಉಷ್ಣರಶ್ಮಿಯಿಂದ ಬೆಂದಿರುವ ಜನರಿಗೆ ಭಗವಂತನ ದಿವ್ಯನಾಮ ಸ್ಮರಣೆಯು ಬೆಳದಿಂಗಳಿನಂತೆ ಆಹ್ಲಾದವನ್ನು ನೀಡುವದರಿಂದ ಭಗವಂತನನ್ನೇ ಮುಖ್ಯ ವೃತ್ತಿಯಿಂದ ಚಂದ್ರಾಂಶುವೆಂದು ಸ್ತುತಿಸಲಾಗಿದೆ. **(282)** ಈಗ **ಭಾಸ್ಕರದ್ಯುತಿಃ**- ಯೆಂಬ ನಾಮವನ್ನು ನೋಡೋಣ. ಭಗವಂತನ ತೇಜಸ್ಸು ಸೂರ್ಯನನ್ನೂ ಮೀರಿರುತ್ತದೆ. ಗೀತೆಯಲ್ಲಿರುವಂತೆ ಅರ್ಜುನನಿಗೆ ಭಗವಂತನು ವಿಶ್ವರೂಪವನ್ನು ತೋರಿಸಿದಾಗ ಅವನ ಕಾಂತಿಯು ಸಾವಿರ ಸೂರ್ಯರ ಕಾಂತಿಗೂ ಮಿಗಿಲಾಗಿತ್ತೆಂದು ವರ್ಣಿಸಲಾಗಿದೆ. ಆದ್ದರಿಂದ ಆ ಪರಮಾತ್ಮನ ದ್ಯುತಿ(ತೇಜಸ್ಸು)ಯು ಸೂರ್ಯನ ತೇಜಸ್ಸನ್ನೂ ಮೀರಿದ್ದಾಗಿದೆ. ಉಪನಿಷತ್ತಿನಲ್ಲಿ ತಿಳಿಸಿರುವಂತೆ ಸೂರ್ಯ, ಚಂದ್ರ, ನಕ್ಷತ್ರಗಳು, ಅಗ್ನಿ - ಇವರು ಯಾರೂ ಭಗವಂತನನ್ನು ಬೆಳಗಲಾರರು. ಆದರೆ ಆ ಭಗವಂತನೇ ಇವರನ್ನೆಲ್ಲ ಬೆಳಗುತ್ತಾನೆ. ಹೀಗಿರುವಲ್ಲಿ ಆ ಮಹಾತ್ಮನ ತೇಜಸ್ಸನ್ನು ಸರಿಗಟ್ಟುವ ಬೇರೊಂದು ಬೆಳಕೇ ಇರುವದಿಲ್ಲ. ಆದ್ದರಿಂದ ಲೋಕದ ಜನರ ದೃಷ್ಟಿಯಿಂದ ಭಗವಂತನನ್ನು ಸೂರ್ಯನಂತೆ ತೇಜಸ್ಸುಳ್ಳವನು ಎಂದು ಸ್ತುತಿಸಲಾಗಿದೆ.

**ಅಮೃತಾಂಶೂದ್ಭವೋ ಭಾನುಃ ಶಶಬಿಂದುಃ ಸುರೇಶ್ವರಃ ।**
**ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥31॥**

**(283)** ಈಗ **ಅಮೃತಾಂಶೂದ್ಭವಃ** - ಎಂಬ ನಾಮವನ್ನು ವಿಚಾರಮಾಡೋಣ. ಹಿಂದೆ ದೇವಾಸುರರು ಒಟ್ಟುಗೂಡಿ ಕ್ಷೀರಸಮುದ್ರವನ್ನು ಅಮೃತಪ್ರಾಪ್ತಿಗಾಗಿ ಕಡೆಯುತ್ತಿದ್ದರು. ಆಗ ಚಂದ್ರನು ಹುಟ್ಟಿದನು. ಆದರೆ ಯಾವ ಭಗವಂತನ ಪ್ರೇರಣೆ ಹಾಗೂ ಜ್ಞಾನಶಕ್ತಿಬಲಾದಿಗಳಿಂದ ಸಮುದ್ರಮಥನವೂ, ಕಡೆಯಲ್ಲಿ ಅಮೃತವೂ ಉತ್ಪತ್ತಿಯಾಯಿತೋ ಆ ಎಲ್ಲಾ ಕ್ರಿಯಾಫಲಗಳಿಗೂ ಯಾವ ಭಗವಂತನೇ ಕಾರಣ

ನಾಗಿದ್ದನೋ ಅವನನ್ನೇ ಅಮೃತಾಂಶೂದ್ಭವನೆಂದು ಸ್ತುತಿಸಲಾಗಿದೆ. **(284)** ಈಗ **ಭಾನುಃ** - ಎಂಬ ನಾಮವನ್ನು ನೋಡೋಣ. ಭಾತಿ -(ಬೆಳಗುತ್ತಾನೆ) ಎಂಬರ್ಥದಲ್ಲಿ ಈ ನಾಮವು ಬಂದಿದೆ. ಭಗವಂತನು ಸ್ವಯಂಪ್ರಕಾಶನು. ಅವನ ಬೆಳಕಿನಿಂದಲೇ ಸೂರ್ಯಚಂದ್ರಾದಿಗಳೂ ಬೆಳಗುತ್ತಾರೆ. ಆದ್ದರಿಂದ ತೇಜೋರೂಪನೇ ಆಗಿರುವ ಭಗವಂತನನ್ನು ಭಾನುಃ-ಎಂದು ಸ್ತುತಿಸಿದೆ. **(285)** ಈಗ **ಶಶಬಿಂದುಃ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಶಶ - ಎಂದರೆ ಮೊಲದಂತೆ - ಬಿಂದು -ಎಂದರೆ ಗುರುತುಳ್ಳವನು-ಎಂದರ್ಥ. ಆ ಚಂದ್ರನಂತೆ ಪ್ರಜೆಗಳನ್ನು ಪೋಷಿಸುವವನಾಗಿರುವದರಿಂದ ಭಗವಂತನನ್ನು ಶಶಬಿಂದುಃ - ಎಂದು ಸ್ತುತಿಸಲಾಗಿದೆ. ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಉಪದೇಶಮಾಡುವಾಗ ಹೀಗೆಂದಿದ್ದಾನೆ. "ಎಲೈ ಅರ್ಜುನನೆ, ನಾನೇ ರಸಾತ್ಮಕನಾದ ಚಂದ್ರನಾಗಿ ಎಲ್ಲಾ ಗಿಡಮರಗಳನ್ನೂ ಫಲಪುಷ್ಪ ಭರಿತವಾಗಿಮಾಡಿ ಪೋಷಿಸುತ್ತೇನೆ"- ಎಂದು ಉಪದೇಶಿಸಿರುತ್ತಾನೆ. ಆದ್ದರಿಂದ ಈ ನಾಮವು ಅನ್ವರ್ಥವಾಗಿದೆ. **(286)** ಈಗ **ಸುರೇಶ್ವರಃ** - ಎಂಬ ನಾಮವನ್ನು ನೋಡೋಣ. ಸುರರು - ಎಂದರೆ ದೇವತೆಗಳು. ಅವರುಗಳಿಗೆ ಒಡೆಯನಾಗಿರುವದರಿಂದ ಸುರೇಶ್ವರನು. ಇನ್ನು ದೇವತೆಗಳಾದರೋ, ತಮ್ಮನ್ನು ಆರಾಧನೆ - ಮಾಡಿದವರಿಗೆ ಒಳ್ಳೆಯದನ್ನು ಮಾಡುತ್ತಾರೆ. ವರಗಳನ್ನೂ ನೀಡುತ್ತಾರೆ. ಇಂಥ ದೇವತೆಗಳಿಗೂ ಪ್ರಭುವಾಗಿರುವದರಿಂದ ಭಗವಂತನನ್ನು ಸುರೇಶ್ವರನೆಂದು ಸ್ತುತಿಸಿದೆ. **(287)** ಈಗ **ಔಷಧಮ್** - ಎಂಬ ನಾಮವನ್ನು ನೋಡೋಣ. ಸಾಮಾನ್ಯವಾಗಿ ಜನರು ವ್ಯವಹಾರದಲ್ಲಿ ಖಾಯಿಲೆ ಬಂದಾಗ ವೈದ್ಯರು ಕೊಡುವ ದ್ರವ್ಯವನ್ನು ಔಷಧಿಯೆನ್ನುತ್ತಾರೆ. ಆದರೆ ಸಂಸ್ಕೃತಭಾಷೆಯಲ್ಲಿ ಔಷಧಿ ಎಂದರೆ ಗಿಡಮರ(ಸಸ್ಯ)ಗಳು-ಎಂದರ್ಥ. ಆದ್ದರಿಂದ ಸರ್ವವ್ಯಾಪಕನಾದ ಭಗವಂತನು ಗಿಡಮರಗಳಲ್ಲಿಯೂ ಅಂತರ್ಯಾಮಿಯಾಗಿದ್ದು 'ಔಷಧಮ್'ಎಂದು ಸ್ತುತಿಸಲ್ಪಟ್ಟಿರುತ್ತಾನೆ. ಇನ್ನು ಗಿಡಮರಗಳ ನಾರುಬೇರು-ಎಲೆ, ಹೂವು - ಹಣ್ಣುಗಳಿಂದಲೇ ರೋಗಪರಿಹಾರಕ್ಕೆ ಬೇಕಾದ ಔಷಧಿಗಳನ್ನೂ ಬಲ್ಲವರು ಸಿದ್ಧಗೊಳಿಸುತ್ತಾರೆ. ಆದ್ದರಿಂದ ಆ ಗಿಡಮರಗಳ ಉಪಾಧಿಯಿಂದಲೂ ಭಗವಂತನೇ ತೋರಿಕೊಂಡಿರುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. ಅಧ್ಯಾತ್ಮವಾಗಿ ವಿಚಾರಮಾಡಿದರೆ ಈ ಸಂಸಾರದಲ್ಲಿ ಜನಸಾಮಾನ್ಯರೆಲ್ಲರಿಗೂ ಜನನ-ಮರಣಗಳೆಂಬ ರೋಗಗಳಿದ್ದೇ ಇವೆ. ಇದಕ್ಕೆ ಮೂಲವೆಂದರೆ ಶರೀರಧಾರಣೆಯು. ಆದರೆ ಭಗವಂತನನ್ನು ಭಕ್ತಿಯಿಂದ ಬಳಿಸಾರುವಂಥ ಭಕ್ತರಿಗೆ ಈ ಸಂಸಾರವೆಂಬ ರೋಗದಿಂದ ಅವರನ್ನು ಗುಣಪಡಿಸಿ ತನ್ನ ಸಾಯುಜ್ಯವನ್ನೇ ನೀಡಿ ಭವರೋಗವೈದ್ಯನೆಂಬ ಬಿರುದಿಗೆ ಪಾತ್ರನಾಗಿರುತ್ತಾನೆ. ಆದ್ದರಿಂದ ಇಂಥ ದೇವದೇವನನ್ನು 'ಔಷಧಮ್' ಎಂದೇ ಸ್ತುತಿಸಲಾಗಿದೆ. **(288)** ಈಗ **ಜಗತಃ ಸೇತುಃ** - ಎಂಬ ನಾಮವನ್ನು

ನೋಡೋಣ. ಸೇತುಃ - ಎಂಬ ಸಂಸ್ಕೃತಪದವು ಲೋಕದಲ್ಲಿರುವ ಜನರ ಕರ್ಮಗಳ ಫಲವು ಒಂದಕ್ಕೊಂದು ವಿಶ್ರವಾಗದಂತೆ ತಡೆಯಾಗಿರುವ ವಸ್ತು - ಎಂದರ್ಥ. ಭಗವಂತನು ಹೀಗೆಯೇ ಇರುವವನಾಗಿದ್ದು ಆಯಾ ಪ್ರಾಣಿಗಳ ಕರ್ಮಫಲವು ಒಂದಕ್ಕೊಂದು ಸಂಕರವಾಗದಂತೆ ನೋಡಿಕೊಳ್ಳುತ್ತಾನೆ - ಎಂಬರ್ಥದಲ್ಲಿ ಈ ನಾಮವು ಬಂದಿದೆ. ಇನ್ನು ನಮ್ಮ ವ್ಯವಹಾರದಲ್ಲಿ ನದಿಯನ್ನು ದಾಟಲು ಎರಡು ದಡಗಳಿಗೂ ಸಂಪರ್ಕವನ್ನು ಕಲ್ಪಿಸುವ ಮಾರ್ಗಕ್ಕೂ ಸೇತು-ಎಂದು ಕರೆಯುತ್ತಾರೆ. ಸೇತುವೆಯ ಮೂಲಕವೇ ಮತ್ತೊಂದು ದಡವನ್ನು ಸೇರುವಂತೆ ಜಗತ್ತಿನಲ್ಲಿರುವ ಜೀವರುಗಳು ಭಗವಂತನನೇ ಆಶ್ರಯಿಸಿಕೊಂಡು ಅವನ ಸಹಾಯದಿಂದಲೇ ಸಂಸಾರ ಸಮುದ್ರವನ್ನು ದಾಟಿ ಮೋಕ್ಷತೀರವನ್ನು ಸೇರಬೇಕಾಗಿದೆ. ಆದ್ದರಿಂದ 'ಜಗತಃ ಸೇತುಃ' ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(289)** ಈಗ **'ಸತ್ಯಧರ್ಮಪರಾಕ್ರಮಃ'**- ಎಂಬ ನಾಮವನ್ನು ನೋಡೋಣ. ಭಗವಂತನ ಸ್ವರೂಪದಲ್ಲಿ ಸತ್ಯವೂ ಧರ್ಮವೂ ಪರಾಕ್ರಮವೂ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಹಾಗೆಯೇ ಸತ್ಯವಾದ ಎಂದರೆ ಮಾರ್ಪಡದ ಧರ್ಮಗಳು ಎಂದರೆ ಜ್ಞಾನವೈರಾಗ್ಯ ಐಶ್ವರ್ಯಾದಿಗಳು ಪರಿಪೂರ್ಣವಾಗಿವೆ. ಹಾಗೆಯೇ ಅವನು ಅಮಿತಪರಾಕ್ರಮನೂ ಆಗಿರುತ್ತಾನೆ. ಗೀತೆಯಲ್ಲಿರುವಂತೆ "ಅವನಿಗೆ ಸರಿ ಸಮಾನರೇ ಇಲ್ಲ. ಇನ್ನು ಅವನಿಗಿಂತ ಮಿಗಿಲಾದವರು ಎಲ್ಲಿದ್ದಾರು?" ಎಂದು ಅರ್ಜುನನು ಸ್ತುತಿಸಿರುತ್ತಾನೆ "ರಾಮುನೀಸಮಾನಮೆವರೊ" ಎಂದು ಶ್ರೀ ತ್ಯಾಗ ರಾಜರು ಸ್ತುತಿಸಿರುತ್ತಾರೆ. ಹೀಗೆ ಭಗವಂತನು "ಸತ್ಯಧರ್ಮಪರಾಕ್ರಮ" ನೆನಿಸಿರುತ್ತಾನೆ.

**ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ ।**
**ಕಾಮಹಾ ಕಾಮಕೃತ್ ಕಾಂತಃ ಕಾಮಃ ಕಾಮಪ್ರದಃ ಪ್ರಭುಃ ॥32॥**

**(290) ಭೂತಭವ್ಯಭವನ್ನಾಥಃ** - ಎಂಬ ನಾಮವನ್ನು ನೋಡೋಣ. ಹಿಂದಿನ, ಮುಂದಿನ ಹಾಗೂ ಈಗಿನ ಕಾಲದ ಪ್ರಾಣಿ(ಜೀವ)ಸಮುದಾಯಗಳೆಲ್ಲಕ್ಕೂ ಒಡೆಯನು - ಎಂದರ್ಥ. ಆಯಾ ಕಾಲದಲ್ಲಿರುವ ಜೀವರುಗಳೆಲ್ಲರೂ ಈ ಭಗವಂತನನ್ನೇ ಆಶ್ರಯಿಸಿರುತ್ತಾರೆ. ಇಷ್ಟಾರ್ಥಗಳನ್ನು ಬೇಡಿಕೊಳ್ಳುತ್ತಾರೆ. ಅವರುಗಳನ್ನೆಲ್ಲ ಭಗವಂತನು ತನ್ನ ಆಡಳಿತದಲ್ಲಿಟ್ಟುಕೊಂಡಿರುತ್ತಾನೆ. ಅವನ ಅಪ್ಪಣೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಳ್ಳಾಡುವದಿಲ್ಲ. ಹೀಗೆ ಜಗತ್ತನ್ನೆಲ್ಲ ತನ್ನ ಸ್ವಾಧೀನದಲ್ಲಿಟ್ಟುಕೊಂಡು ತ್ರಿಕಾಲದಲ್ಲಿಯೂ ಆಳುವವನಾದ್ದರಿಂದ ಭೂತಭವ್ಯಭವನ್ನಾಥನೆನಿಸಿರುತ್ತಾನೆ. **(291)** ಈಗ **ಪವನಃ** - ಎಂಬ ನಾಮವನ್ನು ನೋಡೋಣ. ಪವತೇ ಇತಿ ಪವನಃ - ಎಂಬ ವಿವರಣೆಯಂತೆ ಎಲ್ಲವನ್ನೂ ಶುದ್ಧಗೊಳಿಸುವ ವಾಯುರೂಪದಲ್ಲಿರುವ ಭಗವಂತನನ್ನು ಪವನನೆಂದು ಸ್ತುತಿಸಿದೆ. **(292) ಪಾವನಃ** - ನೆಂದರೂ ಅವನೇ ಆಗಿರುತ್ತಾನೆ. ಹೇಗೆಂದರೆ

ನಿರಂತರವಾಗಿ ಆಲಸ್ಯವಿಲ್ಲದೆ ಸಂಚರಿಸುತ್ತಿರುವದರಿಂದ ಪವನನು ವಾಯುವು. ಅವನನ್ನು ಪ್ರೇರಿಸುವದರಿಂದ ಭಗವಂತನನ್ನು ಪಾವನನೆಂದಿದೆ. ತೈತ್ತಿರೀಯೋಪ-ನಿಷತ್ತಿನಲ್ಲಿ ''ಭೀಷ್ಮಾ-(ಆ)ಸ್ಮಾದ್ ವಾತಃ ಪವತೇ''ಎಂಬ ಶ್ರುತಿವಚನವು ನಿರಂತರವಾಗಿ ವಿರಾಮವೇ ಇಲ್ಲದೆ ಚಲಿಸುತ್ತಿರುವ ವಾಯುವನ್ನು ಚಲಿಸುವಂತೆ ಮಾಡುತ್ತಾನಾಗಿ ಭಗವಂತನನ್ನು ಪಾವನನೆಂದು ಸ್ತುತಿಸಲಾಗಿದೆ. **(293)** ಈಗ **ಅನಲಃ** - ನೆಂಬ ನಾಮವನ್ನು ನೋಡೋಣ. ಅನ - ಎಂದರೆ ಜೀವರುಗಳು. ಇವರನ್ನು ಲಾತಿ - ಎಂದರೆ ಸ್ವೀಕರಿಸುತ್ತಾನೆ - ಎಂಬರ್ಥದಲ್ಲಿ ಭಗವಂತನನ್ನು ಅನಲನೆಂದು ಸ್ತುತಿಸಿದೆ. ಇನ್ನು ಅನ - ಎಂದರೆ ಪ್ರಾಣಗಳನ್ನು ತನ್ನ ಆತ್ಮನಾಗಿ ಸ್ವೀಕರಿಸುವ ಅನಲನೆಂಬ ಜೀವನಿಗೂ ಆತ್ಮನಾಗಿರುವದರಿಂದಲೂ ಅನಲನೆನಿಸಿದ್ದಾನೆ. ಈ ಅಭಿಪ್ರಾಯದಂತೆ ಭಗವಂತನು ಅಲಮ್(ಸಾಕು)ಎಂಬುದಿಲ್ಲವಾದವನಾಗಿ ಪರಚ್ಛಿನ್ನನಲ್ಲವಾದ್ದರಿಂದ ಅನಲನೆಂದು ಸ್ತುತಿಸಲ್ಪಟ್ಟಿದ್ದಾನೆ. **(294)** ಈಗ **ಕಾಮಹಾ** - ಎಂಬ ನಾಮವನ್ನು ನೋಡೋಣ. ಕಾಮ(ಬಯಕೆ)ಗಳನ್ನು ನಾಶಗೊಳಿಸುವವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. ಮೋಕ್ಷವನ್ನು ಬಯಸುವವರು ಪ್ರಾಪಂಚಿಕವಾದ ಕಾಮಗಳನ್ನೆಲ್ಲ ತ್ಯಜಿಸಬೇಕಾಗುತ್ತದೆ. ಆಗ ಭಗವಂತನನ್ನೇ ಸಾಧಕರು ಆಶ್ರಯಿಸಬೇಕಾಗುತ್ತದೆ. ಅಂಥವರನ್ನು ಅನುಗ್ರಹಿಸಲು ಭಗವಂತನು ಅವರ ಕಾಮಗಳನ್ನು ನಾಶಗೊಳಿಸಿ ಮನಶ್ಶುದ್ಧಿಯನ್ನುಂಟುಮಾಡಿ ಉದ್ಧಾರಮಾಡುತ್ತಾನೆ. ಹೀಗೆ ಕಾಮಹಾ ಎಂಬ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(295)** ಈಗ **ಕಾಮಕೃತ್** - ಎಂಬುದನ್ನು ವಿಚಾರ ಮಾಡೋಣ. ಸಾತ್ತ್ವಿಕವಾದ ಕಾಮಗಳನ್ನು ಬಯಸುವವರಿಗೆ ಅವುಗಳನ್ನು ಅನುಗ್ರಹಿಸಿ ಕಾಪಾಡುವದರಿಂದ ಕಾಮಕೃತ್ - ಎಂದು ಸ್ತುತಿಸಲ್ಪಟ್ಟಿರುತ್ತಾನೆ. ಅನೇಕ ಭಕ್ತರು ತಮ್ಮ ಕಾಮಗಳ ಪರಿಪೂರ್ತಿಗಾಗಿ ಭಗವಂತನನ್ನು ಆಶ್ರಯಿಸುತ್ತಾರೆ. ಇವರಲ್ಲಿ ಧ್ರುವನನ್ನು ಅರ್ಥಾರ್ಥಿಭಕ್ತನೆಂದು ಹೇಳಬಹುದು. ಭಗವಂತನು ಅವನ ತಪಸ್ಸಿಗೆ ಮೆಚ್ಚಿ ಧ್ರುವಪದವಿಯನ್ನೇ ಅನುಗ್ರಹಿಸಿದನು. ಹೀಗೆ ಭಕ್ತರ ಕಾಮಗಳನ್ನು ಪೂರ್ಣಗೊಳಿಸುವದರಿಂದ ಕಾಮಕೃತ್- ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(296)** ಈಗ **ಕಾಂತಃ** - ನೆಂಬ ನಾಮವನ್ನು ನೋಡೋಣ. ಭಗವಂತನು ಅತ್ಯಂತ ಸುಂದರ ಸ್ವರೂಪನಾಗಿರುವದರಿಂದ ಕಾಂತನೆಂದು ಸ್ತುತಿಸಲ್ಪಟ್ಟಿದ್ದಾನೆ. ಸಮುದ್ರಮಥನ ಕಾಲಕ್ಕೆ ಆವಿರ್ಭವಿಸಿದ ಮಹಾಲಕ್ಷ್ಮಿಯು ದೇವತೆಗಳಲ್ಲಿ ಯಾರನ್ನು ವರಿಸಬೇಕೆಂದು ವಿಚಾರ ಮಾಡಿದವಳಾಗಿ ಸಕಲಕಲ್ಯಾಣಗುಣಸಂಪನ್ನನಾಗಿಯೂ ಮನ್ಮಥನನ್ನೂ ಮೀರಿದ ಸೌಂದರ್ಯವುಳ್ಳವನಾಗಿಯೂ ಸಾತ್ತ್ವಿಕಸ್ವಭಾವದವನಾಗಿಯೂ ಇದ್ದ ಶ್ರೀಮಹಾವಿಷ್ಣುವನ್ನೇ ತನ್ನ ಪತಿಯನ್ನಾಗಿ ವರಿಸಿದಳು. ಈ ಸಂದರ್ಭದಂತೆ ಭಗವಂತನು ಕಾಂತನೆಂದು ಸ್ತುತಿಸಲ್ಪಟ್ಟಿದ್ದಾನೆ. **(297)** ಈಗ **ಕಾಮಃ** - ಎಂಬ ನಾಮವನ್ನು ನೋಡೋಣ.

ಭಕ್ತರು ಯಾವ ವರ(ಇಷ್ಟಾರ್ಥ)ಗಳನ್ನು ಬೇಡಿದರೂ ಅವುಗಳನ್ನು ಕೊಡುತ್ತಾನಾದ್ದರಿಂದ 'ಕಾಮ'ನೆನಿಸಿದ್ದಾನೆ. ಹಾಗೆಯೇ **(298) ಕಾಮಪ್ರದಃ** - ಎಂದರೆ ಭಕ್ತರ ಬಯಕೆಗಳನ್ನು ದಯಪಾಲಿಸುವವನಾಗಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(299) ಪ್ರಭುಃ** - ಎಂಬ ನಾಮವೂ ಪ್ರಕರ್ಷೇಣ ಭವಃ - ಎಂಬ ವಿವರದಂತೆ ಅತಿಶಯವಾದ ಜ್ಞಾನಶಕ್ತಿಬಲವೀರ್ಯತೇಜಸ್ಸುಗಳಿಂದ ಕೂಡಿದ್ದು ಸರ್ವರಿಗೂ ಒಡೆಯನಾಗಿದ್ದು ಪ್ರಭುವೆನಿಸಿದ್ದಾನೆ.

**ಯುಗಾದಿಕೃತ್ ಯುಗಾವರ್ತೋ ನೈಕಮಾಯೋ ಮಹಾಶನಃ ।**
**ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನಂತಜಿತ್ ॥33॥**

**(300) ಯುಗಾದಿಕೃತ್** - ಎಂಬ ನಾಮವನ್ನು ನೋಡೋಣ. ಕೃತಾದಿ ನಾಲ್ಕು ಯುಗಗಳು ಕಾಲಪರಿಗಣನೆಯಲ್ಲಿ ಪ್ರಸಿದ್ಧವಾಗಿವೆ. ಒಂದೊಂದೂ ಸಹಸ್ರಾರು ವರ್ಷಗಳ ಪರಿಮಾಣಗಳುಳ್ಳದ್ದಾಗಿವೆ. ಇಂಥ ಯುಗಗಳ ಕರ್ತೃವಾಗಿರುವವನು ಶ್ರೀ ಮಹಾವಿಷ್ಣುವು. ಈ ಭಗವಂತನು ಕಾಲಾತೀತನು. ಆದ್ದರಿಂದ ಯುಗಗಳೇ ಮುಂತಾದ ಕಾಲವಿಶೇಷಗಳಿಗೆಲ್ಲ ಕರ್ತೃವಾಗಿರುವವನು - ಎಂದು ಈ ನಾಮದಿಂದ ಸ್ತುತಿಸಿದೆ.

**ಇಲ್ಲಿಗೆ ಮೂರು ನೂರು ನಾಮಗಳ ವಿವರಣೆಯು ಪೂರೈಸಿದೆ.**

Z Z Z

# ಚತುರ್ಥಶತಕ

**(301)** ಈಗ **ಯುಗಾವರ್ತಃ** - ಎಂಬ ನಾಮವನ್ನು ವಿಚಾರಮಾಡೋಣ. ಯುಗಗಳು ವರ್ಷ(ಸಂವತ್ಸರ)ಗಳು, ಮಾಸ-ಪಕ್ಷ, ತಿಥಿ(ದಿನ)ಗಳು, ವಾರ, ನಕ್ಷತ್ರ - ಇವೆಲ್ಲವೂ ಭಗವಂತನ ವಿಭೂತಿಗಳೆಂದೇ ಪ್ರಾಜ್ಞರು ತಿಳಿಸುತ್ತಾರೆ. ಹೀಗೆ ಕಾಲಾತ್ಮನಾಗಿ ಭಗವಂತನು ಜಗತ್ತೆಂಬ ಚಕ್ರವನ್ನು ತಿರುಗಿಸುತ್ತಲೇ ಇದ್ದಾನೆ. ಇದರಿಂದಲೇ ಮಾನವರ ಹಾಗೂ ಪಶುಪ್ರಾಣಿಗಳ, ಹಕ್ಕಿಪಕ್ಷಿಗಳ - ಆಯುಷ್ಯ, ಜೀವನಾದಿಗಳೆಲ್ಲ ನಡೆಯುತ್ತಿವೆ. ಗೀತೆಯಲ್ಲಿ ಭಗವಂತನೇ ತನ್ನನ್ನು "ಕಾಲೋಽಸ್ಮಿ ಲೋಕಕ್ಷಯಕೃತ್" ಎಂದು ತಿಳಿಸಿರುತ್ತಾನೆ. ಆದ್ದರಿಂದ ನಾವು ಕಾಲಪುರುಷನ ರೂಪದಿಂದ ನಮ್ಮ ಅನುಭವಗಮ್ಯನಾಗಿರುವ ಭಗವಂತನನ್ನು ಆರಾಧಿಸಬೇಕು. **(302)** ಈಗ **ನೈಕಮಾಯಃ** - ಎಂಬ ನಾಮವನ್ನು ವಿಚಾರಮಾಡೋಣ. ಮಾಯೆ - ಎಂದರೆ ದೃಶ್ಯಮಾತ್ರವಿರುತ್ತದೆ; ವಸ್ತುವು ಇಲ್ಲ - ಎಂದರ್ಥ. ಸಿನೆಮಾಗಳಲ್ಲಿ ತೋರಿಸುವ ಯಾವ ವಸ್ತುಗಳೂ ಅಲ್ಲಿ ನಿಜವಾಗಿರುವುದಿಲ್ಲ. ಇವೆಲ್ಲವೂ ತೋರಿಕೆ ಮಾತ್ರವೇ - ಎಂಬುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಹಾಗೆಯೇ ಭಗವಂತನೂ ತನ್ನ ಮಾಯಾಶಕ್ತಿಯಿಂದಲೇ ನಾಮರೂಪಗಳಾಗಿ ಹಾಗೂ ಪ್ರಪಂಚ (ವಿಸ್ತಾರ)ವಾಗಿ ತೋರಿಕೊಳ್ಳುತ್ತಾನೆ. ಆದರೆ ಅದು ನಿಜವಲ್ಲ. ಹೀಗಿರುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(303)** ಈಗ **ಮಹಾಶನಃ** - ಎಂಬ ನಾಮವನ್ನು ಅನುಸಂಧಾನಮಾಡೋಣ. ಅಶನ - ಎಂದರೆ ಭೋಜನ - ಆಹಾರಸ್ವೀಕಾರ ಎಂದರ್ಥ. ಭಗವಂತನ ಭೋಜನವು ಮಹಾಶನವಾಗಿದೆ. ಈ ವಿಚಾರದಲ್ಲಿ ಕಠೋಪನಿಷತ್ತಿನಲ್ಲಿ ಈ ಮಂತ್ರವಿದೆ :

*ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ ।*
*ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾವೇದ ಯತ್ರ ಸಃ ॥*

"ಯಾವನಿಗೆ ಬ್ರಾಹ್ಮ-ಕ್ಷಾತ್ರಸ್ವಭಾವದ ಜೀವರುಗಳೆಲ್ಲರೂ ಭೋಜನಕಾಲದ ಅನ್ನವಾಗಿರುವರೋ ಹಾಗೂ ಮೃತ್ಯುದೇವತೆಯೇ ಉಪ್ಪಿನಕಾಯಿಯಾಗಿರುವನೋ ಇಂಥ ಆತ್ಮನನ್ನು ಪ್ರಾಕೃತಬುದ್ಧಿಯ ಸಾಧಕನು ಹೇಗೆ ತಾನೆ ಜ್ಞಾನಿಯು ತಿಳಿದಿರುವಂತೆ ತಾನೂ ತಿಳಿದಾನು?" ಎಂದರೆ ಈ ಆತ್ಮನನ್ನು ಮಂದಬುದ್ಧಿಯವನು ಎಂದಿಗೂ ತಿಳಿಯಲಾರನು- ಎಂದರ್ಥ. ಆದ್ದರಿಂದ ಈ ಮಹಾಶಯನು ಯಾವ ಅಲ್ಪ ಸಾಧಕನಿಗೂ ದೊರಕಲಾರನು- ಎಂದಭಿಪ್ರಾಯ. **(304)** ಈಗ **ಅದೃಶ್ಯಃ**-ನೆಂಬ

ನಾಮವನ್ನು ವಿಚಾರಮಾಡೋಣ. ದೃಶ್ಯ ಎಂದರೆ ಕಣ್ಣಿಗೆ ಕಾಣುವದು- ಎಂದರ್ಥ. ಭಗವಂತನನ್ನು ಯಾವನೂ ಕಣ್ಣಿನಿಂದ ನೋಡಲಾಗುವದಿಲ್ಲ. ಏಕೆಂದರೆ ಅವನಿಗೆ ರೂಪವಿಲ್ಲ. ಆದ್ದರಿಂದ ಆದೃಶ್ಯನೆನಿಸಿದ್ದಾನೆ. ಇನ್ನು ಭಗವಂತನನ್ನು ನಾವು ನೋಡಬೇಕಾದರೆ ಆ ಭಗವಂತನೇ ನಮಗೆ 'ದಿವ್ಯಚಕ್ಷು'ವನ್ನು ಕೊಡಬೇಕು. ಅರ್ಜುನನಿಗೆ ಭಗವಂತನು ತನ್ನ 'ವಿಶ್ವರೂಪ'ವನ್ನು ಪ್ರಕಟಿಸಿದಾಗ ಅದನ್ನು ನೋಡಲು ಸಹ ದಿವ್ಯ ಚಕ್ಷುವನ್ನು ದಯಪಾಲಿಸಿದನೆಂದು ಗೀತೆಯಲ್ಲಿದೆ. ಆದ್ದರಿಂದ ಜನಸಾಮಾನ್ಯರಿಗೆಲ್ಲ ಭಗವಂತನು ಅದೃಶ್ಯನೇ ಆಗಿದ್ದಾನೆ - ಎಂದು ಅಭಿಪ್ರಾಯ. **(305)**ಈಗ **ವ್ಯಕ್ತರೂಪಃ** - ನೆಂಬ ನಾಮವನ್ನು ವಿಚಾರಿಸೋಣ. ಪರಮಾತ್ಮನಿಗೆ ಸಮಯಾನುಸಾರವಾಗಿ ಭಕ್ತರಿಗೆ ತೋರಿಕೊಳ್ಳಲು ತಕ್ಕ ರೂಪಗಳೂ ಇವೆ. ಆದರೆ ಇವು ಸ್ವರೂಪವಲ್ಲ. ಇನ್ನು ಭಕ್ತರು ಭಗವಂತನನ್ನು ಹೇಗೆ, ಯಾವ ರೂಪ, ಆಕಾರ, ಗುಣ, ಲಿಂಗ - ಇತ್ಯಾದಿ ಗಳಿಂದ ಕೂಡಿ ಚಿಂತಿಸುತ್ತಾರೋ ಹಾಗೆಹಾಗೆಯೇ ತೋರಿಕೊಳ್ಳುತ್ತಾನೆ. ವೇದಾಂತದಲ್ಲಿ ಇದನ್ನು ಮಾಯಾರೂಪವೆಂದು ಕರೆಯುತ್ತಾರೆ. ಇದು ವ್ಯಕ್ತರೂಪವೆನಿಸಿದೆ. ಹಾಗೆಂದೇ ಇಲ್ಲಿ ಸ್ತುತಿಸಿದೆ. **(306)** ಈಗ **ಸಹಸ್ರಜಿತ್**- ಎಂಬ ನಾಮವನ್ನು ನೋಡೋಣ. ದೇವತೆಗಳಿಗೆ ವೈರಿಗಳಾದ ಅಸುರರೇ ಮುಂತಾದವರನ್ನು ಅವರು ಸಾವಿರಾರು ಸಂಖ್ಯೆ ಯಲ್ಲಿದ್ದರೂ ತನ್ನ ಅಪರಿಮಿತಬಲಪರಾಕ್ರಮಗಳಿಂದ ವೈರಿಗಳನ್ನೆಲ್ಲ ಜಯಿಸುತ್ತಾನಾದ್ದ ರಿಂದ ಈ ನಾಮವು ಬಂದಿದೆ. ಹಾಗೆಯೇ **(307)** ಈಗ **ಅನಂತಜಿತ್** - ಎಂಬ ನಾಮವನ್ನೂ ನೋಡೋಣ. ಅನಂತ - ಎಂದರೆ ಅಪಾರವಾದ ಶಕ್ತಿ-ಬಲ- ಪರಾಕ್ರಮಾದಿಗಳಿಂದ ಕೂಡಿದ ಭಗವಂತನು ಎಂದರ್ಥ. ಎಲ್ಲಾ ಜೀವರುಗಳನ್ನೂ ಯುದ್ಧ-ಕ್ರೀಡೆ, ಮುಂತಾದ ಸಂದರ್ಭಗಳಲ್ಲಿ ಎದುರಾಳಿಗಳಾದವರನ್ನು ಜಯಿಸುತ್ತಾ ನಾದ್ದರಿಂದ ಅನಂತಜಿತ್- ಎಂದು ಸ್ತುತಿಸಲ್ಪಟ್ಟಿರುತ್ತಾನೆ.

**ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಂಡೀ ನಹುಷೋ ವೃಷಃ ।**
**ಕ್ರೋಧಹಾ ಕ್ರೋಧಕೃತ್ ಕರ್ತಾ ವಿಶ್ವಬಾಹುರ್ಮಹೀಧರಃ ॥34॥**

**(308)**ಈಗ **ಇಷ್ಟಃ** - ಎಂಬ ನಾಮವನ್ನು ವಿಚಾರಮಾಡೋಣ. ಭಗವಂತನು ಪರಮಾನಂದಸ್ವರೂಪನು. ಆನಂದ(ಸುಖ)ವು ಎಲ್ಲರಿಗೂ ಇಷ್ಟವಾದುದು. ಆದ್ದರಿಂದ ಸಮಸ್ತಜೀವರುಗಳಿಗೂ ಭಗವಂತನು ಅವರವರ ಆತ್ಮನೇ ಆಗಿದ್ದು ಇಷ್ಟನೆನಿಸಿರುತ್ತಾನೆ. ಆದ್ದರಿಂದ ಇಷ್ಟನೆಂದು ಸ್ತುತಿಸಿದೆ. **(309)** ಈಗ **ಅವಿಶಿಷ್ಟಃ** - ಎಂಬ ನಾಮವನ್ನು ನೋಡೋಣ. ಭಗವಂತನು ಎಲ್ಲಾ ಜೀವರುಗಳ ಅಂತರ್ಯಾಮಿಯೂ ಆತ್ಮನೂ ಆಗಿರುವದರಿಂದ ಅವಿಶಿಷ್ಟನೆನಿಸಿರುತ್ತಾನೆ. ಅವಿಶಿಷ್ಟನೆಂದರೆ ಸರ್ವಸಾಮಾನ್ಯನು; ಎಲ್ಲರಿಗೂ ಬೇಕಾದವನು-ಎಂದರ್ಥ. ಹೀಗೆ ಭಗವಂತನು ಸೂರ್ಯನಂತೆ ಎಲ್ಲಾ

ಜೀವರುಗಳಿಗೂ ಮಿತ್ರನೇ ಆಗಿದ್ದಾನೆ. **(310)** ಈಗ **ಶಿಷ್ಟೇಷ್ಟಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಶಿಷ್ಟರೆಂದರೆ ಬ್ರಹ್ಮಜ್ಞಾನಿಗಳು- ಎಂದರ್ಥ. ಅಂಥವರಿಗೆ ಭಗವಂತನು ಬಹಳ ಇಷ್ಟನಾಗಿರುತ್ತಾನೆ. ಆದ್ದರಿಂದ ಶಿಷ್ಟೇಷ್ಟನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(311)** ಈಗ **ಶಿಖಂಡೀ** - ಎಂಬ ನಾಮವನ್ನು ನೋಡೋಣ. ಖಂಡವೆಂದರೆ ನವಿಲುಗರಿ - ಎಂದರ್ಥ. ಅದು ಇವನಿಗೆ ಅಲಂಕಾರವಸ್ತುವಾಗಿರುತ್ತದೆ. ಏಕೆಂದರೆ ಭಗವಂತನು ಗೋಪಾಲ(ಗೊಲ್ಲ)ನ ರೂಪದಲ್ಲಿ ಅವತರಿಸಿದ್ದಾನೆ. ಆಗ ನವಿಲುಗರಿಯನ್ನು ತನ್ನ ಶಿಖೆಗೆ ಅಲಂಕಾರವಾಗಿ ಸ್ವೀಕರಿಸಿದ್ದಾನೆ. ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(312)** ಈಗ **ನಹುಷಃ** - ಎಂಬ ನಾಮವನ್ನು ನೋಡೋಣ. ನಹ್ಯತಿ - ಎಂದರೆ (ಣಹ-ಬಂಧನೇ) ಜೀವರುಗಳನ್ನು ತನ್ನ ಛಾಯೆಯಿಂದ ಕಟ್ಟಿಹಾಕಿರುತ್ತಾನಾದ್ದರಿಂದ ನಹುಷನೆನಿಸಿದ್ದಾನೆ. ಗೀತೆಯಲ್ಲಿ ಭಗವಂತನೇ ಹೀಗೆಂದಿರುತ್ತಾನೆ. 'ಎಲೈ ಪಾರ್ಥನೆ, ನನ್ನ ಗುಣಮಯವಾದ ಮಾಯೆಯು ದಾಟಲಸಾಧ್ಯವಾದುದು. ಅದು ಎಲ್ಲಾ ಜೀವರುಗಳನ್ನೂ ಸಂಸಾರಬಂಧದಲ್ಲಿ ಕಟ್ಟಿಹಾಕಿದೆ. ಆದರೆ ಯಾರು ನನ್ನನ್ನೇ ಬಳಿ ಸಾರಿ ಶರಣುಹೊಂದುತ್ತಾರೋ ಅವರು ಮಾತ್ರ ಈ ಮಾಯೆಯನ್ನು ದಾಟಬಲ್ಲರು.' - ಎಂದು ಹೇಳಿದ್ದಾನೆ. ಆದ್ದರಿಂದ ಅವನಿಗೆ ನಹುಷನೆಂಬ ನಾಮವು ಬಂದಿರುತ್ತದೆ. ಹೀಗೆ ಭೀಷ್ಮರು ಭಗವಂತನನ್ನು ಸ್ತುತಿಸಿರುತ್ತಾರೆ. **(313)** ಈಗ **ವೃಷಃ** - ಎಂಬ ನಾಮವನ್ನು ಅನು ಸಂಧಾನಮಾಡೋಣ. ಈ ನಾಮವು ಧರ್ಮ - ಎಂಬರ್ಥ ದಲ್ಲಿಯೂ ಪ್ರಸಿದ್ಧವಾಗಿದೆ. ಭಗವಂತನೇ ಧರ್ಮವೆನಿಸಿರುತ್ತಾನೆ. ಆದ್ದರಿಂದ ಧರ್ಮಕ್ಕೂ ಭಗವಂತನಿಗೂ ಭೇದವಿಲ್ಲ. ಕಠೋಪನಿಷತ್ತಿನಲ್ಲಿ 'ಅಣುಶೇಷ ಧರ್ಮಿಃ' ಎಂದು ಧರ್ಮಶಬ್ದದಿಂದಲೇ ಪರಮಾತ್ಮನನ್ನು ತಿಳಿಸಲಾಗಿದೆ. ಆದ್ದರಿಂದ ಹಾಗೂ ಭಕ್ತರ ಬಯಕೆಗಳನ್ನೆಲ್ಲ ಪರಿಪೂರ್ಣಗೊಳಿಸುವದರಿಂದಲೂ ಧರ್ಮನೆನಿಸಿರುತ್ತಾನೆ. **(314)** **ಕ್ರೋಧಹಾ** - ಎಂಬ ನಾಮವನ್ನು ಈಗ ವಿಚಾರಮಾಡೋಣ. ಕ್ರೋಧ- ಎಂದರೆ ಕೋಪವೆಂದು ಅರ್ಥ. ಕಾಮ-ಕ್ರೋಧ ಲೋಭಗಳನ್ನು ನರಕಕ್ಕೆ ಬಾಗಿಲುಗಳೆಂದು ಬಲ್ಲವರು ಹೇಳುತ್ತಾರೆ. ಆದ್ದರಿಂದ ಕ್ರೋಧವನ್ನು ಗೆಲ್ಲಬೇಕು. ಇದಕ್ಕೆ ಭಗವಂತನ ಕೃಪೆಯೂ ಬೇಕು. ಹೀಗೆ ಸಾಧುಸಜ್ಜನರ ಕೋಪತಾಪಗಳನ್ನು ನಾಶಗೊಳಿಸುತ್ತಾನಾದ್ದರಿಂದ ಕ್ರೋಧಹಾ - ಎಂದು ಸ್ತುತಿಸಿದೆ. **(315)** ಈಗ **ಕ್ರೋಧಕೃತ್‌ಕರ್ತಾ** - ಎಂಬ ನಾಮವನ್ನು ವಿಚಾರಿಸೋಣ. ಕೋಪವನ್ನು ಉಂಟು ಮಾಡುವವನು - ಎಂಬುದು ಸಾಮಾನ್ಯಾರ್ಥವು. ಆದರೆ ಭಗವಂತನಿಗೆ ಸ್ತುತಿ ಯಾಗಬೇಕಾದರೆ ಕ್ರೋಧವನ್ನೇ ಸ್ವಭಾವವಾಗಿ ಹೊಂದಿರುವ ಅಸುರರನ್ನು ನಿಗ್ರಹಿಸು ವವನು (ಕ್ರೋಧಕೃತಾಂ ನಿಹನ್ತಾ) ಎಂಬರ್ಥದಲ್ಲಿ ಈ ನಾಮವು ಬಂದಿರುತ್ತದೆ. ಮತ್ತು ಕೋಪಮಾಡುವವರಿಗೂ ಶಿಕ್ಷೆಮಾಡುವವನಾಗಿದ್ದು ಕ್ರೋಧಕೃತ್ ಕರ್ತಾ -

ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(316)** ಈಗ **ವಿಶ್ವಬಾಹುಃ** - ಎಂಬ ನಾಮವನ್ನು ನೋಡೋಣ. ನೂರಾರು ತೋಳುಗಳನ್ನು ಹೊಂದಿದ್ದ ವಿಶ್ವರೂಪವಾಗಿ ಪರಿಗಣಿಸಿ ಭಗವಂತನನ್ನು ವಿಶ್ವಬಾಹುಃ ಎಂದು ಸ್ತುತಿಸಲಾಗಿದೆ. **(317)** ಈಗ **ಮಹೀಧರಃ** ಎಂಬ ನಾಮವನ್ನು ನೋಡೋಣ. ಮಹೀ - ಎಂದರೆ ಪೂಜೆ ಎಂದು ಭೂಮಿ - ಎಂದೂ ಎರಡು ಅರ್ಥಗಳೂ ಇವೆ. ಆದ್ದರಿಂದ ಭಕ್ತರ ಪೂಜೆಗಳನ್ನು ಧರಿಸುತ್ತಾನೆ - ಸ್ವೀಕರಿಸುತ್ತಾನೆ - ಎಂಬರ್ಥ ದಲ್ಲಿ ಮಹೀಧರನೆನಿಸುತ್ತಾನೆ. ಮಹೀ ಎಂದರೆ ಭೂಮಿ - ಎಂಬ ಅರ್ಥವನ್ನು ಸ್ವೀಕರಿಸಿದರೆ ವರಾಹರೂಪದಿಂದ ಅವತರಿಸಿ ಭೂಮಿಯನ್ನೆತ್ತಿ ಕಾಪಾಡಿದವನು ಎಂದೂ ಅರ್ಥ ಮಾಡಬಹುದಾಗಿದೆ.

**ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।**
**ಅಪಾಂ ನಿದಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ॥35॥**

**(318)** ಈಗ **ಅಚ್ಯುತಃ** - ಎಂಬ ನಾಮವನ್ನು ವಿಚಾರಮಾಡೋಣ. ಚ್ಯುತ ಎಂದರೆ ಜಾರಿಬೀಳುವುದು - ಎಂದರ್ಥ. ಮಾನವರಿಗೆ ಈ ಪರಿಸ್ಥಿತಿಯಿದೆ. ಸಾಲವನ್ನು ಪಡೆದವನು ಕೆಲವು ವೇಳೆ ಹಿಂದಿರುಗಿಸುವದಿಲ್ಲ. ತೆಗೆದುಕೊಳ್ಳುವಾಗ ವಾಪಸ್ಸುಕೊಡುವದಾಗಿ ಹೇಳಿರುತ್ತಾನೆ. ಆದರೆ ಹಾಗೆ ನಡೆಯುವದಿಲ್ಲ. ಇದು ಪ್ರಾಮಾಣಿಕತೆಯ ಚ್ಯುತಿ ಎನಿಸುತ್ತದೆ. ಹೀಗೆಯೇ ವ್ಯವಹಾರಗಳಲ್ಲಿ ಮಾನವನು ಧರ್ಮದಿಂದ ಜಾರುತ್ತಲೇ ಇರುತ್ತಾನೆ. ಭಗವಂತನಾದರೋ ಅಚ್ಯುತನು. ಅವನು ಮಾತು, ಮನಸ್ಸು , ಕ್ರಿಯೆ; ಇವೆಲ್ಲದರಲ್ಲಿಯೂ ಸತ್ಯವಾಗಿನಡೆದುಕೊಳ್ಳುತ್ತಾನೆ. ಆತ ನನ್ನು ಈ ಕಾರಣದಿಂದ "ಸತ್ಯನಾರಾಯಣ"ನೆಂದೇ ಋಷಿಗಳು ಕರೆಯುತ್ತಾರೆ. ಹೀಗೆ ತ್ರಿಕರಣಗಳಿಂದಲೂ ಯಥಾರ್ಥವಾಗಿ ನಡೆದುಕೊಳ್ಳುವ ಭಗವಂತನನ್ನು ಇಲ್ಲಿ 'ಅಚ್ಯುತ' ನೆಂದು ಸ್ತುತಿಸಿದೆ. **(319)** ಈಗ **ಪ್ರಥಿತಃ** - ಎಂಬ ನಾಮವನ್ನು ನೋಡೋಣ. ಪ್ರಥಿತಃ ಎಂದರೆ ಪ್ರಸಿದ್ಧನಾದವನು - ಪ್ರಖ್ಯಾತನಾದವನು - ಎಂದರ್ಥ. ಹೇಗೆ ಸೂರ್ಯನು ಉದಯಿಸಿದರೆ ಜಗತ್ತಿನ ಜನರೆಲ್ಲರೂ ಆಯಾ ಕಾಲದಲ್ಲಿ ಆತನನ್ನು ತಮ್ಮತಮ್ಮ ಸ್ಥಳಗಳಲ್ಲಿಯೇ ಕಂಡು ಆನಂದಿಸುವರೋ ಹಾಗೂ ಭಕ್ತಿ-ಶ್ರದ್ಧೆಗಳಿಂದ ಗೌರವಿಸುವರೋ ಹಾಗೆಯೇ ಭಗವಂತನನ್ನೂ ಮಾನವರೆಲ್ಲರೂ ಬೇರೆಬೇರೆಯ ನಾಮರೂಪೋಪಾಧಿಗಳ ಮೂಲಕ ಕಂಡುಕೊಂಡು ಆರಾಧಿಸುತ್ತಾರೆ. ಹೀಗೆ ಸುಪ್ರಸಿದ್ಧ ನಾದ ಭಗವಂತನು ಪ್ರಖ್ಯಾತನಾಗಿರುತ್ತಾನೆ. ಆದ್ದರಿಂದ ಪ್ರಥಿತನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(320)** ಈಗ **ಪ್ರಾಣಃ** -ಎಂಬ ನಾಮವನ್ನು ವಿಚಾರಿಸೋಣ. ಪ್ರಾಣ - ಎಂದರೆ ಉಸಿರು ಎಂದರ್ಥ. ಸೃಷ್ಟಿಯಲ್ಲಿರುವ ಎಲ್ಲಾ ಜಂಗಮಪ್ರಾಣಿಗಳೂ ಉಸಿರಾಡುತ್ತವೆ. ಸ್ಥಾವರಪ್ರಾಣಿಗಳು ಉಸಿರಾಡುವದು ನಮಗೆ ಗೋಚರವಾಗದಿದ್ದರೂ ಅವುಗಳಿಗೂ

ಪ್ರಾಣವ್ಯಾಪಾರವಿದೆ. ಆದ್ದರಿಂದಲೇ ಗಿಡಗಳು ಮರವಾಗಿ ಬೆಳೆಯುತ್ತವೆ. ಹೀಗೆ ವಾಯುವಿನ ಮಹಿಮೆಯು ಆಧ್ಯಾತ್ಮಿಕ - ಆಧಿಭೌತಿಕ - ಆಧಿದೈವಿಕಪ್ರಪಂಚವನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆ. ಇಂಥ ಪ್ರಾಣನು ಸಕಲಜೀವರ ಆತ್ಮನಾಗಿದ್ದಾನೆ. ಅವನೇ ಶ್ರೀಮಹಾವಿಷ್ಣುವು - ಎಂದು ಪ್ರಾಣನೆಂಬ ನಾಮದಿಂದ ಸ್ತುತಿಸಲಾಗಿದೆ. **(321)** ಈಗ **ಪ್ರಾಣದಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯಲ್ಲಿರುವ ಜೀವರುಗಳಿಗೆಲ್ಲ ಪ್ರಾಣವನ್ನು ಅನುಗ್ರಹಿಸುವದರಿಂದ ಭಗವಂತನು 'ಪ್ರಾಣದ' ನೆನಿಸಿರುತ್ತಾನೆ. ಭಗವಂತನ ಕ್ರಿಯಾಶಕ್ತಿಯನ್ನೇ ಪ್ರಾಣನೆಂದು ಕರೆಯಲಾಗಿದೆ. ಆದ್ದರಿಂದ ಆ ಶಕ್ತಿಯೆಂಬ ಉಪಾಧಿಯ ಸಂಬಂಧದಿಂದ ಪ್ರಾಣದ(ಪ್ರಾಣವನ್ನು ದಯಪಾಲಿಸುವವನು)ನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(322)** ಈಗ **ವಾಸವಾನುಜಃ** - ಎಂಬ ನಾಮವನ್ನು ನೋಡೋಣ. ವಾಸವನೆಂದರೆ ಇಂದ್ರನು. ಇವನು ಕಶ್ಯಪ-ಅದಿತಿ ಎಂಬ ದಂಪತಿಗಳ - ಮಗನು. ಈ ಇಂದ್ರನಿಗೆ ತಮ್ಮನಾಗಿ ಹುಟ್ಟಿದವನಾದ್ದರಿಂದ ಉಪೇಂದ್ರನೆಂದೂ ಹಾಗೂ ವಾಸವಾನುಜನೆಂದೂ ಸ್ತುತಿಸಲ್ಪಟ್ಟಿರುತ್ತಾನೆ. **(323)** ಈಗ **ಅಪಾಂ ನಿಧಿಃ** - ಎಂಬ ನಾಮವನ್ನು ಪರಿಶೀಲಿಸೋಣ. ಅಪಃ ಎಂದರೆ ನೀರು. ಇದು ಎಲ್ಲಿ ಸಂಗ್ರಹ ವಾಗಿದ್ದು ತುಂಬಿರುತ್ತದೆಯೋ ಅದನ್ನು ಅಪಾಂ ನಿಧಿ- ಎಂದು ಕರೆಯುತ್ತಾರೆ. ಇದೇ ಸಮುದ್ರವೆನಿಸಿದೆ. ಸಮುದ್ರಕ್ಕಿಂತಲೂ ಮಿಗಿಲಾದ ಜಲಸಂಗ್ರಹವನ್ನು 'ಸಾಗರ' ವೆಂದು ಕರೆಯುತ್ತಾರೆ. ಹೀಗೆ ಸಾಗರದಂತೆ ಸ್ಥಾಪಕನೂ ಸ್ವತಃ ಸಾಗರರೂಪನೂ ಆಗಿರುವ ಭಗವಂತನನ್ನು ಅಪಾಂ ನಿಧಿಃ - ಎಂದು ಸ್ತುತಿಸಿದೆ. **(324)** ಈಗ **ಅಧಿಷ್ಠಾನಮ್** - ಎಂಬ ನಾಮವನ್ನು ನೋಡೋಣ. ಎಲ್ಲಕ್ಕೂ ಆಶ್ರಯನಾಗಿರುವದರಿಂದ ಈ ನಾಮವು ಭಗವಂತನಿಗೆ ಅನ್ವರ್ಥವಾಗಿದೆ. ಎಲ್ಲಾ ದೇವರುಗಳಿಗೂ ಭಗವಂತನೇ ಆಧಾರನಾಗಿದ್ದಾನೆ. ಗೀತೆಯಲ್ಲಿ ಭಗವಂತನೇ ಹೇಳಿರುವ "ಮತ್‌ಸ್ಥಾನಿ ಸರ್ವ ಭೂತಾನಿ" ಎಂಬ ವಾಕ್ಯವನ್ನು ನೋಡಿರಿ. ಆದ್ದರಿಂದ ಜಗದಾಧಾರಭೂತನಾದ ಭಗವಂತನನ್ನು ಅಧಿಷ್ಠಾನನೆಂದು ಸ್ತುತಿಸಿದೆ. **(325)** ಈಗ **ಅಪ್ರಮತ್ತಃ** - ನೆಂಬ ನಾಮವನ್ನು ನೋಡೋಣ. ಪ್ರಮಾದ ಎಂದರೆ ತಪ್ಪುಮಾಡುವದು - ಎಂದರ್ಥ. ಭಗವಂತನು ಸರ್ವಜ್ಞನೂ ಸರ್ವೇಶ್ವರನೂ ಸತ್ಯಕಾಮನೂ ಸತ್ಯಸಂಕಲ್ಪನೂ ಸದಾವರ್ತ ಮಾನಸ್ವಭಾವನೂ ಆಗಿದ್ದು ಎಂದಿಗೂ ಮೈಮರೆಯುವವನಲ್ಲ. ಅವನ ಕರ್ಮ ಗಳೆಲ್ಲವೂ ಲೋಕಕಲ್ಯಾಣನಿಮಿತ್ತವಾಗಿರುವವು. ಮತ್ತು ವಿಳಂಬ, ಮರೆವು, ಪ್ರಮಾದಾದಿದೋಷಗಳಿಲ್ಲದ ನಿತ್ಯವರ್ತ ಮಾನಸ್ವರೂಪನಾಗಿ ಜಗದ್‌ವ್ಯಾಪಾರಗಳನ್ನೆಲ್ಲ ಕರಾರುವಕ್ಕಾಗಿ ನಿರ್ವಹಿಸುತ್ತಾನೆ. ಆದ್ದರಿಂದ ಅಪ್ರಮತ್ತನೆಂದು ಸ್ತುತಿಸಲ್ಪಟ್ಟಿದ್ದಾನೆ. **(326)** ಈಗ **ಪ್ರತಿಷ್ಠಿತಃ** - ನೆಂಬ ನಾಮವನ್ನು ನೋಡೋಣ. ಈ ನಾಮಕ್ಕೆ ದೃಢವಾಗಿ ನೆಲೆನಿಂತವನು ಹಾಗೂ ತನ್ನ ಸ್ವರೂಪಬಲವೀರ್ಯತೇಜಸ್ಸುಗಳಲ್ಲಿಯೇ

ಇದ್ದುಕೊಂಡಿರುವವನು ಎಂದರ್ಥ. ಆದ್ದರಿಂದ ಇವನಿಗೆ ಬೇರೆಯ ಆಲಂಬನಗಳಿಲ್ಲ. ಸನತ್ಕುಮಾರ ಋಷಿಯು ನಾರದರಿಗೆ ಉಪದೇಶಮಾಡುವಾಗ "ಆ ಭಗವಂತನು ತನ್ನ ಸ್ವಂತ ಮಹಿಮೆಯಲ್ಲಿಯೇ ನೆಲೆನಿಂತಿರುತ್ತಾನೆ' ಎಂದು ತಿಳಿಸಿದ್ದಾರೆ. ಹೀಗೆ ಭಗವಂತನು ತನ್ನ ಮಹಿಮೆಯಲ್ಲಿಯೇ ನೆಲೆನಿಂತಿರುವದರಿಂದ "ಪ್ರತಿಷ್ಠಿತ"ನೆಂದು ಸ್ತುತಿಸಲ್ಪಟ್ಟಿರುತ್ತಾನೆ.

**ಸ್ಕನ್ದಃ ಸ್ಕನ್ದಧರೋ ಧುರ್ಯೋ ವರದೋ ವಾಯುವಾಹನಃ ।**
**ವಾಸುದೇವೋ ಬೃಹದ್ಭಾನುರಾದಿದೇವಃ ಪುರಂದರಃ ॥36॥**

**(327)** ಈಗ **ಸ್ಕನ್ದಃ** - ನೆಂಬ ನಾಮವನ್ನು ನೋಡೋಣ. ಅಮೃತರೂಪದಿಂದ ಸ್ರವಿಸುತ್ತಾನೆ - ಎಂದರೆ ನೀರಿನಂತೆ ಹರಿಯುತ್ತಾನೆ- ಎಂಬರ್ಥದಲ್ಲಿ ಈ ನಾಮವು ಬಂದಿದೆ. ಕ್ಷೀರಸಮುದ್ರಮಥನಕಾಲದಲ್ಲಿ ಭಗವಂತನು ಅಮೃತರೂಪದಲ್ಲಿ ಉದ್ಭವಿಸಿ ದೇವತೆಗಳನ್ನು ಅನುಗ್ರಹಿಸಿ ಅವರನ್ನು ನಿರ್ಜರ(ಮುಪ್ಪಿಲ್ಲದವರು)ರನ್ನಾಗಿ ಮಾಡಿದನು. ಈ ಅಮೃತವು ಆ ಭಗವಂತನ ಅನುಗ್ರಹದಿಂದಲೇ ಹುಟ್ಟಿ ದೇವತೆಗಳಿಗೆ ದೊರಕಿತು. ಹೀಗೆ ಅಮೃತರೂಪದಿಂದ ಸ್ರವಿಸಿದ್ದರಿಂದ (ಹರಿದುಬಂದದ್ದರಿಂದ) ಅದು ಭಗವಂತನೇ ಆಗಿದ್ದುದರಿಂದ ಸ್ಕಂದನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(328)** ಈಗ **ಸ್ಕನ್ದ ಧರಃ** -ನೆಂಬ ನಾಮವನ್ನು ನೋಡೋಣ. ಇಲ್ಲಿ ಸ್ಕಂದ ಎಂಬ ಶಬ್ದಕ್ಕೆ ಭಾಷ್ಯಕಾರರು ಧರ್ಮ - ಎಂದು ಅರ್ಥವನ್ನು ಮಾಡಿದ್ದಾರೆ. ಧರ್ಮಮಾರ್ಗದಲ್ಲಿ ನಡೆಯುವ ವರನ್ನು 'ಧಾರಯತಿ' ಎಂದರೆ ಆಶ್ರಯವನ್ನು ನೀಡಿ ಕಾಪಾಡುವವನು ಎಂಬರ್ಥ ದಲ್ಲಿ ಈ ನಾಮವು ಬಂದಿರುತ್ತದೆ. **(329)** ಈಗ **ಧುರ್ಯಃ** - ಎಂಬ ನಾಮವನ್ನು ನೋಡೋಣ. 'ಧುರಂ ವಹತಿ ಇತಿ ಧುರ್ಯ' -ಎಂಬ ಅರ್ಥದಂತೆ ಎಲ್ಲಾ ಜೀವರು ಗಳ ಹುಟ್ಟು- ಬದುಕು(ಜೀವನ)ಗಳನ್ನು ನಿರ್ವಹಿಸುತ್ತಾನಾದ್ದರಿಂದ ಧುರ್ಯನೆನಿಸಿ ರುವನು. ಭಗವಂತನ ಅನುಗ್ರಹದಿಂದಲೇ ಜೀವರುಗಳೆಲ್ಲರೂ ಜೀವನವನ್ನು ನಡೆಯಿಸುತ್ತಾರಾದ್ದರಿಂದ ಧುರ್ಯನೆಂದು ಸ್ತುತಿಸಲಾಗಿದೆ. **(330)** ಈಗ **ವರದಃ** -ನೆಂಬ ನಾಮವನ್ನು ನೋಡೋಣ. ಭಗವಂತನನ್ನು 'ವರದರಾಜ'ನೆಂದೂ ಋಷಿಗಳು ಸ್ತುತಿಸಿರುತ್ತಾರೆ. ಭಕ್ತರ ಇಷ್ಟಾರ್ಥಗಳನ್ನೆಲ್ಲ ಭಗವಂತನೇ ಪೂರ್ಣಗೊಳಿಸುತ್ತಾನೆ. ಅವನು ನಾಲ್ಕು ಪುರುಷಾರ್ಥಗಳನ್ನೂ ಆಯಾ ಭಕ್ತರ ಬೇಡಿಕೆಗೆ ತಕ್ಕಂತೆ ಅನುಗ್ರಹಿಸುತ್ತಾನೆ. ಹೀಗೆ ಭಕ್ತರ ಬೇಡಿಕೆಗಳನ್ನು ಪೂರೈಸುವ ಭಗವಂತನು 'ವರದ'ನೆನಿಸಿರುತ್ತಾನೆ. ಇನ್ನು ವರ - ಎಂದರೆ ದಕ್ಷಿಣೆ- ಎಂದು ಅರ್ಥಮಾಡಿದರೆ ಯಜ್ಞಾದಿಗಳಲ್ಲಿ ಋತ್ವಿಜರಿಗೆ ಯಜಮಾನನ ರೂಪದಿಂದ ದಕ್ಷಿಣೆಯನ್ನು ಕೊಡುತ್ತಾನಾದ್ದರಿಂದಲೂ ವರದನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(331)** ಈಗ **ವಾಯುವಾಹನಃ** - ಎಂಬ ನಾಮವನ್ನು

ನೋಡೋಣ. ವಾಯುವು ಸಪ್ತಮರುತ್ತಗಳಾಗಿ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ಆಧ್ಯಾತ್ಮಿಕವಾಗಿ ಮನುಷ್ಯನ ಶರೀರದಲ್ಲಿಯೇ ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನ-ಎಂಬ ಪಂಚಾವಾಯುಗಳಿವೆ. ಇನ್ನು ಸೃಷ್ಟಿಯಲ್ಲಿ ಆವಹ-ಪ್ರವಹ ಇತ್ಯಾದಿ ರೂಪವಾದ ಏಳು ಮರುದ್ದೇವತೆಗಳಿದ್ದಾರೆ. ಈ ಎಲ್ಲಾ ರೂಪದ ಮರುದ್ದೇವತೆಗಳೂ ಭಗವಂತನ ವಿಭೂತಿಗಳೇ ಆಗಿವೆ. ಇಂಥ ವಾಯುದೇವತೆಯನ್ನು ವಾಹಯತಿ -ಎಂದರೆ ನಿಯಮಿಸುತ್ತಾನೆ (ನಿರ್ವಹಿಸುತ್ತಾನೆ)ಎಂಬರ್ಥದಲ್ಲಿ ಈ ನಾಮವು ಬಂದಿದೆ.

**(332)** ಈಗ **ವಾಸುದೇವಃ** -ನೆಂಬ ನಾಮವನ್ನು ನೋಡೋಣ. ಇದನ್ನು ಮಹಾತ್ಮರು ಹಾಗೂ ಜ್ಞಾನಿಗಳು, ಕವಿಗಳು ನಾನಾರೀತಿಯಿಂದ ವ್ಯಾಖ್ಯಾನಮಾಡಿರುತ್ತಾರೆ. ಕೆಲವು ವಿವರಗಳು ಹೀಗಿವೆ : ಶ್ರೀಕೃಷ್ಣನು ಶ್ರೀಮಹಾವಿಷ್ಣುವಿನ ದಶಾವತಾರಗಳಲ್ಲಿ ಪ್ರಮುಖ ನಾಗಿದ್ದಾನೆ. ಹೇಗೆಂದರೆ ಭಗವಂತನ ಉಳಿದ ಅವತಾರಗಳು - ಎಂದರೆ ಮತ್ಸ್ಯ-ಕೂರ್ಮಾದಿಗಳ ಅಂಶಾವತಾರಗಳೆನಿಸಿವೆ. ಕೃಷ್ಣಾವತಾರವು ಮಾತ್ರ ಪೂರ್ಣಾವತಾರ ವೆಂದು ಪ್ರಸಿದ್ಧವಾಗಿದೆ. ಇದು ಪುರಾಣಗಳಲ್ಲಿಯೂ "ಏತೇ ಅಂಶಕಲಾ ವಿಷ್ಣೋಃ ಕೃಷ್ಣಸ್ತು ಭಗವಾನ್ ಸ್ವಯಮ್" ಎಂದು ಭಗವಂತನನ್ನೇ ಉಲ್ಲೇಖಿಸಿದೆ. ಹೀಗೆ ಭಗವಂತನು ಕೃಷ್ಣಾವತಾರವನ್ನು ಮಾಡಿದಾಗ ಚತುರ್ಭುಜನಾಗಿ ಶಂಕಚಕ್ರಗದಾಪದ್ಮ ಧಾರಿಯಾಗಿ ದೇವಕೀದೇವಿಗೆ ದರ್ಶನವನ್ನು ಕೊಟ್ಟು ಅನಂತರ ಪ್ರಾಕೃತಶಿಶುವಾಗಿ ತೋರಿಕೊಂಡನೆಂದು ಭಾಗವತ ಪುರಾಣದಲ್ಲಿದೆ. ಆ ಸಂದರ್ಭದಲ್ಲಿ ಮಾತ್ರ ವಸು ದೇವನ ಮಗನೆಂಬ ಅರ್ಥದಲ್ಲಿ 'ವಾಸುದೇವ'ನೆಂದು ಹೆಸರಿಸಲ್ಪಟ್ಟಿರುತ್ತಾನೆ. ಇನ್ನು ವಾಸುದೇವನೆಂಬ ನಾಮದ ನಿರ್ವಚನವು ಹೀಗಿದೆ :-

*ವಾಸನಾದ್ ವಾಸುದೇವಸ್ಯ ವಾಸಿತಂ ಭುವನತ್ರಯಮ್ ।*
*ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತುತೇ ॥*

"ಸ್ವರ್ಗ- ಮರ್ತ್ಯ- ಪಾತಾಳಗಳೆಂಬ ಮೂರು ಲೋಕಗಳನ್ನು ವ್ಯಾಪಿಸಿಕೊಂಡಿರು ವನಾದ - ಎಂದರೆ ಸರ್ವಭೂತ (ಪ್ರಾಣಿ)ಗಳಲ್ಲಿಯೂ ವಾಸಿಸುತ್ತಿರುವನಾದ ಸರ್ವಾಂತ -ರ್ಯಾಮಿಯಾದ ವಾಸುದೇವನೆ, ನಿನಗೆ ನಮಸ್ಕಾರ" ಎಂದು ಈ ಶ್ಲೋಕದ ಅರ್ಥ. ಇದು ಪರಿಪೂರ್ಣನಾದ ಭಗವಂತನಿಗೇ ಅನ್ವಯಿಸುವ ವಿವರಣೆಯಾಗಿದೆ. ಆದ್ದರಿಂದ ಭಗವಂತನ ಅಂಶಾವತಾರಗಳಲ್ಲಿ ಒಂದಾಗಿರುವ ಕೃಷ್ಣಾವತಾರದಲ್ಲಿ ವಸುದೇವನ ಪುತ್ರನೆನಿಸಿರುವದರಿಂದ ಗೌಣಾರ್ಥದಲ್ಲಿ "ವಾಸುದೇವ"ನೂ ಮುಖ್ಯಾರ್ಥದಲ್ಲಿ ಜಗತ್‌ಪ್ರಭುವಾದ ಪರಬ್ರಹ್ಮನೂ ಆಗಿ ವಾಸುದೇವನೆಂದು ಪ್ರಸಿದ್ಧನಾಗಿರುತ್ತಾನೆ.

**(333)** ಈಗ **ಬೃಹದ್‌ಭಾನುಃ** - ಎಂಬ ನಾಮವನ್ನು ನೋಡೋಣ. ಚಂದ್ರ ಸೂರ್ಯರನ್ನೂ ಮೀರಿ ಹೋಗುವ ದೊಡ್ಡ ದೊಡ್ಡ ರಶ್ಮಿಗಳು ಯಾವಾತನಿಗೆ ಇವೆಯೋ

ಅವನೇ ಬೃಹದ್ಭಾನುವು. ಗೀತೆಯಲ್ಲಿ ಹನ್ನೊಂದನೆಯ ವಿಶ್ವರೂಪದರ್ಶನಾಧ್ಯಾಯ ದಲ್ಲಿರುವ ಈ ಶ್ಲೋಕವನ್ನು ಅನುಸಂಧಾನಮಾಡೋಣ :

*ದಿವಿ ಸೂರ್ಯಸಹಸ್ರಸ್ಯ ಭವೇದ್ ಯುಗಪದುತ್ಥಿತಾ ।*
*ಯದಿ ಭಾಃ ಸದೃಶೀ ಸಾ ಸ್ಯಾದ್ ಭಾಸಸ್ತಸ್ಯ ಮಹಾತ್ಮನಃ ॥ಗೀ-11-12॥*

"ಆಕಾಶದಲ್ಲಿ ಒಂದು ವೇಳೆ ಒಂದೇ ಬಾರಿಗೆ ಸಾವಿರ ಸೂರ್ಯರು ಉದಯಿಸಿ ದಲ್ಲಿ ಎಂಥ ಬೆಳಕು ಹೊರಹೊಮ್ಮುವದೋ ಅದೇನಾದರೂ ಈ ವಿಶ್ವರೂಪನಾದ ಭಗವಂತನ ತೇಜಸ್ಸಿಗೆ ಸಮಾನವಾದೀತೇನೋ-ಎಂಬಂತೆ" ಬೃಹದ್ಭಾನುವೆನಿಸಿರುವ ಆ ಪರಮಾತ್ಮನು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(334)** ಈಗ **ಆದಿದೇವಃ** - ಎಂಬ ನಾಮವನ್ನು ನೋಡೋಣ. ಜಗತ್ತಿನ ಸೃಷ್ಟಿಗಿಂತ ಮುಂಚೆಯೇ ಇದ್ದವನಾಗಿದ್ದು ಸೃಷ್ಟಿಯಲ್ಲಿರುವ ಎಲ್ಲಾ ಜೀವರಗಳಿಗಿಂತಲೂ ಮೊದಲಿನವನಾಗಿರುವದರಿಂದ ಆದಿ ದೇವನೆನಿಸಿರುತ್ತಾನೆ. ಗೀತೆಯಲ್ಲಿರುವಂತೆ ಅರ್ಜುನನು ಭಗವಂತನ ವಿಶ್ವರೂಪವನ್ನು ನೋಡಿ ಬೆರಗಾಗಿ ಅನಂತರ ಭಕ್ತಿಯಿಂದ ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸುವಾಗ "ತ್ವಮಾದಿದೇವಃ" (ಗೀ.11-38) ಎಂದು ಸ್ತೋತ್ರಮಾಡಿರುತ್ತಾನೆ. ಆದ್ದರಿಂದ ಆದಿ ದೇವನೆನಿಸಿರುತ್ತಾನೆ. ಇನ್ನು "ದೇವೋದಾನಾದ್ ವಾ ದೀಪನಾದ್ ವಾ ದ್ಯುಸ್ಥಾನೋ ಭವತಿ"(ನಿರುಕ್ತ 7-15)ಎಂದು ನಿರುಕ್ತಕಾರರು ವಿವರಿಸಿರುವಂತೆ ದಾನವೇ ಮುಂತಾದ ಕಲ್ಯಾಣಗುಣಗಳುಳ್ಳವನಾದ್ದರಿಂದ ಆದಿದೇವನೆನಿಸಿರುತ್ತಾನೆ. **(335)** ಈಗ **ಪುರಂದರಃ** - ಎಂಬ ನಾಮವನ್ನು ನೋಡೋಣ. ದೇವತೆಗಳ ಶತ್ರುಗಳಾದ ಅಸುರರ ಪುರ (ವಾಸಸ್ಥಾನ)ಗಳನ್ನು ಸೀಳಿ ಆ ವೈರಿಗಳನ್ನು ನಾಶಮಾಡುವದರಿಂದ ಈ ನಾಮವು ಬಂದಿದೆ. ಇಂದ್ರನ ಜೊತೆಗೆ ಉಪೇಂದ್ರನೆನಿಸಿ ತ್ರಿಲೋಕಗಳನ್ನೂ ಅನುಶಾಸನ ಮಾಡುತ್ತಾನಾದ್ದರಿಂದಲೂ ಪುರಂದರನೆನಿಸಿರುತ್ತಾನೆ

**ಅಶೋಕಸ್ತಾರಣಃ ತಾರಃ ಶೂರಃ ಶೌರಿರ್ಜನೇಶ್ವರಃ ।**
**ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥37॥**

**(336) ಅಶೋಕಃ** - ಎಂಬ ನಾಮವನ್ನು ನೋಡೋಣ. ಶೋಕದ ಸಂಪರ್ಕ ವಿಲ್ಲದವನು- ಎಂದು ಸ್ತುತಿಸಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಪರಬ್ರಹ್ಮ ವಸ್ತುವನ್ನು ವರ್ಣಿಸುವಾಗ ಶೋಕಮೋಹಾದಿಷಡೂರ್ಮಿಗಳನ್ನು ಮೀರಿರುವ ತತ್ತ್ವವೇ ಪರಬ್ರಹ್ಮವು - ಎಂದು ತಿಳಿಸಿದೆ. ಅವು ಯಾವವೆಂದರೆ : (1) ಶೋಕ (ದುಃಖ) (2) ಮೋಹ (ಅವಿವೇಕ) (3) ಜರಾ (ಮುಪ್ಪು) (4) ಮೃತ್ಯು (ಸಾವು) (5) ಅಶನಾಯಾ

(ಹಸಿವು) (6) ಪಿಪಾಸಾ (ಬಾಯಾರಿಕೆ) - ಎಂದು ವಿಶ್ಲೇಷಿಸಲಾಗಿದೆ. ಆದ್ದರಿಂದ ಈ ಆರು ಸಂಸಾರದೋಷಗಳೂ ಭಗವಂತನಲ್ಲಿಲ್ಲವಾದ್ದರಿಂದ ಅವನನ್ನು 'ಅಶೋಕ'ನೆಂದು ಸ್ತುತಿಸಿದೆ. (337) ಈಗ **ತಾರಣಃ** - ಎಂಬ ನಾಮವನ್ನು ನೋಡೋಣ. ಸಂಸಾರವೆಂಬ ಮಹಾಸಮುದ್ರದಿಂದ ಜೀವರನ್ನು ದಾಟಿಸಿ ಮುಕ್ತಿಯನ್ನು ಕೊಡುವವನಾದ್ದರಿಂದ ತಾರಣನೆಂಬ ನಾಮದಿಂದ ಸ್ತುತಿಸಲಾಗಿದೆ. (338) **ತಾರಃ** - ಎಂಬುದೂ ಭಗವಂತನ ನಾಮವೇ ಆಗಿದೆ. ಜೀವರುಗಳಿಗೆ ಹುಟ್ಟು, ಮುಪ್ಪು, ಸಾವು, ಇವು ಅನಿವಾರ್ಯವಾದವುಗಳು. ಆದರೆ, ಭಗವಂತನನ್ನು ಮೊರೆ ಹೊಕ್ಕವರಿಗೆ ಇವುಗಳಿಂದ ಬಿಡುಗಡೆಯುಂಟು. ಆದ್ದರಿಂದ ತಾರಃ ಎಂದು ಸ್ತುತಿಸಲಾಗಿದೆ. ಒಮ್ಮೆ ಭಗವಂತನನ್ನು ನಾವು ಸೇರಿದ್ದೇ ಆದರೆ ಮತ್ತೆ ಜನ್ಮಮರಣಗಳ ಭಯವಿರುವದಿಲ್ಲ. ಈ ಪದವಿಯನ್ನೇ ಮುಕ್ತಿ- ಎಂದು ಕರೆಯುತ್ತಾರೆ. ಇದನ್ನು ಭಗವಂತನೊಬ್ಬನೇ ಕೊಡಲು ಸಮರ್ಥನು. ಆದ್ದರಿಂದ ಶಾಶ್ವತಸುಖಶಾಂತಿಗಳನ್ನು ಪಡೆಯಲು ತಾರಕನಾದ ಆ ಪರಮಾತ್ಮನನ್ನೇ ಭಜಿಸಬೇಕು. (339) ಈಗ **ಶೂರಃ** - ಎಂಬ ನಾಮವನ್ನು ನೋಡೋಣ. ಭಗವಂತನು ನಿರುಪಮವಾದ ಶೌರ್ಯವುಳ್ಳವನು. ಗೀತೆಯಲ್ಲಿ ಅರ್ಜುನನು ವಿಶ್ವರೂಪವನ್ನು ಧರಿಸಿದ ಭಗವಂತನನ್ನು ಸ್ತುತಿಸುವಾಗ "ಪ್ರಭೋ, ಶೌರ್ಯಾದಿಗುಣಗಳಲ್ಲಿ ನಿನಗೆ ಸರಿಸಮಾನರಾದವರೂ ಯಾರೂ ಇಲ್ಲ. ಇನ್ನು ಹೆಚ್ಚಿನವನು ಎಲ್ಲಿದ್ದಾನು?" ಎಂದು ಕೊಂಡಾಡಿರುತ್ತಾನೆ. ಹೀಗೆ ಅಸಮಾನಪರಾಕ್ರಮಶಾಲಿಯಾದ ಭಗವಂತನು ಶೂರನೆಂದು ಸ್ತುತಿಸಲ್ಪಟ್ಟಿರುತ್ತಾನೆ. (340) ಈಗ **ಶೌರಿಃ** - ಎಂಬ ನಾಮವನ್ನು ನೋಡೋಣ. ಶೂರನ ಪುತ್ರನಾದ್ದರಿಂದ ಈ ಹೆಸರು ಬಂದಿದೆ. ಶ್ರೀಕೃಷ್ಣನ ತಂದೆಯಾದ ವಸುದೇವನಿಗೆ ಶೂರಸೇನನೆಂದೂ ಹೆಸರಿದೆ. ಆದ್ದರಿಂದ ಶೂರನ ಪುತ್ರನೆಂಬ ಅರ್ಥದಲ್ಲಿ ಶೌರಿ - ಎಂದು ಸ್ತುತಿಸಿದೆ. (341) ಈಗ **ಜನೇಶ್ವರಃ** - ಎಂಬ ನಾಮವನ್ನು ನೋಡೋಣ. ಜನರು ಎಂದರೆ ಹುಟ್ಟುಳ್ಳವರು - ಎಂದರ್ಥ. ಮಾತೃಗರ್ಭದಿಂದ ಹುಟ್ಟಿಬರುವದರಿಂಧ ಮನುಷ್ಯರನ್ನು ಜನರು ಎನ್ನುತ್ತಾರೆ. ಇಂಥ ಜನರಿಗೆಲ್ಲ ಒಡೆಯನಾಗಿರುವದರಿಂದ ಭಗವಂತನು ಜನೇಶ್ವರನೆಂದು ಸ್ತುತಿಸಲ್ಪಟ್ಟಿದ್ದಾನೆ. (342) ಈಗ **ಅನುಕೂಲಃ** - ವೆಂಬ ನಾಮವನ್ನು ನೋಡೋಣ. ಭಗವಂತನು ಎಲ್ಲರ ಆತ್ಮನೇ ಆಗಿರುವದರಿಂದ ಈ ನಾಮವು ಬಂದಿದೆ. ಅನುಕೂಲವೆಂಬುದು ಪ್ರತಿಯೊಬ್ಬನೂ ಬಯಸುವ ಸ್ಥಿತಿಯು. ಏಕೆಂದರೆ ಎಲ್ಲರೂ ತಮ್ಮ ತಮ್ಮ ಜೀವನಕ್ಕೆ ಅನುಕೂಲವನ್ನು ಮಾಡಿಕೊಳ್ಳುತ್ತಾರೆಯೇ ಹೊರತು ಪ್ರತಿಕೂಲ (ತೊಂದರೆ)ವನ್ನು ಮಾಡಿಕೊಳ್ಳುವದೇ ಇಲ್ಲ. ಹೀಗೆ ಭಗವಂತನೇ ಎಲ್ಲರ ಆತ್ಮನೇ ಆಗಿರುವದರಿಂದ ಅನುಕೂಲವೆಂಬ ಹೆಸರಿನಿಂದಲೇ ಸ್ತುತಿಸಲ್ಪಟ್ಟಿರುತ್ತಾನೆ. (343) ಈಗ **ಶತಾವರ್ತಃ** -ನೆಂಬ ನಾಮವನ್ನು ನೋಡೋಣ. ಧರ್ಮವನ್ನು ಕಾಪಾಡುವದಕ್ಕಾಗಿ ನೂರಾರು

ಆವರ್ತಗಳು -ಎಂದರೆ ಬೇರೆಬೇರೆಯ ನಾಮರೂಪಗಳಿಂದ ತೋರಿಕೊಳ್ಳುವಿಕೆಯು ಭಗವಂತನಲ್ಲಿರುತ್ತದೆ. ಇವುಗಳನ್ನು ಪ್ರಾದುರ್ಭಾವ ಅಥವಾ ಅವತಾರಗಳು - ಎನ್ನುತ್ತಾರೆ. ಆದ್ದರಿಂದ ಶತಾವರ್ತನೆಂದು ಸ್ತುತಿಸಿದೆ. **(344)** ಈಗ **ಪದ್ಮೀ** - ಎಂಬ ನಾಮವನ್ನು ನೋಡೋಣ. ಭಗವಂತನ ನಾಭಿ(ಹೊಕ್ಕಳು) ಪದ್ಮದಂತೆ ಇದೆ. ಈ ನಾಭಿ ಕಮಲದಿಂದಲೇ ಚತುರ್ಮುಖಬ್ರಹ್ಮನು ಹುಟ್ಟಿರುತ್ತಾನೆ. ಆದ್ದರಿಂದ ಪದ್ಮೀ ಎಂದು ಸ್ತುತಿಸಲ್ಪಟ್ಟಿರುತ್ತಾನೆ. ಅಥವಾ ಪದ್ಮಪುಷ್ಪವನ್ನು ಕೈಯಲ್ಲಿ ಹಿಡಿದುಕೊಂಡಿರುತ್ತಾನಾಗಿ ಪದ್ಮೀ - ಎಂದು ಹೆಸರು ಬಂದಿದೆ -ಎಂದಾದರೂ ಹೇಳಬಹುದು. **(345)** ಈಗ **ಪದ್ಮನಿಭೇಕ್ಷಣಃ** - ಎಂಬ ನಾಮವನ್ನು ನೋಡೋಣ. ಕಮಲದಂತೆ ಇರುವ ಸುಂದರ ವಾದ ಕಣ್ಣುಗಳು ಭಗವಂತನಿಗೆ ಇವೆಯಾಗಿ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ.

**ಪದ್ಮನಾಭೋಽರವಿಂದಾಕ್ಷಃ ಪದ್ಮಗರ್ಭಃ ಶರೀರಭೃತ್ ।**
**ಮಹರ್ದ್ಧಿರ್ಋದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ ॥38॥**

**(346) ಪದ್ಮನಾಭಃ** - ತಾವರೆಯ ಹೂ(ಪದ್ಮಪುಷ್ಪ)ವಿನ ಮಧ್ಯದ ದಂಟುಭಾಗ ದಲ್ಲಿರುವವನು ಎಂಬರ್ಥದಲ್ಲಿ ಈ ನಾಮವು ಬಂದಿದೆ - ಎಂದು ಭಾಷ್ಯಕಾರರು ತಿಳಿಸುತ್ತಾರೆ. 'ಪೃಥಿವೀ ಪದ್ಮಮುಚ್ಯತೇ' ಎಂಬ ವಾಕ್ಯದಂತೆ ಭೂಮಿಯನ್ನು ಪದ್ಮವೆಂದು ಅರ್ಥಮಾಡಿದರೆ ಆಗ ಅದರ ನಡುವಿನ ಆಧಾರನಾಗಿದ್ದು ಪದ್ಮನಾಭನೆನಿಸಿರುತ್ತಾನೆ - ಎಂದು ಅರ್ಥಮಾಡಬಹುದು. ಈ ನಾಮವು 48, 199 ನೆಯ ನಾಮಗಳಾಗಿಯೂ ಸ್ತುತಿಸಲ್ಪಟ್ಟಿದೆ. **(347) ಅರವಿಂದಾಕ್ಷಃ** -ನೆಂದರೆ ಪದ್ಮಪುಷ್ಪದಂತೆ ಸುಂದರವಾಗಿ ಕಣ್ಣುಳ್ಳವನು - ಎಂದರ್ಥ. ಸಾಮುದ್ರಿಕಶಾಸ್ತ್ರಕಾರರೂ ಈ ನೇತ್ರಸೌಂದರ್ಯವನ್ನು ಮಹಾಪುರುಷಲಕ್ಷಣವೆಂದು ತಿಳಿಸುತ್ತಾರೆ. ಆದ್ದರಿಂದ ಇದು ಭಗವಂತನ ಅನ್ವರ್ಥ ನಾಮವಾಗಿದೆ. **(348)** ಈಗ **ಪದ್ಮಗರ್ಭಃ**-ನೆಂಬ ನಾಮವನ್ನು ನೋಡೋಣ. ಇಲ್ಲಿ ಪದ್ಮವೆಂದರೆ ಹೃದಯ - ಎಂದರ್ಥ. ಯೋಗಿಗಳು ಭಗವಂತನನ್ನು ತಮ್ಮ ಹೃದಯ ದಲ್ಲಿಯೇ ಧ್ಯಾನಮಾಡುತ್ತಾರೆ. ಹೀಗೆ ಉಪಾಸಕರಿಗೆ ಅವರ ಹೃದಯದಲ್ಲಿ ಭಗವಂತನ ಸಾನ್ನಿಧ್ಯವು ದೊರಕುವದರಿಂದ ಆ ಅರ್ಥದಲ್ಲಿ ಪದ್ಮಗರ್ಭನೆನಿಸಿರುತ್ತಾನೆ **(349)** ಈಗ **ಶರೀರಭೃತ್** - ಎಂಬ ನಾಮವನ್ನು ನೋಡೋಣ. ಮಾನವನ ಶರೀರದಲ್ಲಿ ಭಗವಂತನು ಅನ್ನರೂಪದಿಂದಲೂ ಪ್ರಾಣರೂಪದಿಂದಲೂ ಇದ್ದುಕೊಂಡು ಜೀವನಾಧಾರ ನಾಗಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(350)** ಈಗ **ಮಹರ್ಧಿಃ** - ಎಂಬ ನಾಮವನ್ನು ನೋಡೋಣ. ಋದ್ಧಿ ಎಂದರೆ ಮಹಿಮೆ - ಎಂದರ್ಥ. ಅತ್ಯಂತ ಮಹತ್ತಾದ ಅಪರಿಮಿತವಾದ ಋದ್ಧಿ(ಬೆಳವಣಿಗೆ)ಯು ಭಗವಂತನೊಬ್ಬನಿಗೇ ಇರುವದರಿಂದ ಈ ನಾಮದಿಂದ ಸ್ತುತಿಸಲಾಗಿದೆ. ಉದಾಹರಣೆಗೆ ವಾಮನನಾಗಿ

ಬಲಿರಾಜನಿಗೆ ದರ್ಶನವನ್ನು ನೀಡಿದವನೇ ತ್ರಿವಿಕ್ರಮನಾಗಿ ಬೆಳೆದು ಆತನ ಮೂರು ಲೋಕಗಳ ರಾಜ್ಯವನ್ನೂ ಎರಡೇ ಹೆಜ್ಜೆಗಳಿಂದ ಅಳಿದುಬಿಟ್ಟನು. ಹೀಗೆ ಅಪಾರವಾದ ಬೆಳವಣಿಗೆಯ ವಿಭೂತಿ(ಮಹಿಮೆ)ಯು ಉಳ್ಳವನಾದ್ದರಿಂದ ಈ ನಾಮವು ಬಂದಿದೆ. **(351)** ಈಗ **ಋದ್ಧಃ** - ಎಂಬ ನಾಮವನ್ನು ವಿಚಾರಮಾಡೋಣ. ಇದು ಕೂಡ ಹಿಂದಿನ ನಾಮದ ಅಭಿಪ್ರಾಯವನ್ನೇ ಒಳಗೊಂಡಿದೆ. ಹೇಗೆಂದರೆ ಪ್ರಪಂಚರೂಪ ದಿಂದ ಹರಡಿ ಕೊಂಡಿದ್ದಾನೆ - ಎಂಬ ಕಾರಣದಿಂದ ಭಗವಂತನ ನಾನಾರೂಪವಾದ ಬೆಳವಣಿಗೆ ಯನ್ನು ಈ ನಾಮದಿಂದ ವಿವರಿಸಲಾಗಿದೆ. **(352)** ಈಗ **ವೃದ್ಧಾತ್ಮಾ** - ಎಂಬ ನಾಮವನ್ನು ನೋಡೋಣ. ಇಲ್ಲಿ ವೃದ್ಧ - ಎಂಬುದಕ್ಕೆ ಪುರಾತನ ಎಂಬರ್ಥವನ್ನು ಸ್ವೀಕರಿಸಲಾಗಿದೆ. ಆದ್ದರಿಂದ ಜಗತ್ತಿನ ಸೃಷ್ಟಿಯ ಪ್ರಪ್ರಥಮಪ್ರಜೆ ಯಾಗಿ ಎಂದರೆ ಹಿರಣ್ಯಗರ್ಭನೆಂಬ ಪ್ರಜಾಪತಿಯಾಗಿ ಅವತರಿಸಿದವನಾಗಿ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. ಅತ್ಯಂತ ಹಿರಿಯವೃದ್ಧನಾದ ಆತ್ಮನಿವನು - ಎಂದಭಿಪ್ರಾಯ. **(353)** ಈಗ **ಮಹಾಕ್ಷಃ** - ಎಂಬ ನಾಮವನ್ನು ನೋಡೋಣ. ಅಕ್ಷ - ಎಂದರೆ ಕಣ್ಣು ಎಂದರ್ಥ. ಭಗವಂತನನ್ನು ವೇದದಲ್ಲಿ ಸಹಸ್ರಾಕ್ಷನೆಂದು ಸ್ತುತಿಸಿದೆ. ಆದರೆ ಸಹಸ್ರ ಎಂಬುದು ಇಲ್ಲಿ ಸಂಖ್ಯಾವಾಚಕವಲ್ಲ. ಅನಂತವಾದ ಎಂದರೆ ಎಣಿಸಲು ಸಾಧ್ಯವಾದ ಕಣ್ಣುಗಳುಳ್ಳವನು - ಎಂದರ್ಥ. ಲೋಕದಲ್ಲಿಯೂ ಎಣಿಸಲಾಗದ್ದನ್ನು ಅಪಾರ(ಅನಂತ)ಎನ್ನುವರು. ಉದಾಹರಣೆಗೆ ಒಂದು ಸಕ್ಕರೆ ಮೂಟೆಯಲ್ಲಿ ಸಕ್ಕರೆಯ ಕಾಳು(ಕಣ)ಗಳು ಎಷ್ಟಿವೆ ? ಎಂದರೆ ಎಣಿಸಲು ಸಾಧ್ಯವೆ? ಹಾಗೆಯೇ ಭಗವಂತನ ನೇತ್ರಗಳನ್ನೂ ಎಣಿಸಲಾಗುವದಿಲ್ಲ. ಹೀಗೆ ಮಹಾಕ್ಷನೆಂದು ಸ್ತುತಿಸಲ್ಪಟ್ಟಿದ್ದಾನೆ. **(354)** ಈಗ **ಗರುಡಧ್ವಜಃ** - ಎಂಬ ನಾಮವನ್ನು ನೋಡೋಣ. ಗರುಡ ಎಂಬ ಶಬ್ದಕ್ಕೆ ಭಾಗವತದಲ್ಲಿ ಹೇಳಿರುವಂತೆ ವೇದಗಳು - ಎಂಬರ್ಥವನ್ನು ಇಲ್ಲಿ ಸ್ವೀಕರಿಸಬೇಕು. ವೇದಗಳ ಮೂಲಕವೇ ನಾವು ಭಗವಂತನ ಪರಿಚಯವನ್ನು ಮಾಡಿಕೊಳ್ಳಬೇಕಾಗಿದೆ. ನಮ್ಮ ರಾಷ್ಟ್ರಧ್ವಜವನ್ನು ನೋಡಿ ಭಾರತಮಾತೆಯನ್ನು ನೆನೆದು ಗೌರವಿಸುವಂತೆ ಭಗವಂತನನ್ನೂ ಆತನ ಗರುಡಾಂಕಿತಧ್ವಜವನ್ನು ನೋಡಿ ಸ್ಮರಿಸಬಹುದಾಗಿದೆ. ಹೀಗೆ ಭಗವಂತನು ಗರುಡಧ್ವಜನೆಂದುಸ್ತುತಿಸಲ್ಪಟ್ಟಿರುತ್ತಾನೆ.

**ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ ।**
**ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ ಸಮಿತಿಂಜಯಃ ॥39॥**

**(355)** ಈಗ **ಅತುಲಃ** - ಎಂಬ ನಾಮವನ್ನು ನೋಡೋಣ. ತುಲಾ ಎಂದರೆ ಉಪಮೆ - ಎಂದರ್ಥ. ಭಗವಂತನನ್ನು ಅವನಿರುವಂತೆಯೇ ಸ್ತುತಿಸಲು ಸಾಧ್ಯವಿಲ್ಲ. ಏಕೆಂದರೆ ಅವನು ನಾಮರೂಪರಹಿತನು. ಆದರೂ ನಾಮರೂಪಗಳನ್ನು ಅಧ್ಯಾರೋಪ

ಮಾಡಿ ಬೇರೊಂದರೊಡನೆ ಹೋಲಿಸಬಹುದಾದರೂ ಅದು ಅವನ ಪೂರ್ಣ ಸ್ವರೂಪವಲ್ಲ. ಆದ್ದರಿಂದ ನಿರುಪಮಾನನಾದ ಭಗವಂತನನ್ನು ಅತುಲ - ಎಂದೇ ಸ್ತುತಿಸಲಾಗಿದೆ. ಗೀತೆಯಲ್ಲಿನ ಭಗವಂತನ ವಿಶ್ವರೂಪವನ್ನು ಅರ್ಜುನನು ಸ್ತೋತ್ರ ಮಾಡುವಾಗ 'ಪ್ರಭೊ, ಈ ಬ್ರಹ್ಮಾಂಡದಲ್ಲಿ ನಿನಗೆ ಸಮಾನರೇ, ಮತ್ತೊಬ್ಬರಿಲ್ಲ. ಇನ್ನು ನಿನಗಿಂತ ಮೀರಿದವನು ಯಾವನಿದ್ದಾನು?' ಎಂದು ಗುಣಗಾನಮಾಡಿರುತ್ತಾನೆ. ಆದ್ದರಿಂದ ಭಗವಂತನಿಗೆ ಸರಿಸಾಟಿಯಾದವರು ಯಾರೂ ಇಲ್ಲವಾದ್ದರಿಂದ ಅತುಲ ನೆಂದು ಸ್ತುತಿಸಲ್ಪಟ್ಟಿದ್ದಾನೆ. **(356)** ಈಗ **ಶರಭಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಶರ - ಎಂದರೆ ಶರೀರ - ಎಂಬ ಅರ್ಥಮಾಡಬೇಕು. ಶರೀರಗಳೆಲ್ಲವೂ ಅನಿತ್ಯವಾದ್ದ ರಿಂದ ಅವಗಳೊಳಗೆ ಪ್ರತ್ಯಗಾತ್ಮನೆನಿಸಿ ಕಂಡುಬರುವವನಾದ್ದರಿಂದ ಶರಭನೆನಿಸಿರುತ್ತಾನೆ. **(357)** ಈಗ **ಭೀಮಃ** - ಎಂಬ ನಾಮವನ್ನು ನೋಡೋಣ. ಭೀಮನೆಂದರೆ ಭಯ ವನ್ನುಂಟುಮಾಡುವವನು - ಎಂದು ಅರ್ಥಮಾಡಿದರೆ ಜಗತ್ತೆಲ್ಲವೂ ಭಗವಂತನಿಗೆ ಹೆದರಲೇಬೇಕು. ಏಕೆಂದರೆ ಅವನ ಆಜ್ಞೆಯಂತೆ ನಡೆಯದೆ ಇದ್ದರೆ ಶಿಕ್ಷಿಸುತ್ತಾನೆ. ಹೇಗೆಂದರೆ ಭಗವಂತನ ಅಪ್ಪಣೆಯನ್ನು ಮೀರಿ ಸ್ವೇಚ್ಛಾಚಾರದಿಂದ ವರ್ತಿಸಿದರೆ ರೋಗ ರುಜಿನಾದಿಗಳು, ದುರ್ಭಿಕ್ಷಾದಿಗಳು, ರಾಗದ್ವೇಷಾದಿಗಳು- ಜನರಿಗೆ ಸಂಭವಿಸುತ್ತವೆ. ಆದ್ದರಿಂದ ಭಗವಂತನ ಆಜ್ಞೆಯನ್ನು ಮಾನವನು ಪಾಲಿಸಬೇಕು. ಭಯವಿದ್ದರೆ ಭಕ್ತಿಯು ಉದಯಿಸುತ್ತದೆ. ಆದ್ದರಿಂದ ಭೀಮನೆಂಬ ನಾಮದಿಂದ ಸ್ತೋತ್ರಮಾಡಿರುತ್ತದೆ. **(358)** ಈಗ **ಸಮಯಜ್ಞಃ** - ಎಂಬ ನಾಮವನ್ನು ನೋಡೋಣ. ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳ ಸಮಯ - ಎಂದರೆ ಕಾಲವನ್ನು ಬಲ್ಲವನಾಗಿದ್ದು ಆಯಾ ಕಾಲಕ್ಕೆ ಆಯಾ ಕಾರ್ಯಗಳನ್ನು ಮಾಡುವದರಿಂದ ಭಗವಂತನು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. ಇನ್ನು ಸ್ಥಿತಿಕಾಲದಲ್ಲಿಯೂ ಹಗಲು-ರಾತ್ರಿಗಳು, ವಾರ, ಪಕ್ಷ, ಮಾಸ, ಋತು-ಧರ್ಮಗಳನ್ನು ಪಾಲಿಸುತ್ತಾ ಜಗದ್‌ವ್ಯಾಪಾರವನ್ನು ಸಕಾಲದಲ್ಲಿ ನಡೆಯಿಸುತ್ತಾನಾದ್ದರಿಂದ ಸಮಯಜ್ಞನೆನಿಸಿದ್ದಾನೆ. ಇನ್ನೊಂದು ಅರ್ಥದಲ್ಲಿ ಸಮ-ಯಜ್ಞ -ಎಂದು ಪದವಿಭಾಗ ಮಾಡಿದರೆ ಸರ್ವಭೂತಗಳಲ್ಲಿಯೂ ಸಮನಾಗಿದ್ದು-ಈ ಸಮಭಾವನೆಯೆಂಬ ಯಜ್ಞದಿಂದ ಎಲ್ಲವನ್ನೂ ವ್ಯಾಪಿಸಿರುವದರಿಂದಲೂ ಸಮಯಜ್ಞ ನೆನಿಸಿದ್ದಾನೆ. ಆದ್ದರಿಂದ ಜೀವರುಗಳಾದ ನಾವು ಸರ್ವತ್ರವೂ ಆ ಭಗವಂತನನ್ನೇ ಕಾಣುತ್ತಾ ಅವನ ಆರಾಧನೆಯಿಂದ ಕೃತಾರ್ಥರಾಗಬಹುದಾಗಿದೆ. ಈ ಸಮಭಾವವು ಅಚ್ಯುತನಾದ ಭಗವಂತನ ಆರಾಧನೆಯೇ ಆಗಿದೆ- ಎಂದು ವಿಷ್ಣುಪುರಾಣದಲ್ಲಿದೆ. **(359)** ಈಗ **ಹವಿರ್ಹರಿಃ** - ಎಂಬ ನಾಮವನ್ನು ನೋಡೋಣ. ಯಜ್ಞಗಳಲ್ಲಿ ಹವಿರ್ಭಾಗವನ್ನು ಸ್ವೀಕರಿಸುತ್ತಾನೆ - ಎಂಬರ್ಥದಲ್ಲಿ ಈ ನಾಮವು ಬಂದಿದೆ. ಅಥವಾ ಹವಿಸ್ಸಿನಿಂದ ಭಗವಂತನಿಗೆ ಹೋಮವನ್ನು ಮಾಡುತ್ತಾರಾದ್ದರಿಂದ ಈತನು

ಹವಿಯು- ಎಂದು ಸ್ತುತಿಸಲಾಗಿದೆ. ಜನರೆಲ್ಲರ ಪಾಪವನ್ನು ಹರಣ(ಪರಿಹಾರ) ಮಾಡುತ್ತಾನಾದ್ದರಿಂದ ಹರಿಯೆನಿಸಿರುತ್ತಾರೆ. **(360) ಈಗ ಸರ್ವಲಕ್ಷಣಲಕ್ಷಣ್ಯಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಪ್ರಮಾಣಗಳಿಂದಲೂ ಯಾವ ಜ್ಞಾನ ಉಂಟಾಗುವದೋ ಅದು ಸರ್ವಲಕ್ಷಣಲಕ್ಷಣ್ಯವು ಎನಿಸುತ್ತದೆ. ಪ್ರತ್ಯಕ್ಷ, ಅನುಮಾನ, ಶಬ್ದ - ಈ ಪ್ರಮಾಣಗಳಿಂದ ನಾವು ಲೋಕದಲ್ಲಿ ವ್ಯವಹರಿಸುತ್ತೇವೆ. ಕುದುರೆ ಕೆಂಪಗೆ ಇದೆ- ಎನ್ನುವಾಗ ಕಣ್ಣಿನಿಂದ ಆ ಪ್ರಾಣಿಯನ್ನು ನೋಡಿ ಕೆಂಪಗಿದೆ - ಎನ್ನುತ್ತೇವೆ. ಇಲ್ಲಿ ನೋಡುವವನು ಪ್ರಮಾತೃವೆನಿಸುತ್ತಾನೆ. ನೋಡಲ್ಪಡುವದು ಪ್ರಮೇಯವೆನಿಸುತ್ತದೆ. ನೋಟ-ಎಂಬುದು ಪ್ರಮಾಣವೆನಿಸುತ್ತದೆ. ಈ ಮೂರರ ಸಂಯೋಗದಿಂದ ಕುದುರೆಯ ಜ್ಞಾನವಾಗುತ್ತದೆ. ಇದು ವ್ಯವಹಾರವು. ಆದರೆ ನಮ್ಮ ಆತ್ಮನು ಇವೆಲ್ಲಕ್ಕಿಂತ ಬೇರೆ ಯಾಗಿದ್ದಾನೆ. ಆದ್ದರಿಂದ ಅವನು ಈ ಪ್ರಮೇಯವಾದ ಕುದುರೆಯನ್ನು ಅರಿಯುತ್ತಾನೆ. ಹೀಗೆ ಅರಿಯುವವನ ಸ್ವರೂಪನಾಗಿರುವ ಪರಮಾರ್ಥಚೈತನ್ಯವೇ ಸರ್ವಲಕ್ಷಣ ಲಕ್ಷಣ್ಯನು - ಎಂದು ಸ್ತುತಿಸಲಾಗಿದೆ. **(361) ಈಗ ಲಕ್ಷ್ಮೀವಾನ್** - ಎಂಬ ನಾಮ ವನ್ನು ನೋಡೋಣ. ಲೋಕಮಾತೆಯಾದ ಲಕ್ಷ್ಮಿಯು ಭಗವಂತನ ಹೃದಯದಲ್ಲಿಯೇ ವಾಸವಾಗಿರುವದರಿಂದ ಅವನನ್ನು ಲಕ್ಷ್ಮೀವಾನ್ ಎಂದು ಸ್ತುತಿಸಿದೆ. **(362) ಈಗ ಸಮಿತಿಂಜಯಃ** - ನೆಂಬ ನಾಮವನ್ನು ವಿಚಾರಮಾಡೋಣ. ಇಲ್ಲಿ ಸಮಿತಿ - ಎಂಬುದಕ್ಕೆ ಭಾಷ್ಯಕಾರರು ಯುದ್ಧವೆಂಬ ಅರ್ಥವನ್ನು ಮಾಡಿದ್ದಾರೆ. ಭಗವಂತನು ಎಲ್ಲಾ ಯುದ್ಧಗಳಲ್ಲಿಯೂ ಜಯವನ್ನು ಹೊಂದಿರುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ.

**ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ ।**
**ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥40॥**

**(363) ಈಗ ವಿಕ್ಷರಃ** - ಎಂಬ ನಾಮವನ್ನು ನೋಡೋಣ. ಕ್ಷರ - ಎಂದರೆ ನಾಶ. ವಿಕ್ಷರ ಎಂದರೆ ನಾಶವಿಲ್ಲದವನು - ಎಂದರ್ಥ. ಭಗವಂತನಿಗೆ ಜನನಾದಿನಾಶ ಪರ್ಯಂತವಾದ ಆರು ಭಾವವಿಕಾರಗಳಿಲ್ಲ - ಎಂದು ಗೀತೆಯಲ್ಲಿ ತಿಳಿಸಿರುತ್ತದೆ. ಆದ್ದರಿಂದ ವಿಕ್ಷರನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(364) ರೋಹಿತಃ** - ತನ್ನ ಸ್ವಂತ ಇಚ್ಛೆಯಿಂದ ಕೆಂಪಾದ ಮೀನಿನ ರೂಪದಿಂದ ಅವತಾರಮಾಡಿ ಪ್ರಲಯಕಾಲದಲ್ಲಿ ಮುಳುಗಿ ಹೋಗಿದ್ದ ವೇದಗಳೆಲ್ಲವನ್ನೂ ಮೇಲಕ್ಕೆತ್ತಿ ಉದ್ಧಾರಮಾಡುವಲ್ಲಿ ಭಗವಂತನು ಮತ್ಸ್ಯ ರೂಪವನ್ನು ಧರಿಸಿದ್ದನು. ಆದ್ದರಿಂದ ರೋಹಿತನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(365) ಈಗ ಮಾರ್ಗಃ** - ಎಂಬ ನಾಮವನ್ನು ನೋಡೋಣ. ಮುಮುಕ್ಷುಗಳಾದ ಸಾಧಕರು ಮೋಕ್ಷಪ್ರಾಪ್ತಿಗಾಗಿ ಆ ಭಗವಂತನನ್ನು ಹುಡುಕುತ್ತಾರೆ - ಎಂದರೆ ವಿಚಾರ

ಮಾಡುತ್ತಾರೆ. ಆದ್ದರಿಂದ ಮಾರ್ಗನೆಂದು ಸ್ತುತಿಸಿದೆ. ಅಥವಾ ದುಃಖಸಂಪರ್ಕವಿಲ್ಲದ ನಿತ್ಯವಾದ ಆನಂದವು ಯಾವನಿಂದ ದೊರಕುವದೋ ಅವನನ್ನು ಮಾರ್ಗನೆಂದು ಸ್ತುತಿಸಲಾಗಿದೆ. ಅವನೇ ಭಗವಂತನು. **(366)** ಈಗ **ಹೇತುಃ** - ಎಂಬ ನಾಮವನ್ನು ನೋಡೋಣ. ಹೇತು- ಎಂದರೆ ಕಾರಣ, ಬೀಜ-ಎಂದರ್ಥ. ಒಂದು ಮಡಕೆಯನ್ನು ಮಾಡಬೇಕಾದರೆ ಮಣ್ಣುಬೇಕು. ಇದನ್ನು ಉಪಾದಾನಕಾರಣವೆನ್ನುವರು. ಆದರೆ ಕುಂಬಾರನಿಲ್ಲದೆ ಮಣ್ಣು ತಾನೇ ಮಡಕೆಯಾಗುವದಿಲ್ಲ. ಆಗ ಕುಂಬಾರನು ನಿಮಿತ್ತ ಕಾರಣನೆನಿಸುತ್ತಾನೆ. ಈ ಎರಡು ರೂಪದಲ್ಲಿಯೂ ಇರುವ ಭಗವಂತನನ್ನು ಹೇತುಃ- ಎಂಬ ನಾಮದಿಂದ ಸ್ತುತಿಸಿದೆ. **(367)** ಈಗ **ದಾಮೋದರಃ** - ಎಂಬ ನಾಮವನ್ನು ವಿಚಾರಮಾಡೋಣ. ದಮವೇ ಮುಂತಾದ ಅಂತರಂಗಸಾಧನೆಗಳಿಂದ ಭಕ್ತರಿಗೆ ದೊರಕುತ್ತಾನೆ - ಎಂಬ ಅರ್ಥದಲ್ಲಿ ಈ ನಾಮವು ಬಂದಿದೆ. ಭಗವಂತನನ್ನು ಪಡೆಯಲು ಶಮ, ದಮ ಮುಂತಾದ ಶಾಸ್ತ್ರೀಯ ಸಾಧನಗಳನ್ನು ಮಾಡಬೇಕಾಗುತ್ತದೆ. ಆಗ ಉದಾರಾ- ಎಂದರೆ ಉತ್ಕೃಷ್ಟವಾದ ಪರಮಗತಿಯು ಸಾಧಕನಿಗೆ ದೊರಕುತ್ತದೆ. ಆದ್ದರಿಂದ ಈ ಹೆಸರು ಬಂದಿರುತ್ತದೆ. ಅಥವಾ ಕೃಷ್ಣಾವತಾರಕಾಲಕ್ಕೆ ಭಗವಂತನು ಗೋಕುಲದಲ್ಲಿ ತನ್ನ ಬಾಲ್ಯದಲ್ಲಿ ಬೆಳೆದವನಾಗಿದ್ದನು. ಆಗ ಗೋಪಿಯು ಕೃಷ್ಣನ ಲೀಲೆ (ಚೇಷ್ಟೆ)ಗಳನ್ನು ನೋಡಿ ಸಂತೋಷಗೊಂಡರೂ ಮನೆಗೆಲಸಗಳಿಗೆ ಅವು ತೊಡಕಾಗುತ್ತಿದ್ದುದರಿಂದ ಬಾಲಕೃಷ್ಣನನ್ನು ಅವನ ಸೊಂಟಕ್ಕೆ ಹಗ್ಗವನ್ನು ಕಟ್ಟಿ ಅನಂತರ ಆ ಹಗ್ಗವನ್ನು ಒರಳುಕಲ್ಲಿಗೆ ಬಿಗಿದು ಮಗುವು ಹರಿದಾಡಿ ಚೇಷ್ಟೆಮಾಡದಂತೆ ಏರ್ಪಡಿಸಿದ್ದಳು. ಆದರೆ ಭಗವಂತನು ತನ್ನ ಲೀಲಾನಾಟಕದಲ್ಲಿ ಒರಳುಕಲ್ಲನ್ನೇ ಎಳೆದುಕೊಂಡು ಹೋಗಿ ಯಮಳಾರ್ಜುನರೆಂಬವರನ್ನು ಅವರು ಜೋಡಿಮರಗಳ ರೂಪದಲ್ಲಿ ನಂದಗೋಕುಲದಲ್ಲಿದ್ದಾಗ ನಡುವೆ ನುಸಿದು ಆ ಮರಗಳನ್ನೇ ಕೆಡವಿಬಿಟ್ಟನು. ಮುಂದೆ ಆ ಯಮ - ಳಾರ್ಜುನರು ಸದ್ಗತಿಯನ್ನು ಹೊಂದಿದರು. ಈ ಸಂದರ್ಭಕ್ಕೆ ಅನ್ವಯಿಸುವಂತೆ ಭಗವಂತನಿಗೆ ದಾಮ - ಎಂದರೆ ಹಗ್ಗದಿಂದ ಉದರ-ಎಂದರೆ ಸೊಂಟಕ್ಕೆ ಬಿಗಿಯಲ್ಪಟ್ಟವನು - ಎಂಬರ್ಥದಲ್ಲಿ ದಾಮೋದರನೆಂಬ ನಾಮವು ಬಂದಿರುತ್ತದೆ. **(368)** ಈಗ **ಸಹಃ** -ಎಂಬ ನಾಮವನ್ನು ನೋಡೋಣ. ಸಹನೆ - ಎಂಬ ಗುಣವುಳ್ಳವನು ಎಂದು ಅರ್ಥ. ಭಗವಂತನು ಯಾರಿಗೂ ಒಂದೇ ಬಾರಿಗೆ ಶಿಕ್ಷೆಯನ್ನು ನೀಡುವದಿಲ್ಲ. ಮಹಾಭಾರತದಲ್ಲಿರುವಂತೆ ಶಿಶುಪಾಲನೆಂಬವನ ತಂದೆಯು ಕೃಷ್ಣನನ್ನು ಒಮ್ಮೆ ಸಂದರ್ಶಿಸಿ 'ಪೂಜ್ಯನೆ, ನನ್ನ ಮಗನು ನಿನಗೆ ನೂರು ಅಪರಾಧಗಳನ್ನು ಮಾಡಿದರೂ ಕ್ಷಮಿಸುವವನಾಗಬೇಕು' ಎಂದು ಕೇಳಿಕೊಂಡಿದ್ದನು. ಅದರಂತೆ ಭಗವಂತನು ವರವನ್ನು ಕೊಟ್ಟಿದ್ದನು. ಕಡೆಗೂ ಶಿಶುಪಾಲನು ಕೃಷ್ಣನನ್ನು ದ್ವೇಷಿಸುತ್ತಲೇ ಬಂದದ್ದರಿಂದ 101 ನೆಯ ಅಪರಾಧ ಕಾಲಕ್ಕೆ ಅವನನ್ನು ಸಂಹಾರಮಾಡಿದನು. ಹೀಗೆ

ಭಗವಂತನು ಸಹನಸ್ವಭಾವದವನೇ ಆಗಿರುತ್ತಾನಾಗಿ ಸಹಃ ಎಂದು ಸ್ತುತಿಸಿದೆ. (369) ಈಗ **ಮಹೀಧರಃ** - ಎಂಬ ನಾಮವನ್ನು ನೋಡೋಣ. ಭೂಮಿಯನ್ನು ಪರ್ವತರೂಪದಿಂದ ಧರಿಸಿರುತ್ತಾನಾಗಿ ಭಗವಂತನಿಗೆ ಈ ಹೆಸರು ಬಂದಿದೆ. ಭಾಗವತಪುರಾಣದಲ್ಲಿರುವಂತೆ ಗೋವರ್ಧನ ಪರ್ವತವನ್ನು ಎತ್ತಿಹಿಡಿದು ದೇವೇಂದ್ರನ ಗರ್ವವನ್ನು ಮುರಿದು ಭಗವಂತನ ಮಹೀಧರನೆನಿಸಿದನು- ಎಂದು ಭಾಗವತಪುರಾಣದಲ್ಲಿದೆ. ಆದ್ದರಿಂದ ಈ ಹೆಸರು ಅನ್ವರ್ಥವಾಗಿದೆ. ಇದೇ ನಾಮವು ಹಿಂದೆ 317ರಲ್ಲಿಯೂ ಬಂದಿದೆ. ಅದನ್ನೂ ನೋಡಿರಿ. (370) ಈಗ **ಮಹಾಭಾಗಃ** - ಎಂಬ ನಾಮವನ್ನು ವಿಚಾರಮಾಡೋಣ. ಇದರ ಅಭಿಪ್ರಾಯವು ಭಗವಂತನು ಮಹಾಭಾಗ್ಯವಂತನು - ಎಂದು ವ್ಯಾಖ್ಯಾನದಲ್ಲಿದೆ. ಪರಮಾತ್ಮನು ತನ್ನ ಇಚ್ಛಾನುಸಾರ ಸಂದರ್ಭಕ್ಕೆ ತಕ್ಕಂತೆ ಬೇರೆಬೇರೆಯ ರೂಪಗಳನ್ನೂ ಶರೀರಗಳನ್ನೂ ಧರಿಸುತ್ತಾನೆ. ಆಯಾ ಶರೀರಗಳಿಂದ ಸುಖಭೋಗ ಗಳನ್ನು ಅನುಭವಿಸುತ್ತಾನೆ. ಇಂಥ ಸೌಕರ್ಯವು ಬೇರಾರಿಗೂ ಇಲ್ಲ. ಆದ್ದರಿಂದ ಈ ನಾಮವು ಬಂದಿದೆ. (371) ಈಗ **ವೇಗವಾನ್** -ಎಂಬ ನಾಮವನ್ನು ನೋಡೋಣ. ಭಗವಂತನು ಜಗತ್ತಿನಲ್ಲೆಲ್ಲ ಅತ್ಯಂತ ವೇಗಶಾಲಿಯು - ಎಂದು ಇದರ ಅರ್ಥ. ಈಶಾವಾಸ್ಯೋಪನಿಷತ್ತಿನಲ್ಲಿ 'ಮನಸೋ ಜವೀಯಃ' ಎಂದು ವರ್ಣಿಸಲಾಗಿದೆ. ಮನಸ್ಸಿಗಿಂತ ಹೆಚ್ಚಿನ ವೇಗವುಳ್ಳವನು- ಎಂದರ್ಥ. ನಾವು ಕುಳಿತಿದ್ದಲ್ಲಿಯೇ ಹಿಂದೆ ನೋಡಿದ್ದ ಯಾವ ದೇಶ, ಹಾಗೂ ಘಟನೆಗಳನ್ನಾದರೂ ಸ್ಮರಿಸಿ ಕೊಳ್ಳಬಹುದು. ಇದು ಮನೋವ್ಯಾಪಾರವಾಗಿರುತ್ತದೆ. ಆದರೆ ಆ ಮನಸ್ಸು ಆಲೋಚಿಸುವದರೊಳಗಾಗಿ ಅದನ್ನು ಬೆಳಗುವ ಆತ್ಮಚೈತನ್ಯವು ಮೊದಲೇ ಹಾಜರಿರುತ್ತದೆ. ಹೀಗಿರುವದರಿಂದ ಬ್ರಹ್ಮವನ್ನು ವೇಗವಾನ್ ಎಂದು ಸ್ತುತಿಸಲಾಗಿದೆ. (372) ಈಗ **ಅಮಿತಾಶನಃ** ಎಂಬ ನಾಮವನ್ನು ನೋಡೋಣ. ಅಪರಿಮಿತವಾದ ಆಹಾರವನ್ನು ತಿನ್ನುವವನು - ಎಂಬಿದು ಅಕ್ಷರಾರ್ಥವು. ಭಗವಂತನು ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ನಿರ್ವಹಿಸುವ ಮಹಾತ್ಮನು. ಆದ್ದರಿಂದ ಪ್ರಲಯಕಾಲದಲ್ಲಿ ಹದಿನಾಲ್ಕು ಲೋಕಗಳ ಸಮೇತವಾಗಿ ಜೀವರುಗಳನ್ನೆಲ್ಲ ನುಂಗಿಹಾಕುತ್ತಾನಾಗಿರುವದರಿಂದ ಈ ನಾಮವು ಬಂದಿದೆ.

**ಉದ್ಭವಃ, ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।**
**ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥41॥**

(373) **ಉದ್ಭವಃ** - ಪ್ರಪಂಚದ ಹುಟ್ಟಿಗೆ ಕಾರಣನಾಗಿದ್ದು ನಾಮರೂಪಗಳಾಗಿ ತಾನೇ ತನ್ನನ್ನೇ ಸೃಷ್ಟಿಮಾಡಿಕೊಳ್ಳುತ್ತಾನಾದ್ದರಿಂದ ಉದ್ಭವನೆನಿಸಿದ್ದಾನೆ ಮತ್ತು ಸಂಸಾರ ದಿಂದ ಮೇಲಕ್ಕೆದ್ದವನು. ಸರ್ವಸಂಸಾರಧರ್ಮಾತೀತನು - ಎಂಬರ್ಥದಲ್ಲಿಯೂ

ಉದ್ಭವನೆನಿಸಿದ್ದಾನೆ. **(374)** ಈಗ **ಕ್ಷೋಭಣಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯ ಆದಿಯಲ್ಲಿ ಪ್ರಕೃತಿ - ಪುರುಷರನ್ನು ಪ್ರವೇಶಿಸಿ ಅಲುಗಾಡಿಸಿದನು- ಎಂಬರ್ಥದಲ್ಲಿ ಈ ನಾಮವು ಬಂದಿದೆ. ಈ ಘಟನೆಯಿಂದಲೇ ಮುಂದೆ ನಾಮ ರೂಪಾತ್ಮಕ ಪ್ರಪಂಚವು ಹೊರಬಂದಿತು. ಇದೇ ರೀತಿಯಲ್ಲಿ ಪ್ರಲಯಕಾಲದಲ್ಲಿಯೂ ಜಗತ್ತನ್ನೆಲ್ಲ ಅಲುಗಾಡಿಸಿ ಸಂಸಾರಸಮುದ್ರವನ್ನೇ ಅಲ್ಲೋಲಕಲ್ಲೋಲಗೊಳಿಸುವ ನಾದ್ದರಿಂದ ಕ್ಷೋಭಕ್ಷಣಃ - ಎಂಬ ನಾಮವು ಭಗವಂತನಿಗೆ ಬಂದಿರುತ್ತದೆ. ಈ ಘಟನೆಗಳು ಭಗವಂತನೊಬ್ಬನಿಗೇ ಮೀಸಲಾಗಿದೆ. ಬೇರೆ ಯಾರಿಂದಲೂ ಇದು ಸಾಧ್ಯವಿಲ್ಲದ್ದು. ಹೀಗೆ ಈ ನಾಮವು ಭಗವಂತನಿಗೆ ಬಂದಿದೆ. **(375)** ಈಗ **ದೇವಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯೇ ಮುಂತಾದವುಗಳನ್ನು ಮಾಡುತ್ತಾ ಆಟ ವಾಡುತ್ತಾನಾಗಿ ದೇವಃ - ಎಂದರೆ 'ದಿವು ಕ್ರೀಡಾಯಾಮ್' ಎಂಬ ಧಾತ್ವರ್ಥ ದಂತೆ ಜಗದ್ವ್ಯಾಪಾರಗಳನ್ನೆಲ್ಲ ನಿರಾಯಾಸವಾಗಿ ಹುಡುಗರ ಆಟದಂತೆ ನಿರ್ವಹಿಸು ತ್ತಾನಾಗಿ ದೇವನೆನಿಸಿದ್ದಾನೆ. ಹಾಗೂ ದೇವತೆಗಳ ಶತ್ರುಗಳನ್ನು ಜಯಿಸುತ್ತಾನೆ. ಸರ್ವ ಭೂತಗಳನ್ನೂ ಒಳಹೊಕ್ಕು ವ್ಯವಹಾರಮಾಡುತ್ತಾನೆ. ಹೀಗೆಯೇ ಆತ್ಮರೂಪನಾಗಿ ಬೆಳಗುತ್ತಿರುತ್ತಾನೆ. ಸ್ತುತ್ಯರ್ಹರಾದವರಿಂದ ಸ್ತುತಿಸಲ್ಪಡುತ್ತಾನೆ. ಎಲ್ಲೆಲ್ಲಿಯೂ ವ್ಯಾಪಿಸಿ ಕೊಂಡಿರುತ್ತಾನೆ. ಈ ರೀತಿಯಾಗಿ ದೇವನೆನಿಸಿರುತ್ತಾನೆ. **(376)** ಈಗ **ಶ್ರೀಗರ್ಭಃ** -ಎಂಬ ನಾಮವನ್ನು ನೋಡೋಣ. ಯಾವನ ಎದೆಯೊಳಗೆ ಶ್ರೀದೇವಿ ಎಂದರೆ ಮಹಾಲಕ್ಷ್ಮಿಯು ವಾಸವಾಗಿರುವಳೋ ಅವನು ಶ್ರೀಗರ್ಭನು - ಎಂದು ಸ್ತುತಿಸಿದೆ. ಲಕ್ಷ್ಮಿಯು ಯಾವಾಗಲೂ ವಿಷ್ಣುವಿನೊಡನೆಯೇ ಇರುತ್ತಾಳೆ. ಭಗವಂತನು ರಾಮ ನಾಗಿ ಅವತಾರಮಾಡಿದಾಗ ಲಕ್ಷ್ಮಿಯು ಸೀತೆಯಾಗಿದ್ದಳು. ಕೃಷ್ಣಾವತಾರದಲ್ಲಿ ರುಕ್ಮಿಣಿ ಯಾಗಿದ್ದಳು. ಹೀಗೆ ಎಲ್ಲಾ ಅವತಾರಗಳಲ್ಲಿಯೂ ವಿಷ್ಣುವನ್ನು ಬಿಟ್ಟು ಆಕೆಯು ಅಗಲಿದವಳಲ್ಲ. ಆದ್ದರಿಂದ ಭಗವಂತನು ಶ್ರೀಗರ್ಭನೆಂದು ಸ್ತುತಿಸಲ್ಪಟ್ಟಿರುತ್ತಾನೆ. ಈಗ **(377) ಪರಮೇಶ್ವರಃ** - ಎಂಬ ನಾಮವನ್ನು ನೋಡೋಣ. ಸರ್ವಭೂತ ಗಳನ್ನೂ ವ್ಯಾಪಿಸಿದವನಾಗಿದ್ದು ಎಲ್ಲಕ್ಕೂ ಒಡೆಯನಾದ್ದರಿಂದ ಪರಮೇಶ್ವರನೆನಿಸಿರುತ್ತಾನೆ. ಇವನಿಗೆ ಸಮನಾದವನೇ ಇಲ್ಲ. ಇನ್ನು ಹೆಚ್ಚಿನವರು ಎಲ್ಲಿದ್ದಾನು? ಎಂದು ಗೀತೆ ಯಲ್ಲಿ ಸ್ತುತಿಸಿದೆ. ಹೀಗೆ ಬ್ರಹ್ಮಾಂಡಕ್ಕೆಲ್ಲ ಪ್ರಭುವಾದ ಭಗವಂತನು ಪರಮೇಶ್ವರನು. **(378, 379, 380)** ಈಗ **ಕರಣಂ, ಕಾರಣಂ, ಕರ್ತಾ** - ಎಂಬ ನಾಮಗಳನ್ನು ನೋಡೋಣ. ಕರಣ - ಎಂದರೆ ಸಾಧನವಾದದ್ದು. ನಿಮಿತ್ತವೂ ಉಪಾದಾನವೂ ಆದದ್ದು ಕಾರಣವು. ಸ್ವತಂತ್ರನಾಗಿರುವದರಿಂದ ಕರ್ತೃವು. ಭಗವಂತನು ಜಗತ್ತಿನ ಸೃಷ್ಟಿಗೆ - ಬರವಣಿಗೆಗೆ ಲೇಖನಿಯು ಸಾಧನವಾಗಿರುವಂತೆ - ಕಾರಣನಾಗಿದ್ದಾನೆ. ಹಾಗೆಯೇ ಮಡಕೆಗೆ ಮಣ್ಣು ಉಪಾದಾನಕಾರಣವಾಗಿರುವಂತೆ ಜಗತ್ತಿಗೆ ಮೂಲ ಕಾರಣನೂ ಆಗಿದ್ದಾನೆ. ಹಾಗೆಯೇ ಕುಂಬಾರನು ಮಡಕೆಗೆ ನಿಮಿತ್ತಕಾರಣನಾಗಿರು

ವಂತೆ ಜಗತ್ತಿಗೆ ಪರಮಾತ್ಮನು ನಿಮಿತ್ತಕಾರಣನಾಗಿರುತ್ತಾನೆ. ಆದ್ದರಿಂದ ಜಗತ್ತಿಗೆ ಭಗವಂತನಿಗಿಂತ ಹೊರತಾಗಿ ಬೇರೆ ಯಾವ ಕಾರಣಗಳೂ ಇಲ್ಲವಾದ್ದರಿಂದ ಈ ನಾಮಗಳಿಂದ ಸ್ತುತಿಸಲ್ಪಟ್ಟಿರುತ್ತಾನೆ. **(381)** ಈಗ **ವಿಕರ್ತಾ** - ಎಂಬ ನಾಮವನ್ನು ನೋಡೋಣ. ವಿ - ಎಂದರೆ ವಿಚಿತ್ರವಾದ ಪ್ರಪಂಚವನ್ನೇ ಸೃಷ್ಟಿಮಾಡಿರುವವನಾದ್ದರಿಂದ ವಿಕರ್ತನೆನಿಸಿದ್ದಾನೆ. ಈ ಜಗತ್ತು ಬಿಡಿಬಿಡಿಯಾದ ನಾಮರೂಪಗಳಿಂದಲೂ ಅನೇಕ ಕರ್ತೃಭೋಕ್ತೃಗಳಿಂದಲೂ ಕೂಡಿದೆ. ಹಾಗೆಯೇ ದೇಶ - ಕಾಲ - ನಿಮಿತ್ತಗಳ ಚೌಕಟ್ಟಿಗೆ ಒಳಪಟ್ಟು ಬಿಡಿಬಿಡಿಯಾಗಿ ಸೃಷ್ಟಿಸಲ್ಪಟ್ಟಿದೆ. ಒಂದು ರೀತಿಯಿಂದ ನೋಡಿದರೆ ಇದರ ಸ್ವರೂಪವು ಹೀಗೆಂದು ಮನಸ್ಸಿನಿಂದ ಕೂಡ ಚಿಂತಿಸಲು ಅಸಾಧ್ಯವಾಗಿದೆ. ಇಂಥ ಪ್ರಪಂಚವನ್ನು ಸೃಷ್ಟಿಸಿರುವ ಪರಬ್ರಹ್ಮವು ಸರ್ವಜ್ಞವೂ ಸರ್ವಶಕ್ತವೂ ಆಗಿರುವದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಕರಣ-ಕಾರಣ-ಕರ್ತಾ-ವಿಕರ್ತಾ ಎಂದು ಭಗವಂತನನ್ನು ಸ್ತುತಿಸಿದೆ. **(382)** ಈಗ **ಗಹನಃ** - ಎಂಬ ನಾಮವನ್ನು ನೋಡೋಣ. ಆ ಭಗವಂತನ ಸ್ವರೂಪವನ್ನಾಗಲಿ, ಸಾಮರ್ಥ್ಯವನ್ನಾಗಲಿ, ಕಾರ್ಯಗಳನ್ನಾಗಲಿ, ಅರಿತುಕೊಳ್ಳುವದು ಮಾನವನಿಗೆ ಆಗುವಂತಿಲ್ಲವಾದ್ದರಿಂದ ಗಹನ - ನೆಂದು ಸ್ತುತಿಸಲಾಗಿದೆ. ಗಿಡ ಹಸುರಾಗಿರುತ್ತದೆ ಹೂವು ಬೆಳ್ಳಗಿರುತ್ತದೆ. ತೆಂಗಿನಕಾಯಿ ದುಂಡಾಗಿದ್ದು ಕರಟದೊಳಗೆ ಇರುತ್ತದೆ. ಅದರೊಳಗೆ ಎಳನೀರು ಇರುತ್ತದೆ. ಇದು ಹೇಗಾಯಿತು ? ಎಂಬುದನ್ನು ಯಾರೂ ತಿಳಿಯಲಾರರು. ಇದೇ ಗಹನದ ರಹಸ್ಯವು. ಇಂಥ ಪ್ರಪಂಚವೈಚಿತ್ರ್ಯಗಳು ನೂರಾರು ಇವೆ. ಸೃಷ್ಟಿವೈಚಿತ್ರ್ಯಗಳಿಂದ ನೋಡಿದಾಗ ಇದರ ಕರ್ತನು ಗಹನ (ರಹಸ್ಯ)ನೇ- ಎಂದು ತಿಳಿಯಬಹುದು. ಆದ್ದರಿಂದ ಈ ನಾಮದಿಂದ ಸ್ತುತಿಸಿದೆ. **(383)** ಈಗ **ಗುಹಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಸ್ವರೂಪವನ್ನು ನಾಮರೂಪಗಳಿಂದ ಮರೆಮಾಡಿಕೊಂಡಿರುವದರಿಂದ ಗುಹನೆನಿಸಿರುತ್ತಾನೆ. 'ನಾನು ಯೋಗ ಮಾಯೆಯಿಂದ ಮುಚ್ಚಲ್ಪಟ್ಟಿದ್ದೇನೆ' - ಎಂದು ಗೀತೆಯಲ್ಲಿ ಭಗವಂತನೇ ತಿಳಿಸಿರುತ್ತಾನೆ. ಆದ್ದರಿಂದ ಗುಹನೆಂಬ ನಾಮದಿಂದಲೇ ಸ್ತುತಿಸಲ್ಪಟ್ಟಿದ್ದಾನೆ.

**ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।**
**ಪರರ್ಧಿಃ ಪರಮಸ್ಪಷ್ಟಃ ತುಷ್ಟಃ ಪುಷ್ಟಃ ಶುಭೇಕ್ಷಣಃ ॥42॥**

**(384)** ಈಗ **ವ್ಯವಸಾಯಃ** - ಎಂಬ ನಾಮವನ್ನು ನೋಡೋಣ. ವ್ಯವಹಾರದಲ್ಲಿ ಈ ಶಬ್ದವನ್ನು ಜನರು ಭೂಮಿಯಲ್ಲಿ ಮಾಡುವ ಬೇಸಾಯಕ್ಕೆ ಬಳಸುತ್ತಾರೆ. ಆದರೆ ಇದರ ಅರ್ಥವು ಬೇರೆಯಾಗಿದೆ. ಸಂಸ್ಕೃತದ ಈ ಶಬ್ದಕ್ಕೆ ನಿಶ್ಚಯ, ನಿರ್ಣಯ ಎಂಬ ಅರ್ಥವುಂಟು. ಭಗವಂತನು ನಿಶ್ಚಿತವಾದ ಸಂಕಲ್ಪ(ತೀರ್ಮಾನ)ವುಳ್ಳವನು. ಈ ಮಹಾತ್ಮನ ತೀರ್ಮಾನಕ್ಕೆ ಎರಡನೆಯದಿಲ್ಲವೇ ಇಲ್ಲ. ಸೃಷ್ಟಿಯೇ ಮುಂತಾದ

ಕಾರ್ಯಗಳು ಆ ಮಹಾಮಹಿಮನ ಸಂಕಲ್ಪದಿಂದಾಗಿರುತ್ತವೆ. ಈ ಕಾರ್ಯಗಳಿಗೆ ಹಿನ್ನೆಲೆಯೇ ಭಗವಂತನು. ಅವನು ಜ್ಞಾನಸ್ವರೂಪನು. ಆ ಮಹನೀಯನ ಜ್ಞಾನ-ಇಚ್ಛೆ-ಕ್ರಿಯೆಗಳು ಏಕರೂಪವಾಗಿಯೇ ಇರುತ್ತವೆ. ಹೀಗೆ ಭಗವಂತನು ಇಲ್ಲಿ ಸ್ತುತಿಸಲ್ಪಟ್ಟಿದ್ದಾನೆ. **(385)** ಈಗ **ವ್ಯವಸ್ಥಾನಃ** - ಎಂಬ ನಾಮವನ್ನು ನೋಡೋಣ. ಭಗವಂತನಲ್ಲಿಯೇ ಜಗತ್ತೆಲ್ಲವೂ ಇದ್ದುಕೊಂಡಿದೆ. ಅದು ಕ್ರಮಬದ್ಧವಾಗಿಯೇ ಇದೆ. ಮಾವಿನ ಮರದಲ್ಲಿ ಸಿಹಿಯಾದ ಮಾವಿನಫಲವೇ ಹೊರಬರುತ್ತದೆ. ಬೇವಿನಮರದಲ್ಲಿ ಸೊಪ್ಪು ಕಹಿಯಾಗಿಯೇ ಇರುತ್ತದೆ. ಹೀಗೆ ಸೃಷ್ಟಿಯೆಲ್ಲವೂ ಆ ಭಗವಂತನ ವ್ಯವಸ್ಥೆಗೆ ಒಳಪಟ್ಟಿದೆಯಾದ್ದರಿಂದ ವ್ಯವಸ್ಥಾನನೆನಿಸಿರುತ್ತಾನೆ. ಇನ್ನು ಸೃಷ್ಟಿಯನ್ನೆಲ್ಲ ವಿಚಾರ ಮಾಡಿದರೆ ಸ್ವರ್ಗಾದಿಲೋಕಗಳಲ್ಲಿರುವ ಇಂದ್ರಾದಿದಿಕ್ಪಾಲಕರು, ಜೀವರುಗಳಲ್ಲಿ ಗರ್ಭದಿಂದ ಹುಟ್ಟುವ ಮನುಷ್ಯರು, ಪ್ರಾಣಿಗಳು, ಮುಂತಾದವು; ಹಾಗೆಯೇ ಬೆವರು, ಕೊಳೆ- ಇತ್ಯಾದಿಗಳಿಂದ ಹುಟ್ಟುವ (ಸ್ವೇದಜ) ಸೊಳ್ಳೆ, ಗುಂಗುರು- ಮುಂತಾದವು; ಬೀಜಗಳಿಂದ ಒಡೆದುಹುಟ್ಟುವ ಗಿಡ, ಮರ, ಬಳ್ಳಿಗಳು- ಇತ್ಯಾದಿ ನಾನಾ ವಿಧವಾದ ಸೃಷ್ಟಿವೈಚಿತ್ರ್ಯಗಳೆಲ್ಲವೂ ಯಾವ ಭಗವಂತನು ವ್ಯವಸ್ಥಾಕ್ರಮದಿಂದ ಹೊರಬಂದಿವೆಯೋ ಆ ಮಹಾದೇವನನ್ನು ವ್ಯವಸ್ಥಾನ-ನೆಂದು ಸ್ತುತಿಸಿದೆ. **(386)** ಈಗ **ಸಂಸ್ಥಾನಃ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಎಲ್ಲಾ ಜೀವರುಗಳ ಇರುವಿಕೆಯೂ ಕಾಲದಲ್ಲಿ ಕೊನೆಗೊಂಡಾಗ ಅವು ಭಗವಂತನಲ್ಲಿಯೇ ಅಡಗುತ್ತವೆಯಾದ್ದರಿಂದ ಸಂಸ್ಥಾನನೆಸಿರುತ್ತಾನೆ. ಪ್ರಲಯದಲ್ಲಿ ಜಗತ್ತು ಭಗವಂತನಲ್ಲೇ ಒಂದಾಗುವದು - ಎಂದು ಶ್ರುತಿಯು ತಿಳಿಸುವದರಿಂದಲೂ ಭಗವಂತನು ಸಂಸ್ಥಾನನು - ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(387)** ಈಗ **ಸ್ಥಾನದಃ** -ಎಂಬ ನಾಮವನ್ನು ನೋಡೋಣ. ಭಗವಂತನನ್ನು ಕುರಿತು ತಪಸ್ಸುಮಾಡಿದ ಧ್ರುವ, ಪ್ರಹ್ಲಾದ, ಅಂಬರೀಷ, ರುಕ್ಮಾಂಗದ, ಪುಂಡರೀಕ - ಮುಂತಾದವರಿಗೆ ಅವರವರ ಬಯಕೆಯಂತೆ ಉನ್ನತವಾದ ಹಾಗೂ ಶಾಶ್ವತವಾದ ಸ್ಥಾನಗಳನ್ನು ಅನುಗ್ರಹಿಸಿದವನಾದ್ದರಿಂದ ಸ್ಥಾನದಃ(ಸ್ಥಾನವನ್ನುಕೊಟ್ಟವನು) - ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(388)**ಈಗ **ಧ್ರುವಃ** - ನೆಂಬ ನಾಮವನ್ನು ನೋಡೋಣ. ಧ್ರುವ ಎಂದರೆ ನಿತ್ಯವೂ ಶಾಶ್ವತವೂ ಆದ ಸ್ಥಾನವು. ಅದು ನಾಶರಹಿತವಾದುದು. ಭಗವಂತನು ನೆಲೆಸಿರುವ ಸ್ಥಾನವು ಧ್ರುವ(ಅವ್ಯಯ)ವಾಗಿದ್ದು ಅಲ್ಲಿ ನಿತ್ಯವಾಗಿ ನೆಲೆಸಿರುವದರಿಂದ ಧ್ರುವನೆನಿಸಿರುತ್ತಾನೆ. ಅದನ್ನು ವೈಕುಂಠ (ಕುಂಠಿತವಾಗದೆ ನಿತ್ಯವಾಗಿರುವದು)ಎಂಬರ್ಥದಲ್ಲಿಯೂ ಬಳಸಬಹುದು. **(389)** ಈಗ **ಪರರ್ಧಿಃ** - ಎಂಬ ನಾಮವನ್ನು ನೋಡೋಣ. ಋದ್ಧಿ ಎಂದರೆ ಬೆಳವಣಿಗೆ ಎಂದರ್ಥ. ಪದಾರ್ಥಗಳು ಹೆಚ್ಚಾಗಿದ್ದರೆ ಸಮೃದ್ಧಿ- ಎಂದೂ ಕರೆಯುತ್ತಾರೆ. ಈ ಸಮೃದ್ಧಿಯು ಪರರ್ಧಿ-ಎಂಬುದಾಗಿಯೂ ಬಳಸಲ್ಪಡುತ್ತದೆ. ಭಗವಂತನು ಅನುಗ್ರಹಿಸಿದಲ್ಲಿ ಜಗತ್ತಿನಲ್ಲಿ

ಎಲ್ಲವೂ ಸಮೃದ್ಧಿಯಾಗಿಯೇ ಇರುತ್ತದೆ. ಆದ್ದರಿಂದ ಆ ಭಗವಂತನನ್ನೇ ಪರರ್ಧಿ (ಸಮೃದ್ಧಿ) ಎಂದು ಸ್ತುತಿಸಿದೆ. **(390)** ಈಗ **ಪರಮಸ್ಪಷ್ಟಃ** - ಎಂಬ ನಾಮವನ್ನು ನೋಡೋಣ. ಪರ-ಎಂದರೆ ಮಿಗಿಲಾದದ್ದು ಎಂದರ್ಥ. ಮಾ - ಎಂದರೆ ಲಕ್ಷ್ಮಿಯು ಹೀಗೆ ಪರಮಾ (ಅಪರಿಮಿತವಾದ ಐಶ್ವರ್ಯವು) ಯಾವನಿಗೆ, ನಿತ್ಯವಾಗಿದೆಯೋ ಅವನು ಪರಮನು. ಲಕ್ಷ್ಮಿಯು ಚಂಚಲಳೆಂದು ಜನರಲ್ಲಿ ಭಾವನೆಯಿದೆ. ಆದರೆ ಮಹಾವಿಷ್ಣುವಿನಲ್ಲಿ ಮಾತ್ರ ಈ ದೇವಿಯು ಅನಪಾಯಿನಿಯು - ಎಂದರೆ ನಿತ್ಯಳೂ ಶಾಶ್ವತಳೂ ಆಗಿರುತ್ತಾಳೆ. ಇಂಥ ನಿತ್ಯೈಶ್ವರ್ಯಸಂಪನ್ನನಾದ ವಿಷ್ಣುವನ್ನು ಪರಮನೆಂದು ಸ್ತುತಿಸಲಾಗಿದೆ. ಮುಂದುವರೆದು ಈ ಭಗವಂತನು ಸ್ಪಷ್ಟನು - ಎಂದರೆ ಸ್ವತಂತ್ರನು -ಎಂದರ್ಥ. ಇವನು ಯಾರ ಅಧೀನನೂ ಅಲ್ಲ. ಆದರೆ ಎಲ್ಲರೂ ಇವನ ಅಧೀನರೇ ಆಗಿದ್ದಾರೆ. ಇವನು ಸ್ವತಂತ್ರನಾಗಿದ್ದಾನೆ - ''ಸ್ವತಂತ್ರೋ ಭಗವಾನ್ ವಿಷ್ಣುಃ'' ಎಂದು ಶ್ರೀಮಧ್ವಾಚಾರ್ಯರೂ ಉಲ್ಲೇಖಿಸಿದ್ದಾರೆ. ಆದ್ದರಿಂದ ಪರಮಸ್ಪಷ್ಟಃ ಎಂಬ ನಾಮವು ಭಗವಂತನಿಗೆ ಅನುರೂಪವೇ ಆಗಿದೆ. **(391)** ಈಗ **ತುಷ್ಟಃ** - ಎಂಬ ನಾಮವನ್ನು ನೋಡೋಣ. ತುಷ್ಟಿ - ಎಂದರೆ ತೃಪ್ತಿ - ಎಂದರ್ಥ. ಭಗವಂತನು ನಿತ್ಯತೃಪ್ತನು. ಆಪ್ತಕಾಮನು. ಅವನಿಗೆ ಬಯಕೆಗಳೇನೂ ಇರುವದಿಲ್ಲ. ಅವನು ಪರಮಾನಂದ ಸ್ವರೂಪನು. ಆದ್ದರಿಂದ ತುಷ್ಟನೆಂದು ಸ್ತುತಿಸಿದೆ. **(392)** ಈಗ **ಪುಷ್ಟಃ** - ಎಂಬ ನಾಮವನ್ನು ನೋಡೋಣ. ಪುಷ್ಟಿ ಎಂದರೆ ಪೂರ್ಣತೆ - ಎಂದರ್ಥ. ಭಗವಂತನು ಜಗತ್ತನ್ನೆಲ್ಲ ವ್ಯಾಪಿಸಿದ್ದು ಪರಿಪೂರ್ಣನಾಗಿರುವದರಿಂದ ಅವನಿಗೆ ದೊರಕದೆ ಇರುವ ವಸ್ತುವೇ ಇಲ್ಲ. ಆದ್ದರಿಂದ ಪುಷ್ಟನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(393)** ಈಗ **ಶುಭೇಕ್ಷಣಃ** - ಎಂಬ ನಾಮವನ್ನು ನೋಡೋಣ. ಈಕ್ಷಣ ಎಂದರೆ ನೋಡುವದು - ಎಂದರ್ಥ. ಭಗವಂತನ ದೃಷ್ಟಿಯು ಶುಭಕರವಾಗಿರುತ್ತದೆ. ಅವನ ದೃಷ್ಟಿಗೆ ಗೋಚರ ವಾದದ್ದೆಲ್ಲ ಶುಭವೇ ಆಗುತ್ತದೆ. ಹೇಗೆಂದರೆ : ಆ ಭಗವಂತನ ದೃಷ್ಟಿಯು ಮುಮುಕ್ಷುಗಳಿಗೆ ಜ್ಞಾನಪ್ರದವೂ ಸಂಸಾರಸುಖವನ್ನಾಗಲಿ, ಮುಕ್ತಿಯನ್ನಾಗಲಿ ಬಯಸುವವರಿಗೆ ಭೋಗಮೋಕ್ಷಗಳೂ ಸಂಶಯಗಳುಳ್ಳವರಿಗೆ ಸಂದೇಹಪರಿಹಾರವೂ ಪಾಪಿಗಳಾದವರಿಗೆ ಪವಿತ್ರತೆಯೂ ಹಾಗೂ ಅಜ್ಞಾನಪರಿಹಾರವೂ ಹೀಗೆ ಯಾರು ಯಾರು ಯಾವಯಾವ ಫಲವನ್ನು ಬಯಸುವರೋ ಅವೆಲ್ಲವೂ ಆತನ ದೃಷ್ಟಿಮಾತ್ರ ದಿಂದ ಲಭ್ಯವಾಗುವದು. ಆದ್ದರಿಂದ ಶುಭೇಕ್ಷಣ ನೆಂದು ಸ್ತುತಿಸಲ್ಪಟ್ಟಿರುತ್ತಾನೆ.

**ರಾಮೋ ವಿರಾಮೋ ವಿರತೋ ಮಾರ್ಗೋ ನೇಯೋ ನಯೋಽನಯಃ ।**
**ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ॥43॥**

**(394)** **ರಾಮಃ** - ನೆಂದರೆ ಯೋಗಿಗಳು ಯಾವಾಗಲೂ ನಿತ್ಯಾನಂದನೂ ಚಿತ್

ಸ್ವರೂಪನೂ ಆದ ಪರಮಾತ್ಮನಲ್ಲಿಯೇ ನೆಲೆಸಿದ್ದು ಆನಂದಪಡುತ್ತಿರುವರೋ, ಆ ಭಗವಂತನನ್ನು ಬಲ್ಲವರು ರಾಮನೆಂದು ಕರೆಯುತ್ತಾರೆ. ಅಥವಾ ಸ್ವತಂತ್ರನಾಗಿದ್ದು ರಮಣೀಯುವಾದ ಹಾಗೂ ಆಕರ್ಷಕವಾದ ಶರೀರವನ್ನು ಧರಿಸಿದವನಾಗಿರುವದ ರಿಂದ ರಾಮನೆನಿಸಿರುತ್ತಾನೆ. "ಪುಂಸಾಂ ಮೋಹನರೂಪಾಯ'- ಎಂದು ಗಂಡಸರಿಗೆ ಕೂಡ ರಾಮನನ್ನು ಕಂಡೊಡನೆ ಸುಂದರಸ್ತ್ರೀಯನ್ನು ಕಂಡಾಗ ವ್ಯಾಮೋಹವುಂಟಾಗು ವಂತೆ ಆಕರ್ಷಣೆಯುಂಟಾಗುತ್ತಿತ್ತು. ಆದ್ದರಿಂದ ಆ ಭಗವಂತನು ರಾಮನೆನಿಸಿದ್ದಾನೆ. ಇನ್ನೊಂದು ರೀತಿಯಲ್ಲಿ ನೋಡಿದರೆ ಯೋಗಿಗಳಾದವರು ಯಾವಾಗಲೂ ಸಚ್ಚಿದಾನಂದರೂಪನಾದ ಆತ್ಮನಲ್ಲಿಯೇ ನೆಲೆನಿಂತು ತೃಪ್ತರಾಗಿರುತ್ತಾರಾಗಿ ಭಗವಂತ ನನ್ನು 'ರಾಮ'ನೆಂಬ ಹೆಸರಿನಿಂದ ಕರೆಯುತ್ತಾರೆ - ಎಂದೂ ವ್ಯಾಖ್ಯಾನ ಮಾಡಬಹುದು. ಹೀಗೆ ಶ್ರೀಮಹಾವಿಷ್ಣುವು ರಾಮಪದದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(395)** ಈಗ **ವಿರಾಮಃ** - ನೆಂಬ ನಾಮವನ್ನು ನೋಡೋಣ. ಸೃಷ್ಟಿಯಲ್ಲಿರುವ ಜೀವರೆಲ್ಲರಿಗೂ ಕಡೆಗಡ ವಿಶ್ರಾಂತಿಸ್ಥಾನನಾಗಿರುವದರಿಂದ ವಿರಾಮನೆನಿಸಿರುತ್ತಾನೆ. **(396)** **ವಿರತಃ** - ನೆಂದರೆ ವಿಷಯಗಳನ್ನು ಸೇವಿಸುವದರಲ್ಲಿ ವೈರಾಗ್ಯವನ್ನು ಹೊಂದಿದವನಾದ್ದರಿಂದ ಈ ನಾಮವು ಬಂದಿದೆ. **(397)** ಈಗ **ಮಾರ್ಗಃ**- ನೆಂಬ ನಾಮವನ್ನು ನೋಡೋಣ. ಯೋಗಿಗಳಿಗೂ ಮುಮುಕ್ಷುಗಳಿಗೂ ಮುಕ್ತಿಮಾರ್ಗವನ್ನು ದಯಪಾಲಿಸಿ ಉದ್ಧಾರಮಾಡುತ್ತಾನಾದ್ದರಿಂದ ಮಾರ್ಗನೆಂದು ಸ್ತುತಿಸಿದೆ. ಶ್ರುತಿಯಲ್ಲಿ ಹೇಳಿರುವಂತೆ : "ಆ ಭಗವಂತನನ್ನು ಅರಿತ ಜ್ಞಾನಿಯು ಮುಕ್ತಿಯನ್ನು ಇದೇ ಜನ್ಮ ದಲ್ಲಿಯೇ ಪಡೆಯುತ್ತಾನೆ. ಆದರೆ ಆ ಭಗವಂತನನ್ನು ಅರಿಯುವದನ್ನು ಬಿಟ್ಟರೆ ಮುಕ್ತಿಗೆ ಬೇರೆ ಮಾರ್ಗವೇ ಇಲ್ಲ" ಎಂಬುದೂ ಭಗವಂತನನ್ನು 'ಮಾರ್ಗ'ನೆಂದು ಸ್ತುತಿಸಲು ಆಧಾರವಾಗಿದೆ. **(398)** ಈಗ **ನೇಯಃ** - ಎಂಬ ನಾಮವನ್ನು ನೋಡೋಣ. ಸಮ್ಯಗ್ಜ್ಞಾನ-ಎಂಬ ಮಾರ್ಗದಿಂದ ಜೀವನನ್ನು ಪರಮಾತ್ಮನನ್ನಾಗಿ ಒಯ್ದುಬಿಡುವದರಿಂದ ಆ ದೇವನನ್ನೇ "ಮಾರ್ಗ"ವೆಂದು ಸ್ತುತಿಸಿದೆ. ಉಪಾಯ, ಉಪೇಯ - ಎರಡೂ ಭಗವಂತನೇ - ಎಂದಭಿಪ್ರಾಯ. **(399)** ಈಗ **ನಯಃ** - ಎಂಬ ನಾಮವನ್ನು ನೋಡೋಣ. ನಯನ ಎಂದರೆ ಒಯ್ಯುವದು - ಎಂದರ್ಥ. ಭಗವಂತನನ್ನು ಆಶ್ರಯಿಸಿದರೆ ಅವನೇ ರೂಪಾಂತರದಿಂದ ಬಂದು ಸಾಧಕನನ್ನು ಮುಕ್ತಿಧಾಮಕ್ಕೆ ಒಯ್ದುಬಿಡುತ್ತಾನೆ. ಆದ್ದರಿಂದ ನಯನೆಂದು ಸ್ತುತಿಸಲ್ಪಟ್ಟಿದ್ದಾನೆ. **(400)** ಈಗ **ಅನಯಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸರ್ವಸ್ವತಂತ್ರನು. ಅವನಿಗೆ ಮಾರ್ಗದರ್ಶಕರು ಯಾರೂ ಇಲ್ಲ. ಹೇಗೆ ಸೂರ್ಯನು ಎಲ್ಲವನ್ನೂ ಬೆಳಗಿದರೂ ಅವನನ್ನು ಬೆಳಗುವವರು ಯಾರು ಇಲ್ಲವೋ ಹಾಗೆಯೇ ಭಗವಂತನನ್ನು ಕರೆದೊಯ್ಯುವವರು ಇರುವದಿಲ್ಲ. ಆದ್ದರಿಂದ ಅನಯನೆಂದು ಸ್ತುತಿಸಲ್ಪಟ್ಟಿರುತ್ತಾನೆ.

**ಇಲ್ಲಿಗೆ ನಾಲ್ಕನೆಯ ಶತಕವು ಮುಗಿಯಿತು.**

# ಪಂಚಮಶತಕ

**(401)** ಈಗ **ವೀರಃ** - ಎಂಬ ನಾಮವನ್ನು ನೋಡೋಣ. ಭಗವಂತನ ವೀರ್ಯಾದಿಗುಣಗಳು ಅಪರಿಮಿತವಾಗಿರುವವು. ಅವುಗಳನ್ನು ಅಳೆಯುವದು ಸಾಧ್ಯವಿಲ್ಲ. ಮತ್ತು ಈ ವೀರ್ಯಾದಿಗಳು ಆತನಲ್ಲಿ ನಿತ್ಯವಾಗಿರುತ್ತವೆ. ಆದ್ದರಿಂದ ವೀರನೆಂದು ಸ್ತುತಿಸಿದೆ. **(402)** ಈಗ **ಶಕ್ತಿಮತಾಂ ಶ್ರೇಷ್ಠಃ** - ಎಂಬ ನಾಮವನ್ನು ನೋಡೋಣ. ಭಗವಂತನ ಬಲಶಕ್ತಿಪರಾಕ್ರಮಗಳು ಅದ್ಭುತವಾದವುಗಳು. ಕೃಷ್ಣಾವತಾರದಲ್ಲಿ ಇವು ಪ್ರಸಿದ್ಧವಾಗಿವೆ. ಉದಾಹರಣೆಗೆ ಭಗವಂತನು ಬಾಲ್ಯದಲ್ಲಿ ನಂದ ಗೋಕುಲದಲ್ಲಿದ್ದಾಗ ವ್ರಜಗೋಪಗೋಪಿಯರೊಡನೆ ಬೃಂದಾವನಕ್ಕೆ ಬಂದಾಗ ಅಲ್ಲಿ ಗೋವರ್ಧನಪರ್ವತಕ್ಕೆ ಪೂಜಾದಿಗಳನ್ನು ನೆರವೇರಿಸಿ, ದೇವೇಂದ್ರನನ್ನು ಪೂಜಿಸಲಿಲ್ಲ. ಆಗ ಇಂದ್ರನು ಕುಪಿತನಾಗಿ ಭಯಂಕರವಾದ ಮಳೆಗರೆಯಲಾಗಿ ಗೋಪಗೋಪಿಯರನ್ನು ಕಾಪಾಡಲು ಕೃಷ್ಣನು ಗೋವರ್ಧನ ಪರ್ವತವನ್ನೇ ಎತ್ತಿಹಿಡಿದನು. ಇದು ಅವನನ್ನು ಶಕ್ತಿವಂತರಲ್ಲಿ ಶ್ರೇಷ್ಠನೆಂಬುದನ್ನು ದೃಢೀಕರಿಸುತ್ತದೆ. ಒಬ್ಬ ಕವಿಯು ಅಲಂಕಾರಿಕವಾಗಿ ಹೀಗೆನ್ನುತ್ತಾನೆ "ಕೋ ವೇದ ಗೋಪಶಿಶುಃ ಶೈಲಮುತ್ಪಾಟಯೇದಿತಿ" (ಗೋಪಬಾಲಕನೊಬ್ಬನು ಬೆಟ್ಟವನ್ನೇ ಕಿತ್ತು ಎತ್ತಿಹಿಡಿಯುವನೆಂದು ಯಾರು ತಾನೆ ಬಲ್ಲವರಾಗಿದ್ದರು?) ಹೀಗೆ ಭಗವಂತನು ಶಕ್ತಿವಂತರಲ್ಲಿ ಶ್ರೇಷ್ಠನೆನಿಸಿದ್ದಾನೆ. **(403)** ಈಗ **ಧರ್ಮಃ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಎಲ್ಲಾ ಜೀವಿಗಳನ್ನೂ ತನ್ನಲ್ಲಿಯೇ ಧರಿಸಿರುವವನಾಗಿದ್ದು, ಧಾರಣ ಎಂದರೆ ತನ್ನಲ್ಲಿಯೇ ನೆಲೆಗೊಳಿಸಿರುವನಾದ್ದರಿಂದ 'ಧರ್ಮ'ನೆಂದು ಸ್ತುತಿಸಲ್ಪಟ್ಟಿದ್ದಾನೆ. ಸತ್ಯವೆಂದರೆ ವಾಗ್ರೂಪವಾದ ಕರ್ಮವು; ಧರ್ಮವೆಂದರೆ ಬಾಯಲ್ಲಿ ನುಡಿದಂತೆಯೇ ನಡೆಯುವದು. ಹೀಗೆ ಭಗವಂತನು ಧರ್ಮನೆಂದು ಸ್ತುತಿಸಲ್ಪಟ್ಟಿದ್ದಾನೆ. **(404)** ಈಗ **ಧರ್ಮವಿದುತ್ತಮಃ** - ಎಂಬ ನಾಮವನ್ನು ನೋಡೋಣ. ಧರ್ಮಕ್ಕೆ ಆಧಾರವಾಗಿರುವ ಶ್ರುತಿಸ್ಮೃತಿಗಳು ಯಾವ ಭಗವಂತನ ಅಪ್ಪಣೆಯಂತೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವವೋ ಆ ಶ್ರುತ್ಯಾಧಿಗಳೂ ಭಗವಂತನ ಆಜ್ಞೆಯೇ ಆಗಿರುವವೋ, ಆ ಮಹಾಮಹಿಮನೇ ಧರ್ಮವನ್ನು ಬಲ್ಲ ಎಲ್ಲರಿಗಿಂತ ಮಿಗಿಲಾದವನು - ಎಂದರ್ಥ. "ಶ್ರುತಿಸ್ಮೃತೀ ಮಮೈವಾಜ್ಞೇ" ಎಂದು ಭಗವದ್ವಚನವೇ ಇದೆ.

**ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।**
**ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥44॥**

**(405)** ಈಗ **ವೈಕುಂಠಃ** -ನೆಂಬ ನಾಮವನ್ನು ನೋಡೋಣ. ವಿವಿಧವಾದ ಕುಂಠವು - ಎಂದರೆ ಚಲನಕ್ಕೆ ಅಡ್ಡಿಯು ವಿಕುಂಠಾ ಎನಿಸುತ್ತದೆ. ಜಗತ್ತಿನ ಆರಂಭ ದಲ್ಲಿ ಬಿಡಿಬಿಡಿಯಾಗಿರುವ ಭೂತ(ಜೀವರು)ಗಳನ್ನು ಒಂದಕ್ಕೊಂದು ಅಂಟಿಕೊಳ್ಳದಂತೆ ಮಾಡಿ ಅವುಗಳ ಸ್ವೇಚ್ಛಾಗತಿಗೆ ಅಡ್ಡಿಯುಂಟುಮಾಡಿದ್ದಾನಾಗಿ ವೈಕುಂಠನೆನಿಸಿದ್ದಾನೆ. ಹೇಗೆಂದರೆ ಪ್ರಯಾಣಮಾಡುವ ವಾಹನಗಳಿಗೆ ಒಂದಕ್ಕೊಂದು ತಗುಲದಂತೆ ನಿಲ್ಲಿಸಲು ಬ್ರೇಕ್ - ಎಂಬ ಸಾಧನವಿರುತ್ತದೆ. ಸಮಯಾನುಸಾರ ಅದನ್ನ ಬಳಸಿದಾಗ ಸುಖಪ್ರಯಾಣವು ಸಿದ್ಧಿಸುತ್ತದೆ. ಹಾಗೆಯೇ ಸೃಷ್ಟಿಯಲ್ಲಿಯೂ ಭಗವಂತನು ಬಿಡಿಬಿಡಿ ಯಾಗಿರುವ ಜೀವರಗಳನ್ನು ಕಾಪಾಡಲು ತಾನು ನಡುವೆಯಿದ್ದು ಅವರ ಗತಿ (ಸಂಚಾರ)ಗಳಿಗೆ ಅಡ್ಡಿಮಾಡಿ ರಕ್ಷಿಸುತ್ತಾನೆ. ಹೀಗೆ ಜಗತ್ತಿನ ಸ್ಥಿತಿಗೆ ಅನುಕೂಲವಾಗು ವಂತೆ ಸಂದರ್ಭಾನುಗುಣವಾಗಿ ಅಡ್ಡಿಮಾಡುವದರಿಂದ ವೈಕುಂಠನೆನಿಸಿದ್ದಾನೆ. **(406)** ಈಗ **ಪುರುಷಃ** - ಎಂಬ ನಾಮವನ್ನು ನೋಡೋಣ. ಪುರಾ ಸದನಾತ್ ಪುರುಷಃ (ಎಲ್ಲಕ್ಕಿಂತಲೂ ಮೊದಲು ಇದ್ದವನಾದ್ದರಿಂದ) - ಅಥವಾ ಎಲ್ಲಾ ಪುರ(ಶರೀರ) ಗಳಲ್ಲಿಯೂ ಪ್ರವೇಶಿಸಿರುವನಾದ್ದರಿಂದಲೂ ಪುರುಷನೆನಿಸಿದ್ದಾನೆ. ಶ್ರುತಿಯಲ್ಲಿ ಹೇಳಿರು ವಂತೆ ಎಲ್ಲಕ್ಕೂ ಮೊದಲು ಇದ್ದವನಾದ್ದರಿಂದ, ಅಥವಾ ಎಲ್ಲಾ ಪಾಪಗಳನ್ನೂ ನಾಶ ಗೊಳಿಸುವದರಿಂದಲೂ ಪುರುಷನೆನಿಸಿದ್ದಾನೆ. **(407)** ಈಗ **ಪ್ರಾಣಃ** - ಎಂಬ ನಾಮವನ್ನು ವಿಚಾರಿಸೋಣ. ಅನ - ಎಂದರೆ ಚೇಷ್ಟೆ, ಎಂದರ್ಥ. ಜೀವರುಗಳಲ್ಲಿ ಎಲ್ಲಾ ಕಾಲದಲ್ಲಿಯೂ ಈ ವಾಯುವಿನ ವ್ಯಾಪಾರವು ನಡೆದೇ ಇರುತ್ತದೆ. ಹೀಗೆ ಎಲ್ಲಾ ಪ್ರಾಣಿಗಳಲ್ಲಿಯೂ ಪ್ರಾಣರೂಪನಾಗಿರುವದರಿಂದ ಪ್ರಾಣನೆನಿಸಿದ್ದಾನೆ. **(408)** **ಪ್ರಾಣದಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ದ - ಎಂದರೆ ದ್ಯತಿ- ಖಂಡಯತಿ ಎಂಬರ್ಥದಲ್ಲಿ ಪ್ರಲಯಕಾಲಕ್ಕೆ ಎಲ್ಲಾ ಜೀವರ ಪ್ರಾಣಗಳನ್ನೂ ನಾಶ ಮಾಡುತ್ತಾನಾಗಿ 'ಪ್ರಾಣದ' ಎನಿಸಿರುತ್ತಾನೆ. **(409)** ಈಗ **ಪ್ರಣವಃ**-ನೆಂಬ ನಾಮವನ್ನು ನೋಡೋಣ. ಪ್ರಣೌತಿ ಇತಿ ಪ್ರಣವಃ ಎಂಬ ವಿವರಣೆಯಂತೆ 'ಓಮ್' ಎಂಬ ಅಕ್ಷರದಿಂದ ಭಗವಂತನನ್ನು ಸ್ತುತಿಸುವದರಿಂದ ಆ ದೇವನನ್ನೇ ಪ್ರಣವನೆಂದು ಸ್ತುತಿಸಿದೆ. **(410)** ಈಗ **ಪೃಥುಃ** ಎಂಬ ನಾಮವನ್ನು ನೋಡೋಣ. ಪ್ರಪಂಚ ರೂಪದಿಂದ ಎಲ್ಲಾ ಕಡೆಯಲ್ಲಿಯೂ ಹರಡಿಕೊಂಡಿರುವದರಿಂದ ಪೃಥು - ಎಂದು ಸ್ತುತಿಸಲ್ಪಟ್ಟಿದ್ದಾನೆ. **(411)** ಈಗ **ಹಿರಣ್ಯಗರ್ಭಃ** - ನೆಂಬ ನಾಮವನ್ನು ವಿಚಾರ ಮಾಡೋಣ. ಸೃಷ್ಟಿಯ ಆದಿಯಲ್ಲಿ ಹಿರಣ್ಯಗರ್ಭಬ್ರಹ್ಮನ ಉತ್ಪತ್ತಿಗೆ ಕಾರಣವಾದ ಚಿನ್ನದ ಉಂಡೆಯು ಈ ಭಗವಂತನ ಶೌರ್ಯದಿಂದ ಉಂಟಾಯಿತು. ಆದ್ದರಿಂದ ಅದೇ ನಾಮದಿಂದ ಪರಮಾತ್ಮನಾದ ಶ್ರೀವಿಷ್ಣುವನ್ನು ಸ್ತುತಿಮಾಡಲಾಗಿದೆ. **(412)** ಈಗ **ಶತ್ರುಘ್ನಃ** -ನೆಂಬ ನಾಮವನ್ನು ನೋಡೋಣ. ದೇವತೆಗಳಿಗೆ ಶತ್ರುಗಳಾದ

ಅಸುರರನ್ನು ಹಾಗೂ ಭಗವಂತನ ಪ್ರಾಪ್ತಿಗೆ ಅಡ್ಡಿಯಾಗಿ ಶತ್ರುಗಳಂತಿರುವ ಕಾಮಾದಿ ಗಳನ್ನು ನಾಶಗೊಳಿಸುವವನಾದ್ದರಿಂದ ಶತ್ರುಘ್ನನೆನಿಸಿದ್ದಾನೆ. **(413)** ಈಗ **ವ್ಯಾಪ್ತಃ** -ಎಂಬ ನಾಮವನ್ನು ನೋಡೋಣ. ಭಗವಂತನು ಈ ನಾಮರೂಪಾತ್ಮಕವಾದ ಜಗತ್ತನ್ನೆಲ್ಲ ವ್ಯಾಪಿಸಿಕೊಂಡಿರುತ್ತಾನೆ. 'ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿ ಗಣಾ ಇವ' (ಈ ಜಗತ್ತೆಲ್ಲವೂ ನನ್ನಲ್ಲಿ ಹೇಗೆ ದಾರದಲ್ಲಿ ಮಣಿಗಳೆಲ್ಲವೂ ಪೋಣಿಸಲ್ಪಟ್ಟಿರುವವೋ ಹಾಗೆ ನನ್ನಲ್ಲಿ ಜಗತ್ತೆಲ್ಲವೂ ಹಾಸುಹೊಕ್ಕಾಗಿ ಹೆಣೆದು ಕೊಂಡಿದೆ) ಎಂದು ಗೀತೆಯಲ್ಲಿ ಭಗವಂತನೇ ಹೇಳಿರುವಂತೆ ನಾಮರೂಪಾತ್ಮಕವಾದ ಜಗತ್ತೆಲ್ಲ ವನ್ನೂ ವ್ಯಾಪಿಸಿರುವ ಪರಮಾತ್ಮನನ್ನು ವ್ಯಾಪ್ತನೆಂದೇ ಸ್ತುತಿಸಿದೆ. **(414)** ಈಗ **ವಾಯುಃ** - ಎಂಬ ನಾಮವನ್ನು ನೋಡೋಣ. ವಾಯು - ಎಂದರೆ ಗಾಳಿಯು. ಇದು ಯಾವಾಗಲೂ ಚಲಿಸುತ್ತಿರುವದು; ಮತ್ತು ವಾಸನೆಯನ್ನು ಹರಡುತ್ತಿರುವದು. ಆದ್ದರಿಂದ ವಾಯು ಎಂಬ ರೂಪದಿಂದ ಭಗವಂತನನ್ನು ಸ್ತುತಿಸಿದೆ. ಇಲ್ಲಿ ಭಗವಂತ ನನ್ನು ಈ ನಾಮದಿಂದ ಸ್ತುತಿಸಿರುವುದರಿಂದ ಸುಗಂಧವನ್ನು ಬೀರುತ್ತಿರುವ ವಾಯು ವು ಭಗವಂತನು - ಎಂದು ತಿಳಿಯಬೇಕು. ಹಾಗಾದರೆ ದುರ್ಗಂಧದ ವಾಯುವು ಭಗವಂತನಲ್ಲವೆ? ಎಂದರೆ ಹಾಗಲ್ಲ. ಸೃಷ್ಟಿಯಲ್ಲಿ ಗಂಧವೇ ಇರುವದು. ಆದರೆ ಪಾಪವಸ್ತುಸಂಪರ್ಕದಿಂದ ಅದು ದುರ್ಗಂಧವೆನಿಸುತ್ತದೆ. ಕೊಳೆ ನೀರು ಎಂದರೆ ಹೇಗೆ ಅದು ಉಪಾಧಿಸಂಬಂಧದಿಂದಾದದ್ದೋ ಹಾಗೆಯೇ ದುರ್ಗಂಧವನ್ನೂ ತಿಳಿಯ ಬೇಕು. ಆದ್ದರಿಂದ ಸುಗಂಧ-ದುರ್ಗಂಧಗಳ ಸಂಪರ್ಕವಿಲ್ಲದ ಶುದ್ಧವಾದ ಗಾಳಿ ಯನ್ನೇ ಭಗವಂತನ ವಿಭೂತಿಯೆಂದೆಣಿಸಿ ವಾಯುಃ ಎಂದು ಸ್ತುತಿಸಿದೆ. **(415)** ಈಗ **ಅಧೋಕ್ಷಜಃ** - ಎಂಬ ನಾಮವನ್ನು ನೋಡೋಣ. ಭಗವಂತನು ಎಂದಿಗೂ ತನ್ನ ಸ್ವರೂಪದಿಂದ ಕೆಳಕ್ಕೆ ಇಳಿಯುವದಿಲ್ಲವಾದ್ದರಿಂದ ಈ ನಾಮವು ಬಂದಿದೆ. ಅಥವಾ ಅಕ್ಷ - ಎಂದರೆ ಇಂದ್ರಿಯಗಳ ಗುಂಪು. ಇವುಗಳನ್ನು ಅಧಃ ಎಂದರೆ ಹಿಂದಕ್ಕೆ ಸರಿಯಿಸಿಕೊಂಡರೆ, (ಇಂದ್ರಿಯನಿಗ್ರಹಮಾಡಿದರೆ) ಜಾಯತೇ - ಕಾಣಿಸಿಕೊಳ್ಳುತ್ತಾನೆ - ಆದ್ದರಿಂದ ಅಧೋಕ್ಷಜನೆನಿಸಿರುತ್ತಾನೆ.

**ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।**
**ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥45॥**

**(416)ಋತುಃ** - ವಸಂತಾದಿ ಋತುಗಳ ರೂಪದಿಂದ ಕಾಲಾತ್ಮನಾಗಿ ಸಮಯ ವನ್ನು ಅಳೆಯುವದರಿಂದ ಋತು-ಎನಿಸಿರುತ್ತಾನೆ. ಕಾಲಗಣನೆಯಲ್ಲಿ ವಸಂತಾದಿ ಋತುಗಳು ಪ್ರಸಿದ್ಧವಾಗಿವೆ. ಆ ಋತುಗಳು ರೂಪದಲ್ಲಿರುವ ಭಗವಂತನನ್ನೇ ಇಲ್ಲಿ ಋತುಃ ಎಂಬ ನಾಮದಿಂದ ಸ್ತುತಿಸಿದೆ. **(417)** ಈಗ **ಸುದರ್ಶನಃ** - ಎಂಬ

ನಾಮವನ್ನು ನೋಡೋಣ. ಭಗವಂತನ ದರ್ಶನವು ಮುಕ್ತಿಯೆಂಬ ಪರಮಫಲವನ್ನು ಕೊಡುತ್ತದೆ. ಇಂಥ ದರ್ಶನವನ್ನು ಭಕ್ತರಿಗೆ ಕೊಡುವವನಾದ್ದರಿಂದ ಸುದರ್ಶನನು. ಅಥವಾ ಕಮಲಪತ್ರದಂತೆ ಈತನ ಕಣ್ಣುಗಳು ಸುಂದರವಾಗಿವೆಯಾಗಿ ಸುದರ್ಶನ ನೆಂದೂ ಸ್ತುತಿಸಲ್ಪಟ್ಟಿರುತ್ತಾನೆ. **(418)** ಈಗ **ಕಾಲಃ** -ಎಂಬ ನಾಮವನ್ನು ನೋಡೋಣ. ಸೂರ್ಯಚಂದ್ರರ ಸಂಚಾರದಿಂದ ಜಗತ್ತಿನ ಜನರಿಗೆ ಹಗಲು-ರಾತ್ರಿಗಳು, ಮಾಸ-ಸಂವತ್ಸರಾದಿಗಳು ಉಂಟಾಗಿ ಕಾಲಗಣನೆಯಾಗುತ್ತದೆ. ಹೀಗೆ ಕಾಲವು ಜೀವರುಗಳ ಆಯುಷ್ಯಕ್ಕೆ ಆಧಾರವಾಗಿದ್ದು ಕಾಲನೆಂದು ಸ್ತುತಿಸಲ್ಪಟ್ಟಿದ್ದಾನೆ. **(419)** ಈಗ **ಪರಮೇಷ್ಠೀ** - ಎಂಬ ನಾಮವನ್ನು ನೋಡೋಣ. ಪುರಾಣಗಳಲ್ಲಿ ಚತುರ್ಮುಖ ಬ್ರಹ್ಮನನ್ನು ಪರಮೇಷ್ಠೀ - ಎಂದು ಕರೆಯಲಾಗಿದೆ. ಭಗವಂತನೊಬ್ಬನೇ ಬ್ರಹ್ಮ-ವಿಷ್ಣು-ರುದ್ರ ರೂಪದಿಂದಿದ್ದಾನೆ. ಆದ್ದರಿಂದ ಜಗತ್ತಿನ ಸೃಷ್ಟಿಕಾರ್ಯದಲ್ಲಿ ತೊಡಗಿರು ವಾಗ ಅವನನ್ನು ಬ್ರಹ್ಮನೆಂದೂ ಪರಮೇಷ್ಠಿಯೆಂದೂ ಕರೆಯಲಾಗಿದೆ. **(420)** ಈಗ **ಪರಿಗ್ರಹಃ** - ಎಂಬ ನಾಮವನ್ನು ನೋಡೋಣ. ಭಕ್ತರು ಸಮರ್ಪಿಸುವ ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯಾದಿಗಳನ್ನು ಸ್ವೀಕರಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. ಪರಿಗ್ರಹ - ಎಂದರೆ ಸ್ವೀಕರಿಸುವದು - ಎಂದರ್ಥ. ಗೀತೆಯಲ್ಲಿ 'ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ' ಎಂದು ಭಗವಂತನೇ ಹೇಳಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ. **(421)**ಈಗ **ಉಗ್ರಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸೂರ್ಯಾದಿದೇವತೆಗಳನ್ನು ಕೂಡ ತನ್ನ ಕಟ್ಟುಪಾಡಿನಲ್ಲಿಟ್ಟುಕೊಂಡಿರುತ್ತಾನೆ. ಅವನ ಭಯದಿಂದಲೇ ವಾಯು, ಸೂರ್ಯ, ಆಗ್ನಾದಿದೇವತೆಗಳೂ ತಮ್ಮತಮ್ಮ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಆದ್ದರಿಂದ ಈ ನಾಮವು ಬಂದಿದೆ. **(422)** ಈಗ **ಸಂವತ್ಸರಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಈ ನಾಮವು ಕಾಲಪುರುಷನೆಂಬ ಅರ್ಥದಲ್ಲಿಲ್ಲ. ಭಾಷ್ಯಕಾರರು ಮಾಡಿರುವ ಅರ್ಥವು ಹೀಗಿದೆ. ಜಗತ್ತಿನಲ್ಲಿರುವ ಪ್ರಾಣಿಗಳೆಲ್ಲವೂ ಹಾಗೂ ಜೀವರೆಲ್ಲರೂ ಇವನಲ್ಲಿಯೇ ವಾಸವಾಗಿರುವದರಿಂದ ಸಂವತ್ಸರನೆನಿಸಿರುತ್ತಾನೆ. **(423)** ಈಗ **ದಕ್ಷಃ** -ನೆಂಬ ನಾಮವನ್ನು ನೋಡೋಣ. ದಕ್ಷ ಎಂದರೆ ಸಮರ್ಥನು ಎಂದರ್ಥ. ಇದು ಸಾಮರ್ಥ್ಯವುಳ್ಳವನು - ಎಂದಾಗುತ್ತದೆ. ಮತ್ತು ಯಾವದೇ ಕೆಲಸವನ್ನಾದರೂ ವಿಳಂಬ ಮಾಡದೆ ಕ್ಷಿಪ್ರವಾಗಿ ಮಾಡುತ್ತಾನೆ-ಎಂಬರ್ಥದಲ್ಲಿಯೂ ದಕ್ಷನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(424)** ಈಗ **ವಿಶ್ರಾಮಃ** - ಎಂಬ ನಾಮವನ್ನು ವಿಚಾರ ಮಾಡೋಣ. ಸಂಸಾರವೆಂಬ ಸಾಗರದಲ್ಲಿ ಬಿದ್ದು ಹಸಿವು, ಬಾಯಾರಿಕೆ - ಮುಂತಾದ ಸಂಸಾರಧರ್ಮ ಗಳಿಂದಲೂ ಕಾಮಕ್ರೋಧಮದಮಾತ್ಸರ್ಯಾದಿದೋಷಗಳಿಂದಲೂ ಸೆರೆಹಿಡಿಯಲ್ಪಟ್ಟು ನರಳುತ್ತಿರುವ ಜೀವರುಗಳು ಈ ದುಃಖದಿಂದ ಬಿಡುಗಡೆಮಾಡಿಸಿ ಮುಕ್ತಿಯನ್ನು

ಕರುಣಿಸಿ ವಿಶ್ರಾಂತಿಯನ್ನು ಮಾಡುವವನಾದ್ದರಿಂದ ವಿಶ್ರಾಮನೆನಿಸಿರುತ್ತಾನೆ. **(425)** ಈಗ **ವಿಶ್ವದಕ್ಷಿಣಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಕರ್ಮಗಳಲ್ಲಿಯೂ ಸಮರ್ಥನಾಗಿದ್ದು ಎಲ್ಲವನ್ನೂ ನಿರ್ವಹಿಸುತ್ತಾನಾದ್ದರಿಂದಲೂ ಮತ್ತು ಸೃಷ್ಟಿಯಲ್ಲಿರುವ ಜೀವರುಗಳೆಲ್ಲರಿಗಿಂತಲೂ ಸಮರ್ಥನಾಗಿದ್ದು ಜೀವರುಗಳಿಂದ ಸಾಧ್ಯವಾಗದಂಥ ಅದ್ಭುತಕರ್ಮಗಳನ್ನು ಮಾಡುವದರಿಂದಲೂ ಈ ನಾಮವು ಬಂದಿದೆ. ಕೊ ವೇದ ಗೋಪಶಿಶುಕಃ ತೈಲಮುತ್ಪಾಟಯೇದಿತಿ' (ಗೋಪಬಾಲಕನೊಬ್ಬನು ಗೋವರ್ಧನ ಪರ್ವತವನ್ನೇ ಕಿತ್ತು ಎತ್ತಿಹಿಡಿಯುತ್ತಾನೆ - ಎಂಬಿದನ್ನು ಯಾರು ಬಲ್ಲರು?) ಎಂಬ ಕವಿವಾಣಿಯನ್ನು ಈ ನಾಮಕ್ಕೆ ನಿದರ್ಶನವಾಗಿದೆ.

**ವಿಸ್ತಾರಃ ಸ್ಥಾವರಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್ ।**
**ಅರ್ಥೋಽನರ್ಥೋ ಮಹಾಕೋಶೋಮಹಾಭೋಗೋ ಮಹಾಧನಃ**
**॥46॥**

**(426)** ಈಗ **ವಿಸ್ತಾರಃ** - ಎಂಬ ನಾಮವನ್ನು ವಿಚಾರಿಸೋಣ. ಎಲ್ಲಾ ಹದಿನಾಲ್ಕು ಲೋಕಗಳೂ ಈ ಭಗವಂತನಲ್ಲಿಯೇ ಅಡಕವಾಗಿವೆ- ಎಂಬರ್ಥದಲ್ಲಿ ಈ ನಾಮವು ಬಂದಿದೆ. ದೇವತೆಗಳು, ಮನುಷ್ಯರು, ಹಕ್ಕಿಪಕ್ಷಿಗಳು, ಉರಗಗಳು, ಗೋವು ಮುಂತಾದ ನಾಲ್ಕು ಕಾಲಿನ ಪ್ರಾಣಿಗಳು, ಗಂಧರ್ವರು, ಅಸುರರು - ಇತ್ಯಾದಿ ಸೃಷ್ಟಿಯಲ್ಲಿರುವ ಜೀವರುಗಳೆಲ್ಲರೂ ಈ ವಿಶ್ವರೂಪನಾದ ಭಗವಂತನಲ್ಲಿಯೇ ಅಡಕವಾಗಿರುತ್ತಾರೆ - ಎಂದರೆ ಈ ಮಹಾಮಹಿಮನ ವಿಸ್ತಾರವಾದ ಸ್ವರೂಪವು ಎಂಥದ್ದಾಗಿರಬೇಕು - ಎಂಬರ್ಥದಲ್ಲಿ ಈ ನಾಮವು ಬಂದಿದೆ. **(427)** ಈಗ **ಸ್ಥಾವರ - ಸ್ಥಾಣುಃ** - ಎಂಬ ನಾಮವನ್ನು ನೋಡೋಣ. ಇದ್ದಂತೆಯೇ ಇರುವ ಸ್ವಭಾವದವನು ಎಂದು ಒಂದು ಅರ್ಥವು. ಸೃಷ್ಟಿಯಲ್ಲಿ ಸ್ಥಾವರ- ಜಂಗಮ ಎಂಬ ಎರಡು ರೀತಿಯ ಜೀವರುಗಳಿದ್ದಾರೆ. ಅವುಗಳಲ್ಲಿ ಸ್ಥಾವರವು ದೊಡ್ಡದು. ಬೆಟ್ಟ, ಸಮುದ್ರ, ಗ್ರಹ ಮಂಡಲಾದಿಗಳು. ಜಂಗಮ(ಜೀವರು)ಗಳಿಗಿಂತ ಮಿಗಿಲಾದವುಗಳು. ಆದ್ದರಿಂದ ಸ್ಥಾವರಸ್ಥಾಣುರೂಪದಿಂದ ಇರುವ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(428)** ಈಗ **ಪ್ರಮಾಣಮ್** - ಎಂಬ ನಾಮವನ್ನು ನೋಡೋಣ. ಪ್ರಮಾ ಎಂದರೆ ಜ್ಞಾನ ಎಂದರ್ಥ. ಪ್ರಮೆಯನ್ನು ಉಂಟುಮಾಡುವ ಸಾಧನವನ್ನು ಪ್ರಮಾಣವೆನ್ನುತ್ತಾರೆ. ಆದರೆ ಭಗವಂತನು ಪ್ರಮಾಣಗೋಚರನಲ್ಲ. ಪ್ರಮಾಣಗಳಿಗೂ ಹಿನ್ನೆಲೆಯಾಗಿರುವ ಚೈತನ್ಯಸ್ವರೂಪನು. ಆದ್ದರಿಂದ ಈ ನಾಮವನ್ನು ಪ್ರಮಾಣಗಳಿಗೆಲ್ಲ ಪ್ರಮಾಣನು ಎಂಬರ್ಥದಲ್ಲಿ ಬಳಸಿದೆ. **(429)** ಈಗ **ಬೀಜಮವ್ಯಯಮ್** - ಎಂಬ

ನಾಮವನ್ನು ವಿಚಾರಮಾಡೋಣ. ಬೇರೊಂದು ರೂಪದಿಂದ ಬದಲಾಗದೆ ಜಗತ್ತಿಗೆ ಕಾರಣನಾಗಿರುವದರಿಂದ ಈ ನಾಮವು ಬಂದಿದೆ. ಹೇಗೆ ಚಿನ್ನವು ಒಡವೆಗಳ ರೂಪ ದಲ್ಲಿ ಪರಿವರ್ತಿತವಾದರೂ ತನ್ನ ಸ್ವರೂಪದಿಂದ ಬದಲಾಗಿರುವದಿಲ್ಲವ್ರೋ ಹಾಗು ಭಗವಂತನು ಸೃಷ್ಟಿಯಲ್ಲಿ ನಾಮರೂಪಾಕಾರಗಳಿಂದ ತೋರಿಕೊಂಡರೂ ತಾನು ಇದ್ದಂತೆಯೇ ಇರುತ್ತಾನಾಗಿ ಈ ನಾಮವುಬಂದಿದೆ. **(430)** ಈಗ **ಅರ್ಥಃ** - ಎಂಬ ನಾಮವನ್ನು ನೋಡೋಣ. ಭಗವಂತನು ಆನಂದ(ಸುಖ)ರೂಪನಾಗಿದ್ದು ಎಲ್ಲರೂ ಬಯಸುವಂತೆ ಇರುವವನಾಗಿರುವದರಿಂದ ಈ ನಾಮವು ಬಂದಿರುತ್ತದೆ. **(431) ಅನರ್ಥಃ** - ಎಂದರೆ ಭಗವಂತನು ಆಪ್ತಕಾಮನಾಗಿರುವುದರಿಂದ ಅವನಿಗೆ ಬೇಕಾದದ್ದು ಎಂಬುದೇನೂ ಇರುವದೇ ಇಲ್ಲ. ಆದ್ದರಿಂದ ಅರ್ಥ(ಬಯಕೆ) ಇಲ್ಲದವನು - ಎಂಬ ಅಭಿಪ್ರಾಯದಲ್ಲಿ ಈ ನಾಮವು ಬಂದಿದೆ. **(432)** ಈಗ **ಮಹಾಕೋಶಃ** - ಎಂಬ ನಾಮವನ್ನು ನೋಡೋಣ. ಭಗವಂತನು ಎಲ್ಲಾ ಜೀವರುಗಳ ಆತ್ಮನೇ ಆಗಿದ್ದರೂ ಅನ್ನಮಯಾದಿ ಐದು ಕೋಶಗಳನ್ನು ದಾಟಿ ಅವನನ್ನು ಕಂಡುಕೊಳ್ಳಬೇಕು. ಆದ್ದರಿಂದ ಈ ನಾಮವು ಬಂದಿದೆ. **(433)** ಈಗ **ಮಹಾಭೋಗಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಭೋಗವೆಂದರೆ ಸುಖ - ಎಂದರ್ಥ. ಆದ್ದರಿಂದ ನಿತ್ಯ ಸುಖಸ್ವರೂಪನು. ಎಂಬರ್ಥದಲ್ಲಿ ಈ ನಾಮವು ಬಂದಿದೆ. **(434)** ಈಗ **ಮಹಾಧನಃ** - ಎಂಬ ನಾಮವನ್ನು ನೋಡೋಣ. ಹೆಚ್ಚಿನ ಧನ - ಎಂದರೆ ಐಶ್ವರ್ಯ ವು ಇವನಲ್ಲಿದ್ದು ಇವನಿಗೆ ಸಮಾನರೇ ಇಲ್ಲವಾದ್ದರಿಂದಲೂ ಮಹಾಲಕ್ಷ್ಮೀಗೇ ಪತಿ ಯಾದ್ದರಿಂದಲೂ ಈ ನಾಮವು ಬಂದಿದೆ. ಜೀವರೆಲ್ಲರೂ ಲಕ್ಷ್ಮೀಪುತ್ರರು - ಎಂದರೆ ತಾಯಿಯನ್ನು ಮಕ್ಕಳು ದೊಡ್ಡವರಾದಾಗ ಕಾಪಾಡುವಂತೆ ಲಕ್ಷ್ಮಿಯನ್ನು ಕಾಪಾಡುತ್ತಾರೆ. ಆದರೆ ಭಗವಂತನು ಲಕ್ಷ್ಮೀಪತಿಯಾಗಿದ್ದು ಸಕಲೈಶ್ವರ್ಯಗಳನ್ನೂ ಅನುಭವಿಸುತ್ತಾ ಆಕೆಗೆ ಒಡೆಯನಾಗಿರು ತ್ತಾನಾಗಿ ಈ ನಾಮವು ಬಂದಿರುತ್ತದೆ.

**ಅನಿರ್ವಿಣ್ಣಃ ಸ್ಥವಿಷ್ಠೋ ಭೂರ್ಧರ್ಮಯೂಪೋ ಮಹಾಮಖಃ ।**
**ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ, ಕ್ಷಾಮಃ ಸಮೀಹನಃ ॥47॥**

**(435) ಅನಿರ್ವಿಣ್ಣಃ** - ನಿರ್ವಿಣ್ಣ - ಎಂದರೆ ತನಗೆ ಬೇಕಾದ ವಸ್ತುಗಳು ದೊರೆಯದೆ ಇರುವದು. ಸಮಾಜದಲ್ಲಿ ಗೌರವವು ದೊರಕದೆ ಇರುವದು - ಮುಂತಾದ ಕಾರಣಗಳಿಂದ ಮನುಷ್ಯನಿಗೆ ಜೀವನದಲ್ಲಿ ನಿರ್ವೇದ(ಜುಗುಪ್ಸೆ) ವುಂಟಾಗುತ್ತದೆ. ಆದರೆ ಭಗವಂತನಿಗೆ ಈ ಪರಿಸ್ಥಿತಿಯಿಲ್ಲ. ಏಕೆಂದರೆ ಅವನು ಎಲ್ಲರ ಆತ್ಮನೂ ಆಪ್ತಕಾಮನೂ ನಿತ್ಯತೃಪ್ತನೂ ಆಗಿರುತ್ತಾನೆ. ಭಗವಂತನ ಸಾಕ್ಷಾತ್ಕಾರವಾದ ಜ್ಞಾನಿಗಳಿಗೂ ಈ ಸ್ವಭಾವವು ಅನ್ವಯಿಸುತ್ತದೆ. ಒಮ್ಮೆ ರಾಮತೀರ್ಥರೆಂಬವರು

ವಿವೇಕಾನಂದರನ್ನು ಕುರಿತು 'ಸ್ವಾಮಿ, ತಾವು ಆಗಾಗ್ಗೆ ಬೇರೆಬೇರೆಸ್ಥಳಗಳಲ್ಲಿ ಉಪನ್ಯಾಸ ಗಳಿಗೆ ಹೋಗುತ್ತೀರಿ. ಆ ಕಾಲಕ್ಕೆ ಘಂಟೆನೋಡಲು ಗಡಿಯಾರವು ಬೇಕಾಗುತ್ತದೆ. ಆದ್ದರಿಂದ ತಾವು ಈ ಗಡಿಯಾರವನ್ನು ಸ್ವೀಕರಿಸಬೇಕು' ಎಂದು ಹೇಳಿ ಹೊಸ ಗಡಿಯಾರವೊಂದನ್ನು ಶ್ರೀವಿವೇಕಾನಂದರ ಜೇಬಿನಲ್ಲಿಟ್ಟರಂತೆ. ವಿವೇಕಾನಂದರು ಕೂಡಲೆ ಅದನ್ನು ಹೊರ ತೆಗೆದು 'ಸಂತೋಷ; ಆದರೆ ಈ ಗಡಿಯಾರವನ್ನು ಈ ಜೇಬಿನಲ್ಲಿ ಉಪಯೋಗಿಸಿ ಅನುಭವಿಸುತ್ತೇನೆ' ಎಂದು ಹೇಳಿ ಪುನಃ ರಾಮತೀರ್ಥರ ಜೇಬಿಗೇ ಇಟ್ಟರಂತೆ. ಇಂಥ ವಿಶಾಲವಾದ ಅಂತಃಕರಣವಿರುವವರಿಗೆ ನಿರ್ವೇದ (ಬೇಸರ)ವು ಎಂದಿಗೂ ಬರಲಾರದು. ಇಂಥವರ ಹೃದಯವು ಬೇಸರವಿಲ್ಲದ ಹಾಗೂ ತೃಪ್ತಿದಾಯಕವಾದ ಸ್ಥಿತಿಯಲ್ಲಿದ್ದು ಭಗವಂತನ ವಾಸಸ್ಥಾನವಾಗಿರುತ್ತದೆಯಾಗಿ ಅನಿರ್ವಿಣ್ಣನೆಂದು ಸ್ತುತಿಸಲಾಗಿದೆ. **(436)** ಈಗ **ಸ್ಥವಿಷ್ಟಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ವಿರಾಡ್‌ರೂಪದಿಂದ ಜಗತ್ತನ್ನೆಲ್ಲ ವ್ಯಾಪಿಸಿರುತ್ತಾ ನಾದ್ದರಿಂದ ಸ್ಥವಿಷ್ಟ- ಎಂದರೆ ಹೆಚ್ಚಿನ ಸ್ಥೂಲರೂಪನೆನಿಸಿರುತ್ತಾನೆ. ಅವನಿಗೆ ಅಗ್ನಿಯೇ ಶಿರಸ್ಸು, ಸೂರ್ಯಚಂದ್ರರೇ ಎರಡು ಕಣ್ಣುಗಳು - ಇತ್ಯಾದಿ ಸ್ಥೂಲರೂಪವನ್ನು ಮುಂಡಕೋಪನಿಷತ್ತಿನಲ್ಲಿ ವರ್ಣಿಸಿರುತ್ತದೆ. ಆದ್ದರಿಂದ ಈ ನಾಮವು ಸಂಗತವಾಗಿದೆ. **(437)** ಈಗ **ಅಭೂಃ** ಅಥವಾ **ಭೂಃ** - ಎಂಬ ನಾಮವನ್ನು ನೋಡೋಣ. ಅಭೂಃ ಎಂದರೆ ಹುಟ್ಟಿಲ್ಲದವನು - ಎಂದು ಅರ್ಥ. ಭೂರೂಪದಿಂದ ಎಲ್ಲಕ್ಕೂ ಆಧಾರನಾಗಿರುವವನು - ಎಂದೂ ವ್ಯಾಖ್ಯಾನಮಾಡಬಹುದಾಗಿದೆ. ಈಗ **(438)** **ಧರ್ಮಯೂಪಃ** - ಎಂಬ ನಾಮವನ್ನು ನೋಡೋಣ. ಯೂಪ ಎಂದರೆ ಯಜ್ಞದಲ್ಲಿ ಬಲಿಕೊಡುವ ಪಶುವನ್ನು ಕಟ್ಟುವ ಕಂಬ - ಎಂದರ್ಥ. ಪಶುವಿನಂತೆಯೇ ಯಜ್ಞನಿಮಿತ್ತವಾಗಿ ಯಜಮಾನನಿಗೆ ಪ್ರಾಪ್ತವಾಗುವ ಧರ್ಮ(ಪುಣ್ಯ)ವೆಲ್ಲವೂ ಆ ಕಂಬದಲ್ಲಿ ಕಟ್ಟಲ್ಪಟ್ಟಿದೆ - ಎಂಬ ಅಭಿಪ್ರಾಯದಿಂದ ಧರ್ಮ ಸ್ವರೂಪನೇ ಆದ ಭಗವಂತನನ್ನು ಹೀಗೆ ಸ್ತುತಿಸಲಾಗಿದೆ. **(439)** ಈಗ **ಮಹಾಮಖಃ** - ಎಂಬ ನಾಮವನ್ನು ನೋಡೋಣ. ಮಖ - ಎಂದರೆ ಯಜ್ಞ ಎಂದರ್ಥ. ಯಾವಾತನಲ್ಲಿ ಸಮರ್ಪಿತವಾದ ಯಜ್ಞಗಳು ಮೋಕ್ಷರೂಪವಾದ ಫಲವನ್ನು ಕೊಡುವವುಗಳಾವವೋ ಆ ಯಜ್ಞಗಳ ರೂಪದಲ್ಲಿರುವವನೂ ಈ ಮಹಾವಿಷ್ಣುವೇ ಆಗಿದ್ದಾನಾಗಿ ಈ ನಾಮವು ಬಂದಿದೆ. **(440)** ಈಗ **ನಕ್ಷತ್ರನೇಮಿಃ** - ಎಂಬ ನಾಮವನ್ನು ನೋಡೋಣ. ಚಂದ್ರಸೂರ್ಯರೇ ಮುಂತಾದ ಗ್ರಹಗಳು ವಾಯು ಪಾಶಮಯವಾದ ಬಂಧನ ಗಳಿಂದ ಧ್ರುವನೆಂಬ ನಕ್ಷತ್ರಗಳಲ್ಲಿ ಕಟ್ಟುಬಿದ್ದಿರುತ್ತವೆ. ಜ್ಯೋತಿಗಳ ಚಕ್ರವನ್ನು ತಿರುಗಿಸುತ್ತಾ ತಾರಾಮಯವಾದ ಶಿಶುಮಾರದ ಬಾಲದಕಡೆಯಲ್ಲಿ ಧ್ರುವನು ಇರುತ್ತಾನೆ. ಆ ಜ್ಯೋತಿಶ್ಚಕ್ರವಾದ ಶಿಶುಮಾರದ ಹೃದಯದಲ್ಲಿ ನೇಮಿಯಂತೆ

ವಿಷ್ಣುವು ಇರುತ್ತಾನೆ. ಗಾಡಿಯ ಚಕ್ರದ ಹಾರೆಕೋಲು ನಡುವೆ ಇರುವ ಗುಂಬದಲ್ಲಿ ಒಂದಾಗಿರುವಂತೆ ಭಗವಂತನಲ್ಲಿ ಎಲ್ಲಾ ಸೂರ್ಯಾದಿಪ್ರಕಾಶಮಯವಾದ ದೇವತೆಗಳೂ ಒಂದಾಗಿರುತ್ತಾರೆ. ಆದ್ದರಿಂದ ಈ ನಾಮವು ಬಂದಿರುತ್ತದೆ. (441) ಈಗ **ನಕ್ಷತ್ರೀ** - ಎಂಬ ನಾಮವನ್ನು ನೋಡೋಣ. ನಕ್ಷತ್ರಗಳು ಭೂಮಿಗೆ ದೂರವಾಗಿದ್ದು ಹೆಚ್ಚಿನ ಬೆಳಕನ್ನು ಕೊಡುವದಿಲ್ಲ. ಆದರೆ ಚಂದ್ರನು ಹತ್ತಿರವಾಗಿದ್ದು ಬೆಳಕನ್ನು ಕೊಡುತ್ತಾನೆ. ಇದನ್ನು ಬೆಳದಿಂಗಳು - ಎನ್ನುತ್ತಾರೆ. ಹೀಗೆ ಚಂದ್ರನನ್ನು ಭಗವಂತನ ವಿಭೂತಿಯಾಗಿ ಪರಿಗಣಿಸಿ ಆ ಚಂದ್ರರೂಪನಾದ ವಿಷ್ಣುವು ನಕ್ಷತ್ರೀ - ಎಂದರೆ ನಕ್ಷತ್ರಗಳಲ್ಲಿ ಶ್ರೇಷ್ಠನು ಎಂದು ಸ್ತುತಿಸಿದೆ. (442) ಈಗ **ಕ್ಷಮಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಕೆಲಸಕಾರ್ಯಗಳಲ್ಲಿಯೂ ಸಮರ್ಥನು- ಎಂಬರ್ಥದಲ್ಲಿ ಈ ನಾಮವುಬಂದಿದೆ. ಅಥವಾ ತಪ್ಪುಮಾಡಿದವರನ್ನು ಕ್ಷಮಿಸುತ್ತಾನಾದ್ದರಿಂದ ಕ್ಷಮಾ ಶೀಲನು ಎಂಬರ್ಥದಲ್ಲಿಯೂ ಈ ನಾಮವನ್ನು ವಿವರಿಸಬಹುದು. ರಾಮಾಯಣ ದಲ್ಲಿ ರಾಮನ ಗುಣಗಳನ್ನು ವರ್ಣಿಸುವಾಗ ಕ್ಷಮಾಗುಣದಲ್ಲಿ ರಾಮನು ಭೂದೇವಿಗೆ ಸಮಾನನು-ಎಂದು ಸ್ತುತಿಸಿದೆ. ಆದ್ದರಿಂದ ಈ ನಾಮವು ಬಂದಿದೆ. (443)ಈಗ **ಕ್ಷಾಮಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ವಿಕಾರ(ಕಾರ್ಯ)ಗಳೂ ನಾಶವಾಗುತ್ತಿರಲಾಗಿ ತಾನು ತನ್ನ ಸ್ವರೂಪದಿಂದ ಇದ್ದೇ ಇರುತ್ತಾನಾದ್ದರಿಂದ ಈ ನಾಮವು ಬಂದಿದೆ. ಕ್ಷಾತ - ಎಂದು ಸಿದ್ಧವಾದ ಶಬ್ದಕ್ಕೆ ವ್ಯಾಕರಣಸೂತ್ರದಂತೆ ತ - ಎಂಬುದಕ್ಕೆ ಮಕಾರಾದೇಶವು ಬಂದಿರುತ್ತದೆ. ಆದ್ದರಿಂದ ಕ್ಷಾಮ - ಎಂದು ಹೆಸರು. ಒಡವೆಗಳು ಅಕ್ಕಸಾಲಿಗೆ ಸಿಕ್ಕಿ ತಮ್ಮ ರೂಪವನ್ನು ಕಳೆದುಕೊಳ್ಳುತ್ತಿದ್ದರೂ ಚಿನ್ನವು ಇದ್ದೇ ಇರುವಂತೆ ನಾಮರೂಪಾತ್ಮಕವಾದ ಪ್ರಪಂಚವು ನಾಶವಾಗುತ್ತಿದ್ದರೂ ಭಗವಂತನು ಚಿನ್ನದಂತೆ ಇದ್ದೇ ಇರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. (444) ಈಗ **ಸಮೀಹನಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯೇ ಮುಂತಾದ ಕಾರ್ಯ ಗಳಿಗಾಗಿ ತನ್ನ ಜ್ಞಾನಶಕ್ತಿಗಳಿಂದ ಚೆನ್ನಾಗಿ ವ್ಯಾಪಾರ(ಕ್ರಿಯೆ)ಗಳನ್ನು ಮಾಡುತ್ತಾನಾದ್ದ ರಿಂದ ಈ ನಾಮವು ಬಂದಿದೆ.

**ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂ ಗತಿಃ ।**
**ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥48॥**

(445) **ಯಜ್ಞಃ** - ಎಂಬ ಶಬ್ದವು ಯಜ್ ಎಂಬ ಧಾತುವಿನಿಂದ ಹುಟ್ಟಿರುತ್ತದೆ. ಆದ್ದರಿಂದ ಅಗ್ನಿಯ ಮೂಲಕ ಭಗವಂತನಿಗೆ ಸಮರ್ಪಿಸುವದ್ರವ್ಯಗಳು ಆಯಾ ದೇವತೆಗಳ ಹೆಸರನ್ನು ಹೇಳಿಕೊಟ್ಟಾಗ ಆ ದೇವತೆಗಳಿಗೆ ಸೇರುತ್ತದೆ. ಆದರೆ ಆ ದೇವತೆ ಗಳೆಲ್ಲರೂ ಭಗವಂತನ ಅಂಶಸಂಭೂತರೇ ಆಗಿರುವದರಿಂದ ಅದು ಭಗವಂತನಿಗೇ

ಕಡೆಯಲ್ಲಿ ತಲುಪುತ್ತದೆ. ಆದ್ದರಿಂದ ಯಾವ ದೇವತೆಯನ್ನು ಕುರಿತು ಯಜ್ಞದಲ್ಲಿ ಹವಿರರ್ಪಣೆ ಮಾಡಿದರೂ ಅದು ಪರಮಾತ್ಮನಾದ ವಿಷ್ಣುವಿಗೇ ತಟ್ಟುತ್ತದೆಯಾಗಿ ಭಗವಂತನನ್ನು ಇಲ್ಲಿ ಯಜ್ಞನಾಮದಿಂದ ಸ್ತುತಿಸಿದೆ. 'ಯಜ್ಞೋ ವೈ ವಿಷ್ಣುಃ'- ಎಂದು ಶ್ರುತಿಯೂ ಇದೆ. **(446)** ಈಗ **ಇಜ್ಯಃ** - ಎಂಬ ನಾಮವನ್ನು ನೋಡೋಣ. ಯಜ್ಞವನ್ನು ಮಾಡುವ ಯಜಮಾನನ್ನು ಈ ಶಬ್ದದಿಂದ ಕರೆಯುತ್ತಾರೆ. ಆದ್ದರಿಂದ ಈ ಯಜಮಾನನೂ ವಿಷ್ಣುಸ್ವರೂಪನೇ ಎಂದು ಸ್ತುತಿಸಿದೆ. **(447)** ಈಗ **ಮಹೇಜ್ಯಃ** -ಎಂಬ ನಾಮವನ್ನು ನೋಡೋಣ. ಯಜ್ಞದಲ್ಲಿ ಎಲ್ಲಾ ದೇವತೆಗಳನ್ನೂ ಆಹ್ವಾನಿಸಿ ಪೂಜಿಸಿ ಹವಿಸ್ಸನ್ನು ಅರ್ಪಿಸಲಾಗುತ್ತದೆ. ದೇವತೆಗಳನ್ನೂ ಆಹ್ವಾನಿಸಿ ಪೂಜಿಸಿ ಹವಿಸ್ಸನ್ನು ವಿಶೇಷವಾಗಿ ಪ್ರಧಾನದೇವತೆಯಾಗಿ ಗೌರವಿಸಿ ಪೂಜಿಸುತ್ತಾರೆ. ಮತ್ತು ಭಗವಂತನಾದ ಶ್ರೀಮಹಾವಿಷ್ಣುವು ಯಜ್ಞದಿಂದ ತೃಪ್ತನಾಗಿ ಪರಮಪುರುಷಾರ್ಥವಾದ ಮೋಕ್ಷವನ್ನೇ ಕೊಡುತ್ತಾನೆ. ಆದ್ದರಿಂದ ಮಹೇಜ್ಯನೆನಿಸಿರುತ್ತಾನೆ. **(448)** ಈಗ **ಕ್ರತುಃ** - ಎಂಬ ನಾಮವನ್ನು ನೋಡೋಣ. ಕ್ರತು ಎಂದರೆ ಪಶು(ಆಡು)ವನ್ನು ಆಹುತಿಯಾಗಿ ಸಮರ್ಪಿಸುವ ಯಜ್ಞವು. ಆಗ ಆ ಪ್ರಾಣಿಯನ್ನು ಕಟ್ಟಿಹಾಕುವದಕ್ಕೆ ಒಂದು ಗೂಟ ವಿರುತ್ತದೆ. ಅದನ್ನ ಪಾರಿಭಾಷಿಕಶಬ್ದದಿಂದ 'ಯೂಪ' ವೆಂದು ಕರೆಯುತ್ತಾರೆ. ಅಂಥ ಯಜ್ಞಕ್ಕೆ ಕ್ರತು - ಎಂದು ಹೆಸರು. ದೇವತೆಗಳ ಒಡೆಯನಾದ ಶ್ರೀಮಹಾವಿಷ್ಣುವೇ ಯಜ್ಞವಿನಲ್ಲಿ ಮುಖ್ಯನಾಗಿರುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(449) ಸತ್ರಮ್** - ಎಂಬ ನಾಮವನ್ನು ನೋಡೋಣ. ಇದು ಕೂಡ ವೈದಿಕಕರ್ಮಕ್ಕೆ ಸಂಬಂಧಪಟ್ಟದ್ದಾಗಿ ಭಗವಂತನ ಸ್ತುತಿಯೂ ಆಗಿದೆ. ಯಜ್ಞಗಳನ್ನು ಮಾಡುವ ಯಜಮಾನನು ಹದಿನೇಳಕ್ಕೆ ಕಡಿಮೆಯಿಲ್ಲದೆ ಮಾಡಬೇಕು. ಹೀಗೆಂದು ಶ್ರುತಿವಾಕ್ಯ ವಿದೆ. ಆದ್ದರಿಂದ ಹೀಗೆ ಶಾಸ್ತ್ರವಿಧಿಯಂತೆಮಾಡಿದಾಗ ಅದು ಸತ್ರವೆನಿಸುತ್ತದೆ. ಮತ್ತು ಇದು ಯಜ್ಞಪತಿಯಾದ ಶ್ರೀಮಹಾವಿಷ್ಣುವಿಗೆ ಅರ್ಪಿತವಾಗಿ ಅವನಿಗೂ ಈ ನಾಮವು ಸ್ತುತಿಯಾಗಿ ಪರಿಗಣಿಸಲ್ಪಡುತ್ತದೆ. **(450)** ಈಗ **ಸತಾಂ ಗತಿಃ** - ಎಂಬ ನಾಮವನ್ನು ನೋಡೋಣ. ಮುಮುಕ್ಷುಗಳಾದ ಸಾಧಕರಿಗೆ ಭಗವಂತನನ್ನು ಬಿಟ್ಟರೆ ಬೇರೆ ಯಾರೂ ಗತಿಯಿರುವದಿಲ್ಲ. ಏಕೆಂದರೆ ಮುಕ್ತಿಯನ್ನು ಕರುಣಿಸಲು ಶಕ್ತನು ಶ್ರೀಮಹಾವಿಷ್ಣು ವೊಬ್ಬನೇ - ಎಂದು ಬಲ್ಲವರು ಹೇಳುತ್ತಾರೆ. ಈ ಕೆಳಗಿನ ಶ್ಲೋಕವನ್ನು ನೋಡಿರಿ.

*ಆರೋಗ್ಯಂ ಭಾಸ್ಕರಾದಿಚ್ಛೇತ್ ಶ್ರಿಯಮಿಚ್ಛೇತ್ ಹುತಾಶನಾತ್ ।*
*ಜ್ಞಾನಂ ಮಹೇಶ್ವರಾದಿಚ್ಛೇತ್ ಮೋಕ್ಷಮಿಚ್ಛೇತ್ ಜನಾರ್ದನಾತ್ ॥*

ಸೂರ್ಯನಿಂದ ಆರೋಗ್ಯವನ್ನೂ ಅಗ್ನಿದೇವನಿಂದ ಸಂಪತ್ತನ್ನೂ ಈಶ್ವರನಿಂದ ಜ್ಞಾನವನ್ನೂ ಶ್ರೀವಿಷ್ಣುವಿನಿಂದ ಮುಕ್ತಿಯನ್ನೂ ಪಡೆದುಕೊಳ್ಳಬೇಕು- ಎಂದಭಿಪ್ರಾಯ.

ಆದ್ದರಿಂದ ಮೋಕ್ಷವನ್ನು ಬಯಸುವವರಿಗೆ ಶ್ರೀಮಹಾವಿಷ್ಣುವೇ ಆರಾಧ್ಯನಾಗಿರುತ್ತಾನೆ. **(451)** ಈಗ **ಸರ್ವದರ್ಶೀ** - ಎಂಬ ನಾಮವನ್ನು ನೋಡೋಣ. ಮಾಡಬೇಕಾದ ಮತ್ತು ಮಾಡಬಾರದ ಎಲ್ಲಾ ಪ್ರಾಣಿಗಳ ಕರ್ಮಗಳನ್ನೆಲ್ಲ ಸಾಕ್ಷಿಯಾಗಿ ನೋಡುತ್ತಾನಾದ್ದರಿಂದ ಈ ನಾಮವು ಬಂದಿದೆ. ಭಗವಂತನ ತಿಳಿವಳಿಕೆಗೆ ಸಿಗದಂತೆ ಮಾನವನು ಯಾವ ಕರ್ಮವನ್ನೂ ಮಾಡಲುಸಾಧ್ಯವಿಲ್ಲ. ಆದ್ದರಿಂದ ಈ ನಾಮವು ಬಂದಿದೆ. **(452)** ಈಗ **ವಿಮುಕ್ತಾತ್ಮಾ** - ಎಂಬ ನಾಮವನ್ನು ನೋಡೋಣ. ಪ್ರಾಪಂಚಿಕವಾದ ಎಲ್ಲಾ ಪಾಪಪುಣ್ಯಗಳಿಂದಲೂ ಕರ್ತವ್ಯಾಕರ್ತವ್ಯಗಳಿಂದಲೂ ಬಿಡಲ್ಪಟ್ಟ ನಿತ್ಯಶುದ್ಧಬುದ್ಧ ಮುಕ್ತಸ್ವಭಾವದವನು - ಎಂಬರ್ಥದಲ್ಲಿ ಈ ನಾಮವು ಬಂದಿರುತ್ತದೆ. **(453)** ಈಗ **ಸರ್ವಜ್ಞಃ** - ಎಂಬ ನಾಮವನ್ನು ನೋಡೋಣ. ಎಲ್ಲವನ್ನೂ ಬಲ್ಲವನು- ಎಂದು ಅಕ್ಷರಾರ್ಥವಾಗುತ್ತದೆ. ವಿವರಣೆಯು ಹೀಗಿದೆ : ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳ ಹುಟ್ಟು-ಸಾವುಗಳು, ಅವರ ಕರ್ಮಗಳಿಗೆ ತಕ್ಕ ಪಾಪ-ಪುಣ್ಯರೂಪವಾದ ಫಲಗಳು ಮತ್ತು ಆಯಾ ಜೀವರ ಜ್ಞಾನ-ಅಜ್ಞಾನಗಳು ಇವೆಲ್ಲವನ್ನೂ ಸಮಗ್ರವಾಗಿ ಬಲ್ಲವನಾಗಿದ್ದು ಆಯಾ ಜೀವರುಗಳಿಗೆ ಆಯಾ ಕಾಲಕ್ಕೆ ಆಯಾ ಫಲಗಳನ್ನೂ ಕೊಟ್ಟು ಜಗತ್ತನ್ನೆಲ್ಲ ನಿಯಂತ್ರಿಸುವವನಾಗಿದ್ದು ಸರ್ವಜ್ಞನೆನಿಸಿರುತ್ತಾನೆ. ಈ ಭಗವಂತನ ಪರಿಪೂರ್ಣಜ್ಞಾನಕ್ಕೆ ಸಮಾನವಾದ ಜ್ಞಾನವುಳ್ಳ ಬೇರೊಬ್ಬನು ಇಲ್ಲವೇ ಇಲ್ಲ. ಆದ್ದರಿಂದ ಈ ನಾಮವು ಬಂದಿರುತ್ತದೆ. ಮತ್ತು ಶ್ರುತಿಯಲ್ಲಿ ಹೇಳಿರುವಂತೆ 'ಇದಂ ಸರ್ವಂ ಯದಯಮಾತ್ಮಾ' (ಈ ನಾಮರೂಪಾತ್ಮಕವಾದ ಜಗತ್ತೇನಿದೆಯೋ ಅದೆಲ್ಲವೂ ಈ ಆತ್ಮನಿಂದಲೇ ವ್ಯಾಪಿಸಲ್ಪಟ್ಟಿದೆ). ಹೀಗೆ ಶ್ರುತಿಯು ಸಾರುತ್ತಿರುವದರಿಂದ ಭಗವಂತನು ಸರ್ವಜ್ಞ- ಸರ್ವವಿತ್ ಎನಿಸಿರುತ್ತಾನೆ. **(454)** ಈಗ **ಜ್ಞಾನಮುತ್ತಮಮ್**- ಎಂಬ ನಾಮವನ್ನು ನೋಡೋಣ. ಅತ್ಯಂತ ಉತ್ತಮೋತ್ತಮವಾದ ಜ್ಞಾನವು ಎಲ್ಲೇ ಕಟ್ಟಿಲ್ಲದ ಹಾಗೂ ಹುಟ್ಟದೆ ಇರುವ ನಿತ್ಯವೂ ಶಾಶ್ವತವೂ ಸದಾ ವರ್ತಮಾನ ಸ್ವರೂಪವೂ ಆದ ಭಗವಂತನು ಜ್ಞಾನರೂಪದಿಂದಿರುವವನಾಗಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. ಜ್ಞಾನವೆಂದರೆ ಇಲ್ಲಿ ಅಂತಃಕರಣವೃತ್ತಿರೂಪದ್ದಲ್ಲ. ಆದರೆ ಆ ವೃತ್ತಿಗಳನ್ನೇ ಬೆಳಗುವ ನಿತ್ಯಚೈತನ್ಯವು ಎಂದರ್ಥ. ಅದೇ ಬ್ರಹ್ಮವು-ಎಂಬರ್ಥದಲ್ಲಿ ಈ ನಾಮವು ಬಂದಿದೆ.

**ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।**
**ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥49॥**

**(455)ಸುವ್ರತಃ** - ವ್ರತ ಎಂದರೆ ನಿಯಮ ಎಂದರ್ಥ. ಭಗವಂತನು ಸುವ್ರತನು - ಎಂದರೆ ಶ್ರೇಷ್ಠವಾದ ನಿಯಮಾಚಾರಗಳುಳ್ಳವನು - ಎಂದು ಅರ್ಥ. ರಾಮಾಯಣದಲ್ಲಿರುವಂತೆ ಶ್ರೀರಾಮನಾಗಿ ಭಗವಂತನು ಅವತರಿಸಿದಾಗ ಎಲ್ಲಾ

ಸಂದರ್ಭಗಳಲ್ಲಿಯೂ ತಾನು ಕೊಟ್ಟ ಮಾತಿಗೆ ತಪ್ಪದಂತೆ ನಡೆದುಕೊಂಡಿರುತ್ತಾನೆ. 'ರಾಮೋ ದ್ವಿರ್ನಾಭಿಭಾಷತೇ' (ರಾಮನು ಎಂದಿಗೂ ಎರಡು ಬಗೆಯ ಮಾತನಾಡುವದಿಲ್ಲ) ಎಂದು ಅವನೇ ಹೇಳಿದ್ದಾನೆ. ಅದರಂತೆಯೇ ನಡೆದಿದ್ದಾನೆ. ಇದೇ ಸುವ್ರತನೆಂಬ ನಾಮದ ಅಭಿಪ್ರಾಯವಾಗಿದೆ. **(456)** ಈಗ **ಸುಮುಖಃ** - ಎಂಬ ನಾಮವನ್ನು ನೋಡೋಣ. ಶೋಭನವಾದ ಮುಖವುಳ್ಳವನು ಎಂದರ್ಥ. ಈ ನಾಮವನ್ನು ಗಣಪತಿಗೂ ಬಳಸುತ್ತಾರೆ. ಆಗ ಸಾಧಕನ ಪ್ರಯತ್ನವು ಅಡೆತಡೆಗಳಿಲ್ಲದೆ ಸಿದ್ಧಿಸುತ್ತದೆ - ಎಂದರ್ಥ. ಇಲ್ಲಿ ಸು ಎಂದರೆ ಸುಂದರವಾದ ಮುಖವುಳ್ಳವನು- ಎಂದೂ ವ್ಯಾಖ್ಯಾನಮಾಡಬಹುದು. ಆಗ ಶ್ರೀಮಹಾವಿಷ್ಣುವು ರಾಮಾವತಾರ ಮಾಡಿದ ಕಾಲಕ್ಕೆ ಈ ಸ್ತುತಿಯು ಅನ್ವರ್ಥವಾಗುತ್ತದೆ. **(457)** ಈಗ **ಸೂಕ್ಷ್ಮಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ನಿಜಸ್ಥಿತಿಯಲ್ಲಿ ಯಾವ ನಾಮರೂಪಗುಣವಿಶೇಷಗಳಿಲ್ಲದವನೂ ಆಗಿರುತ್ತಾನೆ. ಆದ್ದರಿಂದ ಅವನನ್ನು ಸಾಧಕರು ತಮ್ಮ ಆತ್ಮನಾಗಿಯೇ ಧ್ಯಾನಿಸುತ್ತಾ ಅಲ್ಲಿಯೇ ಒಂದಾಗಿಬಿಡುತ್ತಾರೆ. ಈ ಸ್ಥಿತಿಯಲ್ಲಿ ದ್ವೈತವಿರುವದಿಲ್ಲ. ದ್ವೈತವು ಸ್ಥೂಲವೆನಿಸಿದ್ದು ಅದ್ವೈತವು ಸೂಕ್ಷ್ಮವೂ ಅವ್ಯವಹಾರ್ಯವೂ ಆಗಿರುತ್ತದೆ. ಇದನ್ನೇ ಸೂಕ್ಷ್ಮನೆಂದು ಇಲ್ಲಿ ಸ್ತುತಿಸಲಾಗಿದೆ. **(458)** ಈಗ **ಸುಘೋಷಃ** - ಎಂಬ ನಾಮವನ್ನು ನೋಡೋಣ. ಘೋಷ - ಎಂದರೆ ಧ್ವನಿ ಎಂದರ್ಥ. ಸು - ಎಂದರೆ ಸುಂದರವಾದ, ಸ್ಪಷ್ಟವಾದ, ಇಂಪಾದ, ಗಡಿಬಿಡಿಯಿಲ್ಲದ ಧ್ವನಿ - ಎಂದರ್ಥ. ಭಗವಂತನ ನುಡಿಗಳು ಹೀಗಿರುತ್ತವೆ. ಕೇಳಿದವರಿಗೆ ಆನಂದವನ್ನೂ ತೃಪ್ತಿಯನ್ನೂ ನೆಮ್ಮದಿಯನ್ನೂ ಉಂಟುಮಾಡುತ್ತವೆ. ಆದ್ದರಿಂದ ಈ ನಾಮವು ಬಂದಿದೆ. **(459)** ಈಗ **ಸುಖದಃ** - ಎಂಬ ನಾಮವನ್ನು ವಿಚಾರಮಾಡೋಣ. ಸುಖ ಎಂದರೆ ಆನಂದ, ತೃಪ್ತಿ ಎಂದರ್ಥ. ಭಗವಂತನ ವಾಕ್ಕುಗಳು ಕೇಳಿದವರಿಗೆ ಆನಂದವನ್ನುಂಟುಮಾಡುತ್ತವೆ. ಹಾಗೂ ಅಜ್ಞಾನವನ್ನೂ ಮೋಹವನ್ನೂ ಕಳೆದು ಸರಿಯಾದ ಧರ್ಮಮಾರ್ಗವನ್ನು ತಿಳಿಸುತ್ತವೆ. ಅವನ ಉಪದೇಶದಂತೆ ನಡೆದವರಿಗೆ ಶ್ರೇಯಸ್ಸಾಗುತ್ತದೆ. ಹೀಗೆ ಸುಖವನ್ನು - ದ - ಎಂದರೆ ಕೊಡುವವನು ಎಂಬರ್ಥದಲ್ಲಿ ಈ ನಾಮವು ಬಂದಿದೆ. **(460)** ಈಗ **ಸುಹೃತ್** - ಎಂಬ ನಾಮವನ್ನು ನೋಡೋಣ. ಈ ಶಬ್ದಕ್ಕೆ ಸ್ನೇಹಿತ ಎಂದರ್ಥ. ಇದೇ ಅರ್ಥದಲ್ಲಿ ಮಿತ್ರ - ಎಂಬ ಶಬ್ದವೂ ಬಳಕೆಯಲ್ಲಿದೆ. ಆದರೆ ಅರ್ಥದಲ್ಲಿ ವ್ಯತ್ಯಾಸವಿದೆ. ಮಿತ್ರ ನೆಂದರೆ ವಿವರವು ಹೀಗಿದೆ :

*ದದಾತಿ ಪ್ರತಿಗೃಹ್ಣಾತಿ ಭುಂಕ್ತೇ ಭೋಜಯತಿ ಸ್ವಯಮ್ ।*
*ಶೃಣೋತಿ ಗುಹ್ಯಮಾಖ್ಯಾತಿ ಷಡ್ವಿಧಂ ಮಿತ್ರಲಕ್ಷಣಮ್ ॥*

ಮಿತ್ರನು ತಾನು ಕೊಡುತ್ತಾನೆ. ಹಾಗೂ ಸ್ವೀಕರಿಸುತ್ತಾನೆ. ಹಾಗೆಯೇ ಸ್ನೇಹಿತನ ಮನೆಯಲ್ಲಿ ಊಟಮಾಡುತ್ತಾನೆ. ತನ್ನ ಮನೆಯಲ್ಲಿ ಉಣಬಡಿಸುತ್ತಾನೆ. ಹಾಗೂ ಗುಟ್ಟನ್ನು ಹೇಳುತ್ತಾನೆ. ಮತ್ತು ಕೇಳುತ್ತಾನೆ. ಆದರೆ ಸುಹೃತ್ ಎಂಬುವನು ಯಾವ ಪ್ರತಿಫಲವನ್ನೂ ಬಯಸದೆ ತನ್ನ ಮಿತ್ರನಿಗೆ ಉಪಕಾರಮಾಡುತ್ತಾನೆ - ಎಂದು ಬಲ್ಲವರು ಹೇಳುತ್ತಾರೆ. ಭಗವಂತನಾದರೊ, ಭಕ್ತರಿಗೆ ಸುಹೃತ್ ಎಂದರೆ ತಾನು ಏನನ್ನೂ ಬಯಸದೆ ಉಪಕಾರಮಾಡುವವನಾಗಿರುತ್ತಾನೆ. ಉದಾಹರಣೆಗೆ ಶ್ರೀಕೃಷ್ಣನು ಪಾಂಡವರಿಗೆ ಸಾಕಷ್ಟು ಉಪಕಾರಮಾಡಿದ್ದರೂ ಅವರಿಂದ ತಾನು ಏನನ್ನೂ ಬಯಸಲಿಲ್ಲ. ಹೀಗೆ ಸುಹೃತ್ ಎಂಬ ನಾಮವು ಭಗವಂತನಿಗೆ ಅನ್ವರ್ಥವಾಗಿದೆ. **(461)** ಈಗ **ಮನೋಹರಃ** - ಎಂಬ ನಾಮವನ್ನು ನೋಡೋಣ. ಮಿಗಿಲಿಲ್ಲದ ಆನಂದದ ರೂಪನಾಗಿರುವದರಿಂದ ಈ ನಾಮವು ಬಂದಿದೆ. ಭಕ್ತರಾದವರನ್ನು ಭಗವಂತನು ತನ್ನ ಗುಣಕರ್ಮಲೀಲೆಗಳಿಂದ ಸಂತೋಷಗೊಳಿಸುತ್ತಾನೆ. ಗೋಪಿಯರೇ ಇದಕ್ಕೆ ಉದಾಹರಣೆಯಾಗಿದ್ದಾರೆ. ಅವರುಗಳು ಭಗವಂತನ ಸನ್ನಿಧಿಯಲ್ಲಿದ್ದಾಗ ಎಲ್ಲಾ ಸಂದರ್ಭಗಳಲ್ಲಿಯೂ ಶ್ರೀಕೃಷ್ಣನನ್ನೇ ನೆನೆಯುತ್ತಾ ತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಅವರುಗಳಿಗೆ ಕೃಷ್ಣನನ್ನು ಮರೆಯುವದೇ ಸಾಧ್ಯವಾಗುತ್ತಿರಲಿಲ್ಲ. ಹೀಗೆ ಭಗವಂತನು ಭಕ್ತರನ್ನು ಆಕರ್ಷಿಸುತ್ತಾ ಅವರ ದೃಷ್ಟಿಯಲ್ಲಿ ಮನೋಹರನೆನಿಸಿದ್ದಾನೆ. **(462)** ಈಗ **ಜಿತಕ್ರೋಧಃ** - ಎಂಬ ನಾಮವನ್ನು ನೋಡೋಣ. ಕೋಪವನ್ನು ಗೆದ್ದವನು- ಎಂಬರ್ಥ ದಲ್ಲಿ ಈ ನಾಮವು ಬಂದಿದೆ. ಭಗವಂತನು ತನ್ನ ಅವತಾರಲೀಲೆಯಲ್ಲಿ ಕೋಪವನ್ನು ಪ್ರಕಟಿಸಿರುವದೂ ಉಂಟು. ಆದರೆ ಆ ಕೋಪವು ಸಹ ಎದುರಾಳಿಯನ್ನು ಉದ್ಧಾರ ಮಾಡಿರುತ್ತದೆ. ಭಗವಂತನಿಂದ ಕೊಲ್ಲಲ್ಪಟ್ಟವರು ಕೂಡ ಸದ್ಗತಿಯನ್ನೇ ಹೊಂದಿದ್ದಾರೆ. ಆದ್ದರಿಂದ ಕೋಪವು ಭಗವಂತನ ಸ್ವಭಾವವಲ್ಲ. ಅದು ಕೇವಲ ನಟನೆ ಮಾತ್ರ - ಎಂದು ತಿಳಿಯಬೇಕು. ಹೀಗೆ ಅವನು ಜಿತಕ್ರೋಧ ನೆನಿಸಿದ್ದಾನೆ. **(463)** ಈಗ **ವೀರಬಾಹುಃ** - ಎಂಬ ನಾಮವನ್ನು ನೋಡೋಣ. ದೇವತೆಗಳ ಶತ್ರುಗಳನ್ನು ಸಂಹಾರ ಮಾಡಿ ವೇದಗಳ ಎಲ್ಲೆಕಟ್ಟನ್ನು ಸ್ಥಾಪಿಸಿರುತ್ತಾನಾಗಿ ಈ ನಾಮವು ಬಂದಿದೆ. ಭಗವಂತನು ಕ್ರೋಧವಶನಾಗಿ ಶತ್ರುಗಳನ್ನು ಸಂಹಾರ ಮಾಡಲಿಲ್ಲ. ಧರ್ಮವನ್ನು ಕಾಪಾಡುವುದಕ್ಕಾಗಿ, ದುಷ್ಟರನ್ನು ನಾಶಗೊಳಿಸಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ. **(464)** ಈಗ **ವಿದಾರಣಃ** - ಎಂಬ ನಾಮವನ್ನು ನೋಡೋಣ. ದುಷ್ಟರನ್ನು ಸೀಳಿಹಾಕುತ್ತಾನಾದ್ದರಿಂದ ಈ ನಾಮವು ಬಂದಿದೆ. ಭಗವಂತನಲ್ಲದೆ ಬೇರೆ ಯಾರಿಂದಲೂ ದುಷ್ಟರನ್ನು ನಿಗ್ರಹಿಸಲಾಗುವದಿಲ್ಲ. ದೇವತೆಗಳು ಕೂಡ ಅಶಕ್ತರಾಗಿ ಭಗವಂತನನ್ನೇ ಆಶ್ರಯಿಸಿ ತಮ್ಮ ಶತ್ರುಗಳನ್ನು ನಾಶಗೊಳಿಸಿದ್ದಾರೆ. ಹೀಗೆ ಭಗವಂತನು ವಿದಾರಣನೆನಿಸಿದ್ದಾನೆ.

**ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।**
**ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥50॥**

**(465)** ಈಗ **ಸ್ವಾಪನಃ** - ಎಂಬ ನಾಮವನ್ನು ನೋಡೋಣ. ಸ್ವಾಪ ಎಂದರೆ, ನಿದ್ರೆ ಎಂದರ್ಥ. ಭಗವಂತನಿಗೆ ನಿದ್ರೆಯೆಂಬುದಿಲ್ಲ.'ಅಜಮನಿದ್ರಮಸ್ವಪ್ನಮ್' ಎಂದು ಗೌಡಪಾದಕಾರಿಕೆಯಲ್ಲಿ ಹೇಳಿದೆ. ಆದರೆ ಜಗತ್ತಿನಲ್ಲಿರುವ ಎಲ್ಲಾ ಪ್ರಾಣಿಗಳಿಗೂ ನಿದ್ರೆಯನ್ನು ಭಗವಂತನೇ ದಯಪಾಲಿಸಿದ್ದಾನೆ. ಇದರಿಂದ ಜೀವರುಗಳಿಗೆ ಶ್ರಮಪರಿಹಾರವಾಗಿ ವಿಶ್ರಾಂತಿಯು ಲಭಿಸಿ ಮತ್ತೆ ಕರ್ಮದಲ್ಲಿ ಉತ್ಸಾಹವುಂಟಾಗುವದು. ಇದು ಭಗವಂತನ ಅನುಗ್ರಹವೇ ಆಗಿದೆ. ಆದ್ದರಿಂದ ಈ ನಾಮದಿಂದ ಸ್ತುತಿಸಲಾಗಿದೆ. **(466)**ಈಗ **ಸ್ವವಶಃ** - ಎಂಬ ನಾಮವನ್ನು ವಿಚಾರಮಾಡೋಣ. ಭಗವಂತನು ಸರ್ವಸ್ವತಂತ್ರನು. ಅವನು ಯಾರ ಅಧೀನನೂ ಅಲ್ಲ. ಆದರೆ ತನ್ನಲ್ಲಿಯೇ ತಾನು ಅಧೀನನಾಗಿದ್ದಾನೆ- ಎಂದರೆ ಜಗತ್ತಿನ ಎಲ್ಲೆಕಟ್ಟನ್ನು ಮೀರಿ ಸ್ವವಶನಾಗಿದ್ದಾನೆ. ಮತ್ತು ತನ್ನ ಇಚ್ಛಾನುಸಾರವಾಗಿ ಜಗತ್ತಿನ ಉತ್ಪತ್ತಿಸ್ಥಿತಿಲಯಗಳನ್ನು ನಿರ್ವಹಿಸುತ್ತಾನೆ. ಆದ್ದರಿಂದ ಸ್ವವಶನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(467)** ಈಗ **ವ್ಯಾಪೀ** - ಎಂಬ ನಾಮವನ್ನು ನೋಡೋಣ. ಎಲ್ಲೆಲ್ಲಿಯೂ ವ್ಯಾಪಿಸಿರುವನಾದ್ದರಿಂದ ಈ ನಾಮವು ಬಂದಿದೆ. ನೀರಿಗೆ ಸಕ್ಕರೆಯನ್ನು ಹಾಕಿ ಪಾನಕವನ್ನು ಮಾಡಿದರೆ ಆ ಸಕ್ಕರೆಯು ಹೇಗೆ ನೀರನ್ನೆಲ್ಲ ವ್ಯಾಪಿಸಿರುವದೋ, ಹಾಗೆ ಭಗವಂತನು ಸರ್ವವಸ್ತುಗಳನ್ನೂ ವ್ಯಾಪಿಸಿಕೊಂಡಿರುತ್ತಾನೆ. ಗೀತೆಯಲ್ಲಿ ಇದನ್ನು 'ಬಹಿರಂತಶ್ಚ ಭೂತಾನಾಮ್' ಎಂದು ವಿವರಿಸಿದೆ. **(468)** ಈಗ **ನೈಕಾತ್ಮಾ** - ಎಂಬ ನಾಮವನ್ನು ನೋಡೋಣ. ಆತ್ಮಾ ಎಂದರೆ ಸ್ವರೂಪವು. ಏಕಾತ್ಮಾ ಎಂದರೆ - ಜಗತ್ತಿಗೆಲ್ಲ ಒಬ್ಬನೇ ಸೂರ್ಯನಿರುವಂತೆ - ಭಗವಂತನು ಎಲ್ಲರ ಆತ್ಮನೇ ಆಗಿದ್ದಾನೆ. ಆದರೆ ಅವನು ಸೃಷ್ಟಿಯನ್ನೆಲ್ಲ ವ್ಯಾಪಿಸಿದ್ದರೂ ದೇವತೆ, ಮನುಷ್ಯ, ಪಶುಪ್ರಾಣಿಗಳು, ಹಕ್ಕಿಪಕ್ಷಿಗಳು, ಗಿಡಮರಗಳು - ಇತ್ಯಾದಿ ಎಲ್ಲವನ್ನೂ ಒಳಹೊಕ್ಕಿದ್ದು ಎಲ್ಲವೂ ತಾನೇ ಆಗಿದ್ದು ವ್ಯವಹಾರದೃಷ್ಟಿಯಲ್ಲಿ ನೈಕಾತ್ಮನೆನಿಸಿರುತ್ತಾನೆ- ಎಂದರೆ ನಾನಾರೂಪನಾಗಿದ್ದಾನೆ - ಎಂದಭಿಪ್ರಾಯ. **(469)** ಈಗ **ನೈಕಕರ್ಮಕೃತ್** - ಎಂಬ ನಾಮವನ್ನು ವಿಚಾರಮಾಡೋಣ. ಜಗತ್ತಿನ ಉತ್ಪತ್ತಿ - ಸ್ಥಿತಿ-ನಾಶಾದಿ ಎಲ್ಲಾ ಕರ್ಮಗಳನ್ನೂ ನಿರಾಯಾಸವಾಗಿ ನಿರ್ವಹಿಸುತ್ತಾನಾದ್ದರಿಂದಲೂ ವಿವಿಧ ಕರ್ಮಗಳೆಲ್ಲವೂ ಅವನ ಕರ್ತೃತ್ವದಲ್ಲಿಯೇ ನಡೆಯುವದರಿಂದಲೂ ಕರ್ತೃಸ್ವಾತಂತ್ರ್ಯವು ಅವನಲ್ಲಿ ಇರುವದರಿಂದಲೂ ಎಲ್ಲಾ ಕರ್ಮಗಳೂ ಅವನ ಇಚ್ಛೆಯಂತೆಯೇ ನಡೆಯುವದರಿಂದಲೂ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(470)** ಈಗ **ವತ್ಸರಃ** - ಎಂಬ ನಾಮವನ್ನು ನೋಡೋಣ. ವಸತಿ ಅಸ್ಮಿನ್ ಅಖಿಲಮ್ - ಎಂಬ

ವಿವರಣೆಯಂತೆ ಎಲ್ಲ ಜಗತ್ತೂ ಈ ಭಗವಂತನಲ್ಲಿಯೇ ವಾಸವಾಗಿರುವದರಿಂದ ಈ ನಾಮವು ಬಂದಿದೆ. ರೂಢ್ಯರ್ಥದಲ್ಲಿ ಕಾಲವಾಚಕವಾದ ಸಂವತ್ಸರ - ಎಂಬ ಪದದ ಮತ್ತೊಂದು ಪರ್ಯಾಯ ನಾಮವಾಗಿ ವತ್ಸರ - ಎಂಬ ಶಬ್ದವು ಬಳಸಲ್ಪಡುತ್ತದೆ. ಆಗ ಕಾಲರೂಪನಾಗಿ ಜಗತ್ತನ್ನು ಪರಿಪಾಲಿಸುವ ಭಗವಂತನು ಇಲ್ಲಿ ವತ್ಸರನೆಂದು ಸ್ತುತಿಸಲ್ಪಟ್ಟಿರುತ್ತಾನೆ - ಎಂದು ಹೇಳಬಹುದಾಗಿದೆ. **(471)** ಈಗ **ವತ್ಸಲಃ** - ಎಂಬ ನಾಮವನ್ನು ನೋಡೋಣ. ಭಕ್ತರಲ್ಲಿ ಸ್ನೇಹವುಳ್ಳಾತನಾದ್ದರಿಂದ ವತ್ಸಲನೆನಿಸಿದ್ದಾನೆ. ಪುರಾಣಗಳಲ್ಲಿ 'ಭಕ್ತವತ್ಸಲ'ನೆಂದು ಭಗವಂತನನ್ನು ಕರೆಯಲಾಗಿದೆ. ಭಕ್ತರ ವಿಷಯದಲ್ಲಿ ಭಗವಂತನಿಗೆ ಬಲು ಪ್ರೀತಿಯಿರುತ್ತದೆ. 'ಎಲೈ ನಾರದನೆ, ನನ್ನ ಭಕ್ತರು ಎಲ್ಲಿದ್ದುಕೊಂಡು ನನ್ನನ್ನು ಕುರಿತು ಸ್ತುತಿಸುತ್ತಾ ಇರುವರೋ ಅಲ್ಲಿಯೇ ನಾನು ಇರುತ್ತೇನೆ' ಎಂದು ಭಗವಂತನೇ ಹೇಳಿರುತ್ತಾನೆ. ಆದ್ದರಿಂದ ಈ ನಾಮವು ಅವನಿಗೆ ಅನ್ವರ್ಥವಾಗಿದೆ. **(472)** ಈಗ **ವತ್ಸೀ** - ಎಂಬ ನಾಮವನ್ನು ನೋಡೋಣ. ಭಗವಂತನು ಕೃಷ್ಣಾವತಾರ ಕಾಲಕ್ಕೆ ನಂದಗೋಕುಲದಲ್ಲಿದ್ದಾಗ ಕರುಗಳನ್ನು ಕಾಯುತ್ತಿದ್ದನು. ವತ್ಸ - ಎಂದರೆ ಕರು. ಆ ಕರುಗಳ ಗುಂಪನ್ನು ನೋಡಿಕೊಳ್ಳುತ್ತಿದ್ದನಾದ್ದರಿಂದ ಈ ನಾಮವು ಬಂದಿತು. ಇನ್ನು ಜಗತ್ತಿಗೇ ತಂದೆಯಾದ ಭಗವಂತನಿಗೆ ಸೃಷ್ಟಿಯಲ್ಲಿರುವ ಎಲ್ಲಾ ಪ್ರಾಣಿಗಳೂ ಮಾನವರೂ ಅವನಿಗೆ ಮಕ್ಕಳಂತೆ ಇರುವದರಿಂದಲೂ ವತ್ಸರು(ಮಕ್ಕಳು)ಗಳಿಗೆ ತಂದೆಯ ಸ್ಥಾನದಲ್ಲಿಟ್ಟುಕೊಂಡವನಾದ್ದರಿಂದಲೂ ವತ್ಸೀ ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(473)**ಈಗ **ರತ್ನಗರ್ಭಃ** - ಎಂಬ ನಾಮವನ್ನು ನೋಡೋಣ. ರತ್ನಗಳಿಗೆಲ್ಲ ಆಶ್ರಯಸ್ಥಾನವು ಸಮುದ್ರವು. ಆದ್ದರಿಂದ ಸಮುದ್ರಕ್ಕೆ ಈ ಹೆಸರು ಹೊಂದುತ್ತದೆ. ಇನ್ನು ಇದು ಭಗವಂತನ ವಿಭೂತಿ(ಮಹಿಮೆ)ಯೇ ಆದ್ದರಿಂದ ಈ ನಾಮದಿಂದಲೂ ಸ್ತುತಿಸಲಾಗಿದೆ. **(474)** ಈಗ **ಧನೇಶ್ವರಃ** - ಎಂಬ ನಾಮವನ್ನು ನೋಡೋಣ. ಧನ ಎಂದರೆ ಹಣ, ಭೂಮಿ, ಸುವರ್ಣಾದಿಗಳು, ಪೈರುಗಳು, ಗೋವು - ಮುಂತಾದವುಗಳೆಲ್ಲವೂ ಧನವೆನಿಸುತ್ತವೆ. ಈ ಎಲ್ಲಾ ವಸ್ತುಗಳನ್ನೂ ಅಪಾರವಾಗಿ ಹೊಂದಿರುವ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. ಧನೇಶ್ವರನನ್ನು ಕುಬೇರನೆಂದೂ ಕರೆಯುತ್ತಾರೆ. ಅವನೂ ಭಗವಂತನ ವಿಭೂತಿಯೇ ಆದ್ದರಿಂದ ಈ ನಾಮದಿಂದ ಸ್ತುತಿಸಲಾಗಿದೆ.

**ಧರ್ಮಗುಬ್ ಧರ್ಮಕೃತ್‌ಧರ್ಮಿ ಸದಸತ್‌ಕ್ಷರಮಕ್ಷರಮ್ ।**
**ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥51॥**

**(475)ಧರ್ಮಗುಬ್** -ಧರ್ಮವನ್ನು ಕಾಪಾಡುವದರಿಂದ ಶ್ರೀಮಹಾವಿಷ್ಣುವು ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. ಗೀತೆಯಲ್ಲಿ ಭಗವಂತನೇ ಹೇಳಿರುವಂತೆ -

ಜಗತ್ತಿನಲ್ಲಿ ಧರ್ಮವು ಕ್ಷೀಣವಾಗಿ ಅಧರ್ಮವು ಪ್ರಚುರವಾದಾಗ ಸಾಧುಗಳನ್ನು ಕಾಪಾಡುವದಕ್ಕೂ ಧರ್ಮವನ್ನು ದೃಢವಾಗಿ ಸ್ಥಾಪಿಸುವದಕ್ಕೂ ಹಾಗೂ ದುಷ್ಟರನ್ನು ನಾಶಗೊಳಿಸುವದಕ್ಕೂ ಒಂದೊಂದು ಯುಗದಲ್ಲಿಯೂ ಅವತಾರಮಾಡುತ್ತಾನೆ. ಆದ್ದರಿಂದ ಈ ನಾಮವು ಬಂದಿರುತ್ತದೆ. **(476)** ಈಗ **ಧರ್ಮಕೃತ್** - ಎಂಬ ನಾಮವನ್ನು ನೋಡೋಣ. ಭಗವಂತನು ಧರ್ಮಾಧರ್ಮಗಳ ಚೌಕಟ್ಟನ್ನು ಮೀರಿದ ವನಾದರೂ ಅವುಗಳಲ್ಲಿ ಅಧರ್ಮವನ್ನು ಹಿಮ್ಮೆಟ್ಟಿಸಿ ಧರ್ಮವನ್ನು ಅನುಷ್ಠಾನಮಾಡಿ ಜನರಿಗೆ ಆದರ್ಶನಾಗುತ್ತಾನೆ. ಆದ್ದರಿಂದ ಈ ನಾಮದಿಂದ ಸ್ತುತಿಸಿದೆ. **(477)** ಈಗ **ಧರ್ಮೀ** - ಎಂಬ ನಾಮವನ್ನು ನೋಡೋಣ. ಧರ್ಮಗಳನ್ನು ಧರಿಸಿರುವವನು ಧರ್ಮೀ ಎನಿಸುವನು. ಇಲ್ಲಿ ಧಾರಣೆ ಎಂದರೆ ಅನುಷ್ಠಾನಮಾಡುವಿಕೆ - ಎಂದರ್ಥ. ಭಗವಂತನು ಅವತಾರಮಾಡಿದಾಗಲೆಲ್ಲ ಆಯಾ ಸನ್ನಿವೇಶಗಳಿಗೆ ತಕ್ಕಂತೆ ಧರ್ಮಾನುಷ್ಠಾನವನ್ನು ಮಾಡಿ ಆದರ್ಶನಾಗಿರುತ್ತಾನೆ. ಉದಾಹರಣೆಗೆ ಕೃಷ್ಣಾವತಾರ ದಲ್ಲಿ ಗುರುಕುಲವಾಸವನ್ನು ಅಲ್ಪಕಾಲ ಮಾಡಿ ತನ್ನ ಗುರುಗಳಾದ ಸಾಂದೀಪಮುನಿ ಗಳಿಗೆ ಗುರುದಕ್ಷಿಣೆಯನ್ನು ಅವರ ಇಚ್ಛೆಯಂತೆ ಸಮರ್ಪಿಸಿರುತ್ತಾನೆ. ಆದ್ದರಿಂದ ಧರ್ಮೀ ಎಂದು ಸ್ತುತಿಸಿದೆ. **(478)** ಈಗ **ಸತ್**- ಎಂಬ ನಾಮವನ್ನು ನೋಡೋಣ. ಸತ್ ಎಂಬುದು ಇರುವವಸ್ತು - ಎಂಬರ್ಥದಲ್ಲಿದೆ. ಭಗವಂತನು ಯಾವಾಗಲೂ ಎಂದೆಂದಿಗೂ ಇರತಕ್ಕವನು. ಅವನಿಗೆ ನಾಶವಿಲ್ಲ. ಒಬ್ಬ ವ್ಯಕ್ತಿಗೆ ಸಿಹಿಯ ಮೇಲೆ ದ್ವೇಷವುಂಟಾಯಿತು. ಅದು ಕಬ್ಬಿನಲ್ಲಿರುವದೆಂತ ತಿಳಿದು ಹಿಂಡಿ ಬಿಸಾಡಿದನು. ಆದರೆ ಅದರ ರಸದಲ್ಲಿ ಸಿಹಿ ಅಡಗಿರಬಹುದೆಂತ ಕುಡಿದುನೋಡಿದನು. ಅದು ಸಿಹಿಯಾಗಿಯೇ ಇತ್ತು. ಮತ್ತೆ ಅದನ್ನು ನಾಶಮಾಡಲು ಚೆನ್ನಾಗಿ ಕುದಿಸಿದನು. ಅದು ಗಟ್ಟಿಯಾಗಿ ಬೆಲ್ಲವಾಯಿತು. ಅದನ್ನ ತಿಂದು ನೋಡಲು ಇನ್ನೂ ಸಿಹಿಯಾಗಿತ್ತು. ಹೀಗಾಗಿ ಸಿಹಿಯನ್ನು ನಾಶಮಾಡಲಾರದೆ ಸೋತನು. ಇದರಂತೆಯೇ ಭಗವಂತನು ಎಲ್ಲರ ಆತ್ಮ(ಒಳಗಿನ ಸ್ವರೂಪ)ನಾಗಿರುವದರಿಂದ ಅವನನ್ನು ಯಾರೂ ನಾಶಮಾಡ ಲಾರರು. ಗೀತೆಯಲ್ಲಿ ಹೇಳಿರುವಂತೆ ಸತ್(ಇರುವ ವಸ್ತು)ವಿಗೆ ಅಭಾವವಿಲ್ಲ. ಹಾಗೆಯೇ ಅಸತ್‌ಗೆ ಇರುವಿಕೆಯಿಲ್ಲ. ಆದ್ದರಿಂದ ಸದ್ರೂಪನಾದ ಆತ್ಮನನ್ನು ಇಲ್ಲಿ ಭಗವಂತನ ನಾಮವಾಗಿ ವರ್ಣಿಸಿದೆ. **(479)** ಈಗ **ಅಸತ್** - ಎಂಬ ನಾಮವನ್ನು ನೋಡೋಣ. ಇಲ್ಲದ ವಸ್ತುವನ್ನು ಅಸತ್ ಎನ್ನುತ್ತಾರೆ. ಹಾಗಾದರೆ ಭಗವಂತನು ಇಲ್ಲವೆ? ಎಂದರೆ ಹಾಗಲ್ಲ. ಅವನು ಯಾವಾಗಲೂ ಇದ್ದೇ ಇದ್ದಾನೆ. ಆದರೆ ನಾಮರೂಪವಿಶಿಷ್ಟನಾಗಿರುವಾಗ ನಾವು ಇದ್ದಾನೆ - ಎನ್ನುವೆವು. ಅವುಗಳಿಲ್ಲದಾಗ ಇಲ್ಲವೆನ್ನುವೆವು. ಇದು ವ್ಯವಹಾರದ ಸಂದರ್ಭವಾಯಿತು. ಆದರೆ ಪರಮಾರ್ಥದೃಷ್ಟಿ ಯಲ್ಲಿ ಅಸತ್ ಎಂಬುದು ಭ್ರಾಂತಿಯೇ ಆಗಿದೆ - ಎಂದರೆ ನಾಮರೂಪಗಳಾಗಿ

ತೋರುತ್ತದೆಯಾಗಿ ಇದೆ - ಎನ್ನುವೆವು. ಆದರೆ ತೋರಿದಾಗಲೂ ನಿಜವಾಗಿ ಇರುವದಿಲ್ಲ. ಅದನ್ನು ಅಸತ್ ಎನ್ನುವೆವು. ಈ ಸದಸತ್ತುಗಳ ಚೌಕಟ್ಟನ್ನು ಮೀರಿ ಮಾತುಮನಸ್ಸುಗಳಿಗೆ ಗೋಚರವಲ್ಲದ್ದೇ ಪರಬ್ರಹ್ಮವು. ಆಗ ಅದು 'ನೇತಿ ನೇತಿ' ಎನಿಸುತ್ತದೆ- ಎಂದರೆ ಇದೆ- ಇಲ್ಲ ಎಂಬ ಎರಡು ವಿಕಲ್ಪಗಳನ್ನೂ ಮೀರಿದ ಸ್ವರೂಪ ವಾಗಿರುತ್ತದೆ. ಆದ್ದರಿಂದ ಇಲ್ಲಿ ಅಸತ್ ಎಂದರೆ ಶೂನ್ಯ- ಎಂದರ್ಥವಲ್ಲ. ಸತ್‌ಗೆ ವಿಲಕ್ಷಣವಾಗದದ್ದು- ಎಂದರ್ಥ. ಈ ಸ್ಥಿತಿಯಲ್ಲಿ ವ್ಯವಹಾರವಿರುವದಿಲ್ಲ. ಏಕೆಂದರೆ ದ್ವೈತವಿದ್ದರೆ ಮಾತ್ರ ವ್ಯವಹಾರವಿರುತ್ತದೆ. ಅದ್ವೈತದಲ್ಲಿ ಬ್ರಹ್ಮವೊಂದೇ ಆಗಿದ್ದು ಸತ್ತೂ ಅಲ್ಲದೆ ಅಸತ್ತೂ ಅಲ್ಲದೆ ವ್ಯವಹಾರಾತೀತವಾಗಿರುತ್ತದೆ. ಗೀತೆಯಲ್ಲಿ 'ನ ಸತ್ ತನ್ನಾಸದುಚ್ಯತೇ' ಎಂದು ಭಗವಂತನೇ ಹೇಳಿದ್ದಾನೆ. ಇನ್ನು ಸತ್ ಎಂದರೆ ಪರಬ್ರಹ್ಮ ಎಂದೂ ಅಸತ್ ಎಂದರೆ ಅಪರಬ್ರಹ್ಮ (ನಾಮರೂಪಗಳುಳ್ಳದ್ದು) ಎಂದೂ ಅರ್ಥ ಮಾಡಬಹುದಾಗಿದೆ. ಆಗ ನಾವು ರೂಪವಿಶಿಷ್ಟವಾದ ಬ್ರಹ್ಮವು ನೆರಳಿನಂತೆ ತೋರಿಕೆ ಯಾದ್ದರಿಂದ ಅಸತ್ ಎನಿಸುವದು. ಆಗಲೂ ಮನುಷ್ಯನಿಲ್ಲದೆ ನೆರಳು ತೋರುವ ದಿಲ್ಲವಾಗಿ ಮತ್ತು ನೆರಳಿಲ್ಲದಾಗಲೂ ಮನುಷ್ಯನು ಇದ್ದೇ ಇರುತ್ತಾನಾಗಿ ಸತ್-ಅಸತ್ ಎಂಬ ಎರಡು ವಸ್ತುಗಳು ಇಲ್ಲ. ಸತ್ ಒಂದೇ ವಸ್ತು- ಎಂಬಿದು ಸಿದ್ಧಾಂತವು. ಅಸತ್ ಎಂಬುದು ಕಲ್ಪಿತ- ಎಂದು ನಿರ್ಣಯವಾಗುತ್ತದೆ. **(480)** ಈಗ **ಕ್ಷರಮ್** - ವೆಂಬ ನಾಮವನ್ನು ನೋಡೋಣ. ಇದು ಸೃಷ್ಟಿಯಲ್ಲಿರುವ ಜೀವರುಗಳನ್ನೆಲ್ಲ ಒಳಗೊಂಡಿರುತ್ತದೆ. ಭಗವಂತನು ಎಲ್ಲಾ ಜೀವರುಗಳಲ್ಲಿಯೂ ಪ್ರವೇಶಿಸಿರುವದರಿಂದ ಅವನನ್ನು ಈ ನಾಮದಿಂದ ಸ್ತುತಿಸಲಾಗಿದೆ. ಹೀಗೆ ಸರ್ವವ್ಯಾಪಿಯಾದ ನಾರಾಯಣನು ಕ್ಷರ-ಅಕ್ಷರ ರೂಪಗಳಿಂದ ಆವಿರ್ಭವಿಸಿ ಜಗತ್ತಿನ ಸಷ್ಟ್ಯಾದಿಗಳನ್ನು ನಿರ್ವಹಿಸಿದ್ದಾನಾದ್ದರಿಂದ ಕ್ಷರವೆನಿಸಿರುತ್ತಾನೆ. **(481)** ಈಗ **ಅಕ್ಷರಂ** - ಎಂಬ ನಾಮವನ್ನು ನೋಡೋಣ. ವೇದಾಂತದಲ್ಲಿ ಇದನ್ನು ಅವ್ಯಾಕೃತ ಎಂದು ಕರೆದಿದ್ದಾರೆ. ಇದೇ ಜಗತ್ತಿನ ಮೂಲವು. ವೃಕ್ಷಕ್ಕೆ ಬೀಜವು ಹೇಗೆ ಮೂಲವೋ ಹಾಗೆ ಭಗವಂತನು ಜಗತ್ಕಾರಣನಾಗಿದ್ದು ಅಕ್ಷರನೆನಿಸಿದ್ದಾನೆ. **(482)** ಈಗ **ಅವಿಜ್ಞಾತಾ** - ಎಂಬ ನಾಮವನ್ನು ನೋಡೋಣ. ಆತ್ಮಸ್ವರೂಪದಲ್ಲಿ ಯಾವ ಧರ್ಮವೂ ಇಲ್ಲವಾದರೂ ಸೃಷ್ಟಿ ಮುಂತಾದವು ಆತ್ಮನ ಆಧಾರ(ಆಶ್ರಯ)ದಲ್ಲಿಯೇ ನಡೆಯುತ್ತಿದೆ. ಈ ಕಾರಣದಿಂದ ಭಗವಂತನನ್ನು ಸೃಷ್ಟಿಕರ್ತನೆಂದು ಶಾಸ್ತ್ರದಲ್ಲಿ ವ್ಯವಹರಿಸಲಾಗಿದೆ. ಒಂದು ರೀತಿಯಿಂದ ಇದು ಸರಿಯೇ ಆಗಿದ್ದು ಸೃಷ್ಟಿಗೆ ಬೇಕಾದ ಪೂರ್ಣವಿಜ್ಞಾನವು ಭಗವಂತನಲ್ಲಿರುವದರಿಂದ ವಿಜ್ಞಾತೃವೆನಿಸುತ್ತಾನೆ. ಇದು ಔಪಾಧಿಕವಾಗಿ ಸಿದ್ಧವಾಗಿದೆ. ಆದರೆ ಆ ಭಗವಂತನು ನಿಜವಾಗಿ ವಿಜ್ಞಾತೃವಲ್ಲ. ಏಕೆಂದರೆ ಅವನಲ್ಲಿ ಯಾವ ಕ್ರಿಯೆಗಳೂ ಇಲ್ಲ. ಆದ್ದರಿಂದ ಅವಿಜ್ಞಾತನೆಂದು ಸ್ತುತಿಸಲ್ಪಟ್ಟಿದ್ದಾನೆ. **(483)** ಈಗ

**ಸಹಸ್ರಾಂಶುಃ** - ಎಂಬ ನಾಮವನ್ನು ನೋಡೋಣ. ಸಹಸ್ರ- ಎಂದರೆ ಅಪರಿಮಿತ- ಎಂದರ್ಥ. ಇಂಥ ಅಪರಿಮಿತವಾದ ತೇಜಸ್ಸುಳ್ಳವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(484)** ಈಗ **ವಿಧಾತಾ** - ಎಂಬ ನಾಮವನ್ನು ನೋಡೋಣ. ಭಗವಂತನು ಅಪರಿಮಿತವಾದ ಬಲವುಳ್ಳವನಾಗಿದ್ದು ಆದಿಶೇಷ, ಎಂಟು ದಿಗ್ಗಜಗಳು - ಇವುಗಳನ್ನು ಧರಿಸಿಕೊಂಡಿದ್ದು ವಿಧಾತ (ವಿಶೇಷವಾದ ಅಪೂರ್ವವೂ ಅಪಾರವೂ ಆದ ಬಲವುಳ್ಳವನಾಗಿ)ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(485)** ಈಗ **ಕೃತಲಕ್ಷಣಃ** - ಎಂಬ ನಾಮವನ್ನು ನೋಡೋಣ. ನಿತ್ಯನಾದ ಚೈತನ್ಯಸ್ವರೂಪವುಳ್ಳವನಾಗಿದ್ದು ಅನೇಕ ಶಾಸ್ತ್ರಗಳನ್ನು ರಚನೆ ಮಾಡಿರುವನಾದ್ದರಿಂದ ಈ ನಾಮವು ಬಂದಿದೆ. ''ವೇದಶಾಸ್ತ್ರಗಳೆಲ್ಲವೂ ಜನಾರ್ದನನಾದ ವಿಷ್ಣುವಿನಿಂದಲೇ ಹೊರಬಂದಿವೆ''- ಎಂದು ಮಹಾಭಾರತದಲ್ಲಿದೆ. ಇನ್ನು ಸೃಷ್ಟಿಯಲ್ಲಿರುವ ವಸ್ತುಗಳಲ್ಲಿ ಸಜಾತೀಯ - ವಿಜಾತೀಯ ಭೇದಗಳನ್ನುಂಟುಮಾಡಿ ಒಂದು ವಸ್ತುವು ಮತ್ತೊಂದರಿಂದ ಭಿನ್ನವಾಗಿದೆ - ಎಂಬ ವಿಂಗಡವನ್ನುಂಟುಮಾಡಿ ವ್ಯವಹಾರಕ್ಕೆ ಹೊಂದಿಸಿರುವ ಕಾರ್ಯವನ್ನು ಕೈಗೊಂಡಿರುವನಾದ್ದರಿಂದ ಈ ನಾಮವು ಬಂದಿದೆ - ಎನ್ನಬಹುದು. ಹಾಗೆಯೇ ಭಗವಂತನು ವಿಷ್ಣುವಿನ ಅವತಾರಕಾಲಕ್ಕೆ ಶ್ರೀವತ್ಸವೆಂಬ ಒಡವೆಯನ್ನು ಎದೆಯಲ್ಲಿ ಧರಿಸಿ ಲಕ್ಷಣವಾಗಿ ಸುಂದರವಾಗಿ ಕಾಣಿಸಿಕೊಂಡದ್ದರಿಂದಲೂ ಕೃತಲಕ್ಷಣನೆನಿಸಿರುತ್ತಾನೆ.

**ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ ।**
**ಆದಿದೇವೋ ಮಹಾದೇವೋ ದೇವೇಶೋ ದೇವಭೃದ್‌ಗುರುಃ ॥52॥**

**(486)** ಈಗ **ಗಭಸ್ತಿನೇಮಿಃ** - ಎಂಬ ನಾಮವನ್ನು ನೋಡೋಣ. ಗಭಸ್ತಿ- ಎಂದರೆ ಕಿರಣಗಳು. ಸೂರ್ಯನ ಕಿರಣಗಳು ಜಗತ್ತಿನ ಸ್ಥಿತಿಗೆ(ಬದುಕಿಗೆ) ಕಾರಣವಾಗಿವೆ. ಭಗವಂತನು ಸೂರ್ಯರೂಪದಿಂದ ಇದ್ದುಕೊಂಡು ಸ್ಥಾವರಜಂಗಮ ರೂಪವಾದ ಜೀವರುಗಳ ಬದುಕುವಿಕೆಗೆ ಕಾರಣನಾಗಿದ್ದಾನೆ. ಸೂರ್ಯನ ಬೆಳಕಿಲ್ಲ ದಿದ್ದರೆ ಜೀವರುಗಳ ಬದುಕೇ ನಡೆಯಲಾರದು. ಆದ್ದರಿಂದ ಜಗತ್ತಿನ ಎಲ್ಲಾ ಜೀವಿ ಗಳ ಬಾಳುವಿಕೆಗೆ ಮೂಲನಾದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(487)** ಈಗ **ಸತ್ತ್ವಸ್ಥಃ** -ಎಂಬ ನಾಮವನ್ನು ನೋಡೋಣ. ನಿರ್ಮಲವೂ ಪ್ರಕಾಶಕವೂ ಆದ ಸತ್ತ್ವಗುಣವು(ರಜೋಗುಣದೊಡನೆ)ಸೃಷ್ಟಿಕ್ರಿಯೆಗೆ ಆಧಾರವಾಗಿದೆ. ಇಂಥ ಸತ್ತ್ವಗುಣ ದಲ್ಲಿ ನೆಲೆಸಿರುವ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(488)** ಈಗ **ಸಿಂಹಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಜ್ಞಾನಶಕ್ತಿಬಲ ವೀರ್ಯತೇಜಸ್ಸುಗಳಿಂದ ಅಪರಿಮಿತಪರಾಕ್ರಮವುಳ್ಳವನಾಗಿದ್ದು ಮೃಗಗಳಲ್ಲಿ ಸಿಂಹವು ಹೇಗೋ ಹಾಗೆ ಅಗ್ರಗಣ್ಯನಾಗಿರುತ್ತಾನೆ. ಮತ್ತು ಭಗವಂತನನ್ನು ಋಷಿ ಮುನಿಗಳು

ನೃಸಿಂಹನೆಂದೂ ಕರೆಯುತ್ತಾರೆ. ನೃಸಿಂಹನನ್ನೇ ಸಿಂಹನೆಂದು ಇಲ್ಲಿ ಕರೆದಿದೆ. **(489)** ಈಗ **ಭೂತಮಹೇಶ್ವರಃ** - ಎಂಬ ನಾಮವನ್ನು ನೋಡೋಣ. ಭೂತಗಳಿಗೆ ಎಂದರೆ ಸ್ಥಾವರಜಂಗಮಾತ್ಮಕವಾದ ಎಲ್ಲಾ ಜೀವರುಗಳಿಗೂ ಅತ್ಯಂತ ಮಿಗಿಲಾದ ಒಡೆಯನಾಗಿರುತ್ತಾನಾಗಿ ಭೂತಮಹೇಶ್ವರನೆಂದು ಸ್ತುತಿಸಿದೆ. **(490)** ಈಗ **ಆದಿದೇವಃ** - ನೆಂಬ ನಾಮವನ್ನು ನೋಡೋಣ. ಇದು ಒಮ್ಮೆ 334ನೆಯ ನಾಮವಾಗಿ ಹಿಂದೆ ಬಂದಿರುತ್ತದೆ. ಇಲ್ಲಿ ಈ ನಾಮವನ್ನು ಭಾಷ್ಯಕಾರರು ಹೀಗೆ ವಿವರಿಸಿದ್ದಾರೆ. ಎಲ್ಲಾ ಜೀವರುಗಳನ್ನು ಅದಾನ (ಸ್ವೀಕಾರ) ಮಾಡಿ ತನ್ನ ವಿಶ್ವರೂಪದಲ್ಲಿ ಇಟ್ಟುಕೊಳ್ಳುವದರಿಂದ ಆದಿದೇವನೆನಿಸಿರುತ್ತಾನೆ. **(491)** ಈಗ **ಮಹಾದೇವಃ** - ನೆಂಬ ನಾಮವನ್ನು ನೋಡೋಣ. ಎಲ್ಲಾ ಪ್ರಾಪಂಚಿಕವಸ್ತುಗಳನ್ನೂ ಪರಿತ್ಯಜಿಸಿ ಆತ್ಮಜ್ಞಾನವೆಂಬ ಮಹತ್ತಾದ ಐಶ್ವರ್ಯದಲ್ಲಿ ನೆಲೆನಿಂತಿರುವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(492)** ಈಗ **ದೇವೇಶಃ** - ನೆಂಬ ನಾಮವನ್ನು ನೋಡೋಣ. ದೇವತೆಗಳಿಗೆಲ್ಲ ಒಡೆಯನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. ದೇವತೆಗಳೆಲ್ಲರಿಗೂ ಅವರವರ ಅಂತಸ್ತಿಗೆ ತಕ್ಕಂತೆ ಒಡತನವಿರುತ್ತದೆ. ಆದರೆ ಅವರೆಲ್ಲರಿಗೂ ಮಿಗಿಲಾದ ಹಾಗೂ ಜಗತ್ತಿಗೆಲ್ಲ ಒಡೆಯನಾದ ಭಗವಂತನು ಇಲ್ಲಿ ದೇವೇಶನೆನಿಸಿರುತ್ತಾನೆ. **(493)** ಈಗ **ದೇವಭೃದ್ಗುರುಃ** - ಎಂಬ ನಾಮವನ್ನು ನೋಡೋಣ. ದೇವತೆಗಳನ್ನೆಲ್ಲ ಕಾಪಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. ಇನ್ನು ದೇವತೆಗಳ ಒಡೆಯನು ಇಂದ್ರನಲ್ಲವೆ? ಎಂದರೆ ನಿಜ; ಆದರೆ ಆ ಇಂದ್ರನಿಗೂ ಮಿಗಿಲಾದವನಾಗಿದ್ದು ಅವನಿಗೂ ತತ್ತ್ವವನ್ನು ಉಪದೇಶಮಾಡಿರುತ್ತಾನಾದ್ದರಿಂದ ದೇವಭೃದ್ ಗುರುವೆನಿಸಿದ್ದಾನೆ.

**ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।**
**ಶರೀರಭೂತಭೃದ್ಭೋಕ್ತಾ ಕಪೀಂದ್ರೋ ಭೂರಿದಕ್ಷಿಣಃ ॥53॥**

**(494)ಉತ್ತರಃ** - ಜನ್ಮಸಂಸಾರಬಂಧಗಳನ್ನು ದಾಟಿರುತ್ತಾನಾದ್ದರಿಂದ ಉತ್ತರನೆನಿಸಿದ್ದಾನೆ. ಅಥವಾ ಎಲ್ಲಕ್ಕಿಂತಲೂ ಉತ್ಕೃಷ್ಟ(ಶ್ರೇಷ್ಠ)ನು- ಎಂಬ ಅರ್ಥದಲ್ಲಿಯೂ ಈ ನಾಮವು ಬಂದಿದೆ. ಋಗ್ವೇದದಲ್ಲಿ "ವಿಶ್ವಸ್ಮಾದಿಂದ್ರ ಉತ್ತರಃ" ಎಂದು ಭಗವಂತನನ್ನು ಸ್ತುತಿಸಿದೆ. **(495)** ಈಗ **ಗೋಪತಿಃ** - ಎಂಬ ನಾಮವನ್ನು ನೋಡೋಣ. ಕೃಷ್ಣಾವತಾರದಲ್ಲಿ ಭಗವಂತನು ಗೋಪವೇಷಧರನಾಗಿ ಗೋವುಗಳನ್ನು ಕಾಪಾಡಿದನು. ಆದ್ದರಿಂದ ಈ ನಾಮವು ಬಂದಿದೆ. ಅಥವಾ ಗೋಶಬ್ದಕ್ಕೆ ಭೂಮಿ - ಎಂಬರ್ಥವೂ ಇದೆ. ಆಗ ಭೂಪತಿಯೆನಿಸಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(496)** ಈಗ **ಗೋಪ್ತಾ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಎಲ್ಲಾ ಪ್ರಾಣಿಗಳನ್ನೂ ಮನುಷ್ಯರು, ದೇವತೆಗಳು, ಎಲ್ಲರನ್ನೂ ಕಾಪಾಡುವವನಾದ್ದರಿಂದ ಗೋಪ್ತಾ

ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(497)** ಈಗ **ಜ್ಞಾನಗಮ್ಯಃ** - ಎಂಬ ನಾಮವನ್ನು ನೋಡೋಣ. ಜ್ಞಾನದಿಂದ ಮಾತ್ರವೇ ಅರಿಯಲ್ಪಡುವವನು - ಎಂಬರ್ಥದಲ್ಲಿ ಜ್ಞಾನಗಮ್ಯನೆನಿಸಿದ್ದಾನೆ. ಆದರೆ ಕರ್ಮಗಳಿಂದಾಗಲಿ ಕರ್ಮಜ್ಞಾನ ಸಮುಚ್ಚಯ ದಿಂದಾಗಲಿ ತಿಳಿದುಬರುವವನಲ್ಲ. ಕೇವಲ ಜ್ಞಾನಮಾತ್ರದಿಂದಲೇ ಪಡೆಯಲು ಸಾಧ್ಯನಾದವನು - ಎಂದಭಿಪ್ರಾಯ. **(498)** ಈಗ **ಪುರಾತನಃ** - ಎಂಬ ನಾಮವನ್ನು ನೋಡೋಣ. ಭಗವಂತನು ಕಾಲಚಕ್ರವನ್ನು ಮೀರಿದವನೂ ಭೂತ, ಭವ್ಯ, ವರ್ತಮಾನಕಾಲಗಳಿಗೆಲ್ಲ ಒಡೆಯನೂ ಆಗಿದ್ದು ಕಾಲಾತೀತನಾದ್ದರಿಂದ ಪುರಾತನನೆಸಿದ್ದಾನೆ. **(499)** ಈಗ **ಶರೀರ ಭೂತಭೃತ್** - ಎಂಬ ನಾಮವನ್ನು ನೋಡೋಣ. ಜೀವರುಗಳು ಧರಿಸಿರುವ ದೇವ- ಮನುಷ್ಯ-ಪಶು -ಪಕ್ಷ್ಯಾದಿ ಶರೀರಗಳನ್ನು ಒಳಹೊಕ್ಕು ಅವುಗಳ ವ್ಯಾಪಾರಕ್ಕೆ ಪ್ರಾಣರೂಪದಿಂದ ಆಧಾರನಾಗಿದ್ದು ಕೊಂಡು ಅವುಗಳ ಆತ್ಮನಾಗಿರುವದರಿಂದ ಈ ನಾಮವು ಬಂದಿದೆ. **(500)** ಈಗ **ಭೋಕ್ತಾ** - ಎಂಬ ನಾಮವನ್ನು ನೋಡೋಣ. ಪರಮಾನಂದವನ್ನು ಆಯಾ ದೇಹೋಪಾಧಿಗಳಲ್ಲಿ ಅನುಭವಿಸುತ್ತಾ ಜಗತ್ತಿನ ಎಲ್ಲಾ ಭೋಗಗಳನ್ನೂ ಸವಿಯುತ್ತಾ ನಾದ್ದರಿಂದ ಈ ನಾಮವು ಬಂದಿದೆ.

**ಇಲ್ಲಿಗೆ ಐದನೆಯ ಶತಕವು ಮುಗಿಯಿತು.**

Z Z Z

# ಷಷ್ಠಶತಕ

**(501)** ಈಗ **ಕಪೀಂದ್ರಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಕಪಿ - ಎಂದರೆ ವರಾಹನೆಂದು ಅರ್ಥ. ಭಗವಂತನು ವರಾಹನಾಗಿ ಅವತಾರಮಾಡಿ ಭೂಮಿಯನ್ನು ಮೇಲೆತ್ತಿ ಉದ್ಧಾರಮಾಡಿರುತ್ತಾನೆ. ಅಥವಾ ಕಪಿ ಎಂದರೆ ವಾನರ ಒಡೆಯನು(ಕೋತಿ) ಎಂದರ್ಥ ಮಾಡಿದರೆ ಕಪಿಗಳಿಗೆ ಒಡೆಯನು- ಎಂದು ಅರ್ಥ. ಆಗ ಶ್ರೀರಾಮನು ಎಂದು ಅಭಿಪ್ರಾಯ. **(502) ಭೂರಿದಕ್ಷಿಣಃ** - ಎಂಬ ನಾಮವನ್ನು ನೋಡೋಣ. ಯಜ್ಞದಲ್ಲಿ ಧಾರಾಳವಾಗಿ ದಕ್ಷಿಣೆಯನ್ನು ಕೊಡಬೇಕು. ಆಗ ಯಜ್ಞವು ಪರಿಪೂರ್ಣವಾಗುತ್ತದೆ. ಇಂಥ ಯಜ್ಞಕ್ಕೆ ಪ್ರಧಾನದೇವತೆಯೆನಿಸಿದ ಶ್ರೀಮಹಾವಿಷ್ಣುವನ್ನು ಭೂರಿದಕ್ಷಿಣನೆಂದು ಸ್ತುತಿಸಿದೆ.

**ಸೋಮಪೋಽಮೃತಪಃ ಸೋಮಃ ಪುರುಜಿತ್ ಪುರುಸತ್ತಮಃ ।**
**ವಿನಯೋ ಜಯಃ ಸತ್ಯಸಂಧೋ ದಾಶಾರ್ಹಃ ಸಾತ್ವತಾಂ ಪತಿಃ ॥54॥**

**(503) ಸೋಮಪಃ** - ಎಲ್ಲಾ ವೈದಿಕಯಜ್ಞಗಳಲ್ಲಿಯೂ ಆಯಾ ಯಜ್ಞ ದೇವತೆಗಳ ರೂಪದಿಂದ ಸೋಮರಸವನ್ನು ಪಾನಮಾಡುತ್ತಾನಾದ್ದರಿಂದ ಸೋಮಪ ನೆನಿಸಿರುತ್ತಾನೆ. ಧರ್ಮದ ಚೌಕಟ್ಟನ್ನು ಲೋಕಕ್ಕೆ ತೋರಿಸುವದಕ್ಕಾಗಿ ಭಗವಂತನು ಸೋಮಪಾನಮಾಡಿ ಮೇಲು ಪಂಕ್ತಿಯಾಗಿರುತ್ತಾನೆ - ಎಂದರ್ಥ. ಅಥವಾ ಸೋಮ ರೂಪದಿಂದ (ಚಂದ್ರನೆನಿಸಿ) ಗಿಡಮರಗಳನ್ನು ಪೋಷಣೆಮಾಡುತ್ತಾನಾದ್ದರಿಂದಲೂ ಸೋಮಪನೆನಿಸಿದ್ದಾನೆ - ಎಂದೂ ಅರ್ಥಮಾಡಬಹುದು. **(504)** ಈಗ **ಅಮೃತಪಃ** - ಎಂಬ ನಾಮವನ್ನು ನೋಡೋಣ. ದೇವಾಸುರರು ಕ್ಷೀರಸಮುದ್ರವನ್ನು ಕಡೆದಾಗ ಹುಟ್ಟಿದ ಅಮೃತವನ್ನು ಹಂಚುವ ನೆಪದಲ್ಲಿ ಭಗವಂತನು ದೇವತೆಗಳಿಗೆ ಅಮೃತ ಪಾನಮಾಡಿಸಿ ತಾನೂ ಪಾನಮಾಡಿದನು. ಆದ್ದರಿಂದ ಈ ನಾಮವು ಬಂದಿದೆ. **(505)** ಈಗ **ಸೋಮಃ** - ಎಂಬ ನಾಮವನ್ನು ನೋಡೋಣ. ಗೀತೆಯಲ್ಲಿ "ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕ" ಎಂದು ಭಗವಂತನೇ ಹೇಳಿರುವಂತೆ ಗಿಡಮರಗಳಿಂದ ದೊರಕುವ ಆಹಾರಪದಾರ್ಥಗಳೆಲ್ಲವೂ ಭಗವಂತನ ಕೃಪಾ(ರಸ)ದಿಂದಲೇ ಚಂದ್ರನ ಮೂಲಕ ಜೀವರುಗಳಿಗೆ ದೊರಕುತ್ತಿದೆಯಾಗಿ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. ಇನ್ನು ಉಮಾ(ಪಾರ್ವತಿ)ದೇವಿಯ ಒಡನೆಯೇ ಇದ್ದು ಆಕೆಯಿಂದ ಅಭಿನ್ನನಾಗಿರುವದರಿಂದ ಸೋಮನೆನಿಸಿರುತ್ತಾನೆ. ಉಮಯಾ ಸಹಿತಃ ಸೋಮಃ - ಎಂಬ ವ್ಯುತ್ಪತ್ತಿಯಂತೆ ಈ ಅರ್ಥವನ್ನು ಮಾಡಬಹುದು.

**(506)** ಈಗ **ಪುರುಜಿತ್** -ಎಂಬ ನಾಮವನ್ನು ನೋಡೋಣ. ದೇವಾಸುರರ ಯುದ್ಧಕಾಲಕ್ಕೆ ಶತ್ರುಗಳ ಗುಂಪಿನ ಬಹಳ ಶರೀರಗಳನ್ನು ಗೆದ್ದಿರುತ್ತಾನಾಗಿ ಈ ನಾಮವು ಬಂದಿದೆ. **(507)** **ಪುರುಸತ್ತಮಃ** - ಪುರು - ಎಂದರೆ ವಿಶ್ವರೂಪದಿಂದ ಬಹಳ ಶತ್ರುಸಮೂಹವನ್ನು ಜಯಿಸುತ್ತಾನಾದ್ದರಿಂದ ಪುರುಸತ್ತಮ(ಶ್ರೇಷ್ಠ)ನೆನಿಸಿರುತ್ತಾನೆ. **(508)** **ವಿನಯಃ** - ಎಂಬ ನಾಮವನ್ನು ನೋಡೋಣ. ಭಾಷ್ಯಕಾರರ ವ್ಯಾಖ್ಯಾನ ದಂತೆ ದುಷ್ಟರಾದವರಿಗೆ ದಂಡ(ಶಿಕ್ಷೆಯನ್ನು)ವನ್ನು ವಿಧಿಸುತ್ತಾನಾದ್ದರಿಂದ ವಿನಯು ನೆಂದು ಅರ್ಥಮಾಡಲಾಗಿದೆ. ಆದರೆ ವಿನಯುವೆಂಬ ಸದ್ಗುಣಸಂಪನ್ನನು ಎಂದೂ ಅರ್ಥಮಾಬಹುದು. **(509)** ಈಗ **ಜಯಃ** - ಎಂಬ ನಾಮವನ್ನು ವಿಚಾರ ಮಾಡೋಣ. ಭಗವಂತನು ಸಮಸ್ತ ಜೀವರುಗಳನ್ನೂ ಗೆದ್ದು ಎಲ್ಲರಿಗೂ ಒಡೆಯ ನಾಗಿದ್ದು ಜಯನೆನಿಸಿರುತ್ತಾನೆ. **(510)** ಈಗ **ಸತ್ಯಸಂಧಃ** - ನೆಂಬ ನಾಮವನ್ನು ನೋಡೋಣ. ರಾಮಾವತಾರದ ಕಾಲಕ್ಕೆ ಭಗವಂತನು ಸತ್ಯವನ್ನೇ ಆಶ್ರಯಿಸಿ ಎಲ್ಲಾ ಸಂದರ್ಭಗಳಲ್ಲಿಯೂ ಸತ್ಯವನ್ನು ಪರಿಪಾಲಿಸಿರುತ್ತಾನೆ. ಆದ್ದರಿಂದ ಸತ್ಯಸಂಧನೆನಿಸಿದ್ದಾನೆ. **(511)** ಈಗ **ದಾಶಾರ್ಹಃ** - ಎಂಬ ನಾಮವನ್ನು ನೋಡೋಣ. ದಾಶ - ಎಂದರೆ ದಾನವು - ಎಂದರ್ಥ ಮಾಡಿದರೆ ಅದಕ್ಕೆ ತಕ್ಕವನಾದ್ದರಿಂದ (ಅರ್ಹನಾದ್ದರಿಂದ) ದಾಶಾರ್ಹನೆನಿಸಿದ್ದಾನೆ. ಅಥವಾ ಚಂದ್ರವಂಶದ ರಾಜರುಗಳಲ್ಲಿ ದಾಶಾರ್ಹನೆಂಬುವನು ಒಬ್ಬ ಯಾದವನು. ಅವನ ಕುಲದಲ್ಲಿ ಹುಟ್ಟಿದವನಾದ್ದರಿಂದ ಶ್ರೀಕೃಷ್ಣನನ್ನು ದಾಶಾರ್ಹ ನೆಂದು ಸ್ತುತಿಸಿದೆ. **(512)** ಈಗ **ಸಾತ್ವತಾಂ ಪತಿಃ** -ಎಂಬ ನಾಮವನ್ನು ನೋಡೋಣ. ಸಾತ್ವತ-ಎಂಬುದು ಒಂದು ತಂತ್ರವು. ತಂತ್ರವೆಂದರೆ ಮುದ್ರೆ, ನ್ಯಾಸ- ಮುಂತಾದವು ಗಳಿಂದ ಮಂತ್ರವನ್ನು ಸಾಧಕನು ಶರೀರದಲ್ಲಿ ಧರಿಸಿರುವಿಕೆ- ಎಂದರ್ಥ. ಆದರೆ ಇಲ್ಲಿ ಸಾತ್ವತ - ಎಂಬ ಹೆಸರಿನ ತಂತ್ರಸಂಪ್ರದಾಯಕ್ಕೆ ಸೇರಿದವರೆಲ್ಲರಿಗೂ ಭಗವಂತನು ತನ್ನ ಕೃಷ್ಣಾವತಾರ ಕಾಲಕ್ಕೆ ಒಡೆಯ(ಯಜಮಾನ)ನಾಗಿದ್ದುದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ

**ಜೀವೋ ವಿನಯಿತಾ ಸಾಕ್ಷೀ ಮುಕುಂದೋಽಮಿತವಿಕ್ರಮಃ ।**
**ಅಂಭೋನಿಧಿರನಂತಾತ್ಮಾ ಮಹೋದಧಿಶಯೋಽನ್ತಕಃ ॥55॥**

**(513)** **ಜೀವಃ** - ಎಂಬ ನಾಮವನ್ನು ನೋಡೋಣ. "ಜೀವ ಪ್ರಾಣಧಾರಣೇ" ಎಂಬ ಧಾತ್ವರ್ಥದಂತೆ ಉಸಿರಾಡುವ ಸ್ಥಾವರಜಂಗಮಜೀವರುಗಳೆಲ್ಲರೂ ಪ್ರಾಣಿ ಗಳೆನಿಸುತ್ತಾರೆ. ಈ ಎಲ್ಲಾ ಜೀವರುಗಳಿಗೂ ಜೀವನಾಗಿರುವದರಿಂದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. ವಿದ್ಯುದ್ದೀಪಗಳಿಗೆಲ್ಲ ವಿದ್ಯುಚ್ಛಕ್ತಿಯೇ ಮೂಲವಾಗಿದೆ. ಹಾಗೆಯೇ ಭಗವಂತನು ಚರಾಚರಪ್ರಾಣಿಗಳಿಗೆಲ್ಲ ಆಧಾರನಾಗಿದ್ದು ಉಪಾಧಿ

ಸಂಬಂಧದಿಂದ ಜೀವನೆನಿಸಿದ್ದಾನೆ. ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದೇನೆ. **(514)** ಈಗ **ವಿನಯಿತಾ ಸಾಕ್ಷೀ** -ಎಂಬ ನಾಮವನ್ನು ನೋಡೋಣ. ಪ್ರಜೆಗಳಲ್ಲಿರುವ 'ವಿನಯ'ವೆಂಬ ಗುಣವನ್ನು ನೇರಾಗಿ ನೋಡುತ್ತಾನಾದ್ದರಿಂದ ಈ ನಾಮವು ಬಂದಿದೆ. ಸಾಧುಸಜ್ಜನರಲ್ಲಿಯೂ ವಿದ್ಯಾವಂತರಲ್ಲಿಯೂ ವಿನಯವೆಂಬ ಗುಣವು ಇರುತ್ತದೆ. ಇಂಥವರನ್ನು ಸಮಾಜದಲ್ಲಿ ಪೂಜ್ಯರೆಂದು ಕಾಣಲಾಗುತ್ತದೆ. ಇದು ಭಗವಂತನ ವಿಭೂತಿಯೇ ಆಗಿದ್ದು ಅವನನ್ನು ಈ ನಾಮದಿಂದ ಸ್ತುತಿಸಲಾಗಿದೆ. **(515)** ಈಗ **ಮುಕುಂದಃ** - ನೆಂಬ ನಾಮವನ್ನು ನೋಡೋಣ. ಮುಕ್ತಿದ (ಮುಕ್ತಿಯನ್ನು ಕೊಡುವವನು) ಎಂಬರ್ಥದಲ್ಲಿ ಈ ನಾಮವು ಬಂದಿದೆ. ನಾಲ್ಕು ಪುರುಷಾರ್ಥಗಳಲ್ಲಿ ಪರಮಪುರುಷಾರ್ಥವೆನಿಸಿರುವ ಮುಕ್ತಿಯನ್ನು ದಯಪಾಲಿಸುವವನು ಭಗವಂತನೊಬ್ಬನೇ ಸರಿ. ಆದ್ದರಿಂದ ಮುಕ್ತಿಪ್ರದನಾದ ಭಗವಂತನನ್ನು "ಮುಕ್ತಿದ" ಎಂದು ಕರೆಯುವಲ್ಲಿ "ಮುಕುಂದ"ನೆಂದು ಕರೆದಿದೆ. ಪುರುಷಾರ್ಥಗಳಲ್ಲಿ ಮುಕ್ತಿಯು ಪರಮಪುರುಷಾರ್ಥವೆನಿಸಿದೆ. ಆದ್ದರಿಂದ ಮುಕ್ತಿಪ್ರದನೇ ಮುಕುಂದನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(516)** ಈಗ **ಅಮಿತ ವಿಕ್ರಮಃ** - ಎಂಬ ನಾಮವನ್ನು ನೋಡೋಣ. ಭಗವಂತನು ವಾಮನಾವತಾರ ಕಾಲಕ್ಕೆ ತ್ರಿವಿಕ್ರಮನಾಗಿ, ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳನ್ನೆಲ್ಲ ವ್ಯಾಪಿಸಿರುವ ವಿರಾಟ್‌ಶರೀರವುಳ್ಳವನಾಗಿ ತನ್ನ ಪಾದಗಳನ್ನು ಇಟ್ಟು ಬಲಿರಾಜನನ್ನು ಪಾತಾಳಕ್ಕೆ ಕಳುಹಿಸಿದನು. ಇಂಥ ಅಪರಿಮಿತವಾದ ಪರಾಕ್ರಮವುಳ್ಳವನಾದ ಶ್ರೀಮಹಾವಿಷ್ಣುವು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(517)** ಈಗ **ಅಂಭೋನಿಧಿಃ** - ಎಂಬ ನಾಮವನ್ನು ನೋಡೋಣ. ವೇದದಲ್ಲಿ ದೇವತೆಗಳು, ಮನುಷ್ಯರು, ಪಿತೃಗಳು, ಅಸುರರು - ಈ ನಾಲ್ಕು ಜೀವರುಗಳನ್ನು "ಅಂಭಃ" ಎಂದು ಕರೆಯಲಾಗಿದೆ. ಈ ಪ್ರಜೆಗಳೆಲ್ಲರೂ ಭಗವಂತನಲ್ಲಿಯೇ ಅಡಕವಾಗಿರುತ್ತಾರಾಗಿ - ನದಿಗಳು ಸಮುದ್ರದಲ್ಲಿ ಒಂದಾಗಲಾಗಿ ಅದನ್ನು ನಿಧಿ ಎನ್ನುವಂತೆ ಇಲ್ಲಿ ಶ್ರೀಮಹಾವಿಷ್ಣುವನ್ನು ಅಂಭೋನಿಧಿಯೆಂದು ಸ್ತುತಿಸಿದೆ. ಅಥವಾ ನದಿಗಳೆಲ್ಲವೂ ಸೇರಿ ಸಮುದ್ರವಾಗಿರುವಂತೆ ಜೀವರೆಲ್ಲರೂ ಭಗವಂತನಲ್ಲಿಯೇ ಅಡಕವಾಗಿರುವದರಿಂದಲೂ ಈ ನಾಮವು ಬಂದಿದೆ. ಗೀತೆಯಲ್ಲಿ ವಿಭೂತಿಗಳನ್ನು ವರ್ಣಿಸುವಾಗ "ಸರಸಾಮಸ್ಮಿ ಸಾಗರಃ" (ಸರೋವರಗಳಲ್ಲಿ ನಾನು ಸಮುದ್ರವು) ಎಂದು ಭಗವಂತನೇ ಹೇಳಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ. **(518)** ಈಗ **ಅನಂತಾತ್ಮಾ** - ಎಂಬ ನಾಮವನ್ನು ನೋಡೋಣ. ಅನಂತವೆಂದರೆ ಕೊನೆಯಿಲ್ಲದ್ದು - ಎಂದರ್ಥ. ಭಗವಂತನು ದೇಶ-ಕಾಲ-ವಸ್ತುಗಳಂತೆ ಪರಿಚ್ಛಿನ್ನನಲ್ಲವಾದ್ದರಿಂದ ಅನಂತಾತ್ಮನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(519)** ಈಗ **ಮಹೋದಧಿಶಯಃ** - ಎಂಬ ನಾಮವನ್ನು ನೋಡೋಣ.

ಪ್ರಲಯಕಾಲಕ್ಕೆ ಎಲ್ಲಾ ಜಗತ್ತನ್ನೂ ನಾಶಗೊಳಿಸಿ ಒಂದೇ ಸಮುದ್ರವಾಗಿ ಮಾಡಿ ಒಂದು ಆಲದೆಲೆಯ ಮೇಲೆ ಮಲಗಿರುತ್ತಾನೆ. ಆದ್ದರಿಂದ ಮಹೋದಧಿಶಯ ನೆನಿಸಿರುತ್ತಾನೆ. **(520)** ಈಗ **ಅಂತಕಃ** - ಎಂಬ ನಾಮವನ್ನು ನೋಡೋಣ. ಜೀವರಗಳ ಅಂತ - ಎಂದರೆ ಕೊನೆಯನ್ನು (ಸಾವನ್ನು) ಉಂಟುಮಾಡುವದರಿಂದ ಈ ನಾಮವು ಬಂದಿದೆ. ಜಗತ್ತೆಲ್ಲವೂ ಯಾವನಿಂದ ಹೊರ ಬಂದಿದೆಯೋ ಅದು ಕಡೆಯಲ್ಲಿ ಅವನಲ್ಲಿಯೇ ಒಂದಾಗಿ ಬಿಡುತ್ತದೆ. ಅವನೇ ಅಂತಕನು, ಮತ್ತು ಜಗತ್ತಿಗೆಲ್ಲ ಅವನೇ ಆದಿಯೂ ಹೌದು. ಒಟ್ಟಿನಲ್ಲಿ ಜಗತ್ತು ತಾನು ಹುಟ್ಟಿ ಬೆಳೆದು, ಬಾಳಿ ಕೊನೆಗೆ ನಾಶವಾಗುವಾಗಲೂ ಎಂದಿಗೂ ಪರಮಾತ್ಮನನ್ನು ಬಿಟ್ಟಿರುವದೇ ಇಲ್ಲ. ಮಡಕೆಯು ಎಲ್ಲಾ ಕಾಲಕ್ಕೂ ಹೇಗೆ- ಮಣ್ಣನ್ನು ಬಿಟ್ಟಿರಲಾರದೋ ಹಾಗೆಯೇ ಜಗತ್ತೂ ಭಗವಂತನಿಗಿಂತ ಬೇರೆ ಇರಲಾರದು. ಆದ್ದರಿಂದಲೇ ಅವನನ್ನು ಅಂತಕನೆಂದು ಸ್ತುತಿಸಲಾಗಿದೆ.

**ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।**
**ಆನಂದೋ ನಂದನೋ ನಂದಃ ಸತ್ಯಧರ್ಮಾ ತ್ರಿವಿಕ್ರಮಃ ॥56॥**

**(521)** ಈಗ **ಅಜಃ** - ಎಂಬ ನಾಮವನ್ನು ನೋಡೋಣ. ಇದು ಹಿಂದೆ 65ನೆಯ ನಾಮವಾಗಿ ಬಂದಿದೆ. ಅಲ್ಲಿ ಹುಟ್ಟಿಲ್ಲದವನು - ಎಂದು ಅರ್ಥವನ್ನು ವಿವರಿಸಿದೆ. ಇಲ್ಲಿ ಅ+ಜ - ಎಂದು ಬಿಡಿಸಿ ಅ ಎಂದರೆ ವಿಷ್ಣುವಿನ (ಶಕ್ತಿಯಿಂದ) ಜ ಎಂದರೆ ಹುಟ್ಟಿದವನು ಕಾಮ(ಮನ್ಮಥ)ನು - ಎಂದು ಭಾಷ್ಯಕಾರರು ವ್ಯಾಖ್ಯಾನ ಮಾಡಿದ್ದಾರೆ. 'ಆತ್ಮಾ ವೈ ಪುತ್ರನಾಮಾಸಿ' ಎಂಬ ವಾಕ್ಯದಂತೆ ತಂದೆಯೇ ಮಗನಾಗಿ ಹುಟ್ಟುವದರಿಂದ ಈ ಅರ್ಥದಂತೆಯೂ ಈ ನಾಮಕ್ಕೆ ಸಮನ್ವಯವನ್ನು ಮಾಡಬಹುದಾಗಿದೆ. **(522)** ಈಗ **ಮಹಾರ್ಹಃ**- ಎಂಬ ನಾಮವನ್ನು ನೋಡೋಣ. ಮಹಃ - ಎಂದರೆ ಪೂಜೆ ಎಂದರ್ಥ. ಭಗವಂತನು ಸರ್ವವಿಧದಿಂದಲೂ ಪೂಜಾರ್ಹನಾಗಿರುತ್ತಾನೆ. ಗೀತೆಯಲ್ಲಿರುವಂತೆ ಭಗವಂತನ ವಿಶ್ವರೂಪವನ್ನು ಕಂಡ ಅರ್ಜುನನು ಅವನನ್ನು ಸ್ತುತಿಸುತ್ತಾ 'ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್' ಪ್ರಭೋ, ನೀನು ಪರಮ ಪೂಜ್ಯನೂ ಅತ್ಯಂತ ಹಿರಿಯನಾದ ಆದಿಗುರುವೂ ಆಗಿರುವೆ ಎಂದು ಸ್ತುತಿಸಿರುತ್ತಾನೆ. ಆದ್ದರಿಂದ ಈ ನಾಮವು ಬಂದಿರುತ್ತದೆ. **(523)** ಈಗ **ಸ್ವಾಭಾವ್ಯಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸ್ವಭಾವದಿಂದಲೇ ಅಭಾವ್ಯನಾಗಿರುತ್ತಾನೆ. ಅಭಾವ್ಯನೆಂದರೆ ಉಂಟುಮಾಡತಕ್ಕವನಲ್ಲ - ಎಂದರ್ಥ. ಉಂಟುಮಾಡುವವನ್ನು ಕರ್ತೃ ಎನ್ನುತ್ತಾರೆ. ಭಗವಂತನು ಕರ್ತೃವಲ್ಲ. ಅವನಲ್ಲಿ ಕ್ರಿಯಾಕಾರಕ ಫಲಗಳಿಲ್ಲ. ಹೀಗೆ ಅವನು ನಿರ್ವಿಶೇಷನಾಗಿದ್ದಾನೆ. ಇದೇ ಅವನ ಸ್ವಾಭಾವ್ಯವು - ಎಂದು ಅಭಿಪ್ರಾಯ.

**(524)** ಈಗ **ಜಿತಾಮಿತ್ರಃ** - ಎಂಬ ನಾಮವನ್ನು ನೋಡೋಣ. ಶತ್ರುಗಳನ್ನು ಗೆದ್ದವನು-ಎಂದರ್ಥ. ಭಗವಂತನು ಅಂತಃಶತ್ರುಗಳಾದ ರಾಗದ್ವೇಷಾದಿಗಳನ್ನೂ ಹೊರಗಿನ ಶತ್ರುಗಳಾದ ರಾವಣ, ಶಿಶುಪಾಲಾದಿಗಳನ್ನೂ ಗೆದ್ದವನಾಗಿದ್ದು ಈ ನಾಮ ದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(525)**ಈಗ **ಪ್ರಮೋದನಃ** - ಎಂಬ ನಾಮವನ್ನು ನೋಡೋಣ. ತನ್ನ ಆತ್ಮಸ್ವರೂಪದ ಜ್ಞಾನದಿಂದ ಕೂಡಿದ್ದು ಯಾವಾಗಲೂ ತೃಪ್ತನಾಗಿ ಆನಂದರಸದಿಂದ ಕೂಡಿರುವವನಾಗಿರುವವನು - ಎಂಬರ್ಥದಲ್ಲಿ ಮತ್ತು ಭಗವಂತ ನನ್ನು ಧ್ಯಾನಮಾಡುವವರಿಗೆ ಆನಂದವನ್ನು ಉಂಟುಮಾಡುವದರಿಂದಲೂ ಈ ನಾಮವು ಬಂದಿರುತ್ತದೆ. **(526)** ಈಗ **ಆನಂದಃ (527) ನಂದನಃ (528)ನಂದ ಃ**- ಎಂಬ ನಾಮಗಳನ್ನು ನೋಡೋಣ. ಆನಂದವೇ ಈತನ ಸ್ವರೂಪವು ಇವನ ಆನಂದದ ಲವಲೇಶವನ್ನೇ ಆಶ್ರಯಿಸಿ ಎಲ್ಲಾ ಜೀವರುಗಳೂ ಬದುಕಿರುತ್ತಾರೆ. ಆದ್ದರಿಂದ ಭಗವಂತನು ಆನಂದನೆನಿಸಿದ್ದಾನೆ. ಹಾಗೆಯೇ ನಂದನನೆಂದರೆ ಎಲ್ಲರನ್ನೂ ಸುಖಗೊಳಿಸುತ್ತಾನೆ ಎಂದರ್ಥ. ಗಾಢನಿದ್ರೆಯಲ್ಲಿ ಜೀವರುಗಳೆಲ್ಲ ಈ ಆತ್ಮನಲ್ಲಿ ಒಂದಾಗಿದ್ದು ಆನಂದದಲ್ಲಿರುತ್ತಾನೆ. ಆದ್ದರಿಂದ ನಂದನೆನಿಸಿದ್ದಾನೆ. ಇನ್ನು ಸಮೃದ್ಧವಾದ ಹಾಗೂ ಅಪರಿಮಿತವಾದ ಸುಖಸ್ವರೂಪನಾಗಿರುವದರಿಂದ ನಂದನೆನಿಸಿರುತ್ತಾನೆ. ಹೀಗೆ ಭಗವಂತನ ಈ ದಿವ್ಯನಾಮಗಳು ಅವನ ಆನಂದಸ್ವರೂಪವನ್ನೇ ತಿಳಿಸುತ್ತಾ ಸ್ತುತಿಸಿರುತ್ತವೆ. **(529)**ಈಗ **ಸತ್ಯಧರ್ಮಾ** - ಎಂಬ ನಾಮವನ್ನು ನೋಡೋಣ. ಇಲ್ಲಿ ಸತ್ಯ ಎಂದರೆ ಧರ್ಮ, ಜ್ಞಾನ, ವೈರಾಗ್ಯಾದಿಗಳು - ಎಲ್ಲವನ್ನೂ ಗ್ರಹಿಸಬೇಕು. ಭಗವಂತನಲ್ಲಿ ಈ ಸತ್ಯಧರ್ಮಾದಿಗಳು ಸ್ವಭಾವದಿಂದಲೇ ಇವೆ. ಇವುಗಳಿಗೆ ಅವನೇ ಆಧಾರನಾಗಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ. **(530)** ಈಗ **ತ್ರಿವಿಕ್ರಮ**-ನೆಂಬ ನಾಮವನ್ನು ನೋಡೋಣ. ವೇದದಲ್ಲಿಯೂ 'ತ್ರೀಣಿ ಪದಾ ವಿಚಕ್ರಮೇ' ಎಂದು ಭಗವಂತನನ್ನು ಸ್ತುತಿಸಿದೆ. ಬಲಿರಾಜನನ್ನು ನಿಗ್ರಹಿಸುವ ಕಾಲಕ್ಕೆ ವಾಮನ ಮೂರ್ತಿಯಾಗಿ ತೋರಿಕೊಂಡು ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಕೇಳಿ ಪಡೆದುಕೊಂಡು ಅನಂತರ ತ್ರಿವಿಕ್ರಮನಾಗಿ ಎರಡು ಹೆಜ್ಜೆಗಳಿಂದ ಭೂಲೋಕ, ಅಂತರಿಕ್ಷಲೋಕಗಳನ್ನು ಅಳೆದು ಮೂರನೆಯ ಹೆಜ್ಜೆಗೆ ಅವಕಾಶವಿಲ್ಲವಾದಾಗ ಬಲಿರಾಜನ ತಲೆಯ ಮೇಲೆಯೇ ತನ್ನ ಪಾದವನ್ನಿಟ್ಟು ಅವನನ್ನು ರಸಾತಲಲೋಕಕ್ಕೆ ಕಳುಹಿಸಿದನು. ಹರಿವಂಶಪುರಾಣದಲ್ಲಿಯೂ ತ್ರಿವಿಕ್ರಮನನ್ನು ಹೀಗೆ ಉಲ್ಲೇಖಿಸಿದೆ.

*ತ್ರಿರಿತ್ಯೇವ ತ್ರಯೋ ಲೋಕಾಃ ಕೀರ್ತಿತಾ ಮುನಿಸತ್ತಮೈಃ ।*
*ಕ್ರಮತೇ ತಾನ್ ತ್ರಿಧಾ ಸರ್ವಾನ್ ತ್ರಿವಿಕ್ರಮ ಇತಿ ಶ್ರುತಃ ॥*

ಆದ್ದರಿಂದ ಶ್ರೀಮಹಾವಿಷ್ಣುವನ್ನು ತ್ರಿವಿಕ್ರಮನೆಂದು ಸ್ತುತಿಸಿದೆ. ಈ ಉಪಖ್ಯಾನವು ವಾಮನಾವತಾರದ ಕಥೆಯಾಗಿದೆ.

**ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।**
**ತ್ರಿಪದಃ ತ್ರಿದಶಾಧ್ಯಕ್ಷಃ ಮಹಾಶೃಂಗಃ ಕೃತಾನ್ತಕೃತ್ ॥57॥**

**(531)** ಈಗ **ಮಹರ್ಷಿಃ ಕಪಿಲಾಚಾರ್ಯಃ** - ಎಂಬ ನಾಮವನ್ನು ನೋಡೋಣ. ಮಹರ್ಷಿಗಳಾದ ಕಪಿಲರು- ಎಂದು ಇಲ್ಲಿ ಪ್ರಶಂಸಿಸಿದೆ. ಸಕಲ ವೇದಗಳನ್ನೂ ಬಲ್ಲ ಋಷಿಯನ್ನು 'ಮಹರ್ಷಿ' ಎಂದು ಗೌರವಿಸಿ ಸಂಬೋಧಿಸುತ್ತಾರೆ. ಭಗವಂತನು ಸಕಲವೇದಗಳನ್ನೂ ಬಲ್ಲವನಾಗಿದ್ದು ಸೃಷ್ಟಿಯ ಆರಂಭಕಾಲದಲ್ಲಿ ಪ್ರಥಮಪ್ರಜೆಯಾದ ಹಿರಣ್ಯಗರ್ಭನಿಗೆ ಅವುಗಳನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಗೆ ವೇದಗಳನ್ನು ಉಪದೇಶಿಸಿದ ಭಗವಂತನನ್ನು 'ಮಹರ್ಷಿ' ಎಂದೂ ಸಾಂಖ್ಯ- ಎಂದರೆ ಆತ್ಮತತ್ತ್ವವನ್ನು ಶಿಷ್ಯರಿಗೆ ಉಪದೇಶಿಸಿದ್ದರಿಂದ 'ಕಪಿಲಾಚಾರ್ಯ'ನೆಂದೂ ಎರಡು ರೀತಿಯ ನಾಮಗಳ ಸಂಯೋಗದಿಂದ ಶ್ರೀಮಹಾವಿಷ್ಣುವನ್ನು "ಮಹರ್ಷಿಃ ಕಪಿಲಾಚಾರ್ಯಃ" ಎಂದು ಸ್ತುತಿಸಲಾಗಿದೆ. **(532)** ಈಗ **ಕೃತಜ್ಞಃ** - ಎಂಬ ನಾಮವನ್ನು ನೋಡೋಣ. ಕೃತ- ಎಂದರೆ ಕಾರ್ಯವಾದ ಜಗತ್ತು. ಜ್ಞ- ಎಂದರೆ ಆತ್ಮನು. ಭಗವಂತನೇ ಜಗತ್ತಿನ ರೂಪದಿಂದ ಕೃತನೂ ಹಾಗೂ ಅದರ ಸ್ವರೂಪವನ್ನು ಬಲ್ಲವನೂ ಆಗಿರುವದರಿಂದ ಈ ನಾಮದಿಂದ ಸ್ತುತಿಸಿದೆ. **(533)** ಈಗ **ಮೇದಿನೀಪತಿಃ**-ಎಂಬ ನಾಮವನ್ನು ನೋಡೋಣ. ಮೇದಿನೀ ಎಂದರೆ ಭೂಮಿಯು. ಈ ಭೂಮಿಗೆಲ್ಲ ಒಡೆಯನಾದ್ದರಿಂದ ಈ ನಾಮವು ಬಂದಿದೆ. ಭೂಮಿಯನ್ನು ಸೃಷ್ಟಿಮಾಡಿರುವವನೇ ಭಗವಂತನು. ಆದ್ದರಿಂದ ಅವನೇ ನಿಜವಾದ ಒಡೆಯನು. ಮತ್ತು ಸಮುದ್ರದಲ್ಲಿ ಮುಳುಗಿಹೋಗುತ್ತಿದ್ದ ಭೂಮಿಯನ್ನು ಮೇಲೆತ್ತಿ ಹಿಡಿದಿರುವವನೂ ಆ ಮಹಾವಿಷ್ಣುವೇ ಆಗಿರುವನು. ಹೀಗೆ ಭಗವಂತನು ಮೇದಿನೀಪತಿಯೆನಿಸಿರುತ್ತಾನೆ. **(534)** ಈಗ **ತ್ರಿಪದಃ** - ಎಂಬ ನಾಮವನ್ನು ನೋಡೋಣ. ವಾಮನಾವತಾರ ಕಾಲಕ್ಕೆ ಭಗವಂತನು ಬಲಿರಾಜನನ್ನು ಬೇಡಿ ಮೂರು ಹೆಜ್ಜೆಗಳ ದಾನವನ್ನು ಸ್ವೀಕರಿಸಿ ತಾನು ತ್ರಿವಿಕ್ರಮನಾಗಿ ಮೂರನೆಯ ಹೆಜ್ಜೆಯನ್ನಿಡಲು ಸ್ಥಳವಿಲ್ಲವಾದಾಗ ಬಲಿರಾಜನ ತಲೆಯ ಮೇಲೆಯೇ ಪಾದವಿಟ್ಟು ಅವನನ್ನು ರಸಾತಲ ಲೋಕಕ್ಕೆ ಕಳುಹಿಸಿದನು. ಆದ್ದರಿಂದ ತ್ರಿಪದನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(535)** ಈಗ **ತ್ರಿದಶಾಧ್ಯಕ್ಷಃ** - ಎಂಬ ನಾಮವನ್ನು ನೋಡೋಣ. ಮಾನವರಿಗೆಲ್ಲ ಸ್ವಭಾವದಿಂದ ಇದ್ದು ಕೊಂಡಿರುವ ಎಚ್ಚರ, ಕನಸು, ನಿದ್ರೆ - ಈ ಮೂರು ಅವಸ್ಥೆಗಳು ಅನುಭವದಲ್ಲಿದೆ. ಭಗವಂತನು ಎಲ್ಲರ ಆತ್ಮನಾಗಿದ್ದು ಶರೀರೋಪಾಧಿನಿಮಿತ್ತ ಈ ಅವಸ್ಥೆಗಳಿಗೆ ಮೀರಿದ, ಆದರೆ ಇವುಗಳ ಸಂಪರ್ಕವಿಲ್ಲದ ಯಜಮಾನನಾಗಿದ್ದಾನೆ. ಆದ್ದರಿಂದ ತ್ರಿದಶಾಧ್ಯಕ್ಷನೆಂದು ಸ್ತುತಿಸಿದೆ. **(536)** ಈಗ **ಮಹಾಶೃಂಗಃ** - ಎಂಬ ನಾಮವನ್ನು

ನೋಡೋಣ. ಭಗವಂತನು ಪ್ರಲಯಕಾಲದಲ್ಲಿ ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ಸ್ಥಿತಿಕಾಲಕ್ಕೆ ಮೇಲೆತ್ತಿತನ್ನ ಕೋಡಿಗೆ ಕಟ್ಟಿಹಾಕಿ (ನೀರನಿಂದ ಮೇಲೆತ್ತಿ) ನೆಲೆನಿಲ್ಲಿಸಿದನು. ಆದ್ದರಿಂದ ಈ ನಾಮವು ಬಂದಿದೆ. (537) ಈಗ **ಕೃತಾನ್ತಕೃತ್** - ಎಂಬ ನಾಮವನ್ನು ವಿಚಾರಮಾಡೋಣ. ಕೃತವಾದ - ಎಂದರೆ ಸೃಷ್ಟಿಸಲ್ಪಟ್ಟ ಸಂಸಾರವನ್ನು ಅಂತಗೊಳಿಸುತ್ತಾನೆ - ಎಂದರೆ ಸಂಸಾರವೆಂಬ ಮೃತ್ಯುವನ್ನು ಸಂಹರಿಸಿ ಮುಕ್ತಿಯನ್ನು ನೀಡುತ್ತಾನೆ - ಎಂಬ ಅರ್ಥದಲ್ಲಿ ಈ ನಾಮವು ಬಂದಿದೆ.

**ಮಹಾವರಾಹೋ ಗೋವಿಂದಃ ಸುಷೇಣಃ ಕನಕಾಂಗದೀ ।**
**ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥58॥**

(538) ಈಗ **ಮಹಾವರಾಹಃ** - ಎಂಬ ನಾಮವನ್ನು ನೋಡೋಣ. ದೊಡ್ಡವನಾದ (ಹಿರಿಯನಾದ) ಹಾಗೂ ವರ ಎಂದರೆ ಶ್ರೇಷ್ಠವಾದ ಅಹಃ ಎಂದರೆ ಬೆಳಕಿನಂತೆ ದಿವ್ಯವಾದ ತೇಜಸ್ಸುಳ್ಳವನು - ಎಂದು ಅಭಿಪ್ರಾಯ. ಗೀತೆಯಲ್ಲಿರುವಂತೆ ಭಗವಂತನು ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿದಾಗ ಅವನ ತೇಜಸ್ಸು ಸಾವಿರ ಸೂರ್ಯರಿಗೆ ಸಮಾನವಾಗಿತ್ತು , ಮಿಗಿಲಾಗಿತ್ತು - ಎಂದು ವರ್ಣಿಸಿರುತ್ತದೆ. ಇಂಥ ಪರಮತೇಜಸ್ವಿಯನ್ನು ಮಹಾವರಾಹನೆಂದು ಸ್ತುತಿಸಿದೆ. (539) ಈಗ **ಗೋವಿಂದ :** - ನೆಂಬ ನಾಮವನ್ನು ನೋಡೋಣ. ಇಲ್ಲಿ ಗೋ - ಎಂಬ ಮಾತಿಗೆ ವಾಕ್ಕು (ಶಬ್ದ) ಎಂದರ್ಥ. ಶ್ರುತಿವಾಕ್ಯಗಳ ಮೂಲಕವೇ ತಿಳಿಯಬರುವನಾದ್ದರಿಂದ ಗೋವಿಂದನೆನಿಸಿದ್ದಾನೆ. (540) ಈಗ **ಸುಷೇಣಃ** -ನೆಂಬ ನಾಮವನ್ನು ನೋಡೋಣ. ಸು- ಎಂದರೆ ಒಳ್ಳೆಯ ಸುಶಿಕ್ಷಿತವಾದ ಸೇನೆಯು - ಎಂದರೆ ಸೈನ್ಯದ ಬಲವು ಉಳ್ಳವನಾದ್ದರಿಂದ ಸುಷೇಣನೆನಿಸಿದ್ದಾನೆ. (541) ಈಗ **ಕನಕಾಂಗದೀ** - ಎಂಬ ನಾಮವನ್ನು ನೋಡೋಣ. ಕನಕ ಎಂದರೆ ಚಿನ್ನದ ಅಂಗದ - ಎಂದರೆ ಭುಜಕೀರ್ತಿಗಳು ಉಳ್ಳವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. (542) ಈಗ **ಗುಹ್ಯಃ** - ಎಂಬ ನಾಮವನ್ನು ನೋಡೋಣ. ಗುಹ್ಯ ಎಂದರೆ ರಹಸ್ಯ(ಗುಟ್ಟು)ಎಂದರ್ಥ. ಭಗವಂತನ ಸ್ವರೂಪವನ್ನು ತಿಳಿಯಲು ಗುಹ್ಯವಾದ ಉಪನಿಷದಾದಿಸಾಹಿತ್ಯವನ್ನು ಅಭ್ಯಾಸಮಾಡಬೇಕು. ಹಾಗೂ ಅವುಗಳ ರಹಸ್ಯಾರ್ಥವನ್ನರಿಯಲು ಶ್ರೋತ್ರಿಯ ಬ್ರಹ್ಮನಿಷ್ಠರಾದ ಸದ್ಗುರುಗಳನ್ನು ಆಶ್ರಯಿಸಬೇಕು. ಆದ್ದರಿಂದ ಈ ನಾಮವು ಬಂದಿದೆ. ಇನ್ನು ಭಗವಂತನನ್ನು ಕಾಣಬೇಕಾದರೆ ಸಾಧಕನು ತನ್ನ ಹೃದಯಾಕಾಶದಲ್ಲಿಯೇ ಕಂಡುಕೊಳ್ಳಬೇಕು. ಇದು ಜನಸಾಮಾನ್ಯರಿಗೆ ಸಾಧ್ಯವಿಲ್ಲ. ಅಂತಃಕರಣಶುದ್ಧಿಯುಳ್ಳ ಸಾಧಕನು ಮಾತ್ರ ಈ ಪ್ರಯತ್ನವನ್ನು ಮಾಡಬಲ್ಲನು. ಆದ್ದರಿಂದ ಭಗವಂತನನ್ನು ಇಲ್ಲಿ ಗುಹ್ಯನೆಂದು ಸ್ತುತಿಸಿದೆ. (543) ಈಗ **ಗಭೀರಃ** -ಎಂಬ ನಾಮವನ್ನು ನೋಡೋಣ.

ಅಮರಕೋಶದಲ್ಲಿ ಗಭೀರ - ಎಂಬರ್ಥದಲ್ಲಿಯೇ ಗಂಭೀರ - ಎಂಬ ನಾಮವೂ ಇದೆ. ಆದ್ದರಿಂದ ಭಗವಂತನು ತನ್ನ ಜ್ಞಾನಶಕ್ತಿಬಲಾದಿಗಳಿಂದ ಪರಿಪೂರ್ಣನಾಗಿದ್ದು ಜನಸಾಮಾನ್ಯರಿಗೆ ಗೋಚರನಾಗುವವನಲ್ಲ. ಅವನ ದರ್ಶನವಾಗಬೇಕಾದರೆ ಸಾಧಕನು ಸಾಕಷ್ಟು ತಪಸ್ಸೇ ಮುಂತಾದ ಸಾಧನಗಳನ್ನು ಮಾಡಿರಬೇಕು. ಆದ್ದರಿಂದ ಈ ®YÊ ÜÉ ÜY í ©¨ æ(544) ಈಗ **ಗಹನಃ** - ಎಂಬ ನಾಮವನ್ನು ನೋಡೋಣ. ಭಗವಂತನು ಎಲ್ಲರ ಆತ್ಮನೇ ಆಗಿದ್ದರೂ ಅವನು ಎಲ್ಲರ ಹೃದಯಗುಹೆಯಲ್ಲಿರುತ್ತಾನೆ. ಅಲ್ಲಿಯೇ ಅವನನ್ನು ಕಂಡುಕೊಳ್ಳಬೇಕಾಗಿರುವದರಿಂದ ಗಹನನೆನಿಸಿರುತ್ತಾನೆ. ಇನ್ನು ಎಚ್ಚರ, ಕನಸು, ತನಿನಿದ್ರೆ - ಈ ಮೂರಕ್ಕೂ ಸಾಕ್ಷಿಯಾಗಿದ್ದು ಅವುಗಳನ್ನು ಮೀರಿದವನಾಗಿ 'ತುರೀಯ'ನೆನಿಸಿರುವದರಿಂದ ಗಹನ-ಎಂದರೆ ತಿಳಿಯಲು ಕಷ್ಟಸಾಧ್ಯನಾಗಿರುತ್ತಾನಾಗಿ ಈ ನಾಮವು ಬಂದಿದೆ. **(545)** ಈಗ **ಗುಪ್ತಃ** - ಎಂಬ ನಾಮವನ್ನು ನೋಡೋಣ. ಭಗವಂತನು ಮಾತಿಗಾಗಲಿ, ಮನಸ್ಸಿಗಾಗಲಿ ಗೋಚರನಲ್ಲದಿರುವದರಿಂದ ಗುಪ್ತನೆನಿಸಿದ್ದಾನೆ. ಕಠೋಪನಿಷತ್ತಿನಲ್ಲಿರುವಂತೆ ಎಲ್ಲಾ ಶರೀರಗಳಲ್ಲಿಯೂ ವ್ಯಾಪಕನಾಗಿದ್ದರೂ ಇಂದ್ರಿಯ ಗೋಚರನಲ್ಲವಾದ್ದರಿಂದ ಜನರಿಗೆ ಗುಪ್ತ(ಅದೃಶ್ಯ)ನೆನಿಸಿರುತ್ತಾನಾಗಿ ಈ ನಾಮವು ಬಂದಿದೆ. **(546)** ಈಗ **ಚಕ್ರಗದಾ ಧರಃ** - ಎಂಬ ನಾಮವನ್ನು ನೋಡೋಣ. ಭಗವಂತನಾದ ವಿಷ್ಣುವು ತನ್ನ ಕೈಗಳಲ್ಲಿ ಸುದರ್ಶನವೆಂಬ ಚಕ್ರವನ್ನೂ ಕೌಮೋದಕಿ - ಎಂಬ ಗದೆಯನ್ನೂ ಧರಿಸಿರುತ್ತಾನಾಗಿ ಈ ನಾಮವು ಬಂದಿದೆ.

**ವೇಧಾಃ ಸ್ವಾಂಗೋಽಜಿತಃ ಕೃಷ್ಣೋ ದೃಢಃ ಸಂಕರ್ಷಣೋಽಚ್ಯುತಃ ।**
**ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥59॥**

**(547)** ಈಗ **ವೇಧಾಃ** - ಎಂಬ ನಾಮವನ್ನು ನೋಡೋಣ. ಇದು ಸೃಷ್ಟಿಕರ್ತನಾದ ಬ್ರಹ್ಮನ ಹೆಸರುಗಳಲ್ಲಿ ಒಂದಾಗಿದೆ. ಆದರೆ ತ್ರಿಮೂರ್ತಿಗಳೂ ವಾಸುದೇವ ಭಗವಂತನ ಅಂಶಭೂತರೇ ಆದ್ದರಿಂದ ಅವರೆಲ್ಲರ ನಾಮಗಳೂ ಪರಬ್ರಹ್ಮನ ನಾಮಗಳೇ ಆಗಿವೆ. ಅಮರಕೋಶದಲ್ಲಿ "ಸ್ರಷ್ಟಾಪ್ರಜಾಪತಿರ್ವೇಧಾಃ" ಎಂದು ವೇಧಾಃ ಎಂಬುದನ್ನು ಬ್ರಹ್ಮನ ಪರ್ಯಾಯನಾಮವಾಗಿ ಬಳಸಿರುತ್ತದೆ. ಆದ್ದರಿಂದ ಭಗವಂತನೇ ಸೃಷ್ಟಿಕ್ರಿಯಾಕರ್ತೃವಾದಾಗ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(548)** ಈಗ **ಸ್ವಾಂಗಃ** - ಎಂಬ ನಾಮವನ್ನು ವಿಚಾರಮಾಡೋಣ. ಅಂಗ ಎಂದರೆ ಅವಯವಗಳು. ಅವು ತಲೆ, ಎದೆ, ಕೈಗಳು, ಕಾಲುಗಳು ಮುಂತಾಗಿ ಬೇರೆಬೇರೆಯಾಗಿವೆ. ಆದರೆ ಅಂತರಾತ್ಮನಾದ ಭಗವಂತನ ಸಾನ್ನಿಧ್ಯವಿಲ್ಲದೆ ಅವು ಕೆಲಸಮಾಡಲಾರವು. ಆದ್ದರಿಂದ 'ಸ್ವ' ಎಂದರೆ ತನ್ನ (ಪರಮಾತ್ಮನ) ಅಂಗಗಳೆಲ್ಲವೂ ಭಗವಂತನೆಂದೇ ತಿಳಿಯಬೇಕು.

ನಾವು ಆಚಮನಮಾಡುವಾಗ ಕೇಶವ-ನಾರಾಯಣ-ಮುಂತಾದ ನಾಮಗಳಿಂದ ಅಂಗೋಪಾಂಗಗಳನ್ನು ಮುಟ್ಟಿಕೊಳ್ಳುತ್ತೇವೆ. ಆದ್ದರಿಂದ ಅವೆಲ್ಲವೂ ನಾರಾಯಣನ ಅಂಗಗಳೇ ಆಗಿವೆ-ಎಂದಾಗುತ್ತದೆ. ಹೀಗೆ ಭಗವಂತನು ಅಂಗಗಳನ್ನು ವ್ಯಾಪಿಸಿರುವದರಿಂದ ಸ್ವಾಂಗನೆಂದು ಸ್ತುತಿಸಲ್ಪಟ್ಟಿರುತ್ತಾನೆ. (549) ಈಗ **ಅಜಿತಃ** -ಎಂಬ ನಾಮವನ್ನು ನೋಡೋಣ. ಭಗವಂತನು ಯಾರಿಂದಲೂ ಗೆಲ್ಲಲ್ಪಟ್ಟವನಲ್ಲ. ಅವನ ಅವತಾರ ಲೀಲೆಗಳ ಎಲ್ಲಾ ಕಥಾಸಂದರ್ಭಗಳಲ್ಲಿಯೂ ಗೆಲವು ಅವನದೇ ಆಗಿದೆ. ಕೆಲವೇ ಸಂದರ್ಭಗಳಲ್ಲಿ ಭಕ್ತರಿಗೆ ಜಯವಾಗಿರಬಹುದು. ಆದರೆ ಅದು ಭಗವಂತನ ಸೋಲಲ್ಲ. ಅದನ್ನು 'ಭಕ್ತಪರಾಧೀನತೆ' - ಎಂದು ಋಷಿಗಳು ತಿಳಿಸುತ್ತಾ ಅವನನ್ನು ಸ್ತುತಿಸಿರುತ್ತಾರೆ. ಹೀಗೆ ಅಜಿತನೆನಿಸಿರುತ್ತಾನೆ. (550) ಈಗ **ಕೃಷ್ಣಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಕೃಷ್ಣದ್ವೈಪಾಯನರೆಂಬ ಋಷಿಗಳ ರೂಪದಲ್ಲಿ ಅವತರಿಸಿದಾನಾದ್ದರಿಂದ ಭಗವಂತನನ್ನು ಕೃಷ್ಣನೆಂಬ ನಾಮದಿಂದ ಸ್ತುತಿಸಿದೆ. ಇವರೇ ವೇದಾವ್ಯಾಸರು. ಮಹಾಭಾರತ - ಎಂಬ ಇತಿಹಾಸದ ಕರ್ತೃಗಳು. ಕೃಷ್ಣಭಗವಂತನೂ ವೇದವ್ಯಾಸರೂ ಒಂದೇ ತತ್ತ್ವವಾಗಿರುತ್ತಾರೆ - ಎಂದು ವಿಷ್ಣುಪುರಾಣದಲ್ಲಿದೆ. (551) ಈಗ **ದೃಢಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಸ್ವರೂಪ-ಸಾಮರ್ಥ್ಯ- ಗುಣಶೀಲಗಳಿಂದ ಎಂದಿಗೂ ಚ್ಯುತನಾಗುವ ಸಂಭವವಿಲ್ಲವಾದ್ದರಿಂದ ದೃಢನೆಂದು ಸ್ತುತಿಸಲ್ಪಟ್ಟಿರುತ್ತಾನೆ. (552) ಈಗ **ಸಂಕರ್ಷಣೋಽಚ್ಯುತಃ** - ಎಂಬ ನಾಮವನ್ನು ನೋಡೋಣ. ಇದು ಒಂದೇ ನಾಮವು -ಎಂದು ಭಾಷ್ಯದಲ್ಲಿದೆ. ಜಗತ್ಸಂಹಾರಕಾಲಕ್ಕೆ ಒಂದೇ ಬಾರಿಗೆ ಜೀವರುಗಳೆಲ್ಲರನ್ನೂ ಸೆಳೆದುಹಾಕಿ ತಾನು ಸ್ವಲ್ಪವೂ ಅಳ್ಳಾಡದೆ (ಜಾರದೆ) ತನ್ನ ಸ್ವಸ್ವರೂಪದಿಂದಲೇ ಇರುತ್ತಾನಾದ್ದರಿಂದ ಈ ನಾಮವು ಬಂದಿದೆ. (553) ಈಗ **ವರುಣಃ** - ಎಂಬ ನಾಮವನ್ನು ನೋಡೋಣ. ಈ ನಾಮವು ಸೂರ್ಯನಿಗೆ ಅನ್ವಯವಾಗುವಂತೆ ಭಾಷ್ಯಕಾರರು ವಿವರಿಸಿರುತ್ತಾರೆ. ಸಾಯಂಕಾಲದಲ್ಲಿ ಸೂರ್ಯನು ತನ್ನ ಕಿರಣಗಳನ್ನು ಹಿಂದಕ್ಕೆಳೆದುಕೊಂಡು ಕಣ್ಮರೆಯಾಗುತ್ತಾನೆ. ಈ ರಶ್ಮಿಸಂಯಮನವೇ ಸಂವರಣವೆನಿಸುತ್ತದೆ. ಹೀಗೆ ಸಾಯಂಕಾಲದ ಸೂರ್ಯನು ಅಸ್ತಮಾನಕಾಲಕ್ಕೆ ವರುಣನೆನಿಸಿರುತ್ತಾನೆ. ಆದ್ದರಿಂದ ಭಗವಂತನನ್ನು ಈ ನಾಮದಿಂದ ಸ್ತುತಿಸಿರುತ್ತದೆ. (554) ಈಗ **ವಾರುಣಃ** - ಎಂಬ ನಾಮವನ್ನು ನೋಡೋಣ. ವರುಣನ ಮಕ್ಕಳಾದ ಅಗಸ್ತ್ಯ- ವಸಿಷ್ಠರಲ್ಲಿ ಒಬ್ಬರನ್ನು ವಾರುಣನೆಂದು ಭಾವಿಸಿ ಈ ನಾಮದಿಂದ ಭಗವಂತನನ್ನು ಸ್ತುತಿಸಿದೆ. (555) ಈಗ **ವೃಕ್ಷಃ** - ಎಂಬ ನಾಮವನ್ನು ನೋಡೋಣ. ಇದು ಭಗವಂತನು ಅಚಲನೆಂಬ ಅರ್ಥದಲ್ಲಿ ಬಂದಿದೆ. ಮಹಾ ನಾರಾಯಣೋಪನಿಷತ್ತಿನಲ್ಲಿ ವೃಕ್ಷ ಇವಸ್ತಬ್ಧೋ ದಿವಿ ತಿಷ್ಠತ್ಯೇಕಃ (ಮರವು ಹೇಗೆ ಅಳ್ಳಾಡದಂತೆ ನಿಂತಿರುವದೋ ಹಾಗೆ ಆಕಾಶದಲ್ಲಿ ನಿಂತಿರುತ್ತಾನೆ.) ಎಂದು

ವೇದವಾಕ್ಯವು ಸ್ತುತಿಸುತ್ತಿದೆಯಾಗಿ ಈ ಸಂದರ್ಭದಿಂದ ಭಗವಂತನನ್ನು ಅಚಲನೆಂದು ತಿಳಿಸುತ್ತಾ ಈ ನಾಮದಿಂದ ಸ್ತುತಿಸಿದೆ. **(556)** ಈಗ **ಪುಷ್ಕರಾಕ್ಷಃ** - ಎಂಬ ನಾಮವನ್ನು ನೋಡೋಣ. ಪುಷ್ಕರ - ಎಂದರೆ ಕಮಲಪುಷ್ಪ- ಎಂದರ್ಥ. ಅದರಂತೆ ಸುಂದರ ನೇತ್ರವುಳ್ಳವನು- ಎಂದು ಸ್ತುತಿಸಿದೆ. ಅಥವಾ ಹೃದಯವನ್ನೇ ಕಮಲ ವೆಂದು ಭಾವಿಸಿ ಅಲ್ಲಿಯೇ ಇರುವ ಭಗವಂತನನ್ನು ಹೀಗೆಂದು ಕರೆದಿದೆ - ಎಂದೂ ಅರ್ಥ ಮಾಡಬಹುದು. **(557)** ಈಗ **ಮಹಾಮನಾಃ** - ಎಂಬ ನಾಮವನ್ನು ನೋಡೋಣ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯ- ಕರ್ಮಗಳನ್ನು ತನ್ನ ಮನಃಸಂಕಲ್ಪ ಮಾತ್ರದಿಂದಲೇ ಮಾಡುತ್ತಾನಾಗಿ 'ಮಹಾಮನಾಃ' ಎಂದು ಸ್ತುತಿಸಿದೆ. ಮತ್ತು ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನಾದ್ದರಿಂದ, ಹಾಗೂ ಅವನ ಚಿತ್ತಕ್ಕೆ ಬಂದದ್ದು ಎಂದಿಗೂ ಹುಸಿ ಯಾಗುವದಿಲ್ಲವಾದ್ದರಿಂದಲೂ ಮಹಾಮನನೆನಿಸಿರುತ್ತಾನೆ.

**ಭಗವಾನ್ ಭಗಹಾಽಽನನ್ದೀ ವನಮಾಲೀ ಹಲಾಯುಧಃ ।**
**ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥60॥**

**(558)** ಈಗ **ಭಗವಾನ್** -ಎಂಬ ನಾಮವನ್ನು ನೋಡೋಣ. ಪರಿಪೂರ್ಣ ವಾದ ಐಶ್ವರ್ಯ (ಸ್ವಾತಂತ್ರ್ಯ), ಧರ್ಮ, ಯಶಸ್ಸು, ಸಂಪತ್ತು, ವೈರಾಗ್ಯ, ಮೋಕ್ಷ- ಈ ಆರನ್ನು ಭಗ- ಎಂದು ಕರೆಯಲಾಗುತ್ತದೆ. ಇವು ಪರಿಪೂರ್ಣವಾಗಿ ಯಾವನಲ್ಲಿ ನಿತ್ಯವಾಗಿರುವದೋ ಅವನು ಭಗವಾನ್ - ಎನಿಸುತ್ತಾನೆ. ಮತ್ತು ಜಗತ್ತಿನ ಹುಟ್ಟು, ಸಾವು, ಹಾಗೂ ಸ್ಥಿತಿಕಾಲಕ್ಕೆ ಜೀವರುಗಳ ಜನ್ಮಮರಣಗಳು, ವಿದ್ಯೆ- ಅವಿದ್ಯೆಗಳೆಂಬ ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳ ಅರಿವು ಮರವುಗಳು-ಇವನ್ನು ಯಾವನು ಪೂರ್ಣವಾಗಿ ಎಲ್ಲಾ ಕಾಲದಲ್ಲಿಯೂ ತಿಳಿದಿರುವನೋ ಅವನೇ ಭಗವಂತನು- ಎಂದು ವಿಷ್ಣುಪುರಾಯದಲ್ಲಿದೆ. ಹೀಗೆ ಷಡ್ಗುಣೈಶ್ವರ್ಯಸಂಪನ್ನನಾದ ನಿತ್ಯನೂ ಶಾಶ್ವತನೂ ಶುದ್ಧನೂ ಸರ್ವವ್ಯಾಪಿಯೂ ಆದ ಪರಮಾತ್ಮನನ್ನು 'ಭಗವಾನ್' ಎಂಬ ಪದದಿಂದ ಸ್ತುತಿಸಿದೆ. **(559)** ಈಗ **ಭಗಹಾ** - ಎಂಬ ನಾಮವನ್ನು ನೋಡೋಣ. ಸ್ಥಿತಿಕಾಲದಲ್ಲಿ ಜಗತ್ತಿನ ತಿರುಳಾಗಿದ್ದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು ಮುಂತಾದವುಗಳನ್ನು ಪ್ರಲಯಕಾಲಕ್ಕೆ ನಾಶಮಾಡುತ್ತಾನಾದ್ದರಿಂದ ಭಗಹಾ ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(560)** ಈಗ **ಆನಂದೀ** - ಎಂಬ ನಾಮವನ್ನು ನೋಡೋಣ. ಸುಖಸ್ವರೂಪನೂ ಸರ್ವಸಂಪತ್‌ಸಮೃದ್ಧನೂ ಆಗಿರುವದರಿಂದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(561)** ಈಗ **ವನಮಾಲೀ**-ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಚೇತನಾಚೇತನರೂಪವಾದ ಎಲ್ಲಾ ಸ್ಥಾವರಜಂಗಮಪ್ರಾಣಿಗಳ ತಿರುಳಾದ ತನ್ಮಾತ್ರೆಗಳನ್ನು ಬಳಸಿ ಸಿದ್ಧಗೊಳಿಸಿರುವ ವೈಜಯಂತೀ ಎಂಬ ಮಾಲೆಯನ್ನು

ಧರಿಸಿರುತ್ತಾನಾಗಿ ವನಮಾಲೀ ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(562)** ಈಗ **ಹಲಾಯುಧಃ** - ಎಂಬ ನಾಮವನ್ನು ನೋಡೋಣ. ಹಲ ಎಂದರೆ ನೇಗಿಲು ಎಂದರ್ಥ. ದ್ವಾಪರ ಯುಗದಲ್ಲಿ ಬಲರಾಮನಾಗಿ ಭಗವಂತನು ಅವತಾರಮಾಡಿದಾಗ ಹಲ(ನೇಗಿಲು)ವನ್ನು ಆಯುಧವಾಗಿ ಧರಿಸಿದ್ದನು. ಈ ಬಲರಾಮನೂ ಭಗವಂತನ ಅಂಶನೇ ಆದ್ದರಿಂದ ಹಲಾಯುಧನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(563)** ಈಗ **ಆದಿತ್ಯಃ** -ನೆಂಬ ನಾಮವನ್ನು ವಿಚಾರಮಾಡೋಣ. ಅದಿತಿದೇವಿಯ ಗರ್ಭದಲ್ಲಿ ಕಶ್ಯಪರ ವೀರ್ಯದಿಂದ ವಾಮನರೂಪದಿಂದ ಜನಿಸಿದವನಾದ್ದರಿಂದ ಆದಿತ್ಯನೆಂದು ಸ್ತುತಿಸಿದೆ. **(564)** ಈಗ **ಜ್ಯೋತಿರಾದಿತ್ಯಃ** - ಎಂಬ ನಾಮವನ್ನು ನೋಡೋಣ. ಸೂರ್ಯ ಮಂಡಲದಲ್ಲಿ ಜ್ಯೋತಿ(ಬೆಳಕು)ರೂಪದಿಂದ ಇದ್ದುಕೊಂಡು ಬೆಳಗುತ್ತಿರುವನಾದ್ದರಿಂದ ಈ ನಾಮವು ಬಂದಿದೆ. **(565)** ಈಗ **ಸಹಿಷ್ಣುಃ** - ಎಂಬ ನಾಮವನ್ನು ನೋಡೋಣ. ಶೀತ, ಉಷ್ಣ- ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುತ್ತಾನಾದ್ದರಿಂದ ಈ ನಾಮವು ಬಂದಿದೆ. **(566)** ಈಗ **ಗತಿಸತ್ತಮಃ** - ಎಂಬ ನಾಮವನ್ನು ನೋಡೋಣ. ಭಾಷ್ಯ ದಲ್ಲಿರುವಂತೆ ಜೀವರಿಗೆ ಸದ್ಗತಿಯನ್ನು ದಯಪಾಲಿಸುವವನಾಗಿದ್ದು ಶ್ರೇಷ್ಠನೂ ಆಗಿರುವದರಿಂದ ಈ ನಾಮವು ಬಂದಿದೆ.

**ಸುಧನ್ವಾ ಖಂಡಪರಶುರ್ದಾರುಣೋ ದ್ರವಿಣಪ್ರದಃ ।**
**ದಿವಃಸ್ಪೃಕ್ ಸರ್ವದೃಗ್ ವ್ಯಾಸೋ ವಾಚಸ್ಪತಿರಯೋನಿಜಃ ॥61॥**

**(567)** ಈಗ **ಸುಧನ್ವಾ** - ಎಂಬ ನಾಮವನ್ನು ನೋಡೋಣ. ಭಗವಂತನ ಧನುಸ್ಸಿಗೆ ಶಾರ್ಙ್ಗ- ಎಂದು ಹೆಸರು. ಶತ್ರುಸಂಹಾರಸಮಯಕ್ಕೆ ಭಗವಂತನು ಇದನ್ನು ಬಳಸುತ್ತಾನೆ. ಇದು ಎಂದಿಗೂ ಯಾವಾಗಲೂ ವ್ಯರ್ಥವಾಗುವದಿಲ್ಲ. ವಿಜಯವನ್ನೇ ತಂದುಕೊಡುತ್ತದೆಯಾಗಿ ಈ ನಾಮದಿಂದ ಸ್ತುತಿಸಿದೆ. **(568)** ಈಗ **ಖಂಡಪರಶುಃ** -ಎಂಬ ನಾಮವನ್ನು ನೋಡೋಣ. ಭಗವಂತನ ಅವತಾರವೇ ಆದ ಪರಶುರಾಮನು ಶತ್ರುಸಂಹಾರಕಾಲಕ್ಕೆ ಪರಶು(ಕೊಡಲಿ)ವನ್ನು ಬಳಸುತ್ತಿದ್ದನು. ಇಂಥ ಕೊಡಲಿಯೆಂಬ ಆಯುಧವುಳ್ಳವನು - ಎಂದರ್ಥ. ಅಥವಾ ಅಖಂಡಪರಶುಃ ಎಂದು ಪದಚ್ಛೇದ ಮಾಡಿದರೆ ಯಾವಾಗಲೂ ಎಂದೆಂದಿಗೂ ತುಂಡಾಗದ ಕೊಡಲಿಯು ಇವನಲ್ಲಿದೆ ಯಾದ್ದರಿಂದ ಈ ನಾಮವು ಬಂದಿದೆ- ಎಂದೂ ವ್ಯಾಖ್ಯಾನಮಾಡಬಹುದು. **(569)** ಈಗ **ದಾರುಣಃ** - ಎಂಬ ನಾಮವನ್ನು ನೋಡೋಣ. ಸನ್ಮಾರ್ಗದಲ್ಲಿ ನಡೆಯುವ ವರಿಗೆ ತೊಂದರೆಯನ್ನುಂಟುಮಾಡಿ ಅಡ್ಡಬರುವ ದುಷ್ಟರಿಗೆ ಕ್ರೂರನಾಗಿರುವದರಿಂದ ಈ ನಾಮವು ಬಂದಿದೆ. **(570)** ಈಗ **ದ್ರವಿಣಪ್ರದಃ** -ಎಂಬ ನಾಮವನ್ನು ವಿಚಾರಮಾಡೋಣ. ದ್ರವಿಣ - ಎಂದರೆ ಧನವು. ಭಕ್ತರಾದವರು ಭಗವಂತನ

ಆರಾಧನೆಗೆ ಧನವನ್ನು ಬಯಸುತ್ತಾರಾದ್ದರಿಂದ ಅಂಥವರಿಗೆ ಧನವನ್ನು ಕೊಡುತ್ತಾನಾದ್ದರಿಂದ ಈ ನಾಮವು ಬಂದಿರುತ್ತದೆ. ಭಗವಂತನು ಕೊಟ್ಟದ್ದನ್ನೇ ನಾವು ಕೊಡುತ್ತೇವಾಗಿ ದಾಸರು ಹೇಳುವ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ನಾವು ದಾನಾದಿಗಳಿಂದ ಉದ್ಧಾರವಾಗಲು ಭಗವಂತನು ಐಶ್ವರ್ಯವನ್ನು ಕೊಡುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(571)** ಈಗ **ದಿವಃಸ್ಪೃಕ್**- ಎಂಬ ನಾಮವನ್ನು ನೋಡೋಣ. ದಿವಃ - ಎಂದರೆ ಸ್ವರ್ಗಲೋಕವನ್ನು ಸ್ಪೃಕ್ ಎಂದರೆ ಮುಟ್ಟಿರುವವನಾದ್ದರಿಂದ ಈ ನಾಮವು ಬಂದಿದೆ. ಸ್ವರ್ಗಲೋಕವು ಭೂರಾದಿಲೋಕಗಳಿಗಿಂತ ಪ್ರಶಸ್ತವಾದದ್ದು. ಅಲ್ಲಿ ಹಸಿವು-ಬಾಯಾರಿಕೆ ಮರಣಾದಿಗಳ ಭಯವಿಲ್ಲ. ಇಂಥ ಪುಣ್ಯಲೋಕವು ಭಗವಂತನ ಸಂಪರ್ಕದಿಂದ ಶ್ರೇಷ್ಠವಾಗಿದೆ. ಹೀಗೆ ಸ್ವರ್ಗಲೋಕವನ್ನೆಲ್ಲ ಆಕ್ರಮಿಸಿ ಪವಿತ್ರಗೊಳಿಸಿರುವ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(572)** **ಸರ್ವದೃಗ್ ವ್ಯಾಸಃ** - ಎಂಬ ನಾಮವನ್ನು ನೋಡೋಣ. ಈ ನಾಮದಲ್ಲಿ ಎರಡು ಪದಗಳಿವೆ. ಜಗತ್ತಿನಲ್ಲಿರುವ ಎಲ್ಲಾ ವಿದ್ಯೆಗಳಿಗೂ ಒಡೆಯನಾದ ಭಗವಂತನು ಎಲ್ಲವನ್ನೂ ಒಳಹೊಕ್ಕು ವ್ಯಾಪಿಸಿರುವದರಿಂದ ಸರ್ವದೃಗ್ ಎನಿಸಿದ್ದು ಅನಂತರ ವೇದಗಳನ್ನು ಋಗಾದಿರೂಪದಿಂದ ವಿಭಾಗಮಾಡಿರುವದರಿಂದ ವ್ಯಾಸನೆನಿಸಿರುತ್ತಾನೆ. ಋಗ್ವೇದದ 21 ಶಾಖೆಗಳು, ಯಜುರ್ವೇದದ 101 ಶಾಖೆಗಳು, ಸಾಮವೇದದ ಸಹಸ್ರ ಶಾಖೆಗಳು, ಅಥರ್ವವೇದದ ಒಂಭತ್ತು ಶಾಖೆಗಳು - ಹೀಗೆ ವೇದಗಳನ್ನೆಲ್ಲ ವಿಂಗಡಿಸಿ ಭಗವಂತನು ವ್ಯಾಸನೆನಿಸಿರುತ್ತಾನೆ. ಹೀಗೆ ಶಾಖಾಭೇದಗಳನ್ನು ವಿಂಗಡ ಮಾಡಿದ್ದಕ್ಕಾಗಿ ವ್ಯಾಸನೆನಿಸಿರುವದಲ್ಲದೆ ಆಯಾ ಶಾಖೆಗಳ ವಿಸ್ತಾರವನ್ನೂ ಬಲ್ಲವನಾಗಿದ್ದು ಲೋಕಕ್ಕೆ ಅನುಗ್ರಹಿಸಿರುವದರಿಂದ ಈ ನಾಮವು ಭಗವಂತನಿಗೆ ಅನ್ವರ್ಥವಾಗಿದೆ. **(573)** ಈಗ **ವಾಚಸ್ಪತಿರಯೋನಿಜಃ** - ಎಂಬ ನಾಮವನ್ನು ನೋಡೋಣ. ವಾಕ್ ಎಂದರೆ ವೇದವಿದ್ಯೆ. ಇದನ್ನು ಸಂಪೂರ್ಣವಾಗಿ ನಿಸ್ಸಂಶಯವಾಗಿ ಬಲ್ಲವನು ವಾಚಸ್ಪತಿಯು. ವೇದಗಳನ್ನೆಲ್ಲ ಪರಿಪೂರ್ಣವಾಗಿ ಬಲ್ಲವನನ್ನು ವಾಚಸ್ಪತಿ - ಎಂದು ಕರೆಯುವದರೊಡನೆ 'ಅಯೋನಿಜ'ನೆಂಬ ಪದವನ್ನೂ ಕೂಡಿಸಲಾಗಿದೆ. ಮಾತೃಗರ್ಭವಾಸವಿಲ್ಲದೆ ಸ್ವತಂತ್ರವಾಗಿ ಶರೀರವನ್ನು ಧರಿಸಿರುವವನನ್ನು ಅಯೋನಿಜನೆಂದು ಕರೆದಿದೆ. ಭಗವಂತನೊಬ್ಬನೇ ಹೀಗಿರುವವನು. ಆದ್ದರಿಂದ ಈ ನಾಮದಿಂದ ಸ್ತುತಿಸಲಾಗಿದೆ.

**ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ ।**
**ಸಂನ್ಯಾಸಕೃತ್ ಶಮಃ ಶಾನ್ತೋ ನಿಷ್ಠಾ ಶಾನ್ತಿಃ ಪರಾಯಣಮ್ ॥62॥**

**(574)** ಈಗ **ತ್ರಿಸಾಮಾ**- ಎಂಬ ನಾಮವನ್ನು ನೋಡೋಣ. ದೇವವ್ರತ ಗಳೆಂದು ಹೆಸರಾಗಿರುವ ಮೂರು ಸಾಮಗಳಿಂದ ಸ್ತುತಿಸಲ್ಪಟ್ಟವನಾಗಿರುವದರಿಂದ ತ್ರಿಸಾಮಾ - ಎಂದು ಸ್ತೋತ್ರಮಾಡಲಾಗಿದೆ. **(575)ಸಾಮಗಃ** - ಸಾಮವನ್ನುಗಾನ ಮಾಡುವದರಿಂದ ಸಾಮಗನೆನಿಸಿದ್ದಾನೆ. **(576) ಸಾಮ**- ಗೀತೆಯಲ್ಲಿ ವಿಭೂತಿಗಳನ್ನು ವರ್ಣಿಸುವಾಗ 'ವೇದಗಳಲ್ಲಿ ಸಾಮವೇದವು ನಾನಾಗಿರುವೆ' ಎಂದು ಭಗವಂತನೇ ಹೇಳಿರುತ್ತಾನೆ. ಅದರಂತೆ ಅವನು ಸಾಮವೇದಸ್ವರೂಪನಾಗಿರುತ್ತಾನೆ. **(577)** ಈಗ **ನಿರ್ವಾಣಮ್** -ಎಂಬ ನಾಮವನ್ನು ನೋಡೋಣ. ಎಲ್ಲಾ ವಿಧವಾದ ದುಃಖಗಳನ್ನೂ ಶಾಂತಿಗೊಳಿಸುವ ಹಾಗೂ ಪರಮಾನಂದರೂಪವಾದ ಸ್ಥಿತಿಯಲ್ಲಿ ನೆಲೆನಿಲ್ಲುವಿಕೆ -ಎಂಬ ಅರ್ಥದಲ್ಲಿ ಈ ನಾಮವು ಬಂದಿದೆ. **(578) ಭೇಷಜಮ್** - ಸಂಸಾರವೆಂಬ ರೋಗಕ್ಕೆ ಔಷಧರೂಪನಾಗಿರುವದರಿಂದ ಭೇಷಜಮ್-ಎಂದು ಸ್ತುತಿಸಿದೆ. **(579)** ಈಗ **ಭಿಷಕ್** -ಎಂಬ ನಾಮವನ್ನು ನೋಡೋಣ. ಇದು ವೈದ್ಯನೆಂಬ ಅರ್ಥದಲ್ಲಿ ಬಂದಿದೆ. ಸಂಸಾರವೆಂಬ ರೋಗಕ್ಕೆ ಔಷಧರೂಪದಲ್ಲಿ ಭಗವಂತನು ಅರ್ಜುನನಿಗೆ ಗೀತೆಯನ್ನು ಉಪದೇಶಿಸಿದನು. ಕೊನೆಯಲ್ಲಿ ಅರ್ಜುನನು ತನ್ನ ಮೋಹವು ಹೋಯಿತೆಂದೂ ಜ್ಞಾನವುಂಟಾಯಿತೆಂದೂ ತಿಳಿಸಿದನು. ಆದ್ದರಿಂದ ಭಿಷಕ್ ಎಂದು ಭಗವಂತನನ್ನು ಸ್ತುತಿಸಿದೆ. **(580)** ಈಗ **ಸಂನ್ಯಾಸಕೃತ್** - ಎಂಬ ನಾಮವನ್ನು ನೋಡೋಣ. ಮುಕ್ತಿಯನ್ನು ಪಡೆಯುವಸಲುವಾಗಿ ಸಾಧಕನು ಕಡೆಯಲ್ಲಿ ಎಲ್ಲಾ ವ್ಯವಹಾರಗಳನ್ನೂ ಹಾಗೂ ತನ್ನ ಸರ್ವಸ್ವವನ್ನೂ ತ್ಯಾಗಮಾಡುತ್ತಾನೆ. ಇದೇ ಸಂನ್ಯಾಸವು. ಅನಂತರ ತನ್ನ ಆತ್ಮಸ್ವರೂಪವೇ ಆದ ಪರಬ್ರಹ್ಮದಲ್ಲಿ ನೆಲೆನಿಲ್ಲುತ್ತಾನೆ. ಇಂಥ ಸಂನ್ಯಾಸಿಯ ರೂಪದಲ್ಲಿರುವವನು ಭಗವಂತನೇ- ಎಂಬರ್ಥದಲ್ಲಿ ಈ ನಾಮವು ಬಂದಿದೆ. **(581) ಶಮಃ** - ಸಂನ್ಯಾಸಿಗಳಿಗೆ ಮುಕ್ತಿಸಾಧನವಾದದ್ದು ಶಮವು. ಶಮವೆಂಬುದು ಅಂತಃಕರಣಕ್ಕೆ ಸೇರಿದ್ದು. ಸಾಧಕನ ಮನಸ್ಸು ಏರುಪೇರು ಗಳಿಲ್ಲದೆ ಸೀಮಿತವಾಗಿ ನಿಂತುಕೊಳ್ಳುವದೇ ಶಮವು. ಇದು ಅಂತರಂಗಸಾಧನವು. ಆದ್ದರಿಂದ ಈ ನಾಮದಿಂದಲೇ ಭಗವಂತನನ್ನು ಸ್ತುತಿಸಿದೆ. **(582)** ಈಗ **ಶಾನ್ತಃ** - ಎಂಬ ನಾಮವನ್ನು ನೋಡೋಣ. ಶಾಂತಿ ಎಂದರೆ ಮನಸ್ಸು ವಿಷಯಸುಖಗಳಿಂದ ಹಿಮ್ಮೆಟ್ಟಿ ಚಂಚಲತೆಯಿಲ್ಲದೆ ಭಗವಂತನಲ್ಲಿ ನೆಲೆನಿಲ್ಲುವದೇ ಆಗಿದೆ. ಇದು ಸ್ವಭಾವ ದಿಂದಲೇ ಭಗವಂತನಲ್ಲಿದೆಯಾಗಿ ಶಾಂತಃ - ಎಂಬ ಈ ನಾಮದಿಂದ ಸ್ತುತಿಸಿದೆ. **(583)** ಈಗ **ನಿಷ್ಠಾ** - ಎಂಬ ನಾಮವನ್ನು ನೋಡೋಣ. ನಿರಂತರವಾಗಿ ನೆಲೆನಿಲ್ಲುವಿಕೆಯನ್ನು ನಿಷ್ಠಾ - ಎಂದು ಕರೆಯಲಾಗುತ್ತದೆ. ಪ್ರಲಯಕಾಲದಲ್ಲಿ ಜಗತ್ತೆಲ್ಲವೂ ಭಗವಂತನಲ್ಲಿಯೇ ನೆಲೆಗೊಳ್ಳುವದರಿಂದ ಈ ನಾಮವು ಬಂದಿದೆ. **(584)** ಈಗ **ಶಾಂತಿಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ವಿಧವಾದ

ಅವಿದ್ಯೆಯ ನಿವೃತ್ತಿಯೇ ಶಾಂತಿಯೆನಿಸುವದು. ಅದು ಬ್ರಹ್ಮವೇ ಆಗಿರುತ್ತದೆಯಾಗಿ ಈ ನಾಮದಿಂದ ಸ್ತುತಿಸಿದೆ. **(585)** ಈಗ **ಪರಾಯಣಮ್** - ಎಂಬ ನಾಮವನ್ನು ನೋಡೋಣ. ಉತ್ಕೃಷ್ಟವಾದ ಅಯನ - ಎಂದರೆ ಸ್ಥಾನವು. ಅದು ಪುನರಾವೃತ್ತಿ ರಹಿತವಾಗಿರುತ್ತದೆಯಾಗಿ ಅದನ್ನು ಭಗವಂತನ ದಿವ್ಯನಾಮಗಳಲ್ಲಿ ಅಳವಡಿಸಲಾಗಿದೆ.

**ಶುಭಾಂಗಃ ಶಾನ್ತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।**
**ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥63॥**

**(586)** ಈಗ **ಶುಭಾಂಗಃ** - ಎಂಬ ನಾಮವನ್ನು ನೋಡೋಣ. ಸುಂದರವಾದ ಮಂಗಳಕರವಾದ ಶರೀರವನ್ನು ಧರಿಸಿರುವದರಿಂದ ಈ ನಾಮವು ಬಂದಿದೆ. **(587)** **ಶಾಂತಿದಃ** - ಎಂದರೆ ಅಂತಃಕರಣದ ರಾಗದ್ವೇಷಾದಿಗಳನ್ನು ತೊರೆದು ನಿರ್ಮಲವಾದ ಚಿತ್ತಸಮಾಧಾನವನ್ನು ದಯಪಾಲಿಸುವವನಾದ್ದರಿಂದ ಈ ನಾಮವು ಬಂದಿದೆ. **(588)** ಈಗ **ಸ್ರಷ್ಟಾ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯ ಆದಿಕಾಲದಲ್ಲಿ ದೇವ-ಮನುಷ್ಯ-ಯಕ್ಷರಾಕ್ಷಸ-ಪಶುಪಕ್ಷ್ಯಾದಿಜಂಗಮಪ್ರಾಣಿಗಳನ್ನೂ ಗಿಡ - ಮರ-ಪರ್ವತ-ಸಮುದ್ರ-ನದ್ಯಾದಿಸ್ಥಾವರಗಳನ್ನೂ ಸೃಷ್ಟಿಸಿರುತ್ತಾನಾದ್ದರಿಂದ ಸ್ರಷ್ಟಾ- ಎಂದು ಸ್ತುತಿಸಲ್ಪಟ್ಟಿದ್ದಾನೆ. **(589)** ಈಗ **ಕುಮುದಃ** - ಎಂಬ ನಾಮವನ್ನು ನೋಡೋಣ. ಕು - ಎಂದರೆ ಭೂಮಿಯಲ್ಲಿ ಮೋದತೇ - ಎಂದರೆ ಆನಂದದಿಂದ ವಿಹರಿಸುತ್ತಾನೆ ಎಂದು ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(590)** ಈಗ **ಕುವಲೇಶಯಃ** - ಎಂಬ ನಾಮವನ್ನು ನೋಡೋಣ. ಕು - ಎಂದರೆ ಭೂಮಿ. ಅದರಲ್ಲಿ ವಲನ - ಎಂದರೆ ಸಂಚರಿಸುತ್ತಿರುವದರಿಂದ-ಕುವಲನೆಂದರೆ ನೀರು. ಅದರಲ್ಲಿ ಮಲಗಿರುತ್ತಾನಾದ್ದರಿಂದ ಈ ನಾಮವು ಬಂದಿದೆ. **(591)** ಈಗ **ಗೋಹಿತಃ** - ಎಂಬ ನಾಮವನ್ನು ನೋಡೋಣ. ಗೋವುಗಳ ಏಳಿಗೆಗೆ( ಉದ್ಧಾರಕ್ಕಾಗಿ)ಗೋವರ್ಧನವೆಂಬ ಪರ್ವತವನ್ನು ಎತ್ತಿಹಿಡಿದವನಾದ್ದರಿಂದ ಗೋಹಿತನೆನಿಸಿರುತ್ತಾನೆ. **(592)** ಈಗ **ಗೋಪತಿಃ** - ಎಂಬ ನಾಮವನ್ನು ವಿಚಾರಮಾಡೋಣ. ಗೋ ಎಂಬ ಶಬ್ದಕ್ಕೆ ಭೂಮಿ - ಎಂಬರ್ಥವೂ ಇದೆ. ಆಗ ಭೂಮಿಗೆಲ್ಲವೂ ಒಡೆಯನು - ಎಂಬರ್ಥವು ಹೊಂದುತ್ತದೆ. ವ್ಯವಹಾರ ದಲ್ಲಿ ಭೂಮಿಯ ಬೇರೆಬೇರೆಯ ಭಾಗಗಳಿಗೆ ಬೇರೆಬೇರೆಯ ಒಡೆಯರಿದ್ದರೂ ಅವರಾರೂ ಶಾಶ್ವತರಲ್ಲ. ಆದ್ದರಿಂದ ಭೂಮಿಯನ್ನೂ ಸೃಷ್ಟಿಮಾಡಿ ರಸಾತಲದಿಂದ ಮೇಲಕ್ಕೆತ್ತಿ ಕಾಪಾಡಿದ ಭಗವಂತನು ಮಾತ್ರವೇ ನಿಜವಾದ ಗೋಪತಿಯೆನಿಸಿರುತ್ತಾನೆ. **(593)** ಈಗ **ಗೋಪ್ತಾ** - ಎಂಬ ನಾಮವನ್ನು ನೋಡೋಣ. ಜಗತ್ತನ್ನೆಲ್ಲ ರಕ್ಷಣೆ ಮಾಡುವವನಾದ್ದರಿಂದ ಈ ಹೆಸರು ಬಂದಿದೆ. ಅಥವಾ ತನ್ನ ಮಾಯೆಯಿಂದ ಸೃಷ್ಟಿಯಲ್ಲಿರುವ ಜೀವರುಗಳಿಗೆಲ್ಲ ತಾನು ಮರೆಯಾಗಿದ್ದುಕೊಂಡು ಜಗತ್ತಿನ ಕಾರ್ಯ

ಗಳನ್ನು ನಿರ್ವಹಿಸುತ್ತಾನಾಗಿ ಈ ನಾಮವು ಬಂದಿದೆ. **(594)** ಈಗ **ವೃಷಭಾಕ್ಷಃ** - ಎಂಬ ನಾಮವನ್ನು ನೋಡೋಣ. ಭಗವದ್ಭಕ್ತರ ಎಲ್ಲಾ ಬಯಕೆಗಳನ್ನೂ ನೆರವೇರಿಸಿ ಕೊಟ್ಟು ಉದ್ಧಾರಮಾಡುತ್ತಾನಾದ್ದರಿಂದ, ಅಥವಾ ವೃಷ- ಎಂದರೆ ಧರ್ಮವು. ಅದೇ ಭಗವಂತನ ಕಣ್ಣು(ದೃಷ್ಟಿ)ಆಗಿರುತ್ತದೆ- ಎಂದರೆ ಧರ್ಮವೇ ಅವನ ಲೋಚನಗಳಾಗಿವೆ ಯಾಗಿ ಈ ನಾಮವು ಬಂದಿದೆ. **(595)** ಈಗ **ವೃಷಪ್ರಿಯಃ** - ಎಂಬ ನಾಮವನ್ನು ನೋಡೋಣ. ಧರ್ಮವೇ ಪ್ರಿಯ(ಇಷ್ಟ)ವಾಗಿ ಉಳ್ಳವನಾದ್ದರಿಂದ ಈ ನಾಮವು ಬಂದಿದೆ.

**ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।**
**ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂ ವರಃ ॥64॥**

**(596) ಅನಿವರ್ತೀ** - ಎಂದರೆ ತನ್ನ ಕರ್ತವ್ಯಗಳಿಂದ ಹಿಂದಿರುಗದವನು ಎಂದರ್ಥ. ಭಗವಂತನು ಯಾವ ಕೆಲಸವನ್ನು ಪ್ರಾರಂಭಿಸಿದರೂ ಅದು ಪೂರ್ಣವಾಗಿ ಫಲಪ್ರಾಪ್ತಿಯಾಗುವವರೆಗೂ ಹಿಂದಿರುಗುವವನಲ್ಲ, ಹಾಗೂ ಹಿಂಜರಿಯುವವನೂ ಅಲ್ಲ. ಆದ್ದರಿಂದ ಈ ನಾಮವು ಬಂದಿದೆ. ಅಥವಾ ಧರ್ಮಪ್ರಿಯನಾಗಿರುವದರಿಂದ ಧರ್ಮವನ್ನು ಕೈಬಿಟ್ಟು ಹಿಂದಿರುಗುವವನಲ್ಲವಾದ್ದರಿಂದಲೂ ಈ ನಾಮವು ಬಂದಿರುತ್ತದೆ. **(597)** ಈಗ **ನಿವೃತ್ತಾತ್ಮಾ** - ಎಂಬ ನಾಮವನ್ನು ನೋಡೋಣ. ಸ್ವಭಾವದಿಂದಲೇ ಜೀವರಿಗೆ ವಿಷಯಗಳಲ್ಲಿಯೇ ಪ್ರವೃತ್ತಿಯಿರುತ್ತದೆ. ಆದರೆ ಭಗವಂತನು ಹೀಗಲ್ಲ. ಅವನು ಬಾಹ್ಯವಿಷಯಗಳಿಂದ ಹಿಂದಿರುಗಿದ (ನಿವೃತ್ತ) ಮನಸ್ಸುಳ್ಳವನಾಗಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(598)** ಈಗ **ಸಂಕ್ಷೇಪ್ತಾ** - ಎಂಬ ನಾಮವನ್ನು ನೋಡೋಣ. ಬಿಡಿಬಿಡಿಯಾಗಿ ಹರಡಿಕೊಂಡಿರುವ ಜಗತ್ತನ್ನು ಸಂಹಾರಕಾಲದಲ್ಲಿ ಸೂಕ್ಷ್ಮರೂಪದಿಂದ ಸಂಕ್ಷೇಪಗೊಳಿಸುವನಾದ್ದರಿಂದ ಈ ನಾಮವು ಬಂದಿದೆ. **(599)** ಈಗ **ಕ್ಷೇಮಕೃತ್** - ಎಂಬ ನಾಮವನ್ನು ನೋಡೋಣ. ಸಂಪಾದಿಸಿದ್ದು ಕಾಪಾಡಿಕೊಳ್ಳುವಿಕೆಯನ್ನು ಕ್ಷೇಮವೆನ್ನುತ್ತಾರೆ. ಭಗವಂತನು ತಾನೂ ಕ್ಷೇಮವಾಗಿದ್ದು ತನ್ನ ಭಕ್ತರ ಕ್ಷೇಮವನ್ನೂ ನೋಡಿಕೊಳ್ಳುತ್ತಾನಾಗಿ ಈ ನಾಮವು ಬಂದಿದೆ. **(600)** ಈಗ **ಶಿವಃ** - ಎಂಬ ನಾಮವನ್ನು ನೋಡೋಣ. ಶಿವ, ಭದ್ರ, ಕಲ್ಯಾಣ, ಮಂಗಳ, ಶುಭ - ಇವೆಲ್ಲಕ್ಕೂ ಒಂದೇ ಅರ್ಥ. ಭಗವಂತನ ದಿವ್ಯನಾಮ ವನ್ನು ಸ್ಮರಿಸಿದ ಮಾತ್ರದಿಂದ ಸಾಧಕನು ಪವಿತ್ರನಾಗಿ ಉದ್ಧಾರವಾಗುವನು. ಆದ್ದರಿಂದ ಈ ನಾಮವು ಬಂದಿದೆ.

**ಇಲ್ಲಿಗೆ ಆರನೆಯ ಶತಕವು ಮುಗಿಯಿತು.**

Z Z Z

# ಸಪ್ತಮಶತಕ

**(601)** ಈಗ **ಶ್ರೀವತ್ಸವಕ್ಷಾಃ** - ಎಂಬ ನಾಮವನ್ನು ವಿಚಾರಮಾಡೋಣ. ಶ್ರೀವತ್ಸ- ಎಂಬ ಹೆಸರಿನ ಚಿಹ್ನೆ(ಗುರುತು)ಯು ಭಗವಂತನ ಎದೆಯಲ್ಲಿದೆ. ಆದ್ದರಿಂದ ಈ ಹೆಸರಿಂದ ಸ್ತುತಿಸಲ್ಪಟ್ಟಿರುತ್ತಾನೆ. **(602)** ಈಗ **ಶ್ರೀವಾಸಃ** - ಎಂಬ ನಾಮವನ್ನು ನೋಡೋಣ. ಶ್ರೀಃ ಎಂದರೆ ಧನಲಕ್ಷ್ಮಿಯು. ಈ ದೇವಿಯು ಭಗವಂತನ ಎದೆಯ ಮೇಲೆ ಎಂದಿಗೂ ಅಗಲದೆ ಶಾಶ್ವತವಾಗಿ ವಾಸವಾಗಿರುತ್ತಾಳೆ. ಆದ್ದರಿಂದ ಶ್ರೀವಾಸ-ನೆಂದು ಹೊಗಳಿದೆ. **(603)** **ಶ್ರೀಪತಿಃ** - ಇನ್ನು ಅಮೃತವನ್ನು ಕಡೆಯುವ ಕಾಲಕ್ಕೆ ಕ್ಷೀರಸಮುದ್ರದಲ್ಲಿ ಆವಿರ್ಭವಿಸಿದ ಶ್ರೀಮಹಾಲಕ್ಷ್ಮಿಯು ಅಲ್ಲಿದ್ದ ದೇವಾಸುರರನ್ನೆಲ್ಲ ಕೈಬಿಟ್ಟು ಶ್ರೀಮಹಾವಿಷ್ಣುವನ್ನೇ ತನ್ನ ಪತಿಯಾಗಿ ಸ್ವೀಕರಿಸಿದಳು. ಆದ್ದರಿಂದ ಭಗವಂತನನ್ನು ಶ್ರೀಪತಿ - ಎಂದು ಸ್ತುತಿಸಿದೆ. ಅಥವಾ ಶ್ರೀಃ ಎಂದರೆ ಪರಾಶಕ್ತಿ - ಎಂದು ಅರ್ಥಮಾಡಿದರೆ ಆ ಶಕ್ತಿಮಾತೆಗೂ ಪತಿಯಾದ್ದರಿಂದಲೂ ಶ್ರೀಪತಿ - ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(604)** ಈಗ **ಶ್ರೀಮತಾಂ ವರಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಶ್ರೀಃ ಎಂದರೆ ಋಗಾದಿವೇದಗಳು - ಎಂದರ್ಥ. ಇಂಥ ವೇದಸಂಪತ್ತುಗಳೆಲ್ಲಕ್ಕೂ ಹಾಗೂ ಬ್ರಹ್ಮಾದಿದೇವತೆಗಳಿಗೂ ಒಡೆಯನೂ ಮುಖ್ಯಸ್ಥನೂ ಆಗಿರುವದರಿಂದ ಶ್ರೀಮಹಾವಿಷ್ಣುವನ್ನು ಈ ನಾಮದಿಂದ ಸ್ತುತಿಸಲಾಗಿದೆ.

**ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ ।**
**ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾನ್ ಲೋಕತ್ರಯಾಶ್ರಯಃ ॥65॥**

**(605)** ಈಗ **ಶ್ರೀದಃ** - ಎಂಬ ನಾಮವನ್ನು ನೋಡೋಣ. ಭಕ್ತರಿಗೆ ಶ್ರೀ- ಎಂದರೆ ಸಂಪತ್ತನ್ನು ದಃ - ಕೊಡುವವನಾದ್ದರಿಂದ ಶ್ರೀದನೆನಿಸಿರುತ್ತಾನೆ. ಭಗವಂತನು ಕೊಡುವ ಐಶ್ವರ್ಯವು ನಿತ್ಯವಾಗಿಯೂ ಸುಖಕರವಾಗಿಯೂ ಇರುತ್ತದೆ. "ಮಾವ ಕೊಟ್ಟದ್ದು ಮನೆ ತನಕ, ದೇವರು ಕೊಟ್ಟದ್ದು ಕೊನೆಯ ತನಕ" ಎಂಬ ನಾಣ್ನುಡಿಯೂ ಇದೆ. ಆದ್ದರಿಂದ ಭಗವಂತನು ಕೊಟ್ಟಷ್ಟರಲ್ಲಿಯೇ ನಾವು ತೃಪ್ತರಾಗಿರಬೇಕು. ಒಮ್ಮೆ ಕೃಷ್ಣಭಕ್ತನಾದ ಕುಚೇಲನನ್ನು ಅವನ ಹೆಂಡತಿಯು ಒತ್ತಾಯಮಾಡಿ ಐಶ್ವರ್ಯವನ್ನು ಪಡೆಯಲು ತನ್ನ ಪತಿಯ ಸ್ನೇಹಿತನಾದ ಕೃಷ್ಣನ ಬಳಿಗೆ ಕಳುಹಿಸಿದಳು. ಕುಚೇಲನನ್ನು ಕಂಡ ಕೃಷ್ಣನು ತನ್ನ ಬಾಲ್ಯಸ್ನೇಹಿತನಾದ ಅವನಿಗೆ ಬಹಳವಾಗಿ ಉಪಚಾರ-ಆತಿಥ್ಯಗಳನ್ನು ಮಾಡಿದನು. ಆದರೆ ಕುಚೇಲನು ಸಂಕೋಚದಿಂದ ಐಶ್ವರ್ಯವನ್ನು ಕೇಳಲಿಲ್ಲ. ಭಗವಂತನು ತಾನೇ ಕೊಡಲೂ ಇಲ್ಲ. ಆದರೆ ಅವನು ಮನೆಗೆ ಬರುವ

ವೇಳೆಗೆ ಅವನ ಗೃಹವು "ಸುಧಾಮನಗರಿ" ಯಾಗಿತ್ತು. ಸಮಸ್ತ ಐಶ್ವರ್ಯವೂ ತುಂಬಿ ತುಳುಕುತ್ತಿತ್ತು. ಹೀಗೆ "ಶ್ರೀದಃ" ಎಂಬ ನಾಮವು ಭಗವಂತನಿಗೆ ಅನ್ವರ್ಥವಾಗಿದೆ. **(606)**ಈಗ **ಶ್ರೀಶಃ** - ಎಂಬ ನಾಮವನ್ನು ನೋಡೋಣ. ಶ್ರೀ - ಎಂದರೆ ಲಕ್ಷ್ಮಿಯು. ಆಕೆಗೆ ಪತಿಯಾದ್ದರಿಂದ ಭಗವಂತನಿಗೆ ಈ ನಾಮವು ಬಂದಿದೆ. ಶ್ರೀದೇವಿಯು ಯಾರಿಗೇ ಆಗಲಿ ಐಶ್ವರ್ಯವನ್ನು ಕರುಣಿಸಬೇಕಾದರೆ ಶ್ರೀಶನಾದ ಭಗವಂತನ ಅಪ್ಪಣೆಯನ್ನು ಪಡೆದೇ ಅನುಗ್ರಹಿಸುತ್ತಾಳೆ. ಆದ್ದರಿಂದ ಈ ನಾಮವು ಅನ್ವರ್ಥವಾಗಿದೆ. **(607)** ಈಗ **ಶ್ರೀನಿವಾಸಃ** - ಎಂಬ ನಾಮವನ್ನು ನೋಡೋಣ. ಶ್ರೀಮಂತರಲ್ಲಿ ಯಾವಾಗಲೂ ವಾಸಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. ಇಲ್ಲಿ ಶ್ರೀ - ಎಂದರೆ ಧನಕನಕಾದಿಗಳಲ್ಲ. ವೇದದಲ್ಲಿ ಹೇಳಿರುವ ಈ ವಾಕ್ಯವನ್ನು ಕೇಳಿರಿ. ಅದು ಹೀಗಿದೆ : "ಋಚಃ ಸಾಮಾನಿ ಯಜೂಗ್ಂಷಿ । ಸಾ ಹಿ ಶ್ರೀರಮೃತಾ ಸತಾಮ್" (ಸಜ್ಜನರಿಗೆ ಋಗ್ವೇದ-ಯಜುರ್ವೇದ-ಸಾಮವೇದಗಳೇ ಅಮೃತರೂಪವಾದ ಸಂಪತ್ತು) ಎಂದು ವೈದಿಕವಿದ್ಯೆಯನ್ನೇ ಸಂಪತ್ತು - ಎಂದು ಸ್ತುತಿಸಿದೆ. ಇಂಥ ಸಂಪತ್ತು ಭಗವಂತನಲ್ಲಿ ಪರಿಪೂರ್ಣವಾಗಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(608)** ಈಗ **ಶ್ರೀನಿಧಿಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಶ್ರೀ ಎಂದರೆ ಕೇವಲ ಹಣಮಾತ್ರವಲ್ಲ. ಜ್ಞಾನ, ಶಕ್ತಿ, ಬಲ, ಐಶ್ವರ್ಯ(ಸ್ವಾತಂತ್ರ್ಯ)ವೀರ್ಯ, ತೇಜಸ್ಸು - ಈ ಆರು ಗುಣಗಳೂ ಯಾವನಲ್ಲಿ ನಿತ್ಯವೂ ಪರಿಪೂರ್ಣವೂ ಆಗಿರುವವೋ ಅವನೇ ಶ್ರೀನಿಧಿಯು. ಆದ್ದರಿಂದ ಈ ನಾಮದಿಂದ ಸ್ತುತಿಸಿದೆ. **(609)** **ಶ್ರೀವಿಭಾವನಃ** - ಎಂಬ ನಾಮವನ್ನು ವಿಚಾರಮಾಡೋಣ. ಜೀವರುಗಳಿಗೆ ಅವರವರ ಕರ್ಮಾನುಗುಣವಾಗಿ ನಾನಾ ರೀತಿಯ ಸಂಪತ್ತುಗಳನ್ನು - ಎಂದರೆ ಮಕ್ಕಳು, ಮೊಮ್ಮಕ್ಕಳು, ಹಣ, ದವಸ ಧಾನ್ಯಗಳು, ಆನೆ-ಕುದುರೆಗಳು (ಈಗಿನ ಕಾಲಕ್ಕೆ ಕಾರು, ವಿಮಾನ ಮುಂತಾದವು) - ಎಲ್ಲಕ್ಕಿಂತ ಮಿಗಿಲಾದ ಆಯುಷ್ಯ, ಆರೋಗ್ಯಾದಿಗಳು - ಇವೆಲ್ಲವೂ ಶ್ರೀ - ಎನಿಸುತ್ತವೆ. ಇಂಥ ಗಜಾಂತೈಶ್ವರ್ಯವನ್ನು ಲೋಕಕ್ಕೆ ದಯ ಪಾಲಿಸುವವನಾದ್ದರಿಂದ ಈ ನಾಮವು ಬಂದಿರುತ್ತದೆ. **(610)** ಈಗ **ಶ್ರೀಧರಃ** - ಎಂಬ ನಾಮವನ್ನು ನೋಡೋಣ. ಶ್ರೀ - ಎಂದರೆ ಮಹಾಲಕ್ಷ್ಮಿಯು. ಇವಳು ಜಗಜ್ಜನನಿಯೆನಿಸಿರುವಳು. ಸ್ಥಾವರಜಂಗಮಾತ್ಮಕವಾದ ಸಕಲಪ್ರಪಂಚಕ್ಕೂ ಈಕೆಯೇ ಮಾತೆಯು. ಇಂಥ ಶ್ರೀಯನ್ನು ಎದೆಯಲ್ಲಿಯೇ ಧರಿಸಿರುವದರಿಂದ ಭಗವಂತನು ಶ್ರೀಧರನೆನಿಸಿರುತ್ತಾನೆ. **(611)** ಈಗ **ಶ್ರೀಕರಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಮನದಲ್ಲಿ ನೆನೆಯುತ್ತಿರುವವರಿಗೆ, ಮತ್ತು ಸ್ತೋತ್ರಮಾಡುತ್ತಿರು ವವರಿಗೆ, ಹಾಗೂ ಬಹಿರಂಗವಾಗಿ ಅರ್ಚನೆಮಾಡುತ್ತಿರುವವರಿಗೆ - ಇವರೆಲ್ಲರಿಗೂ ಶ್ರೀಯನ್ನು (ಐಶ್ವರ್ಯ, ಬುದ್ಧಿ, ಆಯುಷ್ಯ, ಆರೋಗ್ಯ, ಔದಾರ್ಯಾದಿ)ಗುಣಗಳನ್ನೂ

ನೀಡುವವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. (612) ಈಗ **ಶ್ರೇಯಃ** - ಎಂಬ ನಾಮವನ್ನು ನೋಡೋಣ. ಎಂದೆಂದಿಗೂ ನಾಶವಾಗದ ಹಾಗೂ ಬಿಟ್ಟಗಲದ ಸುಖವನ್ನು ದಯಪಾಲಿಸಿ ತನ್ನ ಭಕ್ತರನ್ನು ಕಾಪಾಡುತ್ತಾನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. (613) ಈಗ **ಶ್ರೀಮಾನ್** - ಎಂಬ ನಾಮವನ್ನು ನೋಡೋಣ. ಶ್ರೀರೂಪನಾದ ಎಲ್ಲಾ ಸಂಪತ್ತುಗಳನ್ನೂ ನಿತ್ಯವಾಗಿ ಪಡೆದಿದ್ದು ಸಕಲ ವಿದ್ಯೆಗಳನ್ನೂ ಬಲ್ಲವನಾಗಿದ್ದು ಅನಂತವಾದ ಸಂಪತ್ತುಗಳನ್ನು ನಿತ್ಯವಾಗಿ ಹೊಂದಿರು ವವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. (614) ಈಗ **ಲೋಕತ್ರಯಾ ಶ್ರಯಃ** ಎಂಬ ನಾಮವನ್ನು ನೋಡೋಣ. ಸ್ವರ್ಗ - ಮರ್ತ್ಯ- ಪಾತಾಳ- ಎಂಬ ಮೂರು ಲೋಕಗಳಿಗೂ ಆಧಾರನೂ ಆಶ್ರಯನೂ ಆಗಿದ್ದು ಅವುಗಳನ್ನು ತನ್ನ ಉದರ ದಲ್ಲಿಯೇ ಧರಿಸಿರುವನಾದ್ದರಿಂದಲೂ ಈ ನಾಮವು ಬಂದಿರುತ್ತದೆ.

**ಸ್ವ ಕ್ಷಃ ಸ್ವಂಗಃ ಶತಾನನ್ದೋ ನಂದಿರ್ಜ್ಯೋತಿರ್ಗಣೇಶ್ವರಃ ।**
**ವಿಜಿತಾತ್ಮಾऽವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥66॥**

(615)**ಸ್ವ ಕ್ಷಃ** - ಶೋಭನವೂ ಕಮಲದಂತೆ ಅರಳಿದ ಸುಂದರವಾದ ನೇತ್ರಗಳೂ ಉಳ್ಳವನಾದ್ದರಿಂದ ಈ ನಾಮವು ಬಂದಿದೆ. ಸು - ಎಂದರೆ ಸುಂದರವಾದ ಅಕ್ಷ- ಎಂದರೆ ನೇತ್ರಗಳು - ಎಂದರ್ಥ. ಇದು ಭಗವಂತನಿಗೆ ಪರಿಪೂರ್ಣವಾಗಿ ಇದೆ. ಲೋಕದ ಜನರಲ್ಲಿಯೂ ಕೆಲವರಿಗೆ ಸುಂದರನೇತ್ರಗಳಿದ್ದರೂ ಅವು ಶಾಶ್ವತವಲ್ಲ. ಏಕೆಂದರೆ ವಯಸ್ಸಾದ ಮೇಲೆ ಪೊರೆಬರುವದು, ಹಾಗೂ ಕಣ್ಣಿನ ರೋಗಗಳು ಸಂಭವಿಸುವದು - ಇತ್ಯಾದಿ ಕಾರಣಗಳಿಂದ ಅನಿತ್ಯವಾಗಿರುತ್ತವೆ. ಭಗವಂತನದಾದರೊ, ಎಂದೆಂದಿಗೂ ವಿಕಾರವಾಗದ ದಿವ್ಯನೇತ್ರಗಳೇ ಇರುವದರಿಂದ ಸ್ವಕ್ಷಃ -ಎಂಬ ನಾಮವು ವಿಶಿಷ್ಟವಾಗಿದೆ. (616) ಈಗ **ಸ್ವಂಗಃ** - ಎಂಬ ನಾಮವನ್ನು ನೋಡೋಣ. ಅಂಗ - ಎಂದರೆ ಶರೀರದ ಅವಯುವ - ಎಂದರ್ಥ. ಭಗವಂತನು ನಿರಾಕಾರನಾಗಿದ್ದರೂ ಲೋಕವ್ಯವಹಾರಕಾಲಕ್ಕೆ ಶರೀರವನ್ನು ಧರಿಸುತ್ತಾನೆ. ಇಂಥ ಶರೀರವು ಸುಂದರವೂ ಆಕರ್ಷಕವೂ ಆಗಿರುತ್ತದೆ. ರಾಮಕೃಷ್ಣಾವತಾರಗಳಲ್ಲಿ ಇದು ಪ್ರಸಿದ್ಧವಾಗಿದೆ. ಹೀಗೆ ಭಗವಂತನು ರಾಮಾದ್ಯವತಾರಗಳಲ್ಲಿ ಶೋಭನಶರೀರವುಳ್ಳವನಾಗಿದ್ದು ಈ ನಾಮ ದಿಂದ ಸ್ತುತಿಸಲ್ಪಟ್ಟಿರುತ್ತಾನೆ. (617) ಈಗ **ಶತಾನಂದಃ** - ಎಂಬ ನಾಮವನ್ನು ನೋಡೋಣ. ಒಂದೇ ಆಗಿರುವ ಆನಂದವು ಉಪಾಧಿಭೇದದಿಂದ ನೂರುರೂಪಗಳಾಗಿ ತೋರಿಕೊಳ್ಳುತ್ತದೆ. ಆಗ ವ್ಯವಹಾರದೃಷ್ಟಿಯಿಂದ ಮಾನುಷಾನಂದದಿಂದಾರಂಭಿಸಿ ಬ್ರಹ್ಮಾನಂದದವರೆಗೂ ಒಂದುನೂರರಷ್ಟು ಪ್ರತಿಯೊಂದು ಆನಂದವೂ ಬೆಳೆದು ಬ್ರಹ್ಮಾನಂದದಲ್ಲಿ ಪರಿಸಮಾಪ್ತವಾಗುತ್ತದೆ. ಇದೆಲ್ಲವೂ ಆ ಭಗವಂತನ

ದಿವ್ಯವಿಭೂತಿಗಳೇ ಆಗಿರುತ್ತವೆ. ಕಟ್ಟಕಡೆಗೆ ಬ್ರಹ್ಮಾನಂದದಲ್ಲಿ ನೆಲೆನಿಂತಾಗ ಲೆಕ್ಕಕ್ಕೆ ಎಟುಕದೆ ಹೋಗಿ ಗಣಿತನಿವೃತ್ತಿಯಾಗಿ ಬಿಡುತ್ತದೆ. ಇದೇ ಅಖಂಡಾನಂದವು. ಇದನ್ನು ವೇದದಲ್ಲಿ ಬ್ರಹ್ಮಾನಂದವೆಂದೂ ಉಲ್ಲೇಖಿಸಿದೆ. ಇಲ್ಲಿಂದ ಮುಂದಕ್ಕೆ ಗಣಿತನಿವೃತ್ತಿ ಎಂದರೆ ಲೆಕ್ಕದ ಚೌಕಟ್ಟನ್ನೇ ಮೀರಿಬಿಡುವದರಿಂದ ಆನಂದ - ಆನಂದಿ - ಎಂಬ ವಿಭಾಗವೂ ಇಲ್ಲವಾಗಿಬಿಡುತ್ತದೆ. ಸಮುದ್ರವನ್ನು ಸೇರಿದನದಿಗಳು ನಾಮರೂಪ ಗಳನ್ನು ಕಳೆದುಕೊಳ್ಳುವಂತೆ ಇಲ್ಲಿಯೂ ವ್ಯವಹಾರವಿಲ್ಲವಾಗಿಬಿಡುತ್ತದೆ. ಇದೇ ಶತಾ ನಂದದ ಪರಮಾವಧಿಯು. **(618)**ಈಗ **ನಂದಿಃ** -ಎಂಬ ನಾಮವನ್ನು ನೋಡೋಣ. ನಂದತೇ - ಇತಿ ನಂದಿಃ - ಎಂಬ ವಿವರಣೆಯಂತೆ ಪರಮಾನಂದವಿಗ್ರಹನಾದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. ಇವನಲ್ಲಿ - ಹೇಗೆ ಸೂರ್ಯನಲ್ಲಿ ಕತ್ತಲೆಯ ಲವಲೇಶವೂ ಇರುವದಿಲ್ಲವೋ ಹಾಗೆಯೇ ಭಗವಂತನಲ್ಲಿ ದುಃಖದ ಲವಲೇಶವೂ ಇರುವದಿಲ್ಲ. ಆದ್ದರಿಂದ ನಂದಿ - ಎನಿಸಿರುತ್ತಾನೆ. **(619)** ಈಗ **ಜ್ಯೋತಿರ್ಗಣೇಶ್ವರಃ** - ಎಂಬ ನಾಮವನ್ನು ನೋಡೋಣ. ಜ್ಯೋತಿರ್ಗಣಗಳಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳು, ವಿದ್ಯುತ್, ಅಗ್ನಿ ಇವುಗಳೆಲ್ಲವೂ ಸೇರಿದ್ದು ಜ್ಯೋತಿ -ರ್ಗಣಗಳೆನಿಸಿವೆ. ಇವುಗಳನ್ನೆಲ್ಲ ಒಳಹೊಕ್ಕಿರುವವನು ಭಗವಂತನೇ. ಅವನು ನಿತ್ಯಚೈತನ್ಯಜ್ಯೋತಿಸ್ವರೂಪನು. ಅವನೇ ಇವುಗಳ ಒಡೆಯನು. ಆದ್ದರಿಂದ ಈ ನಾಮವು ಬಂದಿದೆ. **(620)** ಈಗ **ವಿಜಿತಾತ್ಮಾ** - ಎಂಬ ನಾಮವನ್ನು ನೋಡೋಣ. ಇಲ್ಲಿ ಆತ್ಮಾ ಎಂದರೆ ಮನಸ್ಸು - ಎಂದು ಅರ್ಥ. ಭಗವಂತನು ಮನಸ್ಸನ್ನು ಗೆದ್ದಿರುತ್ತಾನೆ. ಮತ್ತು ಅವನು, ಮನೋಗೋಚರನೂ ಅಲ್ಲ. ಆದರೆ ಅವನ ಹಿನ್ನೆಲೆಯಿಲ್ಲವಾದರೆ ಮನಸ್ಸು ಏನೂ ಚಿಂತಿಸಲಾರದು. ಹೀಗೆ ಮನಸ್ಸಿನ ವ್ಯಾಪಾರಗಳಿಗೆಲ್ಲ ಭಗವಂತನೇ ಪ್ರೇರಕನೂ ಹಿನ್ನೆಲೆಯೂ ಆಗಿದ್ದು ಆ ಮನಸ್ಸನ್ನು ಪೂರ್ಣವಾಗಿ ಗೆದ್ದು ತಾನೇ ವಶಪಡಿಸಿಕೊಂಡಿರುತ್ತಾನಾಗಿ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(621)** ಈಗ **ಅವಿಧೇಯಾತ್ಮಾ** - ಎಂಬ ನಾಮವನ್ನು ನೋಡೋಣ. ಯಾರಿಗೂ ವಿಧೇಯನಾಗದ ಎಂದರೆ ವಶನಾಗದೆ ಸ್ವತಂತ್ರನಾದವನಾಗಿರುವವನಾದ್ದರಿಂದ ಅವಿಧೇಯಾತ್ಮನೆನಿಸಿರುತ್ತಾನೆ. ಇಲ್ಲಿ ಅವಿಧೇಯನೆಂದರೆ ವಿಧಿನಿಷೇದಗಳ ಚೌಕಟ್ಟನ್ನು ಮೀರಿದ ಸ್ವತಂತ್ರನು- ಎಂದರ್ಥ. ಹೀಗೆ ಭಗವಂತನನ್ನು ಆಳುವವರು ಯಾರೂ ಇಲ್ಲ. ಅವನೇ ಎಲ್ಲರನ್ನೂ ಆಳುವವನು. ಆದ್ದರಿಂದ ಅವಿಧೇಯಾತ್ಮನೆನಿಸಿರುತ್ತಾನೆ. **(622)** ಈಗ **ಸತ್ಕೀರ್ತಿಃ** - ಎಂಬ ನಾಮವನ್ನು ನೋಡೋಣ. ಸತೀ ಕೀರ್ತಿಃ - ಎಂಬ ವ್ಯುತ್ಪತ್ತಿಯಂತೆ ಎಂದೆಂದಿಗೂ ಅಳಿಸಿಹೋಗದೆ ನಿತ್ಯವಾಗಿರುವ ಕೀರ್ತಿಯುಳ್ಳವನು. ಭಗವಂತನು - ಎಂದರ್ಥ. ಶ್ರೀರಾಮನ ದಿವ್ಯಕೀರ್ತಿಯು ಅಚ್ಚಳಿಯದೆ ಕಾಲ - ದೇಶಗಳನ್ನೂ ಮೀರಿ ಶಾಶ್ವತವಾಗಿ ನೆಲೆಗೊಂಡಿದೆಯಾಗಿ, ಭಗವಂತನೊಬ್ಬನೇ ಸತ್ಕೀರ್ತಿಯೆನಿಸಿರುತ್ತಾನೆ.

**(623)** ಈಗ **ಛಿನ್ನಸಂಶಯಃ** - ಎಂಬ ನಾಮವನ್ನು ನೋಡೋಣ. ಜಗತ್ತಿನ ಎಲ್ಲಾ ವ್ಯವಹಾರಗಳನ್ನೂ ಮರೆಯಿಲ್ಲದೆ -ಅಂಗೈನಲ್ಲಿನ ನೆಲ್ಲಿಕಾಯಿಯಂತೆ ಪರಿಪೂರ್ಣವಾಗಿ ಬಲ್ಲವನಾಗಿದ್ದು ಸಂಶಯಗಳೇ ಇಲ್ಲದವನಾಗಿರುವದರಿಂದ ಈ ನಾಮವು ಬಂದಿದೆ.

**ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಃ ಸ್ಥಿರಃ ।**
**ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥67॥**

**(624)** **ಉದೀರ್ಣಃ** -ನೆಂದರೆ ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳಿಗಿಂತಲೂ ಭಗವಂತನು ಉತ್ಕೃಷ್ಟನಾಗಿರುವದರಿಂದ ಈ ನಾಮವು ಬಂದಿದೆ. ಭಗವಂತನಿಗೆ ಸಮನಾದವರೇ ಇಲ್ಲ. ಇನ್ನು ಉತ್ಕೃಷ್ಟನಾದವನು ಎಲ್ಲಿದ್ದಾನು? ಎಂದು ಗೀತೆಯಲ್ಲಿ ಅರ್ಜುನನು ಸ್ತುತಿಸಿರುತ್ತಾನೆ. ಹೀಗೆ ಈ ನಾಮವು ಭಗವಂತನಿಗೆ ಅನ್ವರ್ಥವಾಗಿದೆ. **(625)** ಈಗ **ಸರ್ವತಶ್ಚಕ್ಷುಃ** - ಎಂಬ ನಾಮವನ್ನು ನೋಡೋಣ. ಎಲ್ಲೆಲ್ಲಿಯೂ ಇರುವ ಎಲ್ಲಾ ರೀತಿಯ ಪದಾರ್ಥಗಳನ್ನೂ (ಸ್ಥಾವರಜಂಗಮಗಳನ್ನೂ) ತನ್ನ ನಿತ್ಯಚೈತನ್ಯಸ್ವರೂಪದಿಂದ ನೋಡುತ್ತಾನಾದ್ದರಿಂದ ಈ ನಾಮವು ಬಂದಿದೆ. ವೇದದಲ್ಲಿರುವ "ವಿಶ್ವತಶ್ಚಕ್ಷುಃ" ಎಂಬ ಸ್ತುತಿಯು ಈ ನಾಮಕ್ಕೆ ಆಧಾರವಾಗಿದೆ. **(626)** ಈಗ **ಅನೀಶಃ** - ಎಂಬ ನಾಮವನ್ನು ನೋಡೋಣ. ಭಗವಂತನೇ ಎಲ್ಲರಿಗೂ ಒಡೆಯನು. ಅವನಿಗೆ ಒಡೆಯರಾರೂ ಇಲ್ಲ. ಆದ್ದರಿಂದ ಈಶನಿಲ್ಲದವನು- ಎಂಬರ್ಥದಲ್ಲಿ ಈ ನಾಮವು ಬಂದಿದೆ. ಶ್ರುತಿಯಲ್ಲಿಯೂ "ನ ತಸ್ಯೇಶೇ ಕಶ್ಚನ" ಎಂದು ಇದೇ ಅರ್ಥವನ್ನು ವಿವರಿಸುವ ವಾಕ್ಯವಿದೆ. **(627)** ಈಗ **ಶಾಶ್ವತಃ ಸ್ಥಿರಃ**- ಎಂಬ ನಾಮವನ್ನು ನೋಡೋಣ. ಇದರ ಮುಂದಿನ ಸ್ಥಿರಃ ಎಂಬ ನಾಮವನ್ನು ಸೇರಿಸಿ ಶಾಶ್ವತಃ ಸ್ಥಿರಃ - ಎಂದು ಒಂದೇ ನಾಮವಾಗಿ ಪರಿಗಣಿಸಿದೆ. ಯಾವಾಗಲೂ ಇದ್ದು ಕೊಂಡಿರುವನಾದರೂ ಮಾರ್ಪಾಡನ್ನು ಹೊಂದುವವನಲ್ಲವಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(628)** ಈಗ **ಭೂಶಯಃ** - ಎಂಬ ನಾಮವನ್ನು ನೋಡೋಣ. ಭಗವಂತನು ರಾಮಾವತಾರ ಕಾಲಕ್ಕೆ ಸೀತೆಯನ್ನು ಹುಡುಕುತ್ತಾ ಸಮುದ್ರತೀರದವರೆಗೂ ಬಂದಾಗ ವಾನರಸೈನ್ಯಸಮೇತ ಸಮುದ್ರವನ್ನು ದಾಟಿ ಲಂಕೆಗೆ ಹೋಗಬೇಕಾಗಿತ್ತು. ಆಗ ಸಮುದ್ರರಾಜನನ್ನು ಪ್ರಾರ್ಥಿಸಲು ಭೂಮಿಯ ಮೇಲೆ ಮಲಗಿ ತಪಸ್ಸುಮಾಡಿ ಸಾಗರರಾಜನನ್ನು ಒಲಿಸಿಕೊಂಡು ವಾನರರ ಮೂಲಕ ಸೇತುವೆಯನ್ನು ನಿರ್ಮಿಸಿ ಸೇನಾಸಮೇತನಾಗಿ ಲಂಕೆಯನ್ನು ಪ್ರವೇಶಿಸಿದನು. ಈ ಕಾರಣದಿಂದ ಭೂಶಯಃ ಎಂಬ ನಾಮವು ಬಂದಿರುತ್ತದೆ. **(629)** ಈಗ **ಭೂಷಣಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಇಚ್ಛಾನುಸಾರ ಹಾಗೂ ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿ ಭೂಮಿಯಲ್ಲಿ ಅವತರಿಸಿ ಭೂದೇವಿಯನ್ನು

ಅಲಂಕರಿಸಿದ್ದಾನೆ. ರಾಮ-ಕೃಷ್ಣಾವತಾರಗಳಲ್ಲಿ ಈ ಕಾರ್ಯವು ನಡೆದಿದೆ. ಆದ್ದರಿಂದ ಪೃಥಿವೀದೇವಿಗೆ ವರವನ್ನು ದಯಪಾಲಿಸಿ ಅದರಂತೆ ಅವತರಿಸಿ ಭೂಷಣನೆನಿಸಿರುತ್ತಾನಾಗಿ ಈ ನಾಮವು ಬಂದಿದೆ. **(630)** ಈಗ **ಭೂತಿಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಅರ್ಚಾವತಾರಗಳಲ್ಲಿ - ಅದರಲ್ಲಿಯೂ ರಾಮ-ಕೃಷ್ಣಾವತಾರಗಳಲ್ಲಿ ಅಪಾರವಾದ ತನ್ನ ಜ್ಞಾನ-ಶಕ್ತಿ-ಬಲ-ಐಶ್ವರ್ಯ-ವೀರ್ಯ-ತೇಜಸ್ಸು ಮುಂತಾದ ಗುಣಗಳನ್ನು ಪ್ರದರ್ಶಿಸಿರುತ್ತಾನೆ. ಆದ್ದರಿಂದ ಅವನ ಮಹಿಮೆಗಳನ್ನು ಗುರುತಿಸಿ ಭೂತಿಃ ಎಂದು ಸ್ತುತಿಸಿದೆ. **(631)** ಈಗ **ವಿಶೋಕಃ** - ಎಂಬ ನಾಮವನ್ನು ನೋಡೋಣ. ಭಗವಂತನು ದುಃಖರಹಿತನೂ ಪರಮಾನಂದ ಸ್ವರೂಪನೂ ಆಗಿದ್ದು ಶೋಕಮೋಹಾದಿ -ಭಾವವಿಕಾರಗಳನ್ನು ಮೀರಿದವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(632)** ಈಗ **ಶೋಕನಾಶನಃ** - ಎಂಬ ನಾಮವನ್ನು ನೋಡೋಣ. ಭಗವಂತನು ಶೋಕಮೋಹಗಳೆಂಬ ಷಡೂರ್ಮಿಗಳನ್ನು ಮೀರಿದವನು. ನಿತ್ಯಾನಂದಸ್ವರೂಪನು. ಆದ್ದರಿಂದ ಭಕ್ತರ ಶೋಕಗಳನ್ನು ಪರಿಹರಿಸುತ್ತಾನಾಗಿ ಈ ನಾಮವು ಬಂದಿರುತ್ತದೆ.

**ಅರ್ಚಿಷ್ಮಾನರ್ಚಿತಃ ಕುಂಭೋ ವಿಶುದ್ಧಾತ್ಮಾ ವಿಶೋಧನಃ ।**
**ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತವಿಕ್ರಮಃ ॥68॥**

**(633)** ಈಗ **ಅರ್ಚಿಷ್ಮಾನ್** - ಎಂಬ ನಾಮವನ್ನು ನೋಡೋಣ. ಯಾರ ಬೆಳಕಿನಿಂದಲೇ ಸೂರ್ಯಚಂದ್ರನಕ್ಷತ್ರಾದಿಗಳೂ ಬೆಳಗುತ್ತಿರುವವೋ ಆ ಸ್ವಯಂಪ್ರಕಾಶನಾದ ದೇವನನ್ನು ಈ ನಾಮದಿಂದ ಸ್ತುತಿಸಿದೆ. 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂದು ಶ್ರುತಿಯೂ ಕೊಂಡಾಡುತ್ತಿದೆ. ಆದ್ದರಿಂದ ಈ ನಾಮವು ಬಂದಿದೆ. **(634)** ಈಗ **ಅರ್ಚಿತಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಲೋಕಗಳ ಪ್ರಜೆಗಳಿಂದಲೂ ಅರ್ಚಿತನಾಗಿರುವ ಬ್ರಹ್ಮಾದಿದೇವತೆಗಳಿಂದಲೂ ಪೂಜಿಸಲ್ಪಡುವ ಭಗವಂತನಾದ ಶ್ರೀಮಹಾವಿಷ್ಣುವನ್ನು ಇಲ್ಲಿ ಸ್ತುತಿಸುತ್ತಾ ಅರ್ಚಿತಃ ಎಂಬ ನಾಮದಿಂದ ಗೌರವಿಸಲಾಗಿದೆ. **(635)** ಈಗ **ಕುಂಭಃ** - ಎಂಬ ನಾಮವನ್ನು ನೋಡೋಣ. ದೊಡ್ಡ ಮಡಕೆಯಲ್ಲಿ ಹೇಗೆ ಪದಾರ್ಥಗಳು ಎಲ್ಲವೂ ಅಡಕವಾಗಿರುವವೋ ಹಾಗೆ ಭಗವಂತನಲ್ಲಿ ಸೃಷ್ಟಿಯಲ್ಲಿರುವ ಎಲ್ಲಾ ಪದಾರ್ಥಗಳೂ ಅಡಕವಾಗಿವೆಯಾಗಿ ಈ ನಾಮದಿಂದ ಸ್ತುತಿಸಲಾಗಿದೆ. **(636)** ಈಗ **ವಿಶುದ್ಧಾತ್ಮಾ** - ಎಂಬ ನಾಮವನ್ನು ನೋಡೋಣ. ಭಗವಂತನು ಸತ್ತ್ವಾದಿ ಮೂರು ಗುಣಗಳನ್ನೂ ಮೀರಿ ಪರಿಶುದ್ಧನಾಗಿದ್ದು ಎಲ್ಲಾ ಜೀವರುಗಳ ಆತ್ಮನೇ ಆಗಿರುವದರಿಂದ ಈ ನಾಮವು ಬಂದಿದೆ. **(637)** ಈಗ **ವಿಶೋಧನಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು

ಯಾರೇ ಆಗಲಿ, ಮನಸ್ಸಿಗೆ ತಂದುಕೊಂಡು ಚಿಂತಿಸುವದಾದರೆ ಪಾಪಗಳೆಲ್ಲವೂ ನಾಶವಾಗಿಬಿಡುತ್ತವೆಯಾಗಿ ಈ ನಿಮಿತ್ತದಿಂದ ಈ ನಾಮವು ಬಂದಿದೆ. **(638)** ಈಗ **ಅನಿರುದ್ಧಃ** - ಎಂಬ ನಾಮವನ್ನು ನೋಡೋಣ. ಈ ನಾಮವು ಹಿಂದೆ 185ನೆಯ ನಾಮವಾಗಿ ಬಂದಿರುತ್ತದೆ. ಆದರೆ ಅರ್ಥವು ಇಲ್ಲಿ ಬೇರೆಯಾಗಿದೆ. ಅದರಂತೆ ಭಗವಂತನ ನಾಲ್ಕು ವ್ಯೂಹಗಳಲ್ಲಿ ಅನಿರುದ್ಧನೆಂಬುದೂ ಒಂದಾಗಿದೆ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ- ಎಂಬ ಮೂರು ವ್ಯೂಹಗಳ ಜೊತೆಗೆ ನಾಲ್ಕನೆಯದಾಗಿ ಇರುವುದೇ ಇದು. ಈ ಕಾರಣದಿಂದ ಈ ನಾಮವು ಬಂದಿದೆ. ಅಥವಾ ಶತ್ರುಗಳಿಂದ ಎಂದೆಂದಿಗೂ ತಡೆಗಟ್ಟಲಾರದವನಾಗಿರುವದರಿಂದ ಈ ನಾಮವು ಬಂದಿದೆ - ಎಂದೂ ವ್ಯಾಖ್ಯಾನಮಾಡಬಹುದು. **(639)** ಈಗ **ಅಪ್ರತಿರಥಃ** - ಎಂಬ ನಾಮವನ್ನು ನೋಡೋಣ. ಪ್ರತಿರಥ- ಎಂದರೆ ಪ್ರತಿಪಕ್ಷ- ಎಂದರ್ಥ. ಭಗವಂತನನ್ನು ಜಯಿಸುವ ಪ್ರತಿಪಕ್ಷವೇ ಇಲ್ಲವಾದ್ದರಿಂದ ಈ ನಾಮವು ಬಂದಿದೆ. **(640)** ಈಗ **ಪ್ರದ್ಯುಮ್ನಃ** - ಎಂಬ ನಾಮವನ್ನು ನೋಡೋಣ. ವಿಶಿಷ್ಟವಾದ ಎಂದರೆ ಶ್ರೇಷ್ಠವೂ ಅಪರಿಮಿತವೂ ಆದ ದ್ಯುಮ್ನವನ್ನು ಎಂದರೆ ಧನವನ್ನು ಹೊಂದಿರುವವನಾದ್ದರಿಂದ ಈ ನಾಮವು ಬಂದಿದೆ. ಶ್ರೀಧನಲಕ್ಷ್ಮಿಯೇ ಈತನ ಪತ್ನಿಯಾಗಿದ್ದು ಸಕಲವಿಧವಾದ ಐಶ್ವರ್ಯವೂ ಇವನ ವಶದಲ್ಲಿರುವದರಿಂದ ಈ ನಾಮವು ಬಂದಿರುತ್ತದೆ. ಇನ್ನೊಂದು ಅರ್ಥದಂತೆ ಭಗವಂತನ ನಾಲ್ಕು ವ್ಯೂಹಗಳಾದ (1) ವಾಸುದೇವ (2) ಸಂಕರ್ಷಣ (3) ಪ್ರದ್ಯುಮ್ನ (4) ಅನಿರುದ್ಧ- ಎಂಬ ಗುಂಪಿನಲ್ಲಿ ಸೇರಿರುವನಾದ್ದರಿಂದ ಈ ನಾಮವು ಬಂದಿದೆ. **(641)** ಈಗ **ಅಮಿತವಿಕ್ರಮಃ** - ಎಂಬ ನಾಮವನ್ನು ನೋಡೋಣ. ಬೇರೊಂದು ಪರಾಕ್ರಮದೊಡನೆ ಹೋಲಿಸುವದಕ್ಕಾಗದ, ಹಾಗೂ ಅಪರಿಮಿತವಾದ ಶಕ್ತಿಯುಳ್ಳವನಾಗಿರುವವನಾದ್ದರಿಂದ ಈ ನಾಮವು ಬಂದಿದೆ. ಗೀತೆಯಲ್ಲಿ ಅರ್ಜುನನು ಸ್ತುತಿಸಿರುವಂತೆ ಭಗವಂತನಿಗೆ ಸರಿಸಮಾನನಾದವನೇ ಮತ್ತೊಬ್ಬನಿಲ್ಲ. ಇನ್ನು ಅವನಿಗಿಂತ ಮಿಗಿಲಾದವನು ಎಲ್ಲಿದ್ದಾನು? ಎಂಬ ಸ್ತುತಿಯು ಈ ನಾಮದ ವೈಶಿಷ್ಟ್ಯವನ್ನು ತಿಳಿಸುತ್ತದೆ.

**ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ ।**
**ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥69॥**

**(642) ಕಾಲನೇಮಿನಿಹಾ** - ಕಾಲನೇಮಿ ಎಂಬ ರಾಕ್ಷಸನನ್ನು ಸಂಹಾರ ಮಾಡಿದವನಾದ್ದರಿಂದ ಈ ನಾಮವು ಬಂದಿದೆ. **(643) ವೀರಃ** -ನೆಂದರೆ ಶೂರನು. ಅಸುರರನ್ನೆಲ್ಲ ಸಂಹರಿಸಿದವನು - ಎಂದರ್ಥ. **(644) ಶೌರಿಃ** - ಎಂದರೆ ಶೂರನೆಂಬವನ ಕುಲದಲ್ಲಿ ಹುಟ್ಟಿದವನು - ಎಂದು ಸ್ತುತಿಸಿದೆ. ಶೂರಸೇನನೆಂಬವನನ್ನೇ

ಶೂರನೆಂದಿದೆ. ಇವನಿಗೆ ಉಗ್ರಸೇನನೆಂಬ ಹೆಸರೂ ಇದೆ. ಕಂಸನು ಈ ವಂಶದವನು. ಭಗವಂತನು ಇವನನ್ನು ಸಂಹಾರಮಾಡಿದನು. ಭಗವಂತನ ತಾಯಿಯಾದ ದೇವಕಿಯೇ ಕಂಸನ ಸೋದರಿಯು. ಹೀಗೆ ಭಗವಂತನು ಶೌರಿಯೆನಿಸಿರುತ್ತಾನೆ. **(645)** ಈಗ **ಶೂರಜನೇಶ್ವರಃ** - ಎಂಬ ನಾಮವನ್ನು ನೋಡೋಣ. ದೇವತೆಗಳ ಒಡೆಯನಾದ ಇಂದ್ರನನ್ನು ಶೂರಜನ- ಎಂದು ಕರೆಯಲಾಗಿದೆ. ಇಂಥ ಇಂದ್ರಾದಿ ಗಳಿಗೂ ಒಡೆಯನೂ ಮಿಗಿಲಾದವನೂ ಆಗಿದ್ದು ಅವರೆಲ್ಲರನ್ನೂ ಅನುಶಾಸನ ಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(646)** ಈಗ **ತ್ರಿಲೋಕಾತ್ಮಾ** - ಎಂಬ ನಾಮವನ್ನು ನೋಡೋಣ. ಸ್ವರ್ಗ, ಮರ್ತ್ಯ, ಪಾತಾಳ - ಎಂಬ ಮೂರು ಲೋಕಗಳಲ್ಲಿರುವ ಜೀವರುಗಳೆಲ್ಲರಿಗೂ ಅಂತರ್ಯಾಮಿಯಾಗಿದ್ದುಕೊಂಡು ಅವರು ಗಳನ್ನೆಲ್ಲ ವ್ಯಾಪಿಸಿರುತ್ತಾನಾದ್ದರಿಂದ ಈ ನಾಮವು ಬಂದಿದೆ. **(647)** ಈಗ **ತ್ರಿಲೋಕೇಶಃ** - ಎಂಬ ನಾಮವನ್ನು ನೋಡೋಣ. ಮೂರು ಲೋಕಗಳಲ್ಲಿರುವವ ರೆಲ್ಲರೂ(ಜೀವರುಗಳೂ)ಭಗವಂತನ ಆಜ್ಞೆಯನ್ನು ಅನುಸರಿಸಿ ತಮ್ಮತಮ್ಮ ಕಾರ್ಯ ಗಳಲ್ಲಿ ತೊಡಗುತ್ತಾರಾದ್ದರಿಂದ ಈ ನಾಮವು ಬಂದಿದೆ. **(648)** ಈಗ **ಕೇಶವಃ** - ಎಂಬ ನಾಮವನ್ನು ನೋಡೋಣ. 'ಕೇಶ' ಎಂಬ ಹೆಸರಿನ ಭಗವಂತನ ತೇಜಸ್ಸಿನ ಅಂಶಗಳು ಸೂರ್ಯನೇ ಮುಂತಾದ ಜೀವರುಗಳಲ್ಲಿ ಸೇರಿಹೋಗಿರುತ್ತವೆ. ಇವುಗಳು ಆ ಜೀವರುಗಳ ಮೂಲಕ ಬೆಳಗುತ್ತಿವೆ. ಆದ್ದರಿಂದ ಭಗವಂತನು ಕೇಶವ ನೆನಿಸಿರುತ್ತಾನೆ. ಅಥವಾ ಬ್ರಹ್ಮ, ವಿಷ್ಣು, ಶಿವ - ಎಂಬ ಶಕ್ತಿಗಳಿಗೆ ಕೇಶಗಳೆಂದು ಸಂಜ್ಞೆಯಿದೆ. ಆ ಶಕ್ತಿಗಳೆಲ್ಲವೂ ಭಗವಂತನ ಅಂಶವೇ ಆಗಿರುವದರಿಂದಲೂ ಈ ನಾಮವು ಬಂದಿದೆ. **(649)** ಈಗ **ಕೇಶಿಹಾ** - ಎಂಬ ನಾಮವನ್ನು ನೋಡೋಣ. ಕೇಶಿ - ಎಂಬ ಹೆಸರಿನ ದುಷ್ಟರಾಕ್ಷಸನನ್ನು ಸಂಹಾರಮಾಡಿದ್ದರಿಂದ ಈ ನಾಮವು ಬಂದಿದೆ. **(650)** ಈಗ **ಹರಿಃ** - ಎಂಬ ನಾಮವನ್ನು ನೋಡೋಣ. ಹರತಿ- ಇತಿ ಹರಿಃ ಎಂಬ ವಿವರಣೆಯಂತೆ ಅಜ್ಞಾನಮೂಲವಾದ ಸಂಸಾರವನ್ನು ಪರಹರಿಸಿ ಭಕ್ತರಿಗೆ ವಿಷ್ಣು ಸಾಯುಜ್ಯವನ್ನು ಕರುಣಿಸುವವನಾದ್ದರಿಂದ ಈ ನಾಮವು ಬಂದಿರುತ್ತದೆ.

**ಕಾಮದೇವಃ ಕಾಮಪಾಲಃ ಕಾಮೀ ಕಾಂತಃ ಕೃತಾಗಮಃ ।**
**ಅನಿರ್ದೇಶ್ಯವಪುರ್ವಿಷ್ಣುರ್ವೀರೋಽನನ್ತೋ ಧನಂಜಯಃ ॥70॥**

**(651) ಕಾಮದೇವಃ** - ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು- ಆಯಾ ಪುರುಷಾರ್ಥಗಳನ್ನು ಕೇಳಿಕೊಳ್ಳುವವರಿಗೆ ದಯ ಪಾಲಿಸುವವನಾಗಿರುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(652)** ಈಗ **ಕಾಮಪಾಲಃ** - ಎಂಬ ನಾಮವನ್ನು ನೋಡೋಣ. ಕಾಮಗಳನ್ನು ಬಯಸುವವರಿಗೆ

ಅವರವರ ಬಯಕೆಗಳನ್ನು ಕಾಪಾಡಿಕೊಡುತ್ತಾನಾಗಿ ಈ ನಾಮವು ಬಂದಿದೆ. (653) **ಕಾಮೀ** - ಎಂದರೆ ಭಗವಂತನು ಪರಿಪೂರ್ಣಕಾಮನೇ ಆಗಿದ್ದು ಹೊಸದಾಗಿ ಪಡೆಯಬೇಕಾದ ಕಾಮಗಳಿಲ್ಲದವನಾಗಿರುವದರಿಂದ (ಪೂರ್ಣ) ಕಾಮೀ - ಎಂದು ಸ್ತುತಿಸಲ್ಪಟ್ಟಿರುತ್ತಾನೆ. (654) ಈಗ **ಕಾನ್ತಃ** - ಎಂಬ ನಾಮವನ್ನು ನೋಡೋಣ. ಸುಂದರವೂ ಆಕರ್ಷಕವೂ ಆದ ರೂಪವುಳ್ಳವನಾದ್ದರಿಂದ ಈ ನಾಮವು ಬಂದಿದೆ. ಅಥವಾ ಕ- ಎಂದರೆ ಸೃಷ್ಟಿಕರ್ತನಾದ ಬ್ರಹ್ಮನೆಂದು ಅರ್ಥಮಾಡಿದಾಗ, ಆ ಬ್ರಹ್ಮನಿಗೂ ಕಲ್ಪಾಂತರದಲ್ಲಿ ಕೊನೆ(ಅಂತ್ಯವು)ಉಂಟಾಗುತ್ತದೆಯಾಗಿ ಅದಕ್ಕೆ ಶ್ರೀವಿಷ್ಣುವೇ ಕಾರಣನಾಗಿರುವದರಿಂದ ಕ+ಅನ್ತ ಎಂಬ ಎರಡು ಶಬ್ದಗಳನ್ನು ಒಂದುಗೂಡಿಸಿದಾಗ ಈ ನಾಮವು ಉಂಟಾಗುವದರಿಂದ 'ಕಾಂತ'ನೆನಿಸಿರುತ್ತಾನೆ. (655) ಈಗ **ಕೃತಾಗಮಃ** - ಎಂಬ ನಾಮವನ್ನು ನೋಡೋಣ. ಆಗಮ - ಎಂದರೆ ವೇದಶಾಸ್ತ್ರ ಇತಿಹಾಸ ಪುರಾಣಾದಿ ಸಾಹಿತ್ಯಗಳು. ಇವು ಭಗವಂತನಿಂದಲೇ ಆವಿರ್ಭವಿಸಿವೆಯಾದ್ದರಿಂದ ಈ ನಾಮವು ಬಂದಿದೆ. (656) ಈಗ **ಅನಿರ್ದೇಶ್ಯವಪುಃ** - ಎಂಬ ನಾಮವನ್ನು ವಿಚಾರ ಮಾಡೋಣ. ಭಗವಂತನ ಶರೀರವು ಇಂಥದ್ದೇ- ಎಂದು ಗೊತ್ತುಪಡಿಸಿ ಹೇಳಲು ಬರುವಂತಿಲ್ಲ. ಏಕೆಂದರೆ ಸೃಷ್ಟಿಯಲ್ಲಿರುವ ಎಲ್ಲಾ ಶರೀರಗಳಲ್ಲಿಯೂ ಅವನೇ ಆತ್ಮನಾಗಿ ವಿರಾಜಿಸುತ್ತಿದ್ದಾನೆ. ಮತ್ತು ಹೀಗೆ ಸರ್ವಶರೀರವ್ಯಾಪಿಯಾದ ಅವನನ್ನು ಏನೆಂದು ಹೇಳಲು ಸಾಧ್ಯವಾದೀತು ? ಆದ್ದರಿಂದ ಈ ನಾಮವು ಬಂದಿದೆ. (657) ಈಗ **ವಿಷ್ಣುಃ** - ಎಂಬ ನಾಮವನ್ನು ನೋಡೋಣ. ಭೂಲೋಕ, ಅಂತರಿಕ್ಷಲೋಕಗಳನ್ನೆಲ್ಲ ವ್ಯಾಪಿಸಿಕೊಂಡು ಇರುವ ಈ ಭಗವಂತನಿಗೆ ತೇಜಸ್ಸು- ಕಾಂತ್ಯಾದಿಗಳು ಇರುವದರಿಂದ ಸರ್ವವ್ಯಾಪಕನಾದ ಈ ಮಹಾಮಹಿಮನನ್ನು ವಿಷ್ಣು ಎಂದು ಸ್ತುತಿಸಿದೆ. (658) ಈಗ **ವೀರಃ** - ಎಂಬ ನಾಮವನ್ನು ನೋಡೋಣ. ವೀ - ಎಂಬ ಧಾತುವಿಗೆ ಗತಿ, ವ್ಯಾಪ್ತಿ, ಜನನ, ಕಾಂತಿ, ಎಸೆಯುವದು, ತಿನ್ನುವದು - ಮುಂತಾದ ಅರ್ಥಗಳಿವೆ. ಭಗವಂತನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವದರಿಂದಲೂ ನಿತ್ಯನಾಗಿರುವದರಿಂದಲೂ ಸರ್ವಕ್ಕೂ ಆತ್ಮನಾಗಿರುವದರಿಂದಲೂ ದೇಶ ಕಾಲ ವಸ್ತುಗಳ ಪರಿಚ್ಛೇದವಿಲ್ಲದ್ದರಿಂದಲೂ ಈ ನಾಮವು ಬಂದಿದೆ. (659) ಈಗ **ಅನನ್ತಃ** - ಎಂಬ ನಾಮವನ್ನು ನೋಡೋಣ. ನಿತ್ಯನೂ ಸರ್ವವ್ಯಾಪಿಯೂ ಅಂತವಿಲ್ಲದವನೂ ಆದ್ದರಿಂದ ಈ ನಾಮವು ಬಂದಿದೆ. (660) ಈಗ **ಧನಂಜಯಃ** - ಎಂಬ ನಾಮವನ್ನು ನೋಡೋಣ. ದಿಗ್ವಿಜಯಕಾಲಕ್ಕೆ ಹೇರಳವಾಗಿ ಹಣವನ್ನು ಗೆದ್ದುಕೊಂಡವನಾಗಿದ್ದು ಅರ್ಜುನನಾಗಿ ವಿರಾಜಿಸಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ "ಪಾಂಡವಾನಾಂ ಧನಂಜಯಃ" ಎಂದು ಗೀತೆಯ ವಿಭೂತಿಯೋಗಾಧ್ಯಾಯದಲ್ಲಿ ಸ್ತುತಿಸಿಯೂ ಇದೆ.

**ಬ್ರಹ್ಮಣ್ಯೋ ಬ್ರಹ್ಮಕೃದ್‌ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।**
**ಬ್ರಹ್ಮವಿದ್‌ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥71॥**

**(661) ಬ್ರಹ್ಮಣ್ಯಃ** -ತಪಸ್ಸು, ವೇದಗಳು, ಬ್ರಾಹ್ಮಣರು ಮತ್ತು ಜ್ಞಾನ-ಇವುಗಳಿಗೆ ಬ್ರಹ್ಮವೆಂಬ ಹೆಸರಿದೆ. ಅವುಗಳಿಗೆ ಹಿತನಾಗಿರುವದರಿಂದ ಈ ಬ್ರಹ್ಮಣ್ಯನೆಂಬ ನಾಮವು ಬಂದಿದೆ. **(662)** ಈಗ **ಬ್ರಹ್ಮಕೃತ್** - ಎಂಬ ನಾಮವನ್ನು ನೋಡೋಣ. ಇಲ್ಲಿಯೂ ಬ್ರಹ್ಮಶಬ್ದಕ್ಕೆ ವೇದಗಳು, ವಿಪ್ರರು- ಮುಂತಾದವರೆಂದೇ ಅರ್ಥ. ಆದ್ದರಿಂದ ವಿಪ್ರರೇ ಮುಂತಾದವರು ಮಾಡುವ ತಪಸ್ಸು, ವೇದಾಧ್ಯಯನ, ಯಜ್ಞಾದಿಗಳು ಬ್ರಹ್ಮವೆನಿಸಿವೆ. ಇವುಗಳಿಗೆ ಭಗವಂತನೇ ಕರ್ತೃ(ಮೂಲಪುರುಷ)ನಾಗಿರುವದರಿಂದ ಈ ನಾಮವು ಬಂದಿದೆ. **(663)** ಈಗ **ಬ್ರಹ್ಮಾ** - ಎಂಬ ನಾಮವನ್ನು ನೋಡೋಣ. ಇದು ಪುಲ್ಲಿಂಗ ಶಬ್ದವು. ಭಗವಂತನು ಸಕಲಜಗತ್ತಿನ ಸೃಷ್ಟಿಕರ್ತನಾಗಿದ್ದು ಎಲ್ಲಕ್ಕಿಂತಲೂ ಮಿಗಿಲಾದವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(664)** ಈಗ **ಬ್ರಹ್ಮ** - ಎಂಬ ನಾಮವನ್ನು ನೋಡೋಣ. ಇದು ನಪುಂಸಕಲಿಂಗದ ಶಬ್ದವಾಗಿದೆ. ಉಪನಿಷತ್ತಿನಲ್ಲಿರುವ ಬ್ರಹ್ಮಶಬ್ದಕ್ಕೆ ವ್ಯಾಖ್ಯಾನಮಾಡುವಾಗ ಸತ್ಯ - ಜ್ಞಾನ - ಅನಂತ ವಾದದ್ದು ಬ್ರಹ್ಮವು - ಎಂದು ವಿವರಿಸಿದೆ. ಸತ್ಯವೆಂದರೆ ಯಾವ ವಸ್ತು ಯಾವ ರೂಪ ದ್ದೆಂದು ನಿಶ್ಚಯಿಸಲ್ಪಟ್ಟಿರುವದೋ ಅದು ಎಂದೆಂದಿಗೂ ತನ್ನ ಸ್ವರೂಪವನ್ನು ಬದಲಾಯಿಸದೆ ಇದ್ದರೆ ಅಂಥ ವಸ್ತುವನ್ನು 'ಸತ್ಯ'ವೆಂದು ಕರೆಯುತ್ತಾರೆ. ಮತ್ತು ಅದು ಚೇತನವಾಗಿದ್ದರೆ 'ಜ್ಞಾನ'ವೆಂದೂ ತುದಿಯೇ ಇಲ್ಲದ್ದಾಗಿದ್ದರೆ ಅನಂತವೆಂದೂ ಕರೆಯಲಾಗುತ್ತದೆ. ಇಂಥ ನಿರ್ವಿಕಾರವಸ್ತುವೇ ಬ್ರಹ್ಮವು. ಅದನ್ನೇ ಬ್ರಹ್ಮವೆಂಬ ನಾಮದಿಂದ ಸ್ತುತಿಸಿದೆ. **(665)** ಈಗ **ಬ್ರಹ್ಮವಿವರ್ಧನಃ** - ಎಂಬ ನಾಮವನ್ನು ನೋಡೋಣ. ತಪಸ್ಸೇ ಮುಂತಾದ ಸಾಧನಗಳನ್ನು ಬೆಳೆಸುವವನಾದ್ದರಿಂದ - ಎಂದರೆ ವೃದ್ಧಿಗೊಳಿಸುವದರಿಂದ ಈ ನಾಮವು ಬಂದಿದೆ. **(666)** ಈಗ **ಬ್ರಹ್ಮವಿತ್** - ಎಂಬ ನಾಮವನ್ನು ನೋಡೋಣ. ವೇದಗಳನ್ನೂ ಅವುಗಳ ಅಂತರಾರ್ಥಗಳನ್ನೂ ಚೆನ್ನಾಗಿ ಬಲ್ಲವನಾಗಿದ್ದು ಸರ್ವಜ್ಞನೆನಿಸಿರುವದರಿಂದ ಈ ನಾಮವು ಬಂದಿದೆ. **(667)** ಈಗ **ಬ್ರಾಹ್ಮಣಃ** - ಎಂಬ ನಾಮವನ್ನು ನೋಡೋಣ. ಬ್ರಾಹ್ಮಣವ್ಯಕ್ತಿಯ ಸ್ವರೂಪನಾಗಿದ್ದು ವೇದಗಳನ್ನೂ ಅವುಗಳ ಅರ್ಥವನ್ನೂ ಇದ್ದದ್ದು ಇದ್ದಂತೆ ತಿಳಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(668)** ಈಗ **ಬ್ರಹ್ಮೀ** - ಎಂಬ ನಾಮವನ್ನು ನೋಡೋಣ. ಬ್ರಹ್ಮಕ್ಕೆ ಶೇಷಭೂತವಾಗಿರುವ -ಅಧ್ಯಯನ, ಅಧ್ಯಾಪನಾದಿಗಳು ಮತ್ತು ತಪಸ್ಸೇ ಮುಂತಾದವು ಈತನಲ್ಲಿದೆಯಾದ್ದರಿಂದ ಬ್ರಹ್ಮೀ - ಎಂದು ಸ್ತುತಿಸಲ್ಪಟ್ಟಿರುತ್ತಾನೆ. **(669)** ಈಗ **ಬ್ರಹ್ಮಜ್ಞಃ** - ಎಂಬ ನಾಮವನ್ನು ನೋಡೋಣ. ಬ್ರಹ್ಮವೆಂದರೆ ವೇದಗಳು.

ಇವು ಪರಮಾರ್ಥವಾಗಿ ಬ್ರಹ್ಮರೂಪವೇ ಆಗಿರುತ್ತವೆ. ಇವುಗಳನ್ನು ಚೆನ್ನಾಗಿ ಬಲ್ಲವನಾಗಿರುವದರಿಂದ ಬ್ರಹ್ಮಜ್ಞನೆನಿಸಿರುತ್ತಾನೆ. **(670)** ಈಗ **ಬ್ರಾಹ್ಮಣಪ್ರಿಯಃ** - ಎಂಬ ನಾಮವನ್ನು ನೋಡೋಣ. ಬ್ರಾಹ್ಮಣರಿಗೆ ಪ್ರಿಯನಾದವನು - ಎಂದು ಒಂದು ಅರ್ಥ. ಅಥವಾ ಇವನಿಗೆ (ಭಗವಂತನಿಗೆ) ಬ್ರಾಹ್ಮಣರು ಪ್ರಿಯರಾದವರು - ಎಂದೂ ಅರ್ಥಮಾಡಬಹುದು. ಎರಡು ರೀತಿಯಿಂದಲೂ ಈ ನಾಮವು ಹೊಂದುತ್ತದೆ. "ಸತ್ಪುರುಷನಾಗಲಿ, ಬಯ್ಯುತ್ತಿರುವವನಾಗಲಿ, ಕಠಿಣವಾದ ಮಾತುಗಳನ್ನು ಆಡುತ್ತಿರುವವನೇ ಆಗಲಿ ಅಂಥ ಬ್ರಾಹ್ಮಣನನ್ನೂ ವಿಧಿವತ್ತಾಗಿ ಯಾವನು ನಮಸ್ಕರಿಸುವದಿಲ್ಲವೋ ಆ ಪಾಪಕಾರಿಯು ಬ್ರಹ್ಮದವಾಗ್ನಿಯಿಂದ ಸುಟ್ಟುಹೋಗಿರುವವನು. ಅವನನ್ನು ಕೊಂದು ಹಾಕಬೇಕು. ಅವನಿಗೆ ದಂಡವನ್ನು ವಿಧಿಸಬೇಕು" ಎಂದು ಭಗವಂತನ ವಚನವಿದೆ. ಆದ್ದರಿಂದ ಬ್ರಾಹ್ಮಣರು ಭಗವಂತನಿಗೆ ಪ್ರಿಯರಾಗಿ ಬಾಳುವದನ್ನು ಕಲಿಯಬೇಕು.

**ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ |**
**ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ ||72||**

**(671)** ಈಗ **ಮಹಾಕ್ರಮಃ** - ಎಂಬ ನಾಮವನ್ನು ನೋಡೋಣ. ಭಗವಂತನ ಪಾದಗಳ ನಡೆಯು ಬಹಳ ವಿಶಾಲವಾದದ್ದಾಗಿದೆ. ವಾಮನಾವತಾರಕಾಲಕ್ಕೆ ಕೇವಲ ಎರಡು ಹೆಜ್ಜೆಗಳಿಂದ ಭೂಲೋಕ-ಸ್ವರ್ಗಲೋಕಗಳನ್ನು ಅಳೆದುಬಿಟ್ಟನು. ಕಡೆಗೆ ಮೂರನೆಯ ಹೆಜ್ಜೆಗೆ ಜಾಗವಿಲ್ಲವಾಗಿ ಬಲಿರಾಜನ ತಲೆಯ ಮೇಲೆಯೇ ಕಾಲನ್ನು ಇಟ್ಟು ಅವನನ್ನು ಪಾತಾಳಕ್ಕೆ ಕಳುಹಿಸಿದನು. ವೇದದಲ್ಲಿ ಶ್ರೀವಿಷ್ಣುವನ್ನು ಉರುಕ್ರಮನೆಂದು ಸ್ತುತಿಸಿದೆ. ವಿಸ್ತೀರ್ಣಪಾದಕ್ರಮನೆಂದು ಅಭಿಪ್ರಾಯ. **(672)** ಈಗ **ಮಹಾಕರ್ಮಾ** - ಎಂಬ ನಾಮವನ್ನು ನೋಡೋಣ. ಜಗತ್ತಿನ ಸೃಷ್ಟಿಯನ್ನು ನಿರ್ವಹಿಸುವ ಭಗವಂತನು ಎಲ್ಲ ರೀತಿಯಿಂದಲೂ ಮಹಾಕರ್ಮನೇ ಆಗಿದ್ದಾನೆ. ಏಕೆಂದರೆ ಜಗತ್ತಿನ ಸೃಷ್ಟಿವೈಚಿತ್ರ್ಯವು ಎಂಥವರನ್ನಾದರೂ ಬೆರಗುಗೊಳಿಸುತ್ತದೆ. ಶ್ರೀಶಂಕರಭಗವತ್ಪಾದರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಹೀಗೆಂದಿದ್ದಾರೆ : ಈ ಜಗತ್ತು ನಾಮರೂಪಗಳಿಂದ ವಿಂಗಡವಾಗಿದ್ದು ಅನೇಕ ಕರ್ತೃಭೋಕ್ತೃಗಳಿಂದ ಕೂಡಿದ್ದು ಹಾಗೂ ದೇಶಕಾಲ ನಿಮಿತ್ತಗಳ ಚೌಕಟ್ಟಿನಲ್ಲಿ ವಿಧವಿಧವಾದ ಸ್ಥಾವರಜಂಗಮ ಪ್ರಾಣಿಗಳಿಂದ ಪರಿವೃತವಾಗಿದ್ದು ಎಂಥ ಜಾಣನಿಗೂ ಈ ವೈಚಿತ್ರ್ಯಗಳನ್ನು ಕುರಿತು ಮನಸ್ಸಿನಿಂದಲೂ ಊಹಿಸಲು ಅಸಾಧ್ಯವಾಗಿರುವ ಈ ಬ್ರಹ್ಮಾಂಡವನ್ನು ಸೃಷ್ಟಿಸಿರುವ ಭಗವಂತನನ್ನು 'ಮಹಾಕರ್ಮಾ'ನೆಂದು ಸ್ತುತಿಸಿರುವದು ಅತ್ಯಂತ ಸಮಂಜಸವಾಗಿರುತ್ತದೆ. **(673)** ಈಗ **ಮಹಾತೇಜಾಃ** - ಎಂಬ ನಾಮವನ್ನು ನೋಡೋಣ. ಭಗವಂತನ ದಿವ್ಯ ತೇಜಸ್ಸು ಪರಮಾದ್ಭುತವಾದುದು. ಗೀತೆಯಲ್ಲಿರುವಂತೆ ಅರ್ಜುನನಿಗೆ ಭಗವಂತನು

ವಿಶ್ವರೂಪವನ್ನು ತೋರಿಸಿದಾಗ ಅವನ ತೇಜಸ್ಸು ಸಾವಿರ ಸೂರ್ಯರ ತೇಜಸ್ಸಿಗೆ ಸಮಾನವಾಗಿತ್ತು. ಇಂಥ ಅಪರಿಮಿತ ತೇಜೋಮಯಪುರುಷೋತ್ತಮನನ್ನು ಈ ನಾಮದಿಂದ ಸ್ತುತಿಸಿದೆ. **(674)** ಈಗ **ಮಹೋರಗಃ** - ಎಂಬ ನಾಮವನ್ನು ನೋಡೋಣ. ಉರಗ - ಎಂದರೆ ಎದೆಯಿಂದ ಸಂಚರಿಸುವ ಪ್ರಾಣಿ - ಎಂದರ್ಥ. ಹಾವುಗಳು ಈ ಜಾತಿಗೆ ಸೇರಿವೆ. ಭಗವಂತನು ಆದಿಶೇಷ - ವಾಸುಕಿ ಮುಂತಾದ ದಿವ್ಯ ಉರಗಗಳ ರೂಪದಲ್ಲಿಯೂ ಇರುತ್ತಾನಾಗಿ ಈ ನಾಮವು ಬಂದಿದೆ. **(675)** ಈಗ **ಮಹಾಕ್ರತುಃ** - ಎಂಬ ನಾಮವನ್ನು ನೋಡೋಣ. ಕ್ರತು - ಎಂದರೆ ಯಜ್ಞ- ಎಂದರ್ಥ. ಯಜ್ಞಗಳಲ್ಲೆಲ್ಲ ಅತ್ಯಂತ ಮಿಗಿಲಾದದ್ದು ಅಶ್ವಮೇಧಯಜ್ಞವು. ಅದು ಕೂಡ ಭಗವಂತನ ವಿಭೂತಿಯೇ ಆಗಿರುವದರಿಂದ ಈ ನಾಮದಿಂದ ಸ್ತುತಿಸಿದೆ. **(676)** ಈಗ **ಮಹಾಯಜ್ವಾ** - ಎಂಬ ನಾಮವನ್ನು ನೋಡೋಣ. ಲೋಕಕಲ್ಯಾಣಕ್ಕಾಗಿ ಹಾಗೂ ಲೋಕದ ಜನರ ಅಧರ್ಮಾಚರಣೆಯನ್ನು ತಿದ್ದಿ ಅಡ್ಡದಾರಿಯನ್ನು ತಪ್ಪಿಸಿ ಸನ್ಮಾರ್ಗಪ್ರವರ್ತಕರಾಗುವಂತೆ ಮಾಡುವದಕ್ಕಾಗಿ ಭಗವಂತನು ತನ್ನ ಅವತಾರ ಲೀಲೆಗಳಲ್ಲಿ ವೈದಿಕ ಹಾಗೂ ನೈತಿಕ ಸತ್ಕರ್ಮಗಳನ್ನು ಆಚರಿಸಿರುತ್ತಾನೆ. ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(677)** ಈಗ **ಮಹಾಯಜ್ಞಃ** - ಎಂಬ ನಾಮವನ್ನು ನೋಡೋಣ. ಭಗವಂತನು ಯಜ್ಞರೂಪದಲ್ಲಿಯೂ ಇರುವವನಾಗಿದ್ದು ಅಶ್ವಮೇಧಾದಿಮಹಾಯಜ್ಞಗಳ ಆತ್ಮನೇ ಆಗಿರುವದರಿಂದ ಈ ನಾಮವು ಬಂದಿದೆ. **(678)** ಈಗ **ಮಹಾಹವಿಃ** - ಎಂಬ ನಾಮವನ್ನು ನೋಡೋಣ. ದೇವತೆಗಳನ್ನು ಉದ್ದೇಶಿಸಿ ಹವಿಸ್ಸನ್ನು ಆಹುತಿಯಾಗಿ ಅಗ್ನಿಯಲ್ಲಿ ಸಮರ್ಪಿಸುವಾಗ ಅದು ಅಗ್ನಿರೂಪವಾದ ಬ್ರಹ್ಮದಲ್ಲಿಯೇ ಲೀನವಾಗುತ್ತದೆ. ಹಾಗೆಯೇ ವಿಚಾರಮಾಡಿದರೆ ಅರ್ಪಣ, ಹವಿಸ್ಸು, ಅಗ್ನಿ, ಆಹುತಿ - ಎಲ್ಲವೂ ಬ್ರಹ್ಮವೇ ಆಗಿರುತ್ತದೆಯೆಂದು ಗೀತೆಯಲ್ಲಿ ಭಗವಂತನು ತಿಳಿಸಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ.

**ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ ।**
**ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥73॥**

**(679)ಸ್ತವ್ಯಃ** -ಭಗವಂತನು ಸ್ತೋತ್ರಕ್ಕೆ ಅರ್ಹನಾಗಿರುವದರಿಂದ ಮುಖ್ಯಾರ್ಥದಲ್ಲಿ ಸ್ತುತಿಯೋಗ್ಯನಾಗಿದ್ದಾನೆ. ಆದ್ದರಿಂದ ನಾವು ಸ್ತುತಿಮಾಡಿದರೆ ಭಗವಂತನನ್ನೇ ಮಾಡಬೇಕು. ಶ್ರೀತ್ಯಾಗರಾಜರು ಯಾವ ರಾಜಮಹಾರಾಜರನ್ನೂ ಸ್ತೋತ್ರಮಾಡಲೊಪ್ಪದೆ ಶ್ರೀರಾಮನನ್ನೇ ಸ್ತುತಿಮಾಡಿ ಕೃತಾರ್ಥರಾದರು. ಆದ್ದರಿಂದ ಭಗವಂತನೊಬ್ಬನೇ ಸ್ತವ್ಯ (ಸ್ತೋತ್ರಕ್ಕೆ ಯೋಗ್ಯ)ನೆನಿಸಿರುತ್ತಾನೆ. **(680)** ಈಗ **ಸ್ತವಪ್ರಿಯಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಸ್ತುತಿಯೇ ಬಹಳ ಪ್ರಿಯವಾದುದು. 'ಸರ್ವ

ಪೂರ್ತಿಕರೀ ಸ್ತುತಿಃ' ಎಂದು ಸ್ಮೃತಿವಾಕ್ಯವಿದೆ. ಶ್ರೀತ್ಯಾಗರಾಜರು, ಶ್ರೀಪುರಂದರ ದಾಸರು, ಶ್ರೀಕನಕದಾಸರು - ಇತ್ಯಾದಿ ವಾಗ್ಗೇಯಕಾರರೆಲ್ಲರೂ ತಮ್ಮತಮ್ಮ ಸ್ತೋತ್ರ ಸೇವೆಯಿಂದಲೇ ಭಗವಂತನ ಸಾಕ್ಷಾತ್ಕಾರವನ್ನು ಪಡೆದಿರುತ್ತಾರೆ. ಸ್ತುತಿ ಎಂದರೆ "ಗುಣಿ ನಿಷ್ಠ ಗುಣಾಭಿಧಾನಂ ಸ್ತುತಿಃ' ಎಂಬ ವಾಕ್ಯದಂತೆ ಭಗವಂತನಲ್ಲಿರುವ ಕಲ್ಯಾಣ ಗುಣಗಳನ್ನು ಕುರಿತು ಅವುಗಳನ್ನು ಬಳಸಿ ಸ್ತುತಿಮಾಡುವದೇ ಆಗಿದೆ. ಶಿವಮಹಿಮ್ನಃ ಸ್ತೋತ್ರದ ಈ ಶ್ಲೋಕವನ್ನು ನೋಡೋಣ.

*ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿಂಧುಪಾತ್ರೇ*
*ಸುರವರತರುಶಾಖಾ ಲೇಖಿನೀ ಪತ್ರಮುರ್ವೀ ।*
*ಲಿಖತಿ ಯದಿ ಗೃಹೀತ್ವಾ ಶಾರದಾ ಸಾರ್ವಕಾಲಂ*
*ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ॥*

ಭಾವಾರ್ಥ : "ಕಾಡಿಗೆ(ಕಪ್ಪು)ಯ ರಾಶಿಯು ಬೆಟ್ಟದಷ್ಟು ಇರುವಾಗ ಅದನ್ನು ಸಮುದ್ರವೆಂಬ ಪಾತ್ರೆಯಲ್ಲಿ ಕದಡಿದಾಗ ಬರೆಯುವ ಮಷಿ(Ink)ಯಾಗುತ್ತದೆ. ಅನಂತರ ದೇವಲೋಕದ ಕಲ್ಪವೃಕ್ಷದ ರೆಂಬೆಯೊಂದನ್ನು ಲೇಖಿನಿ(Pen)ಯಾಗಿ ಮಾಡಿ ಕೊಂಡು ಭೂಮಿಯನ್ನೇ ಕಾಗದವನ್ನಾಗಿ ಬಳಸಿಕೊಂಡು ಶ್ರೀಶಾರದಾದೇವಿಯು ಸದಾಕಾಲವೂ ಎಲೈ ಪರಮೇಶ್ವರನೆ, ನಿನ್ನ ಗುಣಗಳನ್ನು ಬರೆಯುತ್ತಿದ್ದರೂ ಅವು ಯಾವವೂ ಸಾಕಾಗದೆ ಇದ್ದು ಕೊನೆಯನ್ನು ಮುಟ್ಟಲಾರದೆ ಹೋಗುವವು". ಹೀಗೆ ಭಗವಂತನ ಕಲ್ಯಾಣಗುಣಗಳು ಅಪಾರವಾಗಿದ್ದು ಲೆಕ್ಕಕ್ಕೆ ಎಟುಕದಂತಾಗಿದೆ- ಎಂಬರ್ಥದಲ್ಲಿ ಸ್ತವಪ್ರಿಯಃ ಎಂಬ ನಾಮವು ಬಂದಿದೆ. **(681)** ಈಗ **ಸ್ತೋತ್ರಮ್** - ಎಂಬ ನಾಮವನ್ನು ನೋಡೋಣ. ಇದು ಭಗವಂತನ ಗುಣಸಂಕೀರ್ತನ ರೂಪ ವಾಗಿದ್ದು ಅವನನ್ನು ಭಕ್ತನ ಹೃದಯದಲ್ಲಿ ಬಂಧಿಸಿಬಿಡುವದು. ಒಂದು ಸ್ತೋತ್ರವು ಆ ಭಗವಂತನ ಕೋಟಿಪೂಜೆಗಳಿಗೆ ಸಮಾನವೆಂದು ಹಿರಿಯರು ಹೇಳುತ್ತಾರೆ. ದೇವರ ಪೂಜೆಯೆಲ್ಲವೂ ಆದಮೇಲೂ ಸ್ತೋತ್ರಪಾಠವನ್ನು ಹೇಳಲೇ ಬೇಕು. ಆಗ ಪೂಜೆಯು ಪೂರ್ಣವಾಗುವದು. ಹೀಗೆ ಸ್ತೋತ್ರವೂ ಭಗವಂತನ ನಾಮವಾಗಿ ಗೌರವಿಸಲ್ಪಟ್ಟಿರುತ್ತದೆ. **(682) ಸ್ತುತಿಃ** - ಎಂಬುದೂ ಪರಮಾತ್ಮನ ಗುಣಲೀಲೆಗಳನ್ನು ಕೊಂಡಾಡುವ ಸಾಧನವೇ ಆಗಿದೆ. ಇದು ಕ್ರಿಯಾರೂಪವಾಗಿದ್ದು ಬಾಯಿಯಿಂದ ಹೊರಬೀಳುವ ಶಬ್ದರೂಪವಾಗಿದೆ. ದೇವರು ನಮಗೆ ನಾಲಗೆಯನ್ನು ಕೊಟ್ಟು ಶಬ್ದೋಚ್ಚಾರಣೆಗೆ ಅನುಕೂಲವನ್ನು ಮಾಡಿರುವದು ಆ ಮಹನೀಯನ ದಿವ್ಯನಾಮಗಳನ್ನು ಕೊಂಡಾಡುವದಕ್ಕಾಗಿಯೇ - ಎಂದು ತಿಳಿಯಬೇಕು. ಹಾಗೂ ನಾಲಗೆಯನ್ನು ಭಗವಂತನ ದಿವ್ಯನಾಮಕೀರ್ತನೆಗೇ ಬಳಸಬೇಕು. ಈ ನಾಮವು ಭಗವಂತನೇ-

ಎಂದು ಭಾವಿಸಬೇಕು. **(683)** ಈಗ **ಸ್ತೋತಾ** - ಎಂಬ ನಾಮವನ್ನು ನೋಡೋಣ. ಇದು ಸ್ತೋತ್ರಮಾಡತಕ್ಕವನನ್ನು ಕುರಿತದ್ದಾಗಿದೆ. ಮಾನವನು ದೇವರು ಕೊಟ್ಟಿರುವ ನಾಲಗೆಯನ್ನು ಭಗವಂತನ ಕೀರ್ತನೆಗೆ ಬಳಸಬೇಕು. ಅವನ ನಮೋಚ್ಚಾರಣೆಗೆ ಮೀಸಲಾಗಿಟ್ಟರೂ ಆದೀತು. ಇದಕ್ಕಾಗಿಯೇ ಹಿಂದೆ ತಂದೆತಾಯಿಂದಿರು ಮಕ್ಕಳಿಗೆ ದೇವರ ಹೆಸರನ್ನೇ ನಾಮಕರಣಮಾಡಿ ಆ ನೆಪದಲ್ಲಿ ಭಗವಂತನನ್ನು ಸ್ಮರಿಸುತ್ತಿದ್ದರು. ಹೀಗೆ ಸ್ತೋತಾ (ಸ್ತೋತ್ರಮಾಡುವವನು) ಎಂಬ ನಾಮವೂ ಒಂದಾಗಿದೆ. **(684)** ಈಗ **ರಣಪ್ರಿಯಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ದುಷ್ಟನಿಗ್ರಹಕ್ಕಾಗಿ ಯುದ್ಧವು ಅನಿವಾರ್ಯವಾಗಿದೆ. ಆದ್ದರಿಂದ ರಣಪ್ರಿಯನೆನಿಸಿದ್ದಾನೆ. **(685)** ಈಗ **ಪೂರ್ಣಃ** - ಎಂಬ ನಾಮವನ್ನು ನೋಡೋಣ. ಸಕಲಕಾಮುಗಳಿಂದಲೂ ಸಕಲ ಶಕ್ತಿಗಳಿಂದಲೂ ಕೂಡಿರುತ್ತಾನಾಗಿ ಪೂರ್ಣನೆನಿಸುತ್ತಾನೆ. **(686)** ಕೇವಲ ಪೂರ್ಣನಷ್ಟೇ ಅಲ್ಲ. **ಪೂರಯಿತಾ** - ಎಂದರೆ ಎಲ್ಲರನ್ನೂ ಸಂಪತ್ತುಗಳಿಂದ ಪೂರ್ಣರನ್ನಾಗಿ ಮಾಡುತ್ತಾನೆ. **(687)** ಈಗ **ಪುಣ್ಯಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಸ್ತುತಿಮಾಡಿದ ಮಾತ್ರದಿಂದ ಪಾಪಗಳನ್ನು ತೊಳೆದು ಉದ್ಧರಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(688)** ಈಗ **ಪುಣ್ಯಕೀರ್ತಿಃ** - ಎಂಬ ನಾಮವನ್ನು ನೋಡೋಣ. ಪುಣ್ಯನಾದ ಕೀರ್ತಿಯು ಈತನದು. ಏಕೆಂದರೆ ಜನರಿಗೆ ಈತನ ಗುಣಕೀರ್ತಿಗಳನ್ನು ಕುರಿತು ಉಪಾಖ್ಯಾನಗಳನ್ನು ಹೇಳುವದು, ಹಾಗೂ ಕೇಳುವದು ಪುಣ್ಯವನ್ನುಂಟುಮಾಡುತ್ತದೆ. ಆದ್ದರಿಂದ ಪುಣ್ಯಕೀರ್ತಿಯೆಂದು ಸ್ತುತಿಸಲ್ಪಟ್ಟಿರುತ್ತಾನೆ. **(689)** ಈಗ **ಅನಾಮಯಃ** - ಎಂಬ ನಾಮವನ್ನು ನೋಡೋಣ. ಆಮಯ - ಎಂದರೆ ರೋಗ ಎಂದರ್ಥ. ಭಗವಂತನಿಗೆ ಶಾರೀರಕ ಮತ್ತು ಮಾನಸಿಕವಾದ ಯಾವ ರೋಗಬಾಧೆಯೂ ಇರುವದೇ ಇಲ್ಲ. ಏಕೆಂದರೆ ಇವನಿಗೆ ಪಾಪ-ಪುಣ್ಯಗಳ ಸಂಪರ್ಕವಿಲ್ಲವಾಗಿ ಯಾವ ರೋಗವೂ ಬರುವ ಸಂಭವವಿಲ್ಲ. ಮತ್ತು ಅಶರೀರನಾದ ಭಗವಂತನಿಗೆ ರೋಗಗಳ ಸಂಪರ್ಕಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಅನಾಮಯನೆಂದು ಸ್ತುತಿಸಲ್ಪಟ್ಟಿರುತ್ತಾನೆ.

**ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।**
**ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ ॥74॥**

**(690)** ಈಗ **ಮನೋಜವಃ** - ಎಂಬ ನಾಮವನ್ನು ನೋಡೋಣ. ಮನಸ್ಸಿನ ವೇಗದಂತೆ ವೇಗವುಳ್ಳವನು ಎಂದರ್ಥ. ಆದರೆ ಮನಸ್ಸಿಗಿಂತಲೂ ಮಿಗಿಲಾದ ವೇಗವುಳ್ಳವನೆಂದು ಈಶಾವಾಸ್ಯೋಪನಿಷತ್ತಿನ ಮಂತ್ರದಲ್ಲಿ "ಮನಸೋ ಜವೀಯಃ" ಎಂದು ಸ್ತುತಿಸಿದೆ. ಹೀಗೆ ಭಗವಂತನು ಮನಸ್ಸಿಗೂ ಹಿನ್ನೆಲೆಯಾಗಿದ್ದು ಅದು

ಚಲಿಸುವ ಸ್ಥಳಕ್ಕೆ ಮೊದಲೇ ಆತ್ಮನು ಇದ್ದುಕೊಂಡಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(691)** ಈಗ **ತೀರ್ಥಕರಃ** - ಎಂಬ ನಾಮವನ್ನು ನೋಡೋಣ. ಆರು ಅಂಗಗಳು(ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ) ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಮೀಮಾಂಸೆ, ನ್ಯಾಯ, ಪುರಾಣ, ಧರ್ಮಶಾಸ್ತ್ರ- ಹೀಗೆ ಒಟ್ಟು ಹದಿನಾಲ್ಕು ವಿದ್ಯೆಗಳನ್ನು ಮತ್ತು ವೇದ ಬಾಹ್ಯವಾದ ಲೌಕಿಕವಿದ್ಯೆಗಳನ್ನೂ ಶಾಸ್ತ್ರಗಳೆಂದು ನಿರ್ಮಿಸಿ ಹೇಳಿಕೊಟ್ಟವನು- ಎಂಬರ್ಥದಲ್ಲಿ ಭಗವಂತನನ್ನು ತೀರ್ಥಕರನೆಂದೂ ಸ್ತುತಿಸಿದೆ. **(692)** ಈಗ **ವಸುರೇತಾ** - ಎಂಬ ನಾಮವನ್ನು ನೋಡೋಣ. ವಸು - ಎಂದರೆ ಸುವರ್ಣವು. ಇದು ಭಗವಂತನ ರೇತಸ್ಸು. ಆದ್ದರಿಂದ ಈ ನಾಮವು ಬಂದಿದೆ. **(693)** ಈಗ **ವಸುಪ್ರದಃ** - ಎಂಬ ನಾಮವನ್ನು ನೋಡೋಣ. ವಸು ಎಂದರೆ ಧನಸಂಪತ್ತು. ಇದನ್ನು ಸಮೃದ್ಧಿಯಾಗಿ ಕೊಡುವವನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. ಕುಬೇರನೂ ಧನಾಧ್ಯಕ್ಷನೆನಿಸಿದರೂ ಅವನು ಶ್ರೀಮಹಾವಿಷ್ಣುವಿನ ಪ್ರಸಾದದಿಂದ ಧನಾಧ್ಯಕ್ಷನೇ ಹೊರತು ಸ್ವತಂತ್ರನಲ್ಲ. ಆದ್ದರಿಂದ ಮುಖ್ಯಾರ್ಥದಲ್ಲಿ ಭಗವಂತನೇ ವಸುಪ್ರದನು. **(694)ವಸುಪ್ರದಃ** - ಈಗ ಎರಡನೆಯ ಬಾರಿಗೆ ಮತ್ತೆ ವಸುಪ್ರದನೆಂದು ಸ್ತುತಿಸಲ್ಪಟ್ಟಿರುವ ನಾಮವನ್ನು ನೋಡೋಣ. ಇಲ್ಲಿ ವಸು - ಎಂದರೆ ಪರಮ ಪುರುಷಾರ್ಥವಾದ ಮುಕ್ತಿಯು - ಎಂದರ್ಥ. ಇದನ್ನು ಭಕ್ತರಿಗೆ ದಯಪಾಲಿಸುವವನು ಭಗವಂತನೊಬ್ಬನೇ ಆಗಿದ್ದಾನೆ. "ಮೋಕ್ಷಮಿಚ್ಛೇತ್ ಜನಾರ್ದನಾತ್" ಎಂದು ಸುಭಾಷಿತವಾಕ್ಯವೂ ಇದೆ. ಹೀಗೆ ಭಗವಂತನು ಮತ್ತೊಮ್ಮೆ ವಸುಪ್ರದನೆನಿಸಿರುತ್ತಾನೆ. **(695)** ಈಗ **ವಾಸುದೇವ** - ನೆಂಬ ನಾಮವನ್ನು ನೋಡೋಣ. ಕೃಷ್ಣಾವತಾರಕಾಲಕ್ಕೆ ಭಗವಂತನು ವಸುದೇವನ ಪುತ್ರನಾಗಿ ಜನಿಸಿದ್ದರಿಂದ ಈ ನಾಮವು ಬಂದಿದೆ. ಇನ್ನೊಂದು ಅರ್ಥದಂತೆ ಭಗವಂತನು ಸೃಷ್ಟಿಯಲ್ಲಿರುವ ಸರ್ವಭೂತಗಳನ್ನೂ ವ್ಯಾಪಿಸಿ ಅವುಗಳ ಆತ್ಮನಾಗಿರುವದರಿಂದಲೂ ವಾಸುದೇವನೆನಿಸಿರುತ್ತಾನೆ. **(696)** ಈಗ **ವಸುಃ** - ಎಂಬ ನಾಮವನ್ನು ನೋಡೋಣ. ಭೇದಭಾವವಿಲ್ಲದೆ ಎಲ್ಲಾ ಜೀವರುಗಳಲ್ಲಿಯೂ ಒಳಹೊಕ್ಕು ವಾಸಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(697)** ಈಗ **ವಸುಮನಾಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ವಸ್ತುಗಳಲ್ಲಿಯೂ ಸಮಾನವಾಗಿ ವಾಸಮಾಡಿಕೊಂಡಿದ್ದು ಅಂಥ ವಿಶಾಲವಾದ ಮನಸ್ಸು ಉಳ್ಳವನಾಗಿರುವದರಿಂದ ಈ ನಾಮವು ಬಂದಿದೆ. **(698)** ಈಗ **ಹವಿಃ** - ಎಂಬ ನಾಮವನ್ನು ನೋಡೋಣ. ದೇವತೆಗಳಿಗೆ ತಲುಪಿಸುವದಕ್ಕಾಗಿ ಅಗ್ನಿಯಲ್ಲಿ ಅರ್ಪಿಸುವ ಪದಾರ್ಥವನ್ನು ಹವಿಸ್ಸು- ಎಂದು ಕರೆಯುತ್ತಾರೆ. ಗೀತೆಯಲ್ಲಿ ಜ್ಞಾನ ಯಜ್ಞವನ್ನು

ಸ್ತುತಿಸುವಾಗ ಬ್ರಹ್ಮವನ್ನು ಹವಿಸ್ಸೆಂದು ತಿಳಿಸುತ್ತಾರೆ. ಹೀಗೆ ಭಗವಂತನು ಹವಿರಾದಿ ವಸ್ತುಗಳ ರೂಪದಲ್ಲಿಯೂ ಇದ್ದುಕೊಂಡು ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ.

**ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।**
**ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥75॥**

**(699)** ಈಗ **ಸದ್ಗತಿಃ** - ಎಂಬ ನಾಮವನ್ನು ನೋಡೋಣ. ಬ್ರಹ್ಮವನ್ನು ಉಪನಿಷತ್ತಿನಲ್ಲಿ ಸತ್ - ಎಂದು ಕರೆದಿದೆ. ಆದ್ದರಿಂದ ಬ್ರಹ್ಮವು ಇದೆ - ಎಂದು ಯಾರು ತಿಳಿದಿರುವವರೋ ಅಂಥವರಿಗೆ ಸತ್‌ಪುರುಷರೆಂದು ಹೆಸರು ಇದೆ. ಹೀಗೆ ಸತ್ಪುರುಷರಿಗೆ ಆಶ್ರಯನಾಗಿರುವದರಿಂದ ಸದ್ಗತಿಯೆನಿಸಿರುತ್ತಾನೆ. **(700)** ಈಗ **ಸತ್ಕೃತಿಃ** - ಎಂಬ ನಾಮವನ್ನು ನೋಡೋಣ. ಸತ್ಪುರುಷರು ಮಾಡವ ಕೃತಿ(ಕೆಲಸ) ಗಳೆಲ್ಲವೂ ಜಗತ್ತನ್ನು ರಕ್ಷಿಸುವವೇ ಆಗಿರುವವು. ಹೀಗೆ ಸಜ್ಜನರಿಂದ ಮಾಡಲ್ಪಟ್ಟ ಒಳ್ಳೆಯ ಕೆಲಸಗಳೆಲ್ಲವೂ ಭಗವಂತನ ಪ್ರೇರಣೆಯಿಂದಲೇ ನಡೆದಿದ್ದು ಆ ಕರ್ಮಾಧ್ಯಕ್ಷನಾದ ಭಗವಂತನನ್ನು ಈ ನಾಮದಿಂದ ಸ್ತುತಿಸಲಾಗಿದೆ.

**ಇಲ್ಲಿಗೆ ಏಳನೆಯ ಶತಕವು ಮುಗಿಯಿತು.**

Z Z Z

# ಅಷ್ಟಮಶತಕ

**(701)** ಈಗ **ಸತ್ತಾ** - ಎಂಬ ನಾಮವನ್ನು ನೋಡೋಣ. ಸತ್ ಎಂಬ ಶಬ್ದದ ಮತ್ತೊಂದು ರೂಪವೇ ಇದು. ಇದನ್ನು ಸತ್ತಾಸಾಮಾನ್ಯವೆಂದೂ ಕರೆಯುತ್ತಾರೆ. ಇದರಲ್ಲಿ ಭೇದವಿಲ್ಲ. ಸಜಾತೀಯ, ವಿಜಾತೀಯ, ಸ್ವಗತ - ಎಂದು ಭೇದದಲ್ಲಿ ಮೂರು ವಿಭಾಗಗಳಿವೆ. ಮನುಷ್ಯರೆಲ್ಲ ಒಂದೇ ಆದರೂ ಗಂಡು,ಹೆಣ್ಣು - ಎಂಬ ಭೇದವಿದೆ. ಇದು ಸಜಾತೀಯಭೇದವು. ಪ್ರಾಣಿ(ಉಸಿರಾಡುವ ಜಂತು)ಗಳೆಲ್ಲವೂ ಒಂದೇ ಆದರೂ ಎರಡು ಕಾಲಿನ ಹಾಗೂ ನಾಲ್ಕು ಕಾಲಿನ ಪ್ರಾಣಿಗಳು ಎಂಬ ಭೇದವಿದೆ. ಇದು ವಿಜಾತೀಯಭೇದವು. ಇನ್ನು ಮಾನವರ ಗುಂಪಿನಲ್ಲಿಯೇ ಒಂದು ಮನೆಯಲ್ಲಿ ತಂದೆ-ಮಗ ಎಂಬ ಭೇದವಿದೆ. ಇದು ಸ್ವಗತಭೇದವು. ಈ ಎಲ್ಲಾ ಭೇದಗಳನ್ನೂ ತನ್ನಲ್ಲಿ ಅಡಕಮಾಡಿಕೊಂಡು ಇದೆ ಎಂಬ ವ್ಯವಹಾರಕ್ಕೆ ಮೂಲವಾಗಿರುವದೇ ಸತ್ ಎಂಬ ವಸ್ತುವಾಗಿದೆ. ಇದನ್ನೇ ಸತ್ತಾ ಎಂಬ ನಾಮದಿಂದ ಇಲ್ಲಿ ಕರೆಯಲಾಗಿದೆ. ಭಗವಂತನ ಸ್ವರೂಪವು ಇಂಥ ಸತ್ತಾಸಾಮಾನ್ಯವಾಗಿರುವದರಿಂದ ಈ ನಾಮವು ಬಂದಿದೆ. **(702)** ಈಗ **ಸದ್ಭೂತಿಃ**- ಎಂಬ ನಾಮವನ್ನು ನೋಡೋಣ. ಇದು ಕೂಡ ಭಗವಂತನನ್ನೇ ಹೇಳುತ್ತದೆ. ಭೂತಿ - ಎಂದರೆ ವಿವಿಧವಾದ ನಾಮ ರೂಪಾಕಾರಗಳಿಂದ ತೋರಿಕೊಳ್ಳುವಿಕೆ - ಎಂದರ್ಥ. ಬಂಗಾರದ ವ್ಯಾಪಾರದ ಅಂಗಡಿಯಲ್ಲಿ ಬೇರೆಬೇರೆಯ ಆಕಾರದ ಹಾಗೂ ಹೆಸರಿನ ಒಡವೆಗಳಿರುತ್ತವೆ. ಆದರೆ ಅಂಗಡಿಯ ಯಜಮಾನನ ದೃಷ್ಟಿಯಲ್ಲಿ ಎಲ್ಲವೂ ಚಿನ್ನವೇ. ಗ್ರಾಹಕನ ದೃಷ್ಟಿಯಲ್ಲಿ ಬೇರೆಬೇರೆ ಒಡವೆಗಳೆನಿಸಿವೆ. ಹಾಗೆ ಜಗತ್ತೆಲ್ಲವೂ ನಾನಾರೂಪಗಳಿಂದ ಹಾಗೂ ನಾಮಗಳಿಂದ ಕಂಡುಬಂದರೂ ಅದು ಬ್ರಹ್ಮಕ್ಕಿಂತ ಬೇರೆಯಲ್ಲವಾಗಿದ್ದು ಸದ್ಭೂತಿಃ ಎಂಬ ನಾಮದಿಂದ ಭಗವಂತನನ್ನೇ ತಿಳಿಸುತ್ತವೆಯಾಗಿ ಈ ನಾಮವು ಬಂದಿದೆ. **(703)** ಈಗ **ಸತ್ಪರಾಯಣಃ** - ಎಂಬ ನಾಮವನ್ನು ನೋಡೋಣ. ತತ್ತ್ವಜ್ಞಾನಿಗಳಾದ ಸತ್ಪುರುಷರಿಗೆ ಪರವಾರ ಎಂದರೆ ಮಿಗಿಲಾದ ಅಯನವು (ಗತಿಯು) ಎಂಬರ್ಥದಲ್ಲಿ ಈ ನಾಮವು ಬಂದಿದೆ. **(704)** ಈಗ **ಶೂರಸೇನಃ** - ಎಂಬ ನಾಮವನ್ನು ನೋಡೋಣ. ಹನುಮಂತನೇ ಮೊದಲಾದ ಶೌರ್ಯಶಾಲಿಗಳಾದ ಸೈನಿಕರು ಯಾವ ಸೇನೆಯಲ್ಲಿದ್ದರೋ ಅದು ಶೂರಸೇನಾ; ಆ ಶೂರ ಸೇನೆಯು ಯಾವಾತನೋ

(ಈತನು) ಶೂರಸೇನನು. (705) ಈಗ **ಯದುಶ್ರೇಷ್ಠಃ** - ಎಂಬ ನಾಮವನ್ನು ನೋಡೋಣ. ಯದುವಂಶದ ರಾಜರುಗಳಲ್ಲಿ ಶ್ರೇಷ್ಠನೆನಿಸಿರುವನಾದ್ದರಿಂದ ಈ ನಾಮವು ಬಂದಿದೆ. ಶ್ರೀಕೃಷ್ಣಭಗವಂತನೇ ಯದುಶ್ರೇಷ್ಠನು. ಅವನ ಅವತಾರಲೀಲೆಗಳಲ್ಲೆಲ್ಲ ದುಷ್ಟನಿಗ್ರಹ, ಶಿಷ್ಟಪರಿಪಾಲನೆಗಳು ಪ್ರಧಾನವಾಗಿವೆ. ದುಷ್ಟರಾದ ಕೌರವರನ್ನು ನಿಗ್ರಹಿಸಿ ಶಿಷ್ಟರಾದ ಪಾಂಡವರನ್ನು ಉದ್ಧಾರಮಾಡಿದ್ದರಿಂದ ಈ ನಾಮವು ಬಂದಿದೆ.

(706) ಈಗ **ಸನ್ನಿವಾಸಃ** - ಎಂಬ ನಾಮವನ್ನು ನೋಡೋಣ. ಸತ್ಪುರುಷರಿಗೆಲ್ಲ ಆಶ್ರಯನಾಗಿದ್ದು ಸಮಯಾನುಸಾರ ಅವರುಗಳನ್ನು ಅನುಗ್ರಹಿಸಿ ಕಾಪಾಡಿದವನಾದ್ದರಿಂದ ಈ ನಾಮವು ಬಂದಿದೆ. (707) ಈಗ **ಸುಯಾಮುನಃ** - ಎಂಬ ನಾಮವನ್ನು ನೋಡೋಣ. ಶೋಭನರಾದ - ಎಂದರೆ ಗೌರವಸಂಪನ್ನರಾದ ಯಾಮುನರು- ಎಂದರೆ, ಯುಮುನೆಯ ಸಂಬಂಧಿಗಳಾದ ದೇವಕಿ, ವಸುದೇವ, ನಂದಗೋಪ, ಯಶೋದೆ ಬಲರಾಮ, ಸುಭದ್ರಾದೇವಿ, ಮುಂತಾದವರು ಈತನಿಗೆ ಪರಿವಾರದವರಾದ್ದರಿಂದ ಈ ನಾಮವು ಬಂದಿದೆ.

**ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ ।**
**ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ ॥76॥**

(708) ಈಗ **ಭೂತಾವಾಸಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಭೂತಗಳು - ಎಂದರೆ ಸ್ಥಾವರಜಂಗಮಪ್ರಾಣಿಗಳು. ಇವೆಲ್ಲವೂ ಆ ಭಗವಂತನನ್ನು ಆಶ್ರಯಿಸಿಕೊಂಡು ಅವನಲ್ಲಿಯೇ ವಾಸಿಸುವವು. ಎಲ್ಲಾ ಭೂತ(ಜೀವರು)ಗಳಿಗೂ ಭಗವಂತನೇ ಆಶ್ರಯನಾಗಿರುತ್ತಾನೆ. ಮತ್ತು ಅವನಲ್ಲಿಯೇ ಇವು ಇರುವವು. ಆದ್ದರಿಂದ ಈ ನಾಮವು ಬಂದಿದೆ. (709) ಈಗ **ವಾಸುದೇವಃ** -ನೆಂಬ ನಾಮವನ್ನು ನೋಡೋಣ. ಶ್ರೀಕೃಷ್ಣನು ವಸುದೇವನ ಪುತ್ರನಾದ್ದರಿಂದ ವಾಸುದೇವನೆನಿಸಿದ್ದಾನೆ. ಇನ್ನೊಂದರ್ಥದಲ್ಲಿ ಜಗತ್ತೆಲ್ಲವನ್ನೂ ತನ್ನ ಮಹಿಮೆಯಿಂದ ವ್ಯಾಪಿಸಿಕೊಂಡಿದ್ದು ಎಲ್ಲಾ ಜೀವರುಗಳಲ್ಲಿಯೂ ನೆಲೆಸಿರುತ್ತಾನಾಗಿ ಭಗವಂತನನ್ನು ವಾಸುದೇವನೆಂದು ಸ್ತುತಿಸಿದೆ. (710) ಈಗ **ಸರ್ವಾಸುನಿಲಯಃ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿ ಉಸಿರಾಡುತ್ತಿರುವ ಎಲ್ಲಾ ಜೀವರುಗಳೂ ಯಾವ ಭಗವಂತನಲ್ಲಿ ಒಂದಾಗಿದ್ದು ಅವನ ಆಶ್ರಯದಲ್ಲಿದ್ದುಕೊಂಡು ವ್ಯಾಪಾರಮಾಡುವವೋ, ಅವೆಲ್ಲಕ್ಕೂ ಯಾವನೊಬ್ಬನೇ

ಆಶ್ರಯನಾಗಿರುವನೋ ಅವನು ಸರ್ವಾಸುನಿಲಯನೆನಿಸಿರುತ್ತಾನೆ. (711) ಈಗ **ಅನಲಃ** - ಎಂಬ ನಾಮವನ್ನು ನೋಡೋಣ. ಭಗವಂತನ ಶಕ್ತಿ, ಸಂಪದಾದಿಗಳಿಗೆ ಇಂತಿಷ್ಟು - ಎಂಬ ಕೊನೆಯಿಲ್ಲ. ಅವು ಅಪರಿಮಿತವಾದವುಗಳು. ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. (712) ಈಗ **ದರ್ಪಹಾ** - ಎಂಬ ನಾಮವನ್ನು ನೋಡೋಣ. ಧರ್ಮವಿರುದ್ಧವಾದ ಮಾರ್ಗದಲ್ಲಿ ನಡೆಯುವ ಹಾಗೂ ನೆಲೆಗೊಳ್ಳುವ ದುಷ್ಟಜನರ ದರ್ಪ(ಅಹಂಕಾರ)ವನ್ನು ನಾಶಗೊಳಿಸುವವನಾದ್ದರಿಂದ ಈ ನಾಮವು ಬಂದಿದೆ. (713) ಈಗ **ದರ್ಪದಃ** - ಎಂಬ ನಾಮವನ್ನು ನೋಡೋಣ. ಧರ್ಮ ಮಾರ್ಗದಲ್ಲಿಯೇ ನಡೆಯುವವರಾಗಿದ್ದು ಸಮಯಾನುಸಾರ ತಾತ್ಕಾಲಿಕವಾಗಿ ದರ್ಪವನ್ನು ಪ್ರಕಟಿಸಬೇಕಾದವರಿಗೆ ಅಂಥ ಸಂದರ್ಭದಲ್ಲಿ ದರ್ಪವನ್ನು ಕೊಡುತ್ತಾನಾದ್ದರಿಂದ ಈ ನಾಮವು ಬಂದಿದೆ. (714) ಈಗ **ದೃಪ್ತಃ** - ಎಂಬ ನಾಮವನ್ನು ನೋಡೋಣ. ತನ್ನ ಆತ್ಮನೇ ಆಗಿರುವ ಭಗವಂತನ ಸನ್ನಿಧಿಯಿಂದ ಆನಂದವನ್ನು ಹೊಂದಿ ಯಾವಾಗಲೂ ಸಂತುಷ್ಟನಾಗಿಯೇ ಇರುತ್ತಾನಾಗಿ ಆ ಭಗವಂತನನ್ನು ಈ ನಾಮದಿಂದ ಕರೆದಿದೆ. (715) ಈಗ **ದುರ್ಧರಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಉಪಾಧಿಗಳಿಂದಲೂ ಬಿಡಲ್ಪಟ್ಟವನಾಗಿರುವದರಿಂದ ಪ್ರಣಿಧಾನ (ಶರಣು ಹೋಗುವದು) ವೇ ಮುಂತಾದ ಸಾಧನಗಳಿಂದ ಈ ಭಗವಂತನನ್ನು ತನ್ನಲ್ಲಿ ಧಾರಣೆ ಮಾಡಿಕೊಳ್ಳುವದು ಕಷ್ಟವೇ ಸರಿ. ಆದರೆ ಆ ಭಗವಂತನ ಪ್ರಸಾದದಿಂದಲೇ ಕೆಲವರು ಶ್ರಮಪಟ್ಟು ಅನೇಕ ಜನ್ಮಗಳಲ್ಲಿ ಮಾಡಿದ ಸಾಧನಗಳಿಂದ ಹೃದಯದಲ್ಲಿ ಆ ದೇವನನ್ನು ಧಾರಣೆಮಾಡಬಹುದಾಗಿದೆಯಾಗಿ ದುರ್ಧರನೆನಿಸಿರುತ್ತಾನೆ. (716) ಈಗ **ಅಪರಾಜಿತಃ** - ಎಂಬ ನಾಮವನ್ನು ನೋಡೋಣ. ಒಳಗಿನ ಹಾಗೂ ಹೊರಗಿನ ಸಂಕಟಗಳ ನಿಮಿತ್ತದಿಂದ ಸೋಲು ಇಲ್ಲದವನಾಗಿರುವದರಿಂದ ಈ ನಾಮವು ಬಂದಿದೆ.

**ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿಮಾನ್ ।**
**ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥77॥**

(717) **ವಿಶ್ವಮೂರ್ತಿಃ** - ವಿಶ್ವ ಎಂದರೆ ಹದಿನಾಲ್ಕು ಲೋಕಗಳಿಂದ ಕೂಡಿದ ಜಗತ್ತು. ಇಂಥ ಬ್ರಹ್ಮಾಂಡವೇ ಯಾವನ ಶರೀರವಾಗಿದೆಯೋ ಅವನೇ ವಿಶ್ವಮೂರ್ತಿಯೆನಿಸಿದ್ದಾನೆ. (718) **ಮಹಾಮೂರ್ತಿಃ** - ಎಂದರೆ ಆದಿಶೇಷನ

ಮೇಲೆ ಮಲಗಿರುವ ಅನಂತನೂ ಪದ್ಮನಾಭನೂ ಆದ ಭಗವಂತನು. ಅವನ ಶರೀರವು ಉಳಿದ ಜೀವರುಗಳ ಎಲ್ಲಾ ಶರೀರಗಳಿಗಿಂತಲೂ ಮಿಗಿಲಾದುದು. ಸುರ-ನರ-ಖಗ-ಗೋ-ಭೋಗಿ-ಗಂಧರ್ವ-ದೈತ್ಯಾದಿಶರೀರಗಳಿಂದ ಕೂಡಿದವನಾಗಿದ್ದು ಮಹಾಮೂರ್ತಿಯೆನಿಸಿರುತ್ತಾನೆ. (719) **ದೀಪ್ತಮೂರ್ತಿಃ** - ಎಂಬ ನಾಮವನ್ನು ನೋಡೋಣ. ಜ್ಞಾನಮಯದೀಪದಿಂದ ಬೆಳಗಲ್ಪಡುತ್ತಾ ಯಾವಾಗಲೂ ಪ್ರಕಾಶಿಸುತ್ತಿರುವ ಶರೀರವುಳ್ಳವನಾಗಿರುವದರಿಂದ ಈ ನಾಮವು ಬಂದಿದೆ. (720) ಈಗ **ಅಮೂರ್ತಿಮಾನ್** - ಎಂಬ ನಾಮವನ್ನು ನೋಡೋಣ. ಕರ್ಮಮಯವಾದ ಶರೀರವು ಇವನಿಗೆ ಇಲ್ಲವಾದ್ದರಿಂದ ಅಮೂರ್ತಿಯೆನಿಸಿದ್ದಾನೆ. ಭಗವಂತನಿಗೆ ಕರ್ಮಫಲವಾದ ಶರೀರವಿಲ್ಲ. ಆದರೆ ಸ್ವತಂತ್ರನಾಗಿದ್ದು ತನ್ನ ಇಚ್ಛಾನುಸಾರ - ಹಾಗೂ ಲೋಕಕಲ್ಯಾಣಕ್ಕಾಗಿ ಮಾಯಾಮಯವಾದ ಶರೀರಗಳನ್ನು ಆಗಾಗ್ಗೆ ಧರಿಸಬಲ್ಲವನಾಗಿದ್ದಾನೆ. ತನ್ನ ಸ್ವರೂಪದಿಂದ ಆಕಾಶದಂತೆ ಅಮೂರ್ತಿಯಾಗಿದ್ದಾನೆ. (721) ಈಗ **ಅನೇಕಮೂರ್ತಿಃ** - ಎಂಬ ನಾಮವನ್ನು ನೋಡೋಣ. ಭಗವಂತನು ಲೋಕಾನುಗ್ರಹಕ್ಕಾಗಿ ಆಗಾಗ್ಗೆ ಸಂದರ್ಭಾನುಸಾರ ಮತ್ಸ್ಯಾದಿರೂಪಗಳಿಂದ ಅವತರಿಸುತ್ತಾನೆ. ಆ ಕಾಲಕ್ಕೆ ಅವನು ಅಗತ್ಯವಾದ ಮೂರ್ತರೂಪವನ್ನು ಧರಿಸಿ ದುಷ್ಟನಿಗ್ರಹ, ಶಿಷ್ಟಪರಿಪಾಲನೆಗಳನ್ನು ಮಾಡುತ್ತಾನೆ. ನಾಮರೂಪಗಳು ಭಿನ್ನಭಿನ್ನವಾಗಿರಬಹುದೇ ಹೊರತು ಭಗವಂತನು ಮಾತ್ರ- ನಾಟಕದಲ್ಲಿ ಅಭಿನಯಿಸಿದ ನಟನಂತೆ- ಅನೇಕ ಮೂರ್ತಿಗಳಾಗಿ ತೋರಿಕೊಳ್ಳುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. (722) ಈಗ **ಅವ್ಯಕ್ತಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಅನೇಕ ನಾಮರೂಪಗಳಿದ್ದರೂ ಅವನು ಇಂಥ ರೂಪದವನೇ - ಎಂದು ಗೊತ್ತುಪಡಿಸಲು ಸಾಧ್ಯವಿಲ್ಲದ್ದರಿಂದ ಅವ್ಯಕ್ತನು- ಎನಿಸಿರುತ್ತಾನೆ. (723) ಈಗ **ಶತಮೂರ್ತಿಃ** -ಎಂಬ ನಾಮವನ್ನು ನೋಡೋಣ. ಮೂರ್ತಃ - ಎಂದರೆ ನಾಮರೂಪಗಳುಳ್ಳ ವಸ್ತು - ಎಂದು ಅರ್ಥ. ಭಗವಂತನಾದರೊ, ಇಂಥ ಗೊತ್ತಾದ ನಾಮರೂಪವುಳ್ಳವನಾಗಿರುವದಿಲ್ಲ. ಆದರೆ ಜಗತ್ತಿನಲ್ಲಿರುವ ಎಲ್ಲಾ ನಾಮರೂಪವಸ್ತುಗಳಲ್ಲಿಯೂ ಚೇತನಾಚೇತನಪದಾರ್ಥಗಳಲ್ಲಿಯೂ ಅವನು ವ್ಯಾಪಿಸಿರುತ್ತಾನೆ. ''ಬಹಿರಂತಶ್ಚ ಭೂತಾನಾಮ್'' (ಎಲ್ಲಾ ಚೇತನಾಚೇತನವಸ್ತುಗಳ ಒಳಗೂ ಹೊರಗೂ ಆ ಭಗವಂತನು ವ್ಯಾಪಿಸಿಕೊಂಡಿರುತ್ತಾನೆ.) ಎಂಬ ಗೀತಾವಾಕ್ಯದಂತೆ ಸೃಷ್ಟಿಯಲ್ಲಿರುವ ಎಲ್ಲಾ ನಾಮರೂಪಗಳ ತಿರುಳಾಗಿದ್ದು 'ಶತಮೂರ್ತಿ' ಎನಿಸಿರುತ್ತಾನೆ. ಇಲ್ಲಿ ಶತ-

ಎಂಬ ಶಬ್ದಕ್ಕೆ ಅನಂತ - ಎಂದರ್ಥ. (724) ಈಗ **ಶತಾನನಃ** - ಎಂಬ ನಾಮವನ್ನು ನೋಡೋಣ. ಮೂರ್ತ ಎಂದರೆ ಸಗುಣಸಾಕಾರವಸ್ತು ಎಂದು ಅರ್ಥ. ಶತಮೂರ್ತಿ ಎಂದರೆ ಅನಂತಮೂರ್ತಿ ಸ್ವರೂಪನಾದ ಭಗವಂತನಿಗೆ ಎಲ್ಲಾ ಶರೀರಗಳಲ್ಲಿಯೂ ಆನನ(ಮುಖ)ವಿರುವದರಿಂದ ಈ ನಾಮವು ಬಂದಿದೆ. ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳ ಶರೀರಗಳೂ ತಲೆ ಹಾಗೂ ಮುಖವನ್ನು ಹೊಂದಿರುತ್ತವೆ. ಅವುಗಳನ್ನೆಲ್ಲ ಸಂಪೂರ್ಣವಾಗಿ ವ್ಯಾಪಿಸಿಕೊಂಡಿರುವ ಭಗವಂತನನ್ನು ಶತಾನನಃ- ಎಂದು ಸ್ತುತಿಸಿದೆ.

**ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।**
**ಲೋಕಬಂಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥78॥**

(725) **ಏಕಃ** - ಪರಮಾರ್ಥದೃಷ್ಟಿಯಿಂದ ನೋಡಿದರೆ ತನ್ನ ಜಾತಿಯ, ತನಗಿಂತ ಬೇರೆಯ, ಮತ್ತು ತನ್ನೊಳಗಿನ- ಯಾವ ಭೇದವೂ ಭಗವಂತನಲ್ಲಿ ಇಲ್ಲವಾದ್ದರಿಂದ ಏಕನು - ಎನಿಸಿರುತ್ತಾನೆ. ಒಬ್ಬ ಗೃಹಸ್ಥನಿಗೆ ಒಂದೇ ಸಂತಾನ (ಮಗು)ವಿದ್ದಾಗ ಹಿರಿಯ, ಕಿರಿಯ, ಗಂಡು, ಹೆಣ್ಣು - ಇತ್ಯಾದಿ ಎಲ್ಲಾ ಭೇದಗಳೂ ಆ ಮಗುವಿನಲ್ಲಿಯೇ ಅಡಕವಾಗಿರುವಂತೆ ಭಗವಂತನೊಬ್ಬನಲ್ಲಿಯೇ ಜಗತ್ತೆಲ್ಲವೂ ಇದ್ದುಕೊಂಡಿದೆಯಾಗಿ ಏಕ-ನೆನಿಸಿರುತ್ತಾನೆ. (726) ಈಗ **ನೈಕಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಮಾಯಾಶಕ್ತಿಯಿಂದ ಬಹುರೂಪ ನಾಗಿಯೂ ಜಗತ್ತಿನಲ್ಲಿ ಕಾಣಿಸಿಕೊಳ್ಳುತ್ತಾನೆ. ಸಿಹಿ - ಎಂಬುದೊಂದೇ ಮಿಠಾಯಿ, ಸಕ್ಕರೆ, ಪಾಯಸ, ಕೇಸರಿಭಾತ್, ಲಾಡು, ಒಬ್ಬಟ್ಟು-ಇತ್ಯಾದಿ ನಾಮರೂಪಗಳಿಂದ ವ್ಯವಹರಿಸಲ್ಪಡುವಂತೆ ಭಗವಂತನೂ ಜಗತ್ತಿನ ನಾಮರೂಪಗಳಲ್ಲೆಲ್ಲ ಪ್ರವೇಶಿಸಿ ಸರ್ವ ವ್ಯಾಪಕನಾಗಿದ್ದುಕೊಂಡಿರುವದರಿಂದ ಏಕಃ- (ಒಬ್ಬನೇ)ಎನಿಸಿರುತ್ತಾನೆ. ಸಜಾತೀಯ ವಿಜಾತೀಯ ಸ್ವಗತ-ಭೇದರಹಿತನಾದ ಭಗವಂತನು ಎಲ್ಲಾ ಕಾಲ-ದೇಶ-ಕಾರ್ಯ -ಕಾರಣಗಳನ್ನೂ ವ್ಯಾಪಿಸಿಕೊಂಡಿದ್ದು ವ್ಯವಹಾರದೃಷ್ಟಿಯಿಂದ ವ್ಯಷ್ಟಿಯಾಗಿ ತೋರುತ್ತಾ ನೈಕಃ-ಎನಿಸಿರುತ್ತಾನೆ. (727) ಈಗ **ಸವಃ** - ಎಂಬ ನಾಮವನ್ನು ನೋಡೋಣ. ಸವ - ಎಂದರೆ ಯಜ್ಞ ಎಂದರ್ಥ. ಆದರೆ ಯಾವ ಯಜ್ಞದಲ್ಲಿ ಸೋಮರಸವನ್ನು ಬಳಸುತ್ತಾರೆಯೋ ಅದನ್ನು 'ಸವ' ಎಂದು ಕರೆಯುತ್ತಾರೆ. ಯಜ್ಞಗಳೆಲ್ಲವೂ ಭಗವಂತನ ದಿವ್ಯವಿಭೂತಿಗಳೇ ಆಗಿರುತ್ತವೆ. ಆದ್ದರಿಂದ ಯಜ್ಞವನ್ನು ದರ್ಶನ ಮಾಡಿದರೆ ಯಜ್ಞನಾರಾಯಣನ ದರ್ಶನವನ್ನೇ ಮಾಡಿದಂತಾಗುತ್ತದೆ. ಭಾವನೆಯಿಂದ ಇದನ್ನು ಅಳವಡಿಸಿಕೊಳ್ಳಬೇಕು. ವಿಶಾಲವಾದ ಅರ್ಥದಲ್ಲಿ ಎಲ್ಲಾ ಯಜ್ಞಗಳೂ

ಬಹಿರಂಗದೃಷ್ಟಿಯಿಂದ ಸಾತ್ತ್ವಿಕಕರ್ಮಗಳಾಗಿದ್ದರೂ ಪರಮಾರ್ಥದೃಷ್ಟಿಯಿಂದ ಅವೆಲ್ಲವೂ ಪರಬ್ರಹ್ಮವೇ ಆಗಿರುವವು. ಆದ್ದರಿಂದ ಭಗವಂತನನ್ನು ಈ 'ಸವ'- ಎಂಬ ನಾಮದಿಂದ ಸ್ತುತಿಸಿದೆ. **(728)** ಈಗ **ಕಃ**- ಎಂಬ ಏಕಾಕ್ಷರವನ್ನು ನೋಡೋಣ. ವೇದಾಂತಪರಿಭಾಷೆಯಲ್ಲಿ ಕ- ಎಂದರೆ ಸುಖ- ಎಂದರ್ಥ. ಛಾಂದೋಗ್ಯೋಪನಿಷತ್ತಿನಲ್ಲಿ 'ಕಂ ಬ್ರಹ್ಮ' (4-11-4) ಎಂದು ಬ್ರಹ್ಮಶಬ್ದದಿಂದ ಕಂ - ಎಂಬುದನ್ನು ವಿವರಿಸಿದೆ. ಆದ್ದರಿಂದ ಈ ಕಂ-ಎಂಬ ನಾಮವು ಸುಖಸ್ವರೂಪನಾದ ಬ್ರಹ್ಮವನ್ನೇ ತಿಳಿಸುತ್ತದೆಯಾಗಿ ಭಗವಂತನನ್ನು ಕಃ - ಎಂಬ ನಾಮದಿಂದ ಸ್ತುತಿಸಲಾಗಿದೆ. **(729)** ಈಗ **ಕಿಮ್** - ಎಂಬ ನಾಮವನ್ನು ನೋಡೋಣ. ವ್ಯವಹಾರಕಾಲಕ್ಕೆ 'ಕಿಂ ವಿಚಾರ್ಯಮ್' (ವಿಚಾರಮಾಡತಕ್ಕದ್ದು ಯಾವದು?) ಎಂದು ಈ ಪದವನ್ನು ಬಳಸುತ್ತೇವೆ. ಈ ಪ್ರಶ್ನೆಗೆ ಉತ್ತರರೂಪವಾಗಿ 'ಬ್ರಹ್ಮೈವ ವಿಚಾರ್ಯಮ್' ಎಂದು ಬಲ್ಲವರು ಹೇಳುತ್ತಾರೆ. ಏಕೆಂದರೆ ವಿಚಾರಪ್ರಪಂಚದಲ್ಲಿ ಬ್ರಹ್ಮಕ್ಕಿಂತ ಮಿಗಿಲಾದ ವಸ್ತುವು ಯಾವದೂ ಇಲ್ಲ. ಹೀಗಿರುವದರಿಂದ ಸರ್ವಪುರುಷಾರ್ಥಗಳ ಸಾರವಾದ ಬ್ರಹ್ಮವೊಂದೇ ವಿಚಾರ್ಯವಾಗಿರುವದರಿಂದ ಬ್ರಹ್ಮವನ್ನೇ '**ಕಿಮ್**' ಎಂಬ ನಾಮದಿಂದ ಸ್ತುತಿಸಲಾಗಿದೆ. **(730)** ಈಗ '**ಯತ್**' - ಎಂಬ ನಾಮವನ್ನು ವಿಚಾರಮಾಡೋಣ. ಬ್ರಹ್ಮವು ಸ್ವತಃ ಸಿದ್ಧವಸ್ತುವಾಗಿದೆ. ಸೂರ್ಯನನ್ನು ನೋಡಲು ದೀಪದ ಆವಶ್ಯಕತೆ ಇರುವದಿಲ್ಲ. ಏಕೆಂದರೆ ಎಲ್ಲವನ್ನೂ ಬೆಳಗುವವನೇ ಸೂರ್ಯನು. ಹಾಗೆ ಬ್ರಹ್ಮವು ಎಲ್ಲಕ್ಕೂ ಮೂಲವಸ್ತುವಾಗಿದೆ. ಮತ್ತು ಚೇತನವೂ ಸ್ವಯಂಪ್ರಕಾಶವೂ ಆಗಿದೆ. ಆದ್ದರಿಂದ ಶ್ರುತಿಯು ಕೂಡ ಬ್ರಹ್ಮವನ್ನು ತಿಳಿಸಲು ಹೊರಟಾಗ "ಯತೋ ವಾ ಇಮಾನಿ ಭೂತಾನಿ ಜಾಯನ್ತೇ" ಎಂದು ಯತ್ ಎಂಬ ಶಬ್ದದಿಂದಲೇ ಪರಾಮರ್ಶಿಸಿ ಇರುತ್ತದೆ. ಆದ್ದರಿಂದ ಯತ್ ಎಂಬ ಶಬ್ದವೂ ಭಗವಂತನ ಒಂದು ದಿವ್ಯನಾಮವೇ ಆಗಿದೆ. **(731)** ಈಗ **ತತ್** - ಎಂಬ ನಾಮವನ್ನು ನೋಡೋಣ. 'ತನೋತಿ ಇತಿ ತತ್' ಎಂಬ ವಿವರಣೆಯಂತೆ ಬ್ರಹ್ಮವು ಎಲ್ಲೆಲ್ಲಿಯೂ ಹರಡಿ ಕೊಂಡಿರುತ್ತದೆ. ಗೀತೆಯಲ್ಲಿ "ಬಹಿರಂತಶ್ಚ ಭೂತಾನಾಮ್" ಎಂದು ಬ್ರಹ್ಮವು ಎಲ್ಲಾ ಜೀವರುಗಳ ಒಳಗೂ ಹೊರಗೂ ವ್ಯಾಪಿಸಿಕೊಂಡಿದೆ - ಎಂದು ತಿಳಿಸುತ್ತಾ ಸ್ವತಃಸಿದ್ಧ ವಸ್ತುವನ್ನು ತಿಳಿಸುವ ರೀತಿಯಲ್ಲಿ 'ತತ್' ಎಂದೇ ಒಂದು ನಾಮವನ್ನು ಅಳವಡಿಸಲಾಗಿದೆ. "ತತ್ ಸತ್ಯಮ್ । ತತ್ತ್ವಮಸಿ" ಮುಂತಾದ ವಾಕ್ಯಗಳಲ್ಲಿ ಬ್ರಹ್ಮವನ್ನು ತತ್ - ಎಂಬ ಸರ್ವನಾಮಶಬ್ದದಿಂದಲೇ ತಿಳಿಸಿದೆ. ಶ್ರೀಶಂಕರಭಗವತ್ಪಾದರು ತಮ್ಮ ಗೀತಾ

ಭಾಷ್ಯದಲ್ಲಿ ತತ್- ಎಂಬ ಶಬ್ದವನ್ನು ಕುರಿತು ಹೀಗೆ ವಿವರಣೆಯನ್ನು ನೀಡಿದ್ದಾರೆ : ''ತದಿತಿ ಸರ್ವನಾಮ। ಸರ್ವಂ ಚ ಬ್ರಹ್ಮ । ತಸ್ಯ ನಾಮ ತದಿತಿ '' (ತತ್ ಎಂಬುದು ಸರ್ವನಾಮಶಬ್ದವು. ಸರ್ವವೂ ಬ್ರಹ್ಮವೇ. ಆದ್ದರಿಂದ ಬ್ರಹ್ಮದ ಹೆಸರು 'ತತ್' ಎಂದಿರುತ್ತದೆ.) ಹೀಗೆ ಭಾಷ್ಯಕಾರರು ವಿವರಣೆ ನೀಡುವ ಮೂಲಕ ತತ್ ಎಂಬಿದು ಬ್ರಹ್ಮದ ನಾಮವೆಂದು ತಿಳಿಸಿದ್ದಾರೆ. ಇನ್ನ 'ತನೋತಿ ಇತಿ ತತ್' ಎಂದು ವಿವರಣೆಯನ್ನು ಕೊಟ್ಟರೆ, 'ತನುವಿಸ್ತಾರೇ' ಎಂಬ - ಕ್ರಿಯಾಪದದ ಅರ್ಥ ವಿವರಣೆಯಂತೆಯೂ ಬ್ರಹ್ಮವು 'ತತ್' ಎಂದು ಸ್ತುತಿಸಲ್ಪಟ್ಟಿದೆ - ಎಂದಾಗುತ್ತದೆ. (732) ಈಗ **ಪದಮ್ ಅನುತ್ತಮಮ್** - ಎಂಬ ನಾಮವನ್ನು ನೋಡೋಣ. 'ಪದ್ಯತೇ ಗಮ್ಯತೇ ಇತಿ ಪದಮ್' ಎಂಬ ವಿವರಣೆಯಂತೆ ಮುಮುಕ್ಷುಗಳಾದವರು ಭಗವಂತನಿಗೆ ಶರಣಾಗತರಾಗಿ ಬಳಿಸಾರಿ ಆ ಭಗವಂತನ ಕೃಪೆಯಿಂದ ಸಂಸಾರಸಾಗರ ವನ್ನು ದಾಟಿ ಮೋಕ್ಷವನ್ನು ಪಡೆಯುತ್ತಾರೆ. ಈ ಅಭಿಪ್ರಾಯದಂತೆ ಪದಮ್ ಎಂಬ ನಾಮದಿಂದ ಸ್ತುತಿಸಿದೆ. ಯಾವ ಭಗವಂತಗಿಂತ ಉತ್ತಮವಾದದ್ದೆಂಬುದು ಜಗತ್ತಿನಲ್ಲಿಲ್ಲವೋ, ಪವಿತ್ರವಾದವುಗಳಲ್ಲಿ ಅತ್ಯಂತ ಪವಿತ್ರನೋ, ಆ ಭಗವಂತನನ್ನು ಇಲ್ಲಿ ಅನುತ್ತಮನೆಂದು ವಿಶೇಷಣವಾಗಿ ಸ್ತುತಿಸಿದೆ. ಆದ್ದರಿಂದ ಈ ನಾಮವು 'ಅನುತ್ತಮಮ್ ಪದಮ್' - ಎಂದು ಸಿದ್ಧವಾಗುತ್ತದೆ. (733) ಈಗ **ಲೋಕಬಂಧುಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಭಾಷ್ಯಕಾರರು ಮೂರು ಅರ್ಥಗಳನ್ನು ಮಾಡಿದ್ದಾರೆ. ಅವು ಯಾವವೆಂದರೆ : (1) ಭಗವಂತನ ಆಧಾರ(ಆಶ್ರಯ)ದಲ್ಲಿ ಹದಿನಾಲ್ಕು ಲೋಕಗಳೂ ಇವೆಯಾದ್ದರಿಂದ ಲೋಕಬಂಧು - ಲೋಕಗಳನ್ನು ಜೋಡಿಸಿ ಬಂಧಿಸಿ (ಕಟ್ಟಿಹಾಕಿ)ರುತ್ತಾನಾಗಿ ಈ ನಾಮವು ಬಂದಿದೆ. (2) ಅಥವಾ ಲೋಕ ಗಳನ್ನೆಲ್ಲ ಸೃಷ್ಟಿಮಾಡಿರುತ್ತಾನಾದ್ದರಿಂದ ಆ ಸೃಷ್ಟಿಕರ್ತನಿಗಿಂತ ಮಿಗಿಲಾದ ಬಂಧುವು ಇಲ್ಲವಾದ್ದರಿಂದ ಈ ಭಗವಂತನು ಲೋಕಬಂಧುವೆನಿಸಿದ್ದಾನೆ. (3) ಅಥವಾ ಶ್ರುತಿ ಸ್ಮೃತಿರೂಪವಾದ ವಿಧಿನಿಷೇಧ (ಹಿತಾಹಿತ)ಗಳನ್ನು ಲೋಕದ ಜನರಿಗೆ ಉಪದೇಶಿಸಿ ಉದ್ಧಾರಮಾಡುತ್ತಾನಾದ್ದರಿಂದಲೂ ಲೋಕಬಂಧುವೆನಿಸಿರುತ್ತಾನೆ. (734) ಈಗ **ಲೋಕನಾಥಃ** - ಎಂಬ ನಾಮವನ್ನು ನೋಡೋಣ. ಭೂಲೋಕದಲ್ಲಿರುವ ಜನರಿಂದ ಯಾಚ್ಯತೇ - ಎಂದರೆ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಳ್ಳುತ್ತಾರಾದ್ದರಿಂದ ಈ ನಾಮವು ಬಂದಿದೆ. ಅಥವಾ ಲೋಕಗಳಲ್ಲಿರುವ ಜೀವರುಗಳನ್ನು ಆಳುತ್ತಾನೆ- ಎಂಬರ್ಥದಲ್ಲಿಯೂ ಈ ನಾಮವನ್ನು ವಿವರಿಸಬಹುದು. (735) ಈಗ **ಮಾಧವಃ** - ಎಂಬ ನಾಮವನ್ನು ನೋಡೋಣ. ಮಾ - ಎಂದರೆ ಲಕ್ಷ್ಮಿ- ಎಂದರ್ಥ. ಆಕೆಗೆ ಧವ

- ಎಂದರೆ ಪತಿಯಾದ್ದರಿಂದ ಈ ನಾಮವು ಬಂದಿದೆ. ಮಧುಕುಲ(ಯದುಕುಲ) ದಲ್ಲಿ ಹುಟ್ಟಿದವನಾದ್ದರಿಂದಲೂ ಮಾಧವನೆನಿಸಿದ್ದಾನೆ. **(736)** ಈಗ **ಭಕ್ತವತ್ಸಲಃ** - ಎಂಬ ನಾಮವನ್ನು ನೋಡೋಣ. ತನ್ನ ಭಕ್ತರಲ್ಲಿ ಪ್ರೇಮವುಳ್ಳವನಾದ್ದರಿಂದ ಈ ನಾಮವು ಬಂದಿದೆ.

**ಸುವರ್ಣವರ್ಣೋ ಹೇಮಾಂಗೋ ವರಾಂಗಶ್ಚಂದನಾಂಗದೀ ।**
**ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ ॥79॥**

**(737)** ಈಗ **ಸುವರ್ಣವರ್ಣಃ** -ನೆಂಬ ನಾಮವನ್ನು ನೋಡೋಣ. ಚಿನ್ನದ ಹೊಂಬಣ್ಣದಂತೆ ಶರೀರಕಾಂತಿಯುಳ್ಳವನಾದ್ದರಿಂದ ಈ ನಾಮವು ಬಂದಿದೆ. ಮುಂಡಕೋಪನಿಷತ್ತಿನಲ್ಲಿ "ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಮ್" ಎಂಬಲ್ಲಿ ರುಕ್ಮವರ್ಣ- ಎಂಬ ಶಬ್ದದಿಂದ ಇದೇ ಶರೀರಕಾಂತಿಯನ್ನು ವರ್ಣಿಸಿದೆ. ಹೀಗೆ ಭಗವಂತನು ಸುವರ್ಣವರ್ಣನೆನಿಸಿರುತ್ತಾನೆ. **(738)** ಈಗ **ಹೇಮಾಂಗಃ** - ಎಂಬ ನಾಮವನ್ನು ನೋಡೋಣ. ಹೇಮ - ಎಂದರೆ ಚಿನ್ನ ಎಂದರ್ಥ. ಭಗವಂತನ ದಿವ್ಯಶರೀರವೆಲ್ಲವೂ ಚಿನ್ನದಂತೆಯೇ ಹೊಂಬಣ್ಣವುಳ್ಳದ್ದಾಗಿದೆ. ವೇದದಲ್ಲಿಯೂ ಭಗವಂತನನ್ನು "ಹಿರಣ್ಮಯಪುರುಷ"ನೆಂದು ಸ್ತುತಿಸಿದೆ. **(739)** ಈಗ **ವರಾಂಗಃ** - ಎಂಬ ನಾಮವನ್ನು ನೋಡೋಣ. ಶೋಭನವೂ ಸುಂದರವೂ ಆದ ಶರೀರಾಂಗ ಗಳುಳ್ಳವನು - ಎಂಬ ಅರ್ಥದಲ್ಲಿ ಈ ನಾಮವು ಬಂದಿದೆ. ವ್ರತ - ಪೂಜಾದಿಗಳಲ್ಲಿ ಅಂಗಪೂಜೆ - ಎಂಬ ಉಪಚಾರವಿರುತ್ತದೆ. ಅದರಲ್ಲಿ ಭಗವಂತನ ಪಾದಾದಿಕೇಶಾಂತ (ಪಾದದಿಂದಾರಂಭಿಸಿ ನೆತ್ತಿಯವರೆಗಿನ) ಎಲ್ಲಾ ಅವಯವಗಳನ್ನೂ ಸ್ತುತಿಸುತ್ತಾ ಆ ಭಗವಂತನ ದಿವ್ಯಸುಂದರವಾದ ಶರೀರಾವಯವಗಳನ್ನೆಲ್ಲ ಗೌರವಿಸಿ ಪೂಜಿಸಲಾಗುತ್ತದೆ. ಇದಕ್ಕೆ ಭಗವಂತನ ಶರೀರಾವಯವಗಳ ಅನುಪಮ ಸೌಂದರ್ಯವೇ ಕಾರಣ ವಾಗಿರುತ್ತದೆ. ಆದ್ದರಿಂದ ವರಾಂಗನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(740)** ಈಗ **ಚಂದನಾಂಗದೀ** - ಎಂಬ ನಾಮವನ್ನು ನೋಡೋಣ. ಚಂದನದಂತೆ ಆಹ್ಲಾದಕರ ವಾದ ಅಂಗದಗಳಿಂದ - ಎಂದರೆ ಭುಜಕೀರ್ತಿಗಳೆಂಬ ಆಭರಣಗಳಿಂದ ಅಲಂಕೃತ ನಾಗಿರುತ್ತಾನೆ. ಆದ್ದರಿಂದ ಈ ನಾಮವು ಬಂದಿರುತ್ತದೆ. **(741)** ಈಗ **ವೀರಹಾ**- ಎಂಬ ನಾಮವನ್ನು ನೋಡೋಣ. ಧರ್ಮವನ್ನು ಕಾಪಾಡುವದಕ್ಕಾಗಿ ವೀರರಾದ ಅಸುರರನ್ನು ಸಂಹಾರ(ನಾಶ)ಮಾಡುತ್ತಾನೆ - ಆದ್ದರಿಂದ ಈ ನಾಮವು ಬಂದಿದೆ. **(742)** ಈಗ **ವಿಷಮಃ** - ಎಂಬ ನಾಮವನ್ನು ನೋಡೋಣ. ಭಾಷ್ಯಕಾರರ

ಅಭಿಪ್ರಾಯದಂತೆ - ಇಲ್ಲಿ ಮುಖ್ಯಾರ್ಥವನ್ನು ಬಿಟ್ಟು ಗೌಣಾರ್ಥವನ್ನು ಸ್ವೀಕರಿಸಬೇಕು. ಭಗವಂತನಿಗೆ ಸಮರಾದವರು ಯಾರೂ ಇಲ್ಲ. ಇನ್ನು ಮಿಗಿಲಾದವರು ಎಲ್ಲಿದ್ದಾರು? ಎಂದು ಗೀತೆಯಲ್ಲಿದೆ. ಅದರಂತೆ ಸಮ-ಎಂಬ ಶಬ್ದಕ್ಕೆ 'ವಿ' ಎಂಬಕ್ಷರವು ಪ್ರಾರಂಭದಲ್ಲಿ ಸೇರಿದಾಗ ವಿ+ಸಮ=ವಿಷಮ-ಎಂದಾಗುತ್ತದೆ. ಆದ್ದರಿಂದ ಭಗವಂತನನ್ನು ಸರಿಗಟ್ಟುವವರೇ ಯಾರು ಇಲ್ಲ. ಇನ್ನು ಅವನಿಗಿಂತ ಮಿಗಿಲಾದವರು ಎಲ್ಲಿದ್ದಾರು? ಎಂದು ವಿವರಣೆಯನ್ನು ಮಾಡಿದಾಗ ಈ ನಾಮವು ಭಗವಂತನ ಸ್ತುತಿಯಾಗುತ್ತದೆ. **(743)** ಈಗ **ಶೂನ್ಯಃ** - ಎಂಬ ನಾಮವನ್ನು ನೋಡೋಣ. ವ್ಯವಹಾರದಲ್ಲಿ ಸಾಮಾನ್ಯ-ವಿಶೇಷ - ಎಂಬ ವಿಭಾಗಗಳಿವೆ. ಮರ - ಎಂಬುದು ಸಾಮಾನ್ಯ ಮಾವಿನ ಮರ - ಎಂಬುದು ವಿಶೇಷ. ಆದರೆ ಭಗವಂತನಲ್ಲಿ ಈ ಸಾಮಾನ್ಯವಿಶೇಷಗಳಿಲ್ಲ. ಈ ಕಾರಣದಿಂದ 'ಸಾಮಾನ್ಯವಿಶೇಷಶೂನ್ಯನು'- ಎಂಬರ್ಥದಲ್ಲಿ ಶೂನ್ಯಃ - ಎಂಬ ಈ ನಾಮವು ಬಂದಿದೆ. **(744)** ಈಗ **ಘೃತಾಶೀಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಘೃತ ಎಂಬ ಶಬ್ದಕ್ಕೆ ತುಪ್ಪ-ಎಂಬರ್ಥವಲ್ಲ. ಆದರೆ ಗಟ್ಟಿಯಾದ ತುಪ್ಪವು ಕರಗಿದಾಗ ನೀರಿನಂತಾಗುತ್ತದೆ. ಈ ಸಂದರ್ಭದಲ್ಲಿ ಯಾವನ ಬಯಕೆಗಳು ಭಗವಂತನ ಚಿಂತನೆಯಿಂದ ತುಪ್ಪದಂತೆ ಕರಗಿಹೋಗುವವೋ ಆ ಉಪಮೆಯ ಅರ್ಥದಲ್ಲಿ ಪರಮಾತ್ಮನಲ್ಲಿ ಸಾಧಕನ ಬಯಕೆಗಳೆಲ್ಲವೂ ಕರಗಿ ಇಲ್ಲವಾಗಿರುತ್ತವೆ. ಆದ್ದರಿಂದ ಸಾಧಕನ ಆಸೆಗಳು ನಿತ್ಯತೃಪ್ತನಾದ ಭಗವಂತನಲ್ಲಿ ಲೀನವಾಗಿ ಅವನನ್ನು ಸಂಸಾರದಿಂದ ನಿರ್ಮುಕ್ತನನ್ನಾಗಿಮಾಡುವವು. ಅಥವಾ ಭಗವಂತನ ಸಾನ್ನಿಧ್ಯವನ್ನೇ ಸಾಧಕನು ಪಡೆದಾಗ ಅವನ ಆಸೆಗಳೆಲ್ಲವೂ ಇಲ್ಲವಾಗುವವು. ಈ ಅಭಿಪ್ರಾಯಕ್ಕೆ ಹೊಂದುವಂತೆ ಘೃತಾಶೀಃ - ಎಂಬ ನಾಮವನ್ನು ಸಾಧಕನು ಅನುಸಂಧಾನ ಮಾಡಬೇಕು. **(745)** ಈಗ **ಅಚಲಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ತನ್ನ ಸ್ವರೂಪದಿಂದಾಗಲಿ, ಸಾಮರ್ಥ್ಯದಿಂದಲಾಗಲಿ, ಜ್ಞಾನವೇ ಮುಂತಾದ ಗುಣಗಳಿಂದಲಾಗಲಿ, ಚಲನ(ಅಲ್ಲಾಡುವಿಕೆ)ವು ಇರುವದಿಲ್ಲ. ಏಕೆಂದರೆ ಅವನು ಸರ್ವವ್ಯಾಪಕನಾಗಿರುತ್ತಾನೆ. ಒಬ್ಬ ದಡ್ಡನು ಬೆಲ್ಲದ ಸಿಹಿಯನ್ನು ನಾಶಪಡಿಸಬೇಕೆಂದು ಪುಡಿಮಾಡಿದನು. ಆದರೆ ಬೆಲ್ಲದ ಅಚ್ಚು ಪುಡಿಯಾಯಿತೇ ಹೊರತು ಸಿಹಿಯು ಮಾತ್ರ ನಾಶವಾಗಲಿಲ್ಲ. ಆಗ ಅವನು ಆ ಪುಡಿಯನ್ನು ನೀರಿನಲ್ಲಿ ಹಾಕಿ ಕರಗಿಸಿದನು. ಸಿಹಿ ನಾಶವಾಯಿತೊ, ಇಲ್ಲವೊ - ಎಂದು ನೋಡಲು ಹೊರಟಾಗ ನೀರು ಸಿಹಿಯಾಗಿಯೇ ಇತ್ತು. ಮತ್ತೆ ಅದನ್ನು ನಾಶಮಾಡಲು ಕುದಿಸಿದಾಗ ಗಟ್ಟಿಯಾಯಿತೇ ಹೊರತು ಸಿಹಿ ನಾಶವಾಗಲಿಲ್ಲ. ಆಗ ಅವನು ಸಿಹಿಯೇ ತಿರುಳು, ಅದು ರೂಪಾಂತರ

ವಾದೀತೇ ಹೊರತು ಅದಕ್ಕೆ ನಾಶವಿಲ್ಲ- ಎಂದು ತಿಳಿದುಕೊಂಡನು. ಅದರಂತೆಯೇ ಭಗವಂತನು ಎಂದೆಂದಿಗೂ ಅವಿನಾಶಿಯು. ಆದ್ದರಿಂದ ತನ್ನ ಸ್ವಭಾವವನ್ನು ಬಿಟ್ಟು ಅಲುಗಾಡದವನು. ಹೀಗೆ ಅಚಲನೆನಿಸಿದ್ದಾನೆ. **(746)** ಈಗ **ಚಲಃ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯೆಲ್ಲವೂ ಭಗವಂತನ ಮಹಿಮೆಯೇ ಆಗಿದೆ. ಆದ್ದರಿಂದ ಪಂಚಮಹಾಭೂತಗಳನ್ನು ಸೃಷ್ಟಿಸಿ ಅವುಗಳಲ್ಲಿ ಪ್ರವೇಶಿಸಿರುವವನೂ ಅವನೇ ಆಗಿದ್ದಾನೆ. ಹೀಗೆ ಭಗವಂತನ ವಿಭೂತಿಗಳಲ್ಲಿ ಅಚಲ-ಚಲ-ಎರಡು ಬಗೆಯ ವಸ್ತುಗಳೂ ಇವೆ. ಭೂಮಿಯು ಅಚಲವಾದುದು. ವಾಯುವು ಚಲವಾದುದು. ಆ ವಾಯುರೂಪದ ಭಗವಂತನನ್ನು ಇಲ್ಲಿ ಚಲ-ಎಂಬ ನಾಮದಿಂದ ಸ್ತುತಿಸಲಾಗಿದೆ.

**ಅಮಾನೀ ಮಾನದೋ ಮಾನ್ಯಃ ಲೋಕಸ್ವಾಮೀ ತ್ರಿಲೋಕಧೃಕ್ ।**
**ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥80॥**

**(747)** ಈಗ **ಅಮಾನೀ** - ಎಂಬ ನಾಮವನ್ನು ವಿಚಾರಮಾಡೋಣ. ಅನಾತ್ಮ ವಸ್ತುಗಳಾದ ದೇಹೇಂದ್ರಿಯಾದಿಗಳು, ಹೊರಗಿನ ಜಗತ್ತು , ದೇಹದ ಒಳಗೆ ಇರುವ ಇಂದ್ರಿಯಗಳು, ಮನಸ್ಸು, ಪ್ರಾಣ- ಇವುಗಳು ಒಳಗಿನ ಜಗತ್ತು - ಎನಿಸಿವೆ. ಆದರೆ ಪರಮಾತ್ಮನು ಇವೆರಡೂ ಅಲ್ಲ. ಅವನಿಗೆ ಇವುಗಳಲ್ಲಿ ನಾನು - ಎಂಬ ಅಭಿಮಾನವೂ ಇಲ್ಲ. ಆದ್ದರಿಂದ ಅಭಿಮಾನರಹಿತನಾದ ಭಗವಂತನನ್ನು ಅಮಾನೀ - ಎಂದು ಸ್ತುತಿಸಲಾಗಿದೆ. **(748)** ಈಗ **ಮಾನದಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಮಾಯಾಶಕ್ತಿಯಿಂದ ಎಲ್ಲಾ ಜೀವರುಗಳಿಗೂ ದೇಹಾದಿಗಳಲ್ಲಿ ನಾನು ಎಂಬ ಆತ್ಮಾಭಿಮಾನವನ್ನು ಉಂಟುಮಾಡುತ್ತಾನೆ. ಹಾಗೆಯೇ ಭಕ್ತರಿಗೆ ಮಾನ ಎಂದರೆ ಸತ್ಕಾರಗಳನ್ನು ಕೊಡುತ್ತಾನೆ - ಈ ವಿವರಣೆಯಂತೆ ಮಾನವನ್ನು ಕೊಡುವವನಾದ್ದರಿಂದ ಮಾನದನೆನಿಸಿರುತ್ತಾನೆ. ಅಥವಾ ಮಾನದ -ಎಂಬ ಪದದಲ್ಲಿನ ದ - ಎಂಬ ಅಕ್ಷರಕ್ಕೆ ದ್ಯತಿ - ಎಂದರೆ ಖಂಡಯತಿ- ಎಂದು ಅರ್ಥಮಾಡಿದರೆ ಬ್ರಹ್ಮಜ್ಞಾನಿಗಳ ಮಾನ - ಎಂದರೆ ಅಭಿಮಾನವೆಂಬ ದೋಷವನ್ನು ದ - ಎಂದರೆ ದ್ಯತಿ - ಖಂಡಯತಿ(ನಾಶಮಾಡುತ್ತಾನೆ)ಎಂಬ ವಿವರಣೆಯಂತೆ ಬ್ರಹ್ಮನಿಷ್ಠರಾದವರನ್ನು ಮಿಥ್ಯಾಭಿಮಾನದಿಂದ ಬಿಡುಗಡೆಮಾಡಿ ಮುಕ್ತಿಯನ್ನು ಕರುಣಿಸುತ್ತಾನೆ- ಎಂದು ಅರ್ಥಮಾಡಿದರೂ ಈ ನಾಮವು ಹೊಂದುತ್ತದೆ. **(749)** ಈಗ **ಮಾನ್ಯಃ** - ಎಂಬ ನಾಮವನ್ನು ನೋಡೋಣ. ಮಾನ, ಸನ್ಮಾನ- ಎಂಬ

ಪದಗಳು ಬಳಕೆಯಲ್ಲಿವೆ. ಸೃಷ್ಟಿಯಲ್ಲಿರುವ ಬ್ರಹ್ಮಾದಿದೇವತೆಗಳಿಂದಾರಂಭಿಸಿ ಮನುಷ್ಯರವರೆಗೂ ಇರುವ ಜೀವರುಗಳೆಲ್ಲರೂ ಭಗವಂತನನ್ನು ಗೌರವಿಸುತ್ತಾರೆ. ಶುಭ ಕಾರ್ಯಗಳ ಸಂದರ್ಭದಲ್ಲಿಯಂತೂ ಜನರು ಮೊಟ್ಟಮೊದಲು ದೇವರಿಗೆ (ಭಗವಂತನಿಗೆ) ಪೂಜೆ - ನಮಸ್ಕಾರಗಳನ್ನು ಸಲ್ಲಿಸಿಯೇ ಮುಂದುವರೆಯುತ್ತಾರೆ. ಆದ್ದರಿಂದ 'ಮಾನ್ಯ' ನೆಂದು ಸ್ತುತಿಸಲ್ಪಟ್ಟಿರುತ್ತಾನೆ.

(750) ಈಗ **ಲೋಕಸ್ವಾಮೀ** - ಎಂಬ ನಾಮವನ್ನು ನೋಡೋಣ. ಹದಿನಾಲ್ಕು ಲೋಕಗಳ ಪರ್ಯಂತವಾದ ಸಮಸ್ತ ಜೀವರುಗಳಿಗೂ ಒಡೆಯನಾದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. ಭಗವದ್ಗೀತೆಯಲ್ಲಿರುವ ಈಶ್ವರಃ ಸರ್ವಭೂತಾನಾಂ - ಹೃದ್ದೇಶೇಽರ್ಜುನ ತಿಷ್ಠತಿ - ಎಂಬ ಭಗವಂತನ ವಾಕ್ಯದಂತೆ ಹದಿನಾಲ್ಕು ಲೋಕಗಳೂ ಅವುಗಳಲ್ಲಿರುವ ಸ್ಥಾವರಜಂಗಮಾತ್ಮಕವಾದ ಜೀವರುಗಳೂ ಆ ಭಗವಂತನ ಅಧೀನದಲ್ಲಿಯೇ ಇರುತ್ತಾರೆ. ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. (751) ಈಗ **ತ್ರಿಲೋಕಧೃಕ್** - ಎಂಬ ನಾಮವನ್ನು ನೋಡೋಣ. ಸ್ವರ್ಗ - ಮರ್ತ್ಯ - ಪಾತಾಳ - ಎಂಬ ಮೂರು ಲೋಕಗಳನ್ನೂ ಧರಿಸಿರುತ್ತಾನಾದ್ದರಿಂದ ಭಗವಂತನಿಗೆ ಈ ನಾಮವು ಬಂದಿದೆ. ಇವು ಹದಿನಾಲ್ಕು ಲೋಕಗಳಲ್ಲಿಯೇ ಅಡಕವಾಗಿದ್ದರೂ ದೇವತೆಗಳು, ಮಾನವರು, ಅಸುರರು - ಎಂಬ ಜೀವರುಗಳ ವಾಸಸ್ಥಾನಗಳನ್ನು ವಿಶೇಷವಾಗಿ ಧರಿಸಿದವನಾಗಿರುವದರಿಂದ ಹೀಗೆ ಸ್ತುತಿಸಲಾಗಿದೆ. (752) ಈಗ **ಸುಮೇಧಾಃ** - ಎಂಬ ನಾಮವನ್ನು ನೋಡೋಣ. ಮೇಧಾ ಎಂದರೆ ಧಾರಣಾಶಕ್ತಿ- ಎಂದರ್ಥ. ಗ್ರಹಣಶಕ್ತಿಯೊಡನೆ ಮೇಧಾಶಕ್ತಿಯೂ ಬೇಕು. ಗುರುಗಳು ಹೇಳಿದ್ದನ್ನು ಕೇಳಿ ಸ್ವೀಕರಿಸುವದು ಗ್ರಹಣಶಕ್ತಿಯೆನಿಸುತ್ತದೆ. ಆದರೆ ಅದು ನೆನಪಿನಲ್ಲಿ ಉಳಿಯ ಬೇಕಾದರೆ ಧಾರಣಾಶಕ್ತಿಯು ಬೇಕು. ಭಗವಂತನಾದರೊ, ಈ ಗ್ರಹಣ - ಧಾರಣ ಶಕ್ತಿಗಳೆರಡನ್ನೂ ಸ್ವಭಾವದಿಂದಲೇ ಹೊಂದಿದವನಾಗಿದ್ದು ಸುಮೇಧನೆಂದು ಸ್ತುತಿಸಲ್ಪಟ್ಟಿರುತ್ತಾನೆ. (753) ಈಗ **ಮೇಧಜಃ** - ಎಂಬ ನಾಮವನ್ನು ನೋಡೋಣ. ಮೇಧ ಎಂದರೆ ಯಜ್ಞ - ಎಂದರ್ಥ. ಭಗವಂತನು ಯಜ್ಞರೂಪದಿಂದ ಆವಿರ್ಭವಿಸಿ ಭಕ್ತರಿಗೆ ದರ್ಶನವನ್ನು ಕೊಡುತ್ತಾನಾದ್ದರಿಂದ ಈ ನಾಮವು ಬಂದಿದೆ. (754) ಈಗ **ಧನ್ಯಃ** - ಎಂಬ ನಾಮವನ್ನು ನೋಡೋಣ. ಧನ್ಯನೆಂದರೆ ಕೃತಾರ್ಥನು - ಎಂದರ್ಥ. ಕರ್ಮವನ್ನು ಮಾಡಿ ಅದರ ಫಲವನ್ನು ಪಡೆದುಕೊಂಡವನು ಕೃತಾರ್ಥನು. ಉದಾಹರಣೆಗೆ ಹೆಣ್ಣುಮಗಳುಳ್ಳ ತಂದೆಯು ಸಕಾಲದಲ್ಲಿ ಆ ಕನ್ಯೆಗೆ ಯೋಗ್ಯನಾದ ವರನೊಡನೆ ವಿವಾಹಮಾಡಿ ತನ್ನ ಕರ್ತವ್ಯವನ್ನು ಪೂರೈಸಿದವನನ್ನು ಧನ್ಯನು -

ಎನ್ನುತ್ತಾರೆ. ಈ ಧನ್ಯತೆಯೂ ಭಗವಂತನ ಕೃಪೆಯಿಂದಲೇ ದೊರಕತಕ್ಕದ್ದಾಗಿದೆ. **(755)** ಈಗ **ಸತ್ಯಮೇಧಾಃ** - ಎಂಬ ನಾಮವನ್ನು ನೋಡೋಣ. ಸತ್ಯವಾದ ಎಂದರೆ ಅನೃತವಲ್ಲದ(ಹುಸಿಯಲ್ಲದ)ನಿಜವಾದ ಮೇಧೆ(ಧಾರಣಾಶಕ್ತಿ)ಯು. ಭಗವಂತನಿಗೆ ಇದೆಯಾಗಿ ಈ ಹೆಸರು(ನಾಮವು)ಬಂದಿದೆ. **(756)** ಈಗ **ಧರಾಧರಃ** - ಎಂಬ ನಾಮವನ್ನು ನೋಡೋಣ. ಧರಾ ಎಂದರೆ ಭೂಮಿಯು. ಭಗವಂತನು ಆದಿಶೇಷನ ಅವತಾರರೂಪದಿಂದ ಈ ಭೂಮಿಯನ್ನು ತನ್ನ ಮೇಲೆ ಧರಿಸಿರುವವನಾದ್ದರಿಂದ ಈ ನಾಮವು ಬಂದಿದೆ.

**ತೇಜೋವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂ ವರಃ ।**
**ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಂಗೋ ಗದಾಗ್ರಜಃ ॥81॥**

**(757)** ಈಗ **ತೋಜೋವೃಷಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ತೇಜಸ್ಸೆಂದರೆ ಜಲವು- ಎಂದು ಭಾಷ್ಯಕಾರರು ವ್ಯಾಖ್ಯಾನಮಾಡಿದ್ದಾರೆ. ಅದರಂತೆ ಜೀವರುಗಳ ಬದುಕಿಗೆ ನೀರು ಅಗತ್ಯವಾಗಿರುವದರಿಂದ ಭಗವಂತನು ಆದಿತ್ಯರೂಪ ದಿಂದ ಮಳೆಗರೆಯುವದರಿಂದ ಈ ನಾಮವು ಬಂದಿದೆ. **(758)** ಈಗ **ದ್ಯುತಿಧರಃ** - ಎಂಬ ನಾಮವನ್ನು ನೋಡೋಣ. ದ್ಯುತಿ ಎಂದರೆ ಶರೀರದಲ್ಲಿರುವ ಅಂಗಗಳ ಕಾಂತಿ. ಇದನ್ನು ಧರಿಸಿರುವವನಾದ್ದರಿಂದ ಈ ನಾಮವು ಬಂದಿದೆ. **(759)** ಈಗ **ಸರ್ವ ಶಸ್ತ್ರಭೃತಾಂ ವರಃ** - ಎಂಬ ನಾಮವನ್ನು ನೋಡೋಣ. ಶಸ್ತ್ರಗಳು ಎಂದರೆ ವೈರಿಗಳನ್ನು ನಾಶಮಾಡಲು ಉಪಯೋಗಿಸುವ ಆಯುಧಗಳು. ಭಗವಂತನು ದುಷ್ಟನಿಗ್ರಹಕ್ಕಾಗಿ ಶ್ರೇಷ್ಠವಾದ ಶಸ್ತ್ರಾಸ್ತ್ರಾಯುಧಗಳನ್ನು ಧರಿಸಿರುವವನಾದ್ದರಿಂದ ಈ ನಾಮವು ಬಂದಿದೆ. **(760)** ಈಗ **ಪ್ರಗ್ರಹಃ** - ಎಂಬ ನಾಮವನ್ನು ನೋಡೋಣ. ಭಗವಂತನು ಭಕ್ತರು ತಂದೊಪ್ಪಿಸಿದ ಎಲೆ, ಹೂವು, ಹಣ್ಣುಗಳು - ಎಲ್ಲವನ್ನೂ ಸ್ವೀಕರಿಸುತ್ತಾನೆ. ಆದರೆ ಇವುಗಳು ಭಕ್ತಿಯಿಂದ ಸಮರ್ಪಿಸಿದವುಗಳಾಗಿರಬೇಕು. ಆದ್ದರಿಂದ ಈ ನಾಮದಿಂದ ಸ್ತುತಿಸಿದೆ. ಅಥವಾ ಮಾನವನ ಜ್ಞಾನೇಂದ್ರಿಯ -ಕರ್ಮೇಂದ್ರಿಯಗಳು ಹತೋಟಿಯಿಲ್ಲದೆ ವಿಷಯಗಳ ಕಡೆಗೆ ಜೋಲುವದರಿಂದ ಅವುಗಳನ್ನು-ಹೇಗೆ ದನ-ಕರುಗಳನ್ನು ಗೋಪಾಲಕನು ಕೋಲು-ಹಗ್ಗಗಳಿಂದ ಬಂಧಿಸಿ ಸ್ವಸ್ಥಾನಕ್ಕೆ ಕರೆದೊಯ್ಯುತ್ತಾನೋ ಹಾಗೆ-ಭಗವಂತನು ಸಾಧಕನ ಇಂದ್ರಿಯಗಳನ್ನು ತನ್ನ ಕಡೆಗೆ ತಿರುಗಿಸಿ ಕಟ್ಟಿಹಾಕುತ್ತಾನೆ. ಆದ್ದರಿಂದ ಈ ನಾಮದಿಂದ ಸ್ತುತಿಸಿದೆ. **(761)** ಈಗ **ನಿಗ್ರಹಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸಾಧಕನ ಮೇಲೆ

ನಿಗವಿಟ್ಟು ಅವನ ಇಂದ್ರಿಯಗಳನ್ನು ಅಡ್ಡದಾರಿಗೆ ಹೋಗದಂತೆ ತಡೆದು ಕಟ್ಟುಪಾಡಿನಲ್ಲಿರಿಸುತ್ತಾನಾದ್ದರಿಂದ ಈ ನಾಮದಿಂದ ಸ್ತುತಿಸಿದೆ. **(762)** ಈಗ **ವ್ಯಗ್ರಃ** - ಎಂಬ ನಾಮವನ್ನು ನೋಡೋಣ. ಅಂತವು- ಎಂದರೆ ಕೊನೆಯು ವಿ=ಗತ (ಇಲ್ಲವಾಗಿದೆ) ಎಂಬರ್ಥದಲ್ಲಿ ನಾಶವಿಲ್ಲದವನು- ಎಂದು ತಿಳಿಯಬರುವದರಿಂದ ಈ ನಾಮವುಬಂದಿದೆ. ಅಥವಾ ಭಕ್ತರಿಗೆ ಬೇಕೆನಿಸುವ ವಸ್ತುಗಳನ್ನು ಕೊಡುವದರಲ್ಲಿ ನಿರತನಾಗಿರುತ್ತಾನೆ - ಎಂಬರ್ಥದಲ್ಲಿಯೂ ಈ ನಾಮವು ಬಂದಿದೆ. **(763)** ಈಗ **ನೈಕಶೃಂಗಃ** - ಎಂಬ ನಾಮವನ್ನು ನೋಡೋಣ. ನೈಕ - ಎಂದರೆ ಒಂದಲ್ಲ - ಅನೇಕ ಎಂದರ್ಥ. ಆಗ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಕೋಡುಗಳುಳ್ಳವನು - ಎಂದರ್ಥ. ದಿಕ್ಪಾಲಕರಲ್ಲಿ ಅಗ್ನಿದೇವನೂ ಒಬ್ಬನು. ಅವನು ನಾಲ್ಕುಕೋಡುಗಳುಳ್ಳವನು - ಎಂದು ವೇದದಲ್ಲಿ ವರ್ಣಿಸಿದೆ. ಈ ಅಗ್ನಿದೇವನ ರೂಪದಿಂದಿರುವವನೂ ಭಗವಂತನೇ ಆಗಿದ್ದಾನೆ. ಹೀಗೆ ನೈಕಶೃಂಗಃ -ಎಂಬ ನಾಮವು ಶ್ರೀಮನ್ ನಾರಾಯಣ ನಿಗೆ ಬಂದಿದೆ. **(764)** ಈಗ **ಗದಾಗ್ರಜಃ** - ಎಂಬ ನಾಮ ವನ್ನು ನೋಡೋಣ. ಇಲ್ಲಿ ನಿ - ಎಂಬ ಅಕ್ಷರವನ್ನು ಸೇರಿಸಿದರೆ 'ನಿಗದಾಗ್ರಜ' ನೆಂದಾಗುತ್ತದೆ. ಆಗ ನಿಗದವೆಂದರೆ ವೇದಮಂತ್ರಗಳು. ಅವುಗಳಿಗೆ ಅಗ್ರಜ - ಎಂದರೆ ಹಿರಿಯನು - ಎಂದರ್ಥ. ವೇದಗಳೆಲ್ಲವೂ ಭಗವಂತನಿಂದಲೇ ಹೊರಬಂದಿವೆ. ಅವು ಭಗವಂತನ ನಿಃಶ್ವಸಿತ(ಉಸಿರು)ಗಳು - ಎಂದು ಶಾಸ್ತ್ರಗಳು ತಿಳಿಸುವವು. ಹೀಗೆ ನಿಗದಾಗ್ರಜ - ಎಂಬ ನಾಮವು 'ನಿ' ಎಂಬ ಅಕ್ಷರಲೋಪದಿಂದ ಗದಾಗ್ರಜನೆಂದಾಗಿ ಆ ನಾಮದಿಂದ ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ.

**ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ |**
**ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ||82||**

**(765)** ಈಗ **ಚತುರ್ಮೂರ್ತಿಃ**- ಎಂಬ ನಾಮವನ್ನು ನೋಡೋಣ. ವಿರಾಡಾತ್ಮಾ -ಸೂತ್ರಾತ್ಮಾ-ಅವ್ಯಾಕೃತಾತ್ಮಾ-ತುರೀಯಾತ್ಮಾ-ಎಂಬ ನಾಲ್ಕು ಸ್ಥೂಲ-ಸೂಕ್ಷ್ಮಶರೀರಗಳು ಭಗವಂತನಿಗೆ ಉಪಾಧಿಗಳಾಗಿರುವದರಿಂದ ಚತುರ್ಮೂರ್ತಿಯೆನಿಸಿರುತ್ತಾನೆ. ಅಥವಾ ಬಿಳಿಯದು, ಕೆಂಪನೆಯದು, ಹಳದಿಯದು, ಕಪ್ಪಾದುದು - ಹೀಗೆ ನಾಲ್ಕು ಮೂರ್ತಿ (ಆಕಾರಗಳು) ಭಗವಂತನಿಗೆ ಸಂದರ್ಭಾನುಗುಣವಾಗಿ ಇರುವದರಿಂದಲೂ ಈ ನಾಮವು ಬಂದಿರುತ್ತದೆ. **(766)** ಈಗ **ಚತುರ್ಬಾಹುಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ನಾಲ್ಕು ತೋಳುಗಳಿವೆ. ಅವುಗಳಲ್ಲಿ ಕ್ರಮವಾಗಿ ಶಂಖ,

ಚಕ್ರ, ಗದೆ, ಪದ್ಮ - ಎಂಬ ನಾಲ್ಕು ವಸ್ತುಗಳನ್ನು ಧರಿಸಿರುತ್ತಾನೆ. (767) ಈಗ **ಚತುರ್ವ್ಯೂಹಃ** - ಎಂಬ ನಾಮವನ್ನು ನೋಡೋಣ. ವ್ಯೂಹ ಎಂದರೆ ಆಕಾರಗಳು. ಭಗವಂತನು ಲೋಕಾನುಗ್ರಹಕ್ಕಾಗಿ ಬೇರೆಬೇರೆಯ ಆಕಾರಗಳಿಂದ ತೋರಿಕೊಳ್ಳುತ್ತಾನೆ. ಇವುಗಳಲ್ಲಿ ಶರೀರ(ಮನುಷ್ಯರೂಪದ) ಪುರುಷ, ಛಂದಸ್ಸುಗಳ ರೂಪದ ಪುರುಷ, ಎಂದರೆ ಗಾಯತ್ರೀ ಛಂದಸ್ಸು, ತ್ರಿಷ್ಟುಪ್ ಛಂದಸ್ಸು - ಇತ್ಯಾದಿ, ಹಾಗೂ ನಾಲ್ಕು ವೇದಗಳ ರೂಪದಲ್ಲಿರುವ ಪುರುಷ, ಮಹಾಪುರುಷ - ಹೀಗೆ ನಾಲ್ಕು ವಿಧವಾದ ಆಕಾರಗಳಿಂದ ವಿರಾಜಮಾನನಾಗಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ. (768) ಈಗ **ಚತುರ್ಗತಿಃ** - ಎಂಬ ನಾಮವನ್ನು ನೋಡೋಣ. ವರ್ಣಾಶ್ರಮಧರ್ಮಗಳ ಚೌಕಟ್ಟಿನಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ- ಎಂಬ ವರ್ಣಗಳೂ ಆಶ್ರಮಗಳಲ್ಲಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ- ಎಂಬ ನಾಲ್ಕು ಆಶ್ರಮಗಳೂ ಪ್ರಸಿದ್ಧವಾಗಿವೆ. ಭಗವಂತನು ಈ ಎಲ್ಲಾ ವರ್ಣ-ಆಶ್ರಮಗಳ ಗುಂಪಿನವರಿಗೂ ಪೂಜ್ಯನಾಗಿದ್ದು ಭಕ್ತರಿಗೆ ಮುಕ್ತಿಯನ್ನು ದಯಪಾಲಿಸುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. (769) ಈಗ **ಚತುರಾತ್ಮಾ** - ಎಂಬ ನಾಮವನ್ನು ನೋಡೋಣ. ಇದರ ಮೊದಲನೆಯ ಅರ್ಥವು ಹೀಗಿದೆ : - ಚತುರನಾದ - ಎಂದರೆ ಜಾಣನಾದ ಮತ್ತು ರಾಗದ್ವೇಷಾದಿರಹಿತನಾದ ಆತ್ಮ - ಎಂದರೆ ಮನಸ್ಸುಳ್ಳವನು- ಎಂದರ್ಥ. ಎರಡನೆಯ ಅರ್ಥದಲ್ಲಿ ಅದೇ ಮನಸ್ಸನ್ನು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ- ಎಂಬ ನಾಲ್ಕು ರೀತಿಯಿಂದ ಬಲ್ಲವರು ವಿಂಗಡಿಸಿರುತ್ತಾರೆ. ಈ ನಾಲ್ಕೂ ಆತ್ಮನೇ ಆಗಿವೆ - ಎಂಬರ್ಥದಲ್ಲಿ ಈ ನಾಮವು ಬಂದಿದೆ. (770) ಈಗ **ಚತುರ್ಭಾವಃ** - ಎಂಬ ನಾಮವನ್ನು ನೋಡೋಣ. ಮಾನವನಿಗೆ ಶಾಸ್ತ್ರವಿಹಿತವಾದ ಧರ್ಮ, ಅರ್ಥ, ಕಾಮ, ಮೋಕ್ಷ- ಎಂಬ ನಾಲ್ಕು ಪುರುಷಾರ್ಥಗಳಿವೆ. ಇವು ಭಗವಂತನಿಂದಲೇ ಹೊರ ಬಂದವುಗಳಾಗಿದ್ದು ಈ ಕಾರಣದಿಂದ ಚತುರ್ಭಾವಃ - ಎಂಬ ನಾಮವು ಬಂದಿದೆ. (771) ಈಗ **ಚತುರ್ವೇದವಿತ್** - ಎಂಬ ನಾಮವನ್ನು ನೋಡೋಣ. ವೇದಸಾಹಿತ್ಯ ದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ- ಎಂಬ ನಾಲ್ಕು ವಿಭಾಗಗಳಿವೆ. ಇವುಗಳನ್ನು ಪರಿಪೂರ್ಣವಾಗಿ ಅರ್ಥಸಹಿತವಾಗಿ ಬಲ್ಲವನಾಗಿರುವ ವನು ಭಗವಂತನೇ ಸರಿ. ಆದ್ದರಿಂದ ಈ ನಾಮವು ಬಂದಿದೆ. (772) ಈಗ **ಏಕಪಾತ್** - ಎಂಬ ನಾಮವನ್ನು ನೋಡೋಣ. ಹದಿನಾಲ್ಕು ಲೋಕಗಳೆಲ್ಲವೂ ಸೇರಿ ಭಗವಂತನ ಒಂದು ಪಾದವಾಗಿದೆ - ಎಂದರೆ ಜಗತ್ತೆಲ್ಲವೂ ಆ ಮಹಾ ಮಹಿಮನ ಒಂದು ಪಾದವು - ಎಂದರೆ ನಾಲ್ಕನೆಯ ಒಂದಂಶವು. ಆದ್ದರಿಂದ ಈ ನಾಮವು ಬಂದಿದೆ.

**ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।**
**ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರ್ವಾರಿಹಾ ॥83॥**

**(773)** ಈಗ **ಸಮಾವರ್ತಃ** - ಎಂಬ ನಾಮವನ್ನು ನೋಡೋಣ. ಸಂಸಾರವೆಂಬ ಚಕ್ರವನ್ನು ತಿರುಗಿಸುವವನು ಎಂಬರ್ಥದಲ್ಲಿ ಈ ನಾಮವು ಬಂದಿದೆ. ಭಗವಂತನು ಈ ಜಗತ್ತನ್ನು ಕಾಲಾನುಗುಣವಾಗಿ ತಿರುಗಿಸುತ್ತಾನೆ. ಇದರ ಹುಟ್ಟು, ಬೆಳವಣಿಗೆ, ಕಣ್ಮರೆ - ಇವುಗಳನ್ನು ಚಕ್ರದಂತೆ ಭಗವಂತನು ಪರಿವರ್ತಿಸುತ್ತಾನಾಗಿ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(774)** ಈಗ **ಅನಿವೃತ್ತಾತ್ಮಾ** - ಎಂಬ ನಾಮವನ್ನು ನೋಡೋಣ. ಭಗವಂತನು ಯಾವಾಗಲೂ ನಿತ್ಯನಾಗಿ ಇದ್ದುಕೊಂಡೇ ಇರುವದರಿಂದ ಅವನಿಗೆ ನಿವೃತ್ತಿ ಎಂದರೆ ಬಿಡುಗಡೆ ಇಲ್ಲವಾದ್ದರಿಂದ ಈ ನಾಮವು ಬಂದಿದೆ. ಹೇಗೆ ವಾಯು(ಗಾಳಿ)ಗೆ ವಿಶ್ರಾಂತಿಯಿಲ್ಲವೋ ಹಾಗೆ ಭಗವಂತನಿಗೆ ನಿವೃತ್ತಿಯಿಲ್ಲ. ಅವನು ಸದಾಕಾಲವೂ ಇದ್ದುಕೊಂಡು ನಿತ್ಯವರ್ತಮಾನಸ್ವರೂಪನಾಗಿರುತ್ತಾನಾಗಿ ಈ ನಾಮವು ಬಂದಿದೆ. ಅಥವಾ ನಿವೃತ್ತಾತ್ಮಾ - ಎಂದು ಪದಚ್ಛೇದಮಾಡಿದರೆ ವಿಷಯ ಭೋಗಗಳ ಸಂಪರ್ಕದಿಂದ ಎಂದೆಂದಿಗೂ ಬಿಡಲ್ಪಟ್ಟವನು, ಅಸಂಗನು- ಎಂದರ್ಥವಾಗುತ್ತದೆ. ಇದು ಕೂಡ ಭಗವಂತನ ಸ್ತುತಿಯೇ ಆಗಿದೆ. **(775)** ಈಗ **ದುರ್ಜಯಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಯಾರೂ ಯಾವ ರೀತಿಯಿಂದಲೂ ಯಾವ ಸ್ಥಿತಿಯಲ್ಲಿಯೂ ಸೋಲಿಸಲಾರರು. ಅವನಿಗೆ ಪರಾಜಯವೆಂಬುದೇ ಇಲ್ಲ. ಹೀಗೆ ಯಾರಿಂದಲೂ ಜಯಿಸಲಸಾಧ್ಯನಾದ್ದರಿಂದ ದುರ್ಜಯನೆನಿಸಿದ್ದಾನೆ. **(776)** ಈಗ **ದುರತಿಕ್ರಮಃ** - ಎಂಬ ನಾಮವನ್ನು ನೋಡೋಣ. ಭಗವಂತನ ಆಜ್ಞೆಯನ್ನು ಯಾರೊಬ್ಬರೂ ಮೀರಲಾರರು. ಅಗ್ನಿ, ಸೂರ್ಯ, ಇಂದ್ರ, ವಾಯು, ಯಮ - ಮುಂತಾದ ಎಲ್ಲಾ ದೇವತೆಗಳೂ ಭಗವಂತನಿಗೆ ಹೆದರಿಕೊಂಡು ತಮ್ಮತಮ್ಮ ಕರ್ತವ್ಯಗಳನ್ನು ಚೆನ್ನಾಗಿ ನೆರವೇರಿಸುತ್ತಾರೆ. ಇದಕ್ಕೆ ಭಗವಂತನ ಕಟ್ಟಾಜ್ಞೆಯೇ ಕಾರಣವು. ಆದ್ದರಿಂದ ಈ ನಾಮವು ಬಂದಿದೆ. **(777)** ಈಗ **ದುರ್ಲಭಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸಮಸ್ತ ಜೀವಿಗಳ ಆತ್ಮನೇ ಆಗಿದ್ದು ಸರ್ವವ್ಯಾಪಕನಾಗಿದ್ದರೂ ಜನರು ಅಜ್ಞಾನದಿಂದ ಕೂಡಿರುವದರಿಂದ ಅವನನ್ನು ಗುರುತಿಸಲಾರರು. ಆದ್ದರಿಂದ ದುರ್ಲಭನೆನಿಸಿದ್ದಾನೆ. ಆದರೆ ಸಾಧಕನಾದವನು ತನ್ನ ಹಿಂದಿನ ಜನ್ಮಗಳ ಪುಣ್ಯದಿಂದ ತಪಸ್ಸು, ತತ್ತ್ವವಿಚಾರಾದಿ ಸಾಧನಗಳಿಂದ ಹಾಗೂ ಅನನ್ಯಭಕ್ತಿಯಿಂದ ಭಗವಂತನು ಕಂಡುಕೊಂಡು ಕೃತಾರ್ಥರಾಗುತ್ತಾರೆ. ಹೀಗೆ

ಅಜ್ಞಾನಿಗಳಿಗೆ ದುರ್ಲಭನಾಗಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. (778) ಈಗ **ದುರ್ಗಮಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸರ್ವ ವ್ಯಾಪಕನೂ ಸರ್ವರ ಆತ್ಮನೂ ಆಗಿದ್ದರೂ ದುರ್ಗಮನೆಂದರೆ ಹೇಗೆ? ಎಂದರೆ ಅಜ್ಞಾನಿಗಳಿಗೆ ಮಾತ್ರ ದುರ್ಗಮನಾಗಿದ್ದಾನೆ ಎಂದಭಿಪ್ರಾಯ. ಒಂದು ವಸ್ತು ಪ್ರದರ್ಶನಶಾಲೆಗೆ ಒಬ್ಬನು ತನ್ನ ತಂದೆಯನ್ನು ಕರೆತಂದು ಬಾಗಿಲಿನಲ್ಲಿಯೇ ಅವನ ಕಣ್ಣುಗಳಿಗೆ ಬಟ್ಟೆಯನ್ನು ಬಿಗಿದು ಅನಂತರ ಆ ಪ್ರದರ್ಶನ ಶಾಲೆಗೆ ಕೈ ಹಿಡಿದು ಕೊಂಡು ಹೋಗಿ ತಿರುಗಾಡಿಸಿ ಹೊರಕ್ಕೆ ಬಂದ ಅನಂತರ ಕಣ್ಣಿನ ಬಟ್ಟೆಯನ್ನು ಬಿಚ್ಚಿ-ಎಲ್ಲವನ್ನೂ ನೋಡಿದಿರಾ? ಎಂದು ಕೇಳಿದನಂತೆ. ಆಗ ಅವನು ಏನನ್ನೂ ನಾನು ನೋಡಲಾಗಲಿಲ್ಲ- ಎಂದನಂತೆ. ಹಾಗಾದರೆ ಅವನನ್ನು ವಸ್ತು ಪ್ರದರ್ಶನಶಾಲೆ ಯೊಳಕ್ಕೆ ಕರೆತಂದಿರಲ್ಲವೆ? ಅಲ್ಲಿ ಬೆಳಕಿರಲಿಲ್ಲವೆ? ಅವನಿಗೆ ಕಣ್ಣಿರಲಿಲ್ಲವೆ? ಎಂದರೆ ಎಲ್ಲವೂ ಇದ್ದಿತು. ಆದರೆ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಮಾತ್ರ ಬಿಚ್ಚಬೇಕಾಗಿತ್ತು. ಹಾಗೆಯೇ ಜೀವಾತ್ಮನ ಒಳಗಿನ ಅಂತರಾತ್ಮನೇ ಭಗವಂತನು. ಅವನನ್ನು ಗುರುತಿಸಲು ಅವಿದ್ಯೆ ಎಂಬ ಅಂತಃಕರಣಕ್ಕೆ ಮುಸುಕಾಗಿರುವ ಆವರಣವನ್ನು ತೆಗೆಯಬೇಕು. ಇಷ್ಟರಮಟ್ಟಿಗೆ ಭಗವಂತನು ದುರ್ಗಮನಾಗಿದ್ದಾನೆ. (779) ಈಗ **ದುರ್ಗಃ** - ಎಂಬ ನಾಮವನ್ನು ನೋಡೋಣ. ಭಗವಂತನು ಬಹಿರ್ಮುಖ ರಾದವರಿಗೆ ತಿಳಿಯಲು ಕಷ್ಟಸಾಧ್ಯನಾಗಿರುತ್ತಾನೆ. ಏಕೆಂದರೆ ನಾವು ಇಂದ್ರಿಯಗಳ ಮೂಲಕ ಹೊರಗಡೆ ಯಲ್ಲಿಯೇ ಭಗವಂತನನ್ನು ಹುಡುಕುತ್ತೇವೆ. ಆದ್ದರಿಂದ ಅವನುದುರ್ಗನೆನಿಸಿರುತ್ತಾನೆ. ಇದು ನಮ್ಮ ತಪ್ಪೇ ಹೊರತು ಭಗವಂತನದಲ್ಲ. ಹೀಗೆ ದುರ್ಗನೆನಿಸಿದ್ದಾನೆ. (780) ಈಗ **ದುರಾವಾಸಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಕಂಡು ಕೊಳ್ಳಲು ಸಾಧಕನು ಎಂದರೆ ಯೋಗಿಗಳು ತಮ್ಮ ಮನಸ್ಸಿನಲ್ಲಿಯೇ ಚಿಂತಿಸುತ್ತಾರೆ. ಆದರೆ ಮನಸ್ಸು ವಿಕ್ಷೇಪವನ್ನು ಹೊಂದಿದರೆ ಭಗವಂತನು ಮರೆಯಾಗುತ್ತಾನೆ. ಇದನ್ನು ಗುರುತಿಸಿ ಸಾಧಕರು ಯೋಗಾಭ್ಯಾಸದಿಂದ ಚಿತ್ತವನ್ನು ಸ್ಥಿರಗೊಳಿಸಿ ಅವನಲ್ಲಿಯೇ ನೆಲೆನಿಲ್ಲುತ್ತಾರೆ. ಹೀಗೆ ಅವರು ಚಿತ್ತಸ್ಥೈರ್ಯದಿಂದ ಸಮಾಧಿಸ್ಥಿತಿಯಲ್ಲಿ ಭಗವಂತನನ್ನು ತಮ್ಮ ಅಂತರಂಗದಲ್ಲಿಯೇ ಕಂಡುಕೊಳ್ಳುತ್ತಾರೆ. ಈ ಏಕಾಗ್ರತೆಗೆ ಸಮಾಧಿ - ಎಂದು ಹೆಸರು. ಹೀಗೆ ಭಗವಂತನಿಗೆ ದುರಾವಾಸಃ - ಎಂಬ ನಾಮವು ಬಂದಿದೆ. (781) ಈಗ **ದುರಾರಿಹಾ** - ಎಂಬ ನಾಮವನ್ನು ನೋಡೋಣ. ಅರಿ - ಎಂದರೆ ಶತ್ರು - ಎಂದರ್ಥ. ಭಗವಂತನಿಗೆ ದಾನವಾದಿಶತ್ರುಗಳು ವಿರೋಧಿ ಗಳಾದ್ದರಿಂದ ಅವರನ್ನು ಸಂಹರಿಸುತ್ತಾನಾದ್ದರಿಂದ ಈ ನಾಮವು ಬಂದಿದೆ.

**ಶುಭಾಂಗೋ ಲೋಕಸಾರಂಗಃ ಸುತಂತುಸ್ತಂತುವರ್ಧನಃ ।**
**ಇಂದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥84॥**

**(782)** ಈಗ **ಶುಭಾಂಗಃ** - ಎಂಬ ನಾಮವನ್ನು ನೋಡೋಣ. ಶುಭ ಎಂದರೆ ಮಂಗಳಕರವಾದ ಶರೀರಾಂಗಗಳುಳ್ಳವನು - ಎಂದು ಅರ್ಥ. ದೇವರಿಗೆ ಪೂಜೆ ಮಾಡುವಾಗ ಮತ್ತು ವ್ರತಾನುಷ್ಠಾನಗಳನ್ನು ಮಾಡುವಾಗ ಅಂಗಪೂಜೆ ಎಂಬ ಉಪಚಾರವಿರುತ್ತದೆ. ಅದರಲ್ಲಿ ಭಗವಂತನ ಪಾದಗಳಿಂದ ಆರಂಭಿಸಿ ಶಿರಸ್ಸಿನವರೆಗೂ ಒಂದೊಂದು ನಾಮಗಳಿಂದ ಪೂಜಿಸಲಾಗುತ್ತದೆ. ಆದ್ದರಿಂದ ಭಗವಂತನ ದಿವ್ಯ ಶರೀರದ ಎಲ್ಲಾ ಅಂಗಗಳೂ ಪೂಜ್ಯವಾಗಿರುತ್ತವೆ. ಈ ಕಾರಣದಿಂದ ಶುಭಾಂಗನೆಂಬ ನಾಮವು ಬಂದಿದೆ. **(783)** ಈಗ **ಲೋಕಸಾರಂಗಃ** - ಎಂಬ ನಾಮವನ್ನು ನೋಡೋಣ. ಸಾರಂಗ ಎಂದರೆ ಇಲ್ಲಿ ದುಂಬಿ(ಭ್ರಮರ)ಎಂದರ್ಥ. ದುಂಬಿಯು ಹೂವುಗಳ ಮೇಲೆ ಕುಳಿತು ರಸವನ್ನು ಸ್ವೀಕರಿಸುವಂತೆ ಭಗವಂತನು ಲೋಕ ಗಳಲ್ಲಿರುವ ಜೀವರುಗಳ ಸಾರವನ್ನು ಸ್ವೀಕರಿಸುತ್ತಾನೆ - ಎಂದರೆ ಆಯಾ ಪ್ರಾಣಿಗಳ ಸಾರವನ್ನು ತೆಗೆದುಕೊಳ್ಳುತ್ತಾನೆ. ಉದಾಹರಣೆಗೆ ಗೋವು ಹುಲ್ಲಿನ ಸಾರವನ್ನೂ ಗೋವು ಕೊಡುವ ಹಾಲನ್ನು ಮನುಷ್ಯನೂ ಸ್ವೀಕರಿಸುವಂತೆ -ಎಂದು ತಿಳಿಯಬೇಕು. ಇನ್ನೊಂದು ಅರ್ಥದಲ್ಲಿ ವೇದಗಳ ಸಾರವು ಓಂಕಾರವು. ಅದರಿಂದ ತಿಳಿಯಲ್ಪಡುವವನು - ಎಂಬರ್ಥದಲ್ಲಿಯೂ ಈ ನಾಮವು ಬಂದಿದೆ. **(784)** ಈಗ **ಸುತಂತುಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ತಂತು ಎಂದರೆ ಬಲೆಯಂತೆ ಹರಡಿಕೊಂಡಿರುವ ಪ್ರಪಂಚವು. ಇದೆಲ್ಲವೂ ಭಗವಂತನ ವಿಭೂತಿಯೇ ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(785)ತಂತುವರ್ಧನಃ** - ಅದೇ ಪ್ರಪಂಚವನ್ನೇ ಬೆಳೆಯಿಸುತ್ತಾನಾದ್ದರಿಂದ ಅಥವಾ ಪ್ರಲಯಕಾಲಕ್ಕೆ ನಾಶಗೊಳಿಸುತ್ತಾನಾದ್ದರಿಂದಲೂ ತಂತುವರ್ಧನನೆನಿಸಿರುತ್ತಾನೆ. **(786)** ಈಗ **ಇಂದ್ರಕರ್ಮಾ** - ಎಂಬ ನಾಮವನ್ನು ನೋಡೋಣ. ಇಂದ್ರನಂತೆ ಕರ್ಮವುಳ್ಳವನು - ಎಂದರೆ ಜ್ಞಾನ-ಬಲ-ಶಕ್ತಿ-ವೀರ್ಯಾದಿಗುಣಗಳಿಂದ ಕೂಡಿದ ಕರ್ಮವು ಲೋಕಕಲ್ಯಾಣವನ್ನು ಉಂಟುಮಾಡುವದು. ಆಗ ಜನರು ಭಗವಂತನಲ್ಲಿ ಭಕ್ತಿಯನ್ನು ಬೆಳೆಯಿಸಿಕೊಂಡು ಕೃತಾರ್ಥರಾಗುವರು. ಈ ಅರ್ಥದಲ್ಲಿ ಶ್ರೀಮಹಾವಿಷ್ಣುವನ್ನು ಈ ನಾಮದಿಂದ ಸ್ತುತಿಸಲಾಗಿದೆ. **(787)** ಈಗ **ಮಹಾಕರ್ಮಾ** - ಎಂಬ ನಾಮವನ್ನು ನೋಡೋಣ. ಆಕಾಶವೇ ಮುಂತಾದ ಪಂಚಮಹಾ ಭೂತಗಳನ್ನು ಸೃಷ್ಟಿಸಿದವನಾದ್ದರಿಂದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(788)** ಈಗ **ಕೃತಕರ್ಮಾ** - ಎಂಬ ನಾಮವನ್ನು ನೋಡೋಣ.

ಭಗವಂತನು ಜಗತ್ತಿನ ಸೃಷ್ಟಿ-ಸ್ಥಿತಿ-ಕಾಲಕ್ಕೆ ಮಾಡಬೇಕಾದ ಕಾರ್ಯಗಳೆಲ್ಲವನ್ನು ಮಾಡಿ ಪ್ರಾಣಿಗಳ ಸೃಷ್ಟಿ ಹಾಗೂ ಅವುಗಳ ಸ್ಥಿತಿ - ಎಂದರೆ ಜೀವನಾದಿಗಳಿಗೂ ವ್ಯವಸ್ಥೆ ಮಾಡಿದ್ದಾನಾಗಿ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(789)** ಈಗ **ಕೃತಾಗಮಃ** - ಎಂಬ ನಾಮವನ್ನು ನೋಡೋಣ. ಆಗಮ ಎಂದರೆ ವೇದಗಳು. ಪ್ರಲಯಕಾಲಕ್ಕೆ ವೇದಗಳೆಲ್ಲವೂ ಕಣ್ಮರೆಯಾಗಿದ್ದು ಸೃಷ್ಟಿಕಾಲಕ್ಕೆ ಅವುಗಳನ್ನು ಹೊರತಂದು ಲೋಕಗಳನ್ನು ಉದ್ಧಾರಮಾಡಿದನಾದ್ದರಿಂದ ಈ ನಾಮವು ಬಂದಿದೆ.

**ಉದ್ಭವಃ ಸುಂದರಃ ಸುಂದೋ ರತ್ನನಾಭಃ ಸುಲೋಚನಃ ।**
**ಅರ್ಕೋ ವಾಜಸನಃ ಶೃಂಗೀ ಜಯಂತಃ ಸರ್ವವಿಜ್ಜಯೀ ॥85॥**

**(790)** ಈಗ **ಉದ್ಭವಃ** - ಎಂಬ ನಾಮವನ್ನು ನೋಡೋಣ. ಉತ್ಕೃಷ್ಟವಾದ - ಎಂದರೆ ಅತ್ಯುತ್ತಮವಾದ ಜನ್ಮ ಎಂದರೆ ಹುಟ್ಟುವಿಕೆಯನ್ನು ತನ್ನ ಇಚ್ಛಾನುಗುಣವಾಗಿ ಸ್ವೀಕರಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. ಅಥವಾ ಉತ್ ಎಂದರೆ ಇಲ್ಲದ್ದು-ಜನ್ಮವು(ಹುಟ್ಟುವಿಕೆಯು)ಇಲ್ಲವಾದ್ದರಿಂದ, ಹಾಗೂ ಆ ಭಗವಂತನೇ ಎಲ್ಲಕ್ಕೂ ಕಾರಣನಾಗಿರುವದರಿಂದಲೂ ಈ ನಾಮವು ಬಂದಿದೆ- ಎಂದೂ ವ್ಯಾಖ್ಯಾನಮಾಡಬಹುದು. **(791)** ಈಗ **ಸುಂದರಃ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲೆಲ್ಲ ಮಿಗಿಲಾದ ಸೌಂದರ್ಯವನ್ನು ಹೊಂದಿದವನಾಗಿರುತ್ತಾನಾಗಿ ಈ ನಾಮವು ಬಂದಿರುತ್ತದೆ. **(792)** ಈಗ **ಸುಂದಃ** - ಎಂಬ ನಾಮವನ್ನು ನೋಡೋಣ. ವಿಶೇಷವಾಗಿ ಕರುಣೆಯುಳ್ಳವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. ರಾಮಾಯಣದಲ್ಲಿ ವಿಭೀಷಣನ ಶರಣಾಗತಿಯ ಕಾಲಕ್ಕೆ ಶ್ರೀರಾಮನು ಹೀಗೆಂದಿರುತ್ತಾನೆ. 'ಎಲೈ ಕಪಿಶ್ರೇಷ್ಠನಾದ ಮಾರುತಿಯೆ, ಕೇಳು. ಯಾವನೇ ಆಗಲಿ- ದೇವ, ನಾನು ನಿನ್ನವನು, ನಿನಗೆ ಶರಣುಬಂದಿದ್ದೇನೆ; ನಿನ್ನವನಾಗಿದ್ದೇನೆ ಎಂದು ತಲೆಬಾಗಿದರೆ ಅವನಿಗೆ ಅಭಯವನ್ನು ನೀಡುತ್ತೇನೆ'. ಈ ಅಭಿಪ್ರಾಯದಂತೆ ಸು = ಚೆನ್ನಾಗಿ (ಪೂರ್ಣವಾಗಿ) ಉನತ್ತಿ-ಕರಗಿದ್ದಾನೆ(ಕರುಣೆಯಿಂದ ತಂಪಾಗಿದ್ದಾನೆ) ಎಂಬ ಅರ್ಥದಂತೆ ಭಗವಂತನು ಈ ಸುಂದಃ - ಎಂಬ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(793)**ಈಗ **ರತ್ನನಾಭಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ರತ್ನ ಎಂದರೆ ಶೋಭಾಯಮಾನವಾದದ್ದು, ಸುಲಕ್ಷಣವಾದದ್ದು - ಎಂದು ಅರ್ಥ. ಇಂಥ ಸುಂದರವಾದ ನಾಭಿ (ಹೊಕ್ಕುಳು) ಯುಳ್ಳವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. **(794)** ಈಗ **ಸುಲೋಚನಃ** - ಎಂಬ ನಾಮವನ್ನು ನೋಡೋಣ. ಮಂಗಳಕರವಾದ ಹಾಗೂ ಉತ್ಕೃಷ್ಟವಾದ

ಕಣ್ಣುಗಳುಳ್ಳವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. (795) ಈಗ **ಅರ್ಕಃ** - ಎಂಬ ನಾಮವನ್ನು ನೋಡೋಣ. ಬ್ರಹ್ಮಾದಿದೇವತೆಗಳಿಂದಲೂ ಪೂಜನೀಯನಾಗಿ ಇರುವದರಿಂದ ಅರ್ಚನೀಯತ್ವಾತ್ ಅರ್ಕಃ - ಎಂಬ ವಿವರಣೆಯಂತೆ ಈ ನಾಮವು ಬಂದಿದೆ. (796) ಈಗ **ವಾಜಸನಃ** - ಎಂಬ ನಾಮವನ್ನು ನೋಡೋಣ. ವಾಜ - ಎಂದರೆ ಅನ್ನ ಎಂದರ್ಥ. ಬೇಡಿದವರಿಗೆ ಅನ್ನವನ್ನು ದಯಪಾಲಿಸುವವನು - ಎಂಬ ಅರ್ಥದಲ್ಲಿ ಈ ನಾಮವು ಬಂದಿದೆ. (797) ಈಗ **ಶೃಂಗೀ** - ಎಂಬ ನಾಮವನ್ನು ನೋಡೋಣ. ಪ್ರಲಯಕಾಲದಲ್ಲಿ ನೀರಿನಲ್ಲಿ ಮೀನಿನ ರೂಪವನ್ನು ತಾಳಿ ವೇದಗಳನ್ನು ತನ್ನ ಕೋರೆದಾಡೆಗಳಿಂದ ಮೇಲೆತ್ತಿ ಉದ್ಧಾರಮಾಡಿದ್ದರಿಂದ ಈ ನಾಮವು ಬಂದಿದೆ. (798) ಈಗ **ಜಯನ್ತಃ** - ಎಂಬ ನಾಮವನ್ನು ನೋಡೋಣ. ಶತ್ರುಗಳನ್ನು ವಿಶೇಷವಾಗಿ ಗೆಲ್ಲುತ್ತಾನಾದ್ದರಿಂದ ಹಾಗೂ ಜಯಕ್ಕೆ ಕಾರಣನಾಗಿ ಇರುವದರಿಂದ ಈ ನಾಮವು ಬಂದಿದೆ. (799) ಈಗ **ಸರ್ವ ವಿಜ್ಜಯೀ** - ಎಂಬ ನಾಮವನ್ನು ನೋಡೋಣ. ಎಲ್ಲವನ್ನೂ ಪರಿಪೂರ್ಣವಾಗಿ ಬಲ್ಲವನು ಮತ್ತು ಜಯಿಸಲು ಅಸಾಧ್ಯರಾದ ದಾನವರೇ ಮುಂತಾದವರನ್ನು ಗೆದ್ದವನೂ ಆದವನಾದ್ದರಿಂದ ಈ ನಾಮವು ಬಂದಿದೆ.

**ಸುವರ್ಣಬಿಂದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।**
**ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥86॥**

(800) ಈಗ **ಸುರ್ವಣಬಿಂದುಃ** - ಎಂಬ ನಾಮವನ್ನು ನೋಡೋಣ. ಇಲ್ಲಿ ಬಿಂದು - ಎಂದರೆ ಅವಯವಗಳು - ಎಂದರ್ಥ. ಭಗವಂತನ ಶರೀರಾವಯವಗಳು ಎಲ್ಲವೂ ಚಿನ್ನದಂತೆ ಕಾಂತಿಯುಳ್ಳವಾಗಿದ್ದು ಅಸಾಧಾರಣವಾಗಿವೆ. ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ.

ಇಲ್ಲಿಗೆ ಎಂಟನೆಯ ಶತಕವು ಮುಗಿಯಿತು.

Z Z Z

# ನವಮಶತಕ

**(801)** ಈಗ **ಅಕ್ಷೋಭ್ಯಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ರಾಗದ್ವೇಷಗಳಿಂದಾಗಲಿ, ಶಬ್ದಾದಿವಿಷಯಗಳಿಂದಾಗಲಿ, ದೇವತೆಗಳಿಂದಾಗಲಿ ಅಲುಗಾಡಿಸಲು ಸಾಧ್ಯವಿಲ್ಲ. ಆದ್ದರಿಂದ ಈ ನಾಮವು ಬಂದಿದೆ. **(802)** ಈಗ **ಸರ್ವ ವಾಗೀಶ್ವರೇಶ್ವರಃ** - ಎಂಬ ನಾಮವನ್ನು ನೋಡೋಣ. ವಾಗೀಶ್ವರನೆಂದರೆ ಸೃಷ್ಟಿಕರ್ತ ನಾದ ಬ್ರಹ್ಮನು. ಇಂಥ ಬ್ರಹ್ಮರುಗಳು ಕಲ್ಪಕಲ್ಪಗಳಲ್ಲಿಯೂ ಅವತರಿಸುತ್ತಾರೆ. ಎಲ್ಲಾ ಈ ಬ್ರಹ್ಮರುಗಳಿಗೂ ಮಿಗಿಲಾದ, ಹಾಗೂ ಅವರಿಗೆಲ್ಲ ಒಡೆಯನಾದ ಶ್ರೀಮಹಾವಿಷ್ಣುವು ಸರ್ವವಾಗೀಶ್ವರೇಶ್ವರನು. ಆದ್ದರಿಂದ ಈ ನಾಮದಿಂದ ಸ್ತುತಿಸಿದೆ. **(803)** ಈಗ **ಮಹಾಹ್ರದಃ** - ಎಂಬ ನಾಮವನ್ನು ನೋಡೋಣ. ಹ್ರದ- ಎಂದರೆ ನೀರಿನ ಕೊಳ - ಎಂದರ್ಥ. ಭಗವಂತನು ಜ್ಞಾನ-ವೈರಾಗ್ಯಗಳ ಕೊಳವಾಗಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(804)** ಈಗ **ಮಹಾಗರ್ತಃ** - ಎಂಬ ನಾಮವನ್ನು ನೋಡೋಣ. ಗರ್ತ ಎಂದರೆ ಆಳವಾದ ಗುಂಡಿ ಅಥವಾ ಬಾವಿ - ಎಂದರ್ಥ. ಭಗವಂತನ ಮಾಯೆಯು ದುರತ್ಯಯವಾದ ಬಾವಿಯಾಗಿದೆ. ಆದರೆ ಭಗವಂತನನ್ನೇ ಆಶ್ರಯಿಸಿದವರು ಮಾತ್ರ ಈ ಮಾಯೆಯನ್ನು ದಾಟುವರು. ಇನ್ನೊಂದು ಅರ್ಥದಲ್ಲಿ ಗರ್ತ ಎಂದರೆ - ರಥ - ಎಂಬ ಶಬ್ದಕ್ಕೆ ಪರ್ಯಾಯ ಶಬ್ದವೆಂದು ನಿರುಕ್ತಕಾರರು ಹೇಳುತ್ತಾರೆ. ಅದರಂತೆ ಮಹಾಗರ್ತನೆಂದರೆ ಮಹಾರಥನು - ಎಂದು ಅರ್ಥ ವಾಗುತ್ತದೆ. ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ಸಾರಥಿಯಾಗಿ ಭಗವಂತನು ಅವನಿಗೆ ವಿಜಯವನ್ನುಂಟುಮಾಡಿದ್ದಲ್ಲದೆ ಯುದ್ಧಕಾಲಕ್ಕೆ ಶತ್ರುಗಳ ಶಸ್ತ್ರಾಸ್ತ್ರಗಳಿಂದ ಅರ್ಜುನನಿಗೆ ಒದಗಿದ್ದ ಕಂಟಕಗಳನ್ನು ಪರಿಹರಿಸಿ ಕಾಪಾಡಿರುತ್ತಾನೆ. ಆದ್ದರಿಂದ ಭಗವಂತನನ್ನು ಮಹಾಗರ್ತನೆಂಬ ನಾಮದಿಂದ ಸ್ತುತಿಸಿರುವದು ಯುಕ್ತವಾಗಿದೆ. **(805)** ಈಗ **ಮಹಾಭೂತಃ** - ಎಂಬ ನಾಮವನ್ನು ನೋಡೋಣ. ಭಗವಂತನು ಎಂದೆಂದಿಗೂ ಎಲ್ಲೆಲ್ಲಿಯೂ ಇರತಕ್ಕವನು. ಅವನಿಗೆ ಭೂತ-ಭವಿಷ್ಯತ್- ವರ್ತಮಾನಗಳೆಂಬ ಕಾಲದ ಚೌಕಟ್ಟು ಇರುವದಿಲ್ಲ. ಆದ್ದರಿಂದ ಈ ನಾಮವು ಬಂದಿದೆ. **(806)** ಈಗ **ಮಹಾನಿಧಿಃ** - ಎಂಬ ನಾಮವನ್ನು ನೋಡೋಣ. ನಿಧಿ - ಎಂದರೆ ಜೀವರು ಗಳಿಗೆಲ್ಲ ಆಶ್ರಯನಾಗಿದ್ದು ಜಗತ್ತನ್ನೆಲ್ಲ ತನ್ನೊಳಗೇ ಅಡಕಮಾಡಿಕೊಂಡಿರುವ ಭಗವಂತನು - ಎಂದರ್ಥ. ಬ್ರಹ್ಮಾಂಡವನ್ನೆಲ್ಲ ಹೀಗೆ ತನ್ನೊಳಗೇ ಧರಿಸಿರುವ ಭಗವಂತನು ಮಹಾನಿಧಿಯೇ ಆಗಿದ್ದಾನೆ - ಎಂದು ಈ ನಾಮದಿಂದ ಸ್ತುತಿಸಿದೆ.

**ಕುಮುದಃ ಕುಂದರಃ ಕುಂದಃ ಪರ್ಜನ್ಯಃ ಪಾವನೋಽನಿಲಃ ।**
**ಅಮೃತಾಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ ॥87॥**

**(807)** ಈಗ **ಕುಮುದಃ** - ಎಂಬ ನಾಮವನ್ನು ನೋಡೋಣ. ಕು - ಎಂದರೆ ಭೂಮಿ - ಎಂದರ್ಥ. ಈ ಭೂಮಿಯ ಭಾರವನ್ನು ಇಳಿಸಿ ಸಂತೋಷಗೊಳಿಸುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(808)** ಈಗ **ಕುಂದರಃ** - ಎಂಬ ನಾಮವನ್ನು ನೋಡೋಣ. ಕುಂದಪುಷ್ಪದಂತೆ ಶುದ್ಧವಾಗಿರುವ ಫಲಗಳನ್ನು ಭಕ್ತರಿಗೆ ಕೊಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(809)** ಈಗ **ಕುಂದಃ** - ಎಂಬ ನಾಮವನ್ನು ನೋಡೋಣ. ಕುಂದಪುಷ್ಪದಂತೆ ಸುಂದರವಾದ ಶರೀರಾವಯವ ಗಳಿರುವದರಿಂದ ನಿರ್ಮಲವಾಗಿ ವಿರಾಜಿಸುತ್ತಾನಾಗಿ ಈ ನಾಮವು ಬಂದಿದೆ. **(810)** ಈಗ **ಪರ್ಜನ್ಯಃ** - ಎಂಬ ನಾಮವನ್ನು ನೋಡೋಣ. ಪರ್ಜನ್ಯ ಎಂದರೆ ಮಳೆ- ಎಂದರ್ಥ. ಮಳೆ ಬೀಳುವದರಿಂದ ಭೂಮಿಯಲ್ಲಿ ಪೈರುಗಳು ಬೆಳೆದು ಸುಭಿಕ್ಷ ವಾತಾವರಣವುಂಟಾಗುತ್ತದೆ. ಇದು ಭಗವಂತನ ಕೊಡುಗೆಯಾಗಿದೆ. ಆದ್ದರಿಂದ ಪರ್ಜನ್ಯನೆಂದು ಸ್ತುತಿಸಲ್ಪಟ್ಟಿರುತ್ತಾನೆ. ಅಥವಾ ಮಳೆಯು ಸುರಿಯುವಂತೆ ಭಕ್ತರಿಗೆ ಅವರ ಬಯಕೆಗಳನ್ನು ಈಡೇರಿಸಿ ತಾಪತ್ರಯಗಳನ್ನು ಪರಿಹರಿಸಿ ಪೋಷಿಸುತ್ತಾನಾಗಿ ಈ ನಾಮವು ಬಂದಿದೆ. **(811)** ಈಗ **ಪಾವನಃ**- ಎಂಬ ನಾಮವನ್ನು ನೋಡೋಣ. ಭಗವಂತನನ್ನು ನೆನೆದಮಾತ್ರದಿಂದ ಸಾಧಕನನ್ನು ಪವಿತ್ರಗೊಳಿಸುತ್ತಾನಾಗಿ ಈ ನಾಮವು ಬಂದಿದೆ. **(812)** ಈಗ **ಅನಿಲಃ** - ಎಂಬ ನಾಮವನ್ನು ನೋಡೋಣ. ಇಲ - ಎಂದರೆ ಅನವಶ್ಯಕವಾಗಿ ನಿದ್ರೆಮಾಡುವ ದಡ್ಡನು -ಎಂದರ್ಥ. ಭಗವಂತನು ನಿದ್ರಾರಹಿತನು. ಯಾವಾಗಲೂ ಎಚ್ಚರವಾಗಿಯೇ ಇರುವವನು ಎಂದರ್ಥ. ಆದ್ದರಿಂದ ಈ ನಾಮವು ಬಂದಿದೆ. **(813)** ಈಗ **ಅಮೃತಾಶಃ** - ಎಂಬ ನಾಮವನ್ನು ನೋಡೋಣ. ಅಮೃತ - ಎಂದರೆ ನಾಶವಾಗದಿರುವ ಫಲವುಳ್ಳವ ನಾದ್ದರಿಂದ ಈ ನಾಮವು ಬಂದಿದೆ. **(814)** ಈಗ **ಅಮೃತವಪುಃ** - ಎಂಬ ನಾಮವನ್ನು ನೋಡೋಣ. ಅಮೃತ ವನ್ನು ದೇವರುಗಳಿಗೆ ಕುಡಿಸಿ ತಾನೂ ಕುಡಿದವನಾದ್ದರಿಂದ ಈ ನಾಮವು ಬಂದಿದೆ. ಅಥವಾ ಅಮೃತವಾದ (ಶುಭವಾದ) ಆಸೆಯು ಈತನದು - ಎಂಬರ್ಥದಲ್ಲಿಯೂ ಈ ನಾಮವು ಬಂದಿದೆ. **(815)** ಈಗ **ಸರ್ವಜ್ಞಃ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಎಲ್ಲವನ್ನೂ ಬಲ್ಲವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. **(816)** ಈಗ **ಸರ್ವತೋಮುಖಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ದಿಕ್ಕುಗಳಿಗೂ ಮುಖವುಳ್ಳವನು - ಎಂದರೆ ಎಲ್ಲವನ್ನೂ ನೋಡಬಲ್ಲವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ.

**ಸುಲಭಃ ಸುವ್ರತಃ ಸಿದ್ಧಃ ಶತ್ರುಜಿತ್ ಶತ್ರುತಾಪನಃ ।**
**ನ್ಯಗ್ರೋಧೋದುಂಬರೋಽಶ್ವತ್ಥಃ ಚಾಣೂರಾಂಧ್ರನಿಷೂದನಃ ॥88॥**

**(817)** ಈಗ **ಸುಲಭಃ** - ಎಂಬ ನಾಮವನ್ನು ನೋಡೋಣ. ಭಗವಂತನು ಭಕ್ತರು ಸಮರ್ಪಿಸುವ ಪತ್ರ - ಪುಷ್ಪ - ಫಲ - ತೋಯ (ನೀರು) ಇವುಗಳಲ್ಲಿ ಯಾವದೊಂದನ್ನಾದರೂ ಭಕ್ತಿಯಿಂದ ಸಮರ್ಪಿಸಿದರೂ ಸ್ವೀಕರಿಸಿ ತೃಪ್ತನಾಗಿ ಅನುಗ್ರಹಿಸುತ್ತಾನೆ. ಆದ್ದರಿಂದ ಸುಲಭನೆಂದು ಸ್ತುತಿಸಿದೆ. **(818)** ಈಗ **ಸುವ್ರತಃ** - ಎಂಬ ನಾಮವನ್ನು ನೋಡೋಣ. ಸು = ಎಂದರೆ ಒಳ್ಳೆಯದು ಎಂದರ್ಥ. ಭಗವಂತನು ಒಳ್ಳೆಯ ಕರ್ಮ(ಕ್ರಿಯೆ)ಗಳನ್ನೇ ನಿಯತವಾಗಿ ಮಾಡಿಕೊಂಡಿರುತ್ತಾನೆ. ಅವನ ಕಾರ್ಯಗಳು ಲೋಕಕಲ್ಯಾಣಕ್ಕೆ ಆಧಾರವಾಗಿರುತ್ತವೆಯಾದ್ದರಿಂದ ಈ ನಾಮವು ಬಂದಿದೆ. **(819)** ಈಗ **ಸಿದ್ಧಃ** - ಎಂಬ ನಾಮವನ್ನು ನೋಡೋಣ. ಮತ್ತೊಬ್ಬರಿಗೆ ಅಧೀನನಲ್ಲದೆ ತಾನೇ ಜಗದ್ರಕ್ಷಣಕಾರ್ಯವನ್ನು ನಿರ್ವಹಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(820)** ಈಗ **ಶತ್ರುಜಿತ್** - ಎಂಬ ನಾಮವನ್ನು ನೋಡೋಣ. ದೇವತೆಗಳಿಗೆ ಶತ್ರುಗಳಾದ ಅಸುರರನ್ನು ಸೋಲಿಸುತ್ತಾನಾಗಿ ಈ ನಾಮವು ಬಂದಿದೆ. **(821)** ಈಗ **ಶತ್ರುತಾಪನಃ** - ಎಂಬ ನಾಮವನ್ನು ನೋಡೋಣ. ದೇವತೆಗಳಿಗೆ ಶತ್ರುಗಳಾದ ಅಸುರರನ್ನು ಸೋಲಿಸಿ ದುಃಖಕ್ಕೆ ಗುರಿಯಾಗಿ ಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(822)** ಈಗ **ನ್ಯಗ್ರೋಧಃ** - ಎಂಬ ನಾಮವನ್ನು ನೋಡೋಣ. ಎಲ್ಲಕ್ಕಿಂತಲೂ ಮೇಲಾಗಿ ಬೆಳೆದಿರುತ್ತಾನೆ, ಎಲ್ಲರಿಗಿಂತಲೂ ಮೇಲಿರುತ್ತಾನೆ - ಎಂಬರ್ಥದಲ್ಲಿ ಈ ನಾಮವು ಬಂದಿದೆ. ಅಥವಾ ಎಲ್ಲಾ ಪ್ರಾಣಿಗಳನ್ನೂ ಈಚೆಗೆ ಇಳಿಸಿ (ಸೃಷ್ಟಿಸಿ) ಮಾಯೆಯನ್ನು ಹರಡಿ ಅದನ್ನೂ ವ್ಯಾಪಿಸಿಕೊಂಡಿರುತ್ತಾನೆ - ಎಂಬರ್ಥದಲ್ಲಿಯೂ ಈ ನಾಮವು ಬಂದಿದೆ. **(823)** ಈಗ **ಉದುಮ್ಬರಃ** -ಎಂಬ ನಾಮವನ್ನು ನೋಡೋಣ. ಅಂಬರ ಎಂದರೆ ಆಕಾಶವು. ಅದಕ್ಕಿಂತಲೂ ಉತ್ - ಎಂದರೆ ಮೇಲಿರುತ್ತಾನಾಗಿ ಈ ನಾಮವು ಬಂದಿದೆ. ಆಕಾಶವನ್ನೂ ವ್ಯಾಪಿಸಿರುತ್ತಾನೆ - ಎಂಬರ್ಥದಲ್ಲಿಯೂ ಈ ನಾಮವು ಬಂದಿದೆಯೆಂದೂ ವ್ಯಾಖ್ಯಾನಮಾಡಬಹುದು. **(824)** ಈಗ **ಅಶ್ವತ್ಥಃ** - ಎಂಬ ನಾಮವನ್ನು ನೋಡೋಣ. ಶ್ವಃ - ಎಂದರೆ ನಾಳೆಗೂ ಅ - ಎಂದರೆ ಇರುವದಿಲ್ಲ- ಎಂಬರ್ಥದಲ್ಲಿ ಈ ನಾಮವು ಬಂದಿದೆ. ಆದರೆ ಭಗವಂತನ ಸ್ವರೂಪದಲ್ಲಿ ಕಾಲದೇಶಗಳಿರುವದಿಲ್ಲ. ಆದ್ದರಿಂದ ಕಾಲಾತೀತನಾದ ಭಗವಂತನನ್ನು ನಾಳೆ - ಎಂಬ ಕಾಲಪರಿಚ್ಛೇದವಿಲ್ಲದವನು - ಎಂಬರ್ಥದಲ್ಲಿಯೂ ಹೇಳಬಹುದಾಗಿದೆ. **(825)** ಈಗ **ಚಾಣೂರಾಂಧ್ರನಿಷೂದನಃ** - ಎಂಬ ನಾಮವನ್ನು ನೋಡೋಣ. ಭಗವಂತನು

ಕೃಷ್ಣಾವತಾರಕಾಲಕ್ಕೆ ಚಾಣೂರ - ಎಂಬ ಹೆಸರಿನ ರಾಕ್ಷಸನನ್ನು ಸಂಹಾರ ಮಾಡಿದನು. ಅವನು ಆಂಧ್ರದೇಶದವನಾಗಿದ್ದನು. ಆದ್ದರಿಂದ ಆಂಧ್ರದೇಶದವನಾದ ಚಾಣೂರನೆಂಬ ಅಸುರರನ್ನು ಸಂಹಾರಮಾಡಿದನು - ಎಂಬರ್ಥದಲ್ಲಿ ಈ ನಾಮವು ಬಂದಿದೆ.

**ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।**
**ಅಮೂರ್ತಿರನಘೋಽಚಿಂತ್ಯೋ ಭಯಕೃದ್ಭಯನಾಶನಃ ॥89॥**

**(826)** ಈಗ **ಸಹಸ್ರಾರ್ಚಿಃ** - ಎಂಬ ನಾಮವನ್ನು ನೋಡೋಣ. ಸಾವಿರಾರು ಕಿರಣಗಳುಳ್ಳವನಾಗಿ ಸೂರ್ಯನಿಗೂ ಆಧಾರನಾಗಿ ಜಗತ್ತಿನಲ್ಲಿ ಗೋಚರಿಸುವವನಾದ್ದರಿಂದ ಈ ನಾಮವು ಬಂದಿದೆ. ಭಗವಂತನು ಅರ್ಜುನನಿಗೆ ತನ್ನ ವಿಶ್ವರೂಪವನ್ನು ಪ್ರಕಟಿಸಿದಾಗ ಈ ರೂಪವು ಅಪರಿಮಿತತೇಜಸ್ಸುಳ್ಳವನಾದ್ದರಿಂದ ಈ ನಾಮವು ಬಂದಿದೆ. **(827)** ಈಗ **ಸಪ್ತಜಿಹ್ವಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ವಿಭೂತಿಗಳಲ್ಲಿ ಏಳು ನಾಲಗೆಗಳುಳ್ಳ ವಿರಾಟ್‌ಪುರುಷನ ಸ್ವರೂಪನಾಗಿರುವದರಿಂದ ಈ ನಾಮದಿಂದ ಸ್ತುತಿಸಿದೆ. ಕಾಲೀ, ಕರಾಲೀ, ಮನೋಜವಾ, ಸುಲೋಹಿತಾ, ಸುಧೂಮ್ರವರ್ಣಾ, ಸ್ಫುಲಿಂಗಿನೀ, ವಿಶ್ವರುಚೀ - ಹೀಗೆ ವಿರಾಟ್‌ಪುರುಷನ ಏಳು ನಾಲಗೆಗಳು ಮುಂಡಕೋಪನಿಷತ್ತಿನಲ್ಲಿ ವರ್ಣಿತವಾಗಿವೆ. ಆದ್ದರಿಂದ ಈ ನಾಮವು ಬಂದಿರುತ್ತದೆ. **(828)** ಈಗ **ಸಪ್ತೈಧಾಃ** - ಎಂಬ ನಾಮವನ್ನು ನೋಡೋಣ. ಇದು ಕೂಡ ಭಗವಂತನ ನಾಲಗೆಗಳನ್ನು ಸೂಚಿಸುತ್ತದೆ. ಅಗ್ನಿಸ್ವರೂಪನಾದ ಭಗವಂತನ ಈ ನಾಲಗೆಗಳು ಯಜ್ಞದಲ್ಲಿ ಶ್ರೋತ್ರಿಯರು ಸಮರ್ಪಿಸಿದ ಹವಿಸ್ಸನ್ನು ಸ್ವೀಕರಿಸುತ್ತವೆಯಾದ್ದರಿಂದ ಈ ನಾಮದಿಂದ ಸ್ತುತಿಸಿದೆ. **(829)** ಈಗ **ಸಪ್ತವಾಹನಃ** - ಎಂಬ ನಾಮವನ್ನು ನೋಡೋಣ. ಸಪ್ತ- ಎಂಬ ಹೆಸರಿನ ಕುದುರೆಯು ಈತನ ವಾಹನವಾಗಿರುತ್ತದೆ. ವೇದದಲ್ಲಿ "ಏಕೋ ಅಶ್ವೋ ವಹತಿ ಸಪ್ತನಾಮಾ" (ಸಪ್ತ ಎಂಬ ಹೆಸರಿನ ಕುದುರೆಯು ಇವನನ್ನು ಹೊರುತ್ತದೆ)- ಎಂಬರ್ಥದಲ್ಲಿ ಈ ನಾಮವು ಬಂದಿದೆ. **(830)** ಈಗ **ಅಮೂರ್ತಿಃ** - ಎಂಬ ನಾಮವನ್ನು ನೋಡೋಣ. ಮೂರ್ತಿ - ಎಂದರೆ ಗಟ್ಟಿಯಾದ ಹಾಗೂ ಸ್ಥೂಲವಾದ ರೂಪವು. ಇದು ಆ ಭಗವಂತನಲ್ಲಿಲ್ಲ. ಏಕೆಂದರೆ ಅವನು ಸ್ಥೂಲಶರೀರವಿಲ್ಲದವನು. ಆಕಾಶದಂತೆ ನಿರಂಜನನು. ಆದ್ದರಿಂದ ಅಮೂರ್ತಿಯೆಂದೇ ಸ್ತುತಿಸಲ್ಪಟ್ಟಿರುತ್ತಾನೆ. **(831)** ಈಗ **ಅನಘಃ** - ಎಂಬ ನಾಮವನ್ನು ನೋಡೋಣ. ಅಘ - ಎಂದರೆ ಪಾಪ, ದುಃಖ - ಎಂದರ್ಥ. ಭಗವಂತನು ಅಪಹತಪಾಪ್ಮನು - ಎಂದು ಶ್ರುತಿಯು ತಿಳಿಸುತ್ತದೆ. ಆದ್ದರಿಂದ ಪಾಪಸಂಪರ್ಕವಿಲ್ಲದವನು - ಎಂಬರ್ಥದಲ್ಲಿ ಅನಘ - ಎಂಬ ನಾಮವು ಬಂದಿದೆ. **(832)** ಈಗ **ಅಚಿಂತ್ಯಃ** - ಎಂಬ ನಾಮವನ್ನು ನೋಡೋಣ. ಪ್ರಮಾತೃ - ಮುಂತಾದ ರೀತಿಯಿಂದ ಭಗವಂತನನ್ನು ಅರಿಯಲು ಪ್ರಯತ್ನಮಾಡಿದರೆ ಅವನು ಸಿಗಲಾರನು.

ಹೀಗೆ ಜಗತ್ತಿನ ವ್ಯವಹಾರದಲ್ಲಿ ಅವನು ಚಿಂತನೆಗೆ ದಕ್ಕಲಾರದವನಾಗಿರುವದರಿಂದ ಈ ನಾಮವು ಬಂದಿದೆ. **(833)** ಈಗ **ಭಯಕೃತ್** - ಎಂಬ ನಾಮವನ್ನು ನೋಡೋಣ. ದುರಾಚಾರಿಗಳಿಗೂ ಪಾಪಿಗಳಿಗೂ ಭಯವನ್ನು ಉಂಟುಮಾಡುತ್ತಾನೆ; ಹಾಗೂ ಭಕ್ತ ಜನರ ಭಯಗಳನ್ನು ಕತ್ತರಿಸುತ್ತಾನೆ - ಎಂಬರ್ಥದಲ್ಲಿಯೂ ಈ ನಾಮವು ಬಂದಿದೆ. **(834)** ಈಗ **ಭಯನಾಶನಃ** - ಎಂಬ ನಾಮವನ್ನು ನೋಡೋಣ. ವರ್ಣಾಶ್ರಮಾಚಾರಸಂಪನ್ನರೂ ಸಜ್ಜನರೂ ಭಕ್ತರೂ ಆದವರ ಭಯವನ್ನು ನಾಶಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ.

**ಅಣುರ್ಬೃಹತ್ಕೃಶಃ ಸ್ಥೂಲೋಃ ಗುಣಭೃನ್ನಿರ್ಗುಣೋ ಮಹಾನ್ ।**
**ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥90॥**

**(835)** ಈಗ **ಅಣುಃ** - ಎಂಬ ನಾಮವನ್ನು ನೋಡೋಣ. ಅಣು- ಎಂದರೆ ಅಲ್ಪನು - ಎಂದರ್ಥ. ಭಗವಂತನು - ನಾಮರೂಪರಹಿತನಾದ್ದರಿಂದ ಅಣುವೇ ಆಗಿದ್ದಾನೆ. ಆದ್ದರಿಂದ ಅವನು ಇಂದ್ರಿಯಾದಿಗಳಿಗೆ ಗೋಚರನಲ್ಲ. ಆದರೂ ಶೂನ್ಯನಲ್ಲ. ಅವನನ್ನು ಪರಿಶುದ್ಧವಾದ ಮನಸ್ಸಿನಿಂದಲೇ ಸೂಕ್ಷ್ಮವಾಗಿ ಅರಿಯಬೇಕು. ಆದ್ದರಿಂದ ಈ ನಾಮವು ಬಂದಿದೆ. **(836)** ಈಗ **ಬೃಹತ್** - ಎಂಬ ನಾಮವನ್ನು ನೋಡೋಣ. ಭಗವಂತನು ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳು, ಜೀವರುಗಳಿಗಿಂತಲೂ ದೊಡ್ಡವನು. ಏಕೆಂದರೆ ಇಡಿಯ ವಿಶ್ವ(ಪ್ರಪಂಚ)ವೆಲ್ಲವೂ ಅವನಲ್ಲಿಯೇ ಅಡಕವಾಗಿದೆ. ಆದ್ದರಿಂದ ಬೃಹತ್ ಎನಿಸಿರುತ್ತಾನೆ. **(837)** ಈಗ **ಕೃಶಃ** - ಎಂಬ ನಾಮವನ್ನು ನೋಡೋಣ. ಶ್ರುತಿಯಲ್ಲಿ ಭಗವಂತನನ್ನು ಅಸ್ಥೂಲಃ - ಎಂದು ಕರೆಯಲಾಗಿದೆ. ಭಗವಂತನು ಯಾವ ದ್ರವ್ಯಗುಣಾದಿಗಳ ಸಂಪರ್ಕವೂ ಇಲ್ಲದವನಾಗಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(838)** ಈಗ **ಸ್ಥೂಲಃ** - ಎಂಬ ನಾಮವನ್ನು ನೋಡೋಣ. ಭಗವಂತನು ಸರ್ವಾತ್ಮಕನಾಗಿರುವದರಿಂದ ಉಪಚಾರಕ್ಕಾಗಿ ಈ ನಾಮದಿಂದ ಸ್ತುತಿಸಲಾಗಿದೆ. **(839)** ಈಗ **ಗುಣಭೃತ್** - ಎಂಬ ನಾಮವನ್ನು ನೋಡೋಣ. ತ್ರಿಗುಣಗಳನ್ನೂ ಜಗತ್ತಿನ ವ್ಯಾಪಾರಕ್ಕಾಗಿ ಸಂದರ್ಭಾನುಗುಣವಾಗಿ ತಾತ್ಕಾಲಿಕವಾಗಿ ಸ್ವೀಕರಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(840)** ಈಗ **ನಿರ್ಗುಣಃ** - ಎಂಬ ನಾಮವನ್ನು ನೋಡೋಣ. ಭಗವಂತನ ಅವತಾರಲೀಲೆಗಳಲ್ಲಿ ಗುಣಗಳಿರುತ್ತವೆ. ಆದರೆ ಅವನ ಸ್ವಸ್ವರೂಪದಲ್ಲಿ ಯಾವ ಗುಣಗಳೂ ಇರುವದಿಲ್ಲವಾಗಿ ಗುಣಾತೀತನೆನಿಸಿರುತ್ತಾನೆ. ಅಸಂಗನಾಗಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(841)** ಈಗ **ಮಹಾನ್** - ಎಂಬ ನಾಮವನ್ನು ನೋಡೋಣ. ಭಗವಂತನು ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳಿಗಿಂತಲೂ ಬ್ರಹ್ಮಾದಿಗಳಿಗಿಂತಲೂ ಮಿಗಿಲಾದವನು. ಅವನಿಗೆ ಸರಿಸಮಾನರೇ ಇಲ್ಲ. ಇನ್ನು ಮಿಗಿಲಾದವರು ಯಾರಿದ್ದಾರು? - ಎಂದು ಗೀತೆಯಲ್ಲಿದೆ.

ಶಬ್ದಾದಿಗುಣರಹಿತನೂ ಅಶರೀರನೂ ಸ್ಪರ್ಶಾದಿಗುಣಾತೀತನೂ ಆಗಿದ್ದು ನಿತ್ಯಶುದ್ಧ ಬುದ್ಧಮುಕ್ತಸ್ವಭಾವನೂ ಆಗಿದ್ದು 'ಮಹಾನ್' ಎನಿಸಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(842)** ಈಗ **ಅಧೃತಃ** - ಎಂಬ ನಾಮವನ್ನು ನೋಡೋಣ. ಭೂಮಿಯು ಸ್ಥಾವರಜಂಗಮಜೀವಿಗಳನ್ನು ಧರಿಸಿದೆ. ಆ ಭೂಮ್ಯಾದಿಪಂಚಭೂತ ಗಳನ್ನೂ ಭಗವಂತನು ಧರಿಸಿದ್ದಾನೆ. ಆದರೆ ಅವನನ್ನು ಧರಿಸಿರುವವರು ಯಾರೂ ಇಲ್ಲ. ಆದ್ದರಿಂದ ಅಧೃತನೆನಿಸಿದ್ದಾನೆ. ಹಾಗಾದರೆ ಅವನು ಯಾವ ಆಧಾರದಲ್ಲಿದ್ದನೆ? ಎಂದರೆ ಅವನು ತನ್ನ ಮಹಿಮೆಯಲ್ಲಿಯೇ ತಾನಿದ್ದಾನೆ. ಇಷ್ಟೇ ಹೊರತು ಬೇರೊಂದು ಆಧಾರವೇನೂ ಇಲ್ಲ. ಉದಾಹರಣೆಗೆ ಸೂರ್ಯನು ಜಗತ್ತನ್ನೆಲ್ಲ ಬೆಳಗುತ್ತಾತಾನೇ ಸ್ವರೂಪದಿಂದ ತೇಜಸ್ವಿಯಾಗಿರುವಂತೆ ಭಗವಂತನು ತನ್ನ ಮಹಿಮೆ ಯಲ್ಲಿಯೇ ತಾನಿದ್ದಾನೆ. ಹೀಗೆ ಈ ನಾಮವು ಬಂದಿದೆ. **(843)** ಈಗ **ಸ್ವಧೃತಃ** - ಎಂಬ ನಾಮವನ್ನು ನೋಡೋಣ. ಭಗವಂತನು ತಾನೇ ತನ್ನಲ್ಲಿಯೇ ತನ್ನನ್ನು ಧರಿಸಿದ್ದಾನಾಗಿ ಈ ನಾಮವು ಬಂದಿದೆ. **(844)** ಈಗ **ಸ್ವಾಸ್ಯಃ** - ಎಂಬ ನಾಮವನ್ನು ನೋಡೋಣ. ಆಸ್ಯ ಎಂದರೆ ಮುಖವು. ಭಗವಂತನ ಮುಖವು ಶೋಭನವೂ ಶುಭ್ರವೂ ಆಗಿದ್ದು ತಾವರೆಹೂವಿನಂತೆ ಬಣ್ಣವುಳ್ಳದ್ದಾಗಿ ಪರಮಸುಂದರನಾಗಿರುವ ದರಿಂದ ಈ ನಾಮವು ಬಂದಿದೆ. **(845)** ಈಗ **ಪ್ರಾಗ್ವಂಶಃ** - ಎಂಬ ನಾಮವನ್ನು ನೋಡೋಣ. ವಂಶ ಎಂದರೆ ಸಂತಾನಪರಂಪರೆ - ಎಂದರ್ಥ. ಭಗವಂತನ ವಂಶವು ಯಾವದು ?- ಎಂದರೆ ಅವನಿಗೆ ವಂಶವಿಲ್ಲ. ಅವನೊಬ್ಬನೇ ಎಲ್ಲವೂ ಆಗಿದ್ದಾನೆ. ಮತ್ತು ಅವನಿಗೆ ಜನ್ಮಾದಿಷಡ್ಭಾವವಿಕಾರಗಳಿಲ್ಲದ್ದರಿಂದ ವಂಶಪರಂಪರೆಯ ಚೌಕಟ್ಟನ್ನು ಮೀರಿದವನಾಗಿದ್ದು ವಂಶಕ್ಕಿಂತಲೂ ಮೊದಲೇ ಇದ್ದವನಾದ್ದರಿಂದ ಪ್ರಾಗ್ವಂಶನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(846)** ಈಗ **ವಂಶವರ್ಧನಃ**- ಎಂಬ ನಾಮವನ್ನು ನೋಡೋಣ. ವಂಶ - ಎಂದರೆ ಪ್ರಪಂಚವನ್ನು ವರ್ಧನ ಎಂದರೆ ವೃದ್ಧಿಗೊಳಿಸುವಾತನು - ಎಂದರ್ಥ. ಇದು ಭಗವಂತನ ಅಧೀನದಲ್ಲಿದೆ. ಹಾಗೆಯೇ ವರ್ಧನ ಎಂಬ ಮಾತಿಗೆ ನಾಶ ಗೊಳಿಸುವವನು - ಎಂದೂ ಅರ್ಥವಿದೆ. ಆಗ ಜಗತ್ತನ್ನು ಪ್ರಲಯಗೊಳಿಸುವವನು ಎಂದರ್ಥ. ಹೀಗೆ ಎರಡು ಅರ್ಥಗಳಲ್ಲಿಯೂ ಭಗವಂತನೇ ಸ್ತುತ್ಯನಾಗಿರುತ್ತಾನೆ. ವೃದ್ಧಿ, ಪ್ರಲಯ - ಎರಡೂ ಜಗತ್ತಿನ ವ್ಯಾಪಾರಕ್ಕೆ ಅಗತ್ಯವೇ ಆಗಿದೆ. ಮನುಷ್ಯನಿಗೆ ಹಸಿವಿಗೆ ಆಹಾರವು ಬೇಕು. ಆದರೆ ಅದು ಜೀರ್ಣವಾಗಿ ಮತ್ತೆ ಹಸಿವಾಗಬೇಕು. ಹೀಗೆಯೇ ಭಗವಂತನೂ ಸೃಷ್ಟಿ, ಸ್ಥಿತಿ, ಪ್ರಲಯಗಳನ್ನು ನಿರ್ವಹಿಸುತ್ತಾನಾಗಿ ವಂಶವರ್ಧನ ನೆನಿಸಿರುತ್ತಾನೆ.

**ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।**
**ಆಶ್ರಮಃ ಶ್ರಮಣಃ, ಕ್ಷಾಮಃ ಸುಪರ್ಣೋ ವಾಯುವಾಹನಃ ॥91॥**

**(847) ಭಾರಭೃತ್** - ಸಹಸ್ರಫಣಗಳಿಂದ ಕೂಡಿದ ಅನಂತನಾಗನು ಈ ಭೂಮಿಯನ್ನು ತನ್ನ ಮೇಲೆ ಧರಿಸಿರುತ್ತಾನೆಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಈ ಶಕ್ತಿಸಾಮರ್ಥ್ಯಗಳು ಅವನಿಗೆ ಭಗವಂತನಿಂದಲೇ ಬಂದಿವೆಯಾಗಿ, ಹಾಗೂ ಅನಂತನನ್ನೇ ತನ್ನ ಅಪರಿಮಿತ ಶಕ್ತಿಯಿಂದ ಧರಿಸಿದ್ದಾನಾದ್ದರಿಂದ ಈ ನಾಮವು ಬಂದಿದೆ. **(848)** ಈಗ **ಕಥಿತಃ** - ಎಂಬ ನಾಮವನ್ನು ನೋಡೋಣ. ವೇದೇತಿಹಾಸಪುರಾಣಗಳಲ್ಲಿ ಭಗವಂತನನ್ನೇ ಮುಖ್ಯವಾಗಿ ಹಾಗೂ ವಿಶೇಷವಾಗಿ ಪ್ರಸ್ತಾಪಿಸಿರುವದರಿಂದ ಈ ನಾಮವು ಬಂದಿದೆ. ಮತ್ತು ಸಕಲವೇದಶಾಸ್ತ್ರಗಳಲ್ಲಿಯೂ ಪ್ರಧಾನವಾಗಿ ಭಗವತ್ತತ್ತ್ವವೇ ಪ್ರತಿಪಾದಿಸಲ್ಪಟ್ಟಿರುತ್ತದೆಯಾಗಿ ಈ ನಾಮವು ಬಂದಿದೆ. **(849)** ಈಗ **ಯೋಗೀ** - ಎಂಬ ನಾಮವನ್ನು ನೋಡೋಣ. ಇಲ್ಲಿ ಯೋಗ ವೆಂದರೆ - ಜ್ಞಾನ - ಎಂದರ್ಥ. ಜ್ಞಾನದಿಂದಲೇ ಭಗವಂತನನ್ನು ತಿಳಿದು ಸಾಧಕರು ಕೃತಾರ್ಥರಾಗಬೇಕಾಗಿರುವದರಿಂದ ಈ ನಾಮವು ಬಂದಿದೆ. **(850)** ಈಗ **ಯೋಗೀಶಃ** - ಎಂಬ ನಾಮವನ್ನು ನೋಡೋಣ. ಭಗವಂತನು ಯೋಗದಲ್ಲಿಯೇ ನೆಲೆನಿಂತವ ನಾಗಿದ್ದಾನೆ. ಉಳಿದ ಯೋಗಿಗಳು ಜಾರಿಬೀಳುವದೂ ಉಂಟು. ಆದರೆ ಭಗವಂತನು ನಿತ್ಯ-ಶಾಶ್ವತ-ಸ್ಥಿರಯೋಗಿಯಾದ್ದರಿಂದ ಯೋಗೀಶನೆನಿಸಿರುತ್ತಾನೆ. **(851)** ಈಗ **ಸರ್ವಕಾಮದಃ** - ಎಂಬ ನಾಮವನ್ನು ನೋಡೋಣ. ಭಕ್ತರ ಎಲ್ಲಾ ವಿಧವಾದ ಬಯಕೆಗಳನ್ನೂ ದಯಪಾಲಿಸಿ ಅನುಗ್ರಹಿಸುತ್ತಾನಾದ್ದರಿಂದ ಈ ನಾಮವು ಬಂದಿರುತ್ತದೆ. **(852)** ಈಗ **ಆಶ್ರಮಃ** - ಎಂಬ ನಾಮವನ್ನು ನೋಡೋಣ. ಸಂಸಾರವೆಂಬ ಕಾಡಿನಲ್ಲಿ ಸುತ್ತಾಡುತ್ತಿರುವ ಜೀವರುಗಳಿಗೆ ವಿಶ್ರಾಂತಿಗೆ ಸ್ಥಾನವಾಗಿರುವದರಿಂದ ಭಗವಂತನಿಗೆ ಈ ನಾಮವು ಬಂದಿದೆ. **(853)** ಈಗ **ಶ್ರಮಣಃ** - ಎಂಬ ನಾಮವನ್ನು ನೋಡೋಣ. ಅವಿವೇಕಿಗಳಾದ ಜನರಿಗೆ ಸಂತಾಪ(ದುಃಖ)ವನ್ನು ಉಂಟುಮಾಡು ತ್ತಾನಾದ್ದರಿಂದ ಈ ನಾಮವು ಬಂದಿದೆ. **(854)** ಈಗ **ಕ್ಷಾಮಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಪ್ರಾಣಿಗಳನ್ನೂ(ಪ್ರಲಯಕಾಲದಲ್ಲಿ)ಕ್ಷೀಣರನ್ನಾಗಿ ಮಾಡುತ್ತಾನಾದ್ದ ರಿಂದ ಈ ನಾಮವು ಬಂದಿದೆ. **(855)** ಈಗ **ಸುಪರ್ಣಃ** - ಎಂಬ ನಾಮವನ್ನು ನೋಡೋಣ. ಸಂಸಾರಸ್ವರೂಪನಾಗಿ ಕಾಣಿಸಿಕೊಂಡಿರುವ ಭಗವಂತನಿಗೆ ವೇದಗಳೆಂಬ ಪರ್ಣಗಳೂ(ಎಂದರೆ ಮರಕ್ಕೆ ಎಲೆಗಳಿದ್ದಂತೆ)ಇವೆಯಾದ್ದರಿಂದ ಈ ನಾಮವು ಬಂದಿದೆ. **(856)** ಈಗ **ವಾಯು ವಾಹನಃ** - ಎಂಬ ನಾಮವನ್ನು ನೋಡೋಣ. ಯಾವಾತನ ಅಂಜಿಕೆಯಿಂದ ವಾಯುವ ಎಲ್ಲಾ ಭೂತ(ಜೀವರು)ಗಳನ್ನೂ ಒಯ್ಯುತ್ತಾನಾದ್ದರಿಂದ ಆ ಭಗವಂತನಿಗೆ ಈ ನಾಮವು ಬಂದಿದೆ.

**ಧನುರ್ಧರೋ ಧನುರ್ವೇದೋ ದಂಡೋ ದಮಯಿತಾ ದಮಃ ।**
**ಅಪರಾಜಿತಃ ಸರ್ವಸಹೋ ನಿಯನ್ತಾऽನಿಯಮೋऽಯಮಃ ॥92॥**

**(857)ಧನುರ್ಧರಃ** - ಭಗವಂತನು ಶ್ರೀರಾಮಾವತಾರಕಾಲಕ್ಕೆ ಶ್ರೇಷ್ಠವಾದ ಧನುಸ್ಸನ್ನು ಹಿಡಿದು ದುಷ್ಟನಿಗ್ರಹವನ್ನು ಮಾಡಿದನಾದ್ದರಿಂದ ಧನುರ್ಧರನೆಂಬ ಈ ನಾಮವು ಬಂದಿದೆ. **(858)** ಈಗ **ಧನುರ್ವೇದಃ** - ಎಂಬ ನಾಮವನ್ನು ನೋಡೋಣ. ಆ ಶ್ರೀರಾಮನೇ ಧನುರ್ವೇದವೆಲ್ಲವನ್ನೂ ಸಮರ್ಪಕವಾಗಿ - ಸಂಪೂರ್ಣವಾಗಿ ಬಲ್ಲವನಾದ್ದರಿಂದ ಈ ನಾಮವು ಬಂದಿದೆ. **(859)** ಈಗ **ದಂಡಃ** - ಎಂಬ ನಾಮವನ್ನು ನೋಡೋಣ. ದುಷ್ಟರನ್ನು ಶಿಕ್ಷೆಮಾಡುವದು ದಂಡವು. ಆ ದಮನಶಕ್ತಿಯೇ ಭಗವಂತನಲ್ಲಿದೆಯಾಗಿ ಈ ನಾಮವು ಬಂದಿದೆ. **(860)** ಈಗ **ದಮಯಿತಾ** - ಎಂಬ ನಾಮವನ್ನು ನೋಡೋಣ. ಯಮದೇವ, ಭೂಲೋಕದಲ್ಲಿನ ರಾಜ( ನರೇಂದ್ರ) ಮುಂತಾದ ರೂಪದಿಂದ ಪ್ರಜೆಗಳನ್ನು ಶಿಕ್ಷಿಸುತ್ತಾನೆ - ಎಂಬರ್ಥ ದಲ್ಲಿ ಈ ನಾಮವು ಬಂದಿದೆ. **(861)** ಈಗ **ದಮಃ** - ಎಂಬ ನಾಮವನ್ನು ನೋಡೋಣ. ಶಿಕ್ಷೆಗೆ ಯೋಗ್ಯರಾದವರನ್ನು ದಂಡಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(862)** ಈಗ **ಅಪರಾಜಿತಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಶತ್ರುಗಳಿಂದ ಯಾವಾಗಲೂ ಸೋಲಿಸಲ್ಪಟ್ಟಿರುವದಿಲ್ಲ. ಆದ್ದರಿಂದ ಪರಾಜಿತನಾಗಿಲ್ಲ - ಎಂಬರ್ಥದಲ್ಲಿ ಈ ನಾಮವು ಬಂದಿದೆ. **(863)** ಈಗ **ಸರ್ವಸಹಃ** - ಎಂಬ ನಾಮವನ್ನು ನೋಡೋಣ. ಎಲ್ಲಾ ಕರ್ಮ(ಕೆಲಸ)ಗಳಲ್ಲಿಯೂ ಸಹನೆಯನ್ನು ಬಿಡದೆ ಸ್ವಸಾಮರ್ಥ್ಯದಿಂದ ಶತ್ರುಗಳನ್ನು ಗೆಲ್ಲುತ್ತಾನೆ. ಮತ್ತು ಆ ಶತ್ರುಗಳ ಹಿಂಸೆ ಯನ್ನು ತಡೆದುಕೊಂಡು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ - ಎಂಬ ಕಾರಣದಿಂದ ಈ ನಾಮವು ಬಂದಿದೆ. **(864)** ಈಗ **ನಿಯನ್ತಾ** - ಎಂಬ ನಾಮವನ್ನು ನೋಡೋಣ. ಸೃಷ್ಟಿಯುಲ್ಲಿರುವ ಎಲ್ಲಾ ಜೀವರುಗಳನ್ನೂ ಅವರವರ ಕರ್ತವ್ಯಗಳಲ್ಲಿ ತೊಡಗಿಸಿ ತಾನು ಯಜಮಾನನಾಗಿ ವ್ಯವಸ್ಥೆಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(865)** ಈಗ **ಅನಿಯಮಃ** - ಎಂಬ ನಾಮವನ್ನು ನೋಡೋಣ. ಭಗವಂತನು ಜಗದ್ ವ್ಯಾಪಾರಗಳೆಲ್ಲಕ್ಕೂ ನಿಯಾಮಕನಾಗಿರುವದರಿಂದ ಅವನಿಗೆ ಬೇರೊಬ್ಬರು ನಿಯಂತ್ರ ವಿರುವದಿಲ್ಲ. ಆದ್ದರಿಂದ ಈ ನಾಮವು ಬಂದಿದೆ. **(866)** ಈಗ **ಅಯಮಃ** - ಎಂಬ ನಾಮವನ್ನು ನೋಡೋಣ. ಯಾವ ನಿಯಮ(ಕಟ್ಟುಪಾಡು)ಗಳೂ ಭಗವಂತನಿಗೆ ಇಲ್ಲ ವಾದ್ದರಿಂದ ಈ ನಾಮವು ಬಂದಿದೆ. ಅಥವಾ ಯಮ-ನಿಯಮಗಳೆಂಬ ಸಾಧನಗಳು ಯೋಗಶಾಸ್ತ್ರಪ್ರಸಿದ್ಧವಾಗಿವೆ. ಅವುಗಳ ಮೂಲಕ ಭಗವಂತನನ್ನು ಕಂಡುಕೊಳ್ಳಬಹು ದಾದ್ದರಿಂದ ಆ ಯಮ ನಿಯಮಗಳನ್ನೇ ಭಗವಂತನೆಂದು ಸ್ತುತಿಸಲಾಗಿದೆ.

**ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।**
**ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ ಪ್ರೀತಿವರ್ಧನಃ**
**॥93॥**

**(867)** ಈಗ **ಸತ್ತ್ವವಾನ್** - ಎಂಬ ನಾಮವನ್ನು ನೋಡೋಣ. ಭಗವಂತನಲ್ಲಿ ಅಪರಿಮಿತವಾದ ಶೌರ್ಯ, ವೀರ್ಯಾದಿಗಳು ಇರುವದರಿಂದ ಈ ನಾಮದಿಂದ ಸ್ತುತಿಸಲಾಗಿದೆ. **(868)** ಈಗ **ಸಾತ್ತ್ವಿಕಃ** - ಎಂಬ ನಾಮವನ್ನು ನೋಡೋಣ. ಸತ್ತ್ವವೆಂಬ ಪ್ರಧಾನವಾದ ಗುಣದಲ್ಲಿ ಇರುವವನಾದ್ದರಿಂದ ಶ್ರೀಮನ್ನಾರಾಯಣನನ್ನು ಈ ನಾಮದಿಂದ ಸ್ತುತಿಸಿದೆ. **(869)** ಈಗ **ಸತ್ಯಃ** - ಎಂಬ ನಾಮವನ್ನು ನೋಡೋಣ. ಸತ್ಪುರುಷರಲ್ಲಿ ಸಾಧುಗುಣಗಳಿಂದ ಇದ್ದುಕೊಂಡಿರುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(870)** ಈಗ **ಸತ್ಯಧರ್ಮಪರಾಯಣಃ** - ಎಂಬ ನಾಮವನ್ನು ನೋಡೋಣ. ಸತ್ಯ - ಎಂದರೆ ಇದ್ದದ್ದನ್ನು ಇದ್ದಂತೆ ನುಡಿಯುವದು. ಧರ್ಮವೆಂದರೆ ವೇದ ಶಾಸ್ತ್ರಗಳು ತಿಳಿಸುವ ಕರ್ಮಗಳಲ್ಲಿ ನಿಷ್ಠನಾಗಿರುವದು. ಇವುಗಳನ್ನೇ ಅನುಷ್ಠಾನ ಮಾಡುತ್ತಾ ತತ್ಪರನಾಗಿರುವದು. ಭಗವಂತನು ಈ ಸತ್ಯಧರ್ಮಗಳ ಆಚರಣೆಯಲ್ಲಿಯೇ ನಿರತನಾಗಿರುತ್ತಾನಾಗಿ ಈ ನಾಮವು ಬಂದಿದೆ. **(871)** ಈಗ **ಅಭಿಪ್ರಾಯಃ** - ಎಂಬ ನಾಮವನ್ನು ನೋಡೋಣ. ಧರ್ಮಾದಿ ಪುರುಷಾರ್ಥಗಳನ್ನು ಬಯಸುವವರು ಭಗವಂತನನ್ನು ಇಷ್ಟಪಡುತ್ತಾರೆ. ಅವರು ಭಗವಂತನನ್ನೇ ಸೇರುತ್ತಾರೆ. ಆದ್ದರಿಂದ ಈ ನಾಮವು ಬಂದಿದೆ. ಅಥವಾ ಪ್ರಲಯಕಾಲದಲ್ಲಿ ಜಗತ್ತು ಭಗವಂತನಿಗೆ ಎದುರಾಗಿ ನದಿಯು ಸಮುದ್ರವನ್ನು ಸೇರುವಂತೆ - ಅವನಲ್ಲಿಗೇ ಹೋಗಿ ಸೇರುತ್ತದೆ. ಹಾಗೆ ಲಯ ವಾಗುವದರಿಂದ ಅದು ತನ್ನ ನಾಮರೂಪಗಳನ್ನು ಕಳೆದುಕೊಂಡು ಪರಮಾತ್ಮನೇ ಆಗಿಬಿಡುತ್ತದೆ. ಈ ಅರ್ಥದಲ್ಲಿ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(872)** ಈಗ **ಪ್ರಿಯಾರ್ಹಃ** - ಎಂಬ ನಾಮವನ್ನು ನೋಡೋಣ. ನಮಗೆ ಪ್ರಿಯ(ಇಷ್ಟ) ವಾದ ವಸ್ತುಗಳನ್ನು ಅರ್ಹರಾದವರಿಗೆ ಕೊಡಲು ಬಯಸುತ್ತೇವೆ. ಆಗ ಭಗವಂತನು ನಮಗೆ ಪ್ರಿಯನಾಗಿದ್ದು ಸ್ವೀಕರಿಸುತ್ತಾನೆ. ಕೊಡುವವನಿಗೂ ಸಂತೋಷವಾಗುತ್ತದೆ. ಹೀಗೆ ಪ್ರಿಯಾರ್ಹನೆನಿಸಿರುತ್ತಾನೆ. **(873)** ಈಗ **ಅರ್ಹಃ** - ಎಂಬ ನಾಮವನ್ನು ನೋಡೋಣ. ಅರ್ಹನು-ಎಂದರೆ ಯೋಗ್ಯನು - ತಕ್ಕವನು-ಎಂದರ್ಥ. ಯಜಮಾನ ನಾದವನು ತನಗೆ ಇಷ್ಟತಮವಾದ ಪದಾರ್ಥಗಳನ್ನು ಕೊಡಲು ಇಚ್ಛಿಸಿದಾಗ ಯೋಗ್ಯ ನಾದವನನ್ನು ಹುಡುಕಿಕೊಡುತ್ತಾನೆ. ಆಗ ಕೊಡುವವನು ''ಈಶ್ವರನು(ಭಗವಂತನು) ಸಂತುಷ್ಟನಾಗಲಿ'' ಎಂದು ಸ್ಮರಣೆಮಾಡಿಕೊಡುತ್ತಾನೆ. ಆದ್ದರಿಂದ ದಾನಿಯು ಸ್ಮರಿಸುವ ಭಗವಂತನನ್ನು ಅರ್ಹನೆಂದು ಸ್ತುತಿಸಲಾಗಿದೆ. **(874)** ಈಗ **ಪ್ರಿಯಕೃತ್** - ಎಂಬ ನಾಮವನ್ನು ನೋಡೋಣ. ತನ್ನ ಭಕ್ತರ ಸ್ತೋತ್ರ, ಸೇವಾದಿಗಳಿಂದ ಸಂತುಷ್ಟನಾದ

ಭಗವಂತನು ತನ್ನನ್ನು ಸೇವಿಸುವ ಭಕ್ತರಿಗೆ ಅವರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(875)** ಈಗ **ಪ್ರೀತಿವರ್ಧನಃ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಭಕ್ತರ ಪ್ರೇಮವನ್ನು ಹೆಚ್ಚು ಹೆಚ್ಚಾಗಿ ಬೆಳೆಸುತ್ತಾ ಹೋಗುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ.

**ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಕ್ ವಿಭುಃ ।**
**ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥94॥**

**(876)** ಈಗ **ವಿಹಾಯಸಗತಿಃ** - ಎಂಬ ನಾಮವನ್ನು ನೋಡೋಣ. ಆಕಾಶಕ್ಕೆ ಆಶ್ರಯನು - ಎಂದರ್ಥ. ಅಥವಾ ಸೂರ್ಯನು - ಎಂದಾದರೂ ಅರ್ಥ ಮಾಡಬಹುದು. ಭಗವಂತನು ಸೂರ್ಯನಿಗೂ ಸೂರ್ಯನಾಗಿರುತ್ತಾನೆ. **(877)** ಈಗ **ಜ್ಯೋತಿಃ** - ಎಂಬ ನಾಮವನ್ನು ನೋಡೋಣ. ಭಗವಂತನು ಬೇರೆಯ ಜ್ಯೋತಿ (ಬೆಳಕು)ಗಳ ಆಶ್ರಯವಿಲ್ಲದೆ ತಾನೇ ತನ್ನ ಸ್ವರೂಪದಿಂದ ಬೆಳಗುತ್ತಾನಾದ್ದರಿಂದ ಈ ನಾಮವು ಬಂದಿದೆ. **(878)** ಈಗ **ಸುರುಚಿಃ** - ಎಂಬ ನಾಮವನ್ನು ನೋಡೋಣ. ಮಂಗಳಕರವಾದ ತೇಜಸ್ಸುಳ್ಳವನು ಎಂದರ್ಥ. ಅಥವಾ ರುಚಿ ಎಂಬ ಶಬ್ದಕ್ಕೆ ಇಚ್ಛೆ ಎಂದು ಅರ್ಥಮಾಡಿದರೆ ಶುಭಕರವಾದ ಇಚ್ಛೆಯುಳ್ಳವನು ಎಂದೂ ವ್ಯಾಖ್ಯಾನ ಮಾಡಬಹುದು. **(879)** ಈಗ **ಹುತಭುಕ್**- ಎಂಬ ನಾಮವನ್ನು ನೋಡೋಣ. ಎಲ್ಲಾ ದೇವತೆಗಳ ತೃಪ್ತಿಗಾಗಿ ಪ್ರಾರಂಭಿಸಲ್ಪಟ್ಟ ಕರ್ಮಗಳಲ್ಲಿ ಆಹುತಿರೂಪವಾಗಿ ಅಗ್ನಿಯಲ್ಲಿ ಸಮರ್ಪಿಸುವ ಹವಿಸ್ಸನ್ನು ಸ್ವೀಕರಿಸುತ್ತಾನೆ - ಎಂಬರ್ಥದಲ್ಲಿ ಈ ನಾಮವು ಬಂದಿದೆ. **(880)** ಈಗ **ವಿಭುಃ** - ಎಂಬ ನಾಮವನ್ನು ನೋಡೋಣ. ಮೂರು ಲೋಕಗಳಲ್ಲಿಯೂ ವ್ಯಾಪಿಸಿಕೊಂಡಿದ್ದು ಅವೆಲ್ಲಕ್ಕೂ ಒಡೆನಾಗಿರುವದರಿಂದ ಈ ನಾಮವು ಬಂದಿದೆ. **(881)** ಈಗ **ರವಿಃ** - ಎಂಬ ನಾಮವನ್ನು ನೋಡೋಣ. ಸಸ್ಯಗಳ ರಸವನ್ನು ಸ್ವೀಕರಿಸುತ್ತಾನಾಗಿ ಈ ನಾಮವು ಬಂದಿದೆ. ಸೂರ್ಯನಿಲ್ಲವಾದರೆ ಪೈರುಗಳಲ್ಲಿ ರಸ-ಉತ್ಪತ್ತಿಯಾಗುವದಿಲ್ಲ. ಆದರೆ ಸಮಯವನ್ನು ಮೀರಿ ಪೈರನ್ನು ಕೊಯ್ದರೆ ಆ ರಸವನ್ನು ಸೂರ್ಯನ ರೂಪದಿಂದ ಸ್ವೀಕರಿಸುವದರಿಂದ ಈ ನಾಮವು ಬಂದಿದೆ. **(882)** ಈಗ **ವಿರೋಚನಃ** - ಎಂಬ ನಾಮವನ್ನು ನೋಡೋಣ. ನಾನಾ ವಿಧವಾಗಿ ಪ್ರಕಾಶಿಸುತ್ತಾನಾದ್ದರಿಂದ 'ವಿವಿಧಂ ರೋಚತೇ ಇತಿ ವಿರೋಚನಃ' ಎಂಬ ವ್ಯುತ್ಪತ್ತಿಯಂತೆ ಈ ನಾಮವು ಬಂದಿದೆ. **(883)** ಈಗ **ಸೂರ್ಯಃ** - ಎಂಬ ನಾಮವನ್ನು ನೋಡೋಣ. 'ಸೂತೇ ಇತಿ ಸೂರ್ಯಃ' ಎಂಬ ವ್ಯುತ್ಪತ್ತಿಯಂತೆ ಜಗತ್ತೆಲ್ಲಕ್ಕೂ ಜನ್ಮವನ್ನು ಕೊಡುವವನಾದ್ದರಿಂದ ಈ ನಾಮವು ಬಂದಿದೆ. **(884)** ಈಗ **ಸವಿತಾ** - ಎಂಬ ನಾಮವನ್ನು ನೋಡೋಣ. ಪ್ರಾಣಿಗಳೆಲ್ಲವನ್ನೂ ಹಡೆಯುವವನಾದ್ದರಿಂದ ಈ ನಾಮವು ಬಂದಿದೆ. ಸ್ಥಾವರ-ಜಂಗಮಪ್ರಾಣಿಗಳೆಲ್ಲವೂ ಸೂರ್ಯನ

ಉಷ್ಣಾಂಶದಿಂದಲೇ ಹುಟ್ಟುತ್ತವೆಯಾಗಿ ಈ ನಾಮವು ಅನ್ವರ್ಥವಾಗಿದೆ. **(885)** ಈಗ **ರವಿಲೋಚನಃ** - ಎಂಬ ನಾಮವನ್ನು ನೋಡೋಣ. ಭಗವಂತನಾದ ಈ ವಿಷ್ಣುವಿಗೆ ಸೂರ್ಯಚಂದ್ರರೇ ಕಣ್ಣುಗಳಾದ್ದರಿಂದ ಈ ನಾಮವು ಬಂದಿದೆ.

**ಅನನ್ತೋ ಹುತಭುಕ್‌ಭೋಕ್ತಾ ಸುಖದೋ ನೈಕಜೋಽಗ್ರಜಃ ।**
**ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥95॥**

**(886) ಅನನ್ತಃ** - ಭಗವಂತನು ನಿತ್ಯನೂ ಸರ್ವಗತನೂ ದೇಶಕಾಲ ವಸ್ತು ಪರಿಚ್ಛೇದಗಳಿಲ್ಲದವನೂ ಆಗಿರುವದರಿಂದ ಈ ನಾಮವು ಬಂದಿದೆ. ಅಥವಾ ಅನಂತ ಎಂದರೆ ಆದಿಶೇಷನ ರೂಪದಲ್ಲಿರುವವನು, ಹಾಗೂ ಹದಿನಾಲ್ಕು ಲೋಕಗಳನ್ನೂ ಧರಿಸಿರುವವನು - ಎಂದೂ ವ್ಯಾಖ್ಯಾನಮಾಡಿದರೂ ಹೊಂದುತ್ತದೆ. **(887)** ಈಗ **ಹುತಭುಕ್**- ಎಂಬ ನಾಮವನ್ನು ನೋಡೋಣ. ಹೋಮಮಾಡಿದ ದ್ರವ್ಯವನ್ನು ಅಗ್ನಿರೂಪದಿಂದ ಸ್ವೀಕರಿಸುತ್ತಾನಾಗಿ ಈ ನಾಮವು ಬಂದಿದೆ - ಎಂದೂ ವ್ಯಾಖ್ಯಾನ ಮಾಡಬಹುದು. **(888)** ಈಗ **ಭೋಕ್ತಾ** - ಎಂಬ ನಾಮವನ್ನು ನೋಡೋಣ. ಸಾಂಖ್ಯಶಾಸ್ತ್ರದಂತೆ ಪ್ರಕೃತಿ - ಪುರುಷ ಎಂಬ ಎರಡು ತತ್ತ್ವಗಳನ್ನು ಸ್ವೀಕರಿಸಿದಾಗ ಪುರುಷನನ್ನು ಭೋಕ್ತೃವೆಂದೂ ಪ್ರಕೃತಿಯನ್ನು ಕರ್ತೃವೆಂದೂ ಪರಿಗಣಿಸಲಾಗಿದೆ. ಆಗ ಪ್ರಕೃತಿಯನ್ನು ಅನುಭವಿಸುವ ಪುರುಷನು ಭೋಕ್ತೃವೆನಿಸುತ್ತಾನೆ. ಈ ಅರ್ಥದಂತೆ ಈ ನಾಮವು ಬಂದಿದೆ. **(889)** ಈಗ **ಸುಖದಃ** - ಎಂಬ ನಾಮವನ್ನು ನೋಡೋಣ. ಮೋಕ್ಷಸ್ವರೂಪವಾದ ಆತ್ಯಂತಿಕಸುಖವನ್ನು - ಎಂದರೆ ದುಃಖಸಂಮಿಶ್ರವಲ್ಲದ ಪರಮಸುಖವನ್ನು ಮುಮುಕ್ಷುಗಳಿಗೆ ದಯಪಾಲಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(890)** ಈಗ **ನೈಕಜಃ** - ಎಂಬ ನಾಮವನ್ನು ನೋಡೋಣ. ಧರ್ಮವನ್ನು ಉದ್ಧಾರ ಮಾಡುವದಕ್ಕಾಗಿ ಸಮಯಾನುಗುಣವಾಗಿ ಅವತಾರಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. ಭಗವಂತನೇ ಗೀತೆಯಲ್ಲಿ 'ಬಹೂನಿ ಮೇ ವ್ಯತೀತಾನಿ ಜನ್ಮಾನಿ' ಎಂದೂ 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂದೂ ತಾನೇ ಹೇಳಿದ್ದಾನೆ. ಆದ್ದರಿಂದ ಈ ನಾಮವು ಬಂದಿದೆ. **(891)** ಈಗ **ಅಗ್ರಜಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಹುಟ್ಟು-ಎಂಬುದಿಲ್ಲ. ಆದರೆ ತನ್ನ ಲೀಲಾಕಾರ್ಯಗಳಲ್ಲಿ ಅವತಾರರೂಪದಿಂದ ಆವಿರ್ಭವಿಸುತ್ತಾನೆ. ಸೃಷ್ಟಿಯ ಆದಿಯಲ್ಲಿ ಹಿರಣ್ಯಗರ್ಭನಾಗಿ ಕಾಣಿಸಿಕೊಂಡು ಎಲ್ಲಾ ಜೀವರುಗಳಿಗಿಂತಲೂ ಮೊಟ್ಟ ಮೊದಲು ತೋರಿಕೊಂಡವನಾದ್ದರಿಂದ ಅಗ್ರಜನೆನಿಸಿರುತ್ತಾನೆ. **(892)** ಈಗ **ಅನಿರ್ವಿಣ್ಣಃ** - ಎಂಬ ನಾಮವನ್ನು ನೋಡೋಣ. ನಿರ್ವೇದ-ಎಂದರೆ ಬೇಸರ-ಎಂದರ್ಥ. ಭಗವಂತನು ಪಡೆಯಬೇಕಾದ ಬಯಕೆಗಳಾವುವೂ ಇಲ್ಲ. ಇವನು ಆಪ್ತಕಾಮನು. ಹೀಗೆ ಪರಿಪೂರ್ಣಕಾಮನಾಗಿದ್ದು ಬೇಸರಕ್ಕೆ ಅವಕಾಶವೇ

ಇಲ್ಲವಾದ್ದರಿಂದ ಅನಿರ್ವಿಣ್ಣನೆಂದು ಸ್ತುತಿಸಲ್ಪಟ್ಟಿರುತ್ತಾನೆ. **(893)** ಈಗ **ಸದಾಮರ್ಷೀ** - ಎಂಬ ನಾಮವನ್ನು ನೋಡೋಣ. ಸತ್ಪುರುಷರಾದ ಸಾಧುಗಳನ್ನು (ಅವರು ಹಿಂದೆ ಅಪರಾಧಮಾಡಿದ್ದರೂ) ಕ್ಷಮಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. ಎಂಥ ದುರಾಚಾರಿಯಾದವನೂ ಒಂದು ವೇಳೆ ಅನನ್ಯಭಕ್ತಿಯಿಂದ ಭಗವಂತನನ್ನು ಭಜಿಸಿದರೆ ಅಂಥವನ ಅಪರಾಧಗಳನ್ನೂ ಸಹಿಸಿಕೊಂಡು ಕ್ಷಮಿಸಿ ಕಾಪಾಡುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(894)** ಈಗ **ಲೋಕಾಧಿಷ್ಠಾನಮ್** - ಎಂಬ ನಾಮವನ್ನು ನೋಡೋಣ. ಸ್ವರ್ಗ- ಮರ್ತ್ಯ - ಪಾತಾಳಗಳೆಂಬ ಲೋಕಗಳನ್ನು ಧರಿಸಿದವನಾಗಿ ಇರುವದರಿಂದ - ಅವುಗಳಿಗೆ ಆಧಾರನಾಗಿರುವುದರಿಂದ ಈ ನಾಮವು ಬಂದಿದೆ. **(895)** ಈಗ **ಅದ್ಭುತಃ** - ಎಂಬ ನಾಮವನ್ನು ನೋಡೋಣ. ಭಗವಂತನು ಅಸಾಧಾರಣಸ್ವರೂಪನಾಗಿದ್ದಾನೆ. ಪಾರ್ಥಸಾರಥಿಯಾಗಿದ್ದವನು ವಿಶ್ವರೂಪವನ್ನೇ ಧರಿಸಿ ಹದಿನಾಲ್ಕು ಲೋಕಗಳನ್ನೂ ವ್ಯಾಪಿಸಿದ ಅದ್ಭುತ ವಿರಾಟ್‌ಶರೀರವನ್ನು ಅರ್ಜುನನಿಗೆ ತೋರಿಸಿದನು. ಇದೊಂದು ಮಹದದ್ಭುತವೇ ಆಗಿತ್ತು. ಇದನ್ನು ನೋಡಿದ ಅರ್ಜುನನೂ ಭಯಭೀತನಾಗಿದ್ದನು. ಹೀಗೆ ಭಗವಂತನ ಅದ್ಭುತಲೀಲೆಯ ನಿಮಿತ್ತ ಈ ನಾಮವು ಬಂದಿದೆ.

**ಸನಾತ್ ಸನಾತನತಮಃ ಕಪಿಲಃ ಕಪಿರಪ್ಯಯಃ ।**
**ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥96॥**

**(896)** ಈಗ **ಸನಾತ್** - ಎಂಬ ನಾಮವನ್ನು ನೋಡೋಣ. ಈ ಶಬ್ದವು ನಿಪಾತವು. ಚಿರಕಾಲ - ಎಂದು ಇದರ ಅರ್ಥ. ಆದ್ದರಿಂದ ಈ ಕಾಲಸ್ವರೂಪನೂ ಭಗವಂತನೇ ಆದ್ದರಿಂದ ಈ ನಾಮವು ಬಂದಿದೆ. **(897)** ಈಗ **ಸನಾತನತಮಃ** - ಎಂಬ ನಾಮವನ್ನು ನೋಡೋಣ. ಸನಾತನರಾದ ಬ್ರಹ್ಮಾದಿಗಳಿಗಿಂತಲೂ ಹಿಂದಿನವನಾದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(898)** ಈಗ **ಕಪಿಲಃ** - ಎಂಬ ನಾಮವನ್ನು ನೋಡೋಣ. ಕಂ- ಎಂದರೆ ನೀರನ್ನು ಕಿರಣಗಳಿಂದ ಕುಡಿಯುವವನು ಸೂರ್ಯನು. ಆ ಸೂರ್ಯರೂಪದಿಂದಲೂ ಭಗವಂತನೇ ಇದ್ದಾನೆ. ಸೂರ್ಯಮಂಡಲಾಂತರ್ಗತಪುರುಷನು ನಾರಾಯಣನೇ-ಎಂದು ಪುರಾಣಗಳಲ್ಲಿ ವರ್ಣಿಸಿದೆ. **(899)** ಈಗ **ಕಪಿಃ** - ಎಂಬ ನಾಮವನ್ನು ನೋಡೋಣ. ಇದು ಕೂಡ ಸೂರ್ಯನ ರೂಪವನ್ನು ಉದ್ದೇಶಿಸಿ ಸ್ತುತಿಸಿದ ನಾಮವಾಗಿದೆ. **(900)** ಈಗ **ಅಪ್ಯಯಃ** - ಎಂಬ ನಾಮವನ್ನು ನೋಡೋಣ. ಅಪ್ಯಯ - ಎಂದರೆ ಲೀನವಾಗುವದು - ಮುಳುಗುವದು- ಎಂದರ್ಥ. ಪ್ರಲಯಕಾಲದಲ್ಲಿ ಜಗತ್ತೆಲ್ಲವೂ ಭಗವಂತನಲ್ಲಿ ಒಂದಾಗಿಬಿಡುವದರಿಂದ ಈ ನಾಮವು ಬಂದಿದೆ.

**ಒಂಭತ್ತನೆಯ ಶತಕವು ಮುಗಿದಿದೆ.**

# ದಶಮಶತಕ

**(901)** ಈಗ **ಸ್ವಸ್ತಿದಃ** - ಎಂಬ ನಾಮವನ್ನು ನೋಡೋಣ. ಸ್ವಸ್ತಿ - ಎಂಬ ಶಬ್ದವು ಮಂಗಳವಾಚಕವು. ಭಕ್ತರಿಗೆ ಮಂಗಳವನ್ನು ಕೊಡುವವನಾದ್ದರಿಂದ ಭಗವಂತ ನನ್ನು ಈ ನಾಮದಿಂದ ಸ್ತುತಿಸಿದೆ. **(902)** ಈ **ಸ್ವಸ್ತಿಕೃತ್** - ಎಂಬ ನಾಮವನ್ನು ನೋಡೋಣ. ಇದು ಕೂಡ ಭಕ್ತರಿಗೆ ಮಂಗಳವನ್ನೇ ಉಂಟುಮಾಡುವವನಾದ್ದರಿಂದ ಈ ನಾಮವು ಬಂದಿದೆ. **(903)** ಈಗ **ಸ್ವಸ್ತಿ** - ಎಂಬ ನಾಮವನ್ನು ನೋಡೋಣ. ಪರಮಾನಂದಸ್ವರೂಪನಾದ ಭಗವಂತನ ಮತ್ತೊಂದು ಹೆಸರೇ ಸ್ವಸ್ತಿ - ಎಂಬುದಾಗಿದೆ. **(904)ಸ್ವ ಸ್ತಿಭುಕ್** - ಹಾಗೆಯೇ ಮಂಗಳವನ್ನೇ ಅನುಭವಿಸುತ್ತಾನಾದ್ದರಿಂದ ಸ್ವಸ್ತಿಭುಕ್ - ಎಂಬ ಈ ನಾಮವು ಬಂದಿದೆ. **(905) ಸ್ವಸ್ತಿದಕ್ಷಿಣಃ** - ಸ್ವಸ್ತಿ - ಮಂಗಳವನ್ನು ಭಕ್ತರಿಗೆ ದಯಪಾಲಿಸುವವನಾದ್ದರಿಂದ ಸ್ವಸ್ತಿದಕ್ಷಿಣನೆನಿಸಿರುತ್ತಾನೆ. ಅಥವಾ ಶೀಘ್ರವಾಗಿ ಭಕ್ತರಿಗೆ ಮಂಗಳವನ್ನು ದಯಪಾಲಿಸುವದರಲ್ಲಿ ಅತ್ಯಂತವಾಗಿ ಸಮರ್ಥನೆನಿಸಿರುತ್ತಾನೆ. ಆದ್ದರಿಂದಲೂ ಈ ನಾಮವು ಬಂದಿದೆ.

**ಅರೌದ್ರಃ ಕುಂಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।**
**ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥97॥**

**(906)ಅರೌದ್ರಃ** - ಕ್ರೂರಕರ್ಮಗಳಾಗಲಿ, ಕೋಪತಾಪಗಳಾಗಲಿ - ಯಾವವೂ ಇಲ್ಲದವನಾದ್ದರಿಂದ ಅರೌದ್ರನೆನಿಸಿರುತ್ತಾನೆ. **(907)ಕುಂಡಲೀ** -ಆದಿಶೇಷನ ರೂಪ ದಿಂದ ಭೂಮಿಯನ್ನು ಧರಿಸಿದ್ದಾನಾದ್ದರಿಂದ ಕುಂಡಲೀ ಎಂಬ ನಾಮವು ಬಂದಿದೆ. **(908)ಚಕ್ರೀ** - ಎಲ್ಲಾ ಲೋಕಗಳನ್ನೂ ಕಾಪಾಡುವದಕ್ಕಾಗಿ ಮನಸ್ತತ್ತ್ವಾತ್ಮಕವಾದ 'ಸುದರ್ಶನ' ವೆಂಬ ಚಕ್ರವನ್ನು ಧರಿಸಿರುವದರಿಂದ ಚಕ್ರೀ - ಎನಿಸಿರುತ್ತಾನೆ. **(909) ವಿಕ್ರಮೀ** -ವಾಮನಾವತಾರದ ಕಾಲಕ್ಕೆ ಮೂರು ಹೆಜ್ಜೆ ಸ್ಥಳವನ್ನು ಅಳೆಯುವದಕ್ಕಾಗಿ ಬಲಿರಾಜನು ಕೊಟ್ಟ ದಾನವನ್ನು ಸ್ವೀಕರಿಸಿ ಸ್ವರ್ಗ-ಮರ್ತ್ಯ-ಪಾತಾಳಲೋಕಗಳನ್ನು ತನ್ನ ಹೆಜ್ಜೆಯಿಂದ ಅಳೆದುಕೊಳ್ಳಲು ತ್ರೈಲೋಕ್ಯವನ್ನೂ ವ್ಯಾಪಿಸಿರುವ ವಿಶ್ವರೂಪವನ್ನು ಧರಿಸಿದ್ದವನಾದ್ದರಿಂದ ವಿಕ್ರಮೀ- ಎಂಬ ಈ ನಾಮವು ಬಂದಿದೆ. **(910)** ಈಗ **ಊರ್ಜಿತಶಾಸನಃ** - ಎಂಬ ನಾಮವನ್ನು ನೋಡೋಣ. ಶ್ರುತಿ-ಸ್ಮೃತಿಗಳ ರೂಪವಾದ ಶಾಸ್ತ್ರಗಳನ್ನು ತನ್ನ ಅಜ್ಞಾನುಸಾರವಾಗಿ ಋಷಿಗಳ ಮೂಲಕ ರಚಿಸಿ ಅವುಗಳಲ್ಲಿರುವ ವಿಧಿನಿಷೇಧಗಳನ್ನು ಜನರು ಆಚರಿಸಲು ಏರ್ಪಡಿಸಿ ತನ್ನ ಆಜ್ಞೆಯನ್ನು ಕಾರ್ಯಗತ

ಗೊಳಿಸಿರುವನಾದ್ದರಿಂದ ಈ ನಾಮವು ಬಂದಿದೆ. (911) ಈಗ **ಶಬ್ದಾತಿಗಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಶಬ್ದಗೋಚರನಲ್ಲವೆಂದು ಶ್ರುತಿಯು ತಿಳಿಸುತ್ತದೆ. ಆದರೆ ಆ ಭಗವಂತನ ಹಿನ್ನೆಲೆಯಿಲ್ಲವಾದರೆ ಶಬ್ದಗಳು ಇರುವದೇ ಇಲ್ಲ. ಆದ್ದರಿಂದ ಶಬ್ದಗಳನ್ನು ನೆಪ ಮಾಡಿಕೊಂಡು "ಕೊಂಬೆಯ ತುದಿಯಲ್ಲಿರುವ ಚಂದ್ರನನ್ನು ನೋಡು" ಎಂದಂತೆ ಆ ಭಗವಂತನನ್ನು ಶ್ರುತಿಗಳು ತಿಳಿಸುತ್ತವೆ ಯಾದ್ದರಿಂದ ಈ ನಾಮವು ಬಂದಿದೆ. (912) ಈಗ **ಶಬ್ದಸಹಃ** - ಎಂಬ ನಾಮವನ್ನು ನೋಡೋಣ. ಶ್ರುತಿಗಳು ತಾತ್ಪರ್ಯದಿಂದ ಭಗವಂತನನ್ನೇ ಹೇಳುತ್ತವೆಯೆಂದು ಕಠೋಪನಿಷತ್ತಿನಲ್ಲಿದೆ. ಆದರೆ ಭಗವಂತನು ಶಬ್ದಗೋಚರನಲ್ಲ ವೆಂದೂ ಶ್ರುತಿಯಿದೆ. ಇದರ ಸಮನ್ವಯುವು ಹೇಗೆಂದರೆ ಶಾಖಾ ಚಂದ್ರದರ್ಶನದಂತೆ - ಎಂದು ಹಿಂದೆ ಹೇಳಿರುವಂತೆ ತಿಳಿಯಬೇಕು. ಬಿದಿಗೆ ಚಂದ್ರನು ಆಗ ತಾನೆ ಉದಯಿಸಿದ್ದು ಸೂಕ್ಷ್ಮ ವಾಗಿರುತ್ತಾನೆ. ಸಂಜೆವೇಳೆಯಲ್ಲಿ ಶುಕ್ಲ ಬಿದಿಗೆ ದಿನ ಚಂದ್ರನನ್ನು ನೋಡಬೇಕಾದರೆ ಪಶ್ಚಿಮಕ್ಕೆ ತಿರುಗಿ ಬೆಟ್ಟದ ಮೇಲಿನ ಮರಗಳನ್ನು ಗುರುತಿಸಿ ಕೊಂಬೆಗಳ ತುದಿಯನ್ನು ನೇರಾಗಿ ಗಮನಿಸುವ ಮೂಲಕ ಚಂದ್ರ ದರ್ಶನಮಾಡುವಂತೆ - ಭಗವಂತನನ್ನೂ ಶ್ರುತಿಸ್ಮೃತಿಗಳ ಸಹಾಯದಿಂದ ಅವುಗಳನ್ನು ಮೀರಿದ ಆತ್ಮನನ್ನು ತಾನೇ ತನ್ನಲ್ಲಿಯೇ ಕಂಡುಕೊಳ್ಳಬೇಕು. ಆ ಸ್ಥಿತಿಯಲ್ಲಿ ಶಬ್ದವ್ಯಾಪಾರವಿರುವದಿಲ್ಲವಾಗಿ ಶಬ್ದಾತಿಗನೆನಿಸಿರುತ್ತಾನೆ. ಆದರೆ ಶಬ್ದಗಳೆಲ್ಲವೂ ಭಗವಂತನನ್ನು ತಿಳಿಸುವದಕ್ಕೆ ಹೊರಟಿರುವವಾದ್ದರಿಂದ ಅವುಗಳನ್ನು ಬಳಸಿ- ಅನಂತರ ಕೈಬಿಡಬೇಕು. ಏಕೆಂದರೆ ಆ ಭಗವಂತನು ನಮ್ಮೊಳಗೇ ಇರುತ್ತಾನಾಗಿ ತಿಳಿದಮೇಲೆ ಶಬ್ದಗಳ ಅವಶ್ಯಕತೆ ಇರುವದಿಲ್ಲ. (913) ಈಗ **ಶಿಶಿರಃ** - ಎಂಬ ನಾಮವನ್ನು ನೋಡೋಣ. ಶಿಶಿರ -ಎಂದರೆ ತಂಪು ಎಂದರ್ಥ. ಸಾಂಸಾರಿಕ ತಾಪತ್ರಯಗಳಿಂದ ಬಳಲಿದವರಿಗೆ ಭಗವಂತನು ವಿಶ್ರಾಂತಿ ಸ್ಥಾನವಾಗಿರುವದರಿಂದ ಈ ನಾಮವು ಬಂದಿದೆ. ಮಾನವನಿಗೆ ವ್ಯವಹಾರದಲ್ಲಿ ಎಂದಿಗೂ ನೆಮ್ಮದಿಯು ಸಿಗುವದಿಲ್ಲ. ಅದರಿಂದ ಬಿಡುಗಡೆಹೊಂದಿದಾಗ ಭಗವಂತನೇ ಅವನಿಗೆ ವಿಶ್ರಾಮ ಸ್ಥಾನವು. ಆಟವಾಡಿ ಬಳಲಿದ ಮಗುವು ನಿದ್ರಿಸಿ ವಿಶ್ರಾಂತಿಯನ್ನು ಪಡೆಯುವಂತೆ ಮಾನವನು ತನ್ನ ವ್ಯವಹಾರದ ಶ್ರಮವನ್ನು ಪರಿಹರಿಸಿಕೊಳ್ಳಲು ಭಗವಂತನನ್ನೇ ಬಳಿಸಾರಬೇಕು. ಆಗ ವಿಶ್ರಾಂತಿ ಸಿಗುವದರಿಂದ 'ಶಿಶಿರ' ನೆಂದು ಸ್ತುತಿಸಿದೆ. (914) ಈಗ **ಶರ್ವರೀಕರಃ** - ಎಂಬ ನಾಮವನ್ನು ನೋಡೋಣ. ಸಂಸಾರಿಗಳಾದವರಿಗೆ ಪರಮಾರ್ಥವು ಕತ್ತಲೆಯಂತಿರುತ್ತದೆ. ಜ್ಞಾನಿಗಳಿಗೆ ಸಂಸಾರವು ಕತ್ತಲೆಯಂತಿರುತ್ತದೆ. ಈ ಎರಡನ್ನೂ ಸಂಘಟನೆಮಾಡಿರುವವನು ಭಗವಂತನೇ ಆದ್ದರಿಂದ ಈ ನಾಮದಿಂದ ಸ್ತುತಿಸಿದೆ.

**ಅಕ್ರೂರಃ ಪೇಶಲೋ ದಕ್ಷೋಃ ದಕ್ಷಿಣಃ ಕ್ಷಮಿಣಾಂ ವರಃ ।**
**ವಿದ್ವ ತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥98॥**

**(915) ಅಕ್ರೂರಃ** - ಕ್ರೌರ್ಯ-ಎಂಬುದು ಮನೋಧರ್ಮವು, ಇದು ಹೆಚ್ಚಿನ ಕೋಪದಿಂದ ಉಂಟಾದ ಹಠದಿಂದ ಕೂಡಿದ ಒಳಗಿನ ಸಂಕಟರೂಪವಾದ ಮನೋಧರ್ಮವು. ಭಗವಂತನು ಆಪ್ತಕಾಮನಾಗಿರುವದರಿಂದ ಕೋಪವು ಅವನಲ್ಲಿಲ್ಲ. ಆದ್ದರಿಂದ ಕೋಪವಿಲ್ಲವಾದಾಗ ಕ್ರೂರತನವೂ ಇರುವದಿಲ್ಲ. ಆದ್ದರಿಂದ ಅಕ್ರೂರನೆನಿಸಿರುತ್ತಾನೆ. **(916)** ಈಗ **ಪೇಶಲಃ** - ಎಂಬ ನಾಮವನ್ನು ನೋಡೋಣ. ಸುಂದರವಾದದ್ದು ಎಂಬರ್ಥದಲ್ಲಿ ಈ ಪದಪ್ರಯೋಗವಿದೆ. ಕರ್ಮದಿಂದ, ಮನಸ್ಸಿನಿಂದ, ಹಾಗೂ ಶರೀರದಿಂದಲೂ ಸುಂದರನೇ ಆಗಿರುವದರಿಂದ ಭಗವಂತನಿಗೆ ಈ ನಾಮವು ಅನ್ವರ್ಥವಾಗಿದೆ. **(917)** ಈಗ **ದಕ್ಷಃ** - ಎಂಬ ನಾಮವನ್ನು ನೋಡೋಣ. ಚೆನ್ನಾಗಿ ಬೆಳೆದು ಸಮರ್ಥನಾಗಿರುವವನು. ಹಾಗೂ ಕ್ಷಿಪ್ರವಾಗಿ ಕಾರ್ಯಗಳನ್ನು ನಡೆಯಿಸುವವನನ್ನು ದಕ್ಷ(ಸಮರ್ಥ)ನೆಂದು ಕರೆಯುತ್ತಾರೆ. ಭಗವಂತನು ಇಂಥವರಲ್ಲಿ ಅಗ್ರಗಣ್ಯನಾಗಿರುವದರಿಂದ ಈ ನಾಮದಿಂದ ಸ್ತುತಿಸಿದೆ. **(918)** ಈಗ **ದಕ್ಷಿಣಃ** - ಎಂಬ ನಾಮವನ್ನು ನೋಡೋಣ. ಈ ನಾಮವೂ ಭಗವಂತನ ಅಪರಿಮಿತ ಸಾಮರ್ಥ್ಯವನ್ನೇ ತಿಳಿಸುತ್ತದೆ. ಕೃಷ್ಣಾವತಾರಕಾಲಕ್ಕೆ ಭಗವಂತನು ಗೋಪರುಗಳಲ್ಲಿ ಒಬ್ಬನಂತೆ ಇದ್ದನು. ಆಗ ಇಂದ್ರನು ಮಳೆಗರೆದು ಗೋವುಗಳನ್ನೂ ಗೋಪರುಗಳನ್ನೂ ತೇಲಿಸಿಬಿಡುವಷ್ಟು ಭಯಂಕರವಾಗಿ ವೃಷ್ಟಿಯನ್ನು ಸುರಿಸಲಾಗಿ ಭಗವಂತನು ಗೋವರ್ಧನಪರ್ವತವನ್ನೇ ಎತ್ತಿಹಿಡಿದು ಗೋವುಗಳು ಗೋಪಾಲಕರನ್ನೂ ರಕ್ಷಿಸಿದನು. ಆಗ ಇಂದ್ರನೇ ನಾಚಿಕೊಂಡು ಸುಮ್ಮನಾದನು. ಇಂಥ ಪರಾಕ್ರಮ, ಧೈರ್ಯ, ಸ್ಥೈರ್ಯಗಳಿಂದ ಸಮರ್ಥನೆನಿಸಿದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(919)** ಈಗ **ಕ್ಷಮಿಣಾಂವರಃ** - ಎಂಬ ನಾಮವನ್ನು ನೋಡೋಣ. ಕ್ಷಮೆ - ಎಂದರೆ ಸಹನೆ - ಎಂದರ್ಥ. ಸಹನಗುಣವನ್ನು ಹೊಂದಿರುವವರ ಗುಂಪಿನಲ್ಲಿ ಭಗವಂತನು ಪ್ರಪ್ರಥಮನು. ಹದಿನಾಲ್ಕು ಲೋಕಗಳುಳ್ಳ ಬ್ರಹ್ಮಾಂಡವನ್ನೇ ತನ್ನ ಅಪರಿಮಿತ ಶಕ್ತಿಯಿಂದ ಧರಿಸಿದವನಾಗಿದ್ದು, ಜೀವರುಗಳ ಅಪರಾಧಗಳನ್ನೆಲ್ಲ ಕ್ಷಮಿಸಿ ಕಾಪಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(920)** ಈಗ **ವಿದ್ವತ್ತಮಃ** - ಎಂಬ ನಾಮವನ್ನು ನೋಡೋಣ. ಮಿಗಿಲಿಲ್ಲದ ಹಾಗೂ ಎಲ್ಲವನ್ನೂ ಅರಿಯುವ ಜ್ಞಾನವು ಯಾವಾಗಲೂ ಈ ಭಗವಂತನಿಗೆ ಸ್ವಭಾವದಿಂದಲೇ ಇದೆಯಾಗಿ ಈ ನಾಮವು ಬಂದಿದೆ. **(921)** ಈಗ **ವೀತಭಯಃ** - ಎಂಬ

ನಾಮವನ್ನು ನೋಡೋಣ. ಭಯವನ್ನು ಸಂಪೂರ್ಣವಾಗಿ ಕಳೆದುಕೊಂಡವನಾದ್ದರಿಂದ ಈ ನಾಮವು ಬಂದಿದೆ. ಭಗವಂತನಲ್ಲಿ ಜರಾ-ಮೃತ್ಯು-ಮುಂತಾದ ಯಾವ ಧರ್ಮಗಳೂ ಇರುವದಿಲ್ಲ. ಅವನಿಗೆ ಹುಟ್ಟುಬೆಳವಣಿಗೆ-ಯಾವವೂ ಇಲ್ಲ. ಅವನು ನಿತ್ಯಶುದ್ಧಬುದ್ಧಮುಕ್ತಸ್ವಭಾವನು. ಆದ್ದರಿಂದ ಭಯಾದಿಸಂಸಾರಧರ್ಮಗಳನ್ನು ಮೀರಿರುತ್ತಾನಾಗಿ ಈ ನಾಮವು ಬಂದಿದೆ. **(922)** ಈಗ **ಪುಣ್ಯಶ್ರವಣಕೀರ್ತನಃ** - ಎಂಬ ನಾಮವನ್ನು ನೋಡೋಣ. ಪುಣ್ಯವನ್ನು ಉಂಟುಮಾಡುವ ಭಗವಂತನ ಕಥಾ ಶ್ರವಣವೂ ಭಗವನ್ನಾಮಕೀರ್ತನೆಯೂ ಪ್ರಸಿದ್ಧವಾಗಿರುವದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ.

**ಉತ್ತರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ ।**
**ವೀರಹಾ ರಕ್ಷಣಃ ಸನ್ತೋ ಜೀವನಃ ಪರ್ಯವಸ್ಥಿತಃ ॥99॥**

**(923)** ಈಗ **ಉತ್ತರಣಃ** - ಎಂಬ ನಾಮವನ್ನು ನೋಡೋಣ. ಸಂಸಾರ ಸಾಗರದಿಂದ ಜೀವರನ್ನು ಎತ್ತಿ ಉದ್ಧಾರಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. ಆದರೆ ಸಾಧಕನು ಭಗವಂತನನ್ನೇ ಆಶ್ರಯಿಸಿರಬೇಕು. ಅವನನ್ನೇ ಚಿಂತಿಸುತ್ತಿರಬೇಕು. ಆಗ ಭಗವಂತನು ಇಂಥ ಭಕ್ತರನ್ನು ಉದ್ಧಾರಮಾಡುತ್ತಾನೆ. **(924)** ಈಗ **ದುಷ್ಕೃತಿಹಾ** - ಎಂಬ ನಾಮವನ್ನು ನೋಡೋಣ. ಮಾನವನು ಪಾಪಗಳನ್ನು ಮಾಡುತ್ತಾನಾದರೂ ಭಗವಂತನನ್ನು ಆಶ್ರಯಿಸಿ ಪ್ರಾರ್ಥಿಸಿಕೊಂಡಲ್ಲಿ ಅಂಥವನ ಪಾಪಗಳನ್ನು ನಾಶಗೊಳಿಸಿ, ಉದ್ಧಾರಮಾಡುತ್ತಾನೆ. ಆದ್ದರಿಂದ ಈ ನಾಮವು ಬಂದಿದೆ. **(925)** ಈಗ **ಪುಣ್ಯಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ನೆನೆಯುವವರಿಗೆ ಶ್ರುತಿಸ್ಮೃತಿಗಳೆಂಬ ವಾಕ್ಕುಗಳ ರೂಪದಿಂದ ಒಳ್ಳೆಯ ಕರ್ಮಗಳನ್ನು ತಿಳಿಸಿಕೊಟ್ಟು ಪುಣ್ಯಕರ್ಮಗಳನ್ನು ಮಾಡುವಂತೆ ಪ್ರೇರೇಪಿಸಿ ಅನುಗ್ರಹಿಸುತ್ತಾನಾಗಿ ಈ ನಾಮವು ಬಂದಿದೆ. **(926)** ಈಗ **ದುಃಸ್ವಪ್ನನಾಶನಃ** - ಎಂಬ ನಾಮವನ್ನು ನೋಡೋಣ. ಮನುಷ್ಯನಿಗೆ ಕೆಟ್ಟಕರ್ಮಗಳ ಫಲವಾಗಿ ನಿದ್ರೆಯಲ್ಲಿಯೂ ಅವುಗಳ ಚಿಂತೆ ಹಾಗೂ ಆಭಾಸಗಳು ತೋರುತ್ತವೆ. ಇಂಥ ಕನಸುಗಳನ್ನು ಭಗವಂತನ ಧ್ಯಾನದಿಂದಲೇ ನಾಶಗೊಳಿಸಿಕೊಳ್ಳಬೇಕಾಗಿದೆಯಾಗಿ ಈ ನಾಮವು ಬಂದಿದೆ. **(927)** ಈಗ **ವೀರಹಾ** - ಎಂಬ ನಾಮವನ್ನು ನೋಡೋಣ. ಸಂಸಾರಿಗಳಾದ ಜೀವರುಗಳ ನಾನಾ ವಿಧವಾದ ಕರ್ಮಗಳನ್ನು ಮುಕ್ತಿಯನ್ನು ಕೊಡುವದರ ಮೂಲಕ ನಾಶಗೊಳಿಸುವನಾದ್ದರಿಂದ ಈ ನಾಮದಿಂದ ಸ್ತುತಿಸಿದೆ. **(928)** ಈಗ **ರಕ್ಷಣಃ** - ಎಂಬ ನಾಮವನ್ನು ನೋಡೋಣ.

ಸತ್ತ್ವಗುಣವನ್ನಾಶ್ರಯಿಸಿ ಭಗವಂತನು ಜಗತ್ತೆಲ್ಲವನ್ನೂ ಕಾಪಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. **(929)** ಈಗ **ಸನ್ತಿಃ** - ಎಂಬ ನಾಮವನ್ನು ನೋಡೋಣ. ವಿದ್ಯೆ, ವಿನಯು, ಶ್ರದ್ಧೆ, ಭಕ್ತಿ, ಸೇವೆ - ಮುಂತಾದ ಸಾಧನಗಳಿಂದ ಸತ್ಪುರುಷರು ಧರ್ಮಮಾರ್ಗನಿರತರಾಗಿರುತ್ತಾರೆ. ಅವರುಗಳ ಆಚರಣೆ - ಚಿಂತನೆಗಳನ್ನು ಚೆನ್ನಾಗಿ ವೃದ್ಧಿಗೊಳಿಸಿ ಕೃತಾರ್ಥರನ್ನಾಗಿಮಾಡಲು ಭಗವಂತನೇ ಸಂತರರೂಪದಿಂದಲೂ ಇರುತ್ತಾನಾದ್ದರಿಂದ ಈ ನಾಮವು ಬಂದಿದೆ. **(930)** ಈಗ **ಜೀವನಃ** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಎಲ್ಲಾ ಸ್ಥಾವರಜಂಗಮರೂಪಿಗಳಾದ ಜೀವರುಗಳಿಗೂ ಪ್ರಾಣರೂಪದಿಂದ ಅನುಗ್ರಹಿಸಿ ಜೀವಿಸುವಂತೆ ಮಾಡಿರುತ್ತಾನಾದ್ದರಿಂದ ಈ ನಾಮವು ಬಂದಿರುತ್ತದೆ. **(931)** ಈಗ **ಪರ್ಯವಸ್ಥಿತಃ** - ಎಂಬ ನಾಮವನ್ನು ನೋಡೋಣ. ಎಲ್ಲೆಲ್ಲಿಯೂ ಜಗತ್ತನ್ನೆಲ್ಲ ವ್ಯಾಪಿಸಿಕೊಂಡವನಾಗಿ ಯಾವಾಗಲೂ ಇದ್ದುಕೊಂಡಿರುವನಾದ್ದರಿಂದ ಈ ನಾಮವು ಬಂದಿದೆ.

**ಅನನ್ತರೂಪೋऽನನ್ತಶ್ರೀಃ ಜಿತಮನ್ಯುರ್ಭಯಾಪಹಃ ।**
**ಚತುರಶ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥100॥**

**(932)ಅನನ್ತರೂಪಃ** - ಅನಂತ - ಎಂದರೆ ಅಪರಿಮಿತವಾದ ಹಾಗೂ ಎಣಿಸಲು ಅಸಾಧ್ಯವಾದ ರೂಪಗಳಿಂದ ಜಗತ್ತನ್ನು ವ್ಯಾಪಿಸಿದವನಾಗಿದ್ದು ನಾನಾ ರೂಪಗಳಿಂದ ಇದ್ದುಕೊಂಡಿರುವದರಿಂದ ಭಗವಂತನಿಗೆ ಅನಂತರೂಪನೆಂಬ ಈ ನಾಮವು ಬಂದಿದೆ. **(933) ಅನನ್ತಶ್ರೀಃ** - ಶ್ರೀಃ ಎಂದರೆ ಎಲ್ಲಾ ವಿಧವಾದ ವೈದಿಕಲೌಕಿಕಸಂಪತ್ತುಗಳು (ಧನಕನಕವಸ್ತುವಾಹನಾದಿಗಳು, ಬಲವೀರ್ಯ, ತೇಜ ಆದಿಗಳು, ಆಯುರಾರೋಗ್ಯ ಐಶ್ವರ್ಯಾದಿಗಳು ವಿದ್ಯಾವಿನಯ ಸಂಪತ್ತುಗಳು-ಇತ್ಯಾದಿ) ಇವೆಲ್ಲವೂ ಅಪರಿಮಿತ ವಾಗಿ ನಿತ್ಯವಾಗಿ ಶಾಶ್ವತವಾಗಿ ಪರಿಪೂರ್ಣವಾಗಿ ಯಾವನಲ್ಲಿ ತುಂಬಿರುತ್ತವೆಯೋ ಅವನೇ ಅನಂತಶ್ರೀಃ ಎನಿಸಿದ್ದಾನೆ. ಅವನು ಭಗವಾನ್ ನಾರಾಯಣನೇ - ಎಂದು ಸ್ತುತಿಸಿದೆ. **(934)** ಈಗ **ಜಿತಮನ್ಯುಃ** - ಎಂಬ ನಾಮವನ್ನುನೋಡೋಣ. ಮನ್ಯು - ಎಂದರೆ ಕೋಪ - ಎಂದರ್ಥ. ಅದನ್ನು ಗೆದ್ದಿದ್ದಾನೆ - ಎಂದರೆ ಅವನ ಸ್ವಾಧೀನದಲ್ಲಿದೆ - ಎಂದರ್ಥ. ಅಗತ್ಯವಿದ್ದಾಗ ಮಾತ್ರ ಅದನ್ನು ಉಪಯೋಗಿಸುತ್ತಾ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದಾನಾಗಿ ಈ ನಾಮವು ಬಂದಿರುತ್ತದೆ. **(935)** ಈಗ **ಭಯಾಪಹಃ** - ಎಂಬ ನಾಮವನ್ನು ನೋಡೋಣ. ಮಾನವನಿಗೆ ಸಂಸಾರನಿಮಿತ್ತವಾಗಿ ಉಂಟಾಗುವ ಭಯವನ್ನು ಕಳೆದು

ಕಾಪಾಡುತ್ತಾನಾದ್ದರಿಂದ ಈ ನಾಮವು ಬಂದಿರುತ್ತದೆ. (936) ಈಗ **ಚತುರಶ್ರಃ** - ಎಂಬ ನಾಮವನ್ನು ನೋಡೋಣ. ನಾಲ್ಕು ಮೂಲೆಗಳು ಸಮವಾಗಿರುವ ಚೌಕವನ್ನು ಚತುರಶ್ರವೆನ್ನುತ್ತಾರೆ. ಲೋಕದಲ್ಲಿ ಇದನ್ನು ಸರಿಯಾಗಿದೆ, ನ್ಯಾಯದಿಂದ ಕೂಡಿದೆ-ಎನ್ನುತ್ತಾರೆ. ಭಗವಂತನು ಜನರ ಕರ್ಮಗಳಿಗೆ ತಕ್ಕ ನ್ಯಾಯವಾದ ಫಲಗಳನ್ನು ಕೊಡುತ್ತಾನಾದ್ದರಿಂದ ಈ ನಾಮವು ಬಂದಿದೆ. (937) ಈಗ **ಗಭೀರಾತ್ಮಾ** - ಎಂಬ ನಾಮವನ್ನು ನೋಡೋಣ. ಭಗವಂತನ ಆತ್ಮವು ಎಂದರೆ ಮನಸ್ಸು ಎಂದಾಗಲಿ, ಸ್ವರೂಪನೇ ಎಂದಾಗಲಿ - ಅದು ಗಂಭೀರವಾಗಿದ್ದು ಯಾವ ರೀತಿಯಿಂದಲೂ ಅದನ್ನು ಅಳತೆಮಾಡಲು ಸಾಧ್ಯವಿಲ್ಲವಾದ್ದರಿಂದ ಈ ನಾಮವು ಬಂದಿದೆ. (938) ಈಗ **ವಿದಿಶಃ** - ಎಂಬ ನಾಮವನ್ನು ನೋಡೋಣ. ಅರ್ಹರಾದವರಿಗೆ ಅವರ ಕರ್ಮಗಳಿಗೆ ತಕ್ಕ ಫಲಗಳನ್ನು ಅನೇಕ ವಿಧವಾಗಿ ಕೊಡುವವನಾದ್ದರಿಂದ ಈ ನಾಮವು ಬಂದಿದೆ. (939) ಈಗ **ವ್ಯಾದಿಶಃ** - ಎಂಬ ನಾಮವನ್ನು ವಿಚಾರ ಮಾಡೋಣ. ನಾನಾ ರೀತಿಯಿಂದ ಅಪ್ಪಣೆಗಳನ್ನು ದೇವೇಂದ್ರನೇ ಮೊದಲಾದವರಿಗೆ ಕೊಡುತ್ತಾನಾದ್ದರಿಂದ ಈ ನಾಮವು ಬಂದಿದೆ. (940) ಈಗ **ದಿಶಃ** - ಎಂಬ ನಾಮವನ್ನು ವಿಚಾರಮಾಡೋಣ. ಮಾನವರು ಮಾಡುವ ಕರ್ಮಗಳೆಲ್ಲಕ್ಕೂ ಫಲವನ್ನು ದಿಶತಿ - ಎಂದರೆ ಕೊಡುವವನಾದ್ದರಿಂದ ಮತ್ತು ಕರ್ಮಗಳ ಫಲವನ್ನೂ ಉಪದೇಶಿಸುವವನಾದ್ದರಿಂದಲೂ ಈ ನಾಮವು ಬಂದಿದೆ.

**ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಂಗದಃ ।**
**ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥101॥**

(941) ಈಗ **ಅನಾದಿಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಆದಿಯು - ಎಂದರೆ ಕಾರಣವು ಇಲ್ಲ. ಆದರೆ ಜಗತ್ತೆಲ್ಲವೂ ಅವನಿಂದಲೇ ಹುಟ್ಟಿ ಬಂದಿರುತ್ತದೆ. ಆದ್ದರಿಂದ ಈ ನಾಮವು ಬಂದಿರುತ್ತದೆ. (942) ಈಗ **ಭೂರ್ಭುವಃ** - ಎಂಬ ನಾಮವನ್ನು ನೋಡೋಣ. ಭೂ- ಎಂದರೆ ಆಧಾರವು. ಇದು ಎಲ್ಲಾ ಜೀವರುಗಳು - ಎಂದರೆ ಚೇತನಾಚೇತನಗಳಿಗೂ ಆಶ್ರಯವಾಗಿದೆ. ಇಂಥ ಭೂಮಿಗೂ ಆಧಾರನಾಗಿರುವವನು ಭೂರ್ಭುವನೆನಿಸಿರುತ್ತಾನೆ. ಅವನೇ ಮಹಾವಿಷ್ಣುವು-ಎಂದರ್ಥ. (943) ಈಗ **ಲಕ್ಷ್ಮೀಃ** - ಎಂಬ ನಾಮವನ್ನು ನೋಡೋಣ. ವಿಷ್ಣು ಪುರಾಣದಲ್ಲಿ ಲಕ್ಷ್ಮಿಯನ್ನು ಆತ್ಮವಿದ್ಯೆಯೆಂದು ಸ್ತುತಿಸಿದೆ. ಭಗವಂತನು ಆತ್ಮವಿದ್ಯೆಯಿಂದಲೇ ಜ್ಞಾನಿಗಳಿಗೆ ದೊರಕತಕ್ಕವನಾಗಿರುವದರಿಂದ ಈ ನಾಮದಿಂದ ಸ್ತುತಿಸಿದೆ.

**(944)** ಈಗ **ಸುವೀರಃ** - ಎಂಬ ನಾಮವನ್ನು ನೋಡೋಣ. ಶೋಭನವಾದ - ಎಂದರೆ ಮಂಗಳಕರವಾದ ನಾನಾವಿಧವಾದ ಈರ- ಎಂದರೆ ಗತಿಗಳು ಉಳ್ಳವನು - ಎಂದರ್ಥ. ಭಗವಂತನು ವಿವಿಧವಾದ ಆಕಾರಗಳುಳ್ಳವನು - ಎಂದು ಇನ್ನೊಂದು ಅರ್ಥಮಾಡಿದರೆ ಮತ್ಸ್ಯಕೂರ್ಮಾದಿ ವಿವಿಧಾಕಾರಗಳನ್ನು ಹೊಂದಿರುತ್ತಾನಾಗಿ ಈ ನಾಮವು ಬಂದಿದೆ - ಎಂದೂ ಅರ್ಥಮಾಡಬಹುದು. **(945)** ಈಗ **ರುಚಿರಾಂಗದಃ** - ಎಂಬ ನಾಮವನ್ನು ನೋಡೋಣ. ಮಂಗಳಕರವಾದ ಎರಡು ಅಂಗದ(ಭುಜಕೀರ್ತಿ) ಎಂಬ ಭೂಷಣ(ಒಡವೆ)ವನ್ನು ಧರಿಸಿರುವನಾದ್ದರಿಂದ ಈ ನಾಮದಿಂದ ಸ್ತುತಿಸಿದೆ. **(946)** ಈಗ **ಜನನಃ** - ಎಂಬ ನಾಮವನ್ನು ನೋಡೋಣ. ಜಂತು(ಪ್ರಾಣಿ)ಗಳನ್ನು ಹುಟ್ಟಿಸುವವನಾದ್ದರಿಂದ ಈ ನಾಮವು ಬಂದಿದೆ. **(947)** ಈಗ **ಜನಜನ್ಮಾದಿಃ** - ಎಂಬ ನಾಮವನ್ನು ನೋಡೋಣ. ಹುಟ್ಟುವ ಸ್ವಭಾವವುಳ್ಳ ಜೀವರುಗಳಿಗೆ ಆಯಾ ದೇಹಗಳು ಬಿದ್ದುಹೋದಂತೆಲ್ಲ ಮತ್ತೆಮತ್ತೆ ಹೊಸಹೊಸ ಶರೀರಗಳು ಉಂಟಾಗಲು ಮೂಲಕಾರಣನಾಗಿರುತ್ತಾನಾಗಿ ಈ ನಾಮವು ಬಂದಿದೆ. **(948)** ಈಗ **ಭೀಮಃ** - ಎಂಬ ನಾಮವನ್ನು ನೋಡೋಣ. ಭೀಮ - ಎಂದರೆ ಭಯಂಕರನಾದವನು - ಎಂದರ್ಥ. "ಭಗವಂತನಿಗೆ ಹೆದರಿಕೊಂಡೇ ಗಾಳಿ ಬೀಸುತ್ತಿದೆ. ಸೂರ್ಯನು ಉದಯಿಸುತ್ತಾನೆ. ಮತ್ತು ಅಗ್ನಿ, ಇಂದ್ರ, ಮೃತ್ಯು- ಮುಂತಾದ ದೇವತೆಗಳು ಕೂಡ ತಮ್ಮತಮ್ಮ ಕಾರ್ಯಗಳಲ್ಲಿ ಭಗವಂತನ ಭಯದ ಹಿನ್ನೆಲೆಯಲ್ಲಿಯೇ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ' - ಎಂದು ಶ್ರುತಿವಾಕ್ಯವಿದೆ. ಆದ್ದರಿಂದ ಈ ನಾಮವು ಬಂದಿದೆ. **(949)** ಈಗ **ಭೀಮಪರಾಕ್ರಮಃ** - ಎಂಬ ನಾಮವನ್ನು ನೋಡೋಣ. ಅಸುರರಿಗೆ ಭಯವನ್ನುಂಟುಮಾಡುವಂಥ ಹೆಚ್ಚಿನ ಪರಾಕ್ರಮವು ಭಗವಂತನ ಅವತಾರಗಳಲ್ಲಿ ಕಂಡುಬರುತ್ತದೆಯಾಗಿ ಈ ನಾಮವು ಬಂದಿದೆ.

**ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ ।**
**ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥102॥**

**(950)** ಈಗ **ಆಧಾರನಿಲಯಃ** - ಎಂಬ ನಾಮವನ್ನು ನೋಡೋಣ. ಪೃಥಿವಿಯೇ ಮುಂತಾದ ಪಂಚಮಹಾಭೂತಗಳಿಂದಲೂ ಆಧಾರ(ಆಶ್ರಯ)ನಾಗಿ ಇರುವದರಿಂದ ಈ ನಾಮವು ಬಂದಿದೆ. **(951)** ಈಗ **ಅಧಾತಾ** - ಎಂಬ ನಾಮವನ್ನು ನೋಡೋಣ. ಭಗವಂತನು ತನ್ನ ಸ್ವಮಹಿಮೆಯಲ್ಲಿಯೇ ನೆಲೆಸಿದ್ದು ಬೇರೊಂದು ಆಧಾರವನ್ನು ಹೊಂದಿಲ್ಲವಾದ್ದರಿಂದ ಈ ನಾಮವು ಬಂದಿದೆ. **(952)**

ಈಗ **ಪುಷ್ಪಹಾಸಃ** - ಎಂಬ ನಾಮವನ್ನು ನೋಡೋಣ. ಮೊಗ್ಗಾಗಿರುವ ಹೂವುಗಳು ಸೂರ್ಯನ ಕಿರಣಗಳ ಸ್ಪರ್ಶದಿಂದ ಅರಳುವಂತೆ ಪ್ರಪಂಚರೂಪದಿಂದ ಭಗವಂತನು ನಾನಾ ನಾಮರೂಪಗಳಿಂದ ಹರಡಿಕೊಂಡಿರುತ್ತಾನೆ. ಈ ವಿಕಾಸನಿಮಿತ್ತ ಪುಷ್ಪಹಾಸನೆಂದು ಸ್ತುತಿಸಲ್ಪಟ್ಟಿದ್ದಾನೆ. **(953)** ಈಗ **ಪ್ರಜಾಗರಃ** - ಎಂಬ ನಾಮವನ್ನು ನೋಡೋಣ. ಭಗವಂತನು ನಿತ್ಯಬುದ್ಧಸ್ವರೂಪನಾಗಿದ್ದು ಚೆನ್ನಾಗಿ ಎಚ್ಚರವಾಗಿಯೇ ಯಾವಾಗಲೂ ಇರುತ್ತಾನೆ. ಉಪನಿಷತ್ತಿನಲ್ಲಿ ಇವನನ್ನು ತುರೀಯನೆಂದು ಕರೆದಿದೆ. ಅವಸ್ಥಾತ್ರಯ ಸಂಬಂಧವು ಇವನಿಗೆ ಇಲ್ಲ. ಆದರೆ ಎಲ್ಲಾ ಅವಸ್ಥೆಗಳಿಗೂ ಸಾಕ್ಷಿಯಾಗಿದ್ದು ಈ ನಾಮದಿಂದ ಸ್ತುತಿಸಲ್ಪಟ್ಟಿರುತ್ತಾನೆ. **(954)** ಈಗ **ಊರ್ಧ್ವಗಃ** - ಎಂಬ ನಾಮವನ್ನು ನೋಡೋಣ. ಎಲ್ಲಕ್ಕಿಂತಲೂ ಮೇಲಿರುವವನಾದ್ದರಿಂದ ಈ ನಾಮವು ಬಂದಿದೆ. ಭಗವಂತನಿಗಿಂತ ಮಿಗಿಲಾದವರು ಯಾರೂ ಇಲ್ಲ. ಗೀತೆಯಲ್ಲಿ ವಿಶ್ವರೂಪದರ್ಶನಾಧ್ಯಾಯದಲ್ಲಿ ಅರ್ಜುನನು ಭಗವಂತನನ್ನು ಸ್ತೋತ್ರಮಾಡುವಾಗ ಹೀಗೆಂದಿರುತ್ತಾನೆ. "ಪ್ರಭೋ, ನಿನಗೆ ಸಮನಾದವನೇ ಇಲ್ಲ. ಇನ್ನು ನಿನಗಿಂತ ಮಿಗಿಲಾದವನು ಎಲ್ಲಿದ್ದಾನು?" ಆದ್ದರಿಂದ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(955)** ಈಗ **ಸತ್ಪಥಾಚಾರಃ** - ಎಂಬ ನಾಮವನ್ನು ನೋಡೋಣ. ಸತ್ಪುರುಷರ ಹಾದಿ ಎಂದರೆ ನಡೆನುಡಿಗಳು - ಎಂದರ್ಥ. ಈ ನಡೆನುಡಿಗಳಿಗೆ ಆದರ್ಶವಾಗಿರುವವನು ಭಗವಂತನು - ಹೀಗೆ ಭಗವಂತನು ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(956)** ಈಗ **ಪ್ರಾಣದಃ** - ಎಂಬ ನಾಮವನ್ನು ನೋಡೋಣ. ಸಾಂದೀಪನೀಯ ಪುತ್ರ , ಪರೀಕ್ಷಿತ್‌ರಾಜ- ಮುಂತಾದವರನ್ನು ಬದುಕಿಸಿ ಕಾಪಾಡಿದನಾದ್ದರಿಂದ ಈ ನಾಮವು ಬಂದಿದೆ. **(957)** ಈಗ **ಪ್ರಣವಃ** - ಎಂಬ ನಾಮವನ್ನು ನೋಡೋಣ. ಭಗವಂತನ ನಾಮಗಳಲ್ಲಿ ಒಂದಾದ ಓಂಕಾರವು ಈ ನಾಮದಿಂದ ಪ್ರಸಿದ್ಧವಾಗಿದೆ. ಪ್ರ - ಎಂದರೆ ವಿಶೇಷವಾಗಿನವ - ಎಂದರೆ ಯಾವಾಗಲೂ ಹೊಸದಾಗಿಯೇ ಇರುವ ಓಂಕಾರವು (ಈ ನಾಮದಿಂದ ಪ್ರಸಿದ್ಧವಾಗಿದ್ದು) ಭಗವಂತನ ಸ್ತುತಿಪರವಾಗಿದೆ. **(958)** ಈಗ **ಪಣಃ** - ಎಂಬ ನಾಮವನ್ನು ನೋಡೋಣ. ಪಣ - ಎಂದರೆ ವ್ಯವಹಾರ - ಎಂಬರ್ಥವಿದೆ. ಜನರು ಮಾಡುವ ಪುಣ್ಯಕರ್ಮಗಳನ್ನು ಕೂಡಿಹಾಕಿ ಅವುಗಳ ಫಲವನ್ನು ಅಧಿಕಾರಿಯಾದವನಿಗೆ ಕೊಡುತ್ತಾನಾದ್ದರಿಂದ ಈ ನಾಮವು ಬಂದಿದೆ.

**ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ ಪ್ರಾಣಜೀವನಃ ।**
**ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥103॥**

**(959)** ಈಗ **ಪ್ರಮಾಣಮ್** - ಎಂಬ ನಾಮವನ್ನು ನೋಡೋಣ. ಪ್ರಮಿತಿ-ಎಂದರೆ ಜ್ಞಾನವು. ಅದು ಸ್ವಯಂಪ್ರಮಾಣವು. ದೀಪಕ್ಕೆ ಮತ್ತೊಂದು ದೀಪದ ಅವಶ್ಯಕತೆ ಇಲ್ಲದಿರುವಂತೆ ಸ್ವಯಂಪ್ರಮಾಣನೂ ಸರ್ವಸಾಕ್ಷಿಯೂ ಆದ ಭಗವಂತನಿಗೆ ಮತ್ತೊಂದು ಪ್ರಮಾಣದ ಆವಶ್ಯಕತೆ ಇರುವದಿಲ್ಲ. ಆದ್ದರಿಂದ ಈ ನಾಮವು ಬಂದಿದೆ. **(960)** ಈಗ **ಪ್ರಾಣನಿಲಯಃ** - ಎಂಬ ನಾಮವನ್ನು ನೋಡೋಣ. ಪ್ರಾಣನೆಂದರೆ ಜೀವನು, ಇವನಿಗೆ ಆಧಾರನಾಗಿದ್ದು ತನ್ನಲ್ಲಿಯೇ ಇವನನ್ನು ಅಡಕಮಾಡಿಕೊಂಡಿರುವನಾದ್ದರಿಂದ ಭಗವಂತನಿಗೆ ಈ ನಾಮದಿಂದ ಸ್ತುತಿಸಲ್ಪಟ್ಟಿದ್ದಾನೆ. **(961)** ಈಗ **ಪ್ರಾಣಭೃತ್** - ಎಂಬ ನಾಮವನ್ನು ನೋಡೋಣ. ಜೀವರುಗಳ ಜೀವನಾಧಾರವಾದ ಪ್ರಾಣನು ಕ್ರಿಯಾಶಕ್ತಿಸಂಪನ್ನನು. ಇವನನ್ನು ಪೋಷಣೆಮಾಡುತ್ತಿರುವವನೇ ಭಗವಂತನು. ಆದ್ದರಿಂದ ಈ ನಾಮವು ಬಂದಿದೆ. **(962)** ಈಗ **ಪ್ರಾಣಜೀವನಃ** - ಎಂಬ ನಾಮವನ್ನು ನೋಡೋಣ. ಪ್ರಾಣಿಗಳ ಜೀವನಾಧಾರಿಯೂ ನಿತ್ಯಸ್ವರೂಪನೂ ಆಗಿರುವದರಿಂದ ಭಗವಂತನನ್ನು ಈ ನಾಮದಿಂದ ಸ್ತುತಿಸಿದೆ. **(963)** ಈಗ **ತತ್ತ್ವಮ್** - ಎಂಬ ನಾಮವನ್ನು ನೋಡೋಣ. ತತ್ - ಎಂಬುದು ವ್ಯಾಕರಣದಂತೆ ಸರ್ವನಾಮವು. ಸರ್ವವೆಂದರೆ ಬ್ರಹ್ಮವು. ಅದರ ಹೆಸರು ತತ್-ಎಂಬುದಾಗಿದೆ. ಅದೇ ತತ್ತ್ವವು. ಅದು ಅಮೃತವು, ಅವಿನಾಶಿಯು. ಇಂಥ ವಸ್ತುವೇ ಪರಮಾರ್ಥವು. ಅದನ್ನೇ ಇಲ್ಲಿ ತತ್ತ್ವಮ್ ಎಂಬ ನಾಮದಿಂದ ಸ್ತುತಿಸಿದೆ. **(964)** ಈಗ **ತತ್ತ್ವವಿತ್** - ಎಂಬ ನಾಮವನ್ನು ನೋಡೋಣ. ಮೇಲೆ ತಿಳಿಸಿದಂತೆ ತತ್ತ್ವವನ್ನು ಅನುಭವದಲ್ಲಿ ಕಂಡುಕೊಂಡಿರುವಂಥ ಜ್ಞಾನಿಗಳು ಆ ಭಗವಂತನೇ ಆಗಿರುತ್ತಾರಾಗಿ ಈ ನಾಮವು ಬಂದಿದೆ. ಗೀತೆಯಲ್ಲಿರುವ "ಜ್ಞಾನೀ ತ್ವಾತ್ಮೈವಮೇ ಮತಮ್" (ಜ್ಞಾನಿಯಾದರೋ ನಾನೇ; ನನಗಿಂತ ಬೇರೆಯಲ್ಲ) ಎಂಬ ಉಪದೇಶವನ್ನು ಅನುಸಂಧಾನಮಾಡಬೇಕು. **(965)** ಈಗ **ಏಕಾತ್ಮಾ** - ಎಂಬ ನಾಮವನ್ನು ನೋಡೋಣ. ಆತ್ಮನು ಒಬ್ಬನೇ-ಎಂದಭಿಪ್ರಾಯ. ಸಮಸ್ತಜೀವರಾಶಿಗಳಿಗೂ - ಹೇಗೆ ಜಗತ್ತಿಗೆಲ್ಲ ಒಬ್ಬನೇ ಸೂರ್ಯನಿರುವಂತೆ - ಒಬ್ಬನೇ ಆತ್ಮನಿರುತ್ತಾನಾಗಿ ಈ ನಾಮವು ಬಂದಿದೆ. **(966)** ಈಗ **ಜನ್ಮಮೃತ್ಯುಜರಾತಿಗಃ** - ಎಂಬ ನಾಮವನ್ನು ನೋಡೋಣ. (1) ಹುಟ್ಟುತ್ತಾನೆ (2) ಇದ್ದಾನೆ (3)ಬೆಳವಣಿಗೆಯಲ್ಲಿದ್ದಾನೆ (4) ಬದಲಾವಣೆಯಾಗುತ್ತಾನೆ (5) ಕುಗ್ಗುತ್ತಾನೆ (6) ನಾಶಹೊಂದುತ್ತಾನೆ. ಹೀಗೆ ಆರು ಭಾವವಿಕಾರಗಳು ಜೀವನಿಗೆ ಇರುತ್ತದೆ. ಭಗವಂತನಿಗಾದರೂ, ಈ ವಿಕಾರಗಳಾವುವೂ ಇಲ್ಲ. ಇವೆಲ್ಲವನ್ನೂ ಭಗವಂತನು ದಾಟಿರುವವನಾದ್ದರಿಂದ ಈ ನಾಮವು ಬಂದಿದೆ.

**ಭೂರ್ಭುವಃಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ ।**
**ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ ॥104॥**

**(967)** ಈಗ **ಭೂರ್ಭುವಃಸ್ವಸ್ತರುಃ** - ಎಂಬ ನಾಮವನ್ನು ನೋಡೋಣ. ಭೂಃ- ಭುವಃ - ಸುವಃ - ಈ ಮೂರನ್ನು ವ್ಯಾಹೃತಿಗಳೆಂದು ಕರೆಯುತ್ತಾರೆ. ಯಜ್ಞ ಯಾಗಾದಿಗಳಲ್ಲಿ ಹೋಮಮಾಡುವಾಗ ಉಂಟಾಗಬಹುದಾದ ಕರ್ಮಲೋಪಗಳನ್ನು ಈ ಮೂರು ವ್ಯಾಹೃತಿಗಳ ಹೋಮದಿಂದ ಕರ್ತೃಗಳು ದಾಟುತ್ತಾರೆ. ಹೀಗೆ ವ್ಯಾಹೃತಿ ಹೋಮದ ಮೂಲಕ ಕರ್ಮಲೋಪಗಳನ್ನು ಭಗವಂತನು ದಾಟಿಸಿ ಸರಿಪಡಿಸುತ್ತಾನಾದ್ದರಿಂದ ಈ ನಾಮವು ಬಂದಿದೆ. **(968)** ಈಗ **ತಾರಃ** - ಎಂಬ ನಾಮವನ್ನು ನೋಡೋಣ. ಸಂಸಾರಸಮುದ್ರದಿಂದ ಜೀವರುಗಳನ್ನು ದಾಟಿಸುವವನಾದ್ದರಿಂದ ಈ ನಾಮದಿಂದ ಸ್ತುತಿಸಿದೆ. (ಇದು ಹಿಂದೆ 338ರಲ್ಲಿ ಬಂದಿದೆ.) **(969)** ಈಗ **ಸವಿತಾ** - ಎಂಬ ನಾಮವನ್ನು ನೋಡೋಣ. ಇಲ್ಲಿ ಈ ಶಬ್ದಕ್ಕೆ ತಂದೆ- ಎಂದರ್ಥಮಾಡಿದರೆ ಜಗತ್ತಿಗೆಲ್ಲ ಭಗವಂತನು ತಂದೆಯಾಗಿದ್ದಾನೆಂಬ ಅಭಿಪ್ರಾಯದಿಂದ ಹೀಗೆ ಸ್ತುತಿಸಿದೆ. **(970)** ಈಗ **ಪ್ರಪಿತಾಮಹಃ** - ಎಂಬ ನಾಮವನ್ನು ನೋಡೋಣ. ಸಂಸ್ಕೃತ ಭಾಷೆಯಲ್ಲಿ ತಂದೆಯನ್ನು 'ಪಿತಾ' ಎಂದೂ ಅಜ್ಜನನ್ನು 'ಪಿತಾಮಹ'- ಎಂದೂ ಮುತ್ತಜ್ಜನನ್ನು 'ಪ್ರಪಿತಾಮಹ'ನೆಂದೂ ವ್ಯವಹಾರವಿದೆ. ಇಲ್ಲಿ ಸೃಷ್ಟಿಕರ್ತನಾದ ಬ್ರಹ್ಮದೇವನನ್ನು ಪಿತಾಮಹನೆಂದು ಸಂಬೋಧಿಸಿ ಅವನಿಗೂ ತಂದೆಯಾದ ಭಗವಾನ್ ವಿಷ್ಣುವನ್ನು ಈ ನಾಮದಿಂದ ಸ್ತುತಿಸಿದೆ. **(971)** ಈಗ **ಯಜ್ಞಃ** - ಎಂಬ ನಾಮವನ್ನು ನೋಡೋಣ. ಯಜ - ದೇವಪೂಜಾಯಾಮ್ ಎಂಬ ಧಾತ್ವರ್ಥದಂತೆ ಇಲ್ಲಿ ಪೂಜೆಗೆ ಪ್ರಪ್ರಥಮವಾಗಿ ಅರ್ಹನಾದ, ಭಗವಾನ್ ಶ್ರೀಮಹಾವಿಷ್ಣುವನ್ನು ಈ ನಾಮದಿಂದ ಕರೆದಿದೆ. **(972)** ಈಗ **ಯಜ್ಞಪತಿಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಯಜ್ಞಪತಿ - ಎಂದರೆ, ದೇವತೋದ್ದೇಶಪೂರ್ವಕವಾಗಿ ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸುವ ಕರ್ಮವನ್ನು ಯಜ್ಞವೆಂದು ಕರೆಯುತ್ತಾರೆ. ಅದಕ್ಕೆ ಒಡೆಯನಾಗಿರುವದರಿಂದ ಈ ನಾಮವು ಬಂದಿದೆ. **(973)** ಈಗ **ಯಜ್ವಾ** - ಎಂಬ ನಾಮವನ್ನು ನೋಡೋಣ. ಯಜ್ಞವೆಂಬ ಕರ್ಮಕ್ಕೆ ಒಬ್ಬ ಕರ್ತೃವು ಬೇಕು. ಆ ಕರ್ತೃ ರೂಪದಲ್ಲಿಯೂ ಇರುವವನು ಭಗವಂತನೇ - ಎಂದು ಭಾವಿಸಿ ಈ ನಾಮದಿಂದ ಕರೆದಿದೆ. **(974)** ಈಗ **ಯಜ್ಞಾಂಗಃ** - ಎಂಬ ನಾಮವನ್ನು ನೋಡೋಣ. ಭಗವಂತನು ವರಾಹಮೂರ್ತಿಯ ಅವತಾರಕಾಲಕ್ಕೆ ಆ ಶರೀರಿಯ ಅಂಗಗಳೆಲ್ಲವೂ ಭಗವಂತನ ಅವಯವಗಳೇ ಆಗಿದ್ದು, ಪಾತಾಳದವರೆಗೆ ಮುಳುಗಿಹೋಗಿದ್ದ ಭೂ ದೇವಿಯನ್ನು ಮೇಲೆತ್ತಿ ತಂದವನಾದನು. ಆದ್ದರಿಂದ ಈ ನಾಮವು ಬಂದಿದೆ. **(975)** ಈಗ **ಯಜ್ಞವಾಹನಃ** - ಎಂಬ ನಾಮವನ್ನು ನೋಡೋಣ. ಫಲಕ್ಕೆ ಕಾರಣವಾದ ಯಜ್ಞಗಳನ್ನು ಮಾಡುವಂತೆ ಪ್ರೇರಣೆಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ.

**ಯಜ್ಞಭೃದ್ ಯಜ್ಞಕೃದ್ ಯಜ್ಞೀ ಯಜ್ಞಭುಗ್ ಯಜ್ಞಸಾಧನಃ ।**
**ಯಜ್ಞಾನ್ತಕೃದ್ ಯಜ್ಞಗುಹ್ಯಂ ಅನ್ನಮನ್ನಾದ ಏವ ಚ ॥105॥**

(976) **ಯಜ್ಞಭೃದ್** -ಯಜ್ಞವನ್ನು ಧರಿಸುತ್ತಾನೆ - ಎಂದರೆ ನಿರ್ವಹಿಸುತ್ತಾನೆ. ಎಂಬರ್ಥದಲ್ಲಿ ಯಜ್ಞಭೃತ್ - ಎಂಬ ನಾಮವು ಬಂದಿದೆ. (977)**ಯಜ್ಞಕೃದ್** - ಪ್ರಪಂಚದ ಸೃಷ್ಟಿಯ ಪ್ರಾರಂಭದಲ್ಲಿ ಹಾಗೂ ಕೊನೆಯಲ್ಲಿ ಯಜ್ಞವನ್ನು ಮಾಡುತ್ತಾನೆ - ಎಂಬ ಅರ್ಥದಲ್ಲಿ ಯಜ್ಞಕೃತ್ ಎಂಬ ಈ ನಾಮವು ಬಂದಿದೆ. (978) ಈಗ **ಯಜ್ಞೀ** - ಎಂಬ ನಾಮವನ್ನು ನೋಡೋಣ. ಅರ್ಚನಾರೂಪವಾದ ಯಜ್ಞ (ಪೂಜೆ-ಇತ್ಯಾದಿ)ವನ್ನು ಸ್ವೀಕರಿಸುವವನಾದ್ದರಿಂದ ಈ ನಾಮವು ಬಂದಿದೆ. (979) ಈಗ **ಯಜ್ಞಭುಕ್** - ಎಂಬ ನಾಮವನ್ನು ನೋಡೋಣ. ಯಜ್ಞವನ್ನು ಅನುಭವಿಸುವವನು ಅಥವಾ ಕಾಪಾಡುವವನು - ಎಂಬರ್ಥದಲ್ಲಿ ಈ ನಾಮವು ಬಂದಿದೆ. (980) ಈಗ **ಯಜ್ಞಸಾಧನಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಪಡೆದುಕೊಳ್ಳುವದಕ್ಕೆ ಯಜ್ಞಗಳು ಸಾಧನಗಳಾದ್ದರಿಂದ ಈ ನಾಮವು ಬಂದಿದೆ. (981) ಈಗ **ಯಜ್ಞಾನ್ತಕೃತ್** - ಎಂಬ ನಾಮವನ್ನು ನೋಡೋಣ. ಯಜ್ಞದ ಕೊನೆ ಎಂದರೆ ಅದರ ಫಲವು. ಆ ಫಲಪ್ರಾಪ್ತಿಯನ್ನು ಉಂಟುಮಾಡುತ್ತಾನಾದ್ದರಿಂದ ಈ ನಾಮವು ಬಂದಿದೆ. (982) ಈಗ **ಯಜ್ಞಗುಹ್ಯಮ್** - ಎಂಬ ನಾಮವನ್ನು ನೋಡೋಣ. ಯಜ್ಞಗಳಲ್ಲಿ ರಹಸ್ಯವಾದದ್ದು ಜ್ಞಾನವೆಂಬ ಯಜ್ಞವು. ಅಥವಾ ಫಲದ ಆಸೆಯನ್ನು ಬಿಟ್ಟು ಮಾಡುವ ಯಜ್ಞವೂ ಗುಹ್ಯವೆನಿಸುತ್ತದೆ. ಈ ಎರಡರ್ಥದಲ್ಲಿಯೂ ಈ ನಾಮವು ಬಂದಿದೆ. (983) ಈಗ **ಅನ್ನಮ್** - ಎಂಬ ನಾಮವನ್ನು ನೋಡೋಣ. ಜಗತ್ತಿನಲ್ಲಿರುವ ಪ್ರಾಣಿಗಳು ಹಾಗೂ ಮಾನವರು ಆಹಾರವಾಗಿ ಸ್ವೀಕರಿಸುವ ಸಸ್ಯಾಹಾರ, ಮಾಂಸಾಹಾರಾದಿಗಳನ್ನು 'ಅನ್ನ'ವೆಂದು, ಇಲ್ಲಿ ಪರಿಗಣಿಸಿದೆ. ಇದು ಭಗವಂತನ ಸೃಷ್ಟಿಯೇ ಆಗಿದ್ದು ಅವನಂತೆಯೇ ಪೂಜ್ಯವೂ ಆಗಿದೆ. 'ಅನ್ನಪೂರ್ಣೇಶ್ವರಿ' ಎಂದು ಶಾಸ್ತ್ರದಲ್ಲಿ ಗೌರವಿಸಲ್ಪಟ್ಟಿದೆ. ಆದ್ದರಿಂದ ಅನ್ನವು ಬ್ರಹ್ಮವೇ ಆಗಿದ್ದು ಈ ನಾಮದಿಂದ ಭಗವಂತನು ಇಲ್ಲಿ ಸ್ತುತಿಸಲ್ಪಟ್ಟಿದ್ದಾನೆ. (984) ಈಗ **ಅನ್ನಾದ** - ಎಂಬ ನಾಮವನ್ನು ನೋಡೋಣ. 'ಅನ್ನಮತ್ತೀತ್ಯನ್ನಾದ್ಯಃ' ಎಂಬ ವಿವರದಂತೆ ಅನ್ನರೂಪವಾದ ಆಹಾರವನ್ನು ಭಗವಂತನು ಸ್ಥಾವರ-ಜಂಗಮ ಪ್ರಾಣಿಗಳ ಜೀವನಕ್ಕಾಗಿ ಸೃಷ್ಟಿಮಾಡಿರುತ್ತಾನೆ. ಅವನು ಎಲ್ಲಾ ಪ್ರಾಣಿಗಳ ಆತ್ಮನೂ ಆಗಿದ್ದು ಆಯಾ ರೂಪದಿಂದ ಆಹಾರವನ್ನು ಸ್ವೀಕರಿಸುತ್ತಾನಾದ್ದರಿಂದ ಅನ್ನಾದನೆನಿಸಿದ್ದಾನೆ

**ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ ।**
**ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥106॥**

**(985)** ಈಗ **ಆತ್ಮಯೋನಿಃ**- ಎಂಬ ನಾಮವನ್ನು ನೋಡೋಣ. ಇಲ್ಲಿ ಯೋನಿ - ಎಂದರೆ ಕಾರಣ-ಎಂದರ್ಥ. ಜಗತ್ತಿನಲ್ಲಿರುವ ಸಮಸ್ತಜೀವರುಗಳಿಗೂ ಭಗವಂತನೇ ಕಾರಣನಾಗಿದ್ದು ಅವನಿಗೆ ಕಾರಣವು ಯಾರು? ಎಂಬ ಪ್ರಶ್ನೆಯು ಉದ್ಭವಿಸಿದಾಗ ಪರಮಾತ್ಮನಿಗೆ ಮತ್ತೊಂದು ಕಾರಣವಿಲ್ಲ - ಎಂಬರ್ಥದಲ್ಲಿ ತನಗೆ ತಾನೇ ಕಾರಣನು ಎಂಬ ಅಭಿಪ್ರಾಯದಂತೆ ಈ ನಾಮವು ಬಂದಿದೆ. **(986)** ಈಗ **ಸ್ವಯಂಜಾತಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಜನ್ಮವೆಂಬುದೇ ಇಲ್ಲ. ಆದ್ದರಿಂದ ಅವನು ಹುಟ್ಟಿರುವದಿಲ್ಲ. ಆದರೂ ಅವನಿಗೆ ಹುಟ್ಟನ್ನು ಕಲ್ಪಿಸಿದಾಗ ಅವನಿಗೆ ಅವನೇ ತಂದೆ, ತಾಯಿ - ಎಲ್ಲವೂ ಎಂದು ಸಮನ್ವಯಮಾಡಬೇಕಾಗುವದು. ಇದನ್ನೇ ಈ ನಾಮದಿಂದ ತಿಳಿಸಿದೆ. **(987)** ಈಗ **ವೈಖಾನಃ** - ಎಂಬ ನಾಮವನ್ನು ನೋಡೋಣ. ಭೂಮಿಯನ್ನು ವಿಶೇಷವಾಗಿ ಅಗೆದು ಪಾತಾಲವಾಸಿಯಾದ ಹಿರಣ್ಯಾಕ್ಷನೆಂಬ ದಾನವನನ್ನು ವರಾಹರೂಪದಿಂದ ಸಂಹರಿಸಿದನಾದ್ದರಿಂದ ಈ ನಾಮವು ಬಂದಿದೆ. **(988)** ಈಗ **ಸಾಮಗಾಯನಃ** - ಎಂಬ ನಾಮವನ್ನು ನೋಡೋಣ. ಸಾಮವೇದದ ಮಂತ್ರಗಳನ್ನು ಶಾಸ್ತ್ರಸಂಮತವಾಗಿ ಗಾನಮಾಡುವವನಾದ್ದರಿಂದ ಈ ನಾಮವು ಬಂದಿದೆ. **(989)** ಈಗ **ದೇವಕೀನಂದನಃ** - ಎಂಬ ನಾಮವನ್ನು ನೋಡೋಣ. ಕೃಷ್ಣಾವತಾರಕಾಲಕ್ಕೆ ದೇವಕಿಯ ಎಂಟನೆಯ ಮಗುವಾಗಿ ಅವತಾರಮಾಡಿ ಲೋಕ ಕಲ್ಯಾಣವನ್ನುಂಟುಮಾಡಿದ್ದರಿಂದ ಈ ನಾಮವು ಬಂದಿದೆ. **(990)** ಈಗ **ಸ್ರಷ್ಟಾ** - ಎಂಬ ನಾಮವನ್ನು ನೋಡೋಣ. ಹದಿನಾಲ್ಕು ಲೋಕಗಳನ್ನೂ ಅಲ್ಲಿಯ ಎಲ್ಲಾ ಜೀವರುಗಳನ್ನೂ ವಿಶೇಷವಾಗಿ ಸೃಷ್ಟಿಸಿದವನಾದ್ದರಿಂದ ಈ ನಾಮವು ಬಂದಿದೆ. **(991)** ಈಗ **ಕ್ಷಿತೀಶಃ** - ಎಂಬ ನಾಮವನ್ನು ನೋಡೋಣ. ಕ್ಷಿತ - ಎಂದರೆ ಭೂಮಿ. ಇಡಿಯ ಭೂಮಂಡಲಕ್ಕೆಲ್ಲ ಚಕ್ರವರ್ತಿಯಾಗಿ ಹನ್ನೊಂದು ಸಹಸ್ರವರ್ಷಗಳ ಕಾಲ ರಾಜ್ಯಭಾರಮಾಡಿದ ಶ್ರೀರಾಮಚಂದ್ರನಾಗಿ ವಿರಾಜಿಸಿದನಾದ್ದರಿಂದ ಈ ನಾಮವು ಬಂದಿದೆ. **(992)** ಈಗ **ಪಾಪನಾಶನಃ** - ಎಂಬ ನಾಮವನ್ನು ನೋಡೋಣ. ಭಗವಂತನನ್ನು ಕುರಿತು ಕೀರ್ತನೆಮಾಡಿದರೆ, ಪೂಜೆಮಾಡಿದರೆ, ಮನಸ್ಸಿನಲ್ಲಿಯೇ ಧ್ಯಾನಮಾಡಿದರೆ, ಸ್ಮರಣೆಮಾಡಿದರೂ ಮಾನವನ ಪಾಪರಾಶಿಯನ್ನೆಲ್ಲ ನಾಶಗೊಳಿಸುವನಾದ್ದರಿಂದ ಈ ನಾಮವು ಬಂದಿದೆ. ಭಗವಂತನು ನಾಶಮಾಡುವಷ್ಟು ಪಾಪಗಳನ್ನು ಮಾನವನು ಪ್ರಯತ್ನಪಟ್ಟು ಮಾಡಿದರೂ ಸಾಲುವದಿಲ್ಲವೆಂದು ಪುರಾಣಗಳಲ್ಲಿ ಹೇಳಿದೆ.

**ಶಂಖಭೃನ್ನಂದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।**
**ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥107॥**
**ಸರ್ವಪ್ರಹರಣಾಯುಧ ಓಂ ನಮ ಇತಿ ॥**

**(993) ಶಂಖಭೃತ್** - ಪಾಂಚಜನ್ಯವೆಂಬ ಶಂಖವನ್ನು ಧರಿಸಿರುವವನಾದ್ದರಿಂದ ಶಂಖಭೃತ್ - ಎಂಬ ನಾಮವು ಬಂದಿದೆ. **(994) ನನ್ದಕೀ** - ವಿದ್ಯಾಸ್ವರೂಪದ ನಂದಕ - ಎಂಬ ಖಡ್ಗವನ್ನು ಧರಿಸಿದ್ದಾನಾಗಿ ನಂದಕೀ ಎಂಬ ಈ ನಾಮವು ಬಂದಿದೆ. **(995) ಚಕ್ರೀ** - ಮನಸ್ತತ್ತ್ವರೂಪವಾದ ಸುದರ್ಶನವೆಂಬ ಚಕ್ರವನ್ನು ಧರಿಸಿರುವವನಾದ್ದರಿಂದ ಚಕ್ರೀ - ಎಂಬ ನಾಮವು ಬಂದಿದೆ. **(996) ಶಾರ್ಙ್ಗಧನ್ವಾ**- ಇಂದ್ರಿಯಗಳೇ ಮುಂತಾದ ಅಹಂಕಾರಾತ್ಮಕವಾದ ಶಾರ್ಙ್ಗ - ಎಂಬ ಧನುಸ್ಸನ್ನು ಧರಿಸಿದ್ದನಾದ್ದರಿಂದ ಈ ನಾಮವು ಬಂದಿದೆ. **(997) ಗಧಾದರಃ** - ಬುದ್ಧಿ ತತ್ತ್ವಾತ್ಮಕವಾದ ಕೌಮೋದಕೀ ಎಂಬ ಗದೆಯನ್ನು ಧರಿಸಿರುವದರಿಂದ ಈ ನಾಮವು ಬಂದಿದೆ. **(998) ರಥಾಂಗಪಾಣಿಃ** - ಸುದರ್ಶನ ಎಂಬ ಚಕ್ರವನ್ನು ಧರಿಸಿದ್ದಾನಾಗಿ (ರಥಾಂಗಪಾಣಿ) ಈ ನಾಮವು ಬಂದಿದೆ. **(999)ಅಕ್ಷೋಭ್ಯಃ** - ಶತ್ರುಗಳಿಂದ ಹಿಮ್ಮೆಟ್ಟಿಸಲು ಅಸಾಧ್ಯನಾಗಿರುವದರಿಂದ ಅಕ್ಷೋಭ್ಯನೆಂಬ ನಾಮವು ಬಂದಿದೆ. **(1000)** ಈಗ ಕಡೆಯ ನಾಮವಾದ **ಸರ್ವಪ್ರಹರಣಾಯುಧಃ** - ಎಂಬ ನಾಮವನ್ನು ನೋಡೋಣ. ಭಗವಂತನಿಗೆ ಆಯುಧಗಳೆಂಬಿವು ಇಂತಿಷ್ಟೇ ಎಂದು ಹೇಳಲಾಗುತ್ತಿಲ್ಲ. ಉದಾಹರಣೆಗೆ, ಅವನ ಉಗುರುಗಳೂ ಆಯುಧಗಳಾಗಬಹುದು. ಆದ್ದರಿಂದ 'ಸರ್ವಪ್ರಹರಣಾ ಯುಧಃ' ಎಂಬ ನಾಮವು ಬಂದಿರುತ್ತದೆ. ಮುಕ್ತಾಯ ಕಾಲಕ್ಕೆ ಮತ್ತೆ ಎರಡನೆಯ ಬಾರಿಗೆ "ಸರ್ವಪ್ರಹರಣಾಯುಧ ಓಂ ನಮ ಇತಿ" ಎಂದು ಉಪಸಂಹಾರಮಾಡಿರುತ್ತದೆ.

Z Z Z

## ಉಪಸಂಹಾರ

**ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।**
**ನಾಮ್ನಾಂ ಸಹಸ್ರಂ ದಿವ್ಯಾನಾಮಶೇಷೇಣ ಪ್ರಕೀರ್ತಿತಮ್ ॥**

ಈ ರೀತಿಯಾಗಿ ಹೆಚ್ಚು ಕಡಿಮೆಯಿಲ್ಲದೆ ಮಹಾತ್ಮನಾದ ಕೇಶವನ ಒಂದು ಸಾವಿರನಾಮಗಳು ಹೇಳಲ್ಪಟ್ಟಿರುತ್ತವೆ-ಎಂದರೆ ಕೀರ್ತನಮಾಡಲ್ಪಟ್ಟಿವೆ-ಎಂದು ಉಪಸಂಹಾರಮಾಡಿದೆ.

## ಫಲಶ್ರುತಿ

ಈಗ ಫಲಶ್ರುತಿಯನ್ನು ಅನುಸಂಧಾನಮಾಡೋಣ. ಪಾರಾಯಣಮಾಡಿದವರು ಫಲಶ್ರುತಿಯನ್ನೂ ಪಠನಮಾಡಬೇಕೆಂದು ಸಂಪ್ರದಾಯವಿದೆ. ಆದ್ದರಿಂದ ಉಪಸಂಹಾರದಲ್ಲಿರುವ ಕೆಳಗಿನ ಶ್ಲೋಕಗಳನ್ನು ನೋಡೋಣ.

**ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।**
**ನಾಶುಭಂ ಪ್ರಾಪ್ನುಯಾತ್ ಕಿಂಚಿತ್ ಸೋಽಮುತ್ರೇಹ ಚ ಮಾನವಃ ॥**

ಯಾವ ಮನುಷ್ಯನು ಇದನ್ನು ನಿತ್ಯವೂ ಕೇಳುವನೋ ಯಾವನು ಕೀರ್ತನೆ ಮಾಡುವನೋ ಅವನೂ ಇಲ್ಲಿ ಹಾಗೂ ಪರಲೋಕದಲ್ಲಿ ಸ್ವಲ್ಪವೂ ಕೆಟ್ಟದ್ದನ್ನು ಪಡೆಯಲಾರನು.

**ವೇದಾಂತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।**
**ವೈಶ್ಯೋ ಧನಸಮೃದ್ಧಃ ಸ್ಯಾತ್ ಶೂದ್ರಃ ಸುಖಮವಾಪ್ನಯಾತ್ ॥**

ಬ್ರಾಹ್ಮಣರು ವೇದಾಂತಗಳನ್ನು ಬಲ್ಲವನಾಗುವನು. ಕ್ಷತ್ರಿಯನು ವಿಜಯಿಯಾಗುವನು. ವೈಶ್ಯನು ಧನವಂತನಾಗುವನು. ಶೂದ್ರನು ಸುಖವನ್ನು ಪಡೆಯುವನು.

**ಧರ್ಮಾರ್ಥೀ ಪ್ರಾಪ್ನುಯಾತ್ಧರ್ಮಂ ಅರ್ಥಾರ್ಥೀ ಚಾರ್ಥಮಾಪ್ನುಯಾತ್ ।**
**ಕಾಮಾನವಾಪ್ನುಯಾತ್ಕಾಮೀ ಪ್ರಜಾರ್ಥೀ ಚಾಪ್ನುಯಾತ್ಪ್ರಜಾಮ್ ॥**

ಧರ್ಮವನ್ನು ಬಯಸುವವನು ಧರ್ಮವನ್ನು ಪಡೆಯುವನು. ಧನವನ್ನು ಬಯಸುವವನು ಧನವನ್ನು ಹೊಂದುವನು. ಇಷ್ಟಾರ್ಥಗಳನ್ನು ಬಯಸುವವನು

(ತಾನುಬಯಸಿದ) ಕಾಮಗಳನ್ನು ಪಡೆಯುವನು. ಪ್ರಜೆಯನ್ನು ಬಯಸುವವನು ಸಂತಾನವನ್ನು ಪಡೆಯುವನು.

**ಭಕ್ತಿಮಾನ್ ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।**
**ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ ಪ್ರಕೀರ್ತಯೇತ್ ॥**

**ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ ।**
**ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃಪ್ರಾಪ್ನೋತ್ಯನುತ್ತಮಮ್॥**

**ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿನ್ದತಿ ।**
**ಭವತ್ಯರೋಗೋ ದ್ಯುತಿಮಾನ್ ಬಲರೂಪಗುಣಾನ್ವಿತಃ ॥**

ಯಾವನು ಯಾವಾಗಲೂ ಎಚ್ಚತ್ತವನಾಗಿ ಶುಚಿಯಾಗಿ ಆ ಭಗವಂತನಲ್ಲೇ ಮನಸ್ಸಿ-ಟ್ಟವನಾಗಿ ಭಕ್ತಿಯುಳ್ಳವನಾಗಿ ವಾಸುದೇವನ ಈ ಸಹಸ್ರನಾಮವನ್ನು ಕೀರ್ತನ ಮಾಡುವನೋ (ಅವನು) ಹೆಚ್ಚಿನ ಯಶಸ್ಸನ್ನೂ ಬಂಧುಗಳಲ್ಲಿ ಗೌರವವನ್ನೂ ಪಡೆಯುವನು. ಮತ್ತು ಸ್ಥಿರವಾದ ಸಂಪತ್ತನ್ನೂ ನಿರತಿಶಯವಾದ ಶ್ರೇಯಸ್ಸನ್ನೂ ಹೊಂದುವನು. ಎಲ್ಲಿಯೂ ಭಯವನ್ನು ಹೊಂದುವದಿಲ್ಲ. ಮತ್ತು ವೀರ್ಯವನ್ನೂ ತೇಜಸ್ಸನ್ನೂ ಪಡೆಯುತ್ತಾನೆ. ರೋಗವಿಲ್ಲದವನೂ ಕಾಂತಿಯುಕ್ತನೂ ಬಲ, ರೂಪ, (ದೈವೀ) ಗುಣಗಳಿಂದ ಸಂಪನ್ನನೂ ಆಗುವನು.

**ರೋಗಾರ್ತೋ ಮುಚ್ಯತೇ ರೋಗಾತ್ ಬದ್ಧೋ ಮುಚ್ಯೇತ ಬಂಧನಾತ್ ।**
**ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥**

**ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।**
**ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥**

**ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।**
**ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥**

**ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।**
**ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥**

ರೋಗದಿಂದ ಬಳಲುತ್ತಿರುವವನು ಅದರಿಂದ ಬಿಡುಗಡೆಹೊಂದಿ (ಆರೋಗ್ಯ

ವಂತನಾಗು)ವನು. ಬಂಧನದಲ್ಲಿರುವವನು ಬಂಧದಿಂದ ಬಿಡುಗಡೆಹೊಂದುವನು. ಹೆದರಿದವನು ಭಯದಿಂದ ಮುಕ್ತನಾಗುವನು. ಸಂಕಟಕ್ಕೆ ಸಿಕ್ಕಿರುವವನು ಅದರಿಂದ ಪಾರಾಗುವನು. ಪುರುಷೋತ್ತಮನನ್ನು ನಿತ್ಯವೂ ಭಕ್ತಿಯಿಂದಕೂಡಿ ನಾಮ ಸಹಸ್ರದಿಂದ ಸ್ತೋತ್ರಮಾಡುವ ಪುರುಷನು ಬೇಗನೆ ಕಷ್ಟಗಳನ್ನು ದಾಟುವನು. ವಾಸುದೇವನನ್ನೇ ಆಶ್ರಯಿಸಿದ, ವಾಸುದೇವನೇ ಪರಮಗತಿಯೆಂದು ನಂಬಿರುವ ಮರ್ತ್ಯನಾದ ಮನುಷ್ಯನು ಎಲ್ಲಾ ಪಾಪಗಳನ್ನೂ ಕಳೆದುಕೊಂಡು ಪರಿಶುದ್ಧನಾಗಿ ಸನಾತನವಾದ ಬ್ರಹ್ಮವನ್ನೇ ಸೇರುವನು. ವಾಸುದೇವನ ಭಕ್ತರಾದವರಿಗೆ ಎಲ್ಲಿಯೂ ಕೆಟ್ಟದ್ದಾಗುವದಿಲ್ಲ. ಹುಟ್ಟು, ಸಾವು , ಮುಪ್ಪು, ರೋಗ, ಭಯ, (ಇವುಗಳು) ಎಂದಿಗೂ ಸಂಭವಿಸಲಾರವು.

**ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।**
**ಯುಜ್ಯೇತಾತ್ಮಸುಖಕ್ಷಾನ್ತಿಶ್ರೀಧೃತಿಸ್ಮೃತಿಕೀರ್ತಿಭಿಃ ॥**

ಶ್ರದ್ಧಾಭಕ್ತಿಯಿಂದೊಡಗೂಡಿದವನಾಗಿ ಈ ಸ್ತೋತ್ರವನ್ನು ಅಧ್ಯಯನಮಾಡುವವನು ಆತ್ಮಸುಖ, ಕ್ಷಾಂತಿ, ಶ್ರೀ(ಸಂಪತ್ತು), ಧೃತಿ, ಸ್ಮೃತಿ, ಕೀರ್ತಿ- ಇವುಗಳಿಂದ ಒಡಗೂಡಿದವನಾಗಿರುತ್ತಾನೆ

**ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।**
**ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥**

ಪುರುಷೋತ್ತಮನಲ್ಲಿ ಭಕ್ತರಾಗಿರುವ ಪುಣ್ಯವಂತರಿಗೆ ಕೋಪ, ಹೊಟ್ಟೆಕಿಚ್ಚು, ಜಿಪುಣತನ, ಕೆಟ್ಟಬುದ್ಧಿ- ಇವುಗಳು ಉಂಟಾಗುವದಿಲ್ಲ.

**ದ್ಯೌಃ ಸಚಂದ್ರಾರ್ಕನಕ್ಷತ್ರಾ ಖಂ ದಿಶೋ ಭೂರ್ಮಹೋದಧಿಃ ।**
**ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥**

ಚಂದ್ರ, ಸೂರ್ಯ, ನಕ್ಷತ್ರಗಳಿಂದ ದ್ಯುಲೋಕ, ಆಕಾಶ, ದಿಕ್ಕುಗಳು, ಭೂಮಿ, ದೊಡ್ಡ ಸಮುದ್ರ, (ಇವುಗಳೆಲ್ಲವೂ) ಮಹಾತ್ಮನಾದ ವಾಸುದೇವದ ವೀರ್ಯದಿಂದ ಎತ್ತಿಹಿಡಿಯಲ್ಪಟ್ಟಿರುವವು.

**ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ ।**
**ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥**

ದೇವತೆಗಳು, ದಾನವರು, ಗಂಧರ್ವರಿಂದ ಕೂಡಿದ ಮತ್ತು ಯಕ್ಷ, ಉರಗ, ರಾಕ್ಷಸರುಗಳು (ಸಹಿತವಾದ) ಈ ಚರಾಚರಾತ್ಮಕವಾದ ಜಗತ್ತು ಕೃಷ್ಣನ ಅಧೀನ ದಲ್ಲಿರುತ್ತದೆ.

**ಇಂದ್ರಿಯಾಣಿ ಮನೋಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।**
**ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥**

(ಹತ್ತು) ಇಂದ್ರಿಯಗಳು, ಮನಸ್ಸು, ಬುದ್ಧಿ, ಅಂತಃಕರಣ, ತೇಜಸ್ಸು, ಬಲ, (ಅವಸಾನವಿಲ್ಲದ) ಧೃತಿ, ಶರೀರ, ಜೀವ - ಇವೆಲ್ಲವೂ ವಾಸುದೇವಾತ್ಮಕವಾಗಿವೆ ಯೆಂದು (ತತ್ತ್ವವನ್ನು ಬಲ್ಲವರು) ಹೇಳುವರು.

**ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ ।**
**ಆಚಾರಃ ಪ್ರಥಮೋ ಧರ್ಮಃ ಧರ್ಮಸ್ಯ ಪ್ರಭುರಚ್ಯುತಃ ॥**

(ಅಧ್ಯಯನಮಾಡಬೇಕಾಗಿರುವ) ವೇದಗಳಿಗೂ ಆಚಾರವು ಮೊದಲನೆಯದಾಗಿ ಹೇಳಲ್ಪಟ್ಟಿರುತ್ತದೆ. ಆಚಾರವು ಮೊದಲನೆಯ ಧರ್ಮವು, ಅಚ್ಯುತನು ಧರ್ಮಕ್ಕೆ ಪ್ರಭುವು.

**ಋಷಯಃ ಪಿತರೋ ದೇವಾಃ ಮಹಾಭೂತಾನಿ ಧಾತವಃ ।**
**ಜಂಗಮಾಜಂಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥**

**ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿಕರ್ಮ ಚ ।**
**ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥**

**ಏಕೋ ವಿಷ್ಣುರ್ಮಹದ್ಭೂತಂ ಪೃಥಕ್ ಭೂತಾನ್ಯನೇಕಶಃ ।**
**ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥**

ಋಷಿಗಳು, ಪಿತೃಗಳು, ದೇವತೆಗಳು, (ಪಂಚ)ಮಹಾಭೂತಗಳು, ಧಾತು (ಇಂದ್ರಿಯಗಳು), ಈ ಚರಾಚರಾತ್ಮಕವಾದ ಜಗತ್ತು (ಎಲ್ಲವೂ)-ನಾರಾಯಣನಿಂದ ಹುಟ್ಟಿರುವವು. (ಜ್ಞಾನ) ಸಹಿತವಾದ ಯೋಗ ಹಾಗೂ ಸಾಂಖ್ಯ(ವಿಚಾರ)ವಿದ್ಯೆ ಮತ್ತು ಶಿಲ್ಪಾದಿಕರ್ಮಗಳು, (ನಾಲ್ಕು)ವೇದಗಳು, (ಆರು)ಶಾಸ್ತ್ರದರ್ಶನಗಳು, ವಿಜ್ಞಾನ (ಇತಿಹಾಸ-ಪುರಾಣಾದಿ) ವಿದ್ಯೆ - ಇವೆಲ್ಲವೂ ಜನಾರ್ದನನಿಂದಲೇ ಹೊರ ಬಂದಿವೆ ವಿಷ್ಣು(ವೊಬ್ಬನೇ) ಸರ್ವೋತ್ಕೃಷ್ಟವಾದ ಪರಮಾರ್ಥಸತ್ಯವು. (ಅವನೇ) ಅನೇಕ

ಪ್ರಕಾರವಾಗಿ ವಿಂಗಡವಾಗಿರುವ ಬಿಡಿಬಿಡಿಯ ಪದಾರ್ಥಗಳಾಗಿ ತೋರುತ್ತಿದ್ದಾನೆ. ಭೂತಾತ್ಮನಾದ ಅವ್ಯಯನಾದ ವಿಷ್ಣುವು ಮೂರು ಲೋಕಗಳನ್ನೂ ವ್ಯಾಪಿಸಿಕೊಂಡು ವಿಶ್ವಭುಜನೆನಿಸಿ ಎಲ್ಲವನ್ನೂ ಅನುಭವಿಸುತ್ತಿದ್ದಾನೆ.

**ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।**
**ಪಠೇದ್ ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥**

ಭಗವಂತನಾದ ವಿಷ್ಣುವಿನ ಈ ಸ್ತೋತ್ರವು ವ್ಯಾಸನಿಂದ ಹೇಳಲ್ಪಟ್ಟಿರುತ್ತದೆ. ಯಾವ ಪುರುಷನು ಶ್ರೇಯಸ್ಸನ್ನೂ ಸುಖಗಳನ್ನೂ ಪಡೆದುಕೊಳ್ಳಲೆಳಸುವನೋ (ಅವನು ಇದನ್ನು) ಪಠಿಸಬೇಕು.

**ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।**
**ಭಜನ್ತಿ ಯೇ ಪುಷ್ಕರಾಕ್ಷಂ ನ ತೇ ಯಾನ್ತಿಪರಾಭವಮ್ ॥**

ವಿಶ್ವೇಶ್ವರನೂ ಅಜನೂ ದೇವನೂ ಜಗತ್ತಿನ ಉತ್ಪತ್ತಿ-ಲಯ (ಕಾರಣನೂ) ಆದ ಪುಂಡರೀಕಾಕ್ಷನಾದ (ವಿಷ್ಣು)ವನ್ನು ಯಾರು ಭಜಿಸುವರೋ ಅವರು ಪರಾಭವವನ್ನು ಹೊಂದುವದಿಲ್ಲ.

**ಇತಿ ಶ್ರೀವಿಷ್ಣುಸಹಸ್ರನಾಮಸ್ತೋತ್ರಭಾಷ್ಯಂ**
**ಸಂಪೂರ್ಣಮ್**
**॥ಶ್ರೀಕೃಷ್ಣಾರ್ಪಣಮಸ್ತು॥**

Z Z Z

# ಪರಿಶಿಷ್ಟ - 1

## ಶ್ಲೋಕಗಳ ಅಕ್ಷರಾನುಕ್ರಮಣಿಕೆ


| ಶ್ಲೋಕ | ಸಂಖ್ಯೆ-ಪುಟ |
|---|---|
| ಅಕ್ರೂರಃ ಪೇಶಲೋ | 98-176 |
| ಅಗ್ರಣೀರ್ಗ್ರಾಮಣೀಃ ಶ್ರೀಮಾನ್ | 24-57 |
| ಅಗ್ರಾಹ್ಯಃ ಶಾಶ್ವತಃ ಕೃಷ್ಣಃ | 7-19 |
| ಅಚ್ಯುತಃ ಪ್ರಥಿತಃ ಪ್ರಾಣಃ | 35-78 |
| ಅಜಃ ಸರ್ವೇಶ್ವರಃ ಸಿದ್ಧಃ | 11-29 |
| ಅಜೋ ಮಹಾರ್ಹಃ ಸ್ವಾಭಾವ್ಯಃ | 56-117 |
| ಅಣುರ್ಬೃಹತ್ ಕೃಶಃ ಸ್ಥೂಲಃ | 90-166 |
| ಅತುಲಶ್ಶರಭೋ ಭೀಮಃ | 39-85 |
| ಅನನ್ತರೂಪೋಽನನ್ತಶ್ರೀಃ | 100-178 |
| ಅನನ್ತೋ ಹತುಭುಕ್ ಭೋಕ್ತಾ | 95-172 |
| ಅನಾದಿರ್ಭೂರ್ಭುವೋ ಲಕ್ಷ್ಮೀಃ | 101-179 |
| ಅನಿವರ್ತೀ ನಿವೃತ್ತಾತ್ಮಾ | 64-128 |
| ಅನಿರ್ವಿಣ್ಣಃ ಸ್ಥವಿಷ್ಠೋಽಭೂಃ | 47-100 |
| ಅಪ್ರಮೇಯೋ ಹೃಷೀಕೇಶಃ | 6-16 |
| ಅಮಾನೀ ಮಾನದೋ ಮಾನ್ಯಃ | 80-153 |
| ಅಮೃತಾಂಶೂದ್ಭವೋ ಭಾನುಃ | 31-70 |
| ಅಮೃತ್ಯುಃ ಸರ್ವದೃಕ್ ಸಿಂಹಃ | 22-51 |
| ಅರೌದ್ರಃ ಕುಣ್ಡಲೀ ಚಕ್ರೀ | 97-174 |
| ಅರ್ಚಿಷ್ಮಾನರ್ಚಿತಃ ಕುಂಭೋ | 68-134 |
| ಅಶೋಕಸ್ತಾರಣಂ ತಾರಃ | 37-82 |
| ಅಸಙ್ಖ್ಯೇಯೋಽಪ್ರಮೇಯಾತ್ಮಾ | 27-62 |
| ಆತ್ಮಯೋನಿಃ ಸ್ವಯಂಜಾತಃ | 106-184 |
| ಆಧಾರನಿಲಯೋಽಧಾತಾ | 102-180 |
| ಆವರ್ತನೋಽನಿವೃತ್ತಾತ್ಮಾ | 25-58 |
| ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ | 34-76 |
| ಈಶಾನಃ ಪ್ರಾಣದಃ ಪ್ರಾಣಃ | 8-21 |
| ಈಶ್ವರೋ ವಿಕ್ರಮೀ ಧನ್ವೀ | 9-23 |
| ಉತ್ತರೋ ಗೋಪತಿರ್ಗೋಪ್ತಾ | 53-112 |
| ಉತ್ತರಣೋ ದುಷ್ಕೃತಿಹಾ | 99-177 |
| ಉದೀರ್ಣಃ ಸರ್ವತಃ ಚಕ್ಷುಃ | 67-133 |
| ಉದ್ಭವಃ, ಕ್ಷೋಭಣೋ ದೇವಃ | 41-89 |
| ಉದ್ಭವಃ ಸುನ್ದರಃ ಸುನ್ದೋ | 85-160 |
| ಉಪೇನ್ದ್ರೋ ವಾಮನಃ ಪ್ರಾಂಶುಃ | 17-40 |
| ಋತುಃ ಸುದರ್ಶನಃ ಕಾಲಃ | 45-97 |
| ಏಕೋ ನೈಕಃ ಸರ್ವಃ ಕಿಃ ಕಿಮ್ | 78-148 |
| ಓಜಸ್ತೇಜೋದ್ಯುತಿಧರಃ | 30-69 |
| ಕಾಮದೇವಃ ಕಾಮಪಾಲಃ ಕಾಮೀ | 70-136 |
| ಕಾಲನೇಮಿನಿಹಾ ವೀರಃ | 69-135 |
| ಕುಮುದಃ ಕುನ್ದರಃ ಕುನ್ದಃ | 87-163 |
| ಗಭಸ್ತಿನೇಮಿಃ ಸತ್ತ್ವಸ್ಥಃ | 52-111 |
| ಗುರುರ್ಗುರುತಮೋ ಧಾಮ | 23-54 |
| ಚತುರ್ಮೂರ್ತಿಶ್ಚತುರ್ಬಾಹುಃ | 82-156 |
| ಜೀವೋ ವಿನಯಿತಾಸಾಕ್ಷೀ | 55-115 |
| ತೇಜೋ ವೃಷೋ ದ್ಯುತಿಧರಃ | 81-155 |
| ತ್ರಿಸಾಮಾ ಸಾಮಗಃ ಸಾಮ | 62-125 |
| ಧನುರ್ಧರೋ ಧನುರ್ವೇದೋ | 92-169 |
| ಧರ್ಮಗುಪ್ ಧರ್ಮಕೃದ್ಧರ್ಮೀ | 51-108 |
| ಪದ್ಮನಾಭೋಽರವಿನ್ದಾಕ್ಷಃ | 38-84 |
| ಪೂತಾತ್ಮಾ ಪರಮಾತ್ಮಾ ಚ | 2-07 |
| ಪ್ರಮಾಣಂ ಪ್ರಾಣನಿಲಯಃ | 103-181 |

| ಶ್ಲೋಕ | ಸಂಖ್ಯೆ - ಪುಟ |
|---|---|
| ಬ್ರಹ್ಮಣ್ಯೋ ಬ್ರಹ್ಮಕೃದ್ ಬ್ರಹ್ಮಾ | 71-138 |
| ಭಗವಾನ್ ಭಗಹಾಽನನ್ದೀ | 60-123 |
| ಭಾರಭೃತ್ ಕಥಿತೋ ಯೋಗೀ | 91-167 |
| ಭೂತಭವ್ಯಭವನ್ನಾಥಃ | 32-72 |
| ಭೂತಾವಾಸೋ ವಾಸುದೇವಃ | 76-146 |
| ಭೂರ್ಭುವಸ್ಸ್ವಸ್ತರುಸ್ತಾರಃ | 104-182 |
| ಭ್ರಾಜಿಷ್ಣುರ್ಭೋಜನಂ ಭೋಕ್ತಾ | 16-38 |
| ಮನೋಜವಸ್ತೀರ್ಥಕರೋ | 74-142 |
| ಮರೀಚಿರ್ದಮನೋ ಹಂಸಃ | 21-48 |
| ಮಹರ್ಷಿಃ ಕಪಿಲಾಚಾರ್ಯಃ | 57-119 |
| ಮಹಾಕ್ರಮೋ ಮಹಾಕರ್ಮಾ | 72-139 |
| ಮಹಾಬುದ್ಧಿರ್ಮಹಾವೀರ್ಯೋ | 19-45 |
| ಮಹಾವರಾಹೋ ಗೋವಿನ್ದಃ | 58-120 |
| ಮಹೇಷ್ವಾಸೋ ಮಹೀಭರ್ತಾ | 20-47 |
| ಯಜ್ಞ ಇಜ್ಯೋ ಮಹೇಜ್ಯಶ್ಚ | 48-102 |
| ಯಜ್ಞಭೃದ್ ಯಜ್ಞಕೃತ್ ಯಜ್ಞೀ | 105-183 |
| ಯುಗಾದಿಕೃತ್ ಯುಗಾವರ್ತೋ | 33-74 |
| ಯೋಗೋ ಯೋಗವಿದಾಂ ನೇತಾ | 3-10 |
| ರಾಮೋ ವಿರಾಮೋ ವಿರತೋ | 43-93 |
| ರುದ್ರೋ ಬಹುಶಿರಾ ಬಭ್ರುಃ | 13-32 |
| ಲೋಕಾಧ್ಯಕ್ಷಃ ಸುರಾಧ್ಯಕ್ಷಃ | 15-36 |
| ವಸುರ್ವಸುಮನಾಃ ಸತ್ಯಃ | 12-30 |
| ವಿಕ್ಷರೋರೋಹಿತೋ ಮಾರ್ಗೋ | 40-87 |
| ವಿಶ್ವಮೂರ್ತಿರ್ಮಹಾಮೂರ್ತಿಃ | 77-147 |
| ವಿಶ್ವಂ ವಿಷ್ಣುರ್ವಷಟ್ಕಾರೋ | 1-04 |
| ವಿಸ್ತಾರಃ ಸ್ಥಾವರಃ ಸ್ಥಾಣುಃ | 46-99 |
| ವಿಹಾಯಸಗತಿರ್ಜ್ಯೋತಿಃ | 94-171 |
| ವೃಷಾಹೀ ವೃಷಭೋ ವಿಷ್ಣುಃ | 28-65 |
| ವೇದ್ಯೋ ವೈದ್ಯಃ ಸದಾಯೋಗೀ | 18-42 |

| ಶ್ಲೋಕ | ಸಂಖ್ಯೆ - ಪುಟ |
|---|---|
| ವೇದಾಃ ಸ್ವಾಙ್ಗೋಽಜಿತಃ ಕೃಷ್ಣಃ | 59-121 |
| ವೈಕುಂಠಃ ಪುರುಷಃ ಪ್ರಾಣಃ | 44-95 |
| ವ್ಯವಸಾಯೋ ವ್ಯವಸ್ಥಾನಃ | 42-91 |
| ಶಙ್ಖಭೃನ್ನನ್ದಕೀ ಚಕ್ರೀ | 107-185 |
| ಶುಭಾಙ್ಗಃ ಶಾನ್ತಿದಃ ಸ್ರಷ್ಟಾ | 63-127 |
| ಶುಭಾಙ್ಗೋ ಲೋಕಸಾರಙ್ಗಃ | 84-159 |
| ಶ್ರೀದಃ ಶ್ರೀಶಃ ಶ್ರೀನಿವಾಸಃ | 65-129 |
| ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ | 93-170 |
| ಸದ್ಗತಿಃ ಸತ್ಕೃತಿಃ ಸತ್ತಾ | 75-144 |
| ಸನಾತ್ಸನಾತನತಮಃ | 96-173 |
| ಸಮಾವರ್ತೋಽನಿವೃತ್ತಾತ್ಮಾ | 83-157 |
| ಸರ್ವಗಸ್ಸರ್ವವಿದ್ಭಾನುಃ | 14-34 |
| ಸರ್ವಃ ಶರ್ವಃ ಶಿವಃ ಸ್ಥಾಣುಃ | 4-12 |
| ಸಹಸ್ರಾರ್ಚಿಃ ಸಪ್ತಜಿಹ್ವಃ | 89-165 |
| ಸುಧನ್ವಾಖಣ್ಡಪರಶುಃ | 61-124 |
| ಸುಪ್ರಸಾದಃ ಪ್ರಸನ್ನಾತ್ಮಾ | 26-60 |
| ಸುಭುಜೋ ದುರ್ಧರೋ ವಾಗ್ಮೀ | 29-66 |
| ಸುರೇಶಃ ಶರಣಂ ಶರ್ಮ | 10-26 |
| ಸುಲಭಃ ಸುವ್ರತಃ ಸಿದ್ಧಃ | 88-164 |
| ಸುವರ್ಣಬಿನ್ದುರಕ್ಷೋಭ್ಯಃ | 86-161 |
| ಸುವರ್ಣವರ್ಣೋ ಹೇಮಾಙ್ಗಃ | 79-151 |
| ಸುವ್ರತಃ ಸುಮುಖಃ ಸೂಕ್ಷ್ಮಃ | 49-104 |
| ಸೋಮಪೋಽಮೃತಪಃ ಸೋಮಃ | 54-114 |
| ಸ್ಕನ್ದಃ ಸ್ಕನ್ದಧರೋ ಧುರ್ಯೋ | 36-80 |
| ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಮ್ | 73-140 |
| ಸ್ವಕ್ಷಃ ಸ್ವಙ್ಗಃ ಶತಾನನ್ದಃ | 66-131 |
| ಸ್ವಯಂಭೂಃ ಶಮ್ಭುರಾದಿತ್ಯಃ | 5-15 |
| ಸ್ವಾಪನಃ ಸ್ವವಶೋ ವ್ಯಾಪೀ | 50-107 |

# ಪರಿಶಿಷ್ಟ - 2 ನಾಮಗಳ ಅಕ್ಷರಾನುಕ್ರಮಣಿಕೆ


| ನಾಮ | ಸಂಖ್ಯೆ |
| --- | --- |
| **ಅ** | |
| ಅಕ್ರೂರಃ | 915 |
| ಅಕ್ಷರಮ್ | 481 |
| ಅಕ್ಷರಃ | 17 |
| ಅಕ್ಷೋಭ್ಯಃ | 801 |
| ಅಕ್ಷೋಭ್ಯಃ | 999 |
| ಅಖಣ್ಡಪರಶುಃ | 568 |
| ಅಗ್ರಜಃ | 891 |
| ಅಗ್ರಣೀಃ | 218 |
| ಅಗ್ರಾಹ್ಯಃ | 55 |
| ಅಚಲಃ | 745 |
| ಅಚಿನ್ತ್ಯಃ | 832 |
| ಅಚ್ಯುತಃ | 100 |
| ಅಚ್ಯುತಃ | 318 |
| ಅಜಃ | 95 |
| ಅಜಃ | 204 |
| ಅಜಃ | 521 |
| ಅಜಿತಃ | 549 |
| ಅಣುಃ | 835 |
| ಅತೀನ್ದ್ರಃ | 157 |
| ಅತೀನ್ದ್ರಿಯಃ | 169 |
| ಅತುಲಃ | 355 |
| ಅದೃಶ್ಯಃ | 304 |
| ಅದ್ಭುತಃ | 895 |
| ಅಧಾತಾ | 951 |
| ಅಧಿಷ್ಠಾನಮ್ | 324 |
| ಅಧೃತಃ | 842 |
| ಅಧೋಕ್ಷಜಃ | 415 |
| ಅನಘಃ | 146 |
| ಅನಘಃ | 831 |
| ಅನನ್ತಜಿತ್ | 307 |
| ಅನನ್ತರೂಪಃ | 932 |
| ಅನನ್ತಶ್ರೀಃ | 933 |

| ನಾಮ | ಸಂಖ್ಯೆ |
| --- | --- |
| ಅನನ್ತಃ | 659 |
| ಅನನ್ತಃ | 886 |
| ಅನನ್ತಾತ್ಮಾ | 518 |
| ಅನಯಃ | 400 |
| ಅನರ್ಥಃ | 431 |
| ಅನಲಃ | 293 |
| ಅನಲಃ | 711 |
| ಅನಾದಿನಿಧನಃ | 42 |
| ಅನಾದಿಃ | 941 |
| ಅನಾಮಯಃ | 689 |
| ಅನಿಮಿಷಃ | 215 |
| ಅನಿಯಮಃ | 865 |
| ಅನಿರುದ್ಧಃ | 185 |
| ಅನಿರುದ್ಧಃ | 638 |
| ಅನಿರ್ದೇಶ್ಯವಪುಃ | 177 |
| ಅನಿರ್ದೇಶ್ಯವಪುಃ | 656 |
| ಅನಿರ್ವಿಣ್ಣಃ | 435 |
| ಅನಿರ್ವಿಣ್ಣಃ | 892 |
| ಅನಿಲಃ | 234 |
| ಅನಿಲಃ | 812 |
| ಅನಿವರ್ತೀ | 596 |
| ಅನಿವೃತ್ತಾತ್ಮಾ | 774 |
| ಅನೀಶಃ | 626 |
| ಅನುಕೂಲಃ | 342 |
| ಅನುತ್ತಮಃ | 80 |
| ಅನೇಕಮೂರ್ತಿಃ | 721 |
| ಅನ್ತಕಃ | 520 |
| ಅನ್ನಮ್ | 983 |
| ಅನ್ನಾದ | 984 |
| ಅಪರಾಜಿತಃ | 716 |
| ಅಪರಾಜಿತಃ | 862 |
| ಅಪಾಂನಿಧಿಃ | 323 |
| ಅಪ್ಯಯಃ | 900 |

| ನಾಮ | ಸಂಖ್ಯೆ |
|---|---|
| ಅಪ್ರತಿರಥಃ | 639 |
| ಅಪ್ರಮತ್ತಃ | 325 |
| ಅಪ್ರಮೇಯಃ | 46 |
| ಅಪ್ರಮೇಯಾತ್ಮಾ | 248 |
| ಅಭಿಪ್ರಾಯಃ | 871 |
| ಅಭೀಮಃ( ಭೀಮ್) | 357 |
| ಅಭೂಃ (ಭೂಃ) | 437 |
| ಅಮರಪ್ರಭುಃ | 49 |
| ಅಮಾನೀ | 747 |
| ಅಮಿತವಿಕ್ರಮಃ | 516 |
| ಅಮಿತವಿಕ್ರಮಃ | 641 |
| ಅಮಿತಾಶನಃ | 372 |
| ಅಮೂರ್ತಿಮಾನ್ | 720 |
| ಅಮೂರ್ತಿಃ | 830 |
| ಅಮೃತಪಃ | 504 |
| ಅಮೃತವಪುಃ | 814 |
| ಅಮೃತಃ | 119 |
| ಅಮೃತಾಶಃ | 813 |
| ಅಮೃತಾಂಶೂದ್ಭವಃ | 283 |
| ಅಮೃತ್ಯುಃ | 198 |
| ಅಮೇಯಾತ್ಮಾ | 102 |
| ಅಮೇಯಾತ್ಮಾ | 179 |
| ಅಮೋಘಃ | 110 |
| ಅಮೋಘಃ | 154 |
| ಅಯಮಃ | 866 |
| ಅಮ್ಭೋನಿಧಿಃ | 517 |
| ಅರವಿನ್ದಾಕ್ಷಃ | 347 |
| ಅರೌದ್ರಃ | 906 |
| ಅರ್ಕಃ | 795 |
| ಅರ್ಚಿತಃ | 634 |
| ಅರ್ಚಿಷ್ಮಾನ್ | 633 |
| ಅದ್ಭುತಃ | 895 |
| ಅರ್ಥಃ | 430 |
| ಅರ್ಹಃ | 873 |
| ಅವಿಜ್ಞಾತಾ | 482 |
| ಅವಿಧೇಯಾತ್ಮಾ | 621 |
| ಅವಿಶಿಷ್ಟಃ | 309 |
| ಅವ್ಯಕ್ತಃ | 722 |
| ಅವ್ಯಙ್ಗಃ | 129 |
| ಅವ್ಯಯಃ | 13 |
| ಅಶೋಕಃ | 336 |
| ಅಶ್ವತ್ಥಃ | 824 |
| ಅಸಂಖ್ಯೇಯಃ | 247 |
| ಅಸತ್ | 479 |
| ಅಸಮ್ಮಿತಃ | 108 |
| ಅಸುಖದಃ | 889 |
| ಅಹಸ್ಸಂವರ್ತಕಃ | 232 |
| ಅಹಃ | 90 |
| **ಆ** | |
| ಆತ್ಮಯೋನಿಃ | 985 |
| ಆತ್ಮವಾನ್ | 84 |
| ಆದಿತ್ಯಃ | 39 |
| ಆದಿತ್ಯಃ | 563 |
| ಆದಿದೇವಃ | 334 |
| ಆದಿದೇವಃ | 490 |
| ಆಧಾರನಿಲಯಃ | 950 |
| ಆನಂದೀ | 560 |
| ಆನನ್ದಃ | 526 |
| ಆವರ್ತನಃ | 228 |
| ಆಶ್ರಮ | 228 |
| ಆಶ್ರಮಃ | 852 |
| **ಇ** | |
| ಇಜ್ಯಃ | 446 |
| ಇನ್ದ್ರಕರ್ಮಾ | 786 |
| ಇಷ್ಟಃ | 308 |
| **ಈ** | |
| ಈಶಾನಃ | 64 |
| ಈಶ್ವರಃ | 36 |
| ಈಶ್ವರಃ | 74 |

| ನಾಮ | ಸಂಖ್ಯೆ |
|---|---|
| **ಉ** | |
| ಉಗ್ರಃ | 421 |
| ಉತ್ತರಃ | 494 |
| ಉತ್ತರಣಃ | 923 |
| ಉದೀರ್ಣಃ | 624 |
| ಉದುಮ್ಬರಃ | 823 |
| ಉದ್ಭವಃ | 373 |
| ಉದ್ಭವಃ | 790 |
| ಉಪೇನ್ದ್ರಃ | 151 |
| **ಊ** | |
| ಊರ್ಜಿತಶಾಸನಃ | 910 |
| ಊರ್ಜಿತಃ | 156 |
| ಊರ್ಧ್ವಗಃ | 954 |
| **ಋ** | |
| ಋತುಃ | 416 |
| ಋದ್ಧಃ | 278 |
| ಋದ್ಧಃ | 351 |
| **ಏ** | |
| ಏಕಪಾತ್ | 772 |
| ಏಕಃ | 725 |
| ಏಕಾತ್ಮಾ | 965 |
| **ಓ** | |
| ಓಜಸ್ತೇಜೋದ್ಯುತಿಧರಃ | 275 |
| **ಔ** | |
| ಔಷಧಮ್ | 287 |
| **ಕ** | |
| ಕಥಿತಃ | 848 |
| ಕನಕಾಙ್ಗದೀ | 541 |
| ಕಪಿಲಃ | 898 |
| ಕಪಿಃ | 899 |
| ಕಪೀನ್ದ್ರಃ | 501 |
| ಕರಣಮ್ | 378 |
| ಕರ್ತಾ | 380 |
| ಕವಿಃ | 132 |
| ಕಾನ್ತಃ | 296 |
| ಕಾನ್ತಃ | 654 |
| ಕಾಮಕೃತ್ | 295 |
| ಕಾಮದೇವಃ | 651 |
| ಕಾಮಪಾಲಃ | 652 |
| ಕಾಮಪ್ರದಃ | 298 |
| ಕಾಮಹಾ | 294 |
| ಕಾಮಃ | 297 |
| ಕಾಮೀ | 653 |
| ಕಾರಣಮ್ | 379 |
| ಕಾಲನೇಮಿನಿಹಾ | 642 |
| ಕಾಲಃ | 418 |
| ಕಿಮ್ | 729 |
| ಕುಣ್ಡಲೀ | 907 |
| ಕುನ್ದರಃ | 808 |
| ಕುನ್ದಃ | 809 |
| ಕುಮುದಃ | 589 |
| ಕುಮುದಃ | 807 |
| ಕುಮ್ಭಃ | 635 |
| ಕುವಲೇಶಯಃ | 590 |
| ಕೃತಕರ್ಮಾ | 788 |
| ಕೃತಜ್ಞಃ | 82 |
| ಕೃತಜ್ಞಃ | 532 |
| ಕೃತಲಕ್ಷಣಃ | 485 |
| ಕೃತಾಕೃತಃ | 136 |
| ಕೃತಾಗಮಃ | 655 |
| ಕೃತಾಗಮಃ | 789 |
| ಕೃತಾನ್ತಕೃತ್ | 537 |
| ಕೃತಿಃ | 83 |
| ಕೃಶಃ | 837 |
| ಕೃಷ್ಣಃ | 57 |
| ಕೃಷ್ಣಃ | 550 |
| ಕೇಶವಃ | 23 |
| ಕೇಶವಃ | 648 |
| ಕೇಶಿಹಾ | 649 |
| ಕಃ | 728 |

| ನಾಮ | ಸಂಖ್ಯೆ |
|---|---|
| ಕ್ರತುಃ | 448 |
| ಕ್ರಮಃ | 79 |
| ಕ್ರೋಧಕೃತ್ಕರ್ತಾ | 315 |
| ಕ್ರೋಧಹಾ | 314 |
| ಕ್ಷಮಿಣಾಂ ವರಃ | 919 |
| ಕ್ಷರಮ್ | 480 |
| ಕ್ಷಮಃ | 442 |
| ಕ್ಷಾಮಃ | 443 |
| ಕ್ಷಾಮಃ | 854 |
| ಕ್ಷಿತೀಶಃ | 991 |
| ಕ್ಷೇತ್ರಜ್ಞಃ | 16 |
| ಕ್ಷೇಮಕೃತ್ | 599 |
| ಕ್ಷೋಭಣಃ | 374 |
| **ಖ** | |
| ಖಣ್ಡ ಪರಶುಃ | 568 |
| **ಗ** | |
| ಗತಿಸತ್ತಮಃ | 566 |
| ಗದಾಗ್ರಜಃ | 764 |
| ಗದಾಧರಃ | 997 |
| ಗಭಸ್ತಿನೇಮಿಃ | 486 |
| ಗಭೀರಃ | 543 |
| ಗಭೀರಾತ್ಮಾ | 937 |
| ಗರುಡಧ್ವಜಃ | 354 |
| ಗಹನಃ | 382 |
| ಗಹನಃ | 544 |
| ಗುಣಭೃತ್ | 839 |
| ಗುಪ್ತಃ | 545 |
| ಗುರುತಮಃ | 210 |
| ಗುರುಃ | 209 |
| ಗುಹಃ | 383 |
| ಗುಹ್ಯಃ | 542 |
| ಗೋಪತಿಃ | 495 |
| ಗೋಪತಿಃ | 592 |
| ಗೋಪ್ತಾ | 496 |
| ಗೋಪ್ತಾ | 593 |
| ಗೋವಿಂದಾಂ ಪತಿಃ | 188 |
| ಗೋವಿನ್ದಃ | 187 |
| ಗೋವಿನ್ದಃ | 539 |
| ಗೋಹಿತಃ | 591 |
| ಗ್ರಾಮಣೀಃ | 219 |
| **ಘ** | |
| ಘೃತಾಶೀಃ | 744 |
| **ಚ** | |
| ಚಕ್ರಗದಾಧರಃ | 546 |
| ಚಕ್ರೀ | 908 |
| ಚಕ್ರೀ | 995 |
| ಚತುರಶ್ರಃ | 936 |
| ಚತುರಾತ್ಮಾ | 137 |
| ಚತುರಾತ್ಮಾ | 769 |
| ಚತುರ್ಗತಿಃ | 768 |
| ಚತುರ್ದಂಷ್ಟ್ರ | 139 |
| ಚತುರ್ಬಾಹುಃ | 766 |
| ಚತುರ್ಭಾವಃ | 770 |
| ಚತುರ್ಭುಜಃ | 140 |
| ಚತುರ್ಮೂರ್ತಿ | 765 |
| ಚತುರ್ವೇದವಿತ್ | 771 |
| ಚತುರ್ವ್ಯೂಹಃ | 138 |
| ಚತುರ್ವ್ಯೂಹಃ | 767 |
| ಚನ್ದನಾಙ್ಗದೀ | 740 |
| ಚನ್ದ್ರಾಂಶುಃ | 281 |
| ಚಲಃ | 746 |
| ಚಾಣೂರಾನ್ಧ್ರನಿಷೂದನಃ | 825 |
| **ಛ** | |
| ಛಿನ್ನಸಂಶಯಃ | 623 |
| **ಜ** | |
| ಜಗತಃ ಸೇತುಃ | 288 |
| ಜಗದಾದಿಜಃ | 145 |
| ಜನಜನ್ಮಾದಿಃ | 947 |
| ಜನನಃ | 946 |
| ಜನಾರ್ದನಃ | 126 |

| ನಾಮ | ಸಂಖ್ಯೆ | ನಾಮ | ಸಂಖ್ಯೆ |
|---|---|---|---|
| ಜನೇಶ್ವರಃ | 341 | ತ್ರಿವಿಕ್ರಮಃ | 530 |
| ಜನ್ಮಮೃತ್ಯುಜಗರಾತಿಗಃ | 966 | ತ್ರಿಸಾಮಾ | 574 |
| ಜಯನ್ತಃ | 798 | ತ್ವಷ್ಟಾ | 52 |
| ಜಯಃ | 509 | **ದ** | |
| ಜಹ್ನುಃ | 244 | ದಕ್ಷಃ | 423 |
| ಚಿತಕ್ರೋಧಃ | 462 | ದಕ್ಷಃ | 917 |
| ಜಿತಮನ್ಯುಃ | 934 | ದಕ್ಷಿಣಃ | 918 |
| ಜಿತಾಮಿತ್ರಃ | 524 | ದಣ್ಡಃ | 859 |
| ಜೀವನಃ | 930 | ದಮನಃ | 190 |
| ಜೀವಃ | 513 | ದಮಯಿತಾ | 860 |
| ಜೇತಾ | 148 | ದಮಃ | 861 |
| ಜೇಷ್ಠಃ | 67 | ದರ್ಪದಃ | 713 |
| ಜ್ಯೋತಿರಾದಿತ್ಯಃ | 564 | ದರ್ಪಹಾ | 712 |
| ಜ್ಯೋತಿರ್ಗಣೇಶ್ವರಃ | 619 | ದಾಮೋದರಃ | 367 |
| ಜ್ಯೋತಿಃ | 877 | ದಾರುಣಃ | 569 |
| ಜ್ಞಾನಗಮ್ಯಃ | 497 | ದಾಶಾರ್ಹಃ | 511 |
| ಜ್ಞಾನಮುತ್ತಮಮ್ | 454 | ದಿವಃಸ್ಪೃಕ್ | 571 |
| **ತ** | | ದಿಶಃ | 940 |
| ತತ್ | 731 | ದೀಪ್ತಮೂರ್ತಿಃ | 719 |
| ತತ್ತ್ವವಿತ್ | 964 | ದುರತಿಕ್ರಮಃ | 776 |
| ತತ್ತ್ವಮ್ | 963 | ದುರಾದರ್ಷಃ | 81 |
| ತನ್ತುವರ್ಧನಃ | 785 | ದುರಾರಿಹಾ | 781 |
| ತಾರಣಃ | 337 | ದುರಾವಾಸಃ | 780 |
| ತಾರಃ | 338 | ದುರ್ಗಮಃ | 778 |
| ತಾರಃ | 968 | ದುರ್ಗಃ | 779 |
| ತೀರ್ಥಕರಃ | 691 | ದುರ್ಜಯಃ | 775 |
| ತುಷ್ಟಃ | 391 | ದುರ್ಧರಃ | 266 |
| ತೇಜೋವೃಷಃ | 757 | ದುರ್ಧರಃ | 715 |
| ತ್ರಿಕಕುಬ್‌ಧಾಮ | 61 | ದುರ್ಮರ್ಷಣಃ | 205 |
| ತ್ರಿದಶಾಧ್ಯಕ್ಷಃ | 535 | ದುರ್ಲಭಃ | 777 |
| ತ್ರಿಪದಃ | 534 | ದುಷ್ಕೃತಿಹಾ | 924 |
| ತ್ರಿಲೋಕಧೃಕ್ | 751 | ದುಃಸ್ವಪ್ನನಾಶನಃ | 926 |
| ತ್ರಿಲೋಕಾತ್ಮಾ | 646 | ದೃಢಃ | 551 |
| ತ್ರಿಲೋಕೇಶಃ | 647 | ದೃಪ್ತಃ | 714 |

| ನಾಮ | ಸಂಖ್ಯೆ |
|---|---|
| ದೇವಃ | 375 |
| ದೇವಕೀನನ್ದನಃ | 989 |
| ದೇವಭೃದ್ ಗುರುಃ | 493 |
| ದೇವೇಶಃ | 492 |
| ದ್ಯುತಿಧರಃ | 758 |
| ದ್ರವಿಣಪ್ರದಃ | 570 |
| **ಧ** | |
| ಧನಞ್ಜಯಃ | 660 |
| ಧನುರ್ಧರಃ | 857 |
| ಧನುರ್ವೇದಃ | 858 |
| ಧನೇಶ್ವರಃ | 474 |
| ಧನ್ಯಃ | 754 |
| ಧನ್ವೀ | 76 |
| ಧರಣೀಧರಃ | 235 |
| ಧರಾಧರಃ | 756 |
| ಧರ್ಮಕೃತ್ | 476 |
| ಧರ್ಮಗುಪ್ | 475 |
| ಧರ್ಮಯೂಪಃ | 438 |
| ಧರ್ಮವಿದುತ್ತಮಃ | 404 |
| ಧರ್ಮಃ | 403 |
| ಧರ್ಮಾಧ್ಯಕ್ಷಃ | 135 |
| ಧರ್ಮೀ | 477 |
| ಧಾತಾ | 43 |
| ಧಾತುರತ್ತಮಃ | 45 |
| ಧಾಮ | 211 |
| ಧುರ್ಯಃ | 329 |
| ಧೃತಾತ್ಮಾ | 160 |
| ಧ್ರುವಃ | 388 |
| ದ್ಯುತಿಧರಃ | 758 |
| **ನ** | |
| ನಕ್ಷತ್ರನೇಮಿಃ | 440 |
| ನಕ್ಷತ್ರೀ | 441 |
| ನನ್ದಕೀ | 994 |
| ನನ್ದನಃ | 527 |
| ನನ್ದಃ | 528 |
| ನನ್ದಿಃ | 618 |
| ನಯಃ | 399 |
| ನರಃ | 246 |
| ನಹುಷಃ | 312 |
| ನಾರಸಿಂಹವಪುಃ | 21 |
| ನಾರಾಯಣಃ | 245 |
| ನಿಗ್ರಹಃ | 761 |
| ನಿಧಿರವ್ಯಯಃ | 30 |
| ನಿಮಿಷಃ | 214 |
| ನಿಯನ್ತಾ | 864 |
| ನಿಯಮಃ | 161 |
| ನಿರ್ಗುಣಃ | 840 |
| ನಿರ್ವಾಣಮ್ | 577 |
| ನಿವೃತ್ತಾತ್ಮಾ | 229 |
| ನಿವೃತ್ತಾತ್ಮಾ | 597 |
| ನಿಷ್ಠಾ | 583 |
| ನೇತಾ | 222 |
| ನೇಯಃ | 398 |
| ನೈಕಕರ್ಮಕೃತ್ | 469 |
| ನೈಕಜಃ | 890 |
| ನೈಕಮಾಯಃ | 302 |
| ನೈಕರೂಪಃ | 271 |
| ನೈಕಶೃಙ್ಗಃ | 763 |
| ನೈಕಃ | 726 |
| ನೈಕಾತ್ಮಾ | 468 |
| ನ್ಯಗ್ರೋಧಃ | 822 |
| ನ್ಯಾಯಃ | 221 |
| **ಪ** | |
| ಪಣಃ | 958 |
| ಪದಮನುತ್ತಮಮ್ | 732 |
| ಪದ್ಮಗರ್ಭಃ | 348 |
| ಪದ್ಮನಾಭಃ | 48 |
| ಪದ್ಮನಾಭಃ | 196 |

| ನಾಮ | ಸಂಖ್ಯೆ | ನಾಮ | ಸಂಖ್ಯೆ |
|---|---|---|---|
| ಪದ್ಮನಾಭಃ | 346 | ಪೂರಯಿತಾ | 686 |
| ಪದ್ಮನಿಭೇಕ್ಷಣಃ | 345 | ಪೂರ್ಣಃ | 685 |
| ಪದ್ಮೀ | 344 | ಪೃಥುಃ | 410 |
| ಪರಮಸ್ಪಷ್ಟಃ | 390 | ಪೇಶಲಃ | 916 |
| ಪರಮಾತ್ಮಾ | 11 | ಪ್ರಕಾಶನಃ | 274 |
| ಪರಮೇಶ್ವರಃ | 377 | ಪ್ರಕಾಶಾತ್ಮಾ | 276 |
| ಪರಮೇಷ್ಠೀ | 419 | ಪ್ರಗ್ರಹಃ | 760 |
| ಪರರ್ಧಿಃ | 389 | ಪ್ರಜಾಗರಃ | 953 |
| ಪರಾಯಣಮ್ | 585 | ಪ್ರಜಾಪತಿಃ | 69 |
| ಪರಿಗ್ರಹಃ | 420 | ಪ್ರಜಾಪತಿಃ | 197 |
| ಪರ್ಜನ್ಯಃ | 810 | ಪ್ರಜಾಭವಃ | 89 |
| ಪರ್ಯವಸ್ಥಿತಃ | 931 | ಪ್ರಣವಃ | 409 |
| ಪವನಃ | 291 | ಪ್ರಣವಃ | 957 |
| ಪವಿತ್ರಮ್ | 62 | ಪ್ರತರ್ದನಃ | 59 |
| ಪಾಪನಾಶನಃ | 992 | ಪ್ರತಾಪನಃ | 277 |
| ಪಾವನಃ | 811 | ಪ್ರತಿಷ್ಠಿತಃ | 326 |
| ಪಾವನಃ | 292 | ಪ್ರತ್ಯಯಃ | 93 |
| ಪುಣ್ಡರೀಕಾಕ್ಷಃ | 111 | ಪ್ರಥಿತಃ | 319 |
| ಪುಣ್ಯಕೀರ್ತಿಃ | 688 | ಪ್ರದ್ಯುಮ್ನಃ | 640 |
| ಪುಣ್ಯಶ್ರವಣಕೀರ್ತನಃ | 922 | ಪ್ರಧಾನಪುರುಷೇಶ್ವರಃ | 20 |
| ಪುಣ್ಯಃ | 687 | ಪ್ರಪಿತಾಮಹಃ | 970 |
| ಪುಣ್ಯಃ | 925 | ಪ್ರಭವಃ | 34 |
| ಪುನರ್ವಸುಃ | 150 | ಪ್ರಭುಃ | 35 |
| ಪುರನ್ದರಃ | 335 | ಪ್ರಭುಃ | 299 |
| ಪುರಾತನಃ | 498 | ಪ್ರಭೂತಃ | 60 |
| ಪುರುಜಿತ್ | 506 | ಪ್ರಮಾಣಮ್ | 428 |
| ಪುರುಷಃ | 14 | ಪ್ರಮಾಣಮ್ | 959 |
| ಪುರುಷಃ | 406 | ಪ್ರಮೋದಃ | 525 |
| ಪುರುಷೋತ್ತಮಃ | 24 | ಪ್ರಸನ್ನಾತ್ಮಾ | 237 |
| ಪುರುಸತ್ತಮಃ | 507 | ಪ್ರಾಗ್ವಂಶಃ | 845 |
| ಪುಷ್ಕರಾಕ್ಷಃ | 40 | ಪ್ರಾಣಜೀವನಃ | 962 |
| ಪುಷ್ಕರಾಕ್ಷಃ | 556 | ಪ್ರಾಣದಃ | 65 |
| ಪುಷ್ಟಃ | 392 | ಪ್ರಾಣದಃ | 321 |
| ಪುಷ್ಪಹಾಸಃ | 952 | ಪ್ರಾಣದಃ | 408 |
| ಪೂತಾತ್ಮಾ | 10 | ಪ್ರಾಣದಃ | 956 |

| ನಾಮ | ಸಂಖ್ಯೆ |
|---|---|
| ಪ್ರಾಣನಿಲಯಃ | 960 |
| ಪ್ರಾಣಭೃತ್ | 961 |
| ಪ್ರಾಣಃ | 66 |
| ಪ್ರಾಣಃ | 320 |
| ಪ್ರಾಣಃ | 407 |
| ಪ್ರಾಂಶುಃ | 153 |
| ಪ್ರಿಯಕೃತ್ | 874 |
| ಪ್ರಿಯಾರ್ಹಃ | 872 |
| ಪ್ರೀತಿವರ್ಧನಃ | 875 |
| **ಬ** | |
| ಬಭ್ರುಃ | 116 |
| ಬಹುಶಿರಾಃ | 115 |
| ಬೀಜಮವ್ಯಯಮ್ | 429 |
| ಬೃಹತ್ | 836 |
| ಬೃಹದ್ಭಾನುಃ | 333 |
| ಬೃಹದ್ರೂಪಃ | 272 |
| ಬ್ರಹ್ಮ | 664 |
| ಬ್ರಹ್ಮಕೃತ್ | 662 |
| ಬ್ರಹ್ಮಜ್ಞಃ | 669 |
| ಬ್ರಹ್ಮಣ್ಯಃ | 661 |
| ಬ್ರಹ್ಮವಿತ್ | 666 |
| ಬ್ರಹ್ಮವಿವರ್ಧನಃ | 665 |
| ಬ್ರಹ್ಮಾ | 663 |
| ಬ್ರಹ್ಮೀ | 668 |
| ಬ್ರಾಹ್ಮಣಪ್ರಿಯಃ | 670 |
| ಬ್ರಾಹ್ಮಣಃ | 667 |
| **ಭ** | |
| ಭಕ್ತವತ್ಸಲಃ | 736 |
| ಭಗವಾನ್ | 558 |
| ಭಗಹಾ | 559 |
| ಭಯಕೃತ್ | 833 |
| ಭಯನಾಶನಃ | 834 |
| ಭಯಾಪಹಃ | 935 |
| ಭರ್ತಾ | 33 |
| ಭಾನುಃ | 284 |
| ಭಾರಭೃತ್ | 847 |
| ಭಾವನಃ | 32 |
| ಭಾವಃ | 07 |
| ಭಾಸ್ಕರದ್ಯುತಿಃ | 282 |
| ಭಿಷಕ್ | 579 |
| ಭೀಮಪರಾಕ್ರಮಃ | 949 |
| ಭೀಮಃ | 357 |
| ಭೀಮಃ | 948 |
| ಭುಜಗೋತ್ತಮಃ | 193 |
| ಭೂಗರ್ಭಃ | 71 |
| ಭೂತಕೃತ್ | 05 |
| ಭೂತಭವ್ಯಭವತ್ಪ್ರಭುಃ | 04 |
| ಭೂತಭವ್ಯ ಭವನ್ನಾಥಃ | 290 |
| ಭೂತಭಾವನಃ | 09 |
| ಭೂತಭೃತ್ | 06 |
| ಭೂತಮಹೇಶ್ವರಃ | 489 |
| ಭೂತಾತ್ಮಾ | 08 |
| ಭೂತಾದಿಃ | 29 |
| ಭೂತಾವಾಸಃ | 708 |
| ಭೂತಿಃ | 630 |
| ಭೂರಿದಕ್ಷಿಣಃ | 502 |
| ಭೂರ್ಭುವಸ್ಸ್ವಸ್ತರುಃ | 967 |
| ಭೂರ್ಭುವಃ | 942 |
| ಭೂಶಯಃ | 628 |
| ಭೂಷಣಃ | 629 |
| ಭೂಃ | 437 |
| ಭೇಷಜಮ್ | 578 |
| ಭೋಕ್ತಾ | 143 |
| ಭೋಕ್ತಾ | 500 |
| ಭೋಕ್ತಾ | 888 |
| ಭೋಜನಮ್ | 142 |
| ಭ್ರಾಜಿಷ್ಣುಃ | 141 |
| **ಮ** | |
| ಮಙ್ಗಲಂ ಪರಮ್ | 63 |
| ಮಧುಸೂದನಃ | 73 |

| ನಾಮ | ಸಂಖ್ಯೆ | ನಾಮ | ಸಂಖ್ಯೆ |
|---|---|---|---|
| ಮಧುಃ | 168 | ಮಹಾವರಾಹಃ | 538 |
| ಮನುಃ | 51 | ಮಹಾವೀರ್ಯಃ | 174 |
| ಮನೋಜವಃ | 690 | ಮಹಾಶಕ್ತಿಃ | 175 |
| ಮನೋಹರಃ | 461 | ಮಹಾಶನಃ | 303 |
| ಮನ್ತ್ರಃ | 280 | ಮಹಾಶೃಙ್ಗಃ | 536 |
| ಮರೀಚಿಃ | 189 | ಮಹಾಸ್ವನಃ | 41 |
| ಮಹರ್ದ್ಧಿಃ | 350 | ಮಹಾಹವಿಃ | 678 |
| ಮಹರ್ಷಿಃ ಕಪಿಲಾಚಾರ್ಯಃ | 531 | ಮಹಾಹ್ರದಃ | 803 |
| ಮಹಾಕರ್ಮಾ | 672 | ಮಹೀಧರಃ | 317 |
| ಮಹಾಕರ್ಮಾ | 787 | ಮಹೀಧರಃ | 369 |
| ಮಹಾಕೋಶಃ | 432 | ಮಹೀಭರ್ತಾ | 182 |
| ಮಹಾಕ್ರತುಃ | 675 | ಮಹೇಜ್ಯಃ | 447 |
| ಮಹಾಕ್ರಮಃ | 671 | ಮಹೇನ್ದ್ರಃ | 268 |
| ಮಹಾಕ್ಷಃ | 353 | ಮಹೇಷ್ವಾಸಃ | 181 |
| ಮಹಾಗರ್ತಃ | 804 | ಮಹೋತ್ಸಾಹಃ | 171 |
| ಮಹಾತಪಾಃ | 122 | ಮಹೋದಧಿಶಯಃ | 519 |
| ಮಹಾತೇಜಾಃ | 673 | ಮಹೋರಗಃ | 674 |
| ಮಹಾದೇವಃ | 491 | ಮಾಧವಃ | 72 |
| ಮಹಾದ್ಯುತಿಃ | 176 | ಮಾಧವಃ | 167 |
| ಮಹಾದ್ರಿಧೃಕ್ | 180 | ಮಾಧವಃ | 735 |
| ಮಹಾಧನಃ | 434 | ಮಾನದಃ | 748 |
| ಮಹಾನ್ | 841 | ಮಾನ್ಯಃ | 749 |
| ಮಹಾನಿಧಿಃ | 806 | ಮಾರ್ಗಃ | 365 |
| ಮಹಾಬಲಃ | 172 | ಮಾರ್ಗಃ | 397 |
| ಮಹಾಬುದ್ಧಿಃ | 173 | ಮುಕುನ್ದಃ | 515 |
| ಮಹಾಭಾಗಃ | 370 | ಮುಕ್ತಾನಾಂ ಪರಮಾ ಗತಿಃ | 12 |
| ಮಹಾಭೂತಃ | 805 | ಮೇದಿನೀಪತಿಃ | 533 |
| ಮಹಾಭೋಗಃ | 433 | ಮೇಧಜಃ | 753 |
| ಮಹಾಮಖಃ | 439 | ಮೇಧಾವೀ | 73 |
| ಮಹಾಮನಾಃ | 557 | **ಯ** | |
| ಮಹಾಮಾಯಃ | 170 | ಯಜ್ಞಕೃದ್ | 977 |
| ಮಹಾಮೂರ್ತಿಃ | 718 | ಯಜ್ಞಗುಹ್ಯಮ್ | 982 |
| ಮಹಾಯಜ್ಞಃ | 677 | ಯಜ್ಞಪತಿಃ | 972 |
| ಮಹಾಯಜ್ವಾ | 676 | ಯಜ್ಞಭುಕ್ | 979 |
| ಮಹಾರ್ಹಃ | 522 | ಯಜ್ಞಭೃದ್ | 976 |

| ನಾಮ | ಸಂಖ್ಯೆ |
|---|---|
| ಯಜ್ಞವಾಹನಃ | 975 |
| ಯಜ್ಞಸಾಧನಃ | 980 |
| ಯಜ್ಞಃ | 445 |
| ಯಜ್ಞಃ | 971 |
| ಯಜ್ಞಾಙ್ಗಃ | 974 |
| ಯಜ್ಞಾನ್ತಕೃತ್ | 981 |
| ಯಜ್ಞೀ | 978 |
| ಯಜ್ವಾ | 973 |
| ಯತ್ | 730 |
| ಯದುಶ್ರೇಷ್ಠಃ | 705 |
| ಯಮಃ | 162 |
| ಯುಗಾದಿಕೃತ್ | 300 |
| ಯುಗಾವರ್ತಃ | 301 |
| ಯೋಗವಿದಾಂ ನೇತಾ | 19 |
| ಯೋಗಃ | 18 |
| ಯೋಗೀ | 849 |
| ಯೋಗೀಶಃ | 850 |
| **ರ** | |
| ರಕ್ಷಣಃ | 928 |
| ರಣಪ್ರಿಯಃ | 684 |
| ರತ್ನಗರ್ಭಃ | 473 |
| ರತ್ನನಾಭಃ | 793 |
| ರಥಾಙ್ಗ ಪಾಣೀಃ | 998 |
| ರವಿಲೋಚನಃ | 885 |
| ರವಿಃ | 881 |
| ರಾಮಃ | 394 |
| ರುಚಿರಾಙ್ಗದಃ | 945 |
| ರುದ್ರಃ | 114 |
| ರೋಹಿತಃ | 364 |
| **ಲ** | |
| ಲಕ್ಷ್ಮೀವಾನ್ | 361 |
| ಲಕ್ಷ್ಮೀಃ | 943 |
| ಲೋಕತ್ರಯಾಶ್ರಯಃ | 614 |
| ಲೋಕನಾಥಃ | 734 |
| ಲೋಕಬನ್ಧುಃ | 733 |
| ಲೋಕಸಾರಙ್ಗಃ | 783 |
| ಲೋಕಸ್ವಾಮೀ | 750 |
| ಲೋಕಾಧಿಷ್ಠಾನಮ್ | 894 |
| ಲೋಕಾಧ್ಯಕ್ಷಃ | 133 |
| ಲೋಹಿತಾಕ್ಷಃ | 58 |
| **ವ** | |
| ವತ್ಸರಃ | 470 |
| ವತ್ಸಲಃ | 471 |
| ವತ್ಸೀ | 472 |
| ವನಮಾಲೀ | 561 |
| ವರದಃ | 330 |
| ವರಾಙ್ಗಃ | 739 |
| ವರಾರೋಹಃ | 121 |
| ವರುಣಃ | 553 |
| ವರ್ಧನಃ | 261 |
| ವರ್ಧಮಾನಃ | 262 |
| ವಷಟ್ಕಾರಃ | 03 |
| ವಸುದಃ | 269 |
| ವಸುಪ್ರದಃ | 693 |
| ವಸುಪ್ರದಃ | 694 |
| ವಸುಮನಾಃ | 105 |
| ವಸುಮನಾಃ | 697 |
| ವಸುರೇತಾಃ | 692 |
| ವಸುಃ | 104 |
| ವಸುಃ | 270 |
| ವಸುಃ | 696 |
| ವಹ್ನಿಃ | 233 |
| ವಾಗ್ಮೀ | 267 |
| ವಾಚಸ್ಪತಿರಯೋನಿಜಃ | 573 |
| ವಾಚಸ್ಪತಿರುದಾರಧೀಃ | 217 |
| ವಾಜಸನಃ | 796 |
| ವಾಮನಃ | 152 |
| ವಾಯುವಾಹನಃ | 331 |
| ವಾಯುವಾಹನಃ | 856 |
| ವಾಯುಃ | 414 |

| ನಾಮ | ಸಂಖ್ಯೆ | ನಾಮ | ಸಂಖ್ಯೆ |
|---|---|---|---|
| ವಾರುಣಃ | 554 | ವಿಶ್ವಧೃಕ್ | 238 |
| ವಾಸವಾನುಜಃ | 322 | ವಿಶ್ವಬಾಹುಃ | 316 |
| ವಾಸುದೇವಃ | 332 | ವಿಶ್ವಭುಕ್ | 239 |
| ವಾಸುದೇವಃ | 695 | ವಿಶ್ವಮೂರ್ತಿಃ | 717 |
| ವಾಸುದೇವಃ | 709 | ವಿಶ್ವಯೋನೀಃ | 117 |
| ವಿಕರ್ತಾ | 381 | ವಿಶ್ವಯೋನಿಃ | 149 |
| ವಿಕ್ರಮಃ | 78 | ವಿಶ್ವರೇತಾಃ | 88 |
| ವಿಕ್ರಮೀ | 75 | ವಿಶ್ವಾತ್ಮಾ | 225 |
| ವಿಕ್ರಮೀ | 909 | ವಿಷಮಃ | 742 |
| ವಿಕ್ಷರಃ | 363 | ವಿಷ್ಣುಃ | 02 |
| ವಿಜಯಃ | 147 | ವಿಷ್ಣುಃ | 258 |
| ವಿಜಿತಾತ್ಮಾ | 620 | ವಿಷ್ಣುಃ | 657 |
| ವಿದಾರಣಃ | 464 | ವಿಷ್ವಕ್ಸೇನಃ | 125 |
| ವಿದಿಶಃ | 938 | ವಿಸ್ತಾರಃ | 426 |
| ವಿದ್ವತ್ತಮಃ | 920 | ವಿಹಾಯಸಗತಿಃ | 876 |
| ವಿಧಾತಾ | 44 | ವೀತಭಯಃ | 921 |
| ವಿಧಾತಾ | 484 | ವೀರಬಾಹುಃ | 463 |
| ವಿನಯಃ | 508 | ವೀರಹಾ | 166 |
| ವಿನಯಿತಾಽಸಾಕ್ಷೀ | 514 | ವೀರಹಾ | 741 |
| ವಿಭುಃ | 240 | ವೀರಹಾ | 927 |
| ವಿಭುಃ | 880 | ವೀರಃ | 401 |
| ವಿಮುಕ್ತಾತ್ಮಾ | 452 | ವೀರಃ | 643 |
| ವಿರತಃ | 396 | ವೀರಃ | 658 |
| ವಿರಾಮಃ | 395 | ವೃಕ್ಷಃ | 555 |
| ವಿರೋಚನಃ | 882 | ವೃದ್ಧಾತ್ಮಾ | 352 |
| ವಿವಿಕ್ತಃ | 263 | ವೃಷಕರ್ಮಾ | 112 |
| ವಿಶಿಷ್ಟಃ | 249 | ವೃಷಪರ್ವಾ | 259 |
| ವಿಶುದ್ಧಾತ್ಮಾ | 636 | ವೃಷಪ್ರಿಯಃ | 595 |
| ವಿಶೋಕಃ | 631 | ವೃಷಭಃ | 257 |
| ವಿಶೋಧನಃ | 637 | ವೃಷಭಾಕ್ಷಃ | 594 |
| ವಿಶ್ರಾಮಃ | 424 | ವೃಷಃ | 313 |
| ವಿಶ್ರುತಾತ್ಮಾ | 207 | ವೃಷಾಕಪಿಃ | 101 |
| ವಿಶ್ವಮ್ | 01 | ವೃಷಾಕೃತಿಃ | 113 |
| ವಿಶ್ವಕರ್ಮಾ | 50 | ವೃಷಾಹೀ | 256 |
| ವಿಶ್ವದಕ್ಷಿಣಃ | 425 | ವೃಷೋದರಃ | 260 |

| ನಾಮ | ಸಂಖ್ಯೆ |
|---|---|
| ವೇಗವಾನ್ | 371 |
| ವೇದವಿತ್ | 128 |
| ವೇದವಿತ್ | 131 |
| ವೇದಃ | 127 |
| ವೇದಾಙ್ಗಃ | 130 |
| ವೇದ್ಯಃ | 163 |
| ವೇಧಾಃ | 547 |
| ವೈಕುಂಠಃ | 405 |
| ವೈಖಾನಃ | 987 |
| ವೈದ್ಯಃ | 164 |
| ವಂಶವರ್ಧನಃ | 846 |
| ವ್ಯಕ್ತರೂಪಃ | 305 |
| ವ್ಯಗ್ರಃ | 762 |
| ವ್ಯವಸಾಯಃ | 384 |
| ವ್ಯವಸ್ಥಾನಃ | 385 |
| ವ್ಯಾದಿಶಃ | 939 |
| ವ್ಯಾಪೀ | 467 |
| ವ್ಯಾಪ್ತಃ | 413 |
| ವ್ಯಾಲಃ | 92 |
| ವ್ಯಾಸಃ | 572 |
| **ಶ** | |
| ಶಕ್ತಿಮತಾಂ ಶ್ರೇಷ್ಠಃ | 402 |
| ಶಙ್ಖಭೃತ್ | 993 |
| ಶತಮೂರ್ತಿಃ | 723 |
| ಶತಾನನಃ | 724 |
| ಶತಾನನ್ದಃ | 617 |
| ಶತಾವರ್ತಃ | 343 |
| ಶತ್ರುಘ್ನಃ | 412 |
| ಶತ್ರುಜಿತ್ | 820 |
| ಶತ್ರುತಾಪನಃ | 821 |
| ಶಬ್ದಸಹಃ | 912 |
| ಶಬ್ದಾತಿಗಃ | 911 |
| ಶಮಃ | 581 |
| ಶಮ್ಭುಃ | 38 |
| ಶರಣಮ್ | 86 |

| ನಾಮ | ಸಂಖ್ಯೆ |
|---|---|
| ಶರಭಃ | 356 |
| ಶರೀರಭೂತಭೃತ್ | 499 |
| ಶರೀರಭೃತ್ | 349 |
| ಶರ್ಮ | 87 |
| ಶರ್ವರೀಕರಃ | 914 |
| ಶರ್ವಃ | 26 |
| ಶಶಬಿನ್ದುಃ | 285 |
| ಶಾನ್ತಃ | 582 |
| ಶಾನ್ತಿದಃ | 587 |
| ಶಾನ್ತಿಃ | 584 |
| ಶಾರ್ಙ್ಗಧನ್ವಾ | 996 |
| ಶಾಶ್ವತಸ್ಥಾಣುಃ | 120 |
| ಶಾಶ್ವತಸ್ಥಿರಃ | 627 |
| ಶಾಶ್ವತಃ | 56 |
| ಶಾಸ್ತಾ | 206 |
| ಶಿಖಣ್ಡೀ | 311 |
| ಶಿಪಿವಿಷ್ಟಃ | 273 |
| ಶಿವಃ | 27 |
| ಶಿವಃ | 600 |
| ಶಿಶಿರಃ | 913 |
| ಶಿಷ್ಟಕೃತ್ | 250 |
| ಶಿಷ್ಟೇಷ್ಟಃ | 310 |
| ಶುಚಿಶ್ರವಾಃ | 118 |
| ಶುಚಿಃ | 155 |
| ಶುಚಿಃ | 251 |
| ಶುಭಾಙ್ಗಃ | 586 |
| ಶುಭಾಙ್ಗಃ | 782 |
| ಶುಭೇಕ್ಷಣಃ | 393 |
| ಶೂನ್ಯಃ | 743 |
| ಶೂರಜನೇಶ್ವರಃ | 645 |
| ಶೂರಸೇನಃ | 704 |
| ಶೂರಃ | 339 |
| ಶೃಙ್ಗೀ | 797 |
| ಶೋಕನಾಶನಃ | 632 |
| ಶೌರಿಃ | 340 |

| ನಾಮ | ಸಂಖ್ಯೆ | ನಾಮ | ಸಂಖ್ಯೆ |
|---|---|---|---|
| ಶೌರಿಃ | 644 | ಸತ್ಯಧರ್ಮಪರಾಯಣಃ | 870 |
| ಶ್ರಮಣಃ | 853 | ಸತ್ಯಧರ್ಮಾ | 529 |
| ಶ್ರೀಕರಃ | 611 | ಸತ್ಯಪರಾಕ್ರಮಃ | 213 |
| ಶ್ರೀಗರ್ಭಃ | 376 | ಸತ್ಯಮೇಧಾಃ | 755 |
| ಶ್ರೀದಃ | 605 | ಸತ್ಯಸನ್ಧಃ | 510 |
| ಶ್ರೀಧರಃ | 610 | ಸತ್ಯಃ | 106 |
| ಶ್ರೀನಿಧಿಃ | 608 | ಸತ್ಯಃ | 212 |
| ಶ್ರೀನಿವಾಸಃ | 183 | ಸತ್ಯಃ | 869 |
| ಶ್ರೀನಿವಾಸಃ | 607 | ಸತ್ರಮ್ | 449 |
| ಶ್ರೀಪತಿಃ | 603 | ಸತ್ತ್ವವಾನ್ | 867 |
| ಶ್ರೀಮತಾಂ ವರಃ | 604 | ಸತ್ತ್ವಸ್ಥಃ | 487 |
| ಶ್ರೀಮಾನ್ | 22 | ಸದಾಮರ್ಷೀ | 893 |
| ಶ್ರೀಮಾನ್ | 178 | ಸದಾಯೋಗೀ | 165 |
| ಶ್ರೀಮಾನ್ | 220 | ಸದ್ಗತಿಃ | 699 |
| ಶ್ರೀಮಾನ್ | 613 | ಸದ್ಭೂತಿಃ | 702 |
| ಶ್ರೀವತ್ಸವಕ್ಷಾಃ | 601 | ಸನಾತ್ | 896 |
| ಶ್ರೀವಾಸಃ | 602 | ಸನಾತನತಮಃ | 897 |
| ಶ್ರೀವಿಭಾವನಃ | 609 | ಸನ್ತಃ | 929 |
| ಶ್ರೀಶಃ | 606 | ಸನ್ಧಾತಾ | 201 |
| ಶ್ರುತಿಸಾಗರಃ | 264 | ಸನ್ಧಿಮಾನ್ | 202 |
| ಶ್ರೇಯಃ | 612 | ಸನ್ನಿವಾಸಃ | 706 |
| ಶ್ರೇಷ್ಠಃ | 68 | ಸಂನ್ಯಾಸಕೃತ್ | 580 |
| **ಸ** | | ಸಪ್ತಜಿಹ್ವಃ | 827 |
| ಸಙ್ಕರ್ಷಣೋಽಚ್ಯುತಃ | 552 | ಸಪ್ತವಾಹನಃ | 829 |
| ಸಙ್ಗ್ರಹಃ | 158 | ಸಪ್ತೈಧಾಃ | 828 |
| ಸತ್ | 478 | ಸಮಯಜ್ಞಃ | 358 |
| ಸತಾಂಗತಿಃ | 184 | ಸಮಃ | 109 |
| ಸತಾಂ ಗತಿಃ | 450 | ಸಮಾತ್ಮಾ | 107 |
| ಸತ್ಕರ್ತಾ | 241 | ಸಮಾವರ್ತಃ | 773 |
| ಸತ್ಕೀರ್ತಿಃ | 622 | ಸಮಿತಿಂಜಯಃ | 362 |
| ಸತ್ಕೃತಃ | 242 | ಸಮೀಹನಃ | 444 |
| ಸತ್ಕೃತಿಃ | 700 | ಸಮೀರಣಃ | 223 |
| ಸತ್ತಾ | 701 | ಸಂಪ್ರಮರ್ದನಃ | 231 |
| ಸತ್ಪಥಾಚಾರಃ | 955 | ಸಂಭವಃ | 31 |
| ಸತ್ಪರಾಯಣಮ್ | 703 | ಸರ್ಗಃ | 159 |
| ಸತ್ಯಧರ್ಮಪರಾಕ್ರಮಃ | 289 | ಸರ್ವಕಾಮದಃ | 851 |

| ನಾಮ | ಸಂಖ್ಯೆ | ನಾಮ | ಸಂಖ್ಯೆ |
|---|---|---|---|
| ಸರ್ವಗಃ | 123 | ಸಾಧುಃ | 243 |
| ಸರ್ವಜ್ಞಃ | 453 | ಸಾಮ | 576 |
| ಸರ್ವಜ್ಞಃ | 815 | ಸಾಮಗಃ | 575 |
| ಸರ್ವತಶ್ಚಕ್ಷುಃ | 625 | ಸಾಮಗಾಯನಃ | 988 |
| ಸರ್ವತೋಮುಖಃ | 816 | ಸಿದ್ಧಸಙ್ಕಲ್ಪಃ | 253 |
| ಸರ್ವದರ್ಶನಃ | 94 | ಸಿದ್ಧಃ | 97 |
| ಸರ್ವದರ್ಶೀ | 451 | ಸಿದ್ಧಃ | 819 |
| ಸರ್ವದೃಕ್ | 199 | ಸಿದ್ಧಾರ್ಥಃ | 252 |
| ಸರ್ವದೃಕ್ವ್ಯಾಸಃ | 572 | ಸಿದ್ಧಿದಃ | 254 |
| ಸರ್ವಪ್ರಹರಣಾಯುಧಃ | 1000 | ಸಿದ್ಧಿಸಾಧನಃ | 255 |
| ಸರ್ವಯೋಗವಿನಿಃಸೃತಃ | 103 | ಸಿಂಹಃ | 488 |
| ಸರ್ವವಾಗೀಶ್ವರೇಶ್ವರಃ | 802 | ಸಿಂಹಃ | 200 |
| ಸರ್ವಲಕ್ಷಣಲಕ್ಷಣ್ಯಃ | 360 | ಸಿದ್ಧಿಃ | 98 |
| ಸರ್ವವಿಜ್ಜಯೀ | 799 | ಸುಖದಃ | 459 |
| ಸರ್ವವಿದ್ಭಾನುಃ | 124 | ಸುಖದಃ | 889 |
| ಸರ್ವಶಸ್ತ್ರಭೃತಾಂ ವರಃ | 759 | ಸುಘೋಷಃ | 458 |
| ಸರ್ವಸಹಃ | 863 | ಸುತನ್ತುಃ | 784 |
| ಸರ್ವಃ | 25 | ಸುತಪಾಃ | 195 |
| ಸವಃ | 727 | ಸುದರ್ಶನಃ | 417 |
| ಸರ್ವಾದಿಃ | 99 | ಸುಧನ್ವಾ | 567 |
| ಸರ್ವಾಸುನಿಲಯಃ | 710 | ಸುನ್ದರಃ | 791 |
| ಸರ್ವೇಶ್ವರಃ | 96 | ಸುನ್ದಃ | 792 |
| ಸವಿತಾ | 884 | ಸುಪರ್ಣಃ | 192 |
| ಸವಿತಾ | 969 | ಸುಪರ್ಣಃ | 855 |
| ಸಹಸ್ರಜಿತ್ | 306 | ಸುಪ್ರಸಾದಃ | 236 |
| ಸಹಸ್ರಪಾತ್ | 227 | ಸುಭುಜಃ | 265 |
| ಸಹಸ್ರಮೂರ್ಧಾ | 224 | ಸುಮುಖಃ | 456 |
| ಸಹಸ್ರಾಕ್ಷಃ | 226 | ಸುಮೇಧಾಃ | 752 |
| ಸಹಸ್ರಾರ್ಚಿಃ | 826 | ಸುಯಾಮುನಃ | 707 |
| ಸಹಸ್ರಾಂಶುಃ | 483 | ಸುರಾಧ್ಯಕ್ಷಃ | 134 |
| ಸಹಃ | 368 | ಸುರಾನನ್ದಃ | 186 |
| ಸಹಿಷ್ಣುಃ | 144 | ಸುರಾರಿಹಾ | 208 |
| ಸಹಿಷ್ಣುಃ | 565 | ಸುರುಚಿಃ | 878 |
| ಸಾಕ್ಷೀ | 15 | ಸುರೇಶಃ | 85 |
| ಸಾತ್ವತಾಂ ಪತಿಃ | 512 | ಸುರೇಶ್ವರಃ | 286 |
| ಸಾತ್ತ್ವಿಕಃ | 868 | ಸುಲಭಃ | 817 |

| ನಾಮ | ಸಂಖ್ಯೆ |
|---|---|
| ಸುಲೋಚನಃ | 794 |
| ಸುವರ್ಣಬಿನ್ದುಃ | 800 |
| ಸುವರ್ಣವರ್ಣಃ | 737 |
| ಸುವೀರಃ | 944 |
| ಸುವ್ರತಃ | 455 |
| ಸುವ್ರತಃ | 818 |
| ಸುಷೇಣಃ | 540 |
| ಸುಹೃತ್ | 460 |
| ಸೂಕ್ಷ್ಮಃ | 457 |
| ಸೂರ್ಯಃ | 883 |
| ಸೋಮಪಃ | 503 |
| ಸೋಮಃ | 505 |
| ಸಂಕ್ಷೇಪ್ತಾ | 598 |
| ಸಂಧಾತಾ | 201 |
| ಸಂಧಿಮಾನ್ | 202 |
| ಸಂವತ್ಸರಃ | 91 |
| ಸಂವತ್ಸರಃ | 422 |
| ಸಂವೃತಃ | 230 |
| ಸಂಸ್ಥಾನಃ | 386 |
| ಸ್ಕನ್ದಃ | 327 |
| ಸ್ಕನ್ದಧರಃ | 328 |
| ಸ್ತವಪ್ರಿಯಃ | 680 |
| ಸ್ತವ್ಯಃ | 679 |
| ಸ್ತುತಿಃ | 682 |
| ಸ್ತೋತಾ | 683 |
| ಸ್ತೋತ್ರಮ್ | 681 |
| ಸ್ಥವಿರಃ | 54 |
| ಸ್ಥವಿಷ್ಠಃ | 53 |
| ಸ್ಥವಿಷ್ಠಃ | 436 |
| ಸ್ಥಾಣುಃ | 28 |
| ಸ್ಥಾನದಃ | 387 |
| ಸ್ಥಾವರಸ್ಥಾಣುಃ | 427 |
| ಸ್ಥಿರಃ | 203 |
| ಸ್ಥೂಲಃ | 838 |

| ನಾಮ | ಸಂಖ್ಯೆ |
|---|---|
| ಸ್ಪಷ್ಟಾಕ್ಷರಃ | 279 |
| ಸ್ರಗ್ವೀ | 216 |
| ಸ್ರಷ್ಟಾ | 588 |
| ಸ್ರಷ್ಟಾಃ | 990 |
| ಸ್ವಕ್ಷಃ | 615 |
| ಸ್ವಙ್ಗಃ | 616 |
| ಸ್ವಧೃತಃ | 843 |
| ಸ್ವಯಂಜಾತಃ | 986 |
| ಸ್ವಯಂಭೂಃ | 37 |
| ಸ್ವವಶಃ | 466 |
| ಸ್ವಸ್ತಿ | 903 |
| ಸ್ವಸ್ತಿಕೃತ್ | 902 |
| ಸ್ವಸ್ತಿದಕ್ಷಿಣಃ | 905 |
| ಸ್ವಸ್ತಿದಃ | 901 |
| ಸ್ವಸ್ತಿಭುಕ್ | 904 |
| ಸ್ವಾಙ್ಗಃ | 548 |
| ಸ್ವಾಪನಃ | 465 |
| ಸ್ವಾಭಾವ್ಯಃ | 523 |
| ಸ್ವಾಸ್ಯಃ | 844 |
| **ಹ** | |
| ಹರಿಃ | 650 |
| ಹಲಾಯುಧಃ | 562 |
| ಹವಿರ್ಹರಿಃ | 359 |
| ಹವಿಃ | 698 |
| ಹಿರಣ್ಯಗರ್ಭಃ | 70 |
| ಹಿರಣ್ಯಗರ್ಭಃ | 411 |
| ಹಿರಣ್ಯನಾಭಃ | 194 |
| ಹುತಭುಕ್ | 879 |
| ಹುತಭುಕ್ | 887 |
| ಹೃಷೀಕೇಶಃ | 47 |
| ಹೇತುಃ | 366 |
| ಹೇಮಾಙ್ಗಃ | 738 |
| ಹಂಸಃ | 191 |